॥ ಶ್ರೀಃ ಹರಿಃ ಓಂ ॥

ಶ್ರೀ ಹರಿದಾಸ ಸಾಹಿತ್ಯ ಪ್ರಚಾರಮಾಲೆ



ಶ್ರೀ ಜಗನ್ನಾಥದಾಸವರ್ಯಕೃತ

# ಶ್ರೀಮದ್ಧರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರಸಂಗ್ರಹ

## ನಾಡೀಪ್ರಕರಣ ಸಂಧಿ

(ಸಂಪುಟ ೧೨)

ಪ್ರಕಾಶಕರು :

**ಹೆಚ್. ಎಸ್. ಶ್ರೀನಿವಾಸಮೂರ್ತಿ**

ನಂ. ೬೧, ೫ನೆಯ ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ,
ಬೆಂಗಳೂರು-೫೬೦ ೦೧೯

ಶ್ರೀಮದ್ಧರಿಕಥಾಮೃತಸಾರ
ಸರ್ವವ್ಯಾಖ್ಯಾನಸಾರ ಸಂಗ್ರಹ
ನಾಡೀಪ್ರಕರಣಸಂಧಿ
ಸಂಪುಟ(೧೨)

ಪ್ರಥಮ ಮುದ್ರಣ : ಕ್ರಿ.ಶ. ೧೯೯೨
ಪ್ರತಿಗಳ ಸಂಖ್ಯೆ : ೧೦೫೦

ಬೆಲೆ : ಮೂವತ್ತು ರೂಪಾಯಿಗಳು

ಪ್ರತಿಗಳು ದೊರೆಯುವ ಸ್ಥಳ :

(೧) ಹೆಚ್. ಎಸ್. ಶ್ರೀನಿವಾಸಮೂರ್ತಿ
ನಂ. ೬೧, ೫ನೆಯ ಅಡ್ಡರಸ್ತೆ
ನರಸಿಂಹರಾಜಾ ಕಾಲೋನಿ
ಬೆಂಗಳೂರು-೫೬೦ ೦೧೯

(೨) ವೇದಾಂತ ಬುಕ್ ಹೌಸ್
ಉಮಾ ಚಿತ್ರಮಂದಿರದ ಬಳಿ
ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

ಮುದ್ರಕರು :

ವ್ಯಾಸ್ ಎಂಟರ್‌ಪ್ರೈಸಸ್
ಬುಲ್ ಟೆಂಪಲ್ ರೋಡ್
ಬೆಂಗಳೂರು-೫೬೦ ೦೦೪

# ಪ್ರಕಾಶಕರ ನುಡಿ

ಹರಿದಾಸಬಂಧುಗಳಲ್ಲಿ ಪ್ರಕಾಶಕರ ಸವಿನಯ ವಿಜ್ಞಾಪನೆಗಳು.

**ಸರ್ವವ್ಯಾಖ್ಯಾನಸಾರಸಂಗ್ರಹದ** ಮಾಲಿಕೆಯಲ್ಲಿ **ಶ್ರೀಮದ್ಹರಿಕಥಾಮೃತಸಾರದ** ೧೧ ಸಂಪುಟಗಳು ಶ್ರೀಹರಿವಾಯುಗುರುಗಳ ಅನುಗ್ರಹ ವಿಶೇಷದಿಂದ ಪ್ರಕಟವಾಗಿವೆ. ಈಗ **ನಾಡೀಪ್ರಕರಣಸಂಧಿಯ** (ಸಂಪುಟ–೧೨) ಪ್ರತಿಯು ಪ್ರಕಟವಾಗಿ, ಸನ್ಮಾನ್ಯ ವಾಚಕರ ಕೈಯಲ್ಲಿಡಲು ನಮಗೆ ಪರಮ ಸಂತೋಷದ ಸಂಗತಿ.

ಹಿಂದಿನ ೧೧ನೆಯ ಸಂಪುಟದಲ್ಲಿ ತಿಳಿಸಿದ್ದ ಪ್ರಕಾರ, ೧೨ ಮತ್ತು ೧೩ನೆಯ ಸಂಧಿಗಳನ್ನು ಒಟ್ಟಿಗೇ ಸೇರಿಸಿ, ಒಂದೇ ಸಂಪುಟದ ರೂಪದಲ್ಲಿ ಪ್ರಕಟಿಸಬೇಕಾಗಿತ್ತು. ಆದರೆ ಪ್ರಸಕ್ತ ಸಂಧಿಯಲ್ಲಿ ೪೫ ಪದ್ಯಗಳಿರುವುದರಿಂದ, ಎರಡು ಸಂಧಿಗಳನ್ನು ಸೇರಿಸಿ, ಒಂದು ಸಂಯುಕ್ತಸಂಪುಟವನ್ನಾಗಿ ಪ್ರಕಟಿಸಿದರೆ, ಪುಸ್ತಕದ ಪುಟಗಳ ಸಂಖ್ಯೆ ಹೆಚ್ಚಾಗಿ, ಸಂಪುಟವು ಬೃಹತ್ಪ್ರಮಾಣವಾಗುವ ಸಂಭವದ ಕಾರಣದಿಂದ, ನಾಡೀಪ್ರಕರಣಸಂಧಿಯನ್ನು ಪ್ರತ್ಯೇಕ ಸಂಪುಟವಾಗಿ ಪ್ರಕಟಿಸಬೇಕಾಯಿತು.

**ನೂತನ ಯೋಜನೆ :—**

ಪ್ರಕಟಣೆಯ ಮಾಲಿಕೆಯಲ್ಲಿ ಮುಂದಿನ ಉಳಿದಿರುವ ಸಂಪುಟಗಳನ್ನು ಶೀಘ್ರವಾಗಿ ಮುದ್ರಿಸಿ, ಹರಿದಾಸ ಸಾಹಿತ್ಯಾಭಿಮಾನಿಗಳ ಕೈಯಲ್ಲಿಡುವ ಉದ್ದೇಶದಿಂದ **ನೂತನ ಯೋಜನೆಯು** ದಿನಾಂಕ 1–1–1992 ರಿಂದ ಜಾರಿಗೆ ತರಲಾಗಿದೆ. ಆಧುನಿಕ ಕಂಪ್ಯೂಟರ್ ಪದ್ಧತಿಯನ್ನು ಬಳಸಿಕೊಂಡು, ಸಂಪುಟಗಳ ತ್ವರಿತ ಪ್ರಕಟಣೆಯನ್ನು ಸಾಧಿಸಲು ಪ್ರಯತ್ನಿಸಿ, ಹಿಂದಿನ ೧೧ನೆಯ ಸಂಪುಟವನ್ನು (ಸ್ಥಾವರ–ಜಂಗಮಸಂಧಿ) ಪ್ರಕಟಿಸಲಾಯಿತು. ಅದರಂತೆ, ನೂತನ

ಯೋಜನೆಯ ವಿವರಗಳನ್ನು ಒಳಗೊಂಡ ಮುದ್ರಿತ ಮನವಿ ಪತ್ರಗಳನ್ನು ಸದಸ್ಯರಿಗೆ ಕಳುಹಿಸಲಾಯಿತು. ಆದರೆ ಕೇವಲ ಕೆಲವು ಸದಸ್ಯರುಗಳಿಂದ ಮಾತ್ರ ಯೋಜನೆಗೆ ಸಮ್ಮತಿ ದೊರಕಿ, ದ್ರವ್ಯ ಸಹಾಯ ದೊರೆಯಿತು. ಆ ನೆರವನ್ನು ಉಪಯೋಗಿಸಿಕೊಂಡು, ಪ್ರಸಕ್ತ ಸಂಪುಟವನ್ನು ಪ್ರಕಟಿಸಲು ಅನುಕೂಲವಾಯಿತು. ಪ್ರಕಾಶಕರ ನಿರೀಕ್ಷೆಗೆ ಅನುಗುಣವಾಗಿ ನೆರವು ದೊರೆಯಲಿಲ್ಲ. ಶ್ರೀಹರಿಚಿತ್ತ, ಉಳಿದವರಿಗೆ **ಪುನರ್ವಿನಂತಿಪತ್ರ**ವನ್ನು ಬರೆದು ಸಹಕಾರಕ್ಕಾಗಿ ವಿನಂತಿಸಿಕೊಳ್ಳಲಾಗಿದೆ.

ನೂತನ ಯೋಜನೆಯ ಪ್ರಕಾರ, ಹರಿದಾಸ ಬಂಧುಗಳು ಸ್ವಯಂಪ್ರೇರಿತರಾಗಿ ತಾವೇ ಮುಂದೆ ಬಂದು, 1992 ಆಗಸ್ಟ್ ತಿಂಗಳಿನಿಂದ ಪ್ರಾರಂಭಿಸಿ, ತಿಂಗಳಿಗೆ ತಪ್ಪದಂತೆ 100ರೂಗಳನ್ನು ಕಂತಿನ ಪ್ರಕಾರ ಕಳುಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ನಿಮೆಲ್ಲರ ಸಹಾಯ, ಅಭಿಮಾನದ ಸಹಕಾರವಿಲ್ಲದೇ ಈ ಅಗಾಧ ಪ್ರಮಾಣದ ಕಾರ್ಯವು ಪೂರ್ಣವಾಗಲಾರದು. ಗ್ರಂಥಪ್ರತಿಪಾದ್ಯ ದೇವತೆಯಾದ ಗರುಡವಾಹನ ಶ್ರೀಲಕ್ಷ್ಮೀನರಸಿಂಹನು, ಅವರ ಅಂತರಂಗದಲ್ಲಿ ನಿಂತು ಪ್ರೇರಿಸಲೆಂದು ಪ್ರಕಾಶಕರ ಪ್ರಾರ್ಥನೆ. ತಮ್ಮಿಂದ ಸಕಾಲದಲ್ಲಿ ಎಷ್ಟೆಷ್ಟು ತ್ವರಿತವಾಗಿ ಸಹಾಯ ಒದಗುವುದೋ, ಅಷ್ಟಷ್ಟು ಜಾಗ್ರತೆಯಾಗಿ ಮುಂದಿನ ಸಂಪುಟಗಳು (೧೩ ರಿಂದ ೩೩ವರೆಗೆ) ಪ್ರಕಟವಾಗಲು ಸಹಕಾರಿಯಾಗುವುದು. ಇದೇ ಸನ್ಮಾನ್ಯರಾದ ಅಭಿಮಾನಿಗಳಲ್ಲಿ ನಮ್ಮ ಹಾರ್ದಿಕ ಮನವಿ.

**ಬಡ್ಡಿರಹಿತ ಸಾಲ :—**

ಮುಂದಿನ ಸಂಧಿಯ ಪ್ರಕಟಣೆಗೆ ಉದಾರ ಮನಸ್ಸಿನಿಂದ ಸಾಲದರೂಪದಲ್ಲಿ ದ್ರವ್ಯಸಹಾಯ ಮಾಡಬಹುದು. ಕನಿಷ್ಠ ಪಕ್ಷ ೫೦೦೦ರೂಗಳನ್ನು ಸಾಲದ ರೂಪದಲ್ಲಿ ನೀಡಿದರೆ, ಆ ಮೊಬಲಗನ್ನು ತಪ್ಪದೇ ಪ್ರತಿತಿಂಗಳಿನ ೫ನೆಯ ತಾರೀಖು, ತಿಂಗಳಿಗೆ ೫೦೦ರೂಗಳಂತೆ D.D. ದ್ವಾರಾ **ಕಳುಹಿಸಿ**, ೧೦ ತಿಂಗಳಿನ ಅವಧಿಯಲ್ಲಿ ಸಾಲವನ್ನು ಪೂರ್ತಿಯಾಗಿ ತೀರಿಸಲಾಗುವುದು. ಸಾಲಕ್ಕೆ **ಬಡ್ಡಿಯನ್ನು** ನಿರೀಕ್ಷಿಸದಂತೆ, ಸಹಾಯ ನೀಡಬೇಕಾಗಿ ವಿನಂತಿ. ಹೈದರಾಬಾದಿನ ಸನ್ಮಾನ್ಯರಾದ **ಶ್ರೀವಸಂತಕುಮಾರ್ ಪರಗಿಯವರು** ಈ ರೀತಿ ೫೦೦೦ರೂ ಸಾಲ

ನೀಡಿ, ಎರಡಾವರ್ತಿ ಹಿಂದಿನ ಸಂಪುಟಗಳ ಪ್ರಕಟಣೆಗೆ ಸಹಕರಿಸಿರುತ್ತಾರೆ. ಅವರಿಗೆ ಪ್ರಕಾಶನವು ಆಭಾರಿಯಾಗಿದೆ. ಈ ರೀತಿ ಸಾಲ್ಸ್ನೀಡುವವರಿಗೆ ೩೩ ಸಂಪುಟಗಳ ಪರ್ಯಂತ ಉಚಿತವಾಗಿ ಪ್ರತಿಗಳನ್ನು ಒದಗಿಸಲಾಗುವುದು.

**ಪುನರ್ಮುದ್ರಣ :—**

ವ್ಯಾಪ್ತಿಸಂಧಿ (ಸಂಪುಟ ೩), ಭೋಜನರಸವಿಭಾಗಸಂಧಿ, (ಸಂಪುಟ ೪) ಮತ್ತು ವಿಭೂತಿ ಸಂಧಿ (ಸಂಪುಟ ೫) ಇವುಗಳ ಪ್ರತಿಗಳು ಮುಗಿದಿದ್ದು, ಅವು ಪುನರ್ಮುದ್ರಿತವಾಗಬೇಕಾಗಿವೆ. ಪ್ರತಿ ಸಂಪುಟಕ್ಕೂ ಕನಿಷ್ಠಪಕ್ಷ ೫೦೦೦ರೂ, ಧನಸಹಾಯ ದೊರೆತರೆ, ಅವುಗಳ ಪುನರ್ಮುದ್ರಣ ಕಾರ್ಯವನ್ನು ಆರಂಭಿಸ ಲಾಗುವುದು. ಆದರಂತೆ, ೧ ಮತ್ತು ೨ನೆಯ ಸಂಪುಟಗಳು ಪುನರ್ಮುದ್ರಿತ ವಾಗಿವೆ. ಹರಿದಾಸಬಂಧುಗಳು ಉದಾರಮನಸ್ಸಿನಿಂದ ಈ ಪುನರ್ಮುದ್ರಣ ಕಾರ್ಯಕ್ಕೆ ಸಹಕರಿಸಬೇಕಾಗಿ ವಿನಂತಿ.

**ಕೃತಜ್ಞತೆ :—**

ನೂತನ ಯೋಜನೆಗೆ ತಮ್ಮ ಅಭಿಮಾನದ ಸಮ್ಮತಿಯನ್ನು ನೀಡಿ, ಸಹ ಕರಿಸಿದ ಹರಿದಾಸಬಂಧುಗಳಿಗೆಲ್ಲಾ ನಮ್ಮ ಹೃತ್ಪೂರ್ವಕ ವಂದನೆಗಳು.

ಹಿಂದಿನ ಸಂಪುಟಗಳ ಪ್ರಕಟಣೆಗೆ ನೆರವಾದ ಸಕಲರಿಗೂ ಪ್ರಕಾಶಕರು ಆಭಾರಿಗಳಾಗಿದ್ದಾರೆ.

ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ ಸರ್ವವಿಧಗಳಲ್ಲಿ ಸಹಕಾರ ನೀಡಿದ, ಹಾಗೂ ನೀಡುತ್ತಿರುವ ಸಮಸ್ತ ಅಭಿಮಾನಿಗಳಿಗೂ ನಮ್ಮ ಹಾರ್ದಿಕ ವಂದನೆಗಳು.

**ಮುಂದಿನ ಸಂಪುಟ :—**

**ನಾಮಸ್ಮರಣಸಂಧಿಯು** ಮುಂದಿನ ೧೩ನೆಯ ಸಂಪುಟದ ರೂಪದಲ್ಲಿ ಪ್ರಕಟವಾಗಲಿದೆ. ಅದರ ಮುದ್ರಣಕಾರ್ಯ ಈಗಾಗಲೇ ಪ್ರಾರಂಭವಾಗಿದೆ

ಎಂಬ ವಿಷಯವನ್ನು ತಿಳಿಸಲು ನಮಗೆ ಸಂತೋಷವಾಗಿದೆ. ದ್ರವ್ಯ ಸಹಾಯ ಬೇಗ ದೊರೆತಂತೆಲ್ಲಾ, ಪ್ರಕಟಣಾಕಾರ್ಯದ ಪ್ರಗತಿ ತ್ವರಿತಗೊಳ್ಳುವುದು.

ಓದುಗರ ಅನುಕೂಲಕ್ಕಾಗಿ ಈ ಸಂಪುಟದ ಕೊನೆಯಲ್ಲಿ ತಿದ್ದುಪಡಿಯನ್ನು ಕೊಡಲಾಗಿದೆ. ಗ್ರಂಥವನ್ನು ಓದುವ ಮೊದಲು ತಿದ್ದಿಕೊಂಡು ಓದಬೇಕಾಗಿ ವಿನಂತಿ.

ಅಭಿಮಾನವಿರಲಿ.

ಇಂತೀ ನಮಸ್ಕಾರಗಳು,

ಬೆಂಗಳೂರು

ಹೆಚ್. ಎಸ್. ಶ್ರೀನಿವಾಸಮೂರ್ತಿ
(ಪ್ರಕಾಶಕರು)

॥ ಶ್ರೀಃ ಹರಿಃ ಓಂ ॥

॥ ಶ್ರೀ ಗರುಡವಾಹನ ಲಕ್ಷ್ಮೀನರಸಿಂಹಾಯ ನಮಃ ॥

॥ ಶ್ರೀ ಜಗನ್ನಾಥವಿಠಲಾಯ ನಮಃ ॥

# ನಾಡೀಪ್ರಕರಣ ಸಂಧಿ

## ಸಂಧಿ ೧೨

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥

ಪದ್ಯ ೧

ಮೂಲ:

ವಾಸುದೇವನು ಪ್ರಾಣಮುಖತ ।
ತ್ವೀಶರಿಂದಲಿ ಸೇವೆ ಕೈಕೊಳು ।
ತೀ ಶರೀರದೊಳಿಪ್ಪ ಮೂವತ್ತಾರು ಸಾಹಸ್ರ ॥
ಈ ಸುನಾಡಿಗಳೊಳಗೆ ಶ್ರೀ ಭೂ ।
ಮೀ ಸಮೇತ ವಿಹಾರಗೈವ ಪ ।
ರೇಶನಮಲಸುಮೂರ್ತಿಗಳ ಚಿಂತಿಸುತ ಹಿಗ್ಗುತಿರು ॥ ॥೧॥

ಅವತರಣಿಕೆ :–

ಪುರುಷನಾಮಕನಾದ ವಾಸುದೇವರೂಪೀ ಶ್ರೀಪರಮಾತ್ಮನು ತುರ್ಯ ನೆಂದೆನಿಸಿ ಈ ಸ್ಥೂಲಗತ ೩೬,೦೦೦ ಸಂಖ್ಯಾಕವಾದ ತೇಜೋಮಯವಾದ ನಾಡಿ

ಗಳಲ್ಲಿ ಶ್ರೀ ಮತ್ತು ಭೂದೇವಿಯರ ಸಹಿತನಾಗಿ ನಾಡೀಗತ ಕ್ರಿಯಾಕಲಾಪ ಗಳನ್ನು ನಡೆಯಿಸುತ್ತಿರುವನೆಂದು ಉಪಕ್ರಮಿಸುತ್ತಾರೆ.

**ಪ್ರತಿಪದಾರ್ಥ :–**

**ವಾಸುದೇವನು** = ತುರ್ಯನಾಮಕನಾದ ಪುರುಷರೂಪೀ ವಾಸುದೇವನು **ಶ್ರೀ** = ಶ್ರೀ ಎಂಬ ರಮಾದೇವಿಯ ರೂಪ, **ಭೂಮಿ** = ಭೂದೇವಿ ಎಂಬ ಇನ್ನೊಂದು ರೂಪ, **ಸಮೇತ** = ಶ್ರೀ ಭೂದೇವಿಯರ ಸಹಿತನಾಗಿ, ತದಂತರ್ಗತ ನಾಗಿ, **ಸ್ತ್ರೀ** = ಬಿಂಬ ರೂಪದಿಂದಿದ್ದು **ಪ್ರಾಣ** = ಭಾರತೀರಮಣರಾದ ಮುಖ್ಯ ಪ್ರಾಣದೇವರು, **ಮುಖ** = ಇವರೇ ಮೊದಲಾದ, **ತತ್ವೇಶರಿಂವಲಿ** = ತತ್ವಾಭಿ ಮಾನಿಗಳಿಂದ, **ಸೇವೆ ಕೈಗೊಳುತ** = ಸೇವೆಯನ್ನು ಸ್ವೀಕರಿಸುತ್ತ, **ಈ ಶರೀರ ದೊಳಿಪ್ಪ** = ಸಾಧನ ಶರೀರವೆಂದೆನಿಪ ಈ ಸ್ಥೂಲದೇಹದಲ್ಲಿರುವ, **ಮೂವ ತ್ತಾರು ಸಾಹಸ್ರ** ೩೬,೦೦೦ ಸಂಖ್ಯಾಕವಾದ, (ಈ ಸಂಖ್ಯೆ ಸೂಚನೆಯಿಂದ ಎಡ ಪಾರ್ಶ್ವಗತ ೩೬,೦೦೦, ಮತ್ತು ಬಲಪಾರ್ಶ್ವಗತ ೩೬,೦೦೦ ಅಂದರೆ ಒಟ್ಟು ೭೨,೦೦೦ ನಾಡಿಗಳು ಗ್ರಾಹ್ಯ), **ಈ ಸುನಾಡಿಗೊಳಗೆ** = ಅತೀಂದ್ರಿಯವಾದ, ತೇಜೋಮಯವಾದ ನಾಡೀವ್ಯೂಹದಲ್ಲಿ, **ವಿಹಾರಗೈವ** = ಸಂಚರಿಸುತ್ತ, ನಾಡೀ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವ, **ಪರೇಶನ** = ಪರನಾಮಕಳಾದ ಶ್ರೀಲಕ್ಷ್ಮೀದೇವಿಯರಿಗೆ ನಿಯಾಮಕನಾದ **ಅಮಲ** = ದೋಷರಹಿತವಾದ, **ಸುಮೂರ್ತಿಗಳ** = ನಾಡೀಗತ ವಾಸುದೇವನ ಮಂಗಳವಾದ, ಭಗವದ್ರೂಪ ಗಳನ್ನು, **ಚಿಂತಿಸುತ** = ಸ್ಮರಣಪೂರ್ವಕ ಉಪಾಸನೆ ಮಾಡುತ್ತ, **ಹಿಗ್ಗು ತಿರು** = ಸಂತೋಷದಿಂದ ಉಬ್ಬುತ್ತಿರುವವನಾಗು, ॥ ೧ ॥

**ವ್ಯಾಖ್ಯಾನಗಳು :–**

**೧ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ**

ಸ್ಥೂಲದೇಹಗತ ನಾಡೀ ಅಂತರ್ಗತ ಭಗವದ್ರೂಪಗಳ ಉಪಾಸನಾ ಮಾಡೆಂದು ಹೇಳುತ್ತಾರೆ. (ಭೋಜನರಸ ವಿಭಾಗ ಸಂಧಿಯಲ್ಲಿ ೩, ೪ನೇ ಶ್ಲೋಕ ಗಳು ನೋಡಿರಿ)

ತುರ್ಯನಾಮಕ ವಾಸುದೇವನು ಶ್ರೀದೇವಿಯರು ಭೂದೇವಿಯರು ಈ

ಉಭಯರಿಂದ ಸಮೇತನಾಗಿ, ಪ್ರಾಣದೇವರೇ ಮೊದಲಾದ ತತ್ತ್ವೇಶರಿಂದ ಸಹಿತ ನಾಗಿ ಇವರುಗಳಿಂದಲಿ ಸೇವೆ ಸ್ವೀಕಾರ ಮಾಡುತ್ತ ಈ ಸ್ಥೂಲಶರೀರದಲ್ಲಿ ಇರ ತಕ್ಕ, ಎಡ–ಬಲ ಸಾಂಕೇತದಿಂದ ದೇಹಕ್ಕೆ ಭಾಗಗಳು ಎರಡು, ಅದರಲ್ಲಿ ಒಂದೊಂದು ಭಾಗಕ್ಕೆ ಮೂವತ್ತಾರುಸಹಸ್ರ ಸಂಖ್ಯಾದ ವ್ಯಾನರಿಗೆ ಇರತಕ್ಕ ಈ ವಿದ್ಯಮಾನ ನಾಡಿಗಳೊಳಗೆ ಮತ್ತು ಇಷ್ಟು ನಾಡಿಗಳೊಳಗೂ ಸಂಚಾರ ಮಾಡುವ ಅಸ್ವತಂತ್ರ ಚೇತನರೊಳಗೆ ಉತ್ತಮರಾದ, ರಮಾದೇವಿಯರಿಗೆ ಈಶನಾದ, ನಿರ್ದೋಷಗಳಾದ ಶುಭ್ರಗಳಾದ ಪ್ರತೀ ನಾಡಿ ಒಳಗೆ ವಾಸುದೇವನ ದಿವ್ಯ ಮೂರ್ತಿಗಳ ಅನುಸಂಧಾನದಿಂದ ಸ್ಮರಿಸುತ್ತ, ಸಂತೋಷಿಸುತ್ತ ಇರುವವ ನಾಗು ॥ ೧ ॥

## ೨ ಭಾವಪ್ರಕಾಶಿಕೆ

ಶ್ರೀಪರಮಾತ್ಮನು ಈ ದೇಹದೊಳಗಿರುವ ತತ್ವಾಭಿಮಾನಿಗಳಿಂದ ಸೇವೆ ಯನ್ನು ಸ್ವೀಕರಿಸುತ್ತ, ಈ ದೇಹದಲ್ಲಿರುವ ಪುರುಷನಾಡಿಗಳಾದ ೩೬,೦೦೦ ನಾಡಿಗಳಲ್ಲಿ ಅಷ್ಟುರೂಪಗಳಿಂದ ಶ್ರೀ-ಭೂದೇವಿಯರ ಸಮೇತನಾಗಿ ವಿಹರಿಸು ತ್ತಿರುವನು. ಇಂತಹ ೩೬,೦೦೦ ರೂಪಗಳನ್ನು ನಾಡಿಗಳಲ್ಲಿ ಚಿಂತಿಸುತ್ತ ಸಂತೋಷದಿಂದಿರಬೇಕು. ॥ ೧ ॥

## ೩ ಭಾವದರ್ಪಣ

ನಾಡಿಗತ ನದನದಿಗಳಲ್ಲಿ, ವಿದ್ಯಮಾನವಾದ ಷಡ್‌ತ್ರಿಶಂತಿ ಸಹಸ್ರ ಕುಟುಂಬ ಸಮೇತನಾದ ಆತ್ಮಾಖ್ಯ ಬಿಂಬನ ಸ್ಮರಣ ಮಾಡಿದ ಪುರುಷನು ಸಮಸ್ತ ನದನದಿ ಗಳ ಸ್ನಾನ ಮಾಡಿದ ಫಲಕ್ಕೆ ಪಾತ್ರನಾಗೋದಲ್ಲದೇ ನಾಡಿಗತ ಭಗವದ್ರೂಪಗಳನ್ನು ಕಾಣುವನೆಂದು ಈ ರಹಸ್ಯ ತಿಳಿಸೋ ಉದ್ದಿಶ್ಯ ನಾಡಿಸಂಧಿಯನ್ನು ಉಪಕ್ರಮಿ ಸುತ್ತಾರೆ, **ವಾಸುದೇವೇತಿ** ॥ ೧ ॥

## ೪ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದಿ (ಸಂಸ್ಕೃತ ಮೂಲ)

ಯದ್ ಭೋಜನ ಸಂಧಿಮುಖೇ ಶ್ರೀರಮಣೋದ್ಭೂತಲೀಲಾ ಅರ್ಧ **ನಾರೀನರಾತ್ಮನಾ ದ್ವಾಸಪ್ತತಿ ಸಹಸ್ರ ನಾಡ್ಯವಚ್ಛೇದೇನ ಕೀರ್ತಿತಾ– ತತ್ಕ್ರಿಯಾಂ** ವಿವರಿತುಂ ಏತತ್ ಸಂಧಿಂ ಉಪಕ್ರಮ–ತೇ**ವಾಸುದೇವನು-ಇತಿ**॥

ಶ್ರುತ್ವಾ ಅಹರಭಿಪ್ರಾಯೇಣ ಯಾವತಾಮುಕ್ತಿಃ ತದಭಿಪ್ರಾಯೇಣೋಕ್ತಮ್— ಶರೀರ ಇತಿ ॥ ೧ ॥

**ಕನ್ನಡಾರ್ಥ:-**

ಭೋಜನಸಂಧಿಯ ಆರಂಭದಲ್ಲಿ ಶ್ರೀಹರಿಯು **ಅರ್ಧನಾರೀನರಾತ್ಮಕ** ರೂಪದಿಂದ ೭೨,೦೦೦ ನಾಡಿಗಳಲ್ಲಿದ್ದು, ಮಾಡುವ ಲೀಲೆಯು ಹೇಳಲ್ಪಟ್ಟಿರುತ್ತದೆ. ನಾಡಿಗಳಲ್ಲಿದ್ದು ವಿಹಾರ ಮಾಡುವ ನಾಡೀಗತ ಭಗವದ್ರೂಪ ಪ್ರಕ್ರಿಯೆಯನ್ನು ವಿಶದವಾಗಿ ನಿರೂಪಿಸಲು ದಾಸರಾಯರು ಈ ಸಂಧಿಯನ್ನು ಉಪಕ್ರಮಿಸುತ್ತಾರೆ, **ವಾಸುದೇವನು** ಎಂಬ ಪದ್ಯದಿಂದ.

ಈ ಶರೀರದಲ್ಲಿ ೩೬,೦೦೦ ನಾಡಿಗಳಿರುವವು. ಅವುಗಳಲ್ಲಿ ಶ್ರೀಹರಿಯು ಶ್ರೀಭೂದೇವಿಯರಿಂದ ಸಮೇತನಾಗಿರುತ್ತಾನೆ ಎಂದು ಹೇಳಿರುತ್ತಾರೆ. ಇಲ್ಲಿ ಈ ಶರೀರದಲ್ಲಿ ಬಲಭಾಗದಲ್ಲಿ ಅಹರಭಿಮಾನಿಗಳೆಂದು (ಅಹಃ ಎಂದು) ಪ್ರಸಿದ್ಧವಾದ ನಾಡಿಗಳು ೩೬,೦೦೦ ಎಂದು ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಈ ಶರೀರದಲ್ಲಿರುವ ಎಡಬಲ ಭಾಗಗಳಲ್ಲಿರುವ ರಾತ್ರಿ-ಅಹರ್ಮಾನಿಗಳಾದ ನಾಡಿಗಳು ಒಟ್ಟು ೭೨,೦೦೦ ಆಗುವುದರಿಂದ, ೩೬,೦೦೦ ಎಂದು ಒಟ್ಟು ಸಂಖ್ಯೆಯನ್ನು ನಿಗಮಿಸಿ ಹೇಳುವುದು ಸರಿಯೆನಿಸಲಾರದು. ಬಲಪಾರ್ಶ್ವದ ಅಹರ್ಮಾನಿ ನಾಡಿಗಳ ಸಂಖ್ಯೆಯು ೩೬,೦೦೦ ಎಂದು ಅರ್ಥ ಮಾಡಿಕೊಂಡರೆ ವಿರೋಧದ ಸಂಭವವೇ ಇರುವುದಿಲ್ಲ. ॥ ೧ ॥

**ಶ್ರೀ ಗುರುಹೃದಯ ಪ್ರಕಾಶಿಕೆ**

ಈ ಹನ್ನೆರಡನೇ ನಾಡೀಪ್ರಕ್ರಿಯೆ ಸಂಧಿಯಲ್ಲಿ ನಾಡೀವಿಚಾರ, ತದ್ಗತ ದೇವರ ರೂಪ, ಸರ್ವಜೀವಕ್ರಿಯಾರಾಧನಚಿಂತನಾ, ಯೋಗ್ಯಾಯೋಗ್ಯರಸ ವಿಭಾಗ ಚಿಂತನ, ಯಾಚಕ ಯಾಚ್ಯಗತರೂಪ ಚಿಂತನಾ, ಅನ್ನ ಅನ್ನಾದ ಅನ್ನದ ರೂಪ, ವಸು-ರುದ್ರಾದಿತ್ಯಾಂರ್ಗತ ನೂರಹದಿನಾರು ಸಂವತ್ಸರ ನಿಯಾಮಕ ರೂಪ ಚಿಂತನಾ, ದಿವಾ-ನಿಶಾಧಿಪತಿ ಭಾರತೀಪ್ರಾಣೇಶಾಂತರ್ಗತರೂಪ ಚಿಂತನಾ, ಪ್ರಾಣೇಶಕೃತ ಶ್ವಾಸಜಪಸ್ಮರಣೆ ಮೊದಲಾದ ಪ್ರಮೇಯಗಳನ್ನು ನಿರೂಪಿಸುವುದೇ ಹರಿಕಥೆ. ಅಮೃತಕ್ಕಿಂತ ಸವಿಯಾದದ್ದು ಗುರುಕೃಪಾಬಲದಿಂದ ಯಥೋಚಿತ ಹೇಳಿದ್ದನ್ನು ಸದ್ಭಕ್ತರು ವಿಶ್ವಾಸಪೂರ್ವಕ ಕೇಳಬೇಕು. ॥ಸಂ। ಸೂ॥

ವಾಸುದೇವನು ಎಂಬ ಪದ್ಯದಿಂದ ೧೪ನೇ ಪದ್ಯತನಕ ನಾಡಿಗಳು ಇರುವ ರೀತಿ ತದ್ಗತ ದೇವರ ರೂಪಚಿಂತನಾದಿ ವಿಚಾರ ಸಹ ತಿಳಿಸುತ್ತಾರೆ. ವಾಸುದೇವನೆಂದು. ವಾಸುದೇವನೆಂಬ ಜಗದ್ವ್ಯಾಪ್ತ ದೇವರು ಪ್ರಾಣದೇವರೆ ಮೊದಲಾದ ತತ್ತ್ವೇಶರ ಕೈಯಿಂದ ಸೇವೆ ತೆಗೆದುಕೊಳ್ಳುತ್ತ ಈ ಶರೀರದ ಬಲಭಾಗದಲ್ಲಿರುವ ಮೂವತ್ತಾರುಸಾವಿರ ನಾಡಿಗಳಲ್ಲಿ, ಶ್ರೀ–ಭೂದೇವಿಯರ ಸಹಿತನಾಗಿದ್ದು ಕ್ರೀಡೆ ಮಾಡುವ ಲಕ್ಷ್ಮೀಪತಿಯಾದ ಈ ವಾಸುದೇವನಿರ್ದೋಷರೂಪ ವಿಶೇಷ ಚಿಂತಿಸುತ್ತಾ ಹರ್ಷಪಡುವುದು ॥ ೧ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ನಾಡೀಪ್ರಕರಣ ಸಂಧಿಯನ್ನು ಉಪಕ್ರಮಿಸುತ್ತ. ಜ್ಞಾನಿವರೇಣ್ಯರಾದ ಶ್ರೀ ಜಗನ್ನಾಥದಾಸವರ್ಯರು ಪ್ರಸಕ್ತ ಸಂಧೀಗತ ಪ್ರಥಮ ಪದ್ಯದಿಂದ ಸ್ಥೂಲ ಶರೀರಗತ ೩೬,೦೦೦ ನಾಡಿಗಳಲ್ಲಿ (ಬಲಪಾರ್ಶ್ವ ಮತ್ತು ಎಡಪಾರ್ಶ್ವಗಳಿಂದ ಒಟ್ಟು ೭೨,೦೦೦ ನಾಡಿಗಳು ಗ್ರಾಹ್ಯ) ವಾಸುದೇವರೂಪೀ ಪರಮಾತ್ಮನು ಭಾರತೀರಮಣ ಮುಖ್ಯಪ್ರಾಣರೊಡಗೂಡಿ, ತತ್ತ್ವಾಭಿಮಾನಿಗಳಿಂದ ಸಂಸೇವ್ಯನಾಗಿ, ಸಂಚರಿಸುತ್ತ ಕ್ರೀಡೆಯಾಡುತ್ತಿರುವನೆಂದು ತಿಳಿಸುತ್ತಾರೆ.

ಕ್ರೀಡಾ ವಿಶಿಷ್ಟನೂ, ಸರ್ವಭೂತಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿರುವ ಶ್ರೀಪರಮಾತ್ಮನಿಗೆ **ವಾಸುದೇವನೆಂದು** ಹೆಸರು. ವಾಸುದೇವರೂಪಿಯೇ ಪುರುಷನಾಮಕನು. ಪುರುಷನಾಮಕನಾದ ಶ್ರೀವಾಸುದೇವನು ಸ್ಥೂಲಶರೀರದಲ್ಲಿ ಪಾದಮೂಲದಿಂದ ಆರಂಭಿಸಿ ಶಿರಃಪರ್ಯಂತ ಸಮಗ್ರನಾಗಿ ವ್ಯಾಪ್ತನಾಗಿದ್ದಾನೆ. ದೇವಮಂದಿರವೆನಿಪ ಈ ಸ್ಥೂಲದೇಹಕ್ಕೆ **ಪುರು** ಎಂದು ಹೆಸರು. ಅಲ್ಲಿ ಬಿಂಬ ರೂಪನಾಗಿ ವಾಸಿಸುತ್ತಿರುವುದರಿಂದ **ಪುರುಷನಾಮಕನು.**

ನಮ್ಮ ಸ್ಥೂಲಶರೀರದಲ್ಲಿ ಒಟ್ಟು ೭೨,೦೦೦ ನಾಡಿಗಳು ಹಬ್ಬಿ ಹರಡಿಕೊಂಡಿರುವವು. ಪ್ರಸಕ್ತ ಪದ್ಯದಲ್ಲಿ ೩೬,೦೦೦ ನಾಡಿಗಳೆಂದು ಹೇಳಿರುವರು. ಸ್ಥೂಲಶರೀರದಲ್ಲಿ ಬಲಪಾರ್ಶ್ವದಲ್ಲಿ ೩೬,೦೦೦ ನಾಡಿಗಳೂ, ಎಡಪಾರ್ಶ್ವದಲ್ಲಿ ೩೬,೦೦೦ ನಾಡಿಗಳು ಓತಪ್ರೋತನಾಗಿ ಹರಡಿರುವವು. ಬಲಪಾರ್ಶ್ವಗತ ೩೬,೦೦೦ ನಾಡಿಗಳಿಗೆ ಪುರುಷನಾಡಿಗಳೆಂದು ಹೆಸರು. ಎಡಪಾರ್ಶ್ವ ೩೬,೦೦೦ ನಾಡಿಗಳಿಗೆ ಸ್ತ್ರೀನಾಡಿ

ಗಳೆಂದು ಹೆಸರು. ಇದರಿಂದ ಒಂದು ಪಾರ್ಶ್ವ ವಿವಕ್ಷಯಾ ೩೬,೦೦೦ ನಾಡಿಗಳೆಂದು ಹೇಳಿರುವರು.

ಶ್ರೀವಾಸುದೇವನ ಪ್ರೇರಣೆಯಂತೆ, ಭಾರತೀರಮಣರಾದ ಪ್ರಧಾನ ವಾಯುದೇವರು ಪೂರ್ವೋಕ್ತ ೭೨,೦೦೦ ನಾಡಿಗಳಲ್ಲಿ ಸಂಚರಿಸುತ್ತಿರುವರು. ಶ್ರೀ ವಾಯುದೇವರು ಬಲಪಾರ್ಶ್ವಗತ ಪುರುಷನಾಡಿಗಳಲ್ಲಿ ಸಂಚರಿಸುತ್ತಾ ನಾಡೀ ವ್ಯಾಪಾರವನ್ನು ನಾಡ್ಯಭಿಮಾನಿದೇವತೆಗಳ ದ್ವಾರಾ ಮಾಡಿಮಾಡಿಸುತ್ತಿರುವರು. ಅಂತೆಯೇ ಎಡಪಾರ್ಶ್ವಗತ ಸ್ತ್ರೀನಾಡಿಗಳಲ್ಲಿ ಭಾರತೀದೇವಿಯರು ರಯೀನಾಮಕರಾಗಿ ನಾಡೀವ್ಯಾಪಾರವನ್ನು ನಡೆಸುವರು. ಭಾರತೀದೇವಿಯರಲ್ಲಿ ಶ್ರೀವಾಯುದೇವರೇ ನಿಂತು ನಾಡೀವ್ಯಾಪಾರವನ್ನು ನಡೆಯಿಸುತ್ತಿರುವರು.

ಬಲಪಾರ್ಶ್ವಗತ ೩೬,೦೦೦ ಪುರುಷನಾಡಿಗಳು ಮಹತತ್ತ್ವಾತ್ಮಕವಾಗಿವೆ ಇವುಗಳಲ್ಲಿ ಮಹತ್ತತ್ವಾಭಿಮಾನಿ ದೇವತೆಗಳಾದ ಬ್ರಹ್ಮ– ವಾಯು, ಸರಸ್ವತೀ–ಭಾರತಿಯರು ನಾಡ್ಯಭಿಮಾನಿಗಳಾಗಿ ವ್ಯಾಪಾರ ಮಾಡುತ್ತಿರುವರು. ಇವರ ನಿಯಂತ್ರಣದಲ್ಲಿ ೩೬,೦೦೦ ನಾಡ್ಯಭಿಮಾನಿ ದೇವತೆಗಳಿದ್ದಾರೆ.

ಎಡಪಾರ್ಶ್ವಗತ ೩೬,೦೦೦ ಸ್ತ್ರೀನಾಡಿಗಳು ಅಹಂಕಾರತತ್ತ್ವಾತ್ಮಕವಾಗಿವೆ. ಇವುಗಳಲ್ಲಿ ಅಹಂಕಾರತತ್ತ್ವಾಭಿಮಾನಿಗಳಾದ ಗರುಡ, ಶೇಷ ಮತ್ತು ರುದ್ರದೇವರು, ಹಾಗೂ ತತ್ಪತ್ನಿಯರಾದ ಸೌಪರ್ಣೀ, ವಾರುಣೀ ಮತ್ತು ಉಮಾ ತತ್ತ್ವೇಶರು ವಿದ್ಯಮಾನರಾಗಿದ್ದಾರೆ. ಹೀಗೆ ವಾಸುದೇವನಾಮಕ ಶ್ರೀ ಪರಮಾತ್ಮನು **ಪ್ರಾಣಮುಖ ಮತ್ತು ತತ್ತ್ವೇಶರಿಂದ** ಸ್ತುತ್ಯಮಾನನಾಗಿ, ಸಂಸೇವ್ಯಮಾನನಾಗಿದ್ದಾನೆ.

ಪೂರ್ವೋಕ್ತ ೭೨,೦೦೦ ನಾಡಿಗಳು ಪ್ರತ್ಯಕ್ಷಗೋಚರವಲ್ಲ, ಅತೀಂದ್ರಿಯವಾಗಿವೆ, ತೇಜೋಮಯವಾಗಿವೆ. ಇದರಿಂದ ಈ ನಾಡಿಗಳನ್ನು **ಸುನಾಡಿಗಳೆಂದು** ಹೇಳಿರುತ್ತಾರೆ. ನಾಡಿಗಳೆಂದರೆ, ನಮ್ಮ ಶರೀರದಲ್ಲಿ ಎದ್ದುಕಾಣುವ ನರಗಳಲ್ಲ, ರಕ್ತನಾಳಗಳೂ ಅಲ್ಲ. ಇವುಗಳಲ್ಲಿ ಎಡಬಿಡದಂತೆ ವ್ಯಾಪಿಸಿರುವ ಅತೀಂದ್ರಿಯವಾಗಿ ಹಬ್ಬಿ ಹರಡಿರುವುದೇ ೭೨,೦೦೦ ಸಂಖ್ಯಾಕವಾದ **ಸುನಾಡಿಗಳು.**

ಪೂರ್ವೋಕ್ತ ನಾಡಿಗಳಲ್ಲಿ ವಾಸುದೇವನಾಮಕ ಶ್ರೀ ಪರಮಾತ್ಮನು ಸತ್ತ್ವಗುಣಾಭಿಮಾನಿನಿಯಾದ ಶ್ರೀ ದೇವಿಯವರಿಂದ ರಜೋಗುಣಾಭಿಮಾನಿನಿ ಶ್ರೀ ಭೂದೇವೇರು ಎಂಬ ಶ್ರೀ ಲಕ್ಷ್ಮೀದೇವಿಯರ ರೂಪದ್ವಯಗಳಿಂದ ಸಮೇತ ನಾಗಿ ಶ್ರೀ ಭೂ ರಮಣನು ಕ್ರೀಡಿಸುತ್ತಿರುವನು.

ಇಂತು ಸುನಾಡಿಗಳಲ್ಲಿ ಶ್ರೀ ಭೂ ಸಮೇತ ವಿಹಾರಗೈಯ್ಯುತ್ತಿರುವ ವಾಸುದೇವನು ಪರಾನಾಮಕಗಳಾದ ಶ್ರೀ ಲಕ್ಷ್ಮೀದೇವಿಗೆ ನಿಯಾಮಕನು. ಈಶ ಕೋಟಿ ಪ್ರವಿಷ್ಟರಾದ, ಬ್ರಹ್ಮಾದಿ ಜೀವವರ್ಗಕ್ಕಿಂತ ಕೋಟಿಗುಣಗಳಿಂದ ಉತ್ತಮರಾದ ಪರಾನಾಮಕರಾದ ಶ್ರೀ ಲಕ್ಷ್ಮೀದೇವಿಗೆ ನಿಯಾಮಕನಾದ ಪರೇಶನು ಅನಂತಕಲ್ಯಾಣಗುಣಗಣಪರಿಪೂರ್ಣನು. ಅವನ ರೂಪಗಳು ಸಮಸ್ತ ದೋಷರಹಿತವಾಗಿವೆ. ಇದರಿಂದ, ವಾಸುದೇವನ ಅಮಲ ಸುಮೂರ್ತಿಗಳನ್ನು ಮನಸಾ ಧ್ಯಾನಮಾಡುತ್ತಾ ಆ ಪರಮಮಂಗಳಭಗವನ್ಮೂರ್ತಿಗಳನ್ನು ನಾಡಿ ಗಳಲ್ಲಿ ಚಿಂತಿಸುತ್ತಾ, ಆನಂದದಿಂದ ಉದ್ರಿಕ್ತರಾಗಿಹಿಗ್ಗುತ್ತಿರಬೇಕೆಂದು ತಿಳಿಸು ತ್ತಾರೆ. ॥ ೧ ॥

## ಪದ್ಯ ೨

**ಮೂಲ :-**

**ಚರಣಗಳೊಳಿಹ ನಾಡಿಗಳು ಹ ।**
**ನ್ನೆರಡು ಸಾವಿರ ಮಧ್ಯದೇಹದೊ ।**
**ಳಿರುತಿಹವು ಹದಿನಾಲ್ಕು ಬಾಹುಗಳೊಳಗೆ ಈರೆರಡು ॥**
**ಶಿರದೊಳಾರುಸಾಹಸ್ರ ಚಿಂತಿಸಿ ।**
**ಇರಳು ಹಗಲಭಿಮಾನಿ ದಿವಿಜರ ।**
**ನರಿತುಪಾಸನೆಗೈವರಿಳೆಯೊಳು ಸ್ವರ್ಗವಾಸಿಗಳು ॥ ॥ ೨ ॥**

**ಅವತರಣಿಕೆ :–**

ಸ್ಥೂಲದೇಹದಲ್ಲಿರುವ ನಾಡಿಗಳ ಸಂಖ್ಯಾವಿವರ, ಆ ನಾಡ್ಯಭಿಮಾನಿ ದೇವತೆಗಳ ವಿಷಯವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ :–**

**ಚರಣದೊಳಿಹ**=ಸೊಂಟ ಆರಂಭಮಾಡಿ, ಪಾದಾಂತದವರೆವಿಗೂ ಇರತಕ್ಕ ಕಾಲುಗಳಲ್ಲಿ, **ನಾಡಿಗಳು**=ಪಾದಗತ ನಾಡಿಗಳ ಸಂಖ್ಯೆ, **ಹನ್ನೆರಡು ಸಾವಿರ**= ೧೨,೦೦೦, **ಮಧ್ಯದೇಹದೊಳು**=ಕುತ್ತಿಗೆಯಿಂದ ಪ್ರಾರಂಭಿಸಿ ಸೊಂಟದವರೆಗೆ ಇರುವ ಮುಂಡ ಎಂಬ ಮಧ್ಯದೇಹದಲ್ಲಿ, **ಹದಿನಾಲ್ಕು ಇರುತಿಹವು**= ೧೪,೦೦೦ ನಾಡಿಗಳು ಇವೆ. **ಬಾಹುಗಳೊಳಗೆ**=ಭುಜ ಪ್ರಾರಂಭಿಸಿ, ಹಸ್ತಾಂತದವರೆಗೆ ಇರುವ ಬಾಹುಗಳಲ್ಲಿ, **ಈರೆರಡು**=೪,೦೦೦ ನಾಡಿಗಳಿವೆ. **ಶಿರದೊಳು**=ಶಿರಸ್ಸಿನಲ್ಲಿ, **ಆರು ಸಹಸ್ರ**=೬,೦೦೦ ನಾಡಿಗಳಿವೆ. ಒಟ್ಟಿನಲ್ಲಿ ೩೬,೦೦೦ ನಾಡಿಗಳಾಯಿತು. (ಬಲಪಾರ್ಶ್ವ=೩೬,೦೦೦, ಎಡಪಾರ್ಶ್ವ= ೩೬,೦೦೦) **ಚಿಂತಿಸಿ**=ಇಂತು ಎಡಬಲಗಳಲ್ಲಿ ೭೨,೦೦೦ ನಾಡಿಗಳನ್ನು ಮನಸಾ ಚಿಂತಿಸುತ್ತಾ, **ಇರಳು**=ಎಡಪಾರ್ಶ್ವಗತ ೩೬,೦೦೦ ಸ್ತ್ರೀನಾಡಿಗಳಲ್ಲಿ ರಾತ್ರೀ ಅಭಿಮಾನಿ ದೇವತೆಗಳು-**ಹಗಲು**=ಬಲಪಾರ್ಶ್ವಗತ ೩೬,೦೦೦ ಪುಂನಾಡಿಗಳಲ್ಲಿ ಹಗಲು ಅಭಿಮಾನೀ ದೇವತಾವರ್ಗ, **ಅಭಿಮಾನಿ ದಿವಿಜರ**= ಇಂತು, ರಾತ್ರಿ ಮತ್ತು ಹಗಲು ಭಿಮಾನಿ ದೇದತಾ ಸಮೂಹವನ್ನು **ಅರಿತು**= ಶಾಸ್ತ್ರದ್ವಾರಾ ತಿಳಿದು, **ಉಪಾಸನೆಗೈವರು**=ಆಯಾ ದೇವತಾಂತರ್ಗತ, ವಾಯ್ವಂತರ್ಗತ ವಾಸುದೇವನ ೭೨,೦೦೦ ಮಂಗಳ ಭಗವನ್ಮೂರ್ತಿಗಳ ಉಪಾಸನಾ ಮಾಡತಕ್ಕವರು, **ಇಳೆಯೊಳು**=ಭೂಮಿಯ ಮೇಲಿದ್ದರೂ ಸಹ, **ಸ್ವರ್ಗವಾಸಿಗಳು**=ಸ್ವರ್ಗದಲ್ಲಿರುವ ದೇವತೆಗಳೇ ಸರಿ ॥ ೨ ॥

# ವ್ಯಾಖ್ಯಾನ

## ೧. ಶ್ರೀಸಂಕರ್ಷಣ ಒಡೆಯರು

ಒಂದು ಭಾಗದಲ್ಲಿ ದಾವ ಪ್ರದೇಶದಲ್ಲಿ ಎಷ್ಟೆಷ್ಟು ನಾಡಿಗಳು ಇರೋದೂನೂ, ನಾಡ್ಯಂತರ್ಗತ ಉಪಾಸಕರು ದೇವತೆಗಳೆಂತಲೂನೂ ಹೇಳತ್ತಾರೆ.

ಕಟಿ ಆರಂಭಮಾಡಿ ಪಾದಾಂತವರಿಗೂ ಇದರ ಒಳಗೆ ಇರತಕ್ಕ ಪಾದಾಧಾರ ನಾಡಿಗಳು ಹನ್ನೆರಡು ಸಾವಿರ ನಾಡಿಗಳು. ಕಂಠ ಆರಂಭಮಾಡಿ ಕಟ್ಯಂತ ಮಧ್ಯ ದೇಹದೊಳು ಹದಿನಾಲ್ಕು ಸಾವಿರ ನಾಡಿಗಳು ಇರೋದಾಗಿ ಅವೆ. ಭುಜ ಆರಂಭಮಾಡಿ ಹಸ್ತಪರಿಯಂತ ಕೈಯಲ್ಲಿ ಎರಡು ಎರಡು ಸಾವಿರ ಅಂದರೆ ನಾಲ್ಕು ಸಾವಿರ ನಾಡಿಗಳು. ಶಿರಸ್ಸಿನ ಒಳಗೆ ಆರುಸಾವಿರ ನಾಡಿಗಳು. ೧೨,೦೦೦ ಚರಣಗಳಲ್ಲಿ, ೧೪,೦೦೦ ಮಧ್ಯದೇಹದಲ್ಲಿ, ೪,೦೦೦ ಬಾಹುಗಳಲ್ಲಿ, ೬,೦೦೦ ಶಿರಸ್ಸಿನಲ್ಲಿ ಅಂತು ೩೬,೦೦೦, ದೇಹದೊಳಗೆ ಒಂದು ಭಾಗದಲ್ಲಿ ಇರೋ ನಾಡಿಗಳು, ಎರಡನೇ ಭಾಗದಲ್ಲಿ ಇರತಕ್ಕ ನಾಡಿಗಳು ೩೬,೦೦೦ ಅಂತು ಒಟ್ಟು ೭೨,೦೦೦ ನಾಡಿಗಳು. ಈ ಎಡ ಬಲನಾಡಿಗಳೊಳಗೆ, ಎಡಭಾಗಗತ ನಾಡಿಗಳೊಳಗೆ ರಾತ್ರಿ ಅಭಿಮಾನಿ ದೇವತೆಗಳು, ಬಲಭಾಗಗತ ನಾಡಿಗಳೊಳಗೆ ಹಗಲು ಅಭಿಮಾನಿ ದೇವತೆಗಳ ತಿಳಿದವನಾಗಿ, ಆಯಾ ದೇವತಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಈ ವಾಸುದೇವನ ಉಪಾಸನಾ ಮಾಡತಕ್ಕವರು ದಾರೋ ಅವರು, ಭೂಮಿಯೊಳು ಸ್ವರ್ಗವಾಸಿಗಳಾದ ದೇವತೆಗಳು,

**ವಿಶೇಷಾರ್ಥ**–ಹಗಲಭಿಮಾನಿಗಳು ಆಜಾನಜ ಪುರುಷದೇವತೆಗಳು. ರಾತ್ರಿ ಅಭಿಮಾನಿಗಳು ಅವರ ಪತ್ನಿಯರು ಎಂತ ತಿಳಿಯಬೇಕು. ಇಳೆಯೊಳಗೆ ಅಂದರೆ, ಈ ಭರತಖಂಡ ಭೂಮಿಯಲ್ಲಿ ಸಾಧನ ಭೂಮಿ ಎಷ್ಟೆಂದರೆ ವಿವರ :-

1. ಸಗರರಾಯನ ಮಕ್ಕಳು ಖನನಮಾಡಿ ಸಮುದ್ರದೊಳಗೆ ಸೇರಿಹೋದದ್ದು ೧೦೦ ಯೋಜನ
2. ರಾಮೇಶ್ವರಗತ ನವಪಾಷಾಣ ಆರಂಭಮಾಡಿ ಚಿಕ್ಕಬದರಿ ಪರಿಯಂತ ೪೫೦ ಯೋಜನ

ಇದಕ್ಕೆ ವಿವರ–೧. ನವಪಾಷಾಣ ಆರಂಭ ಮಾಡಿ
ಕೃಷ್ಣಾ ಪರಿಯಂತ
ಮಧ್ಯಮ ೧೫೦ ಯೋಜನ

೨. ಕೃಷ್ಣಾ ಆರಂಭ ಮಾಡಿ ಗಂಗಾ ಪರಿಯಂತ
ಅಧಮ ೨೦೦ ಯೋಜನ

೩. ಗಂಗಾದಾರಭ್ಯ ಚಿಕ್ಕ ಬದರಿ ಪರಿಯಂತ
(ಅವಶಿಷ್ಟ) ಉತ್ತಮ ೧೦೦ ಯೋಜನ

3. ಉಳಿವ ಭಾಗ ಚಿಕ್ಕ ಬದರಿ ಆಚೆ ಇರುವ ಹಿಮಾಚಲಪ್ರದೇಶ
ಇಲ್ಲಿ ದೇವತೆಗಳು ದೇವತಾಶರೀರದಿಂದ ಸಾಧನ ಮಾಡೋ
ಪ್ರದೇಶ ೪೫೦ ಯೋಜನ
ಅಂತು ೧೦೦೦

೨. ಭಾವಪ್ರಕಾಶಿಕೆ :–

ಮೇಲಿನ ಪದ್ಯದಲ್ಲಿ ಹೇಳಿದ ೩೬,೦೦೦ ನಾಡಿಗಳ ಪೈಕಿ ೧೨,೦೦೦ ಪಾದಗಳಲ್ಲಿಯೂ, ೧೪,೦೦೦ ಮಧ್ಯ ಶರೀರದಲ್ಲಿಯೂ, ೪,೦೦೦ ಬಾಹುಗಳಲ್ಲಿಯೂ, ತಲೆಯಲ್ಲಿ ೬,೦೦೦, ಅಂತು, ೩೬,೦೦೦ ನಾಡಿಗಳು ಶರೀರದ ಬಲಭಾಗದಲ್ಲಿರುವುವು. ಅದರಂತೆ, ೩೬,೦೦೦ ನಾಡಿಗಳು ಎಡಭಾಗದಲ್ಲಿರುವುವು. ಇವುಗಳಲ್ಲಿ ೧೦೦೦ ವರ್ಷಗಳಿಗಾಗುವ ೩೬,೦೦೦ ಹಗಲು, ೩೬,೦೦೦ ರಾತ್ರಿ-ಇವುಗಳಿಗೆ ಅಭಿಮಾನಿ ದೇವತೆಗಳೇ ಈ ದೇಹದೊಳಗೆ ಎಡಬಲ ನಾಡಿಗಳು ೭೨,೦೦೦ದಲ್ಲಿ ಇರುವರೆಂದು ಚಿಂತಿಸಿ, ಉಪಾಸನೆ ಮಾಡುವವರು ಭೂಮಿಯಲ್ಲಿದ್ದರೂ, ಅವರನ್ನು ದೇವತೆಗಳೆಂದು ಹೇಳಬೇಕು. ಅಂದರೆ, ದೇವತೆಗಳು ಹೇಗೆ ಮಾನ್ಯರೋ, ಹಾಗೇ ಇವರೂ ಮಾನ್ಯರು ॥ ೨ ॥

**೩. ಭಾವದರ್ಪಣ :-**

**ಪಾದೇ ದ್ವಿಷಟ್‌ಸಹಸ್ರಂತು ಮಧ್ಯೇಚೈವ ಚತುರ್ದಶ ।**
**ಬಾಹೌ ಚತುಸ್ಸಹಸ್ರಂತು ಶಿರಸಿ ಷಟ್ಪ್ರಕೀರ್ತಿತಾ ॥**

**-ಇತಿ ವಾಯುಪುರಾಣೋಕ್ತೇಃ** ॥ ೨ ॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-**

ಉಕ್ತಂ ವಿವೃಣೋತಿ-"ಚರಣದೊಳು"-ಇತಿ ॥ ಪದೋಃ ದ್ವಿಷಟ್ ಸಹಸ್ರಂತು ಮಧ್ಯೇ ಚೈವ ಚತುರ್ದಶ ಬಾಹೌ ಚತುಃ ಸಹಸ್ರಂ ತು ಷಟ್ ಸಹಸ್ರಂ ತು ಮೂರ್ಧನಿ ॥ "ಇರಳು"-"ಹಗಲು"-ಇತಿ॥ "ಇರಳು"-ರಾತ್ರ್ಯಭಿಮಾನೀ॥ ಪ್ರಾಣಾದ್ಯಾಃ ಭಾರತ್ಯಾದ್ಯಾಃ ಚ ॥ **ಷಟ್ಪ್ರಶ್ನೀಚ** "ಪ್ರಾಣೋऽಸ್ಯ ಥ ವಾ ಜ ಸಿಸಿ" ॥ ಇತಿ ॥ "ಅತ್ರೈವ ನರಕಃ ಸ್ವರ್ಗಃ"-ಇತ್ಯುಕ್ತೇಃ ಆಹ ೧ ಸ್ವರ್ಗ"-ಇತಿ ॥ ೨ ॥

**ಕನ್ನಡಾರ್ಥ :-**

ಹಿಂದೆ ಹೇಳಿದ ನಾಡಿಗಳ ಸಂಖ್ಯೆಯನ್ನು ವಿಂಗಡವಾಗಿ ವಿವರಿಸುತ್ತಾರೆ-**"ಚರಣದೊಳು"**-ಎಂಬ ಪದ್ಯದಿಂದ. ಕಾಲಿನಲ್ಲಿ-೧೨,೦೦೦, ಮಧ್ಯದೇಹದಲ್ಲಿ-೧೪,೦೦೦, ಬಾಹುಗಳಲ್ಲಿ-೪೦೦೦, ಶಿರಸ್ಸಿನಲ್ಲಿ-೬೦೦೦ ಹೀಗೆ ನಾಡಿಗಳಿವೆ. ಈ ವಿಷಯದಲ್ಲಿ ಪಾದದಲ್ಲಿ ೧೨, ದೇಹಮಧ್ಯದಲ್ಲಿ ೧೪, ಬಾಹುಗಳಲ್ಲಿ ೪, ಶಿರಸ್ಸಿನಲ್ಲಿ ೬ ಸಹಸ್ರನಾಡಿಗಳಿರುತ್ತವೆ-ಎಂದು ಹೇಳುವ **"ಪದೋಃ ದ್ವಿಶಟ್ ಸಹಸ್ರಂತು"**-ಎಂಬ ಪ್ರಮಾಣವಿದೆ. ಇರುಳು-ರಾತ್ರಿ, ಹಗಲು-ರಾತ್ರಿಗಳ ಅಭಿಮಾನಿಗಳೂ ಈ ನಾಡಿಗಳಲ್ಲಿರುತ್ತಾರೆ. ಪ್ರಾಣ ಭಾರತೀ ಮುಂತಾದವರು ಹಗಲು ರಾತ್ರಿಗಳ ಅಭಿಮಾನಿಗಳು. **ಐತರೇಯ ಭಾಷ್ಯದಲ್ಲಿ**- ಪ್ರಾಣನು ಹಗಲಿಗೂ, ಭಾರತಿಯು ರಾತ್ರಿಗೂ ದೇವತೆಗಳು-ಎಂದು ನಿರೂಪಿಸಲಾಗಿದೆ. ಇಲ್ಲಿಯೇ ಸ್ವರ್ಗ-ನರಕಗಳು ಎಂದು ಹೇಳಿರುವುದರಿಂದ, "ಹೀಗೆ ಅರಿತು ಉಪಾಸನೆಗೈವ

ರಿಳಿಯೊಳಗೆ ಸ್ವರ್ಗವಾಸಿಗಳು"–ಎಂದು ದಾಸವರ್ಯರು ನಿರೂಪಿಸುತ್ತಾರೆ ಎಂಬುದಾಗಿ ತಿಳಿಯಬೇಕು. ॥ ೨ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಮೂವತ್ತಾರು ಸಾವಿರ ನಾಡೀಸ್ಥಾನ ವಿವರ ತಿಳಿಸುತ್ತಾರೆ, ಚರಣವೆಂದು. ಚರಣಗಳೆಂಬ ಕಾಲುಗಳಲ್ಲಿ ಹನ್ನೆರಡುಸಾವಿರ ನಾಡಿಗಳೂ, ಮಧ್ಯದೇಹದಲ್ಲಿ ಹದಿನಾಲ್ಕುಸಾವಿರ ನಾಡಿಗಳೂ, ಬಾಹುಗಳೆಂಬ ತೋಳುಗಳಲ್ಲಿ ನಾಲ್ಕು ಸಾವಿರ ನಾಡಿಗಳೂ, ಶಿರಸ್ಸೆಂಬ ತಲೆಯಲ್ಲಿ ಆರುಸಾವಿರ ನಾಡಿಗಳೂ ಸೇರಿ ಒಟ್ಟು ಮೂವತ್ತಾರುಸಾವಿರ ನಾಡಿಗಳು, ಎಡ–ಬಲ ಭಾಗಗಳಲ್ಲಿ ಇಷ್ಟೇ ಇರುವುವು. ಇವುಗಳಲ್ಲಿ ಅಹೋರಾತ್ರ್ಯಭಿಮಾನಿ ದೇವತೆಗಳಿರುವರೆಂದೂ, ತದ್ಗತ ದೇವರ ರೂಪ ಸ್ಮರಿಸಿ ಭಜಿಸುವರು (ಈ ಭೂಲೋಕದಲ್ಲೇ ಸ್ವರ್ಗಸುಖದಷ್ಟು ಸುಖವನ್ನು ಈ ಉಪಾಸನಾಬಲದಿಂದ ನಿತ್ಯವೂ ಹೊಂದುವುದರಿಂದ) ಸ್ವರ್ಗವಾಸಿಗಳೆಂದೆನಿಸಬೇಕೆಂದರ್ಥ.

**ವಿಶೇಷಾರ್ಥ :–** ಅಥವಾ ಈ ಉಪಾಸನಾಬಲದಿಂದ ಸ್ವರ್ಗವೆಂಬ ಮಹರಾದಿಲೋಕವೇನು ತಥಾ ಮುಕ್ತಿಯೇನು ಇವುಗಳನ್ನು ಕ್ರಮೇಣ ಹೊಂದುವುದರಿಂದ ಸ್ವರ್ಗವಾಸಿಗಳೆಂದು ಭಾವಿಸಬೇಕೆಂದರ್ಥ. ಸ್ವರ್ಗವೆಂದರೆ ವೈಕುಂಠವೆಂತಲೂ ಅರ್ಥ, **ಸ್ವಃ ಪರಮಾತ್ಮಾಗಚ್ಛತೀತಿ ಸ್ವರ್ಗಃ** ಎಂಬ ವ್ಯುತ್ಪತ್ತಿಯಿಂದ ॥ ೨ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪೂರ್ವೋಕ್ತ ಪದ್ಯದಲ್ಲಿ ಈ ಸ್ಥೂಲಶರೀರಗತ ಬಲಪಾರ್ಶ್ವದಲ್ಲಿ ಹಬ್ಬಿರುವ ೩೬,೦೦೦ ಪುರುಷನಾಡಿಗಳು, ಎಡಪಾರ್ಶ್ವದಲ್ಲಿ ವ್ಯಾಪಿಸಿರುವ ೩೬,೦೦೦ ಸ್ತ್ರೀನಾಡಿಗಳ ವಿಚಾರ ತಿಳಿಸಿ, ಪ್ರಸಕ್ತ ೨ನೆಯ ಪದ್ಯದಿಂದ, ಸ್ಥೂಲದೇಹದಲ್ಲಿ ಎಡ–ಬಲಪಾರ್ಶ್ವಗತ ೩೬,೦೦೦ ನಾಡಿವ್ಯೂಗಳ ಹಂಚಿಕೆಯನ್ನು ತಿಳಿಸುತ್ತಾರೆ.

ಬಲಗಾಲಿನಲ್ಲಿ, ಸೊಂಟದಿಂದ ಪ್ರಾರಂಭಿಸಿ, ಕಾಲಿನ ಬೆರಳಿನ ತುದಿಗಳ ಪರ್ಯಂತ ಇರುವ ನಾಡಿಗಳ ಸಂಖ್ಯೆ = ೧೨,೦೦೦ (ಹನ್ನೆರಡು ಸಾವಿರ) ಅಂತೆಯೇ ಎಡಗಾಲಿನಲ್ಲಿ ೧೨,೦೦೦ ನಾಡಿಗಳು ವ್ಯಾಪಿಸಿವೆ.

ಮಧ್ಯದೇಹದಲ್ಲಿ ಬಲಪಾರ್ಶ್ವದಲ್ಲಿರುವ ನಾಡಿಗಳ ಸಂಖ್ಯೆ ೧೪,೦೦೦.
ಅಂತೆಯೇ ಮಧ್ಯದೇಹಗತ ಎಡಪಾರ್ಶ್ವದಲ್ಲಿ ೧೪,೦೦೦ ನಾಡಿಗಳಿವೆ.
ಕಂಠದಿಂದ ಕಟಿಯಪರ್ಯಂತ ಇರುವ ಭಾಗವೇ ಮಧ್ಯದೇಹವು

ಬಲಹಸ್ತದಲ್ಲಿ ವ್ಯಾಪಿಸಿರುವ ನಾಡಿಗಳ ಸಂಖ್ಯೆ = ೪,೦೦೦
(ಈರೆರಡು ಸಾವಿರ)

ಎಡಹಸ್ತದಲ್ಲಿ ೪,೦೦೦ ನಾಡಿಗಳು ವ್ಯಾಪಕವಾಗಿವೆ.

ಶಿರದಲ್ಲಿ ಬಲಪಾರ್ಶ್ವಗತ ನಾಡಿಗಳ ಸಂಖ್ಯೆ = ೬,೦೦೦
ಎಡಪಾರ್ಶ್ವದಲ್ಲಿ ೬,೦೦೦ ನಾಡಿಗಳು.

ಇಂತು ರುಂಡ (ಶಿರ), ಮುಂಡ (ಮಧ್ಯದೇಹ,) ಕೈಗಳು (ಹಸ್ತ) ಮತ್ತು ಕಾಲುಗಳಲ್ಲಿ (ಪಾದ) ಹಬ್ಬಿ ಹರಡಿರುವ ನಾಡಿಗಳ ಸಂಖ್ಯೆ = ೧೨,೦೦೦ ೧೪,೦೦೦ ೪,೦೦೦ ೬,೦೦೦ = **೩೬,೦೦೦** (ಮೂವತ್ತು ಆರು ಸಹಸ್ರ ನಾಡಿಗಳು).

ಎಡಪಾರ್ಶ್ವದಲ್ಲಿ ಅಷ್ಟೇ ೩೬,೦೦೦ ನಾಡಿಗಳಿವೆ. ಇದರಿಂದ ಈ ಸ್ಥೂಲ ದೇಹಗತ ಬಲ ಮತ್ತು ಎಡಪಾರ್ಶ್ವಗಳಲ್ಲಿ ಒಟ್ಟು **೭೨,೦೦೦** ನಾಡಿಗಳು ಹಬ್ಬಿ ಹರಡಿಕೊಂಡಿವೆ.

ಒಂದು ವರ್ಷ ಕಾಲಾವಧಿಯಲ್ಲಿ ಇರುವ ದಿನಗಳ ಸಂಖ್ಯೆ = ೩೬೦
ಮಾನವನ ಆಯುರ್ಮಾನ ಕಾಲದ ಪ್ರಕಾರ, ೧೦೦ ವರ್ಷಗಳಿಗೆ

೩೬೦X೧೦೦ = ೩೬,೦೦೦ ದಿವಸಗಳಾಗುವುವು.

ಈ ಕಾಲಮಾನದಲ್ಲಿ ೩೬೦೦೦ ಹಗಲುಗಳು ಮತ್ತು ೩೬೦೦೦ ರಾತ್ರಿಗಳು.

ಸ್ಥೂಲದೇಹಗತ ಬಲಪಾರ್ಶ್ವದಲ್ಲಿರುವ ೩೬,೦೦೦ ಪುಂನಾಡಿಗಳಲ್ಲಿ ಹಗಲಿನ ಅಭಿಮಾನಿ ದೇವತೆಗಳು ಇದ್ದೂ, ವಾಯುದೇವರ ದ್ವಾರಾ, ಮಾನವನ ಆಯುಸ್ಸಿಗೆ ಕಾರಣರಾಗಿದ್ದಾರೆ.

ಅಂತೆಯೇ ಎಡಪಾರ್ಶ್ವಗತ ೩೬,೦೦೦ ಸ್ತ್ರೀನಾಡಿಗಳಲ್ಲಿ ರಾತ್ರಿಯು ಅಭಿಮಾನಿ ದೇವತೆಗಳಿದ್ದಾರೆ.

ಇಂತು ಈ ಸ್ಥೂಲಶರೀರದಲ್ಲಿ ೩೬,೦೦೦ ದಿವಾಭಿಮಾನಿ ದೇವತೆಗಳನ್ನೂ ಮತ್ತು ೩೬,೦೦೦ ನಿಶಾಭಿಮಾನಿ ದೇವತಾವರ್ಗವನ್ನು, ಈ ಸ್ಥೂಲದೇಹದಲ್ಲಿ ಚಿಂತಿಸುತ್ತಾ ಆ ಅಭಿಮಾನಿದೇವತೆಗಳಲ್ಲಿ ನಾಡೀಗತ ವ್ಯಾಪಾರಗಳನ್ನು ನಡೆಯಿಸುತ್ತಿರುವ ಶ್ರೀವಾಯುದೇವರು ಅಂತರ್ಗತನಾದ ಬೃಹತೀಛಂದಸ್ಸಿನಿಂದ ಪ್ರತಿಪಾದ್ಯನಾದ, ಶ್ರೀ ವಾಸುದೇವನಾಮಕ ಶ್ರೀ ಪರಮಾತ್ಮನನ್ನು ಸದಾ ಉಪಾಸನೆ ಮಾಡುತ್ತಿರುವ ಭಾಗವತೋತ್ತಮರು ಈ ಭೂಮಿಯ ಮೇಲೆ ಇರುವ ದೇವತೆಗಳೆಂದೇ (ಸ್ವರ್ಗವಾಸಿಗಳು) ಪರಿಗಣಿಸಬೇಕೆಂದು ದಾಸವರ್ಯರು ತಿಳಿಸುತ್ತಾರೆ. ॥ ೨ ॥

## ಸ್ಥೂಲದೇಹಗತನಾಡಿಗಳ ವ್ಯಾಪನೆಯ ಪಟ್ಟಿ

| ಕ್ರಮ ಸಂಖ್ಯೆ | ಶರೀರಗತಸ್ಥಾನ | ಬಲಪಾರ್ಶ್ವದಲ್ಲಿ | ಎಡಪಾರ್ಶ್ವದಲ್ಲಿ | ಒಟ್ಟು ನಾಡಿಗಳ ಸಂಖ್ಯೆ | ದಿವಾಭಿಮಾನಿ ದೇವತೆಗಳು | ನಿಶಾಭಿಮಾನಿ ದೇವತೆಗಳು |
|---|---|---|---|---|---|---|
| ೧. | ಶಿರದಲ್ಲಿ | ೬,೦೦೦ | ೬,೦೦೦ | ೧೨,೦೦೦ | ೩೬,೦೦೦ | ೩೬,೦೦೦ |
| ೨. | ಮಧ್ಯದೇಹದಲ್ಲಿ | ೧೪,೦೦೦ | ೧೪,೦೦೦ | ೨೮,೦೦೦ | ಬಲಪಾರ್ಶ್ವಗತ | ಎಡಪಾರ್ಶ |
| ೩. | ಹಸ್ತಗಳಲ್ಲಿ | ೪,೦೦೦ | ೪,೦೦೦ | ೮,೦೦೦ | ಪುಂನಾಡಿಗಳಲ್ಲಿ | ಗತ ಸ್ತ್ರೀ |
| ೪. | ಪಾದಗಳಲ್ಲಿ | ೧೨,೦೦೦ | ೧೨,೦೦೦ | ೨೪,೦೦೦ | | ನಾಡಿಗಳಲ್ಲಿ |
| | ಒಟ್ಟು | ೩೬,೦೦೦ | ೩೬,೦೦೦ | ೭೨,೦೦೦ | | |

## ಪದ್ಯ ೩

**ಮೂಲ :–**

ಬೃಹತಿನಾಮಕ ವಾಸುದೇವನು ।
ವಹಿಸಿ ಸ್ತ್ರೀಪುರುಷಗಳ ದೋಷವಿ ।
ರಹಿತ ಎಪ್ಪತ್ತೆರಡು ಸಾವಿರ ನಾಡಿಗಳೊಳಗಿದ್ದು ॥
ದ್ರುಹಿಣ ಮೊದಲಾದಮರಗಣ ಸ ।
ನ್ಮಹಿತ ಸರ್ವಪ್ರಾಣಿಗಳ ಮಹ ।
ಮಹಿಮ ಸಂತೈಸುವನು ಸಂತತ ಪರಮಕರುಣಾಳು ॥ ॥ ೩ ॥

**ಅವತರಣಿಕೆ :–**

ಸ್ಥೂಲಶರೀರಗತ ೭೨,೦೦೦ ನಾಡಿಗಳಲ್ಲಿ ಬೃಹತೀನಾಮಕ ಶ್ರೀ ವಾಸುದೇವರೂಪೀ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದು, ನಡೆಯಿಸುವ ನಾಡೀಗತ ಕ್ರಿಯಾವಿಶೇಷಗಳನ್ನು ತಿಳಿಸುತ್ತಾರೆ–

**ಪ್ರತಿಪದಾರ್ಥ :–**

**ದೋಷ ವಿರಹಿತ** = ಸಮಸ್ತ ದೋಷಗಳಿಂದ ದೂರನಾದ, **ಬೃಹತಿ ನಾಮಕ** = ಬೃಹತಿ ನಾಮ ಸಾಂಕೇತನಾದ **ವಾಸುದೇವನು** = ವಾಸುದೇವ ನಾಮಕ ಶ್ರೀಪರಮಾತ್ಮನು, **ಸ್ತ್ರೀ** = ಸ್ತ್ರೀರೂಪಗಳಿಂದದೇಹಗತ ಎಡಪಾರ್ಶ್ವದಲ್ಲಿರುವ ೩೬,೦೦೦ ಸ್ತ್ರೀನಾಡಿಗಳಲ್ಲಿ, **ಪುರುಷಗಳ** = ಪುರುಷ ರೂಪಗಳಧರಿಸಿ, ಶರೀರಗತ ಬಲಭಾಗದಲ್ಲಿರುವ ೩೬,೦೦೦ ಪುಂನಾಡಿಗಳಲ್ಲಿ, **ಎಪ್ಪತ್ತೆರಡು ಸಾವಿರ ನಾಡಿಗಳೊಳು** = ಪೂರ್ವೋಕ್ತ ಒಟ್ಟು ಶರೀರಗತ ೭೨,೦೦೦ ನಾಡಿಗಳಲ್ಲಿ, **ಇದ್ದು** = ವಿದ್ಯಮಾನನಾಗಿ ನೆಲೆಸಿದ್ದು, **ದ್ರುಹಿಣ** = ಶ್ರೀ ಚತುರ್ಮುಖ

ಬ್ರಹ್ಮ ದೇವರಂ, **ಮೊದಲಾದ** = ಮೊದಲಾಗಿ, **ಅಮರಗಣ** = ತತ್ತ್ವಾಭಿಮಾನಿಗಳೂ ಹಾಗೂ ತದನ್ಯರಾದ ನಾಡ್ಯಭಿಮಾನಿ ದೇವತಾ ಸಮೂಹದಿಂದ, **ಸನ್ಮಮಹಿತ** = ಒಡಗೂಡಿಕೊಂಡವನಾಗಿ. ಅವರಿಂದ ಸ್ತುತ್ಯಮಾನನಾದ ಶ್ರೀರಾಮದೇವನು, **ಪರಮಕರುಣಾಳು** = ಅತ್ಯಂತ ದಯಾಳುವಾದ ಶ್ರೀಹರಿಯು, **ಸರ್ವಪ್ರಾಣಿಗಳ** ಸಮಸ್ತರಾದ ತ್ರಿವಿಧ ಚೇತನರನ್ನು **ಮಹಾಮಹಿಮ** = ಪರಮಮಹಿಮಾಸಂಪನ್ನನು, **ಸಂತತ** = ನಿರಂತರದಲ್ಲಿಯೂ, **ಸಂತೈಸುವನು** = ಕಾಪಾಡುತ್ತಿರುವನು. (ಶರೀರದ ಪೋಷಣಾ ಕಾರ್ಯ) ॥ ೩ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ನಾಡೀಗತ ವಾಸುದೇವನು ಇರತಕ್ಕ ವಿಚಾರ ಹೇಳುತ್ತಾರೆ.

ದೋಷದೂರನಾದ ಬೃಹತೀ ಸಹಸ್ರ ಋಗ್ವಾಚ್ಯನಾದ (ಬೃಹ ವೃದ್ಧಾವಿತಿ ಧಾತುಪರ್ಯಾಲೋಚನಯಾ ಪೂರ್ಣಮಿತಿ ಜ್ಞೇಯಂ), ಬೃಹತೀ ಎಂತ ನಾಮಸಾಂಕೇತನಾದ ವಾಸುದೇವನಾಮಕ ಪರಮಾತ್ಮ ಸ್ತ್ರೀರೂಪಗಳು ಧರಿಸಿ ಎಡಭಾಗಗತ ೩೬,೦೦೦ ನಾಡಿಗಳೊಳಗೆ, ಪುರುಷರೂಪಗಳ ಧರಿಸಿ ಬಲಭಾಗಗತ ಮೂವತ್ತಾರು ಸಾವಿರ ನಾಡಿಗಳೊಳಗೆ, ಈ ಪ್ರಕಾರ ಸ್ತ್ರೀಪುರುಷ ರೂಪಗಳು ಧರಿಸಿದವನಾಗಿ, ಎಪ್ಪತ್ತೆರಡು ಸಾವಿರ ನಾಡಿಗಳೊಳಗೆ ಇದ್ದು ಬ್ರಹ್ಮದೇವರೇ ಮೊದಲಾದ ತತ್ತ್ವಾಭಿಮಾನಿಗಳು ತದನ್ಯರಾದ ದೇವತಾಗಣ ವಾಸುದೇವನೋಪಾದಿಯಲ್ಲಿ ಸ್ತ್ರೀ-ಪುರುಷರೂಪಗಳ ಧರಿಸಿ ಇರೋವರಾಗಿದ್ದಾರೆ ಈ ಪ್ರಕಾರ ನಾಡಿಗಳ ಒಳಗೆ ಇರತಕ್ಕ ದೇವತೆಗಳಿಂದ ಪ್ರತಿ ಪ್ರತಿ ನಾಡಿಗಳೊಳಗೆ ಬ್ರಹ್ಮ ಮೊದಲಾದ ದೇವತೆಗಳು ಇದ್ದಾರೆ. ಒಂದೊಂದು ನಾಡೀ ಒಳಗೆ ಒಂದೊಂದು ಭಗವದ್ರೂಪ ಇರೋದಾಗಿ ಅದೆ. ಇದ್ದು ಬ್ರಹ್ಮಾದಿ ದೇವತೆಗಳಿಂದ ಚಂದಾಗಿ ಪೂಜ್ಯನಾಗಿ ನಾಡೀ ಅಂತರ್ಗತನಾಗಿದ್ದು, ಅತ್ಯಂತ ದಯಾಳುವಾದ, ಅಸದೃಶ ಮಹಿಮೋಪೇತನಾದ ವಾಸುದೇವರೂಪಿ ಪರಮಾತ್ಮ ನಿರಂತರದಲ್ಲೂ, ಸಮಸ್ತ ತ್ರಿವಿಧ ಜೀವರಲ್ಲಿ ನಾಡೀ ಅಂತರ್ಗತನಾಗಿದ್ದು ಸಂರಕ್ಷಣೆ ಮಾಡುವನು.

**ವಿಶೇಷಾರ್ಥ:**-ದೇವತೆಗಳು ಕಾಮರೂಪಿಗಳಾದ್ದರಿಂದ ಸ್ತ್ರೀರೂಪಗಳ ಪುರುಷ ರೂಪಗಳ ಧರಿಸಬಲ್ಲರು. ಆಯಾ ಅಧಿಷ್ಠಾನ ಎಂತ ತಾತ್ಪರ್ಯ. ಮತ್ತು ಸುಕುಮಾರ ವನದೊಳಗೆ ಹೋದ ಪುರುಷರು ರುದ್ರದೇವರ ಶಾಪದಿಂದ ಸ್ತ್ರೀತ್ವ ಹೊಂದಿದರು (ಭಾಗವತ ನವಮಸ್ಕಂದ) ಹ್ಯಾಂಗೋ ತದ್ವತ್, ಭಗವದಾಜ್ಞಾದಿಂದ ದೇವತೆಗಳು ಸ್ತ್ರೀ-ಪುರುಷರೂಪಗಳ ಧರಿಸೋವರಾಗುತ್ತಾರೆ. ಇದು ಬಾಹ್ಯ ಸ್ಥೂಲ ದೇಹದ ವಿಚಾರವೇ ಹೊರತು, ಸ್ವರೂಪ ಲಿಂಗ ಅನಿರುದ್ಧ ಈ ದೇಹಗಳ ವಿಚಾರವಲ್ಲ. ಇವುಗಳು ದಾವಾಗ್ಯೂ ಏಕಪ್ರಕಾರ ಇರುತ್ತವೆ. ಈ ಪ್ರಕಾರ ಎಲ್ಲಾ ದೇವತೆಗಳೂ ಎಡಭಾಗ ಬಲಭಾಗದಲ್ಲಿ ಹಾಂಗೆ ಸ್ತ್ರೀ-ಪುರುಷ ದೇಹದಲ್ಲಿ ಇರೋವರಾಗಿದ್ದಾರೆ, ಎಂದು ತಿಳಿಯಬೇಕು. ॥ ೩ ॥

## ೨. ಭಾವಪ್ರಕಾಶಕೆ

ಈ ದೇಹದಲ್ಲಿ ಮೇಲೆ ಹೇಳಿದ ರೀತಿಯಾಗಿ, ೭೨,೦೦೦ ನಾಡಿಗಳಿರುವುವು. ಈ ನಾಡಿಗಳಲ್ಲಿ ೩೬೦೦೦ ಎಡಭಾಗದಲ್ಲಿ ಸ್ತ್ರೀನಾಡಿಗಳೆಂತಲೂ ೩೬,೦೦೦ ಬಲ ಭಾಗದಲ್ಲಿ ಪುರುಷನಾಡಿಗಳೆಂತಲೂ ಎರಡು ಭಾಗಗಳಾಗಿರುವುವು. ಬೃಹತೀ ಛಂದಸ್ಸಿನ ಪ್ರತಿಪಾದ್ಯನಾದುದರಿಂದಲೂ, ಬೃಹಪೂರ್ಣ-ಎಂಬ ಧಾತುವಿನಿಂದ ಪೂರ್ಣನಾದುದರಿಂದಲೂ ಬೃಹತೀ ಎಂಬ ಹೆಸರುಳ್ಳ ಶ್ರೀಪರಮಾತ್ಮನು ೩೬,೦೦೦ ಸ್ತ್ರೀರೂಪಗಳನ್ನೂ ೩೬,೦೦೦ ಪುರುಷ ರೂಪಗಳನ್ನೂ ವಹಿಸಿ, ಮೇಲೆ ಹೇಳಿದ ಸ್ತ್ರೀಪುರುಷ ನಾಡಿಗಳಲ್ಲಿ ಇದ್ದು, ತತ್ತ್ವೇಶರಾದ ಬ್ರಹ್ಮಾದಿ ದೇವತೆಗಳಿಂದ ಪೂಜ್ಯನಾಗಿ ಪರಮಕರುಣದಿಂದ ಮಹಾಮಹಿಮೆಯುಳ್ಳವನಾಗಿ ನಿತ್ಯವೂ ಸಂರಕ್ಷಿಸುವನು, ॥ ೩ ॥

## ೩. ಭಾವದರ್ಪಣಾ

ಬೃಹತಿನಾಮಕೇತಿ ॥ **ಬೃಹವೃದ್ಧಾವಿತಿ ಧಾತುಪರ್ಯಾಲೋಚನಯಾ ಪೂರ್ಣಮಿತಿ ಜ್ಞೇಯಂ**

**ದ್ವಾಸಪ್ತತಿ ಸಹಸ್ರಾಣಿ ರೂಪಾಣ್ಯೇವಂ ರಮಾಪತೇರಿತಿ-ಐತರೇಯವಚನಾತ್** ॥ ॥೩॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

ಬೃಹತಿ-ಇತಿ ॥ ಬೃಹತ್ವಾತ್ ಪೂರ್ಣತ್ವಾತ್ ಇತಿ ಯಾವತ್ ॥ ಸ್ತ್ರೀಮಾನಂ ತು ಉಕ್ತಮ್ ॥ ಎಪ್ಪತ್ತೆರಡು - ಇತಿ ॥ ದ್ವಾಸಪ್ತತಿಸಹಸ್ರಾಣಿ ನಾಡ್ಯೋನ್ಯಾಸ್ತು ಪ್ರಧಾನತಃ ॥ ಇತಿ ಸಾರಸಂಗ್ರಹೇ ॥ ತತ್ಕ್ರಮಃ ಉದಾಹೃತಃ ನಾಡೀಕಲ್ಪಲತಾಯಾಮ್ ॥ ಏಕೋತ್ತರಶತಂ ನಾಡ್ಯಃ ಶರೀರೇಽಸ್ಮಿನ್ ಸಮೀಮಾಹಿತಾಃ ॥ ತಾಸು ಪಂಚ ಪ್ರಧಾನಾಃಹಿ ಪಿಂಗಳೇಡಾ ಚ ನಂದಿನೀ ॥ ಸುಷುಮ್ನಾ ವಜ್ರಿಕಾ ತತ್ರ ಚತಸ್ರಃ ದಿಕ್ಷು ಸಂಸ್ಥಿತಾಃ ॥ ಸುಷುಮ್ನಾಯಾಃ ಚತುರ್ದಿಕ್ಷು ॥ ಇತಿ ಸಂಗ್ರಹೇ ॥ ಅತ್ರಾಪಿ–"ಚತ್ವೃಷು ಸ್ಥಿತಾ ಮಧ್ಯೇ ಸುಷುಮ್ನೈಕಾ ಪ್ರಧಾನತಃ ॥ ತಾಸಾಂ ಶತಂ ಶತಂ ಶಾಖಾಃ ಏಕೈಕಸ್ಯಾಃ ಪ್ರಕೀರ್ತಿತಾಃ॥ ತತ್ರ ಸೌಷುಮ್ನ ಶಾಖಾನಾಂ ಪ್ರತಿಶಾಖಾ ದಶೋದಿಮಾ ॥ ನವಶಾಖಾಃ ಚತಸ್ರೂಣಾಂ ಅಷ್ಟಶಾಖಾಃ ಷಡೇವತು ॥ ಶಿಷ್ಟಷಣ್ಣವತೀನಾಂ ತು ಪ್ರತಿಶಾಖಾಃ ಇಮಾಃ ಮತಾಃ ॥ ದ್ವಾಸಪ್ತತಿ ಸಹಸ್ರಾಣಾಂ ನಾಡೀನಾಂ ದೇವತತ್ವತಾ ॥ ಸ ಏವ ಭಿಷಜಾಂ ಶ್ರೇಷ್ಠಃ ಲಕ್ಷಣಾನಿಬು(ನಿ)ಬೇಧಮೇ ॥ (॥ಯಃ॥) ॥ ಇತಿ ॥ ದ್ರುಹಿಣ-ಬ್ರಹ್ಮಾ ॥೩॥

**ಕನ್ನಡಾರ್ಥ :–**

ಪರಿಪೂರ್ಣನಾದುದರಿಂದ ಪರಮಾತ್ಮನಿಗೆ ಬೃಹತಿ–ಪೂರ್ಣನೆಂದು ಕರೆಯುತ್ತಾರೆ. ಸ್ತ್ರೀರೂಪಗಳ ಸಂಖ್ಯೆಯನ್ನೂ ಹೇಳಲಾಗಿರುತ್ತದೆ. ತಂತ್ರಸಾರ ಸಂಗ್ರಹದಲ್ಲಿ ದ್ವಾಸಪ್ತತಿ ಸಹಸ್ರಾಣಿ ಎಂಬುದಾಗಿ ೭೨,೦೦೦ ಪ್ರಧಾನ ನಾಡಿಗಳಿರುತ್ತವೆ–ಎಂದು ನಿರೂಪಿಸಿರುತ್ತಾರೆ. ೭೨,೦೦೦ ನಾಡಿಗಳು ಹೇಗೆ ಆಗುವುವು ? ಅವುಗಳ ಕ್ರಮವು **ನಾಡಿಕಲ್ಪಲತಾ** ಎಂಬ ಗ್ರಂಥದಲ್ಲಿ ಹೇಳಲಾಗಿರುತ್ತದೆ. ಈ ಶರೀರದಲ್ಲಿ ೧೦೧ ನಾಡಿಗಳಿರುತ್ತವೆ. ಅವುಗಳಲ್ಲಿ ಐದು ನಾಡಿಗಳು ಪ್ರಧಾನವಾಗಿರುತ್ತವೆ. ಪಿಂಗಳಾ - ಇಡಾ - ನಂದನೀ - ಸುಷಮ್ನಾ - ವಜ್ರಿಕಾ ಎಂದು. ಇವುಗಳಲ್ಲಿ ಪಿಂಗಳಾ ಇಡಾ ಮುಂತಾದ ನಾಲ್ಕು ನಾಡಿಗಳು ಸುಷುಮ್ನಾ ನಾಡಿಯ ನಾಲ್ಕು ದಿಕ್ಕುಗಳಲ್ಲಿ ಇರುತ್ತವೆ ಎಂದು ತಂತ್ರಸಾರದಲ್ಲಿ ಉಕ್ತವಾಗಿದೆ. ನಾಡೀಕಲ್ಪಲತೆಯೆಂಬ ಗ್ರಂಥದಲ್ಲಿ ನಾಡಿಗಳ ಅವಾಂತರ ಪ್ರಭೇದ

ಗಳನ್ನು ಹೇಳಿ, ೭೨,೦೦೦ ನಾಡಿಗಳಲ್ಲಿರುವ ದೇವತೆಗಳನ್ನು ತಿಳಿದವನೇ ಉತ್ತಮ ವೈದ್ಯನು ಎಂದು ಪ್ರತಿಪಾದಿಸಲಾಗಿರುತ್ತದೆ ॥ ೩ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಪೂರ್ಣಗುಣನಾದ್ದರಿಂದ ಬೃಹತೀಮುಕ್ತಿಪಾದ್ಯ ಬೃಹಿತೀ ಎಂದು ಹೆಸರುಳ್ಳ ಶ್ರೀವಾಸುದೇವನು ಮೂವತ್ತಾರು ಸಾವಿರ ಸ್ತ್ರೀರೂಪ, ಮೂವತ್ತಾರು ಸಾವಿರ ಪುರುಷ ರೂಪಗಳನ್ನು ಧರಿಸಿ, ಎಂದರೆ ಸ್ತ್ರೀರೂಪಗಳೂ ಪುರುಷ ರೂಪಗಳೂ ದೇವರಿಗೆ ನಿತ್ಯವೂ ಉಂಟೆಂದರ್ಥ, ದೋಷವಿರಹಿತ್ಯ ಎಂದರೆ, ಪ್ರಾಕೃತಾದಿ ಸ್ತ್ರೀ ಪುರುಷರಂತೆ ವಿಕಾರ, ಅಸ್ವತಂತ್ರಾದಿ ದೋಷದೂರನು, ಎಪ್ಪತ್ತೆರಡು ಸಾವಿರ ನಾಡಿಗಳೊಳಗಿದ್ದು ದೃಹಿಣ ಎಂಬ ಬ್ರಹ್ಮದೇವರೇ ಮೊದಲಾದ ದೇವತಾ ಗಣಗಳಿಂದ ಪೂಜ್ಯನಾಗಿ ಸರ್ವಪ್ರಾಣಿಗಳನ್ನೂ ಸದಾ ರಕ್ಷಿಸುವನು. ಆದ್ದರಿಂದ ಮಹಾಮಹಿಮನು, ಕರುಣಾಳು ಎಂದರ್ಥ.

ಪ್ರಮಾಣ—ಷಟ್ತ್ರಿಂಶತ್ಸಹಸ್ರಾಣಿ ರೂಪಗಾಣಿ ಹರೇರಪಿ ।
ತಾನ್ಯೇವಾನ್ಯಾಂ ದೈವತಾನಿ ರೂಪಾಣಿ ಪರಮಾತ್ಮನಃ ॥
ತಾನ್ಯೇವ ವಿಷ್ಣುರೂಪಾಣಿ ರಾತ್ರೀಣಾಮಪಿ ದೇವತಾಃ ।
ದ್ವಿಸಪ್ತತಿ ಸಹಸ್ರಾಣಿ ರೂಪಾಣ್ಯೇವಂ ರಮಾಪತೇಃ ॥
ಶತಾಬ್ದೇಷ್ವಪ್ಯಹೋರಾತ್ರ ದೇವತ್ವಾ ಸಂಸ್ಥಿತಾನಿ ಚ ।
ಬೃಹತೀ ಸಹಸ್ರ ವರ್ಣಾನಾಮಪಿ ಧ್ಯಾತ್ವಾಖಿಲಾನ್ಯಪಿ ॥
ಶತವರ್ಷ ಹರಿಧ್ಯಾನ ಫಲಮಾಪ್ನೋತಿ ಪೂರುಷಃ ॥

ಎಂಬ ಐತರೇ ಭಾಷ್ಯಾರ್ಥ ವಿವರಿಸಿತು. ಮತ್ತೂ,

ಪಾದೇ ದ್ವಿಷಟ್ಸಹಸ್ರಂತು, ಮಧ್ಯೇ ಚೈವ ಚತುರ್ದಶ ।
ಬಾಹೋಃ ಚತುಸ್ಸಹಸ್ರಂತು ಶಿರಸಿ ಷಟ್ಪ್ರಕೀರ್ತಿತಾಃ ॥

ಎಂಬ ಪ್ರಮಾಣ ಒಂದು ಭಾಗದಲ್ಲಿ ಮೂವತ್ತಾರುಸಾವಿರ ನಾಡಿ ಸಂಖ್ಯಾ ವಿವರ ತಿಳಿಸುತ್ತದೆ ॥ ೩ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರಸಕ್ತ ೩ನೆಯ ಪದ್ಯದಿಂದ ನಾಡ್ಯಭಿಮಾನಿದೇವತಾಸಮೂಹದಲ್ಲಿದ್ದು ಸಮಸ್ತ ತ್ರಿವಿಧ ಜೀವರ ಶರೀರದ ಸಂರಕ್ಷಣೆಯನ್ನು ಮಾಡುತ್ತಾನೆಂದು ತಿಳಿಸುತ್ತಾರೆ.

**ಬೃಹವೃದ್ಧಾವಿತಿ ಧಾತುಪರ್ಯಾಲೋಚನಯಾ ಪೂರ್ಣಮಿತಿ ಜ್ಞೇಯಂ** – ಎಂಬ ಪದಪರಿಷ್ಕಾರ ವಿಧಾನದಿಂದ, ಬೃಹ ಧಾತುವಿನ ಅರ್ಥ ರೂಪವೇ ಪೂರ್ಣ ಅಥವಾ ಸರ್ವತ್ರವ್ಯಾಪ್ತನೆಂದರ್ಥ. ಸರ್ವಪ್ರಕಾರ ದಿಂದಲೂ ಶ್ರೀಪರಮಾತ್ಮನು ಪರಿಪೂರ್ಣನಾಗಿರುವುದರಿಂದ, ಅವನಿಗೆ **ಬೃಹತೀ** ಎಂದು ಹೆಸರು. ಬೃಹತೀ ಛಂದಸ್ಸು ೩೬ ವರ್ಣಗಳಿಂದ ಯುಕ್ತವಾದದ್ದು. ಇಂತಹ ಬೃಹತೀ ಋಕ್ ಪ್ರತಿಪಾದ್ಯನಾದ ಬೃಹತೀನಾಮಕ ವಾಸುದೇವನು ಪುರುಷ ರೂಪಗಳನ್ನು ತಾನೇ ಧರಿಸಿ, ಸ್ಥೂಲಶರೀರಗತ ಬಲಪಾರ್ಶ್ವದಲ್ಲಿರುವ ೩೬,೦೦೦ ಪುರುಷ ನಾಡಿಗಳಲ್ಲಿ ದಿವಾಭಿಮಾನಿ ದೇವತಾಂರ್ಗತನಾಗಿ ವಿಹರಿಸುತ್ತಿರುವನು. ಅಂತೆಯೇ ಬೃಹತೀ ನಾಮಕ ವಾಸುದೇವನೇ ಸ್ಥೂಲದೇಹಗತ ಎಡಪಾರ್ಶ್ವದಲ್ಲಿರುವ ೩೬,೦೦೦ ಸ್ತ್ರೀನಾಡಿಗಳಲ್ಲಿ ನಿಶಾಭಿಮಾನಿದೇವತಾಂರ್ಗತ ನಾಗಿ ಸಂಚರಿಸುತ್ತಿರುವನು.

ಸ್ತ್ರೀ ಪುರುಷರು ದೇಹವಿಕಾರ, ಅಸ್ವತಂತ್ರ ಇತ್ಯಾದಿ ದೋಷಯುಕ್ತರು. ಆದರೆ ಸ್ತ್ರೀ ಪುರುಷ ರೂಪಾತ್ಮಕನಾದ ಬೃಹತೀ ನಾಮಕ ವಾಸುದೇವನು ಪೂರ್ವೋಕ್ತ ದೋಷಾದಿಗಳಿಂದ ಅತ್ಯಂತ ದೂರನು. ಇದರಿಂದ **ದೋಷರಹಿತ** ನೆಂದಿದ್ದಾರೆ.

೭೨,೦೦೦ ನಾಡಿಗಳಲ್ಲಿ ಬೃಹತೀ ನಾಮಕ ಶ್ರೀ ವಾಸುದೇವರೂಪೀ ಶ್ರೀ ಪರಮಾತ್ಮನುದೋಷ ವಿರಹಿತನಾಗಿ, ಚತುರ್ಮುಖ ಬ್ರಹ್ಮ (ದ್ರುಹಿಣ) ಆದಿಯಾಗಿ, ಸ್ಥಿತೇಶರು ಮತ್ತು ತದನ್ಯರಾದ ೭೨,೦೦೦ ಸ್ತ್ರೀ ಪುರುಷ ನಾಡ್ಯಭಿಮಾನಿದೇವತೆ

ಗಳ ಸಹಿತ ನಾಡಿಗಳಲ್ಲಿ ಸಂಚರಿಸುತ್ತಾ, ನಾಡಿಗಳ ದ್ವಾರಾ ಸ್ಥೂಲಶರೀರದ ವ್ಯಾಪಾರವನ್ನು ನಡೆಯಿಸುತ್ತಿರುವನು.

## ಪದ್ಯ ೪

### ಮೂಲ

**ನೂರು ವರುಷಕೆ ದಿವಸ ಮೂವ**
**ತ್ತಾರು ಸಾವಿರವಹವು ನಾಡಿ ಶ**
**ರೀರದೊಳಗಿನಿತಿಹವು ಎಂದರಿತೊಂದು ದಿವಸದಲಿ ||**
**ಸೂರಿಗಳ ಸತ್ಕರಿಸಿದವ ಪ್ರತಿ**
**ವಾರದಲಿ ದಂಪತಿಗಳರ್ಚನೆ**
**ತಾ ರಚಿಸಿದವ ಸತ್ಯ ಸಂಶಯವಿಲ್ಲವೆಂದೆಂದು || ೪ ||**

### ಅವತರಣಿಕೆ

ಬ್ರಹ್ಮಜ್ಞಾನಿಗಳನ್ನು ಮನೆಗೆ ಕರೆದು, ಒಬ್ಬರಿಗೆ ಭೋಜನ ಮಾಡಿಸಿದರೆ, ೩೬,೦೦೦ ಸಜ್ಜನರಾದ ದಂಪತಿಗಳಿಗೆ ಭೋಜನ ಮಾಡಿಸಿದ ಮಹಾ ಪುಣ್ಯವು ಲಭಿಸುವುದೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ನೂರು ವರುಷಕೆ** = ಮಾನವರಿಗೆ ಆಯುರ್ಮಾನ ಕಾಲವು ನೂರು ವರ್ಷಗಳೆಂದು ಪರಿಗಣಿಸಿದರೆ, ಆ ನೂರು ವರ್ಷಗಳಿಗಾಗುವ, **ದಿವಸ ಮೂವತ್ತಾರು ಸಾವಿರವಹವು** = ಒಂದು ವರ್ಷಕ್ಕೆ ೩೬೦ ದಿವಸಗಳ ಪ್ರಕಾರ, ನೂರು ವರ್ಷಗಳಿಗೆ ೧೦೦×೩೬೦ = ೩೬,೦೦೦ ಸಂಖ್ಯಾಕವಾದ ದಿವಸಗಳಾಗುವುವು. **ನಾಡಿ ಶರೀರದೊಳಗೆ ಇನಿತಹವು** = ಶರೀರಗತ ಬಲಪಾರ್ಶ್ವದಲ್ಲಿ ೩೬,೦೦೦ ಪುರುಷನಾಡಿ

ಗಳೆನಿಪ ದಿವಾನಾಡಿಗಳಿವೆ. ಎಡಪಾರ್ಶ್ವದಲ್ಲಿ ೩೬,೦೦೦ ಸ್ತ್ರೀ ನಾಡಿಗಳೆನಿಪ ನಿಶಾ ನಾಡಿಗಳಿವೆ, **ಎಂದು ಅರಿತು** = ಈ ಪ್ರಕಾರ, ಜ್ಞಾನಾನುಸಂಧಾನದಿಂದ ತಿಳಿದು, **ಒಂದು ದಿವಸದಲ್ಲಿ** = ಒಂದು ದಿನದಲ್ಲಿ, **ಸೂರಿಗಳ** = ಭಗವದ್ಭಕ್ತರಾದ, ಜ್ಞಾನಿಗಳನ್ನು, **ಸತ್ಕರಿಸಿದವ** = ಭೋಜನಾದಿಗಳಿಂದ ಷೋಡಶೋಪಚಾರ ಮಾಡಿದವನು, **ಪ್ರತಿ ವಾರದಲಿ** = ಪ್ರತಿಸಲವೂ (ವಾರ ಶಬ್ದಕ್ಕೆ, ಆವರ್ತಿ ಅಥವಾ ಸಲ ಎಂದರ್ಥ), **ದಂಪತಿಗಳ** = ೩೬,೦೦೦ ದಂಪತಿಗಳ (ಸ್ತ್ರೀ-ಪುರುಷ ನಾಡಿಗತ ದೇವತೆಗಳು ಮತ್ತು ತದಂತರ್ಗತ ಶ್ರೀ ಲಕ್ಷ್ಮೀನಾರಾಯಣರ ರೂಪ ಗಳು), **ಅರ್ಚನೆ** = ದಂಪತ್ಪೂಜಾರೂಪವಾದ ಕ್ರಿಯೆಯನ್ನು, ತಾ ರಚಿಸಿದವ = ತಾನು ಆಚರಿಸಿದವನು, **ಸತ್ಯ** = ಈ ತತ್ತ್ವಾರ್ಥವು ಅಕ್ಷರಶಃ ಸತ್ಯವಾದುದು, **ಸಂಶಯವಿಲ್ಲವೆಂದೆಂದೂ** = ಈ ವಿಷಯದಲ್ಲಿ ಲವಲೇಶವಾದರೂ ಅನುಮಾನ ವಿಲ್ಲ ॥ ೪ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದೇಹಗತ ದೇವತೆಗಳ ಬ್ರಾಹ್ಮಣರನ್ನಾಗಿ ಮಾಡಿ ಭೋಜನ ಮಾಡಿಸೋ ಕ್ರಮ ಹೇಳುತಾರೆ.

ಮನುಷ್ಯರಿಗೆ ಆಯುರ್ಮಾನ ವರುಷಗಳು ನೂರು. ಈ ನೂರು ವರುಷಕ್ಕೆ ಆಗತಕ್ಕ ದಿನಗಳು ಎಷ್ಟೆಂದರೆ, ಮೂವತ್ತಾರು ಸಾವಿರ ದಿನಗಳು ಆಗೋದಾಗ ತವೆ. ಸ್ತ್ರೀ-ಪುರುಷರಾದ ಮನುಷ್ಯ ಶರೀರದೊಳಗೆ ನಾಡಿಗಳು ಈ ಪೂರ್ವೋಕ್ತ ಪ್ರಕಾರ ಮೂವತ್ತಾರು ಸಾವಿರ ದಂಪತಿ ಸಾಂಕೇತದಿಂದ ಅವೆ. ನೂರುವರುಷಕ್ಕೆ ಮೂವತ್ತಾರು ಸಾವಿರ ಹಗಲು, ಮೂವತ್ತಾರು ಸಾವಿರ ರಾತ್ರಿಗಳು. ಅಂತು ಎಪ್ಪತ್ತೆರಡುಸಾವಿರ ನಾಡಿಗಳು, ಇದೇ ಪ್ರಕಾರ ಮೂವತ್ತಾರುಸಾವಿರ ಹಗಲಭಿ ಮಾನಿ ಪುರುಷ ದೇವತೆಗಳು, ಮೂವತ್ತಾರುಸಾವಿರ ರಾತ್ರಿ ಅಭಿಮಾನಿ ಸ್ತ್ರೀ ದೇವತೆಗಳು. ಅಂತು ಎಪ್ಪತ್ತೆರಡು ಸಾವಿರ ನಾಡಿಗಳು. ಇವು ದಂಪತಿ ಸಾಂಕೇತದಿಂದ ಮೂವತ್ತಾರುಸಾವಿರ ದಿನಗಳಾಗಿ ನೂರುವರುಷಕ್ಕೆ ಮೂವತ್ತಾರು

ಸಾವಿರ ದಿನಗಳು ಸರಿ ಆಗುತ್ತವೆ. ಮನುಷ್ಯರ ವ್ಯತಿರಿಕ್ತ ಅನ್ಯಜೀವರಲ್ಲಿ ಇಷ್ಟು ನಾಡಿಗಳು ಇಲ್ಲ. ತಾರತಮ್ಯಾನುಸಾರ ಇರುತ್ತವೆ ಅಂತ ಚಂದಾಗಿ ಅರಿತವನಾಗಿ, ಒಂದಾನೊಂದು ದಿವಸದಲ್ಲಿ, ಭಗವದ್ಭಕ್ತರಾದ ಜ್ಞಾನಿಗಳ ಭೋಜನಾದಿಗಳಿಂದ ಉಪಚಾರ ಮಾಡಿದವ (ಸೂರಿಶಬ್ದದಿಂದ ಭಗವದ್ದ್ವೇಷಿಗಳಿಗೆ ಅನ್ನದಾನಾದಿ ಉಪಚಾರ ಮಾಡಕೂಡದೆಂತ ತಾತ್ಪರ್ಯ) ಈ ಪ್ರಕಾರ ಅನುಸಂಧಾನದಿಂದ ಉಪಚಾರಾದಿಗಳು ಮಾಡಿದವ, ಮೂವತ್ತಾರು ಸಾವಿರ ದಂಪತಿಗಳ ಭೋಜನ ಮಾಡಿಸಿದವನಾಗಿ ಮೂವತ್ತಾರು ಸಾವಿರ ಆಯುರ್ಮಾನ ದಿನಗಳೊಳಗೆ ಪ್ರತಿದಿನದಲ್ಲೂ ಒಂದೊಂದು ದಂಪತಿಗಳನ್ನು ಒಂದೊಂದು ದಿನದಲ್ಲಿ ಭೋಜನದಿಂದ ಅರ್ಚನೆಯನ್ನು ಅಧಿಕಾರಿಯಾದವ ತಾನು ಮಾಡಿದವನಾಗುತ್ತಾನೆ ಎಂತ ತಾತ್ಪರ್ಯ.

ಅಲ್ಪಾಯುಷ್ಯನಾಗಿ ಮೃತನಾದಕಾಲಕ್ಕೂ, ನೂರು ವರುಷ ಬದುಕಿ ಭಗವತ್ಸೇವಾ ಮಾಡಿದ ಫಲವನ್ನು ಹೊಂದುತ್ತಾನೆ. ಅನುಸಂಧಾನದಿಂದ ಪ್ರತಿದಿನವೂ ಒಬ್ಬ ಸೂರಿಯನ್ನಾಗಲೀ, ಅನೇಕಮಂದಿ ಸೂರಿಗಳನ್ನಾಗಲೀ ಉಪಚರಿಸಿದವ, ಅಪಾರ ಬ್ರಾಹ್ಮಣರ ಸತ್ಕರಿಸಿದವನಾಗಿ ಅಂಥ ಫಲವನ್ನು ಹೊಂದುತ್ತಾನೆ. ಈ ಪ್ರಕಾರ ಅನುಸಂಧಾನದಿಂದ ತಾನು ಭೋಜನ ಮಾಡೋಣ, ತನ್ನ ದಾರಾ-ಪುತ್ರಾದಿಗಳಿಗೆ ಭೋಜನ ಮಾಡಿಸೋಣ ದಾವದದೆ, ಇದು ಯಾವತ್ತೂ ಭಗವದ್ಪೂಜಾನೇ ಆಗತದೆ. ನಾಡೀ ಅಂತರ್ಗತ ಸ್ತ್ರೀ-ಪುರುಷ ದೇವತೆಗಳು ಭೋಜನ ಮಾಡೋಣ ಎಂಬುದು ತಾನು ಭೋಜನ ಮಾಡೋದ್ರವ್ಯ ದೇಹಕ್ಕೆ ಉಪಚಯು. ತದ್ಗತ ದೇವತೆಗಳು ಭೋಜನ ಮಾಡತಕ್ಕದ್ದು, ತದಾಕಾರದಿಂದ ಪದಾರ್ಥದಲ್ಲಿ ಇರೋದಾಗಿ ಅದೆ. ಅದದು ಅವರವರು ಭೋಜನ ಮಾಡತಾರೆಂದು ಅನುಸಂಧಾನ ಮಾಡಬೇಕು. ಈ ಆಡಿದ ಮಾತು ಅನೃತವಲ್ಲ ಎಂತಲೂ, ನಿಜವಾದದ್ದೂ ಎಂದೂ, ಎಂದೆಂದಿಗೂ ಇಂಥಾ ಫಲ ಅಧಿಕಾರಿ ಹೊಂದತಾನೆಂಬೋದರಲ್ಲಿ ಸಂಶಯವಿಲ್ಲ ಎಂತ ಹೇಳತಾರೆ. ಇದರ ವಿವರ ಐತರೇಯ ಭಾಷ್ಯದಲ್ಲಿ ಅದೆ. ॥ ೪ ॥

**೨. ಭಾವಪ್ರಕಾಶಿಕೆ**

ಮನುಷ್ಯಮಾನದಿಂದ ಮನುಷ್ಯರಿಗೆ ೧೦೦ ವರ್ಷಗಳು ಆಯುಷ್ಯವು. ಈ ನೂರು ವರ್ಷಗಳಿಗೆ ೩೬ ಸಹಸ್ರ ದಿವಸಗಳು. ಅಂದರೆ, ೩೬ ಸಹಸ್ರ ಹಗಲು

ಮತ್ತು ೩೬ ಸಹಸ್ರ ರಾತ್ರಿಗಳೆಂದರ್ಥ, ದಿವಸವೆಂದರೆ, ಹಗಲೂ ರಾತ್ರಿಯೂ ಸೇರಿದುದಕ್ಕೆ ಹೆಸರು. ೩೬ ಸಹಸ್ರ ದಿವಸಗಳೆಂದು ಹೇಳಿದುದರಿಂದ, ರಾತ್ರಿ ಹಗಲು ಸೇರಿ ಒಂದು ಸಂಖ್ಯಾವನ್ನು ಇಲ್ಲಿ ಹೇಳಿರುವರು. ಮೇಲಿನ ಪದ್ಯದಲ್ಲಿ ರಾತ್ರಿ ಹಗಲು ಬೇರೆ ಬೇರೆ ಹೇಳಿದ್ದರಿಂದ ೭೨ ಸಹಸ್ರವೆಂದು ಹೇಳಿದರು. ಬೃಹತೀ ಛಂದಸ್ಸಿಗೆ ಅಕ್ಷರಗಳು ೩೬. ಅವುಗಳಿಗೆ ಪ್ರತಿಪಾದ್ಯನೇ ೩೬,೦೦೦ ದಿವಸಗಳಿಗೆ ಪ್ರತಿಪಾದ್ಯನು. ಅಂತಹ ಸ್ವಾಮಿಯೇ ಹಗಲು ೩೬ ಸಹಸ್ರ, ರಾತ್ರಿ ೩೬ ಸಹಸ್ರ ಸಂಖ್ಯಾವುಳ್ಳ ಸ್ತ್ರೀ ಪುರುಷ ನಾಡಿಗಳಲ್ಲಿರುವನೆಂದು ಭಾವಿಸಿ, ಒಂದು ದಿವಸದಲ್ಲಿ ಜ್ಞಾನಿಗಳನ್ನು ಕರೆದು ಪೂಜಿಸಿದರೆ, ೧೦೦ ವರ್ಷಗಳು ಹಗಲು ರಾತ್ರಿ ಪೂಜಿಸಿದರೆ ಯಾವ ಫಲವೋ, ಅಂತಹ ಫಲಪ್ರಾಪ್ತಿಯಾಗುವುದು. ಈ ವಿಷಯದಲ್ಲಿ ಸಂಶಯಪಡಬೇಕಾದುದು ಇಲ್ಲ. ॥ ೪ ॥

**೩. ಭಾವದರ್ಪಣ ಟೀಕಾ**

ನೂರು ವರ್ಷ–ಇತಿ ॥

**ಉಕ್ತಂಚ ಐತರೇಯ ಭಾಷ್ಯೇ**

**ಶತಾಬ್ದಾನಾಮಹೋಯತ್ರ ದೈವತಾನ್ಯುತ್ತಮಾನಿ ಚ ।**
**ಬೃಹತೀ ಸಹ್ರವರ್ಣಾನಾಮಪಿ ಧ್ಯಾತ್ವಾಖಿಲಾನ್ಯಪಿ ॥**
**ಶತವರ್ಷ ಹರಿಧ್ಯಾನ ಫಲಮಾಪ್ನೋತಿ ಪೂರುಷ ॥ –ಇತಿ ॥೪॥**

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)**

ನೂರು–ಇತಿ ॥ ತಾವಂತಿ ಶತಸಂವತ್ಸರಸ್ಯ ಅಹ್ನಾಂ ಸಹಸ್ರಾಣಿ ಭವಂತಿ–ಇತಿ ಶ್ರುತೇಃ ॥ ಅನಿತು–ಅಷ್ಟು ॥ ೪ ॥

**ಕನ್ನಡಾರ್ಥ**

ಪುರುಷಾಯುಷ್ಯದ ಒಂದುನೂರು ವರ್ಷಗಳಲ್ಲಿ ೩೬,೦೦೦ ಹಗಲುಗಳು ಹಾಗೂ ೩೬,೦೦೦ ರಾತ್ರಿಗಳೂ ಆಗುವುವು–ಎಂದು ಹೇಳುವ **ಶ್ರುತಿಯು** ಈ ವಿಷಯದಲ್ಲಿ ಪ್ರಮಾಣವಾಗಿರುತ್ತದೆ. ಅನಿತು–ಎಂದರೆ, ಅಷ್ಟು ಎಂದರ್ಥ. ॥ ೪ ॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ಈ ಎಪ್ಪತ್ತೆರಡು ಸಾವಿರ ನಾಡಿಗತ ದೇವರ ಸ್ತ್ರೀ ಪುರುಷ ರೂಪಸ್ಮರಣೆ, ಬ್ರಾಹ್ಮಣ ಭೋಜನ ಕಾಲದಲ್ಲಿ ಇರಬೇಕು. ಅದರಿಂದ ಅನಂತ ಫಲವೆಂದು ತಿಳಿಸುತ್ತಾರೆ, ನೂರುವರ್ಷವೆಂದು. ಪುರುಷಾಯುಸ್ಸೆಂಬ ನೂರು ವರ್ಷಕ್ಕೆ ದಿವಸ ಮುವತ್ತಾರು ಸಾವಿರಗಳಾಗುವವು. ಶರೀರದಲ್ಲಿ ನಾಡಿಗಳು ಎಡಭಾಗದಲ್ಲಿ ದೇವರ ಸ್ತ್ರೀರೂಪ ಮುವತ್ತಾರು ಸಾವಿರ, ಬಲಭಾಗದ ಮುವತ್ತಾರು ಸಾವಿರ ನಾಡಿಗಳಲ್ಲಿ ದೇವರಮುವತ್ತಾರು ಸಾವಿರ ಪುರುಷ ರೂಪಗಳಿವೆ ಎಂದೂ ತಿಳಿದು, ಒಂದು ದಿವಸದಲ್ಲಿ ಸೂರಿಗಳೆಂಬ ಜ್ಞಾನಿ ಬ್ರಾಹ್ಮಣರನ್ನು ಭೋಜನಾದಿಗಳಿಂದ ಆರಾಧಿಸಿದ ಸಜ್ಜನನು ನೂರುವರ್ಷದಲ್ಲೂ ಪ್ರತಿದಿನದಲ್ಲಿ ಬ್ರಾಹ್ಮಣ ದಂಪತಿ ಭೋಜನಮಾಡಿಸಿದ ಪುಣ್ಯಹೊಂದುವನೆಂಬ ವಿಷಯದಲ್ಲಿ ಸಂದೇಹವಿಲ್ಲ. ಇದು ನಿಶ್ಚಯ ॥ ೪ ॥

### ಸರ್ವವ್ಯಾಖ್ಯಾನುಸಾರ ಸಂಗ್ರಹ

ಹಿಂದಿನ ಪದ್ಯದಲ್ಲಿ ೩೬,೦೦೦ ದಿವಾಭಿಮಾನಿಗಳು, ಮತ್ತು ೩೬,೦೦೦ ನಾಡಿಗತ ನಿಶಾಭಿಮಾನಿ ದೇವತೆಗಳ ವಿಚಾರ ತಿಳಿಸಿ, ಮಾನವನ ಆಯುಃ ಪ್ರಮಾಣವಾದ ೧೦೦ ವರ್ಷಗಳಲ್ಲಿ, ನಾಡೀಗತ ಭಗವದ್ರೂಪ್ರೋಪಾಸನೆಯ ಫಲ ವಿಶೇಷವನ್ನು ತಿಳಿಸುತ್ತಾರೆ.

ಸಾಮಾನ್ಯವಾಗಿ ಮನುಷ್ಯನ ಆಯುಸ್ಸಿನ ಕಾಲಮಾನವು ನೂರು ವರ್ಷಗಳೆಂದು ಪರಿಗಣಿಸುತ್ತೇವೆ.

ಒಂದು ವರ್ಷದ ಕಾಲಾವಧಿಯಲ್ಲಿ ೩೬೦ ದಿವಸಗಳಾಗುವುವು.

ಪ್ರತಿ ದಿವಸಕ್ಕೆ ಒಂದು ಹಗಲು ಮತ್ತು ಒಂದು ರಾತ್ರಿ ಇದರಂತೆ ಒಂದು ವರ್ಷಾವಧಿಯಲ್ಲಿ ಹಗಲುಗಳ ಸಂಖ್ಯೆ ೩೬೦ ಮತ್ತು ರ್‍ರಾತ್ರಿಗಳ ಸಂಖ್ಯೆ ೩೬೦.

| | |
|---|---|
| ನೂರು ವರ್ಷಗಳಲ್ಲಿ | ಹಗಲುಗಳ ಸಂಖ್ಯೆ = ೩೬೦ x ೧೦೦ = ೩೬,೦೦೦ |
| ಮತ್ತು | ರಾತ್ರಿಗಳ ಸಂಖ್ಯೆ = ೩೬೦ x ೧೦೦ = ೩೬,೦೦೦ |
| ಒಟ್ಟು | ೭೨,೦೦೦ |

ಇದೇ ಮಾನವನ ಸ್ಥೂಲ ಶರೀರವಿಲ್ಲಿ ಆದ್ಯಂತವಾಗಿ ಹಬ್ಬಿ ಹರಡಿರುವ ನಾಡಿಗಳ ಒಟ್ಟು ಸಂಖ್ಯೆಯಾಗಿದೆ.

ಈ ಅನುಸಂಧಾನದಿಂದ ಪ್ರತಿ ದಿವಸವೂ, ನಾಡೀಗತ ಭಗವದ್ರೂಪೋಪಾಸನೆ ಮಾಡುತ್ತಿರುವ ಬ್ರಹ್ಮಜ್ಞಾನಿಒಬ್ಬನನ್ನು ಮನೆಗೆ ಕರೆದು, ಅವನಿಗೆ ಷೋಡಷೋಪಚಾರ ಕ್ರಮದಿಂದ ಪೂಜೆ ಸಲ್ಲಿಸಿ, ಭೋಜನ ಮಾಡಿಸಿದರೆ, ಏಕಕಾಲದಲ್ಲಿ ೩೬,೦೦೦ ದಂಪತಿಗಳಿಗೆ ಭೋಜನ ಮಾಡಿಸಿದ ಮಹಾ ಪುಣ್ಯ ಫಲವು ಲಭಿಸುವುದು. ಸ್ಥೂಲದೇಹಗತ ಬಲಪಾರ್ಶ್ವದಲ್ಲಿ ೩೬,೦೦೦ ದಿವಾಭಿಮಾನಿ ದೇವತಾಂಗರ್ಗತ ಶ್ರೀಪರಮ್ಮಾನ ೩೬,೦೦೦ ಪುರುಷ ರೂಪಗಳು. ಅಂತೆಯೇ, ಸ್ಥೂಲ ಶರೀರಗತ ಎಡಪಾರ್ಶ್ವದಲ್ಲಿರುವ ೩೬,೦೦೦ ನಿಶಾಭಿಮಾನಿ ದೇವತಾಂತರ್ಗತ ಶ್ರೀವಾಸುದೇವನ ೩೬,೦೦೦ ಸ್ತ್ರೀರೂಪಗಳು, ಹೀಗೆ ಅರ್ಧನಾರೀವೇಷಧರನಾದ ಬೃಹತೀನಾಮ ವಾಸುದೇವನು ೩೬,೦೦೦ ಪುರುಷ ರೂಪಗಳಿಂದಲೂ; ೩೬,೦೦೦ ಸ್ತ್ರೀರೂಪಗಳಿಂದಲೂ ವಿದ್ಯಮಾನನಾಗಿರುವುದ, ರಿಂದ ೩೬,೦೦೦ ದಂಪತ್ಪೂಜೆ ಎಂದೆನಿಸುವುದು. ಇದು ಉಪಾಸನೆಯ ರಹಸ್ಯಾರ್ಥ. ಈ ಗೂಢವಾದ ಪ್ರಮೇಯುವು ನಿತ್ಯಸತ್ಯ. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲವೆಂದು, ದಾಸರಾಯರು ತಿಳಿಸುತ್ತಾರೆ. ॥ ೪ ॥

## ಪದ್ಯ ೫

**ಮೂಲ**

**ಚತುರವಿಂಶತಿ ತತ್ವಗಳು ತ ।**
**ತ್ಪತಿಗಳೆನಿಸುವ ಬ್ರಹ್ಮಮುಖ ದೇ ।**
**ವತೆಗಳನುದಿನ ಪ್ರತಿಪ್ರತಿ ನಾಡಿಗಳೊಳಿರುತಿದ್ದು ॥**
**ಚತುರದಶ ಲೋಕದೊಳು ಜೀವ ।**
**ಪ್ರತತಿಗಳ ಸಂರಕ್ಷಿಸುವ ಶಾ ।**
**ಶ್ವತನ ತತ್ತತ್ ಸ್ಥಾನದಲಿ ನೋಡುತಲೆ ನೋದಿಪರು ॥ ೫ ॥**

**ಅವತರಣಿಕೆ**

ತತ್ತ್ವಾಭಿಮಾನಿಗಳಾದ ಬ್ರಹ್ಮಾದಿ ದೇವತೆಗಳು ಪ್ರತಿನಾಡಿಯಲ್ಲಿದ್ದು, ಅವರ ಬಿಂಬರೂಪೀ ಶ್ರೀ ಪರಮಾತ್ಮನು ೧೪ ಲೋಕದಲ್ಲಿರುವ ಜೀವವರ್ಗವನ್ನು ಸಂರಕ್ಷಿಸುತ್ತಿರುವನು. ಆ ಭಗವದ್ರೂಪಗಳನ್ನು ನೋಡುತ್ತಾ, ಜ್ಞಾನಿಗಳು ಸಂತೋಷಪಡುತ್ತಿರುವರು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಅನುದಿನ** = ಪ್ರತಿದಿನದಲ್ಲಿಯೂ, **ಪ್ರತಿ ಪ್ರತಿನಾಡಿಗಳೊಳು** = ದೇಹಾದ್ಯಂತ ವ್ಯಾಪಿಸಿರುವ ೭೨,೦೦೦ ನಾಡಿಗಳಲ್ಲಿ, **ಚತುರ್ವಿಶಂತತಿ ತತ್ವಗಳು** = ೨೪ ತತ್ವಗಳು ವಿದ್ಯಮಾನವಾಗಿವೆ. **ತತ್ಪತಿಗಳೆನಿಸುವ** = ಆ ತತ್ತ್ವಗಳಲ್ಲಿ ತತ್ತ್ವಾಭಿಮಾನಿಗಳೆಂದೆನಿಸಿದ, **ಬ್ರಹ್ಮಮುಖ** = ಚತುರ್ಮುಖ ಬ್ರಹ್ಮದೇವರೇ ಮೊದಲಾಗಿ **ದೇವತೆಗಳು** = ತತ್ವಾಭಿಮಾನಿ ದೇವತೆಗಳು ನಾಡಿಗಳಲ್ಲಿ ಸ್ಥಿತರಾಗಿದ್ದಾರೆ. **ಚತುರ ದಶ ಲೋಕದೊಳು** = ಪಾತಾಳಲೋಕಾದಿ ಸತ್ಯಲೋಕ ಪರ್ಯಂತ ಇರುವ ೧೪ ಲೋಕಗಳಲ್ಲಿ, (ಅಂತೆಯೇ ಪಿಂಡಾಂಡ ರೂಪವಾದ ಈ ಸ್ಥೂಲ ಶರೀರದಲ್ಲಿ) **ಜೀವ ಪ್ರತಿತಿಗಳ** = ದೇವಮಾನವಾದಿ ಜೀವವರ್ಗವನ್ನು, **ಸಂರಕ್ಷಿಸುವ** = ಕಾಪಾಡುತ್ತಿರುವ (ದೇಹರಕ್ಷಣೆಯ ದ್ವಾರಾ), **ಶಾಶ್ವತನ** = ಅನಾದಿನಿತ್ಯನಾದ, ಚತುರ್ವಿಧನಾಶ ರಹಿತನಾದ, ಶಶ್ವದೇಕಪ್ರಕಾರನಾದ ಶ್ರೀ ಪರಮಾತ್ಮನನ್ನು, **ತತ್ತತ್ ಸ್ಥಾನದಲಿ** = ಆಯಾಯಾ ನಾಡೀಗತ, ತತ್ತ್ವೇಶರ ಅಂತರ್ಗತನಾಗಿ ವಿದ್ಯಾಮಾನನಾಗಿರುವ ನಾಡೀಗತ ಭಗವದ್ರೂಪಗಳನ್ನು, **ನೋಡುತಲೆ** = ಧ್ಯಾನ ದ್ವಾರಾ ಪ್ರತ್ಯಕ್ಷೀಕರಿಸಿಕೊಕೊಳ್ಳುತ್ತಾ, **ಮೋದಿಪರು** = ಅಧಿಕಾರಿಗಳಾದ ಬ್ರಹ್ಮಜ್ಞಾನಿಗಳು ಸಂತೋಷಪಡುತ್ತಿರುವರು. ॥ ೫ ॥

## ವ್ಯಾಖ್ಯಾನಗಳು

**೫. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ**

ಈ ಪ್ರಕಾರ ಅನುಸಂಧಾನಯುಕ್ತನ ದೇಹಾಂತರ್ಗತ ದೇವತೆಗಳು, ಪರಮಾತ್ಮ ಸುಜ್ಞಾನ ಕೊಟ್ಟು ರಕ್ಷಿಸುತ್ತಾರೆಂತ ಹೇಳತಾರೆ.

ಪ್ರತಿದಿನದಲ್ಲೂ ಎಪ್ಪತ್ತೆರಡು ಸಾವಿರ ನಾಡಿಗಳೊಳಗೆ ಇಪ್ಪತ್ನಾಲ್ಕು ತತ್ತ್ವಗಳು ಇರೋದಾದಿ ಅವೆ. ಇದರಲ್ಲಿ ಆಯಾ ಒಂದೊಂದು ತತ್ತ್ವಗಳಿಗೆ ಅಭಿಮಾನಿಗಳು ಎಂತ ನಿಸತಕ್ಕ ಬ್ರಹ್ಮ-ವಾಯುಗಳೇ ಮೊದಲಾದ ತತ್ತ್ವಾಭಿಮಾನಿ ದೇವತೆಗಳು ಇರೋವರಾಗಿದ್ದು, ಪಾತಾಳಾದಿ ಸತ್ಯಾಂತ ಹದಿನಾಲ್ಕು ಲೋಕದೊಳುಳ್ಳ ದೇವ ಮಾನುಷಾದಿ ಜೀವಸಮೂಹಗಳು ಎಂದರೆ, ಸ್ಥಾವರರಲ್ಲಿ ಸ್ಥೋತ್ತಮರು ಇಪತ್ನಾಲ್ಕು ತತ್ತ್ವಗಳಿಗೆ ನಿಯಾಮಕರಾಗಿರುತ್ತಾರೆ. ಈ ಪ್ರಕಾರ ತೃಣಾದಿ ಬ್ರಹ್ಮಾಂತ ಶರೀರದಲ್ಲಿ ಚತುರ್ವಿಂಶತಿತತ್ತ್ವಗಳು, ತತ್ತ್ವನಿಯಾಮಕ ದೇವತೆಗಳು ಇರೋವರಾಗಿದ್ದಾರೆ. ಮಾನುಷ ವ್ಯತಿರಿಕ್ತ ಅನ್ಯಜೀವರಲ್ಲಿ ನಾಡಿಗಳು ನ್ಯೂನಾಧಿಕಗಳೇ ಹೊರತು, ಚತುರ್ವಿಂಶತಿತತ್ತ್ವಗಳು ನ್ಯೂನಾಧಿಕವಲ್ಲ, ಸಮಾನಗಳೇ. ನ್ಯೂನಾಧಿಕಗಳಾದಿ ಇರತಕ್ಕ ಪ್ರತಿ ನಾಡಿಗಳ ಒಳಗೆ, ದೇಹದ ಒಳಗೆ ಚತುರ್ವಿಂಶತಿತತ್ತ್ವಗಳು, ತತ್ತ್ವದೇವತೆಗಳು ಇರೋವರಾಗಿದ್ದಾರೆ. ಇದರಲ್ಲಿ ವಾಸುದೇವ ಇದು ಜೀವಸಮೂಹಗಳ, ಅವರವರ ದೇಹಗಳಲ್ಲಿ ಜ್ಞಾನಭಕ್ತ್ಯಾದಿಗಳ ಆಯಾ ದೇವತೆಗಳ ದ್ವಾರಾ ಕೊಟ್ಟು ಕಾಪಾಡತಾನೆ. ಅನಾದಿನಿತ್ಯನಾದ ಈ ಪರಮಾತ್ಮನ ಅಧಿಕಾರಿ ಆಯಾ ಪೂರ್ವೋಕ್ತಗಳಿಂದ ದೇಹನಾಡೀಸ್ಥಾನದಲ್ಲಿ, ಅನುಸಂಧಾನದಿಂದ ಚಿಂತನಾರೂಪದಿಂದ, ಸ್ಮರಣರೂಪದಿಂದ ನೋಡತಾಲೇ, ಪರಮಾತ್ಮನ ವ್ಯಾಪಾರಗಳನ್ನು ಅಧಿಕಾರಿಗಳು ಸ್ಮರಿಸುತ ಸಂತೋಷ ಐದೋವರಾಗತಾರೆ.

**ವಿಶೇಷಾರ್ಥ :–** ಭಗವದ್ದ್ವೇಷಿಗಳಿಗೆ ಅನ್ನೋದಕಾದಿಗಳು ಏಕೆ ಕೊಡ ಕೂಡದೆಂದರೆ, ಆಕಳಿಗೆ ಹುಲ್ಲು ಹಾಕೋಣದರಿಂದ ಹಾಲು ಕೊಡತದೆ. ಆ ಹಾಲು ಸರ್ಪಕ್ಕೆ ಎರೆದರೆ ವಿಷ ಕೊಡತದೆ, ಹ್ಯಾಂಗೋ, ತದ್ವತ್ ಸರ್ಪಸದೃಶರಾದ ಭಗವದ್ದ್ವೇಷಿಗಳಿಗೆ ಅನ್ನೋದಕಾದಿಗಳು ಕೊಟ್ಟರೆ ಪಾಪವೇ ಆಗತದೆ. ಈ ಪ್ರಕಾರ ಅನ್ನೋದಕಾದಿಗಳು ಕೊಡಬೇಕಾದರೆ ಯೋಗ್ಯತಾ ತಾರತಮ್ಯಾನುಸಾರ ಕೊಡೋವನಾಗಬೇಕೆಂದು ತಾತ್ಪರ್ಯ ॥ ೫ ॥

**೨. ಭಾವಪ್ರಕಾಶಿಕೆ**

೨೪ ತತ್ತ್ವಗಳು, ತತ್ತ್ವಾಭಿಮಾನಿಗಳಾದ ಬ್ರಹ್ಮಾದಿ ದೇವತೆಗಳು ಈ ದೇಹದೊಳಗಿರುವ ೭೨ ಸಹಸ್ರನಾಡಿಗಳ ಪ್ರತಿಯೊಂದು ನಾಡಿಯಲ್ಲಿಯೂ ವಾಸಾವ

ಗಿದ್ದು, ಆ ನಾಡಿಗಳಲ್ಲಿರುವ ಶ್ರೀಭಗವದ್ರೂಪಗಳನ್ನು ನೋಡುತ್ತಾ ಸಂತೋಷ ಪಡುತ್ತಿರುವರು. ॥ ೫ ॥

## ೩. ಭಾವದರ್ಪಣ

ಪ್ರತಿ ಪ್ರತಿ ನಾಡಿಗಳಲ್ಲಿ ಇಪ್ಪತ್ತನಾಲ್ಕು ತತ್ವಾಧಿಪರು ಶ್ರೀಹರಿಧ್ಯಾನ ಮಾಡುತ್ತಾ ವಾಸವಾಗಿದ್ದಾರೆಂದು ಹೇಳುತ್ತಾರೆ– ಚತುರವಿಂಶತೀತಿ ॥ ೫ ॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

ಚತುರ–ಇತಿ ॥ ಶಾಶ್ವತಃ ॥ ಓಂ-ವೃತ್ರೇಷು ವಜ್ರಿಣಂ ಸನೋವೃಷನ್ನಮುಂ ಚರುಂ ಸತ್ರಾದಾವನ್ನಪಾ ವೃಧಿ ॥ ಅಸ್ಮಭ್ಯಮಪ್ರತಿಷ್ಕುತಃ ತುಂಜೇ ತುಂಜೇ ಯ ಉತ್ತರೇ-ಓಂ ॥ ಕಾಲತ್ರಯೇಽಪಿ ಏಕ ಪ್ರಕಾರೇಣ ವರ್ತತೇ ಕಾಲಪರಿಣಾಮ ರಹಿತಃ ॥ ೫ ॥

### ಕನ್ನಡಾರ್ಥ

ನಾಡಿಗಳಲ್ಲಿ ತತ್ವಪತಿಗಳಿರುವರು. ಅವರನ್ನೂ ಮತ್ತು ಅವರಲ್ಲಿ ನಿಯಾಮಕರಾದ ವಾಯುದೇವರು, ಹಾಗೂ ಪರಮಾತ್ಮನನ್ನೂ ಚಿಂತಿಸಬೇಕೆಂದು ಈ ಪದ್ಯದಿಂದ ತಿಳಿಸುತ್ತಾರೆ. ಶಾಶ್ವತ ಎಂಬುದು ವಿಷ್ಣುಸಹಸ್ರನಾಮಾಂತರ್ಗತವಾದುದು. ತ್ರಿಕಾಲಗಳಲ್ಲಿಯೂ ಒಂದೇ ರೀತಿಯಾಗಿ ಇರುವವನು. ಅಂದರೆ, ಕಾಲನಿಮಿತ್ತಕವಾಗಿ ಆಗುವ ಯಾವುದೇ ವಿಕಾರ ಪರಿಣಾಮಗಳಿಲ್ಲದವನು ಎಂದು **ಬೃಹತೀ** ಮಂತ್ರಾನುಗುಣವಾದ ಈ ನಾಮದ ಅರ್ಥ ॥ ೫ ॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಈ ನಾಡಿಗಳಲ್ಲಿ ತತ್ತ್ವೇಶರನ್ನು ಚಿಂತಿಸಬೇಕೆಂದು ತಿಳಿಸುತ್ತಾರೆ. ಮನ ಆದಿ ಹನ್ನೊಂದು ಇಂದ್ರಿಯಗಳು, ಪಂಚಭೂತ, ಶಬ್ದಾದಿ ಪಂಚತನ್ಮಾತ್ರ, ಮಹತ್ತತ್ತ್ವ, ಅಹಂಕಾರತತ್ತ್ವ, ಮನಸ್ಸು ಸೇರಿ ಇಪ್ಪತ್ತನಾಲ್ಕು ತತ್ತ್ವಗಳಲ್ಲಿ, ತದಭಿಮಾನಿ ಬ್ರಹ್ಮ ಮೊದಲಾದ ದೇವತೆಗಳು ಪ್ರತಿ ಪ್ರತಿ ನಾಡಿಗಳಲ್ಲಿದ್ದು ಹದಿನಾಲ್ಕು

ಲೋಕಗಳಲ್ಲೂ ಜೀವಸಮೂಹರಕ್ಷಕನಾದ ಶಾಶ್ವತರೂಪ ಶ್ರೀಹರಿಯನ್ನು ಆಯಾಯ ಸ್ಥಾನದಲ್ಲಿ ನೋಡುತ್ತಾ ಸುಖಿಸುವರು. ॥ ೫ ॥

## ಸರ್ವವ್ಯಾಖ್ಯಾನುಸಾರ ಸಂಗ್ರಹ

ನಾಡ್ಯಂತರ್ಗತ ಚತುರ್ವಿಂಶತಿ ತತ್ವಾಭಿಮಾನಿಗಳ ವಿಷಯ ತಿಳಿಸುತ್ತಾರೆ.

ಗುಣಗಳ ಮಿಶ್ರಣದಿಂದ ಪರಿಣಾಮರೂಪವಾಗಿರುವ ತತ್ತ್ವಗಳ ಸಂಖ್ಯೆ ೨೪. ಅವ್ಯಕ್ತ ತತ್ತ್ವಾದಿ ಪೃಥಿವೀ ತತ್ತ್ವ ಪರ್ಯಂತ ಸೃಷ್ಟವಾಗಿರುವ ಈ ತತ್ತ್ವಗಳಿಗೆ **ಚತುರವಿಂಶತಿತತ್ತ್ವಗಳೆಂದು** ಹೆಸರು.

ಜಡವಾದ ಈ ತತ್ತ್ವಗಳನ್ನು ಕ್ರಿಯಾತ್ಮಕವಾಗಿ ಮಾಡಲು ಶ್ರೀ ಪರಮಾತ್ಮನು ಅಭಿಮಾನಿ ದೇವತೆಗಳನ್ನು ಸೃಷ್ಟಿಸಿ, ಅವರಿಗೆ ಪರಮಮುಖ್ಯ ವೃತ್ತಿಯಿಂದ ನಿಯಾಮಕನಾಗಿದ್ದಾನೆ. ಈ ದೇವತಾವರ್ಗವನ್ನು **ತತ್ವಾಭಿಮಾನಿದೇವತೆಗಳೆಂದು** ಕರೆಯುತ್ತೇವೆ. ಇವರನ್ನೇ **ತತ್ಪತಿಗಳು** ಎಂದಿದ್ದಾರೆ ದಾಸವರೇಣ್ಯರು. ಇವರು ಶ್ರೀವಾಯುದೇವರ ನಿಯಂತ್ರಣದಲ್ಲಿ ತತ್ತ್ವಕಾರ್ಯ ನಡೆಯಿಸುವರು. ಬಿಂಬನಾದ ಶ್ರೀಹರಿಯು ಪ್ರೇರಣೆ ಶ್ರೀ ವಾಯುದೇವರಿಗೆ. ತತ್ತ್ವೇಶರು ಶ್ರೀ ವಾಯುದೇವರಿಂದ ಪ್ರೇರಿತರು. ತತ್ತ್ವಕಾರ್ಯ ತತ್ತ್ವಾಭಿಮಾನಿ ದೇವತೆಗಳ ದ್ವಾರಾ ನಡೆದು, ಈ ಸ್ಥೂಲಶರೀರದಲ್ಲಿ ಪ್ರಕಾಶತೋವ್ಯಾಪ್ತನಾಗಿರುವ ಜೀವನ ಅನುಭವಕ್ಕೆ ಬರುವುದು. ಇದೇ ಶ್ರೀಹರಿಯ ಬಿಂಬಕ್ರಿಯಾರೂಪವಾದ ಕ್ರಿಯಾಸರಣಿ.

ಮಾನವನ ಈ ಸ್ಥೂಲಶರೀರವು ಬ್ರಹ್ಮಾಂಡದ ಪಿಂಡಾಂಡರೂಪವಾಗಿದೆ. ಇಂತಹ ಸ್ಥೂಲಶರೀರಗತ ೭೨,೦೦೦ ನಾಡಿಗಳಲ್ಲಿ ಪ್ರತಿ ಪ್ರತಿ ನಾಡಿಯಲ್ಲಿಯೂ ೨೪ ತತ್ತ್ವಗಳು ಹಾಗೂ ತತ್ತ್ವಾಭಿಮಾನಿ ದೇವತೆಗಳು ವಿದ್ಯಮಾನರಾಗಿದ್ದು, ಪ್ರತಿನಿತ್ಯದಲ್ಲಿಯೂ, ನಾಡ್ಯಂತರ್ಗತ ಬೃಹತೀ ನಾಮಕ ಶ್ರೀ ವಾಸುದೇವರೂಪೀ ಶ್ರೀಹರಿಯನ್ನು ಉಪಾಸಿಸುತ್ತಾರೆ.

ಬ್ರಹ್ಮಾಂಡವು ಪಾತಾಳಾದಿ ಸತ್ಯಲೋಕ ಪರ್ಯಂತ ಹದಿನಾಲ್ಕು ಲೋಕಗಳನ್ನು ಹೊಂದಿದೆ. ಪದ್ಮನಾಭರೂಪೀ ಶ್ರೀಪರಮಾತ್ಮನ ನಾಭೀಕಮಲದಿಂದ

ಉತ್ಪನ್ನರಾದ ಹಿರಣ್ಯಗರ್ಭ ನಾಮಕ ಚತುರ್ಮುಖಬ್ರಹ್ಮದೇವರ ದ್ವಾರಾ, ಚತುರ್ದಶ ಭುವನಾತ್ಮಕವಾದ ಈ ಬ್ರಹ್ಮಾಂಡದ ಉತ್ಪತ್ತಿ. ಇಂತಹ ೧೪ ಲೋಕಗಳಿಂದ ಘಟಕವಾದ ಬ್ರಹ್ಮಾಂಡದಲ್ಲಿ ಚತುರ್ವಿಂಶತಿ ತತ್ತ್ವದ ಅಭಿಮಾನಿಗಳಾದ ಬ್ರಹ್ಮಾದಿ ತತ್ವೇಶರು, ಅವರವರ ಸ್ಥಾನಗಳಲ್ಲಿ ಇದ್ದು, ತತ್ವಾಂತರ್ಗತ ಶ್ರೀಹರಿಯನ್ನು ತತ್ತತ್‌ಸ್ಥಾನಗಳಲ್ಲಿ ನಿತ್ಯದಲ್ಲೂ ಪ್ರತ್ಯಕ್ಷೀಕರಿಸಿಕೊಂಡು, ಆ ಭಗವಮ್ಮೂರ್ತಿ ದರ್ಶನ ಭಾಗ್ಯದಿಂದ ಆನಂದಪಡುತ್ತಿರುವರು.

ಈ ಸ್ಥೂಲಶರೀರಗತ ೭೨,೦೦೦ ನಾಡಿಗಳಲ್ಲಿ ವ್ಯಾಪಕನಾಗಿ ಶ್ರೀಹರಿಯು, ತತ್ವಾಭಿಮಾನಿ ದೇವತೆಗಳ ದ್ವಾರಾ, ತತ್ತ್ವಕಾರ್ಯವನ್ನು ನಡೆಸಿ, ನಡೆಯಿಸುತ್ತಾ, ಸಮಸ್ತ ತ್ರಿವಿಧ ಜೀವರ ವರ್ಗವನ್ನು ಸಂರಕ್ಷಿಸುತ್ತಿರುವನು.

ಜೀವಗಣದ ಸಂರಕ್ಷಕನಾದ ಶ್ರೀಹರಿಗೆ **ಶಾಶ್ವತ** ಎಂದು ಹೆಸರು.

**ಕಾಲತ್ರಯೇಽಪಿ ಶಶ್ವದೇಕ ಪ್ರಕಾರೇಣ ವರ್ತತೇ ಕಾಲಪರಿಣಾಮರಹಿತಃ**–ಎಂಬ **ಬೃಹತೀಮಂತ್ರಾರ್ಥದ** ಪ್ರಕಾರ, ತ್ರಿಕಾಲಗಳಿಂದ ಅಭಾಧಿತನಾಗಿರುವುದರಿಂದ ಶ್ರೀ ಪರಮಾತ್ಮನಿಗೆ **ಶಾಶ್ವತನೆಂದು** ಹೆಸರು. ದೇಹದ ವಿಕಾರಗಳೇ ಕಾಲದ ಪರಿಣಾಮಗಳು. ಈ ರೀತಿಯ ಕಾಲದ ಪರಿಣಾಮರೂಪವಾದ ಯಾವ ವಿಕಾರಗಳೂ ಸಚ್ಚಿದಾನಂದವಿಗ್ರಹನಾದ ಶ್ರೀಹರಿಗೆ ಎಂದೆಂದಿಗೂ ಇಲ್ಲ. ಚತುರ್ವಿಧನಾಶರಹಿತನಾಗಿರುವುದರಿಂದ, ಶಾಶ್ವತನೆಂದು ಶ್ರೀಹರಿಗೆ ಹೆಸರು.

ಶಾಶ್ವತ ಎಂಬ ನಾಮವು ವಿಷ್ಣುಸಹಸ್ರನಾಮಾಂತರ್ಗತವಾಗಿದೆ.

**ರುದ್ರೋ ಬಹುಶಿರಾ ಬಭ್ರುರ್ವಿಶ್ವಯೋನಿಃ ಶುಚಿಶ್ರವಾಃ ।**
**ಅಚ್ಯುತಃ ಶಾಶ್ವತಃ ಸ್ಥಾಣುರ್ವರಾರೋಹೋ ಮಹಾತಪಾಃ ॥**
**ಶ್ಲೋಕ ॥ ೧೩ ॥**

**ಇತಿ ವಿಷ್ಣುಸಹಸ್ರನಾಮ ಸ್ತೋತ್ರೇ ॥**

ಬ್ರಹ್ಮಾದಿ ಚತುರ್ವಿಂಶತಿ ತತ್ವಾಭಿಮಾನಿದೇವತೆಗಳು ದೇಹಾದ್ಯಂತ ಹಬ್ಬಿರುವ ೭೨,೦೦೦ ನಾಡಿಗಳಲ್ಲಿ ವಿದ್ಯಮಾನನಾಗಿರುವ ಬೃಹತೀನಾಮಕ ಶಶ್ವದೇಕಪ್ರಕಾರನಾಗಿ ಶಾಶ್ವತರೂಪನಾದ ಶ್ರೀಹರಿಯನ್ನು ತಮ್ಮ ತಮ್ಮ ಸ್ಥಾನಗತ ತತ್ತ್ವಗಳಲ್ಲಿ ನೋಡುತ್ತಾ, ಸಂತೋಷಪಡುತ್ತಿರುವರು ॥ ೫ ॥

## ಪದ್ಯ ೬

**ಮೂಲ :–**

**ಸತ್ಯ ಸಂಕಲ್ಪನು ಸದಾ ಎ**
**ಪ್ಪತ್ತೆರಡು ಸಾಹಸ್ರದೊಳು ಮೂ**
**ವತ್ತುನಾಲಕುಲಕ್ಷದೈವತ್ತಾರುಸಾಹಸ್ರ ||**
**ಚಿತ್ಪ್ರಕೃತಿ ಒಡಗೂಡಿ ಪರಮ ಸು**
**ನಿತ್ಯಮಂಗಳ ಮೂರ್ತಿ ಭಕ್ತರ**
**ತೆತ್ತಿಗನು ತಾನಾಗಿ ಸರ್ವತ್ರದಲಿ ಸಂತೈಪ || ೬ ||**

**ಅವತರಣಿಕೆ :–**

ಎಪ್ಪತ್ತೆರಡುಸಾವಿರ ನಾಡ್ಯಂತರ್ಗತ ಬೃಹತೀ ನಾಮಕ ಶ್ರೀವಾಸುದೇವನು ನಾಡಿಗಳಲ್ಲಿ ಇದ್ದಾನೆಂದು ತಿಳಿದು ಉಪಾಸಿದರೆ, ಶ್ರೀ ಪರಮಾತ್ಮನು ಅವರನ್ನು ಸದಾ ಕಾಪಾಡುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ :–**

**ಸತ್ಯಸಂಕಲ್ಪನು**=ಸರ್ವ ಚೇತನರ ಹಾಗೂ ಸಮಸ್ತ ಜಡವಸ್ತುಗಳ ಗುಣಧರ್ಮಗಳನ್ನು ಸಹಜ ರೂಪದಲ್ಲಿ ಸ್ವಾಭಾವಿಕವಾಗಿಯೇ ಅಭಿವ್ಯಕ್ತಿ ಮಾಡುವ ಸತ್ಯಭೂತವಾದ ಜಗತ್ತಿನ ನಿರ್ಮಾಣ ನಾದ ಇಚ್ಛಾ ಪ್ರಭುವಾದ ಶ್ರೀಪರಮಾತ್ಮನು, ಎಪ್ಪತ್ತೆರಡು ಸಾಹಸ್ರದೊಳು=ಎಪ್ಪತ್ತೆರಡು ಸಾವಿರ ಸಂಖ್ಯಾಕವಾದ ನಾಡಿಗಳಲ್ಲಿ, ಮೂವತ್ತುನಾಲಕು ಲಕ್ಷದ ಐವತ್ತಾರು ಸಾಹಸ್ರದ=ತತ್ತ್ವಗಳ ಸಂಖ್ಯೆ ೨೪. ಇದರಲ್ಲಿ ೨೪ ಪುರುಷ ದೇವತೆಗಳು ಮತ್ತು ೨೪ ಸ್ತ್ರೀ ದೇವತೆಗಳು, ಒಟ್ಟು ಸಂಖ್ಯೆ ೪೮. ಈ ೪೮ ದೇವತೆಗಳಲ್ಲಿ ಪ್ರತಿನಾಡಿಯಲ್ಲಿ ೭೨ ೭೨,000 ನಾಡಿಗಳ ಪ್ರಕಾರ, ೭೨,000X೪೮=ಮೂವತ್ತನಾಲ್ಕು ಲಕ್ಷದ ಐವತ್ತಾರು ಸಾವಿರ ಸಂಖ್ಯಾಕವಾದ ತತ್ತ್ವದೇವತಾರೂಪಗಳಲ್ಲಿ ಅವರ

ಅಂತರ್ಗತನಾಗಿ, ಅಷ್ಟೇ ರೂಪಗಳಿಂದ **ಚಿತ್ರ್ಪಕೃತಿ ಒಡಗೂಡಿ**=ಚಿತ್ಪ್ರಕೃತಿ ಸಾಂಕೇತರಾದ ಶ್ರೀಲಕ್ಷ್ಮೀದೇವಿಯರಿಂದ ಸಹಿತನಾಗಿ (ಅಷ್ಟೇ ಲಕ್ಷ್ಮೀ ರೂಪಗಳಿವೆ). **ಪರಮ**=ಅತ್ಯಂತವಾಗಿ, ಅಂದರೆ ಸರ್ವೋತ್ತಮನಾದ, **ಸುನಿತ್ಯ**=ಸಮೀಚೀನವಾದ ಅನಾದಿ ನಿತ್ಯತ್ವಉಳ್ಳ ಅಂದರೆ, ಅನಾದಿನಿತ್ಯವಾದ ಜೀವರ ಸ್ವರೂಪದಲ್ಲಿ ನಿತ್ಯಾವಿಯೋಗಿನಿಯಾಗಿ, ನಿತ್ಯಬಿಂಬನಾದ ಪರಮಾತ್ಮನ, **ಮಂಗಳ ಮೂರ್ತಿ**=ಸದಾ ಚಿದಾನಂದೈಕಶರೀರವುಳ್ಳ ಪಾವನಾತ್ಮಕನಾದ ಬಿಂಬನು, **ಭಕ್ತರ**=ನಾಡ್ಯಂತರ್ಗತ ತನ್ನ ಭಗವದ್ರೂಪಗಳನ್ನು ಸದಾ ಚಿಂತಿಸುತ್ತಿರುವ ಭಕ್ತವರ್ಗದ, **ತೆತ್ತಿಗನು**=ಎಡಬಿಡದೆ ಅವರೊಡನಿದ್ದು, ಭಕ್ತಪರಾಧೀನನೆಂದೆನಿಸಿ, **ಸರ್ವತ್ರದಲಿ**=ಸರ್ವಾವಸ್ಥೆ, ಸರ್ವಕಾಲ, ಸರ್ವದೇಶಾದಿಗಳಲ್ಲಿ (ಎಲ್ಲೆಲ್ಲಿಯೂ), **ತಾನಾಗಿ ಸಂತೈಪ**=ಸ್ವಯಂ ಬಿಂಬನಾಗಿ ವಿದ್ಯಮಾನನಾಗಿದ್ದು, ಅವರನ್ನು ಸದಾ ಸಂರಕ್ಷಿಸುತ್ತಿರುವನು ॥ ೬ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರು

ಇನ್ನೂ ಎಪ್ಪತ್ತೆರಡುಸಾವಿರ ನಾಡೀಗತ ಭಗವದ್ರೂಪಗಳನ್ನು ಹೇಳುತ್ತಾರೆ.

ಬ್ರಹ್ಮಾದಿ ತೃಣಾಂತ ತ್ರಿವಿಧರು ಲಿಂಗಭಂಗವಾಗೋವರಿಗೂ, ಪ್ರತಿಜನ್ಮದಲ್ಲಿ ಕ್ಷಣಲವಾದಿ ಕಾಲಗಳಲ್ಲಿ ಭೋಗಮಾಡತಕ್ಕ ಸುಖ-ದುಃಖಾದಿಗಳು ಇಂಥಾದ್ದೆಂದು, ಅನಾದಿಕರ್ಮಾನುಸಾರ ಸತ್ಯವಾದ ನೇಮವುಳ್ಳ ಪರಮಾತ್ಮನು, ಎಪ್ಪತ್ತೆರಡುಸಾವಿರ ನಾಡಿಗಳಲ್ಲಿ ಪ್ರತಿನಾಡೀ ಒಳಗೆ ಇರತಕ್ಕ ಚತುರ್ವಿಂಶತಿ ತತ್ತ್ವಗಳು ಈ ತತ್ತ್ವಗಳಲ್ಲಿ ಇರತಕ್ಕ ಇಪ್ಪತ್ನಾಲ್ಕು ತತ್ತ್ವದೇವತೆಗಳಾದ ಪುರುಷ ದೇವತೆಗಳು, ಇವರ ಪತ್ನೀರಾದ ಇಪ್ಪತ್ನಾಲ್ಕು ಸ್ತ್ರೀ ದೇವತೆಗಳು ಅಂತೂ ನಲವತ್ತೆಂಟು ದೇವತೆಗಳು, ಇವರ ಅಂತರ್ಗತನಾದ ವಾಸುದೇವನು, ಚಿತ್ಪ್ರಕೃತಿ ಸಾಂಕೇತರಾದ ಮಾಯಾದೇವಿಯರ ಸಂಗಾತ ಕೂಡಿಕೊಂಡು ಒಂದೊಂದು ನಾಡೀ ಒಳಗೆ ನಲವತ್ತೆಂಟುರೂಪಗಳಿಂದ ಇರೋವನಾಗಿದ್ದಾನೆ.

ಈ ಒಂದು ನಾಡೀಕ್ರಮಕ್ಕೆ ಎಪ್ಪತ್ತೆರಡು ಸಾವಿರದ ಒಳಗೂ ಇದ್ದಾನೆ. ಈ ರೀತ್ಯಾ ಲೆಖ್ಖ ಮಾಡಿದರೆ, ಮೂವತ್ತನಾಲ್ಕು ಲಕ್ಷದ ಐವತ್ತಾರು ಸಾಹಸ್ರ ಈ ಪ್ರಕಾರ ಸ್ಥೂಲದೇಹದೊಳು ಅತ್ಯಂತವಾಗಿ ಸಮೀಚೀನವಾದ ನಿತ್ಯತ್ವವುಳ್ಳ ಜೀವನ ಸ್ವರೂಪದಲ್ಲಿ ನಿತ್ಯಬಿಂಬನಾದ ಪರಮಾತ್ಮ ಜೀವನ ದೇಹಗತ ಎಪ್ಪತ್ತೆರಡುಸಾವಿರ ನಾಡಿಗಳಲ್ಲಿ, ಅನಾದ್ಯನಂತ ಕಾಲಕ್ಕೂ ಸರ್ವದೇವತಾ ಸ್ವರೂಪನು ತಾನಾಗಿ ಪೂರ್ವೋಕ್ತ ಮೂವತ್ತನಾಲ್ಕುಲಕ್ಷದಐವತ್ತಾರುಸಾವಿರ ರೂಪಗಳಿಂದ ಇರೋವನಾಗಿದ್ದಾನೆ. ಈ ಪ್ರಕಾರ ಅವರವರಿಗೆ ಬಿಂಬನಾಗಿದ್ದು, ಆಯಾ ಜೀವರ ಸ್ವರೂಪಯೋಗ್ಯತಾನುಸಾರ ಭಗವದ್ಭಕ್ತರ ಸ್ವರೂಪ ಮಂಗಳ ಸ್ವರೂಪವಾದ್ದರಿಂದ, ಅವರವರ ಬಿಂಬ ಸುಖರೂಪವಾದ ಮಂಗಳ ಲಿಂಗಭಂಗಾನಂತರ ಕೊಡತಾನಾದ್ದರಿಂದ, ಅವರಗತ ಬಿಂಬ ಮಂಗಳಮೂರ್ತಿ ಅಂತ ಕರೆಸತಾನೆ. ನಿತ್ಯಸಂಸಾರಿ, ತಮೋಯೋಗ್ಯರು ಭಗದ್ದ್ವೇಷಿಗಳಾದ್ದರಿಂದ, ಅವರವರ ಅಮಂಗಳಸ್ವರೂಪಾನುಸಾರ ಲಿಂಗಭಂಗಾನಂತರ ಅಮಂಗಳವಾದ ದುಃಖಕೊಡತಾನಾದ್ದರಿಂದ ಅಮಂಗಳಮೂರ್ತಿ ಎಂತ ಕರೆಸುತ್ತಾನೆ. ಈ ಪ್ರಕಾರ ತ್ರಿವಿಧ ಜೀವರ ಸ್ವರೂಪದಲ್ಲಿ, ಬಾಹ್ಯಸ್ಥೂಲ ದೇಹದಲ್ಲಿ ಇದ್ದು, ಅದರಲ್ಲಿ ತನ್ನ ನಂಬಿದ ಭಕ್ತ ಜನರು ದಾರೋ ಅವರಿಗೆ ದೂತಸದೃಶನಾಗಿ ದೇಹೇಂದ್ರಿಯಾದಿ ಸರ್ವತ್ರದಲ್ಲಿ ದೇವತಾಂತರ್ಗತನಾಗಿ ಇದ್ದು, ಇಂದ್ರಿಯಗಳು ದುರ್ವಿಷಯದಲ್ಲಿ ಪ್ರವರ್ತಿಸದಂತೆ ಸಂರಕ್ಷಣ ಮಾಡತಾನೆ.

**ವಿಶೇಷಾರ್ಥ**– ಮ್ಯಾಲೆ ಹೇಳಿದ ಸಂಖ್ಯಾ ಮೂವತ್ತುನಾಲ್ಕುಲಕ್ಷದ ಐವತ್ತಾರುಸಾವಿರ ಹ್ಯಾಂಗೆಂದರೆ ೭೨,೦೦೦X೪೮=೩೪,೫೬,೦೦೦ ಆಗತದೆ.

॥ ೬ ॥

**೨. ಭಾವಪ್ರಕಾಶಿಕೆ :**

ಸರ್ವೋತ್ತಮನೂ, ನಿತ್ಯಮಂಗಳ ವಿಗ್ರಹನೂ, ಸತ್ಯಸಂಕಲ್ಪನೂ ಆದ ಶ್ರೀಹರಿಯು ೭೨ ಸಹಸ್ರ ನಾಡಿಗಳ ಪ್ರತಿಯೊಂದರಲ್ಲಿಯೂ, ತತ್ವಗಳು ೨೪, ತತ್ವಾಭಿಮಾನಿಗಳು ೨೪. ಹೀಗೆ ೪೮ ರೂಪಗಳಂತೆ, ೭೨,೦೦೦X೪೮= ೩೪,೫೬,೦೦೦ ಸಂಖ್ಯಾಗಳು ಆಗುವವು. ಇಷ್ಟು ರೂಪಗಳಿಂದ ಈ ದೇಹನಾಡಿ

ಗಳಲ್ಲಿ ಲಕ್ಷ್ಮೀ ಸಮೇತನಾಗಿದ್ದು, ಭಕ್ತರ ಯೋಗಕ್ಷೇಮಗಳನ್ನು ತಾನೇ ವಹಿಸಿ ಪ್ರತಿನಿತ್ಯದಲ್ಲಿಯೂ, ಸರ್ವತ್ರದಲ್ಲಿಯೂ ಅವರನ್ನು ರಕ್ಷಿಸುವನು ॥ ೬ ॥

**೩. ಭಾವದರ್ಪಣ**

ಒಂದೊಂದು ನಾಡಿಯಲ್ಲಿ ಇರತಕ್ಕ ಇಪ್ಪತ್ತುನಾಲ್ಕು ತತ್ತ್ವದಲ್ಲೂ ತತ್ಪತಿಯಾದ ದೇವತೆಗಳಲ್ಲೂ ೪೮ ರೂಪಗಳ ಪ್ರಕಾರ, ಮೂವತ್ತನಾಲ್ಕುಲಕ್ಷದ ಐವತ್ತಾರುಸಹಸ್ರ ರೂಪದಿಂದ ಇದ್ದಾನೆಂದು ಹೇಳುತ್ತಾರೆ–ಸತ್ಯಸಂಕಲ್ಪೇತಿ ॥

ತೆತ್ತಿಗ–ಸರ್ವಭಾರ ಹೊತ್ತವ ಎಂಬರ್ಥ. ಚಿತ್ಪ್ರಕೃತಿ–ಚೇತನಪ್ರಕೃತಿ ಲಕ್ಷ್ಮಿಯು ಎಂಬ ತಾತ್ಪರ್ಯ ॥ ೬ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಸತ್ಯ – ಇತಿ ॥ ರಮಾರೂಪಾಣಿ ಗೃಹೀತ್ವಾ ಗಣನಾ ॥ ತೆತ್ತಿಗ – ಅನುಚರಃ ॥ ೬ ॥

**ಕನ್ನಡಾರ್ಥ :-**

ನಾಡೀಗತ ರೂಪಗಳಿಗೆ ಹೆಚ್ಚಿಸಬೇಕಾದ ರೂಪಗಳ ವಿಶೇಷವನ್ನು ವಿವರಿಸುತ್ತಾರೆ–ಸತ್ಯ ಸಂಕಲ್ಪನು ಎಂಬುದಾಗಿರುವ ಪದ್ಯದಿಂದ. ಚಿತ್‌ಪ್ರಕೃತಿಯೊಡಗೂಡಿ ಎಂದು ಹೇಳಿರುವುದರಿಂದ ರಮಾರೂಪಗಳನ್ನು ಪರಿಗ್ರಹಿಸಿಯೇ ಗಣನೆಯಿರುವದೆಂದು ತಿಳಿಯಬೇಕು. ತೆತ್ತಿಗ ಎಂಬ ಪದಕ್ಕೆ ಅನುಚರ–ಎಂಬರ್ಥ ॥ ೬ ॥

**೫ ಶ್ರೀ ಗುರುಹೃದಯ ಪ್ರಕಾಶಿಕೆ**

ನಾಡೀಗತ ರೂಪಗಳನ್ನು ತತ್ತ್ವಗಳು ಇಪ್ಪತ್ತನಾಲ್ಕಕ್ಕೆ ನಿಯಾಮಕ ಕೇಶವಾದಿ ಇಪ್ಪತ್ತನಾಲ್ಕು ಭಗವದ್ರೂಪಗಳಿಂದ ಹೆಚ್ಚಿಸಿ ತಿಳಿಯತಕ್ಕ ರೂಪ ವಿವರ ತಿಳಿಸುತ್ತಾರೆ. ಸತ್ಯಸಂಕಲ್ಪ ಎಂದು. ದೃಢಸಂಕಲ್ಪನಾದ ದೇವರು ಎಪ್ಪತ್ತೆರಡು ಸಹಸ್ರನಾಡಿಗಳಲ್ಲಿ ಎಪ್ಪತ್ತೆರಡು ಸಹಸ್ರರೂಪ ಇರುವುದನ್ನು ಇಪ್ಪತ್ತನಾಲ್ಕು

ತತ್ತ್ವನಿಯಾಮಕ ಕೇಶವಾದಿ ಇಪ್ಪತ್ತನಾಲ್ಕು ರೂಪಗಳಿಂದ ಹೆಚ್ಚು ಗುಣಿಸಿದರೆ, ೭೨,೦೦೦X೨೪=೧,೭೨,೮೦೦ ರೂಪಗಳಾಗುವುವು. ಇವು ಪರಮಾತ್ಮನ ಪುರುಷ ರೂಪಗಳು, ಅಷ್ಟೇ ಸ್ತ್ರೀರೂಪಗಳು ಸಹಿತನಾಗಿ, ತನ್ನ ಪತ್ನಿಯಾದ ಚಿತ್ಪ್ರಕೃತಿ ಎಂಬ ಜ್ಞಾನಸ್ವರೂಪಳಾದ ರಮಾರೂಪಗಳಿಂದ ಸಹಿತನಾಗಿರುವನು. ಒಟ್ಟು ೩೪,೫೬,೦೦೦ ರೂಪಗಳಿಂದ ಪರಮಕಲ್ಯಾಣ ನಿತ್ಯಮಂಗಳರೂಪನಾದ ದೇವರು ತನ್ನ ಭಕ್ತರಿಗೆ ತೆತ್ತಿಗ ಎಂದರೆ ಹೊಣೆಗಾರ ಸಹಾಯಕರ್ತನಾಗಿ ಎಲ್ಲೆಲ್ಲೂ ರಕ್ಷಿಸುವನೆಂದು ಚಿಂತಿಸುವುದು ॥ ೬ ॥

## ಸರ್ವವ್ಯಾಖ್ಯಾನುಸಾರ ಸಂಗ್ರಹ

ಶ್ರೀಪರಮಾತ್ಮನು ಈ ಸ್ಥೂಲ ಶರೀರದಲ್ಲಿ ಆದ್ಯಂತವಾಗಿ ಹಬ್ಬಿ ಹರಡಿರುವ ೭೨,೦೦೦ ನಾಡಿಗಳಲ್ಲಿ ವಿದ್ಯಮಾನನಾಗಿದ್ದಾನೆ. ಪ್ರತಿ ನಾಡಿಯಲ್ಲಿಯೂ ೨೪ ತತ್ತ್ವಗಳು ಮತ್ತು ೨೪ ತತ್ತ್ವೇಶರು ಇದ್ದಾರೆಂದು ಪೂರ್ವ ಪದ್ಯ ಪದ್ಯದಲ್ಲಿ ಉಕ್ತವಾಗಿದೆ. ಅಲ್ಲಿಗೆ ೨೪+೨೪=೪೮ ಒಟ್ಟು ಸಂಖ್ಯೆಯಾಯಿತು. ಶರೀರಗತ ನಾಡಿಗಳ ಸಂಖ್ಯೆ =೭೨,೦೦೦ ಗಣನೆಯ ಪ್ರಕಾರ, ೭೨,೦೦೦x೪೮ =೩೪,೫೬,೦೦೦ ರೂಪಗಳಾಯಿತು. ಇದನ್ನೇ ದಾಸರಾಯರು **ಮೂವತ್ತು ನಾಲಕುಲಕ್ಷದೈವತ್ತಾರು ಸಹಸ್ರದ** ಎಂದಿದ್ದಾರೆ.

ಸತ್ಯ ಸಂಕಲ್ಪನು ೭೨,೦೦೦ ನಾಡಿಗಳಲ್ಲಿ, ೩೪,೫೬,೦೦೦ ಸಂಖ್ಯಾಕವಾದ ರೂಪಗಳಿಂದ ವಿದ್ಯಮಾನನಾಗಿದ್ದಾನೆ. ಜಗತ್ತಿನ ಸೃಷ್ಟಿಗೆ ಉಪದಾನ ಕಾರಣವಾದ ಮೂಲಪ್ರಕೃತಿಗೆ ಶ್ರೀ ಲಕ್ಷ್ಮೀದೇವಿ ಅಭಿಮಾನಿಯಾಗಿದ್ದಾಳೆ. ಅಂತಹ ರಮಾದೇವಿಗೆ **ಚಿತ್ಪ್ರಕೃತಿ** ಎಂದು ಹೆಸರು.

ಸತ್ಯಸಂಕಲ್ಪನಾದ ಶ್ರೀ ಹರಿಯು ಚಿತ್ಪ್ರಕೃತಿನಾಮಕಳಾದ ಲಕ್ಷ್ಮೀದೇವಿಯ ಅಷ್ಟೇ ರಮಾರೂಪಗಳಿಂದ ೭೨,೦೦೦ ನಾಡಿಗಳಲ್ಲಿ ೩೪,೫೬,೦೦೦ ಭಗವದ್ರೂಪಗಳಿಂದ ವಿರಾಜಮಾನನಾಗಿದ್ದಾನೆ.

ಶ್ರೀಹರಿಯು ಅನಾದ್ಯನಂತಕಾಲದಿಂದ ಶಾಶ್ವತನು. ಆ ಅಚ್ಯುತನ ಗುಣ, ರೂಪ, ಅವತಾರ, ಕ್ರಿಯಾ ವಿಶೇಷಗಳು ನಿತ್ಯ. ಹಾಗೂ ಶಾಶ್ವತ. ಪರಮ

ಪವಿತ್ರ ಅತ ಏವ ಸಮಸ್ತ ದೋಷ ರಹಿತನಾದ್ದರಿಂದ, ಶ್ರೀಪರಮಾತ್ಮನು **ಸುನಿತ್ಯಮಂಗಳಮೂರ್ತಿಯು.**

ಅಂತಹ ನಿತ್ಯಮಂಗಳ ಮೂರ್ತಿಯಾದ ತನ್ನನ್ನು ನಿರಂತರದಲ್ಲಿಯೂ ನಂಬಿ, ಉಪಾಸಿಸುತ್ತಿರುವ ಭಕ್ತಜನಸಂದೋಹಕ್ಕೆ ಅಧೀನನಾಗಿದ್ದಾನೆ, ಭಕ್ತರ ಮನೋಭಿಲಾಷೆಗಳನ್ನು ಈಡೇರಿಸುತ್ತಿರುವ, ಆ ಭಕ್ತ ವತ್ಸಲನು **ಭಕ್ತರ ತೆತ್ತಿಗನಾಗಿದ್ದಾನೆ.**

ಆ ಕರುಣಾಮಯನು, ತನ್ನ ಏಕಾಂತ ಭಕ್ತರನ್ನು ಸರ್ವಕಾಲ, ದೇಶ ಅವಸ್ಥೆಗಳಲ್ಲಿ ಅವರ ಬಿಂಬನಾಗಿದ್ದು, ಅವರ ದೋಷಗಳನ್ನು ಪರಿಹರಿಸಿ, ಅವರನ್ನು ಶುದ್ಧರನ್ನಾಗಿಸಿ, ಸದಾ ಸಂರಕ್ಷಿಸುತ್ತಿರುವನು (**ಸಂತೈಪ**) ಎಂಬುವೇ ಪ್ರಸಕ್ತ ಪದ್ಯದ ಅಭಿಪ್ರಾಯವು ॥ ೬ ॥

## ಪದ್ಯ ೭

**ಮೂಲ:—**

**ಮಣಿಗಳೊಳಗಿಹ ಸೂತ್ರದಂದದಿ ।**
**ಪ್ರಣವಪ್ರತಿಪಾದ್ಯನು ಸರ್ವಚೇತನ ।**
**ಗಣದೊಳಿದ್ದನವರತ ಸಂತೈಸುವನು ತನ್ನವರ ॥**
**ಪ್ರಣತ ಕಾಮದ ಭಕ್ತಚಿಂತಾ ।**
**ಮಣಿ ಚಿದಾನಂದೈಕದೇಹನು ।**
**ಅಣುಮಹದ್ಗತನಲ್ಪರೋಷಾದಿಯಲಿ ನೆಲೆಸಿಪ್ಪ ॥ ೭ ॥**

**ಅವತರಣಿಕೆ :—**

ಓಂಕಾರ ಪ್ರತಿಪಾದ್ಯನಾದ ಶ್ರೀಮನ್ನಾರಾಯಣನು ಸಕಲ ಜೀವರಲ್ಲಿ, ಮಣಿಗಳಿಗೆ ಆಧಾರವಾಗಿರುವ ದಾರದಂತೆ, ಪ್ರಧಾನ ಸೂತ್ರಧಾರನಾಗಿದ್ದು,

ತನ್ನ ಏಕಾಂ ಭಕ್ತರಲ್ಲಿ ಅಂತರ್ಯಾಮಿಯಾಗಿ, ಅವರನ್ನು ಸದಾ ಸಂರಕ್ಷಿಸುತ್ತಾನೆಂದು ತಿಳಿಸುತ್ತಾರೆ.

## ಪ್ರತಿಪದಾರ್ಥ

**ಪ್ರಣವಪ್ರತಿಪಾದ್ಯನು** = ಓಂಕಾರ ಪ್ರತಿಪಾದ್ಯನಾದ ಶ್ರೀಪರಮಾತ್ಮನು, **ಸರ್ವ** = ಸಮಸ್ತರಾದ, **ಚೇತನ ಗಣದೊಳು** = ಚೇತನ ಸ್ವರೂಪರಾದ ತ್ರಿವಿಧ ಜೀವ ವರ್ಗದಲ್ಲಿ, **ಇದ್ದು** = ಜೀವಾಂತರ್ಗತನಾಗಿ, ಜೀವಾಕಾರನಾಗಿ, ಜೀವನಾಮಕನಾಗಿ, ವಿದ್ಯಮಾನನಾಗಿದ್ದು. **ಮಣಿಗಳೊಳಗಿಹ** = ಮಣಿಗಳ ರಂಧ್ರಗಳ ದ್ವಾರ ಪೋಣಿಸಿರುವ, **ಸೂತ್ರದಂದದಿ** = ದಾರದಂತೆ, ಸೂತ್ರಸದೃಶನಾದ ಶ್ರೀಪರಮಾತ್ಮನು, **ತನ್ನವರ** = ತನ್ನನ್ನೇ ಸದಾ ಸ್ಮರಿಸುತ್ತಿರುವ ಏಕಾಂತ ಭಕ್ತರನ್ನು, **ಅನವರತ** = ಅವರನ್ನು ಎಡಬಿಡದೆ, ಬಿಂಬನಾಗಿದ್ದು, ಯಾವಾಗಲೂ, **ಸಂತೈಸುವನು** = ಸಂರಕ್ಷಿಸುವನು, **ಪ್ರಣತ** = ನಿನ್ನ ಹೊರತು ಅನ್ಯಥಾ ಗತಿಪ್ರದರು ಇನ್ನಾರೂ ಇಲ್ಲವೆಂದು, ಶರಣಾಗ ರಾದ ತನ್ನ ಭಕ್ತರ. **ಕಾಮದ** = ಮನೋಭೀಷ್ಟಗಳನ್ನು ಅವರವರ ಯೋಗ್ಯತಾನುಸಾರ ಕೊಡುವ, **ಭಕ್ತಚಿಂತಾಮಣಿ** = ಭಕ್ತರ ಮನೋಭಿಲಾಷೆಗಳನ್ನು ಈಡೇರಿಸುವುದರಲ್ಲಿ ಚಿಂತಾಮಣಿ ಎಂಬ ಶ್ರೇಷ್ಠರತ್ನದ ಸದೃಶನಾದವನಾಗಿ, **ಚಿದಾನಂದೈಕದೇಹನು** = ಸದಾ ಅಪ್ರಾಕೃತನಾದ ಜ್ಞಾನ, ಆನಂದವೇ ದೇಹವನ್ನಾಗಿ ಉಳ್ಳ, ಚಿದಾನಂದರಾದ ಜೀವರಿಂದ ಅತ್ಯಂತ ಭಿನ್ನನಾದ, ಅದ್ವಿತೀಯನಾದ ಪರಮಾತ್ಮನು, **ಅಣು** = ಅತ್ಯಂತ ಸೂಕ್ಷ್ಮ ರೂಪರಾದ ಜೀವರಲ್ಲೂ, **ಮಹತ್** = ಬೃಹತ್ಪ್ರಮಾಣದ ಜಡವಸ್ತುಗಳಲ್ಲಿ, **ಗತ** = ವ್ಯಾಪ್ತನಾಗಿದ್ದು, **ಅಲ್ಪರೋಪಾದಿಯಲಿ** = ಅತ್ಯಲ್ಪನಂತೆ, **ನೆಲಸಿಪ್ಪ** = ಆವಾಸನಾಗಿದ್ದಾನೆ, ಜೀವದಂತೆ ಅಲ್ಪನಲ್ಲ, ಪರಿಪೂರ್ಣನಾಗಿದ್ದಾನೆ ॥ ೭ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರು ಈಶಾಧೀನರೆಂಬೋದಕ್ಕೆ ದೃಷ್ಟಾಂತ ಹೇಳತಾರೆ. ಮಣಿಗತ

ಛಿದ್ರದಲ್ಲಿ ವಿದ್ಯಮಾನವಾದ ದಾರದೋಪಾದಿಯಲ್ಲಿ, ಓಂಕಾರಪ್ರತಿಪಾದ್ಯನಾದ, ಅಣುಸ್ವರೂಪನಾದ ಜೀವಗೆ ಬಿಂಬನಾದ ಪರಮಾತ್ಮನೇ ಸೂತ್ರಸದೃಶನು. ಸಮಸ್ತರಾದ **ಚೇತನರೂಪ ಜೀವಸಮೂಹನೇನು,** ಅಚೇತನರಾದ ವೃಕ್ಷಾದಿ ಜೀವರೇನು (ಈ ಉಭಯವಿಧರಾದ ಬ್ರಹ್ಮಾದಿ ತೃಣಾಂತ ತ್ರಿವಿಧಜೀವರು ಮಣಿಸದೃಶರು), ಇಂಥಾ ಜೀವಾಖ್ಯಮಣಿಗತ ಅಸ್ವತಂತ್ರರೆಂಬೋದೆ ಛಿದ್ರ, ಹೃದಯಾಕಾಶವೆಂಬೋದೆ ಅವಕಾಶ. ಇಂಥಾ ಛಿದ್ರಾವಕಾಶದೊಳು ಬಿಂಬ ನೆಂಬೋ ಸೂತ್ರ ಪ್ರೋಣಿಸಲ್ಪಟ್ಟಿದೆ. ಸೂತ್ರಾಧಾರ ಮಣಿಗಳು ಹ್ಯಾಂಗೋ, ಹಾಂಗೆ ಬಿಂಬನೆಂಬೋ ಸೂತ್ರಾಧಾರ ಜೀವರು. ಈ ಪ್ರಕಾರ ಈಶಾಧೀನರು, ಪರಮಾತ್ಮ ಪೂರ್ವೋಕ್ತ ದೃಷ್ಟಾಂತಾನುಸಾರ ಇದ್ದು, ನಿರಂತರ ಅವಿಯೋಗನಾಗಿ, ಲಿಂಗಭಂಗಾನಂತರ ತ್ರಿವಿಧರ ಎಲ್ಲೆಲ್ಲಿ ಇಡಬೇಕೋ ಅಲ್ಲಲ್ಲಿ ಇಟ್ಟು, ಅವರವರ ಸ್ವರೂಪಯೋಗ್ಯತಾನುಸಾರ ಸಂರಕ್ಷಣ ಮಾಡುವನು. ಮೋಕ್ಷಸ್ಥಾನದಲ್ಲಿ ಸ್ವರೂಪತಃ ಪರಮಾತ್ಮ ಸರ್ವೋತ್ತಮನೆಂತಲೂ, ತಾನು ಭೃತ್ಯ ಎಂತಲೂ ಸ್ವರೂಪಸ್ವಭಾವದಲ್ಲಿದ್ದು ಮನನ ಮಾಡತಕ್ಕ ಮುಕ್ತರಾದ ತನ್ನ ಭಕ್ತರ, ತಮ್ಮ ತಮ್ಮ ಯೋಗ್ಯತಾನುಸಾರ ಕಾಮ ಮಾಡಿದ್ದರನ್ನ ಕೊಡತಕ್ಕವ. ತದನ್ಯರಿಗೆ ಇಂಥಾದ್ದು ಕೊಡದವ. ಭಕ್ತರ ಅಭೀಷ್ಟಪೂರ್ಣಮಾಡೋದರಲ್ಲಿ ಚಿಂತಾಮಣಿ ಸದೃಶನಾದವ. ದೇವರು ಚಿದಾನಂದ, ಜೀವನೂ ಚಿದಾನಂದನೇ. ಆದರೂ, ಪರಮಾತ್ಮ ಅಸದೃಶನಾದ ಚಿದಾನಂದ ದೇಹ ಉಳ್ಳವನು ಒಬ್ಬನಾದ ಪರಮಾತ್ಮನೇ ಹೊರತು ಅನ್ಯರು ದಾರೂ ಇಲ್ಲ ಎಂತ ಅರ್ಥ. ಅತ್ಯಣುವಾದ ಜೀವನಲ್ಲೂ, ದೊಡ್ಡದಾದ ಸ್ಥೂಲಶರೀರದಲ್ಲೂ ಇದ್ದವನಾಗಿ, ಈ ಎರಡು ಅಧಿಷ್ಠಾನಗಳಲ್ಲಿ ತನ್ನ ಸ್ವಶಕ್ತಿ ವ್ಯಕ್ತಮಾಡದಲೆ, ಅಧಿಷ್ಠಾನರಾದ ಜೀವರು ಅಲ್ಪ ರಾದ್ದರಿಂದ, ಅಲ್ಪರಾದ ಜೀವರೋಪಾದಿಯಲ್ಲಿ ತಾನೂ ಅಲ್ಪನಾಗೇ ಆವಾಸ ನಾಗಿ ಇದ್ದಾನೆ. ಇದರಂತೆ ಸ್ಥೂಲದೇಹದಲ್ಲೀನೂ ಎಂತ ತಿಳಿಯಬೇಕು. ಅಲ್ಪ ರೋಪಾದಿಯಲ್ಲಿ ಆವಾಸನೇ ಹೊರತು ಅಲ್ಪನಲ್ಲ, ರಾಮ-ಕೃಷ್ಣಾದಿ ಅವತಾರ ವತ್ ಎಂತ ಅರ್ಥ ॥ ೭ ॥

**೨. ಭಾವಪ್ರಕಾಶಿಕೆ :–**

ಶ್ರೀಪರಮಾತ್ಮನು ತನ್ನನ್ನು ಪೂಜಿಸುವವರ ಮನೋಭೀಷ್ಟವನ್ನು ಪೂರೈಸು

ವುದರಿಂದ ಪ್ರಣತಕಾಮದನೆಂದು ಹೆಸರು. ಚಿಂತಾಮಣಿ ಎಂದರೆ, ಚಿಂತಿಸಿದು ದನ್ನು ಕೊಡುವ ಒಂದು ಮಣಿವಿಶೇಷವು. ಭಕ್ತರ ವಿಷಯದಲ್ಲಿ ಪರಮಾತ್ಮ ಅದರಂತೆ ಇರುವನೆಂದರ್ಥ. ಸರ್ವದಾ ಆನಂದಸ್ವರೂಪನು. ಪರಮಾಣುವಾದ ಪದಾರ್ಥಗಳಲ್ಲಿಯೂ, ಜೀವರುಗಳಲ್ಲಿಯೂ, ದೊಡ್ಡದಾದ ಬ್ರಹ್ಮಾಂಡಕೆ ಆವರಕ ನಾಗಿಯೂ ಇರುವ ಸೂಕ್ಷ್ಮಸ್ಥೂಲರೂಪಗಳನ್ನು ಸ್ವೀಕರಿಸುವ ಮಹಾ ಸಮರ್ಥ ನಾದರೂ, ಅಲ್ಪ ಮನುಷ್ಯರಂತೆ ಕಾಣಿಸಿಕೊಳ್ಳುತ್ತಾ, ಸಕಲಚೇತನ, ಅಂದರೆ, ಸರ್ವ ಜೀವರಾಶಿಗಳಲ್ಲಿಯೂ ಮಣಿಗಳನ್ನು ಪೋಣಿಸಿರುವ ಸೂತ್ರದಂತೆ ಆಧಾರ ಭೂತನಾಗಿದ್ದು, ಸರ್ವಕಾಲದಲ್ಲಿಯೂ ಭಕ್ತರನ್ನುದ್ಧರಿಸುವನು ॥ ೭ ॥

೩. ಭಾವದರ್ಪಣ

**ಮಯಿಸರ್ವಮಿದಂ ಪ್ರೋತಂ ಸೂತ್ರೇಮಣಿಗಣಾ ಇವ ॥**
**ರಸೋಽಹಮಪ್ಸು ಕೌಂತೇಯ ಪ್ರಭಾಸ್ಮಿ ಶಶಿಸೂರ್ಯಯೋಃ ॥**

-ಎಂಬ ಗೀತಾವಚನಾನುಸಾರ, ಸರ್ವಚೇತನರಲ್ಲಿ ಸರ್ವದಾ ಇದ್ದು, ಸಂರಕ್ಷಿ ಸುವನೆಂದು ಹೇಳುತ್ತಾರೆ– **ಮಣಿಗಳೊಳಗೆ ಇತಿ ॥ ೭ ॥**

೪. **ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಮಣಿ–ಇತಿ ॥ ಸೂತ್ರ–ತಂತು ॥ ಪಾದ್ಯಃ–ಪ್ರತಿಪಾದ್ಯಃ ॥ ೭ ॥

**ಕನ್ನಡಾರ್ಥ**

ಸರ್ವತ್ರ ನೆಲೆಸಿರುವ ಪರಮಾತ್ಮನು ತನ್ನವರಾದ ಭಕ್ತರ ಅನುಚರರಂತೆ ವರ್ತಿಸುವನು. ಅವನ ಘನತೆಗೆ ಅದು ಕುಂದಲ್ಲ. ಉತ್ತಮ ಸ್ತುತ್ಯಗುಣವೆಂಬು ದಾಗಿ ಈ ಪದ್ಯದಿಂದ ತಿಳಿಸುತ್ತಾರೆ.

ಸೂತ್ರ–ಎಂದರೆ, ದಾರ. ಪ್ರಣವಪ್ರತಿಪಾದನು-ಎಂಬುದಕ್ಕೆ ಓಂಕಾರ ಪ್ರಣವಪ್ರತಿಪಾದ್ಯನು ಎಂದು ತಿಳಿಯಬೇಕು ॥ ೭ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಅಲ್ಪಜೀವರ ಶಕ್ತ್ಯನುಸಾರ ಕ್ರಿಯೆಗಳ ಮಾಡಿದಾಗ್ಯೂ. ದೇವರ ಘನತೆಗೆ ಕೊರತೆ ಇಲ್ಲವೆಂದು ತಿಳಿಸುತ್ತಾರೆ, ಮಣಿ ಎಂದು. ಅಣು ಎಂಬ ಆ ಸೂಕ್ಷ್ಮದಲ್ಲೂ, ಮಹತ್ತೆಂಬ ಬ್ರಹ್ಮಾಂಡಾವರಣ ಅನಂತಾಕಾಶದಲ್ಲೂ ಸಹ, ಗ ಎಂದರೆ ವ್ಯಾಪ್ತನಾದ ದೇವರು ಭಕ್ತಿಯಿಂದ ಪ್ರಣತರು ಎಂದರೆ, ನಂಬಿದವರಿಗೆ ಚಿಂತಾಮಣಿಯಂತೆ ಸಕಲೇಷ್ಟವನ್ನೂ ಕೊಡುವನಾದ್ದರಿಂದ, ಮಣಿಗಳ ಮಾಲಿಕೆಗೆ ಆಧಾರವಾಗಿರುವ ತಂತುವಿನಂತೆ. ಗುಣಪೂರ್ಣನೆಂಬ ಅರ್ಥವುಳ್ಳ ಓಂಕಾರದಿಂದ ವರ್ಣಿತನಾಗಿ, ಸರ್ವಜೀವಗಣದಲ್ಲೂ ಪರಮಾಲ್ಪ ಶಕ್ತಿ ಉಳ್ಳವನಂತೆ ಸ್ವಲ್ಪ ಕ್ರಿಯಾದಿಗಳನ್ನು ವ್ಯಕ್ತಿ ಮಾಡುತ್ತಾ, ಸರ್ವೋತ್ಕೃಷ್ಟನಾಗಿ ಇರುವನೆಂದು ಸ್ಮರಿಸೆಂದು ಅರ್ಥ ॥ ೭ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಮಣಿಗಳನ್ನು ಪೋಣಿಸಿರುವ ಸೂತ್ರದಂತೆ, ಓಂಕಾರ ಪ್ರತಿಪಾದ್ಯನಾದ ಶ್ರೀಪರಮಾತ್ಮನು ಸಕಲ ಜೀವಗಣಗಳೆಂಬ ಮಣಿಗಳಿಗೆ ಸೂತ್ರಸದೃಶನಾಗಿದ್ದು ಅವರ ಮನೋಭಿಲಾಷೆಗಳನ್ನು ಈಡೇರಿಸುತ್ತಿರುವನು ಎಂದು ತಿಳಿಸುತ್ತಾರೆ.

ಮಣಿಗಳನ್ನು ಒಂದೆಡೆ ಸೇರಿಸಬೇಕಾದರೆ, ಅವುಗಳ ರಂಧ್ರಗಳ ದ್ವಾರಾ ದಾರವನ್ನು ಪೋಣಿಸಬೇಕು. ಈ ದಾರಕ್ಕೆ ಸೂತ್ರ ಎಂದು ಹೆಸರು. ಸೂತ್ರದ ಆಧಾರದಿಂದ ಆ ಮಣಿಗಳೆಲ್ಲವೂ ಒಂದೆಡೆ ಸೇರಿ, ಮಾಲಾಕಾರವಾಗಿ ಆಗುವುವು.

ಜೀವರೆಲ್ಲರೂ ಮಣಿಸದೃಶರಾಗಿದ್ದಾರೆ. ಅವರ ಸ್ವರೂಪ ದೇಹದಲ್ಲಿ ಅಂತರ್ಯಾಮಿಯಾಗಿದ್ದು ಬಿಂಬರೂಪದಿಂದ ಶ್ರೀಪರಮಾತ್ಮನು ಸೂತ್ರಸದೃಶನಾಗಿದ್ದಾನೆ. ಸೂತ್ರ ಒಂದೇ, ಭಿನ್ನ ಜೀವಗಣಗಳು ಮಣಿ ಸದೃಶ. ಏಕಾತ್ಮನಾದ ಶ್ರೀಪರಮಾತ್ಮನು ಸೂತ್ರಸದೃಶ.

ಸಮಸ್ತ ವೇದರಾಶಿಗಳಿಗೆ ಮೂಲವು **ಓಂ**–ಎಂಬ ಪ್ರಣವಾಕ್ಷರ, ಅ-ಕಾರ, ಉ-ಕಾರ, ಮ-ಕಾರಗಳಿಂದ ಯುಕ್ತವಾಗಿರುವುದೇ ಓಂಕಾರವು ಇದಕ್ಕೆ

ಪ್ರಣವ ಎಂದು ಹೆಸರು. ಶ್ರೀಮನ್ನಾರಾಯಣನು ಓಂ-ಕಾರ ಪ್ರತಿಪಾದ್ಯನಾಗಿದ್ದಾನೆ. ಅಂತಹ ಪ್ರಣವಪ್ರತಿಪಾದ್ಯನಾದ ಶ್ರೀಪರಮಾತ್ಮನು ಮಣಿಗಳೊಳಗಿಹ ಸೂತ್ರದಂದದಿ ಸರ್ವಜೀವಗಣದಲ್ಲಿ ಎಡಬಿಡದೆ ಬಿಂಬನಾಗಿ ವಿದ್ಯಮಾನನಾಗಿದ್ದಾನೆ

ಓಂ-ಕಾರ ಪ್ರತಿಪಾದ್ಯನು ಸರ್ವಚೇತನ ಗಣದೊಳು ಅನವರತ ಇದ್ದು, ಮನೋಭಿಲಾಷೆಗಳನ್ನು ಸಲ್ಲಿಸುತ್ತಾ, ಇಹದಲ್ಲಿ ಭೋಗಾದಿ ಸುಖಗಳನ್ನೂ, ಪರದಲ್ಲಿ ನಿತ್ಯಾನಂದರೂಪವಾದ ಮೋಕ್ಷಭಾಗ್ಯವನ್ನೂ ಕೊಟ್ಟು ಸಂರಕ್ಷಿಸುತ್ತಿರುವನು.

ಪ್ರಣವ ಪ್ರಮೇಯನಾದ ಶ್ರೀ ಪರಮಾತ್ಮನು ಚಿಂತಾಮಣಿ ಸದೃಶನಾಗಿದ್ದಾನೆ. ಸಮುದ್ರ ಮಥನಕಾಲದಲ್ಲಿ ಉತ್ಪತ್ತಿಯಾದ ಅನೇಕ ವಸ್ತುಗಳ ಪೈಕಿ, ಚಿಂತಾಮಣಿಯು ಅನರ್ಘ್ಯಮಣಿ. ಅದನ್ನು ಭಕ್ತಿಯಿಂದ ಪೂಜಿಸಿದವರಿಗೆ ಸಕಲಾಭೀಷ್ಟಗಳನ್ನು ನೀಡುವುದು. ಆದರೆ ಚಿಂತಾಮಣಿಯು ಇಹದಲ್ಲಿ ಸಕಲ ಭೋಗಭಾಗ್ಯಗಳನ್ನೂ ನೀಡಬಲ್ಲುದೇ ಹೊರತು, ನಿತ್ಯಾನಂದರೂಪವಾದ ಮೋಕ್ಷ ಸುಖವನ್ನು ನೀಡಲಾರದು. ಮೋಕ್ಷವು ಕರ್ಮ ವಿಮೋಚಕನಾದ ಮುಕ್ತಿಪ್ರದನಾದ ಮುಕುಂದನಿಂದ ಮಾತ್ರ ಪ್ರಾಪ್ತಿ.

ಅಪ್ರಾಕೃತವಾದ, ಸರ್ವದೋಷರಹಿತವಾದ ಸತ್, ಚಿತ್, ಆನಂದಸ್ವರೂಪನೇ ಶ್ರೀಪರಮಾತ್ಮನು. ಅನಂತಕಲ್ಯಾಣಗುಣಗಣಪರಿಪೂರ್ಣನಾದ ಶ್ರೀಪರಮಾತ್ಮನ ಒಂದೊಂದು ಗುಣವೂ ಅಪರಿಮಿತ. ಸಾಕಲ್ಯೇನ ಯಾರಿಂದಲೂ ಊಹಿಸಿ ತಿಳಿಯಲು ಸಾಧ್ಯವಿಲ್ಲ. ಶ್ರೀಪರಮಾತ್ಮನ ಪ್ರತಿಗುಣ, ರೂಪ, ಅವತಾರ, ಕ್ರಿಯೆಗಳು ಪರಿಪೂರ್ಣ. ಜೀವರೂ ಚಿದಾನಂದಾತ್ಮರಾದರೂ, ಅವರ ಸ್ವರೂಪಗತ ಗುಣಗಳು ಸ್ವರೂಪಯೋಗ್ಯತೆಯ ಪರಿಮಿತಿಗೆ ಒಳಪಟ್ಟಿವೆ.

ಸರ್ವಜೀವರ ಸ್ವರೂಪದೇಹವು ಅತ್ಯಂತ ಸೂಕ್ಷ್ಮರೂಪದಲ್ಲಿರುವುದು. ಅಂತಹ ಸೂಕ್ಷ್ಮಸ್ವರೂಪದೇಹದಲ್ಲಿ ಸೂಕ್ಷ್ಮತರನಾಗಿ, ಶ್ರೀಪರಮಾತ್ಮನು ಅಂತರ್ಯಾಮಿಯಾಗಿ ಬಿಂಬನೆಂದೆನಿಸಿದ್ದಾನೆ. ಅಂತಯೇ ಜಡವಸ್ತುಗಳಲ್ಲಿ ಸೂಕ್ಷ್ಮರೂಪದಿಂದ ವ್ಯಾಪಕನಾಗಿದ್ದಾನೆ.

ಗಗನಚುಂಬಿತವಾದ ಪರ್ವತಗಳು, ವಿಶಾಲವಾಗಿ ಹರಡಿರುವ ಆಕಾಶ, ಅಪಾರವಾದ ಜಲರಾಶಿಯಾದ ಸಮುದ್ರ ಇತ್ಯಾದಿ ವಸ್ತುಗಳು ಪ್ರಕೃತಿಯಲ್ಲಿ ಮಹದ್ವಸ್ತುಗಳು. ಇಂತಹ ಮಹದ್ವಸ್ತುಗಳಲ್ಲಿ ಅವುಗಳಿಂದ ಮಹನ್ರೂಪದಿಂದ

ಆವರಣರೂಪವಾಗಿದ್ದಾನೆ. ಹಾಗೆಯೇ ಬ್ರಹ್ಮಾಂಡದ ಹೊರಗೆ ಬೃಹದ್ರೂಪ ದಿಂದ ಆವರ್ಕವಾಗಿದ್ದಾನೆ. ಇಂತಹ ಅಣು ಮತ್ತು ಮಹತ್ತುಗಳಲ್ಲಿ ವ್ಯಾಪಕ ನಾಗಿದ್ದರೂ, ತನ್ನ ಇರವನ್ನು ತೋರಗೊಡದೆ ಅವ್ಯಕ್ತನಾಗಿದ್ದಾನೆ. ಅಲ್ಪನಂತೆ ಅಣು ಮಹತ್ತುಗಳಲ್ಲಿ ವ್ಯಾಪಿಸಿದ್ದಾನೆ. ಅಲ್ಪನಂತೆ ತೋರುತ್ತಿದ್ದಾನೆಯೇ ಹೊರತು, ಸರ್ವೋತ್ಕೃಷ್ಟನಾದ ಶ್ರೀಪರಮಾತ್ಮನು ಎಂದೆಂದಿಗೂ ಅಲ್ಪನಲ್ಲ.

**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ**

ಎಂಬ ಗೀತಾವಚನಾನುಸಾರ ಎಲೈ ಅರ್ಜುನ! ಮಣಿ ಸಮೂಹಗಳು ಸೂತ್ರದಿಂದ ಪ್ರೋಣಿಸಲ್ಪಟ್ಟಿರುವಂತೆ, ನನ್ನಲ್ಲಿ ಸಮಸ್ತ ಜೀವಗಣಗಳೂ ಇವೆ ಎಂದು ಗೀತಾಚಾರ್ಯನ ಅಮೃತವಚನ ॥ ೭ ॥

## ಪದ್ಯ ೮

**ಮೂಲ**

**ಈ ಸುಷುಮ್ನಾದ್ಯಖಿಳ ನಾಡೀ**
**ಕೋಶ ನಾಭಿಮೂಲದಲಿ ವೃಷ**
**ಣಾಸನದ ಮಧ್ಯದಲಿ ಇಪ್ಪದು ತುಂದಿನಾಮದಲಿ ॥**
**ಆ ಸರೋಜಾಸನಮುಖರು ಮೂ**
**ಲೇಶನಾನಂದಾದಿ ಸುಗುಣೋ**
**ಪಾಸನೆಯ ಗೈವುತಲಿ ದೇಹದೊಳಗೆ ಇರುತಿಹರು ॥ ೮ ॥**

**ಅವತರಣಿಕೆ**

ಸುಷುಮ್ನಾದಿ ಸಮಸ್ತ ನಾಡೀವ್ಯಾಪದಲ್ಲಿ ಬ್ರಹ್ಮಾದಿ ದೇವತೆಗಳು ಶ್ರೀಪರಮಾತ್ಮನ ಜ್ಞಾನಾನಂದಾದಿ ಸುಗುಣೋಪಾಸನೆ ಮಾಡುತ್ತಾ, ಸ್ಥೂಲ ದೇಹಾದ್ಯಂತ ವಿದ್ಯಮಾನರಾಗಿದ್ದಾರೆಂದು ತಿಳಿಸುತ್ತಾರೆ.

## ಪ್ರತಿಪದಾರ್ಥ

ಈ = ಈ ಸ್ಥೂಲಶರೀರಗತ, **ಸುಷುಮ್ನಾದಿ** = ಪ್ರಧಾನನಾಡಿಯಾದ ಸುಷುಮ್ನಾನಾಡಿ ಮೊದಲಾಗಿ ವಜ್ರಿಕಾ, ಆರ್ಯಕಾ, ಪ್ರಕಾಶಿನೀ, ವೈದ್ಯುತೀ ಎಂಬ ನಾಡಿಗಳೂ ಸೇರಿ, **ಅಖಿಳ** = ಸಮಸ್ತವಾದ ೭೨,೦೦೦ ಸಂಖ್ಯಾಕವಾದ, **ನಾಡೀಕೋಶ** = ನಾಡಿಗಳ ಸಮೂಹವು, **ನಾಭಿ ಮೂಲದಲಿ** = ಹೊಕ್ಕಳಿನ ಕೆಳಭಾಗದಲ್ಲಿ, **ವೃಷಣಾಸನದ ಮಧ್ಯದಲಿ** = ವೃಷಣ ಆಸನಗಳೆಂಬ ಪ್ರದೇಶದ ಮಧ್ಯದಲ್ಲಿ, **ತುಂದಿನಾಮದಲಿ** = ತುಂದಿ ಎಂಬ ಹೆಸರಿನ ಗೆಡ್ಡೆಯು, **ಇಪ್ಪದು** = ವಿದ್ಯಮಾನವಾಗಿದೆ, ಆ **ಸರೋಜಾಸನಮುಖರು** = ಪೂರ್ವೋಕ್ತರಾದ ಕಮಲೋದ್ಭವರಾದ ಚತುರ್ಮುಖ ಬ್ರಹ್ಮದೇವರು ಮೊದಲಾದ, **ಮೂಲೇಶನ** = ನಾಡಿಗಳ ಉತ್ಪತ್ತಿಗೆ ಮೂಲಸ್ಥಾನದಲ್ಲಿ ಇರುವ ಮೂಲೇಶನಾಮಕ ಪರಮಾತ್ಮನನ್ನು, **ಆನಂದಾದಿ** = ಅಪ್ರಾಕೃತವಾದ ಅಪರಿಮಿತ ಜ್ಞಾನ, ಆನಂದಾದಿ, **ಸುಗುಣೋಪಾಸನೆಯ** = ದೋಷರಹಿತವಾದ ಲೋಕವಿಲಕ್ಷಣವಾದ ಮಂಗಳ ಗುಣಾವಗಳನ್ನು ಧ್ಯಾನ ದ್ವಾರ ಉಪಾಸನೆಯನ್ನು, **ಗೈವುತಲಿ** = ಮಾಡುತ್ತಾ, **ದೇಹದೊಳಗೆ** = ಈ ಸ್ಥೂಲ ಶರೀರಾದ್ಯಂತ, **ಇರುತಿಹರು** = ವಿದ್ಯಮಾನರಾಗಿದ್ದಾರೆ. ॥ ೮ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ನಾಡೀ ಉತ್ಪತ್ತಿಸ್ಥಾನ ಮೂಲೇಶನ ವಿಚಾರ ಹೇಳುತಾರೆ.

ಈ ವರ್ತಮಾನ ಸ್ಥೂಲದೇಹಗತ ಸುಷುಮ್ನಾನಾಡೀ, ಆದಿ ಶಬ್ದದಿಂದ ವಜ್ರಿಕಾ, ಆರ್ಯಕಾ, ಪ್ರಕಾಶಿನೀ, ವೈದ್ಯುತೀ ಎಂತ ನಾಲ್ಕು ತಿಳಿಯಬೇಕು. ಅಂತು ಐದು ನಾಡೀ ಸೇರಿ ಒಂದು ಸುಷುಮ್ನಾ ಎಂತ ನಾಲ್ಕು ತಿಳಿಯಬೇಕು. **ಸುಷುಮ್ನಾ ಪಂಚಪ್ರಭೇದನಿ** ಎಂತ ಹೇಳಿಯದೆ. ಇದೂ ಅಲ್ಲದೆ, ಅನ್ಯವಾದ ಸಮಸ್ತವಾದ ನಾಡಿಗಳ ಸಮೂಹವು ಇದು ಯಾವತ್ತೂ ನಾಭಿದೇಶದಲ್ಲಿ,

ನಾಭಿಗೆ ಕೆಳಗೆ ಇರತಕ್ಕ ಅಧೋಭಾಗವಾದ ಶಿಶ್ನ ಆಸನ ಇವೆರಡಕ್ಕೂ ಮಧ್ಯ ಪ್ರದೇಶದಲ್ಲಿ ಈ ಎರಡೂ ಸ್ಥಾನಗಳಿಂದ ಉತ್ಪತ್ತಿ. ಈ ವೃಷಣಾಸನ ಮಧ್ಯದಲ್ಲಿ ತುಂದಿ ಎಂತ ಕರಸತಕ್ಕ ಮಾಂಸದಗಡ್ಡೆ ಒಂದು ಇರೋದಾಗಿ ಅದೆ. ನಾಡೀ ಉತ್ಪತ್ತಿಗೆ ಮೂಲಸ್ಥಾನದಲ್ಲಿ ಇರತಕ್ಕ ಪರಮಾತ್ಮಗೆ ಮೂಲೇಶ ಎಂತ ಹೆಸರು. ಈ ಮೂಲೇಶ ಬ್ಯಾರೆ. ನಾಡೀ ಉತ್ಪತ್ತಿಗೂ, ನಾಡೀ ವಿಭಾಗಗಳಿಗೂ ಇವನೇ ಕಾರಣ. ನಾಡೀ ವಿಭಾಗಗಳ ಮಾಡಿ, ಆಯಾ ನಾಡಿಗಳಲ್ಲಿ ಅಂಶವಿಶೇಷದಿಂದ ಇದ್ದಾನೆ. ಇಂಥಾ ಮೂಲೇಶನ ಮೂಲಸ್ಥಾನದಲ್ಲೂ, ನಾಡಿಗಳಲ್ಲೂ ಪೂರ್ವೋಕ್ತರಾದ ಬ್ರಹ್ಮಾದಿ ತತ್ತ್ವೇಶರೇನು, ನಾಡೀ ಅಭಿಮಾನಿ ದೇವತೆಗಳೇನು ಇವರೇ ಮೊದಲಾದವರು, ಪರಮಾತ್ಮನ ಅಸದೃಶವಾದ ಜ್ಞಾನಾನಂದಾದಿ ಸುಗುಣೋಪಾಸನ ಮಾಡುತ್ತಾ, ದೇಹದೊಳಗೆ ಸರ್ವಪ್ರಾಣಿಗಳ ಸ್ಥೂಲದೇಹದ ಒಳಗೆ ಇರೋವರಾಗಿದ್ದಾರೆ.

**ವಿಶೇಷಾರ್ಥ**– ಮೇಲೆ ಹೇಳಿದ ತುಂದಿಯಲ್ಲಿ ಸುಷುಮ್ನಾದಿ ಪಂಚಭೇದ ನಾಡಿಗಳು ಉತ್ಪನ್ನವಾಗಿ ಶಿರಸ್ಸುವರೆಗೂ ವ್ಯಾಪಿಸಿ, ಅದರಲ್ಲಿ ಸುಷುಮ್ನಾ ಬ್ರಹ್ಮರಂಧ್ರದಲ್ಲೀನು, ಅದಕ್ಕೆ ಸುತ್ತ ನಾಲ್ಕು ನಾಡಿಗಳೂ ಇರೋದಾಗಿ ಅವೆ. ಇದೇವೇ ನಾಡಿ ಉತ್ಪತ್ತಿಗೆ ಮೂಲಸ್ಥಾನವು. ಈ ಸುಷುಮ್ನಾಕ್ಕೆ ನಾಭಿ ಪ್ರದೇಶದಿಂದ ಇಳಾ ಪಿಂಗಳಾ ನಾಡಿಗಳು ಎರಡು ಹೊರಟು, ಎರಡು ಮೂಗಿನ ದ್ವಾರಗಳ ಆಶ್ರಯ ಮಾಡಿ ಶ್ವಾಸೋಚ್ಛ್ವಾಸಕ್ಕೆ ಕಾರಣಗಳಾಗಿ ಅವೆ. ಈ ಇಳಾ ಪಿಂಗಳಾ ನಾಡಿಗಳಿಂದ ಶಾಖೋಪಶಾಖೆಗಳು ಹೊರಟು, ಎಪ್ಪತ್ತೆರಡು ಸಾವಿರ ನಾಡಿಗಳು ಆಗೋವಾಗಿ ಅವೆ. ಇದರ ವಿವರ ಪ್ರಮಾಣ

**ಏಕೋತ್ತರಶತಂ ನಾಡ್ಯಃ ಶರೀರೇಽಸ್ಮಿನ್ ಸಮಾಹಿತಾಃ |**
**ತತ್ರ ಪಂಚ ಪ್ರಧಾನಾಃ ಸ್ಯುಃ ಪಿಂಗಳೀಡಾ ಚ ನಾಡೀನೀ ||೧||**

**ಸುಷುಮ್ನಾ ವಜ್ರಿಕಾರ್ಖ್ಯ ಚ ಚತುರ್ದಿಕ್ಷು ಚ ಸಂಸ್ಥಿತಾಃ |**
**ಚತುಸ್ರಃ ಸಂಸ್ಥಿತಾ ಮಧ್ಯೇ ಸುಷುಮ್ನೈಕಾ ಪ್ರಧಾನತಃ ||೨||**

**ತಾಸಾಂ ಶತಂ ಶತಂ ಶಾಖಾಃ ಏಕೈಕಸ್ಯಾಃ ಪ್ರಕೀರ್ತಿತಾಃ |**
**ತತ್ರ ಸುಷುಮ್ನಾ ಶಾಖಾನಾಂ ಪ್ರತಿಶಾಖಾ ಶತಾಂತಿಮಾನ್ ||೩||**

**ಅರ್ಥ**—ನೂರೊಂದು ನಾಡಿಗಳು ಶರೀರದಲ್ಲಿ ಇರೋವಾಗಿ ಅವೆ. ಸುಷುಮ್ನಾನಾಡಿ ಒಂದು. ಈ ನಾಡಿ ಪಂಚಪ್ರಭೇದದಿಂದ ಒಂದು ನಾಡಿ ಎಂತ ಕರಸತದೆ. ಇದು ಮಧ್ಯನಾಡಿ. ಇದಕ್ಕೆ ಸುತ್ತ ಪ್ರಭೇದನಾಡಿಗಳು ನಾಲ್ಕು ನಾಡಿಗಳು ಇರೋವಾಗಿ ಅವೆ.

ಅವುಗಳ ಹೆಸರು—

೧. ವಜ್ರಿಕಾ -೨೫
೨. ಆರ್ಯಕಾ -೨೫
೩. ಪ್ರಕಾಶಿನೀ - ೫
೪. ವೈದ್ಯುತೀ -೨೫
೫. ಸುಷುಮ್ನಾ -೧
—
ಅಂತು ೧೦೧

ಈ ವಜ್ರಿಕಾದಿನಾಡಿಸಹಿತ ಇದು ಸುಷುಮ್ನಾಕ್ಕೆ ನಾಲ್ಕೂ ದಿಕ್ಕಿನಲ್ಲಿ ಇರತಕ್ಕ ನಾಡಿಗಳ ಶಾಖಾಗಳು ೧೦೦. ಇದಲ್ಲದೇ ಸುಷುಮ್ನಾ ಪಂಚಪ್ರಭೇದನಾಡಿಗೆ ಸುತ್ತಾ ಪ್ರತ್ಯೇಕವಾಗಿ ನಾಲ್ಕೂ ಕಡಿ ನಾಲ್ಕೂ ನಾಡಿಗಳು ಅವೆ. ಅವುಗಳ ಹೆಸರು ಎರಡು ಪ್ರಕಾರ ವಿಭಾಗವು. ಈ ವಿಭಾಗ ಪ್ರಮಾಣದಲ್ಲಿ ಅದೆ. ಅದರನ್ನ ಮುಂದೆ ಬರೆಯಲ್ಪಡುತ್ತದೆ.

೧. ಪಿಂಗಳಾ ೨೫
೨. ಇಡಾ ೨೫
೩. ವಜ್ರಿಕಾ ೨೫
೪. ಆರ್ಯಕಾ ೨೫
—
ಅಂತು ೧೦೦

ಪಿಂಗಳಾದಿ ಸಹಿತ ಈ ಪ್ರಕಾರ ಪ್ರತಿ ನಾಡೀಗೂ ಶಾಖಾಗಳು ಬೆಳೆದು ಅಂತೂ ನೂರು ಶಾಖಾಗಳು ಆಗೋವಾದವು. ನೂರಕ್ಕೆ ಪ್ರತಿನಾಡೀ ಒಂದಕ್ಕೆ ನೂರು ಪ್ರಕಾರ ಬೆಳೆದು ಹತ್ತುಸಾವಿರ ಆಯಿತು. ಅಂತು ಮೊತ್ತನಾಡಿಗಳು ಹತ್ತುಸಾವಿರ + ೧.೦ = ೧೦,೧೦೦ ನಾಡಿಗಳು.

**ಪ್ರಮಾಣಕ್ಕೆ ಅರ್ಥ**—ಏಕೋತ್ತರ ಶತಂ ನಾಡ್ಯಃ-ನೂರಾ ಒಂದು ನಾಡಿಗಳು, ಶರೀರೇsಸ್ಮಿನ್ ಸಮಾಹಿತಾಃ-ಈ ಮನುಷ್ಯರ ಸ್ಥೂಲದೇಹದಲ್ಲಿ ಕೂಡಿಕೊಂಡು ಇರೋವಾಗಿ ಅವೆ. ತತ್ರ-ಈ ನೂರಾ ಒಂದು ನಾಡಿಗಳಲ್ಲಿ, ಪಂಚ ಪ್ರಧಾನಾಃ ಸ್ಯುಃ-ಐದು ನಾಡಿಗಳು ಪ್ರಧಾನ ನಾಡಿಗಳು. ಈ ಐದಕ್ಕೆ ಮತ್ತು ನಾಲ್ಕು ದಿಕ್ಕಿನಲ್ಲಿ, ಪಿಂಗಳಾ-ಪಿಂಗಳಾ ನಾಡಿ, ಇಡಾ ಚ-ಇಡಾನಾಡಿ, ನಾಡೀನೀ

—ಈ ಎರಡು ನಾಡಿಗಳೇನು, ಇವಲ್ಲದೆ, ವಜ್ರಿಕಾ-ವಜ್ರಿಕಾ ನಾಡೀನೂ, ಆರ್ಕ್ಯ-ಆರ್ಕ್ಯಕಾನಾಡೀನೂ, ಈ ನಾಲ್ಕೂ ನಾಡಿಗಳು, ಸುಷುಮ್ನಾ—ಪಂಚಭೇದಯುಕ್ತವಾದ ಸುಷುಮ್ನಾ ನಾಡೀಗೆ, ಚತುರ್ದಿಕ್ಷು-ನಾಲ್ಕು ದಿಕ್ಕುಗಳಲ್ಲಿ, ಸಂಸ್ಥಿತಾಃ-ಇರೋವಾಗಿ ಅವೆ. ವಜ್ರಿಕಾರ್ಕ್ಯಕಾನಾಡಿ ಪ್ರತ್ಯೇಕ ಪ್ರತ್ಯೇಕವಾಗಿ ಎರಡು ವಿಧದಿಂದ ಇರೋವಾಗಿ ಅವೆ. ಅದದು ಬ್ಯಾರೆ ಅಂತ ಅರ್ಥ. ಚತುಸ್ರಃ ಸಂಸ್ಥಿತಾಃ—ಪ್ರಥಮದಲ್ಲಿ ಹೇಳಿದ ವಜ್ರಿಕಾ, ಆರ್ಕ್ಯಕಾ, ಪ್ರಕಾಶಿನೀ, ವೈದ್ಯುತಿ ನಾಲ್ಕು ದಿಕ್ಕಿನಲ್ಲಿ ನಾಲ್ಕು ನಾಡಿಗಳು ವಿದ್ಯಮಾನಗಳಾಗಿ, ಮಧ್ಯೇ - ಮಧ್ಯಭಾಗದಲ್ಲಿ, ಸುಷುಮ್ನಾಖ್ಯಾ-ಸುಷುಮ್ನಾನಾಡಿ ಒಂದೇ, ಪ್ರಧಾನತಃ—ಪ್ರಧಾನ ವೆಶಿಯಿಂದ ಇರೋದಾಗಿ ಅದೆ. ಅಂತು ಎರಡು ಪ್ರಕಾರ ಸುಷುಮ್ನಾ ಅನ್ಯನಾಡೀಗಳಿಂದಾ ವೃತವಾಗಿದೆ. ತಾಸಾಂ-ಇಡಾ, ಪಿಂಗಳಾದಿ ನಾಡಿಗಳಿಗೆ ಹಾಂಗೆ ಸುಷುಮ್ನಾ ಪಂಚಪ್ರಭೇದಿನಿ ಎಂಬ ಐದು ನಾಡಿಗಳ ಒಳಗೆ ಸುಷುಮ್ನಾನಾಡಿ ವ್ಯತಿರಿಕ್ತ ನಾಲ್ಕು ನಾಡಿಗಳಿಗೆ. ಏಕೈಕಸ್ಯಾಃ—ಒಂದೊಂದು ಭಾಗಗತ ನಾಲ್ಕು ನಾಲ್ಕು ನಾಡಿಗಳಿಗೆ, ಶತಂ ಶತಂ ಶಾಖಾಃ—ಪ್ರತಿ ನಾಲ್ಕು ಶಾಖಾಕ್ಕೆ ಒಂದೊಂದು ಶಾಖಾಗಳಿಗೆ ಇಪ್ಪತ್ತೈದು ಶಾಖಾಗಳ ಪ್ರಕಾರ ಬೆಳೆದು ನೂರು ನೂರು ಶಾಖಾಗಳು ಆಗೋವಾದವು. ಎರಡಕ್ಕೂ ಸೇರಿ ಇನ್ನೂರು ಶಾಖಾಗಳು. ಪ್ರಕೀರ್ತಿತಾಃ—ಈ ಪ್ರಕಾರ ಹೇಳೋದಾಗತದೆ. ಎರಡು ಪ್ರಕಾರ ಸುಷುಮ್ನಾ ಶಾಖಾಗಳು ಹೇಳಿದಂತಾಯಿತು. ಹ್ಯಾಂಗೆಂದರೆ ಪ್ರಥಮಥಃ ನೂರಾಒಂದು ಹೇಳಿದ್ದು, ಎರಡನೇ ಸಾರಿ ವಿಭಾಗ ಮಾಡಿ ಹೇಳಿದ್ದು ಒಂದು. ಅಂತು ಎರಡು ಪ್ರಕಾರ ಎರಡಕ್ಕೂ ಶಾಖಾ ವಿಭಾಗ ಒಂದೇ ಆದ್ದರಿಂದ ತಾಸಾಂ ಎಂಬೋ ಶಬ್ದದಿಂದ ವಿಭಾಗ ವಿಚಾರ ಎರಡಕ್ಕೂ ಗ್ರಾಹ್ಯ. ತತ್ರ—ಆ ಎರಡು ಪ್ರಕಾರ ವಿಭಾಗದಲ್ಲಿ, ಸುಷುಮ್ನಾ ಶಾಖಾಯಾಂ—ಎರಡನೇ ಸಾರಿ ಹೇಳಿದ ಸುಷುಮ್ನಾ ಶಾಖಾಗಳು ನೂರಕ್ಕೆ, ಪ್ರತಿ ಶಾಖಾ ಒಂದಕ್ಕೆ ಶಾಖಾ ಬೆಳೆದು, ಶತಾಂತಿಮಾ-ನೂರು ಶಾಖಾದಿಂದ ಅಧಿಕವಿಲ್ಲದೆ ಹತ್ತುಸಾವಿರವಾಯಿತು. ಹತ್ತುಸಾವಿರ ಅಂತ್ಯದಿಂದ ಯುಕ್ತವಾಗಿದೆ. ಆದ್ಯಂತ ಮೂಲಶಾಖಾಗಳು ನೂರು. ಉಪಶಾಖಾಗಳು ಹತ್ತುಸಾವಿರ, ಅಂತು ೧೦,೧೦೦ ಆಗತದೆ. ತತ್ರ ಸುಷುಮ್ನಾ ಶಾಖಾನಾಂ ಎಂಬ ವಚನದಿಂದ ಎರಡೂ ಏಕೆ ಗ್ರಾಹ್ಯ ಮಾಡಬಾರದು ಎಂದರೆ, ಮುಂದೆ ವಿಭಾಗ ಎರಡನೇದಕ್ಕೆ ಮಾತ್ರ ಹೇಳಿದ್ದಾರೆ, ಮೊದಲನೇದಕ್ಕೆ ಹೇಳಲಿಲ್ಲ. ಎರಡೂ ಗ್ರಾಹ್ಯ ಮಾಡಿದರೆ,

ನಾಡಿಗಳು ಒಂದಕ್ಕೆ ಎರಡಾಗಿ ಎಪ್ಪತ್ತೆರಡು ಸಾವಿರಕ್ಕೆ ದ್ವಿಗುಣವಾಗೋವಾಗ ತ್ತವೆ. ಆದ್ದರಿಂದ ಒಂದಕ್ಕೆ ವಿಭಾಗ ಎಂತ ಸಿದ್ಧವು. ಪ್ರಥಮ ನೂರಾಒಂದು ನಾಡಿ, ಅದು ಜೀವನ ಪ್ರಮಾಣ ಮಾರ್ಗ ನಾಡಿಗಳು, ಅದರ ವಿಭಾಗವಿಲ್ಲ.

**ಪ್ರವಾಣ–**

**ನವಶಾಖಾಶತಾನಾಂ ಚ ಅಷ್ಟಶಾಖಾ ಷಡ್ವೈವ ತು ।**
**ಷಣ್ಣವತಿ ಶತಾನಾಂ ತು ದಶಶಾಖಾ ಇಮೇ ಮತಾಃ ॥ ೪ ॥**

**ದ್ವಾಸಪ್ತತಿಂ ಚ ನಾಡೀನಾಂ ವಿಭಾಗೋ ವೇದ ತತ್ತ್ವತಃ ।**
**ಸ ಏವ ಭಿಷಜಾಂ ಶ್ರೇಷ್ಠೋ ಲಕ್ಷಣಾನಿ ನಿಬೋಧಯೇತ್ ॥ [illegible] ॥**

ಹತ್ತು ಸಾವಿರದ ನೂರಾ ಒಂದು ಶಾಖಾಗಳಿಗೆ ಉಪಶಾಖಾಗಳು ಬೆಳೆದು ಎಲ್ಲಾ ಸೇರಿ ಎಪ್ಪತ್ತೆರಡು ಸಾವಿರ ಆಗತದೆ ಎಂದು ಹೇಳತಾರೆ.

**ಶತಾನಾಂ ಚ ನವಶಾಖಾ** ೧೦೦x೯=೯೦೦, ನೂರಕ್ಕೆ ೯ ರ ಪ್ರಕಾರ ಬೆಳದದ್ದು.

**ಅಷ್ಟ ಶಾಖಾ** ೩೦೦x೮=೨,೪೦೦ ಮುನ್ನೂರಕ್ಕೆ ೮ ರಂತೆ ಪ್ರಕಾರ ಬೆಳದದ್ದು

**ಷಣ್ಣವತಿ ಶತಾನಾಂ ತು**
**ಷಡ್ವೈವತು** ೯,೬೦೦x೬=೫೭,೬೦೦, ೯೬ ನೂರಕ್ಕೆ ೬ ರ ಬೆಳದದ್ದು

**ದಶ ಶಾಖಾ** ೧೦೦x೧೦=೧,೦೦೦, ನೂರಕ್ಕೆ ೧೦ ರ ಪ್ರಕಾರ ಜೆಳವದ್ದು.

ಅಂತು ೧೦,೧೦೦ + ೬೧,೯೦೦ = ೭೨,೦೦೦
ಪ್ರಥಮದಲ್ಲಿ ಸುಷಮ್ನಾ ವಿಭಾಗ ಮಾಡಿದ್ದು ೧೦೧

ಅಂತು ಘೊತ್ತ ಮಾಡಿ ೭೨,೧೦೧

ಇಮೇ ಮತಾಃ = ಈ ವಿಭಾಗ ಸಮ್ಮತವಾದದ್ದು. ದ್ವಾಸಪ್ತತಿಂ ಚ ನಾಡೀನಾಂ = ಎಪ್ಪತ್ತೆರಡು ಸಾವಿರ ನಾಡೀಗಳಿಗೆ, ತತ್ತ್ವತಃ = ದೇಹತತ್ತ್ವದೆಶೆಯಿಂದ, ವೇದ– ತಿಳಿಯೋಪನಾಗಬೇಕು. ಸ ಏವ ಭಿಷಜಾಶ್ರೇಷ್ಠಃ = ಅವನೇವೇ ವೈದ್ಯಶ್ರೇಷ್ಠನಾದವನು, ಲಕ್ಷಣಾನಿ ನಿಬೋಧಯೇತ್ = ಅವನೇವೇ ರೋಗ ಲಕ್ಷಣ ತಿಳಿಕೋತಕ್ಕವ. ಈ ಪ್ರಕಾರ ನಾಡೀಕಲ್ಪಲತಾದಲ್ಲಿ ಹೇಳತದೆ ॥ ೮ ॥

**ಭಾವಪ್ರಕಾಶಿಕೆ**

ಸುಷಮ್ನಾನಾಡಿಯೇ ಪ್ರಧಾನವಾಗಿ ಉಳ್ಳ ೭೨ ಸಹಸ್ರ ನಾಡೀಗಳೂ (ನಾಭಿಗೆ ಕೆಳಗೆ ಆಸನದವರೆಗೂ ಇರುವ ಸ್ಥಾನಕ್ಕೆ ತುಂದಿ ಎಂದು ಹೆಸರು) ಆ ತುಂದಿಯ ಮೂಲಸ್ಥಾನದಲ್ಲಿ, ಮೇಲೆ ಹೇಳಿದ ಸುಷುಮ್ನ ಮೊದಲಾದ ಪ್ರಧಾನ ನಾಡಿಗಳೂ ಸೇರಿ, ೭೨,೧೦೧ ನಾಡೀಗಳಿಗೆ ಕೋಶಭೂತವಾದ ಒಂದು ಗ್ರಂಥಿಯು ಇರುವುದು. ಅದರಲ್ಲಿ ಮೂಲೇಶನಾಮಕ ಪರಮಾತ್ಮನು ವಾಸವಾಗಿರುವನು. ಅಲ್ಲಿ ಬ್ರಹ್ಮಾದಿ ತತ್ತ್ವೇಶರು ಆ ಮೂಲೇಶನ ಅನಂದಾದಿ ಗುಣಗಳನ್ನು ಉಪಾಸನೆ ಮಾಡುತ್ತಾ ವಾಸಮಾಡುತ್ತಿರುವರು.

**ವಿಶೇಷಾರ್ಥ**

ಈ ನಾಡಿಯನ್ನು ಹಿಂದೆ ೯ನೆಯ ಸಂಧಿಯ ೧೭ನೆಯ ಪದ್ಯದ ಮೊದಲು ಕೆಲವು ಪದ್ಯಗಳವರೆಗೂ ದಾಸರಾಯರು ವಿವರಿಸಿರುವರು. ಆ ಪ್ರಕರಣದ ವ್ಯಾಖ್ಯಾನದಲ್ಲಿ ಪ್ರಮಾಣ ಸಹಿತ ಸುಷುಮ್ನಾನಾಡಿಯ ಪ್ರಭೇದಗಳನ್ನು ಬರೆದಿದೆ. ಇನ್ನೂ ಹೆಚ್ಚಿನ ಭಾಗಗಳು ಇಲ್ಲಿ ಬರೆದಿವೆ. ತುಂದಿ ಎಂಬ ಹೆಸರುಳ್ಳ ವೃಷಣದ ಬುಡದಲ್ಲಿರುವ ಒಂದು ಗೆಡ್ಡೆಯು ಈ ನಾಡಿಗಳಿಗೆ ಮೂಲಾಧಾರವು. ಅದರಲ್ಲಿ ಪ್ರಧಾನ ನಾಡಿಗಳು ೧೦೧. ಅವರಲ್ಲಿಯೂ ಪ್ರಧಾನವಾದುವು ೫ ನಾಡಿಗಳು. ಅವುಗಳ ವಿವರ—ಮಧ್ಯದಲ್ಲಿರುವುದು ಸುಷುಮ್ನಾ ನಾಡಿಯು. ಇದರ ೪ ದಿಕ್ಕುಗಳಲ್ಲಿ ಇಡಾ, ಪಿಂಗಳ, ವಜ್ರಿಕಾ, ಧಾರಿಣೀ ಎಂಬ ೪ ನಾಡಿಗಳಿರುವುವು. ಈ ನಾಲ್ಕು ನಾಡಿಗಳಲ್ಲಿ ಒಂದೊಂದು ೨೫ ರಂತೆ ಕವಲೊಡದು, ೨೫×೪ = ೧೦೦ ಆಗಿವೆ. ಮಧ್ಯನಾಡಿ ೧. ಅಂತು ೧೦೧. ಈ ನಾಡಿಗಳ ಒಂದೊಂದರಿಂದಲೂ ಶಾಖಾಗಳು ಹುಟ್ಟಿರುವುವು, ಒಟ್ಟು ೧೦೦×೧೦೦ = ೧೦,೦೦೦ (ಹತ್ತುಸಾವಿರದ

ನೂರು) ಆದವು. ಇವುಗಳಲ್ಲಿ ೧೦೦ ನಾಡಿಗಳು ಒಂದೊಂದರಲ್ಲಿ ೧೦ ಶಾಖೆಯುಳ್ಳದ್ದಾಗಿಯೂ, ಮತ್ತೊಂದು ನೂರು ನಾಡಿಗಳು ೯ ಶಾಖೆಗಳಿಂದ ಕೂಡಿರುವುದಾಗಿಯೂ, ೩೦೦ ನಾಡಿಗಳು ೮ ಶಾಖೆಯುಳ್ಳದ್ದಾಗಿಯೂ, ಉಳಿದ ೯೬,೦೦೦ ನಾಡಿಗಳು ೬ ಶಾಖೆಗಳುಳ್ಳವಾಗಿಯೂ ಇರುವುವು.

| | | | | |
|---|---|---|---|---|
| ಅಂದರೆ, | ೧ | ಮೂಲ ನಾಡಿಗಳು | | = ೧೦,೦೦೦ |
| ಇದರಲ್ಲಿ | ೨ | ೧೦ ಶಾಖಾ ನಾಡಿಗಳು | = ೧೦೦x೧೦ | = ೧,೦೦೦ |
| | ೩ | ೯ ಶಾಖಾ ನಾಡಿಗಳು | = ೧೦೦x೯ | = ೯೦೦ |
| | ೪ | ೮ ಶಾಖಾ ನಾಡಿಗಳು | = ೩೦೦x೮ | = ೨,೪೦೦ |
| | ೫ | ೬ ಶಾಖಾ ನಾಡಿಗಳು | = ೯,೬೦೦x೬ | = ೫೭,೬೦೦ |
| | | | ನಾಡಿಗಳ ಮೊತ್ತ | ೭೨,೦೦೦ |

ಇವುಗಳಿಗೆ ಮೂಲಭೂತವಾದ ನಾಡಿಗಳು ೧೦೧. ಅಂತು ೭೨,೦೦೦ + ೧೦೧ = ೭೨,೧೦೧ ನಾಡಿಗಳಾಯಿತು. ಇದಕ್ಕೆ ಆಧಾರವಾಗಿ ಶ್ರೀವಿಜಯದಾಸರ ಸುಳಾದಿ ಇರುವುದು–

**ಸುಳಾದಿ**

**ಹತ್ತೈದು ವಿಂಶತಿ ಮೇಲೆರಡು ಸಾವಿರ ।**
**ಮತ್ತೆ ನೂರೊಂದು ನಾಡಿ ಮತ್ತೆ ನೂರೊಂದು ನಾಡಿ ।**
**ದೇಹದೊಳಗೆ ತತ್ತ್ವಾಳಿಸುತ್ತಿಪ್ಪದು ಬಲಸನ್ನಾವಿಡಿದು ।**
**ಇನಿತು ಕೇಳುವುದು ನಾಡಿಗಳ ಶಾಖಾ ಹತ್ತು ।**
**ಹತ್ತೊಂದು ಮುಖ್ಯ ನಾಡಿಯು ನೂರಾರಿಂದ ಬಿತ್ತರಿಸಿ ಗುಣಿಸಿ ।**
**ಆಯುತಾ ನೂರು ಸತ್ಯನಾಯಿತು ನೋಡೆ, ಇದಕೆ ವಿವರ ಉಂಟು ।**
**ಉತ್ತಮಗಣದಾವರು ತಿಳಿಯಬೇಕು ।**
**ಹತ್ತು ಹತ್ತು ಗುಣಿಸಿ ಅದರನ್ನು ಅಷ್ಟರಿಂದ ।**
**ಮತ್ತೆ ಹೆಚ್ಚಿಸಲು ಸಾವಿರವಹುದು ।**
**ಇತ್ತ ಮುಂದಕೆ ನೂರು ಇಟ್ಟುಕೊಂಡು ಒಂ ।**

ಭೆತ್ತಾರಿಂದ ಗುಣಿಸೆ ಒಂಭೆತ್ತುನೂರು ।
ಸುತ್ತಾದೀರಿನ್ನು ತ್ರಯನೂರು ಎಂಟಾರಿಂದ ।
ಚಿತ್ತಾದಲಿ ಗುಣಿಸೆ ಅದುದಿದಕೆ ಇಪ್ಪತ್ತು ನಾಲ್ಕುನೂರು ।
ಆ ತರುವಾಯ ಒಂಭತ್ತು ಸಾವಿರದಾರುನೂರು ।
ಅರ್ಥಿಯಿಂದಲಿ ಇದೆ ಆರಾರಿಂದಾಲಿ ಗುಣಿಸೆ ।
ಹತ್ತೈದು ಏಳು ಸಾವಿರ ನೂರಾರು ।
ಇತ್ತಂಡದಿಂದ ಪೂರ್ವೋತ್ತರ ನೋಡೆ ಅರ ।
ವತ್ತೊಂದು ಸಾವಿರದೆಂಟೊಂದು ।
ಮತ್ತೆ ಇದರ ಕೆಳಗೆ ಮೇಲಿನ ಆಯುತಾನೂರು
ಇತ್ತಾರೆ ಸಪ್ತೆರಡಾಯುತನಾಡಿಯು ನಿತ್ಯವೇ ಸರಿ ।
ಇದಕೆ ನೂರೊಂದು ಮುಖ್ಯ ನಾಡಿ ತತ್ತಾಳಗೊಳದೆ ಕೂಡಿಸಲು ।
ಮೊತ್ತ ಉಳ್ಳದ್ದಕ್ಕೆ ಹೆಚ್ಚುನಾದಿಷ್ಟೇ ನಾಡಿಗಳು ।
ಮರ್ತ್ಯಲೋಕದ ಜನರು ಗುಣಿಸಿದರು
ಅತ್ಯಂತ ಮಹಿಮ ನಮ್ಮ ವಿಜಯ ವಿಠಲರೇಯಾ
ಸ್ತೋತ್ರ ಮಾಡಿದವರ ಮನಕೆ ಇಂತು ತಿಳಿಪುವ ॥

ಎಂಬೀ ಸುಳಾದಿಯಲ್ಲಿ ಹೇಳಿರುವ ಅರ್ಥವನ್ನೇ ಮೇಲೆ ಬರೆದಿರುವುದರಿಂದ, ಈ ಸುಳಾದಿಗೆ ಬೇರೆ ಅರ್ಥ ಬರೆಯಬೇಕಾಗಿಲ್ಲ. ಇನ್ನೂ ಇದಕ್ಕೆ ಆಧಾರಗಳು ಷಟ್‌ಪ್ರಶ್ನೋಪನಿಷತ್ತಿನ ಭಾಷ್ಯದಲ್ಲಿಯೂ, ನಾಡೀ ಕಲ್ಪಲತಾ ಎಂಬ ಗ್ರಂಥಗಳಲ್ಲಿಯೂ ಉಕ್ತವಾಗಿವೆ ॥ ೮ ॥

೩. ಭಾವದರ್ಪಣ

ಈ ಸುಷುಮ್ನಾ ಇತಿ ॥ ನಾಡಿಕೋಶ ಎಂದರೆ, ಸಮೂಹ ಎಂಬರ್ಥ. ೭೨,೦೦೦ ನಾಡಿಗಳಿಗೆ ಆಧಾರಸ್ಥಾನ ಹೇಳುತ್ತದೆ ವೃಷಣಾಸನೇತಿ. ವೃಷಣಕ್ಕೂ ಗುದಕ್ಕೂ ಮಧ್ಯದಲ್ಲಿ ಎರಡಂಗುಲ ಉನ್ನತ ಚದುರ್ರಂಗಲ ವಿಸ್ತಾರಉಳ್ಳ ಒಂದು

ಗಡ್ಡೀ ಅದೆ. ಆ ಗಡ್ಡೀ ಪ್ರಾರಂಭಿಸಿ ಶಿರ ಪರ್ಯಂತ ಲೇಶವಕ್ರ ಇಲ್ಲದೆ ಶಲಾಕವತ್ ಮಧ್ಯದೇಹದಲ್ಲಿ ಬ್ರಹ್ಮನಾಡೀ ಎಂಬೋದದೆ. ಈ ನಾಡೀವಿವರ ಸೂಕ್ಷ್ಮದಿಂದ ತೋರಿಸುತ್ತದೆ.

ಈ ಬ್ರಹ್ಮನಾಡಿಗೆ ಪೂರ್ವಕ್ಕೆ ಪ್ರಕಾಶಿನೀ, ದಕ್ಷಿಣಕ್ಕೆ ವೈದ್ಯುತಾ, ಪಶ್ಚಿಮಕ್ಕೆ ವಜ್ರಿಕಾ, ಉತ್ತರಕ್ಕೆ ಆರ್ಯಕಾ ಹೀಗೆ ಐದು ನಾಡೀ ಸೇರಿ ಸುಷುಮ್ನಾ ನಾಡಿ ಎಂದು ಕರೆಸಿಕೊಳ್ಳುತ್ತದೆ. ಈ ವಿಷಯದಲ್ಲಿ ಪ್ರಮಾಣ–

**ಅಸ್ಮಿನ್ ಸ್ಥೂಲಶರೀರೇ ಚ ವೃಷಣಾಸನಯೋರಪಿ ।**
**ಮಧ್ಯೇ ಕಂದಂ ವಿಜಾನೀಯಚ್ಚತುರ್ಗಳಂ ದ್ವಯಂಗುಲೋನ್ನತಂ ।**
**ಚತುರಂಗುಲ ವಿಸ್ತಾರಂ ದೇಹಾಧರಂ ಮಹತ್ತರಂ ।**
**ಮೂಲಾಧಾರಂ ಸಮಾರಭ್ಯ ತ್ವಾಮೂರ್ಧಾನ ಮ್ಮಿದಂ ಸ್ಥಿತಾ ।**
**ಮಧ್ಯೇ ಸುಷುಮ್ನಾ ವಿಜ್ಞೇಯ ವಜ್ರಿಕಾರ್ಯಪ್ರಕಾಶಿನೀ ।**
**ವೈದ್ಯುತೋ ಬ್ರಹ್ಮನಾಡೀ ತು ಸೈವ ಪಂಚಪ್ರಭೇದಿನೀ ।**
**ಪೃಷ್ಟವಾಮಾಗ್ರದಕ್ಷಾಂತರ್ಭೇದಾಸ್ತೇಷು ।........।**

—ಇತಿ ತಂತ್ರಸಾರೋಕ್ತೇಃ ॥

ಈ ಸುಷುಮ್ನಾನಾಡಿಯೇ ಐದು ಹೆಸರು ಉಳ್ಳದ್ದು ಎಂದು ಕೆಲವರು ಹೇಳುತ್ತಾರೆ, ಐದು ಭೇದವುಳ್ಳದ್ದು ಎಂದು ಕೆಲವರು ಹೇಳುತ್ತಾರೆ. ಈ ಸಂಶಯ ಬಿಡಿಸೋ ಉದ್ದಿಶ್ಯ ಪುರಂದರದಾಸರಾಜರು ಸುಳಾದಿ ಮಾಡಿರುತ್ತಾರೆ. ಅದೇನೆಂದರೆ, ಸುಳಾದಿ—

ಕಂದದಿ ಪೊರಟಂಥ ಬ್ರಹ್ಮನಾಡಿಗೆ ಪೂರ್ವ
ಸುಂದರ ಪ್ರಕಾಶಿನೀ ವೈದ್ಯುತಾ ದಕ್ಷಿಣಕ್ಕೆ
ಪೊಂದಿದೆ ಪಶ್ಚಿಮಕ್ಕೆ ವಜ್ರಿಕಾನರವೈಯ್ಯಾ
ನಿಂದಿದೆ ಉತ್ತರಕ್ಕೆ ಆರ್ಯಕವೆಂದು ತಿಳಿ
ಅಂದವಾಗಿಪ್ಪ ನಾಡೀಪಂಚಕ ಸೇರಿಕೊಂಡು

ಒಂದೇ ಸುಷುಮ್ನಾವೆಂದು ಹೆಸರು ಪಡೆದಿಹದ್ದೈಯ್ಯಾ
ಸಂದೇಹ ಬಿಡದಿರು ನಿಶ್ಚಯವೆಂದು ತಿಳಿಯೋ
ಇಂದಿರಾಪತಿ ನಮ್ಮ ಪುರಂದರಾ ವಿಠ್ಠಲನು
ಎಂದೆಂದಿಗೂ ಬಿಡದೆ ಸಲಹುವ ಕಂಡೆಯಾ ನಿನ್ನ ॥

ಎಂದು ನಾಡೀಪ್ರಕರಣ ಸುಳಾದಿಯಲ್ಲಿ ಹೇಳಿದ್ದಾರೆ. ಆದ್ದರಿಂದ ಪಂಚನಾಡೀ ಶರೀರಕ್ಕೆ ಸುಷುಮ್ನಾನಾಡೀ ಎಂಬೋ ನಾಮ ಸಿದ್ಧ. ಏತಾದೃಶ ಸುಷುಮ್ನಾಕ್ಕೆ ಪೂರ್ವಕ್ಕೆ ನಂದಿನೀ ಎಂಬ ನಾಡೀ, ದಕ್ಷಿಣಕ್ಕೆ ಪಿಂಗಳಾ, ಪಶ್ಚಿಮಕ್ಕೆ ವಜ್ರಿಕಾ, ಉತ್ತರಕ್ಕೆ ಇಡಾನಾಡೀ, ಏವಂ ರೀತ್ಯಾ ಚತುರ್ದಿಕ್ಕಿಗೂ ನಾಡಿಗಳು ಇರುತ್ತವೆ. ಇದಕ್ಕೆ ಶಾಖಾ ಉತ್ಪತ್ತಿ ಕ್ರಮವೇನೆಂದರೆ, ಸುಷುಮ್ನಾನಾಡಿಯಿಂದ ನೂರುನಾಡಿಗಳೂ ಹುಟ್ಟಿ ಕರಣಗಳಲ್ಲಿ ವ್ಯಾಪಿಸಿಕೊಂಡಿವೆ. ಈ ಮೇಲ್ಕಂಡ ದಕ್ಷಿಣ ದಿಕ್ಕಿನಲ್ಲಿದ್ದ ಪಿಂಗಳಾನಾಡಿಯಿಂದ ಐವತ್ತು ಪ್ರಧಾನನಾಡಿಗಳು ಹುಟ್ಟಿ ಅದರಲ್ಲಿ ಒಂದೊಂದಕ್ಕೆ ನೂರುನಾಡೀ ಪ್ರಕಾರ ಐದುಸಾವಿರ ನಾಡಿ ಉತ್ಪತ್ತಿ ಆಯಿತು. ಇದಕ್ಕೆ ಮಾತೃನಾಡಿ ಐವತ್ತು ಅಂತು ಐದುಸಾವಿರದ ಐವತ್ತು ಆಯಿತು. ಪುನಃ ಇದರಿಂದ ಉತ್ಪತ್ತಿ ಆದ ವಿವರ ಮಾಡದೆ ಸುಬುದ್ಧಿಗಳು ಗ್ರಹಿಸತಕ್ಕದ್ದೆಂದು ಕೊಡುತ್ತೇನೆ–

| | |
|---|---|
| ಮೂಲನಾಡೀ ಪಿಂಗಳಾ | ೧ |
| ಇದಕ್ಕೆ ಉತ್ಪತ್ತಿ ಆದದ್ದು | |
| ಶಾಖಾನಾಡಿ | ೫೦ |
| ಅಂತು | ೫೦ |
| ಮೇಲೆ ಕಂಡದ್ದರಲ್ಲಿ ಒಂದೊಂದಕ್ಕೆ ನೂರು ನಾಡಿಯಂತೆ ಉತ್ಪತ್ತಿಯಾದ ಶಾಖಾನಾಡಿಗಳು | ೧೦೦ |
| ಅಂತು | ೫೦೦೦ |
| ಇದಕ್ಕೆ ಮಾತೃನಾಡೀ ಮೇಳನ ಮಾಡತಕ್ಕದ್ದು | ೫೦ |
| ಅಹತ್ಯನಾಡಿಗಳು | ೫೦೫೦ |

ಇದರಲ್ಲಿ ಪುನಃ ಉತ್ಪತ್ತಿ ಆದ
ವಿವರ ಹೇಳುತ್ತದೆ.

| | | | | |
|---|---|---|---|---|
| ನಾಡೀ ೫೦ಕ್ಕೆ | ೧೦ರ | ಪ್ರಕಾರ | ೫೦೦ |
| " ೫೦ಕ್ಕೆ | ೯ರ | " | ೪೫೦ |
| " ೧೫೦ಕ್ಕೆ | ೮ರ | " | ೧೨೦೦ |
| " ೪೮೦೦ಕ್ಕೆ | ೬ರ | " | ೨೮೮೦೦ |
| ೫೦೫೦ | | | ೩೦,೯೫೦ |
| ಇದಕ್ಕೆ ಮೂಲನಾಡಿ ಮೇಳನ ಮಾಡತಕ್ಕದ್ದು | | | ೫೦೫೦ |
| ಅಂತು ಒಟ್ಟು ನಾಡಿಗಳು | | | ೩೬,೦೦೦ |

ಈ ರೀತ್ಯಾ ಉತ್ತರ ದಿಕ್ಕಿನಲ್ಲಿ ಇರುವ ಇಡಾನಾಡಿಗೆ ಹೀಗೆ ಉತ್ಪತ್ತಿಯಾಗಿ ಮೂತ್ತಾರುಸಾವಿರ ನಾಡೀ ಆಗಿರುತ್ತದೆ. ಇದರಲ್ಲಿ ಬಲಪಾರ್ಶ್ವದಲ್ಲಿ ಇರೋದು ಪುರುಷನಾಡೀ ಎಂತಲೂ, ಎಡಭಾಗದಲ್ಲಿರೋದು ಸ್ತ್ರೀನಾಡೀ ಎಂತಲೂ, ಈ ನಾಡಿಗಳಲ್ಲಿದ್ದ ಶ್ರೀಶನೇ ಮೂವತ್ತಾರುಸಾವಿರ ಕುಟುಂಬರೂಪನಾಗಿದ್ದಾನೆಂತಲೂ ತಿಳೀಬೇಕು. ಈ ನಾಡಿಗಳ ಒಳಗೆ ಪ್ರಧಾನವಾದ ಕೆಲವಕ್ಕೆ ದಕ್ಷಿಣಾಯನ ಎಂತಲೂ ಕೆಲವಕ್ಕೆ ಉತ್ತರಾಯಣಾ ಎಂತಲೂ ಸಹ ಹೇಳುತ್ತಾರೆ. ಅದಕ್ಕೆ ಪ್ರಮಾಣ ಶಾಂಡಿಲ್ಯತತ್ತ್ವೇ–

**ದೇಹೇ ತಿಸ್ರಸ್ತು ನಾಡ್ಯಾಃ ಸ್ಯುಃ ಪಿಂಗಳೀಡಾ ಸುಷುಮ್ನಿಕಾಃ |**
**ದಕ್ಷಿಣಾ ಪಿಂಗಳಾನಾಮ ಇಡಾ ವಾಮಾ ಪ್ರಕೀರ್ತಿತಾ |**
**ಪಿಂಗಳಾಯಾಃ ಶತಂಪಂಚನಾಡ್ಯೋ ವೈ ದಕ್ಷಿಣಾಯನಾಃ |**
**ತಾವಂತ ಏವ ಚೇಡಾಯಾಃ ನಾಡ್ಯಾಸ್ತೇ ಚೋತ್ತರಾಯಣಾಃ |**
**ದಕ್ಷಿಣಾಯನನಾಡ್ಯಸ್ತು ತಿರ್ಯಗ್ವಾಮೇ ಪ್ರಸಾರಿತಾಃ |**
**ಉತ್ತರಾಯಣನಾಡ್ಯಸ್ತು ತಿರ್ಯಗ್ದಕ್ಷಿಣಗಾ ಮತಾ || ಇತ್ಯುಕ್ತೇಃ ||**

ಈ ನಾಡಿಶಾಖಾದಿಗಳು ಬೆಳೆಸತಕ್ಕ ವಿವರ ತಿಳಿಸೋ ವಿಷಯದಲ್ಲಿ ಸುಳಾದಿ ಶ್ರೀಮದ್ವಿಜಯದಾಸರಾಜರಿಂದ ಉಕ್ತವಾದದ್ದು ಉದಹರಿಸುತ್ತದೆ. (ಈ ಸುಳಾದಿಯು ಪೂರ್ಣಪಾಠವನ್ನು ಪುಟ 51ರಲ್ಲಿ ಕೊಟ್ಟಿದೆ. ಅಲ್ಲಿ ನೋಡುವುದು)

ತತ್ರ ನಾಡೀಸುಶಾಖಾನಾಂ ಪ್ರತಿಶಾಖಾದಶಾಂತಿವಾ ।
ನವ ಶಾಖಾ ಚ ತಿಸ್ರೇಣ ಅಷ್ಟೌ ಶಾಖಾ ಷಡ್ವೈವ ತು ।
ಶಿಷ್ಟ ಷಣ್ಣವತೀನಾಂ ತು ದ್ವಾಸಪ್ತತಿ ಇಮೇ ಮತಾ॥

—ಇತಿ ನಾಡೀಕಲ್ಪಲತಾಯಾಮಪಿ ಉಕ್ತಂ ॥

ಅಷ್ಟೈಕಶತಂ ನಾಡೀನಾಂ ತಾಸಾಂ ಶತಂ ಶತಮೇಕೈಕಸ್ಯಾಂ ।
ದ್ವಾಸಪ್ರತಿ ಪ್ರತಿ ಶಾಖಾ ಸಹಸ್ರಾಣಿ ಅಸು ವ್ಯಾನಶ್ಚರತಿ ॥

—ಎಂತ ಷಟ್ಪ್ರಶ್ನೋಪನಿಷತ್ತು ಇರುತ್ತದೆ.

**ನಾಡೀ ಉತ್ಪತ್ತಿ ವಿವರ —**

೧. ಎಡ ಮೂಗಿನಲ್ಲಿ ೫೦ ಶಾಖಾ ಉಳ್ಳದ್ದಾಗಿ ಇಡಾನಾಡಿ ಅದೆ
೨. ಬಲ ಮೂಗಿನಲ್ಲಿ ೫೦ ಶಾಖಾ ಉಳ್ಳದ್ದಾಗಿ ಪಿಂಗಳನಾಡಿ ಅದೆ
೩. ಕಿರುನಾಲಿಗೆಯಿಂದ ಎಡದವಡೆಗೆ ವಜ್ರಿಕಾನಾಡಿ ಹೋಗಿಯದೆ
೪. ಬಲದವಡೆಯಲ್ಲಿ ನಂದಿನೀ ನಾಡಿ ಸೇರಿ ಅದೆ. ಅಂತೂ ನಾಲ್ಕು ನಾಡಿ ಆಯಿತು.

ಇನ್ನು ಸುಷುಮ್ನಾನಾಡಿ ಉತ್ಪತ್ತಿ ವಿವರ —

ತೋಳಿನಲ್ಲಿ ೧೦ ನಾಡಿಗಳು, ತೊಡೆಯಲ್ಲಿ ೧೦ ನಾಡಿಗಳು, ಕಣ್ಣಿನಲ್ಲಿ ೨ ನಾಡಿಗಳು, ಕಿವಿಯಲ್ಲಿ ೨ ನಾಡಿಗಳು, ಜಿಹ್ವೆಯಲ್ಲಿ ೧ ನಾಡಿ, ಲಿಂಗದಲ್ಲಿ ೧ ನಾಡಿ, ಗುದದಲ್ಲಿ ೧ ನಾಡಿ, ಅಂತು ೨೭, ಹೃದಯದಲ್ಲಿ ೩೨, ಶಿರಸ್ಸಿನಲ್ಲಿ ೩೯, ಬೆನ್ನಿನಲ್ಲಿ ೨, ಮುಖ್ಯ ನಾಡೀ ಸೇರಿ ೧೦೧ ನಾಡೀ ಆಯಿತು.

**ಇದಕ್ಕೆ ಪ್ರಮಾಣ :--**

ಮನವೆ ಲಾಲಿಸುವದು ಪಂಚಾಷಡ್ದಳವುಳ್ಳ
ಘನವಾದ ಪಿಂಗಳವು ಬಲನಾಸಿಕದಿ ಉಂಟು

ಅನುವಾದ ಇಡಾನಾಡಿ ಪಂಚಾಶದಂಶದಿಂದ
ವಾಮನಾಸಿಕದಲ್ಲುಂಟು
ಅಣುನಾಲಿಗಿಂದ ಎಡದ ದವಡಿಯಲ್ಲಿ ವಜ್ರ
ಅನುಮೇಯಿಸು ಒಂದು ನಂದಿನೀನರವನ್ನು ಬಲದವಡಿಯಲ್ಲಿ
ವಿನಯಾದಿ ತಿಳಿಕಂಡ್ಯ ಸುಷುಮ್ನಾನಾಡಿ ವಿವರ
ಎಣಿಸು ತೊಡಿಯಲ್ಲಿ ದಶ ಭುಜದೋಳು ದಶ
ಬೆನ್ನು ಕರ್ಣಾ ಕಣ್ಣುಗಳೊಳು ಎರಡೆರಡು
ಮಣಿದಿಸ್ವಾದಯ್ಯಾ ಜಿಹ್ವಾ ಗುದಲಿಂಗಾದೊಂದೊಂದು
ನೆನಿ ಮೂರ್ಧ್ನಾದಲ್ಲಿ ನರ ಮೂವತ್ತರೊಂಭತ್ತು
ಹೃದಯಾದಿ ಮೂವತ್ತೆರಡು ನಿತ್ಯಾದಿ ತಿಳಿಕಂಡ್ಯ
ಇನಿತು ಸುಷುಮ್ನಾ ಸೇರಿ ನೂರೊಂದು ನೆನಿವುದಯ್ಯ
ದಿನ ದಿನ ತಿಳಿಯುತ್ತಾ ಸ್ನಾನವಾಳ್ಪವಂಗೇ
ಜನನವಾ ದೂರವಾಳ್ಪ ಪುರಂದರವಿಠ್ಠಲನು ॥

ಎಂಬಂಥ ದೊಡ್ಡವರ ಉಕ್ತೀರೀತ್ಯಾ ಸುಷುಮ್ನಾನಾಡಿಯಿಂದ ಹೊರಟ ನಾಡಿಗಳು ಸುಷುಮ್ನಾ ಸೇರಿ ನೂರಾಒಂದು ಮೇಲೆ ಕಂಡ ನಾಡಿಗಳು ಎಪ್ಪತ್ತೆರಡು ಸಾವಿರ, ಅಂತು ೭೨,೧೦೧ ನಾಡಿಗಳಲ್ಲಿ ಬ್ರಹ್ಮಾದಿ ತತ್ವೇಶರು ಇದ್ದು, ನಾಡೀಗತ ಶ್ರೀಹರಿಯ ಆನಂದಾದಿ ಗುಣಗಳನ್ನು ಉಪಾಸನೆ ಮಾಡುತ್ತಾರೆಂತ ತಾತ್ಪರ್ಯ ॥೮॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಈ ಸುಷುಮ್ನಾ—ಇತಿ ॥ ಕೋಶಃ—ಸಮೂಹಃ । ಇಪ್ಪದು—ಇರುವುದು. ಮೂಲೇಶಃ—ಹೃತ್ಕಮಲೇ ॥ ೮ ॥

ನಾಡೀಕೋಶ—ಎಂದರೆ, ನಾಡೀಸಮೂಹ—ಎಂದರ್ಥ. ಇಪ್ಪದು—ಇರುವುದು. ಮೂಲೇಶ ನಾಮಕ ನಾರಾಯಣನು ಹೃದಯಕಮಲದಲ್ಲಿ ಇರು

ವನು. ಅವನನ್ನು ಬ್ರಹ್ಮಮುಂತಾದ ಸಕಲ ದೇವತೆಗಳೂ ಭಜಿಸುವರು-ಎಂದು ಭಾವ ॥ ೮ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಸುಷುಮ್ನಾನಾಡೀ ಬುಡದಲ್ಲಿ ಬ್ರಹ್ಮಾದಿಗಳು ದೇವರನ್ನಾರಾಧಿಸುವರೆಂಬು ದನ್ನು ಸ್ಮರಿಸಬೇಕೆಂಬುದನ್ನು ತಿಳಿಸುತ್ತಾರೆ, ಈ ಸುಷುಮ್ನಾ ಎಂದು. ಮೇಲೆ ಹೇಳಿದ ಸುಷುಮ್ನಾ ಎಂಬುದೇ ಮೊದಲಾದ ನಾಡಿಗಳ ಕೋಶವೆಂಬ ಚೀಲ, ನಾಭೀಮೂಲದಲ್ಲಿ ವೃಷಣವೆಂಬ ಬೀಜ ಆಸನ ಈ ಎರಡರ ಮಧ್ಯದಲ್ಲಿ ತುಂದಿ ಎಂದು ಹೆಸರುಳ್ಳದ್ದಾಗಿರುವುದು. ಆ ಸರೋಜಾಸನನೆಂಬ ಬ್ರಹ್ಮದೇವರು ಮೊದ ಲಾದ ದೇವತೆಗಳು, ಮೂಲೇಶನೆಂಬ ನಾರಾಯಣನ ಆನಂದಾದಿ ಸಗುಣೋ ಪಾಸನೆ ಮಾಡುತ್ತಾ ಸರ್ವದೇಹದಲ್ಲೂ ಇರುವರೆಂದು ತಿಳಿಯಬೇಕೆಂದರ್ಥ. ॥೮॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಮೂಲಾಧಾರದಿಂದ ಹೊರಟು, ದೇಹದ ಮಧ್ಯಭಾಗದಲ್ಲಿ ನೇರವಾಗಿ ಬ್ರಹ್ಮರಂಧ್ರ ಪರ್ಯಂತ ವ್ಯಾಪಿಸಿರುವ ಮಧ್ಯನಾಡಿಗೆ ಸುಷುಮ್ನಾನಾಡಿ ಎಂದು ಹೆಸರು. ಇದಕ್ಕೆ ಋಜುನಾಡಿ ಮತ್ತು ಬ್ರಹ್ಮನಾಡಿ ಎಂತಲೂ ಹೆಸರು. ಕೂದ ಲೆಳೆಯನ್ನು ನೀಳವಾಗಿ ಸಹಸ್ರ ಭಾಗಗಳಾಗಿ ಸೀಳಿದರೆ, ಬರುವ ಅಂಶದಷ್ಟು ಸೂಕ್ಷ್ಮವಾಗಿದೆ. ಈ ಸುಷುಮ್ನಾನಾಡಿಯು ತೇಜೋಮಯವಾಗಿದ್ದು, ಅತೀಂ ದ್ರಿಯವಾಗಿರುವುದು.

ಪ್ರಧಾನ ನಾಡಿಯಾದ ಸುಷುಮ್ನಾನಾಡಿಯು ನಾಲ್ಕು ಶಾಖಾನಾಡಿಗಳಿಂದ ಯುಕ್ತವಾಗಿದೆ.

೧. ಪೂರ್ವಕ್ಕೆ (ಮುಂಭಾಗದಲ್ಲಿ) ಪ್ರಕಾಶಿನೀನಾಡಿ
೨. ದಕ್ಷಿಣಕ್ಕೆ (ಬಲಪಾರ್ಶ್ವಕ್ಕೆ) ವೈದ್ಯುತಾನಾಡಿ (ಪಿಂಗಳಾನಾಡಿ)
೩. ಪಶ್ಚಿಮಕ್ಕೆ (ಹಿಂದಕ್ಕೆ) ವಜ್ರಿಕಾನಾಡಿ
೪. ಉತ್ತರಕ್ಕೆ (ಎಡಭಾಗಕ್ಕೆ) ಆರ್ಯಾನಾಡಿ (ಇಡಾನಾಡಿ)

ಪೂರ್ವೋಕ್ತ ನಾಲ್ಕು ನಾಡಿಗಳನ್ನೊಳಗೊಂಡು ಮಧ್ಯನಾಡೀ ಸುಷುಮ್ನಾ ನಾಡಿ.

ಸುಷುಮ್ನಾ ಪಂಚಪ್ರಭೇದಿನೀ–ಎಂಬ ಪ್ರಮಾಣಕ್ಕನುಗುಣವಾಗಿ, ಸುಷುಮ್ನಾ ನಾಡಿಯೇ ಅದೂ ಸೇರಿದಂತೆ ೫ ಭಾಗಗಳಾಗಿದೆ. ಇದರ ಆಧಾರದ ಮೇಲೆ, ಈ ಸುಷುಮ್ನಾದಿ–ಎಂದು ಆದಿ ಶಬ್ದದಿಂದ ತಿಳಿಸುತ್ತಾರೆ.

ಪ್ರಧಾನನಾಡಿಯಾದ ಸುಷುಮ್ನಾನಾಡಿಯಿಂದ ಆರಂಭಿಸಿ, ಈ ಸ್ಥೂಲ ದೇಹಾದ್ಯಂತ ವ್ಯಾಪಿಸಿ ಹರಡಿರುವ ಸಕಲ ನಾಡೀಸಮೂಹಗಳು (ಅಖಿಳ ನಾಡಿ ಕೋಶ—ಕೋಶ–ಎಂದರೆ ಸಮೂಹ ಎಂದರ್ಥ) ಮೂಲಾಧಾರವೆಂಬ ಗ್ರಂಥಿಯಿಂದ ಹೊರಟಿವೆ. ಸ್ಥೂಲಶರೀರಗತ ಸಮಗ್ರನಾಡೀವ್ಯೂಹದ ಉತ್ಪತ್ತಿಕೇಂದ್ರವು ಮೂಲಾಧಾರವಾದ ತುಂದಿ ಎಂಬ ಗಡ್ಡೆಯು. ಈ ಮೂಲಾಧಾರವಾದ ತುಂದಿ ಎಂಬ ಗಡ್ಡೆಯು ನಾಭೀಪ್ರದೇಶದ ಕೆಳಗೆ, ವೃಷಣಕ್ಕೂ ಮತ್ತು ಗುದಕ್ಕೂ ಮಧ್ಯದಲ್ಲಿದೆ.

## ೪. ನಾಡಿಗಳ ಉತ್ಪತ್ತಿಯ ವಿವರಗಳು

ಸುಷುಮ್ನಾನಾಡಿಯ ಪ್ರಭೇದಗಳಾದ ನಾಲ್ಕು ನಾಡಿಗಳಲ್ಲಿ ಪ್ರತಿಯೊಂದು ೨೫ ಶಾಖಾನಾಡಿಗಳಾಗಿ ವಿಭಾಗವಾಗಿವೆ.

| | | |
|---|---|---|
| ೧. ಪ್ರಕಾಶಿನೀನಾಡಿಯ | ಶಾಖಾನಾಡಿಗಳು | ೨೫ |
| ೨. ಪಿಂಗಳನಾಡಿಯ | ಶಾಖಾನಾಡಿಗಳು | ೨೫ |
| ೩. ವಜ್ರಿಕಾನಾಡಿಯ | ಶಾಖಾನಾಡಿಗಳು | ೨೫ |
| ೪. ಆರ್ಯನಾಡಿಯ | ಶಾಖಾನಾಡಿಗಳು | ೨೫ |
| ಒಟ್ಟು ಶಾಖಾನಾಡಿಗಳ ಸಂಖ್ಯೆ | | ೧೦೦ |
| ಪ್ರಧಾನನಾಡಿ, ಸುಷುಮ್ನಾನಾಡೀ ಸೇರಿ | | ೧ |
| ಒಟ್ಟು | | ೧೦೧ |

ಈ ನಾಡಿಗಳಲ್ಲಿ ೧೦ ಶಾಖಾನಾಡಿಗಳು ಪ್ರತಿನಾಡಿಗೂ ೧೦೦ರಂತೆ ಒಡೆದಿವೆ.
೯ ಶಾಖಾನಾಡಿಗಳು ಪ್ರತಿನಾಡಿಗೂ ೧೦೦ರಂತೆ ಒಡೆದಿವೆ.
೮ ಶಾಖಾನಾಡಿಗಳು ಪ್ರತಿನಾಡಿಗೂ ೩೦೦ರಂತೆ ಒಡೆದಿವೆ.
ಮತ್ತು ೬ ಶಾಖಾನಾಡಿಗಳು ಪ್ರತಿನಾಡಿಗೂ ೯೬,೦೦೦ರಂತೆ ಒಡೆದಿವೆ

**ಅಲ್ಲಿಗೆ ಒಟ್ಟು ನಾಡಿಗಳ ಸಂಖ್ಯೆಯ ವಿವರ**

| | | |
|---|---|---|
| ೧ | ೧೦ ಶಾಖಾನಾಡಿಗಳು X ೧೦೦ ವಿಭಾಗ | = ೧,೦೦೦ |
| ೨ | ೯ ಶಾಖಾನಾಡಿಗಳು X ೧೦೦ ವಿಭಾಗ | = ೯೦೦ |
| ೩ | ೮ ಶಾಖಾನಾಡಿಗಳು X ೩೦೦ ವಿಭಾಗ | = ೨,೪೦೦ |
| ೪ | ೬ ಶಾಖಾನಾಡಿಗಳು X ೯,೬೦೦ ವಿಭಾಗ | = ೫೭,೬೦೦ |
| ಮತ್ತು ೫ | ಮೂಲನಾಡಿಗಳು | = ೧೦,೧೦೦ |
| | ಒಟ್ಟು ನಾಡಿಗಳ ಸಂಖ್ಯೆ | = ೭೨,೦೦೦ |

ಅಲ್ಲಿಗೆ ೭೨,೦೦೦ + ಪ್ರಧಾನ ಶಾಖಾನಾಡಿಗಳು ೧೦೧, ೭೨,೧೦೧ ನಾಡಿಗಳ ಲೆಕ್ಕ. ಈ ನಾಡಿಗಳಲ್ಲಿ ಕಮಲಾಸನರಾದ ಚತುರ್ಮುಖ ಬ್ರಹ್ಮದೇವರು ಆದಿಯಾಗಿ ದೇವತಾಗಣ ವಿದ್ಯಮಾನರಾಗಿದ್ದಾರೆ.

ಬ್ರಹ್ಮಾದಿ ದೇವತಾವರ್ಗವು ನಾಡ್ಯಂತರ್ಗತ ಮೂಲೇಶ ನಾಮಕ ಶ್ರೀಪರಮಾತ್ಮನ ಅನಾದ್ಯನಂತವಾದ ಕಲ್ಯಾಣಗುಣಗಳನ್ನು ಉಪಾಸನೆ ಮಾಡುತ್ತಾ ಈ ಸ್ಥೂಲಶರೀರಗತ ನಾಡಿಗಳಲ್ಲಿ ವಿದ್ಯಮಾನರಾಗಿದ್ದಾರೆ. ಹೃತ್ಕಮಲದಲ್ಲಿ ನಿವಾಸಿಯಾದ ಬಿಂಬರೂಪೀ ಆ ಮೂಲೇಶ ನಾಮಕನು, ಲಕ್ಷ್ಮೀಸಹಿತನಾಗಿದ್ದು, ನಾಡಿಯಲ್ಲಿ ಸಂಚರಿಸುತ್ತಿರುವ ಮುಖ್ಯಪ್ರಾಣದೇವರಿಂದ ಸೇವ್ಯನಾಗಿ, ದೇವತಾಗಣದಿಂದ ಉಪಾಸ್ಯನಾದಿ ವಿರಾಜಿಸುತ್ತಿರುವನು.

**ಭಗವದ್ರೂಪಗಳ ಚಿಂತನೆ**

೧. ತ್ರಿಗುಣಗಳು = ಸತ್ತ್ವ–ರಜ–ತಮ = ೩ (ಶ್ರೀ, ಭೂ, ದುರ್ಗಾ

ರಮಣನಾದ ಅ–ಕಾರ, ಉ–ಕಾರ, ಮ–ಕಾರ ವಾಚ್ಯ ಪ್ರಣವ ಪ್ರತಿಪಾದ್ಯರೂಪಗಳು)

೨. ತತ್ತ್ವಗಳು = ಅವ್ಯಕ್ತಾದಿ ಪೃಥ್ವೀಪರ್ಯಂತ ೨೪ (ಕೇಶವಾದಿ ಕೃಷ್ಣಾಂತ ಚತುರ್ವಿಂಶತಿ ರೂಪಗಳು)

೩. ವಿಶ್ವಾದಿ ಸಹಸ್ರ ಭಗವದ್ರೂಪಗಳು

ಅಲ್ಲಿಗೆ ತ್ರಿಗುಣಾಂತರ್ಗತXಚತುರ್ವಿಂಶತಿ ತತ್ತ್ವಾಂತರ್ಗತXವಿಶ್ವಾದಿ ಸಹಸ್ರ ರೂಪಗಳು = ೩X೨೪X೧೦೦೦ = ೭೨,೦೦೦ ಭಗವದ್ರೂಪಗಳು.

## ೧೦೧ ಪ್ರಧಾನ ಶಾಖಾನಾಡ್ಯಂತರ್ಗತ ಭಗವದ್ರೂಪಗಳು

| | | |
|---|---|---|
| ೧. | ಅಕಾರಾದಿ ಕ್ಷಕಾರ ಪರ್ಯಂತ ೫೧ ವರ್ಣವಾಚ್ಯ ರೂಪಗಳು | ೫೧ |
| ೨. | ಕೇಶವಾದಿ ಕೃಷ್ಣಾಂತ ಚತುರ್ವಿಂಶತಿ ರೂಪಗಳು | ೨೪ |
| ೩. | ಮತ್ಸ್ಯಾದಿ ಕಲ್ಕಿ ಪರ್ಯಂತ ದಶಾವತಾರ ರೂಪಗಳು | ೧೦ |
| ೪. | ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ರೂಪಗಳು | ೪ |
| ೫. | ವಿಶ್ವ, ತೈಜಸ, ಪ್ರಾಜ್ಞ, ತುರ್ಯ | ೪ |
| ೬. | ವೇದವ್ಯಾಸ, ದತ್ತಾತ್ರೇಯ, ಶಿಂಶುಮಾರ | ೩ |
| ೭. | ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ | ೪ |
| ೮. | ಮೂಲನಾರಾಯಣ ರೂಪ | ೧ |
| | ಒಟ್ಟು ಭಗವದ್ರೂಪಗಳು | ೧೦೧ |

## ೧೦೧ ನಾಡಿಗಳ ಹಂಚಿಕೆಯ ವಿವರ

| | | | |
|---|---|---|---|
| ೧. | ಭುಜಗಳಲ್ಲಿ | ೧೦ ನಾಡಿಗಳು | (೫ + ೫) |
| ೨. | ಚರಣಗಳಲ್ಲಿ | ೧೦ ನಾಡಿಗಳು | (೫ + ೫) |
| ೩. | ಕಿವಿಯಲ್ಲಿ | ೨ ನಾಡಿಗಳು | (೧ + ೧) |
| ೪. | ಕಣ್ಣಿನಲ್ಲಿ | ೨ ನಾಡಿಗಳು | (೧ + ೧) |
| ೫. | ಜಿಹ್ವೆಯಲ್ಲಿ | ೧ ನಾಡೀ | |
| ೬. | ಲಿಂಗದಲ್ಲಿ | ೧ ನಾಡೀ | |

| | | |
|---|---|---|
| ೭. | ಗುದದಲ್ಲಿ | ೧ ನಾಡೀ |
| ೮. | ಶಿರಸ್ಸಿನಲ್ಲಿ | ೩೯ ನಾಡಿಗಳು |
| ೯. | ಬೆನ್ನಿನಲ್ಲಿ | ೨ ನಾಡಿಗಳು |
| ೧೦. | ಹೃದಯದಲ್ಲಿ | ೩೨ ನಾಡಿಗಳು |
| ೧೧. | ಪ್ರಧಾನ ನಾಡೀ (ಸುಷುಮ್ನಾ) | ೧ ನಾಡೀ |
| | ಒಟ್ಟು ಸಂಖ್ಯಾ | ೧೦೧ (ನೂರಾಒಂದು) ॥ ೮ ॥ |

## ಪದ್ಯ ೯

### ಮೂಲ

ಸೂರಿಗಳು ಚಿತ್ತೈಸುವದು ಭಾ ।
ಗೀರಥಿಯೆ ಮೊದಲಾದ ತೀರ್ಥಗ ।
ಳೀರಧಿಕ ಎಪ್ಪತ್ತು ಸಾವಿರ ನಾಡಿಯೊಳಗಿಹವು ॥
ಈ ರಹಸ್ಯವನಲ್ಪಜನರಿಗೆ
ತೋರಿ ಪೇಳದೆ ನಾಡಿನದಿಯೊಳು ।
ಧೀರರನುದಿನ ಮಜ್ಜನವ ಮಾಡುತಲೆ ಸುಖಿಸುವರು ॥ ೯ ॥

### ಅವತರಣಿಕೆ

ಈ ಸ್ಥೂಲ ಶರೀರಾದ್ಯಂತ ವ್ಯಾಪಿಸಿ, ಹರಡಿರುವ ನಾಡಿಗಳಲ್ಲಿ ವಿದ್ಯಮಾನರಾಗಿರುವ ನದ್ಯಭಿಮಾನಿ ದೇವತೆಗಳ ವಿಚಾರ ತಿಳಿಸುತ್ತಾರೆ.

### ಪ್ರತಿಪದಾರ್ಥ

**ಸೂರಿಗಳು** = ಜ್ಞಾನಿಗಳು, **ಚಿತ್ತೈಸುವದು** = ಮನಗೊಟ್ಟು ಕೇಳಿ ತಿಳಿಯುವುದು. **ಭಾಗೀರತಿಯೆ** = ಗಂಗಾನದಿಯು ಅಭಿಮಾನಿ ದೇವತೆಯು, **ಮೊದಲಾದ** = ಆದಿಯಾಗಿ ಸಕಲ ನದ್ಯಭಿಮಾನಿ ದೇವತೆಗಳು, **ತೀರ್ಥಗಳ** = ಸರ್ವ ತೀರ್ಥಾಭಿಮಾನಿ ದೇವತೆಗಳು, **ಈರಧಿಕ ಎಪ್ಪತ್ತುಸಾವಿರ ನಾಡಿಯೊಳಗೆ** = ೭೨,೦೦೦ ಸಂಖ್ಯಾಕವಾದ ನಾಡಿಗಳಲ್ಲಿ (**ಈರಧಿಕ** = ಎರಡು

**ಹೆಚ್ಚಾದ**, ಎಪ್ಪತ್ತು ಸಾವಿರ=೭೨,೦೦೦ ಆಯಿತು) **ಇಹವು**=ನದಿಗಳು ಹಾಗೂ ತೀರ್ಥಗಳೂ, ಅಂತೆಯೇ, ನದ್ಯಭಿಮಾನಿ ದೇವತೆಗಳು ಮತ್ತು ತೀರ್ಥಾಭಿಮಾನಿ ದೇವತೆಗಳೂ ವಿದ್ಯಮಾನರಾಗಿದ್ದಾರೆ. **ಈ ರಹಸ್ಯವನು**= ಈ ಗೂಢಾರ್ಥಗಳನ್ನು, **ಅಲ್ಪಜನರಿಗೆ**=ಅಲ್ಪಾಧಿಕಾರಿಗಳಾದ, **ಭಕ್ತಿ** ಶ್ರದ್ಧಾರಹಿತರಾದ ಜನರಿಗೆ, **ತೋರಿ ಪೇಳದೆ**=ತಾನು ತಿಳಿದಿದ್ದನ್ನು ಉಪದೇಶಿಸದೆ, **ನಾಡಿನದಿಯೊಳು**=ನಾಡೀಗತ ನದಿಗಳೊಳಗೆ, **ಧೀರರು** =ಭಗವದ್ಭಕ್ತರು, **ಅನುದಿನ**=ಪ್ರತಿ ದಿವಸದಲ್ಲಿಯೂ, **ಮಜ್ಜನವ ಮಾಡುತಲಿ**=ಸ್ನಾನವಿಧಿಯನ್ನು ಜ್ಞಾನಾನುಸಂಧಾನಕ್ರಮದಿಂದ ಮಾಡುತ್ತಾ, **ಸುಖಿಸುವರು**=ಸಂತೋಷಪಡುತ್ತಾರೆ ॥ ೯ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ನಾಡಿಗಳಲ್ಲಿ ನದಿಗಳು ಅವೆ ಎಂತ ಹೇಳತಾರೆ.

ಜ್ಞಾನಿಗಳು ಚಿತ್ತದಿಂದ ತಿಳಿಯುವುದು, ಭಾಗೀರಥೀ ನದಿ ಅಭಿಮಾನಿ ದೇವತೆಯು ಆದಿಯಾಗಿ ನದ್ಯಭಿಮಾನಿಗಳು ನದಿಗಳು, ತೀರ್ಥಾಭಿಮಾನಿಗಳು, ತೀರ್ಥಗಳು, ಎಪ್ಪತ್ತೆರಡುಸಾವಿರ ನಾಡಿಗಳೊಳಗೆ ಅಷ್ಟೇ ಸಂಖ್ಯಾದಿಂದ ನದಿಗಳು ನದ್ಯಭಿಮಾನಿ ದೇವತೆಗಳು ಇರೋರಾಗಿದ್ದಾರೆ. ಇದರಂತೆ ಮೂರುವರೆ ಕೋಟಿ ರೋಮಕೂಪಗಳಲ್ಲಿ ತೀರ್ಥಗಳು, ತೀರ್ಥಾಭಿಮಾನಿ ದೇವತೆಗಳು ಇರೋರಾಗಿ ದ್ದಾರೆ. ಈ ಪ್ರಕಾರ ಇರತಕ್ಕ ಗೋಪ್ಯವಾದ ವಿಷಯಗಳ ಭಗವದ್ದ್ವೇಷಿಗಳಿಗೆ, ಅಲ್ಪಾಧಿಕಾರಿಗಳಾದ ಉದಾಸೀನರಾದ ಶ್ರದ್ಧಾರಹಿತರಾದ ಮನುಷ್ಯರಿಗೆ, ತಾನು ತಿಳಿಕೊಂಡದ್ದು ಅವರಿಗೆ ಉಪದೇಶ ಮಾಡದೇ ತಿಳಿಸದೆ ನಾಡೀಗತ ನದಿಯೊಳಗೆ, ರೋಮಕೂಪಗತ ತೀರ್ಥಗಳಲ್ಲಿ, ಭಾವವಿರಕ್ತರಾದ ಧೀರರು ಪ್ರತಿ ದಿವಸದಲ್ಲೂ ಸ್ನಾನ ಮಾಡುತ್ತಾ ಎಂದರೆ, ಸ್ನಾನ ಕ್ರಮ–ದೇಶದಲ್ಲಿ ಜೀವನಾದವ ರೋಮ-ನಾಡ್ಯಾದಿ ಸರ್ವತ್ರ ವ್ಯಾಪ್ತನಾಗಿ ಇರೋಣದರಿಂದ, ಆಯಾ ತೀರ್ಥ ನದ್ಯಾದಿ ಗಳಲ್ಲಿ ಸ್ನಾನ ಸರ್ವದಾ ಮಾಡತಲೇ ಇದ್ದಾನೆ. ಇದರನ್ನ ಅನುಸಂಧಾನದಿಂದ ತಿಳಿದು ಈ ರೀತ್ಯಾ ಸ್ನಾನಮಾಡಿ ತದ್ಗತ ಭಗವದ್ರೂಪಗಳ ಅನುಸಂಧಾನದಿಂದ

ತಿಳಿದು ದರ್ಶನಮಾಡಿ, ಹೃದಯಾಂತರ್ಗತ ಬಿಂಬನಲ್ಲಿ ನಾಡ್ಯಂತರ್ಗತ ರೂಪ ಗಳ, ತೀರ್ಥಗತ ರೂಪಗಳ ಐಕ್ಯಚಿಂತನಾದಿಂದ ಅರ್ಪಿಸುತ್ತಾ, ಈ ಪ್ರಕಾರ ಸ್ನಾನಾನುಸಂಧಾನ ಮಾಡುತ್ತಾ ಆನಂದಪಡೋವರಾಗುತ್ತಾರೆ. ಅನುಸಂಧಾನ ಮಾಡದೆಹೋವರೆ ಭಾಗೀರಥೀನದೀಸ್ಥ ಜಲಚರಗಳಂತೆ ಫಲರಹಿತರಾಗತಾರೆ ಅಂತ ತಾತ್ಪರ್ಯ ॥ ೯ ॥

೨. ಭಾವಪ್ರಕಾಶಿಕೆ

ಈ ವಿಷಯದಲ್ಲಿ ಜ್ಞಾನಿಗಳು ಚಿತ್ತವನ್ನಿಡಬೇಕು. ಮೇಲೆ ಹೇಳಿದ ೭೨,೦೦೦ ನಾಡಿಗಳಲ್ಲಿ ಗಂಗಾ, ತುಂಗಾ ಮೊದಲಾದ ಸಕಲ ತೀರ್ಥಾಭಿಮಾನಿ ದೇವತೆಗಳು ವಾಸವಾಗಿರುವರು. ಈ ವಿಷಯವು ಬಹಳ ಗೋಪ್ಯವಾದುದು. ಪಾಮರರಿಗೆ ಹೇಳಿದರೆ ಹಾಸ್ಯವಾಗಿ ಕಾಣುವುದು. ಅಂತಹವರಿಗೆ ಹೇಳಬಾರದು. ಈ ನಂಬಿಕೆ ಉಳ್ಳವರು ನಿತ್ಯದಲ್ಲಿಯೂ ತಮ್ಮ ನಾಡಿಗಳಲ್ಲಿ ನದಿಗಳೆಲ್ಲವೂ ಇರುವವೆಂದು ಭಾವಿಸಿ, ಅವುಗಳಲ್ಲಿ ಸ್ನಾನ ಮಾಡುತ್ತೇವೆಂದು ಮನಸಾ ಚಿಂತಿಸಲು ಸಕಲ ತೀರ್ಥಗಳಲ್ಲಿ ಸ್ನಾನಮಾಡಿದ ಫಲವು ಬರುವುದು. ॥ ೯ ॥

೩. ಭಾವದರ್ಪಣ

ಇದೇ ನಾಡಿಗಳಲ್ಲಿ ಭಾಗೀರಥ್ಯಾದಿ ನದಿಗಳೂ ಅವೆ ಎಂದು ತಿಳಿದು, ಜ್ಞಾನಿಗಳು ಸ್ನಾನ ಮಾಡುತ್ತಾರೆಂದು ಹೇಳುತ್ತಾರೆ– ಸೂರಿಗಳು ಇತಿ ॥ ॥ ೯ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಸೂರಿ—ಇತಿ। ನಾಡೀ ಪ್ರಕರಣ ಸುಳಾದಿಮುಖೇನ ನದೀ ವಿಶೇಷಸ್ಯ ನಾಡೀ ವಿಶೇಷ; ಅವಗಂತವ್ಯಃ। ಈರ_ಎರಡು

ನಾಡಿಗಳಲ್ಲಿ ನದಿಗಳನ್ನೂ ಚಿಂತಿಸುವರೆಂಬುದಾಗಿ ಈ ಪದ್ಯದಿಂದ ತಿಳಿಸು ತ್ತಾರೆ. ನಾಡೀ ಪ್ರಕರಣ ಸುಳಾದಿಗಳಿಂದ ಯಾವ ನಾಡಿಗೆ ಯಾವ ನದಿಯನ್ನ ಬೇಕು ಇತ್ಯಾದಿ ವಿಷಯುಗಳನ್ನೂ ತಿಳಿದುಕೊಳ್ಳಬೇಕು. ಈರ-ಎರಡು ॥ ೯ ॥

೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ನಾಡೀಗತ ನದೀ ಚಿಂತನೆಯೂ ಇರಬೇಕೆಂದು ಬೋಧಿಸುತ್ತಾರೆ. ಸೂರಿ ಗಳೆಂದು, ಸೂರಿಗಳೆಂಬ ವಿದ್ವಜ್ಜನರು ತಿಳಿಯತಕ್ಕದ್ದು. ಎಪ್ಪತ್ತೆರಡುಸಾವಿರ

ನಾಡಿಗಳಲ್ಲಿಯೂ ಭಾಗೀರಥಿಯೇ ಮೊದಲಾದ ನದಿಗಳು ಪ್ರವಹಿಸುತ್ತಾ ಇರುವುವು. ಈ ರಹಸ್ಯ ನಂಬದಿರುವ ಅಜ್ಞಾನಿಗಳಿಗೆ ಶಾಸ್ತ್ರದಿಂದ ತೋರಿಸಿ ಹೇಳದೆ, ನಾಡೀನದಿಗಳಲ್ಲಿ ಧೀರರೆಂಬ ಧ್ಯಾನಶೀಲರು ಮಜ್ಜನವೆಂಬ ಸ್ನಾನವನ್ನು ಮಾಡುತ್ತಾ ಸುಖಿಸುತ್ತಾರೆ, 'ನದ್ಯೋಽಸ್ಯನಾಡ್ಯಃ' ಎಂಬ ಭಾಗವತಾರ್ಥ ವಿವರಿಸಲ್ಪಟ್ಟಿತು. ॥ ೯ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ನದ್ಯಭಿಮಾನಿ ದೇವತೆಗಳು ನಾಡಿಗಳಲ್ಲಿ ಆವಾಸವಾಗಿದ್ದಾರೆ. ಆ ಅಭಿಮಾನಿ ದೇವತೆಗಳಿಗೆ ನಿಯಾಮಕರಾಗಿ ಶ್ರೀವಾಯುದೇವರು ಪರಿಸರ ಎಂಬ ಹೆಸರಿನಿಂದ ೭೨,೦೦೦ ನಾಡಿಗಳ ದ್ವಾರಾ ಸಂಚರಿಸುತ್ತಿರುವರು. ನಾಡ್ಯಂತರ್ಗತ ಬೃಹತೀಋಕ್‌ಪ್ರತಿಪಾದ್ಯನಾದ ಶ್ರೀಪರಮಾತ್ಮನನ್ನು ನೋಡುತ್ತಾ, ಸೇವಿಸುತ್ತಿರುವರು.

ನಾಡೀಗತ ನದಿಗಳು, ನದ್ಯಭಿಮಾನಿದೇವತಾವರ್ಗ, ಆ ದೇವತಾಗಣದಿಂದ ಸಂಸ್ತುತ್ಯಮಾನನಾದ ಶ್ರೀಪರಮಾತ್ಮ–ಈ ರೀತಿ ಗೋಳಕಗಳ ದ್ವಾರಾ ಬ್ರಹ್ಮಜ್ಞಾನಿಗಳು ಪ್ರತಿ ದಿವಸದಲ್ಲಿಯೂ ನಿತ್ಯೋಪಾಸನೆ ಮಾಡುತ್ತಾ, ಈ ನಾಡೀಗತ ನದಿಗಳಲ್ಲಿ ಮನಸಾ ಚಿಂತನಪೂರ್ವಕ ಸ್ನಾನ ಮಾಡುತ್ತಿರುವರು.

ತೀರ್ಥಕ್ಷೇತ್ರ ಯಾತ್ರಾ ನೆವದಿಂದ, ಪುಣ್ಯಕ್ಷೇತ್ರಗಳಿಗೆ ಹೋಗಿ, ಅಲ್ಲಿ ತೀರ್ಥಾಭಿಮಾನಿ ದೇವತೆಗಳು ಮತ್ತು ನದ್ಯಭಿಮಾನಿ ದೇವತೆಗಳನ್ನು ಸ್ಮರಿಸುತ್ತಾ, ತದಂರ್ಗತ ವಾಯ್ವಂತರ್ಗತ ಕ್ಷೇತ್ರಮೂರ್ತಿಯನ್ನು ಮನಸ್ಸಿನಲ್ಲಿ ಚಿಂತಿಸುತ್ತಾ, ಮಜ್ಜನಮಾಡಿದರೆ ಎಷ್ಟು ಪುಣ್ಯ ಪ್ರಾಪ್ತಿಯೋ, ಈ ಸ್ಥೂಲಶರೀರಗತ ೭೨,೦೦೦ ನಾಡಿಗಳಲ್ಲಿ ನದ್ಯಭಿಮಾನಿದೇವತೆಗಳು ತದಂರ್ಗತ ಮುಖ್ಯಪ್ರಾಣದೇವರು, ವಾಯ್ವಂತರ್ಯಾಮಿ ೭೨,೦೦೦ ಭಗವದ್ರೂಪಗಳನ್ನು ನಿತ್ಯ ಸ್ಮರಿಸುತ್ತಾ, ಆ ನಾಡೀಗತ ನದಿಗಳಲ್ಲಿ ಸ್ನಾನಮಾಡಿದೆವೆಂದು ಜ್ಞಾನಾನುಸಂಧಾನವುಳ್ಳ ಸೂರಿಗಳಿಗೆ ಅಷ್ಟೇ ಪುಣ್ಯವು ಪ್ರಾಪ್ತಿಯಾಗುವುದು. ಇದರಿಂದ ಚಿತ್ತಶುದ್ಧಿ ಉಂಟಾಗಿ, ಆ ಜ್ಞಾನಿಗಳ ದೇಹವು ಪವಿತ್ರವಾಗುವುದು. ಇದೇ ನೈರ್ಮಲ್ಯವು, ನಿಜವಾದ

ಮಡಿಯು. ಕೇವಲ ಯಾಂತ್ರಿಕವಾಗಿ ಸ್ನಾನಮಾಡಿ, ವಸ್ತ್ರಾಂತರ ಮಾಡಿಕೊಂಡರೆ, ಅದು ಶುದ್ಧ ಮಡಿಯಾಗದು.

ಅನ್ಯಕ್ಷೇತ್ರೇ ಕೃತಂಪಾಪಂ ಪುಣ್ಯಕ್ಷೇತ್ರೇ ವಿನಶ್ಯತಿ ।
ಪುಣ್ಯಕ್ಷೇತ್ರೇ ಕೃತಂಪಾಪಂ ವಜ್ರಲೇಪೋ ಭವಿಷ್ಯತಿ ॥

ಎಂಬ ಶ್ಲೋಕಾಭಿಪ್ರಾಯದಂತೆ, ಪುಣ್ಯಕ್ಷೇತ್ರಗಳಿಗೆ ಹೋಗಿ, ಅಲ್ಲಿ ತೀರ್ಥ, ನದಿಗಳಲ್ಲಿ ಮಿಂದರೂ, ಕಾಮಕ್ರೋಧಾದಿಗಳಿಂದ ಗ್ರಸ್ತವಾದ ಮನೋವೈಕಲ್ಯವುಳ್ಳವನಿಗೆ, ಪುಣ್ಯಕ್ಕಿಂತ ಪಾಪವೇ ಘಟಿಸುವುದು. ಈ ಶರೀರಗತ ನಾಡ್ಯಂತರ್ಗತ ಭಗವದ್ರೂಪಗಳನ್ನು ಸದಾ ನೆನೆಯುತ್ತಾ, ಉಪಾಸನೆ ಮಾಡುವವರಿಗೆ ಪುಣ್ಯಪ್ರಾಪ್ತಿ ಅತ್ಯಧಿಕ. ಈ ರಹಸ್ಯವನ್ನು ಅಲ್ಪಾಧಿಕಾರಿಗಳಿಗೆ, ಅಭಕ್ತರಿಗೆ ತಿಳಿಸಬಾರದೆಂದು ದಾಸರಾಯರ ಸಂದೇಶ ॥ ೯ ॥

## ಪದ್ಯ ೧೦

**ಮೂಲ**

**ತಿಳಿವುದೀ ದೇಹದೊಳಗಿಹ ಎಡ ।**
**ಬಲದ ನಾಡಿಗಳೊಳಗೆ ದಿವಿಜರು ।**
**ಜಲಜಸಂಭವ ವಾಯು ವಾಣ್ಯಾದಿಗಳು ಬಲದಲ್ಲಿ ॥**
**ಎಲರುಣಿಗ ವಿಹಗೇಂದ್ರ ಚಳಿವೆ ।**
**ಟ್ಟಳಿಯ ಷಣ್ಮಹಿಷಿಯರು ವಾರುಣಿ ।**
**ಕುಲಿಶಧರ ಕಾಮಾದಿಗಳು ಎಡಭಾಗದೊಳಿಹರು ॥ ॥ ೧೦ ॥**

**ಅವತರಣಿಕೆ**

ಈ ಸ್ಥೂಲಶರೀರಾದ್ಯಂತ ಹಬ್ಬಿ ಹರಡಿರುವ ಎಡ ಮತ್ತು ಬಲನಾಡಿಗಳಲ್ಲಿ ಇರುವ ಅಭಿಮಾನಿದೇವತೆಗಳ ವಿಚಾರವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಈ ದೇಹದೊಳಗಿಹ** = ಈ ಸ್ಥೂಲಶರೀರದಲ್ಲಿ ಇರುವ, **ಎಡಬಲದ ನಾಡಿಗಳೊಳಗೆ** = ಎಡಪಾರ್ಶ್ವ ಮತ್ತು ಬಲಪಾರ್ಶ್ವಗಳಲ್ಲಿ ಇರುವ ನಾಡಿವ್ಯೂಹದಲ್ಲಿ, **ದಿವಿಜರು** = ನಾಡ್ಯಭಿಮಾನಿ ದೇವತೆಗಳ ಇರುವಿಕೆಯನ್ನು, **ತಿಳಿವುದು** = ತಿಳಿಯುವವರಾಗಬೇಕು. **ಬಲದಲ್ಲಿ** = ಬಲಪಾರ್ಶ್ವದಲ್ಲಿರುವ ೩೬,೦೦೦ ನಾಡಿಗಳಲ್ಲಿ, **ಜಲಜಸಂಭವ** = ಕಮಲೋದ್ಭವರಾದ ಶ್ರೀಬ್ರಹ್ಮದೇವರು, **ವಾಯು** = ಜೀವೋತ್ತಮರಾದ ಶ್ರೀವಾಯುದೇವರು, **ವಾಣ್ಯಾದಿಗಳು** = ಸರಸ್ವತೀ ಮತ್ತು ಭಾರತೀದೇವಿ, ಅಂತು, ನಾಲ್ಕುಮಂದಿ ದೇವತೆಗಳು ಇದ್ದಾರೆ. **ಎಡಭಾಗದೊಳು** = ಎಡಭಾಗಗತ ೩೬,೦೦೦ ನಾಡಿಗಳಲ್ಲಿ, **ಎಲರುಣಿಗ** = ಶೇಷದೇವರು (ಎಲರ್ = ವಾಯು, ಉಣಿಗ = ಸೇವಿಸುವ ಅಂದರೆ ಗಾಳಿಯನ್ನೇ ಆಹಾರವನ್ನಾಗಿ ಉಳ್ಳಪ್ರಾಣಿ-ಸರ್ಪ) **ವಿಹಗೇಂದ್ರ** = ಪಕ್ಷಿಶ್ರೇಷ್ಠರಾದ ಗರುಡದೇವರು (ವಿಹಗ–ಗಗನಸಂಚಾರಿಗಳಾದ ಪಕ್ಷಿಸಮೂಹ), **ಚಳಿವೆಟ್ಟ** = ಹಿಮವತ್ಪರ್ವತ ರಾಜನ, **ಅಳಿಯ** = ಮಗಳಾದ ಪಾರ್ವತಿಯ ಗಂಡನಾದ ರುದ್ರದೇವರು, **ಷಣ್ಮಹಿಷಿಯರು** = ಶ್ರೀಕೃಷ್ಣನ ಆರುಮಂದಿ ರಾಣಿಯರಾದ ಜಾಂಬವತಿ, ನೀಲಾ, ಭದ್ರಾ, ಲಕ್ಷಣಾ, ಮಿತ್ರವಿಂದಾ, ಕಾಳಿಂದೀ ಎಂಬ ಷಣ್ಮಹಿಷಿಯರು, **ವಾರುಣಿ** = ಶೇಷಪತ್ನಿ ವಾರುಣೀ (ಇದರಿಂದ ಗರುಡ ಪತ್ನಿ ಸೌಪರ್ಣಿ ಮತ್ತು ರುದ್ರ ಪತ್ನಿ ಪಾರ್ವತೀದೇವಿಯರೂ ಗ್ರಾಹ್ಯ), **ಕುಲಿಶಧರ** = ವಜ್ರಾಯುಧಧಾರಿಯಾದ ಇಂದ್ರದೇವರು, **ಕಾಮಾದಿಗಳು** = ಮನ್ಮಥನೇ ಮುಂತಾದ ದೇವತೆಗಳು ಎಡಪಾರ್ಶ್ವಗತ ನಾಡಿಗಳಲ್ಲಿ ಮತ್ತು ನಾಡೀಗತ ನದಿಗಳಲ್ಲಿ ವಿದ್ಯಮಾನರಾಗಿದ್ದಾರೆ. ॥ ೧೦ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಎಡ–ಬಲಗತ ನಾಡಿಗಳಲ್ಲಿ ಅಭಿಮಾನಿದೇವತೆಗಳ ಹೇಳುತ್ತಾರೆ.

ಈ ಸ್ಥೂಲದೇಹದಲ್ಲಿ ಇರತಕ್ಕ ಎಡಭಾಗ ಬಲಭಾಗ ಇವುಗಳಲ್ಲಿ ಇರತಕ್ಕ ನಾಡಿಗಳಲ್ಲಿ ದೇವತೆಗಳು ಇರೋವರಾಗಿದ್ದಾರೆ. ಇವರನ್ನ ತಿಳಿಯೋವನಾಗಬೇಕು. ಆ ತಿಳಿಯೋ ಕ್ರಮ ಹ್ಯಾಂಗೆಂದರೆ—ಬಲಭಾಗ ಮೂವತ್ತಾರುಸಾವಿರ ನಾಡಿಗಳೊಳಗೆ ಬ್ರಹ್ಮದೇವರು, ಜೀವೋತ್ತಮರಾದ ವಾಯುದೇವರು, ಸರಸ್ವತೀ ಭಾರತೀ ಇವರಿಬ್ಬರು, ಅಂತು ನಾಲ್ಕುಮಂದಿ, ಈ ಭಾಗಗತ ನಾಡೀಗತ ನದಿಗಳಲ್ಲಿ ಇರೋವರಾಗಿದ್ದಾರೆ. ಎಡಭಾಗ ಎಂದರೆ ಮೂವತ್ತಾರು ಸಾವಿರ ನಾಡಿಗಳೊಳಗೆ ತದ್ಗತ ನದಿಗಳೊಳಗೆ, ಗಾಳಿಯನ್ನು ಉಣತಕ್ಕ ಸರ್ಪ, ಶೇಷದೇವರು ಅಂತ ತಾತ್ಪರ್ಯ. ಪಕ್ಷಿಶ್ರೇಷ್ಠನಾದ ಗರುಡದೇವರು, ಹಿಮಾಚಲನ ಜಾಮಾತನಾದ ರುದ್ರದೇವರು, ನೀಲ, ಜಾಂಬವತಿ ಮೊದಲಾದ, ದೇವರ ಹೆಂಡತಿಯರಾದ ಆರು ಮಹಿಷಿಯರು, ಶೇಷಪತ್ನಿ ವಾರುಣಿ, ಸೌಪರ್ಣೀ, ಪಾರ್ವತೀ, ಇಂದ್ರದೇವರು ವಜ್ರಾಯುಧ ಧರಿಸಿದವ, ಮನ್ಮಥ ಇವರೇ ಮೊದಲಾದವರು, ಎಡಭಾಗಗತ ನಾಡೀಗತ ನದಿಗಳಲ್ಲಿ ಇರೋವರಾಗಿದ್ದಾರೆ. ಮುಖ್ಯಾಮುಖ್ಯತ್ವೇನ ಸರ್ವರೂ ಸರ್ವತ್ರ ವ್ಯಾಪ್ತರು ಎಂತ ತಾತ್ಪರ್ಯ. ॥ ೧೦ ॥

**೨. ಭಾವಪ್ರಕಾಶಿಕೆ**

ಈ ದೇಹದಲ್ಲಿ ಹಗಲುನಾಡಿಗಳು ೩೬ ಸಹಸ್ರ ಬಲಭಾಗದಲ್ಲಿಯೂ, ರಾತ್ರಿ ನಾಡಿಗಳು ೩೬ ಸಹಸ್ರ ಎಡಭಾಗದಲ್ಲಿಯೂ ಇರುವವು. ಬಲದ ನಾಡಿಗಳು ಪುರುಷನಾಡಿಗಳೆಂತಲೂ, ಎಡಭಾಗದ ನಾಡಿಗಳಿಗೆ ಸ್ತ್ರೀನಾಡಿಗಳೆಂತಲೂ ಹೆಸರು. ಇದಲ್ಲದೆ ಬಲ ಎಡದಲ್ಲಿರುವ ನಾಡಿಗಳಲ್ಲಿ ೫೦೦-೫೦೦ ನಾಡಿಗಳಿಗೆ ದಕ್ಷಿಣಾಯನ ನಾಡಿಗಳು, ಉತ್ತರಾಯನ ನಾಡಿಗಳು ಎಂತಲೂ ಹೆಸರುಂಟು.

**ಶಾಂಡಿಲ್ಯ ತತ್ವದಲ್ಲಿ :–**

**ದೇಹೇ ತ್ರಿಸ್ರಸ್ತು ನಾಡ್ಯಃ ಸ್ಯುಃ ಪಿಂಗಳೇಡಾಸುಷುಮ್ನಕಾಃ ।**
**ದಕ್ಷಿಣಾ ಪಿಂಗಳಾನಾಮ ಇಡಾ ವಾಮಾ ಪ್ರಕೀರ್ತಿತಾ ॥**
**ಪಿಂಗಳಾಯಾಃ ಶತಂಪಂಚನಾಡ್ಯೋ ವೈ ದಕ್ಷಿಣಾಯನಾಃ ।**
**ತಾವಂತ ಏವಾ ಚೇಡಾಯಾಃ ನಾಡ್ಯಸ್ತೇ ಚೋತ್ತರಾಯಣಾಃ॥**

ಈ ದೇಹದಲ್ಲಿ ಪ್ರಧಾನನಾಡಿಗಳು ಮೂರು ಇರುವುವು. ಮಧ್ಯದಲ್ಲಿ ಸುಷುಮ್ನಾ, ಬಲದಲ್ಲಿ ಪಿಂಗಳಾ, ಎಡದಲ್ಲಿ ಇಡಾ. ಪಿಂಗಳಾನಾಡಿಯಿಂದ ಹುಟ್ಟಿದ ೫೦೦ ನಾಡಿಗಳಿಗೆ ದಕ್ಷಿಣಾಯನ ನಾಡಿಗಳೆಂತಲೂ, ಇಡಾನಾಡಿಯಿಂದ ಹುಟ್ಟಿದ ೫೦೦ ನಾಡಿಗಳಿಗೆ ಉತ್ತರಾಯಣ ನಾಡಿಗಳೆಂತಲೂ ಹೆಸರು ಎಂದು ಹೇಳಿರುವರು. ಇಂತಹ ಬಲ ಎಡ ನಾಡಿಗಳಲ್ಲಿ ದೇವತೆಗಳು ವಾಸಮಾಡುತ್ತಿರುವರೆಂದು ತಿಳಿಯಬೇಕು. ಬಲಭಾಗದ ನಾಡಿಗಳಲ್ಲಿ ಬ್ರಹ್ಮದೇವರು, ಸರಸ್ವತೀ ಮೊದಲಾದವರು ವಾಸವಾಗಿರುವರು. ಎಡಭಾಗದ ನಾಡಿಗಳಲ್ಲಿ ಶೇಷದೇವರು, ಗರುಡದೇವರು, ರುದ್ರದೇವರು, ಜಾಂಬವತಿ, ಮಿತ್ರವಿಂದಾ, ಕಾಳಿಂದೀ, ನೀಲಾ, ಭದ್ರಾ, ಲಕ್ಷಣಾ ಎಂಬ ಷಣ್ಮಹಿಷಿಯರು, ಶೇಷದೇವರ ಹೆಂಡತಿ ಮೊದಲಾದವರು ಇರುವರು ॥ ೧೦ ॥

## ೩. ಭಾವದರ್ಪಣ

ತಿಳಿವದೀ ದೇಹೇತಿ । ಎಲರುಣಿಪ–ಎಲರು–ಗಾಳಿ, ಉಣಿಪ-ಉಣ್ಣತಕ್ಕ ಸರ್ಪ, ಇವರನ್ನ ಪಾಲನ ಮಾಡತಕ್ಕ ಶೇಷನೆಂಬರ್ಥ. ವಿಹಗೇಂದ್ರ-ಪಕ್ಷಿಶ್ರೇಷ್ಠ ಗರುಡ. ಛಳಿವೆಟ್ಟಳಿಯ–ಹಿಮವತ್ಪರ್ವತದ ಅಳಿಯ, ರುದ್ರದೇವ, ಕುಲಿಶಧರ-ವಜ್ರಾಯುಧ ಧರಿಸಿದವ ಇಂದ್ರಯೆಂಬರ್ಥ. ॥ ೧೦ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ತಿಳಿವುದು-ಇತಿ ॥ ದಿವಿಜಾಃ । ಯಲರುಣಿಗ–ಸರ್ಪಃ । ವಿಹಗೇಂದ್ರಃ-ಗರುಡ । ಚಳಿವೆಟ್ಟ–ಹಿಮಾಲಯ । ವಾರುಣೀ–ಶೇಷಭಾರ್ಯಾ । ಅನೇನ ಸೌಪರ್ಣೀ ಪಾರ್ವತ್ಯಾ ಅಪಿ ಗ್ರಾಹ್ಯೇ । ಕುಲಿಶಃ-ವಜ್ರಮ್ ॥ ೧೦ ॥

### ಕನ್ನಡಾರ್ಥ

ನಾಡಿಗಳಲ್ಲಿ ಇರುವ ದೇವತೆಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾರೆ–ತಿಳಿವುದು-ಎಂಬೀ ಪದ್ಯದಿಂದ. ದಿವಿಜರು-ಅಂದರೆ, ದೇವತೆಗಳು. ಯಲರುಣಿಗ ಎಂದರೆ ಗಾಳಿಯನ್ನು ತಿಂದು ಬದುಕುವ ಸರ್ಪ. ಅಂದರೆ, ಶೇಷ–ಎಂದು ತಿಳಿ

ಯಬೇಕು. ವಿಹಗೇಂದ್ರ–ಆಕಾಶದಲ್ಲಿ ಸಂಚರಿಸುವ ಪಕ್ಷಿಗಳಲ್ಲಿ ಶ್ರೇಷ್ಠ ರಾಜನಾದ ಗರುಡನು; ಚಳಿಪೆಟ್ಟ-ಚಳಿಯುಳ್ಳ ಬೆಟ್ಟ-ಹಿಮಾಲಯ, ಹಿಮವತ್ಪರ್ವತ ರಾಜನ ಅಳಿಯನು ಮಹಾರುದ್ರದೇವನು ಚಳಿವೆಟ್ಟಳಿಯನು–ಎಂದು ತಿಳಿಯಬೇಕು. ಶೇಷಪತ್ನಿಗೆ ವಾರುಣೀ-ಎಂದು ಹೆಸರು. ಇದರಿಂದ ಪಾರ್ವತೀ-ಸೌಪರ್ಣೀ–ರುದ್ರ-ಗರುಡಪತ್ನಿಯರು–ಇವರನ್ನೂ ಇಲ್ಲಿ ಪರಿಗಣಿಸತಕ್ಕದ್ದು–ಎಂದು ಸೂಚಿತವಾಗುತ್ತದೆ. ಕುಲಿಶ-ಪಾಷಾಣ ॥ ೧೦ ॥

## ಛ. ಶ್ರೀಗುರುಹೃದಯಪ್ರಕಾಶಿಕೆ

ನಾಡೀಸ್ಥಿತ ದೇವತಾಸ್ಮರಣೆ ತಿಳಿಸುತ್ತಾರೆ, ತಿಳಿವುದೆಂದು. ಈ ಮನುಷ್ಯ ದೇಹದಲ್ಲಿ ಎಡಬಲವಲ್ಲಿ ಸಹಾ ಇರುವ ನಾಡಿಗಳಲ್ಲಿ, ಬಲಭಾಗದಲ್ಲಿ ಜಲಜ ಸಂಭವನೆಂಬ ಬ್ರಹ್ಮ, ವಾಯುದೇವರು, ಯಲರ್ ಎನ್ನುವ ಗಾಳಿಯನ್ನುಣ್ಣುತ್ತಿರುವ ಸರ್ಪರೂಪೀ ಶೇಷದೇವರು, ಗರುಡ, ಚಳಿವೆಟ್ಟಳಿಯನೆಂಬ, ಹಿಮವತ್ಪರ್ವತನ ಅಳಿಯನಾದ ಈಶ್ವರನು, ಕುಲಿಶಧರನೆಂಬ ಇಂದ್ರ, ಕಾಮ ಮೊದಲಾದವರೂ ಇರುವರು. ಎಡಭಾಗದಲ್ಲಿ ವಾಣಿ ಎಂಬ ಸರಸ್ವತಿ, ವಾರುಣಿ ಎಂಬ ಶೇಷಪತ್ನಿ, ಷಣ್ಮಹಿಷಿಯರೆಂಬ ನೀಲಾ, ಭದ್ರಾ, ಮಿತ್ರವಿಂದಾ, ಕಾಳಿಂದೀ, ಲಕ್ಷಣಾ, ಜಾಂಬವತಿಯರೆಂಬ ಶ್ರೀಕೃಷ್ಣನ ಷಣ್ಮಹಿಷಿಯರು ಮುಂತಾದವರು ಇರುತ್ತಾರೆ. ॥ ೧೦ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಸ್ಥೂಲಶರೀರದಾದ್ಯಂತ ಹಬ್ಬಿಹರಡಿರುವ ನಾಡೀವ್ಯೂಹಗಳು, ಎಡ ಮತ್ತು ಬಲಪಾರ್ಶ್ವಗತ ನಾಡಿಗಳಲ್ಲಿ ವಿದ್ಯಮಾನರಾಗಿರುವ ದೇವತಾವರ್ಗದ ವಿಚಾರವನ್ನು ತಿಳಿಸುತ್ತಾರೆ.

ಸ್ಥೂಲಶರೀರದಲ್ಲಿ ಆಪಾದ ಮೌಳಿ ಪರ್ಯಂತ ವ್ಯಾಪಿಸಿರುವ ೭೨,೦೦೦ ನಾಡಿಗಳು ಎರಡು ಪ್ರಕಾರ ಇವೆ–

೧. ಬಲಪಾರ್ಶ್ವಗತ ೩೬,೦೦೦ ನಾಡಿಗಳ ಸಮೂಹ,

೨. ಎಡಪಾರ್ಶ್ವಗತ ೩೬,೦೦೦ ನಾಡಿಗಳ ವ್ಯೂಹ.

ಸ್ಥೂಲದೇಹದ ಬಲಪಾರ್ಶ್ವದಲ್ಲಿರತಕ್ಕ ೩೬,೦೦೦ ನಾಡಿಗಳಿಗೆ ಪುರುಷ ನಾಡಿಗಳೆಂದು ಹೆಸರು. ಇವುಗಳನ್ನು ದಿವಾನಾಡಿಗಳೆಂತಲೂ ಕರೆಯುವರು ಈ ನಾಡಿಗಳು ಪಿಂಗಳಾನಾಡಿಯಿಂದ ಉತ್ಪತ್ತಿಯಾಗುವ ಶಾಖಾನಾಡಿಗಳು. ಇವುಗಳಲ್ಲಿ ೫೦೦ ಮುಖ್ಯನಾಡಿಗಳಿಗೆ ದಕ್ಷಿಣಾಯನನಾಡಿಗಳೆಂದು ಹೆಸರು. ಸುಷುಮ್ನಾನಾಡಿಯ ಬಲಭಾಗವೇ ದಕ್ಷಿಣ ದಿಕ್ಕು.

ಈ ಬಲಪಾರ್ಶ್ವಗತ ನಾಡಿಗಳಲ್ಲಿ ಕಮಲೋದ್ಭವರಾದ ಶ್ರೀಚತುರ್ಮುಖ ಬ್ರಹ್ಮದೇವರು ಪ್ರಧಾನ ವಾಯುದೇವರು, ಶ್ರೀಸರಸ್ವತೀದೇವಿಯರು ವಿದ್ಯಮಾನರಾಗಿ ಆವಾಸವಾಗಿದ್ದಾರೆ. ಆದಿ ಶಬ್ದದಿಂದ ವಾಯುಪತ್ನಿಯು ರಾದ ಭಾರತೀದೇವಿಯರೂ ಗ್ರಾಹ್ಯ.

ಸ್ಥೂಲಶರೀರಗತ ಎಡಭಾಗದಲ್ಲಿರುವ ೩೬,೦೦೦ ನಾಡಿಗಳು ಸ್ತ್ರೀನಾಡಿಗಳು. ಇವುಗಳಿಗೆ ನಿಶಾನಾಡಿಗಳೆಂತಲೂ ಹೆಸರು. ಈ ನಾಡಿಗಳು ಇಡಾನಾಡಿಯಿಂದ ಉತ್ಪತ್ತಿಯಾದ ಶಾಖಾನಾಡಿಗಳು. ಇವುಗಳಲ್ಲಿ ೫೦೦ ಮುಖ್ಯನಾಡಿಗಳಿಗೆ ಉತ್ತರಾಯಣ ನಾಡಿಗಳೆಂದು ಹೆಸರು. ಸುಷುಮ್ನಾನಾಡಿಯ ಎಡಭಾಗವೇ ಉತ್ತರದಿಕ್ಕು.

ಈ ಎಡಪಾರ್ಶ್ವಗತ ನಾಡಿಗಳಲ್ಲಿ ಶೇಷದೇವರು ಆವಾಸರಾಗಿದ್ದಾರೆ. ಶೇಷದೇವರನ್ನು ದಾಸರಾಯರು ಎಲರುಣಿಗ ಎಂದಿದ್ದಾರೆ. ಎಲರ್-ಎಂದರೆ, ಗಾಳಿ, ಉಣಿಗ-ಎಂದರೆ, ಭಕ್ಷಿಸುವವನು. ಅಂದರೆ ಗಾಳಿಯನ್ನು ಆಹಾರವನ್ನಾಗಿ ಉಳ್ಳ ಸರ್ಪ ಎಂದರ್ಥ. ಸರ್ಪಶ್ರೇಷ್ಠರಾದ ಶೇಷದೇವರು ಗ್ರಾಹ್ಯ. ಗರಡುದೇವರು ವಿದ್ಯಮಾನರಾಗಿದ್ದಾರೆ. (ವಿಹಗೇಂದ್ರ– ವಿಹಗ–ಆಕಾಶದಲ್ಲಿ ಸಂಚರಿಸುವ ಪಕ್ಷಿವರ್ಗ. ಇಂದ್ರ–ಪಕ್ಷಿಶ್ರೇಷ್ಠರಾದ ಗರುಡದೇವರು) ಉಮಾಪತಿಯಾದ ಮಹಾರುದ್ರದೇವರೂ ಸಹ ಆವಾಸವಾಗಿದ್ದಾರೆ. ಚಳಿವೆಟ್ಟ–ಎಂದರೆ ಚಳಿಯ ಬೆಟ್ಟವೆಂದರ್ಥ. ಅಂದರೆ ಹಿಮಾಲಯ ಪರ್ವತ. ಅಳಿಯ–ಅಂತಹ ಹಿಮವತ್ಪರ್ವತರಾಜನ ಅಳಿಯನಾದ ರುದ್ರದೇವರು (ಹೈಮವತಿಯ ಪ.). ಶ್ರೀಕೃಷ್ಣನ ಆರು ಮಂದಿ ರಾಣಿಯರಾದ ಷಣ್ಮಹಿಷಿಯರೂ ಸಹ ಎಡಪಾರ್ಶ್ವದ ನಾಡಿಗಳಲ್ಲಿದ್ದಾರೆ. ಜಾಂಬುವತೀ-ಮಿತ್ರವಿಂದಾ-ಕಾಳಿಂದೀ-ನೀಲಾ-ಭದ್ರಾ-ಲಕ್ಷಣಾ ಎಂಬ ಆರುಮಂದಿ ಶ್ರೀಕೃಷ್ಣ ಪತ್ನಿಯರೇ ಆ ಷಣ್ಮಹಿಷಿಯರು. ಶೇಷದೇವರ ಪತ್ನಿಯ

ರಾದ ವಾರುಣೀದೇವಿಯರೂ ಆವಾಸವಾಗಿದ್ದಾರೆ. ಇದರಿಂದ ಗರುಡ ಪತ್ನಿ ಸೌಪರ್ಣೀ ಮತ್ತು ರುದ್ರ ಪತ್ನಿ ಪಾರ್ವತಿಯರೂ ಸಹ ಗ್ರಾಹ್ಯ.

ವಜ್ರಾಯುಧಧಾರಿಯಾದ ದೇವೇಂದ್ರ ಮನ್ಮಥ ಇತ್ಯಾದಿ ದೇವತಾ ವರ್ಗಗಳು ಅಭಿಮಾನಿದೇವತೆಗಳಾಗಿದ್ದಾರೆ. ಇದರಿಂದ ಇಂದ್ರಪತ್ನಿ ಶಚೀ ದೇವಿ ಮತ್ತು ಕಾಮನ ಪತ್ನಿ ರತೀದೇವಿಯರೂ ಸಹ ಗ್ರಾಹ್ಯ.

## ಪದ್ಯ ೧೧

**ಮೂಲ**

**ಇಕ್ಕೆಲದೊಳಿಹ ನಾಡಿಯೊಳು ದೇ ।**
**ವಕ್ಕಳಿಂದೊಡನಾಡುತಲಿ ಪೊಂ ।**
**ಬಕ್ಕಿದೇರನು ಜೀವರಧಿಕಾರಾನುಸಾರದಲಿ ॥**
**ತಕ್ಕ ಸಾಧನವ ಮಾಡಿ ಮಾಡಿಸು ।**
**ತಕ್ಕರದಿ ಸಂತೈಪ ಭಕ್ತರ ।**
**ದಕ್ಕಗೊಡನಸುರರ್ಗೆ ಸತ್ಪುಣ್ಯಗಳನಪಹರಿಪ ॥ ॥ ೧೧ ॥**

**ಅವತರಣಿಕೆ**

ಈ ಸ್ಥೂಲ ಶರೀರಾದ್ಯಂತ ವ್ಯಾಪಿಸಿರುವ ಎಡ ಮತ್ತು ಬಲ ಪಾರ್ಶ್ವ ಗತ ನಾಡಿಗಳಲ್ಲಿ, ಶ್ರೀಪರಮಾತ್ಮನು ಜೀವರ ಸ್ವರೂಪ ಯೋಗ್ಯತೆಗನುಗುಣ ವಾಗಿ ಸಾಧನೆಗಳನ್ನು ಮಾಡಿ ಮಾಡಿಸುತ್ತಿರುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಇಕ್ಕೆಲದೊಳಿಹ** = ಈ ಸ್ಥೂಲ ದೇಹದಲ್ಲಿ ಬಲ ಮತ್ತು ಎಡ ಎಂಬ ಎರಡು ಪಾರ್ಶ್ವಗಳಲ್ಲಿರುವ (ಇಕ್ಕೆಲ = ಎರಡು ಪಾರ್ಶ್ವ) **ನಾಡಿಯೊಳು** = ೭೨,೦೦೦ ಸಂಖ್ಯಾಕವಾದ ನಾಡಿಗಳಲ್ಲಿ, **ಪೊಂಬಕ್ಕಿದೇರನು** = ಗರುಡಾರೂಢ

ನಾದ ಶ್ರೀಪರಮಾತ್ಮನು (ಪೊನ್ನು–ಭಂಗಾರ, ಹಕ್ಕಿ–ಪಕ್ಷಿ) ಅಂದರೆ, ಸ್ವರ್ಣ ಕಾಂತಿಯಿಂದ ವಿರಾಜಮಾನನಾದ ಪಕ್ಷಿಶ್ರೇಷ್ಠನಾದ ಗರುಡದೇವರು. ತೇರನು = ಗರುಡನನ್ನೇ ತನ್ನ ವಾಹನವನ್ನಾಗಿ (ತೇರು) ಉಳ್ಳ ಗರುಡವಾಹನನಾದ ಶ್ರೀಹರಿ) **ದೇವಕ್ಕಳಿಂದ** = ನಾಡ್ಯಭಿಮಾನೀ ಹಾಗೂ ನಾಡೀಗತ ನದ್ಯಭಿಮಾನಿ ದೇವತಾವರ್ಗದಿಂದ, **ಒಡನಾಡುತಲಿ** = ಕೂಡಿಕೊಂಡು, ನಾಡಿಗಳ ದ್ವಾರಾ ಸಂಚರಿಸುತ್ತಾ, ವಿಹಾರಮಾಡುತ್ತಾ, **ಜೀವರ** = ಆಯಾಯ ಜೀವರ, **ಅಧಿಕಾರಾನುಸಾರವಲಿ** = ಸ್ವರೂಪಯೋಗ್ಯತೆಗೆ ಅನುಗುಣವಾಗಿ, **ತಕ್ಕ ಸಾಧನವ** = ಜೀವರ ಅನಾದಿಕರ್ಮದ ಫಲವಾಗಿ ಬಂದಿರುವ ಜನ್ಮಗಳಿಗನುಸಾರವಾಗಿ, ಅದಕ್ಕೆ ತಕ್ಕಂತೆ ಸಾಧನಗಳನ್ನು, **ಮಾಡಿ** = ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, **ಮಾಡಿಸುತ** = ನಾಡ್ಯಭಿಮಾನೀದೇವತೆಗಳ ದ್ವಾರಾ, ವಾಯುಗೋಳಕಾಂತರ್ಗತನಾಗಿ ಮಾಡಿಸುತ, **ಭಕ್ತರ** = ನಿಜಭಕ್ತರನ್ನು, **ಅಕ್ಕರದಿ** = ವಾತ್ಸಲ್ಯದಿಂದ, **ಸಂತೈಪ** = ಸುಖಪ್ರದನಾಗಿದ್ದಾನೆ. **ಅಸುರರ್ಗೆ** = ಭಗವದ್ದ್ವೇಷಿಗಳಾದ ದುರ್ಜನರಿಗೆ, **ದಕ್ಕಗೊಡನು** = ತಾನು ಪ್ರಾಪ್ತನಾಗುವುದಿಲ್ಲ. **ಸತ್ಪುಣ್ಯಗಳನಪಹರಿಪ** = ಅವರ ಪುಣ್ಯಕಾರ್ಯಗಳ ಫಲವನ್ನು ಅಪಹರಿಸುತ್ತಾನೆ. ॥ ೧೧ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಯೋಗ್ಯತಾನುಸಾರ ಸಾಧನ ಮಾಡಿಸತಾನೆಂದು ಹೇಳತಾರೆ.

ಈ ಸ್ಥೂಲದೇಹದೊಳಗೆ ಎಡ–ಬಲ ಭಾಗಗಳಲ್ಲಿರತಕ್ಕ ಎಪ್ಪತ್ತೆರಡು ಸಾವಿರ ನಾಡಿಗಳೊಳಗೆ ಸ್ವರ್ಣಸದೃಶವಾದ ಕಾಂತಿಯುಕ್ತವಾದ ಹಕ್ಕಿ ಗರುಡ, ಈ ಗರುಡನನ್ನೇ ರಥವಾಗಿ ಉಳ್ಳ ಪರಮಾತ್ಮನು ನಾಡೀಅಭಿಮಾನಿ, ನದೀಅಭಿಮಾನಿ, ತತ್ತ್ವಾಭಿಮಾನಿ ಏತದೃಶರಾದ ದೇವತೆಗಳಿಂದ ಕೂಡಿಕೊಂಡು ಆಡುತ್ತ, ತ್ರಿವಿಧಜೀವರ ಸ್ವರೂಪಯೋಗ್ಯತಾನುಸಾರ, ಆಯಾ ಜನ್ಮಕ್ಕೆ ಯೋಗ್ಯವಾದ ತಕ್ಕಷ್ಟು ಸಾಧನ ಬಿಂಬಕ್ರಿಯಾದ್ವಾರಾ ತನ್ನ ಸ್ವಾಖ್ಯ ಇಂದ್ರಿಯಾಗಳ ದ್ವಾರ ಮಾಡಿ ದೇಹೇಂದ್ರಿಯಗಳ ದ್ವಾರಾ ಎಂದರೆ, ತತ್ತ್ವೇಶರಿಂದ, ಅವರ

ದ್ವಾರಾ ಜೀವನಿಂದ, ಜೀವನ ದ್ವಾರಾ ದೇಹದಿಂದ ಮಾಡಿಸುತ್ತ, ತನ್ನ ಭಕ್ತರನ್ನು ಪರ್ಯವಸಾನಕ್ಕೆ ತನ್ನ ಸಂದರ್ಶನ ಕೊಟ್ಟು ಸುಖಪ್ರದನಾಗಿ ಸಂತೃಪ. ಅಸುರರಿಗೆ ತನ್ನ ಅಪರೋಕ್ಷ ಕೊಡದೆ ದುಃಖವನ್ನೇ ಕೊಟ್ಟು ಈ ರೀತ್ಯಾ ಸಂರಕ್ಷಿಸುತ್ತಾನೆ. ಅಸುರರು ಅಪಕ್ವದಶಾದಲ್ಲಿ ಯಜ್ಞ–ಯಾಗಾದಿಗಳ, ಪುಣ್ಯಕಾರ್ಯಗಳ ಮಾಡತಾರೆ. ಇಂಥಾ ಪುಣ್ಯಗಳನ್ನು ಅವರು ಭಗವದರ್ಪಣ ಮಾಡೋದಿಲ್ಲ. ಅದನ್ನ ಅವರಿಗೆ ದಕ್ಕೋಹಾಂಗೆ ಮಾಡನು. ಮಾಡದೆ, ಒಳ್ಳೆದಾದಂಥ ಸತ್ಕರ್ಮಗಳ ಪುಣ್ಯಗಳ ಪರಮಾತ್ಮ ಅಪಹಾರ ಮಾಡೋವನಾಗಿ, ಮಹಾಫಲ ಹೊಂದಬೇಕಾದ್ದಕ್ಕೆ ಅಲ್ಪಫಲದಿಂದ ಪರ್ಯವಸಾನ ಮಾಡತಾನೆ. ಮತ್ತು ಮುಕ್ತಿಯೋಗ್ಯರಾದಕಾಲಕ್ಕೂ 'ಕೃಷ್ಣಾರ್ಪಣ' ಎನ್ನದ ಸತ್ಪುಣ್ಯಗಳನ್ನು ಅಸುರರು ಅಪಹರಿಸುತ್ತಾರೆ. ಅದರನ್ನ ಅವರಿಗೆ ದಕ್ಕಗೊಡದೆ ಪರಮಾತ್ಮ ಅಪಹರಿಸಿ, ಪುಣ್ಯಮಾಡಿದವರಿಗೆ ಅಲ್ಪಫಲ ಕೊಟ್ಟು, ಉಳದದ್ದು ದೇವತೆಗಳಿಗೆ ವಿಭಾಗ ಮಾಡಿ ಕೊಡೋವನಾಗತಾನೆ ॥೧೧॥

### ೨. ಭಾವಪ್ರಕಾಶಿಕೆ

ಇಂತೀಶರೀರದೊಳಗಿನ ನಾಡಿಗಳಲ್ಲಿ ಗರುಡವಾಹನವಾದ ಶ್ರೀಹರಿಯು, ದೇವತೆಗಳಿಂದೊಡಗೂಡಿ ವಾಸಮಾಡುತ್ತಾ, ಮೂರುವಿಧ ಚೇತನರ ಯೋಗ್ಯತಾನುಸಾರವಾಗಿ ತಕ್ಕ ಸಾಧನಗಳನ್ನು ಮಾಡಿ, ಅವರಿಂದಲೂ ಮಾಡಿಸಿ, ಭಕ್ತರಿಗೆ ಪುಣ್ಯಫಲಗಳನ್ನು ಕೊಟ್ಟು, ಉದ್ಧರಿಸುವನು. ದ್ವೇಷಿಗಳಾದ ದೈತ್ಯರಲ್ಲಿದ್ದು ಮಾಡಿ ಮಾಡಿಸುವ ಪುಣ್ಯಫಲವನ್ನು ತಾನು ಅಪಹರಿಸಿ, ಅವರಿಗೆ ಆ ಫಲ ದಕ್ಕದಂತೆ ಮಾಡುವನು. ॥ ೧೧ ॥

### ೩. ಭಾವದರ್ಪಣ

ಇಕ್ಕೆಲದೊಳು–ಇತಿ ॥ ಉಭಯ ಭಾಗಗಳಲ್ಲಿದ್ದ ನಾಡಿಗಳೂ ಎಂಬರ್ಥ. ಪೊಂಬಕ್ಕಿದೇರನು–ಗರುಡನೇ ತೇರಾಗಿ ಉಳ್ಳಂಥ ಶ್ರೀಕೃಷ್ಣ ॥ ೧೧ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಇಕ್ಕೆಲದೊಳು–ಇತಿ ॥ ಇಕ್ಕೆಲದ–ಎಡ ಬಲಭಾಗದ ॥ ದೇವರ್ಕಳು–

ದೇವತೆಗಳು । ಪೊಂಬಕ್ಕಿ–ಗರುಡ । ಪೀತಶುಕ್ಲಾರುಣೋ ಹರಿಃ–ಇತ್ಯುಕ್ತೇಃ ॥ ತಕ್ಕ–ಯೋಗ್ಯ । ಅಕ್ಕರ–ಹರ್ಷ । ಪುಣ್ಯ-ದೈತ್ಯಾನಾಮ್ ॥ ೧೧ ॥

**ಕನ್ನಡಾರ್ಥ :–**

ಪೀತ–ಶುಕ್ಲ–ಅರುಣ ವರ್ಣಗಳಿಂದ ಒಪ್ಪುವ ಹರಿಯು ಗರುಡ ರಥಾರೂಢನಾಗಿರುತ್ತಾನೆ. ದೈತ್ಯರು ಮಾಡಿದ ಪುಣ್ಯಗಳನ್ನು ಅವರಿಗೆ ಯಾವದೊಂದನ್ನೂ ನಿಮಿತ್ತೀಕರಿಸಿ, ಆ ದೇವತೆಗಳಿಗೆ ಕೊಡುವನೆಂದು ಈ ಪದ್ಯದಲ್ಲಿರುವ ಫಲಶ್ರುತಿ ॥ ೧೧ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಈ ದೇವತೆಗಳಲ್ಲಿ ದೇವರನ್ನು ಮುಖ್ಯವಾಗಿ ಸ್ಮರಿಸೆಂದು ಹೇಳುತ್ತಾರೆ, ಇಕ್ಕೆಲದೊಳೆಂದು. ಈ ಎರಡು ಭಾಗದ ನಾಡಿಗಳಲ್ಲೂ ದೇವಕುಮಾರರೆಂಬ ಬ್ರಹ್ಮಾದಿಗಳ ಕೂಡ ತಾನೂ ಆಡುತ್ತಾ, ಪೊಂಬಕ್ಕಿದೇರನೆಂಬ ಸ್ವರ್ಣವರ್ಣ ಗರುಡರಥನಾದ ದೇವರು ಜೀವರ ಯೋಗ್ಯತಾನುಸಾರ ತಕ್ಕ ಸಾಧನೆಗಳನ್ನು ಪ್ರೇರಣೆಮಾಡಿ, ಮಾಡಿಸಿ, ಅಕ್ಕರೆ ಎಂಬ ಸ್ವೇಚ್ಛೆಯಿಂದ ರಕ್ಷಿಸಿ, ತನ್ನ ಭಕ್ತರನ್ನು ಅಸುರರ ವಶಕ್ಕೆ ಬಿಟ್ಟುಕೊಡದೆ, ಅಸುರರ ಪುಣ್ಯಗಳನ್ನು ಅಪಹರಿಸಿ, ತನ್ನವರಿಗೆ ತಾರತಮ್ಯಕ್ರಮದಿಂದ ಕೊಡುವನೆಂದಭಿಪ್ರಾಯ ॥ ೧೧ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಈ ಸ್ಥೂಲಶರೀರದ ಎಡ ಮತ್ತು ಬಲಪಾರ್ಶ್ವಗಳಲ್ಲಿ ವ್ಯಾಪಕವಾಗಿ ಹರಡಿರುವ ೭೨,೦೦೦ ನಾಡಿಗಳಲ್ಲಿ ನಾಡ್ಯಭಿಮಾನಿ ದೇವತೆಗಳೂ ಮತ್ತು ನಾಡೀಗತ ನದ್ಯಭಿಮಾನಿ ದೇವತೆಗಳೂ ಆವಾಸವಾಗಿದ್ದಾರೆ.

ಇಕ್ಕೆಲದಲ್ಲಿ ಇಹ ನಾಡ್ಯಭಿಮಾನಿ ದೇವತೆಗಳ ಸಹಿತವಾಗಿ ಶ್ರೀಪರಮಾತ್ಮನು ವಿಹರಿಸುತ್ತಿರುವನು. ಗರುಡನನ್ನೇ ತನ್ನ ತೇರನ್ನಾಗಿ ಉಳ್ಳವನು, ಗರುಡಾರಥಾರೂಢನಾದ ಶ್ರೀಪರಮಾತ್ಮನು.

ಆ ಪೊಂಬಕ್ಕಿದೇರನಾದ ಪೂರ್ಣಾನಂದಮಯನು ತ್ರಿವಿಧಜೀವರ ಸ್ವರೂಪಯೋಗ್ಯತಾನುಸಾರ ಸಾಧನೆಗಳನ್ನು ಮಾಡಿಸುತ್ತಿರುವನು.

ಸಾತ್ವಿಕ, ರಾಜಸ, ತಾಮಸ ಎಂಬ ತ್ರಿವಿಧಜೀವರಿದ್ದಾರೆ. ತಾರತಮ್ಯಾನುಸಾರ, ಅವರವರ ಸ್ವರೂಪಯೋಗ್ಯತೆ ಬೇರೆಬೇರೆಯಾಗಿರುವುದು. ತ್ರಿವಿಧಜೀವರ ಸ್ವರೂಪ ಯೋಗ್ಯತೆಗನುಸಾರವಾಗಿ, ನಾಡ್ಯಭಿಮಾನಿ ದೇವತಾಂತರ್ಗತ ಗರುಡ ಗಮನನು, ೭೨,೦೦೦ ಸಂಖ್ಯಾಕವಾದ ನಾಡಿಗಳಲ್ಲಿ ವಿದ್ಯಮಾನರಾಗಿರುವ ಶ್ರೀವಾಯುದೇವರ ಅಂತರ್ಗತನಾಗಿ, ನಾಡ್ಯಭಿಮಾನಿ ದೇವತೆಗಳ ದ್ವಾರಾ ಬಿಂಬ ಕ್ರಿಯಾದ್ವಾರಾ ಸಾಧನೆಗಳನ್ನು ಮಾಡಿಸುತ್ತಿರುವನು.

ಹೀಗೆ ಜೀವರ ಸಾಧನಗಳನ್ನು ಜೀವರ ಪರವಾಗಿ, ತಾನೇಮಾಡಿ, ದೇವತೆಗಳ ದ್ವಾರಾ ಮಾಡಿಸುತ್ತಾ, ತನ್ನನ್ನೇ ನಂಬಿ ಸೇವಿಸುತ್ತಿರುವ ನಿಜಭಕ್ತರನ್ನು ವಾತ್ಸಲ್ಯದಿಂದ ಸದಾ ರಕ್ಷಿಸುತ್ತಾ ಆನಂದಪ್ರದನಾಗಿರುವನು.

ದುರ್ಜನರಾದ ತಮೋಯೋಗ್ಯರು, ಭಗವದ್ದ್ವೇಷಿಗಳು. ಪುಣ್ಯಕಾರ್ಯಗಳನ್ನು ಮಾಡುವ ಸ್ವರೂಪಯೋಗ್ಯತೆ ಅವರಿಗಿಲ್ಲ. ಸಜ್ಜನರು ಕೃಷ್ಣಾರ್ಪಣಬುದ್ಧಿಯಿಂದ ಮಾಡದ ಪುಣ್ಯಕಾರ್ಯಗಳನ್ನು ಕದಿಯುವರು ಇದರಿಂದ ಅವರು ಸತ್ಕರ್ಮಚೋರರು. ಆ ಸತ್ಕರ್ಮಗಳನ್ನು ಅವರಿಗೆ ದಕ್ಕದಂತೆ ಅಪಹರಿಸುವನು. ಇದರಿಂದ ನಿರ್ದೋಷಿಯಾದ ಶ್ರೀಪರಮಾತ್ಮನಿಗೆ ವೈಷಮ್ಯ ನೈರ್ಘೃಣ್ಯ ಇತ್ಯಾದಿ ದೋಷಗಳಿಲ್ಲ. ದೃಷ್ಟಾಂತವಾಗಿ, ಶ್ರೀರಾಮರಾಜ್ಯದಲ್ಲಿ ಶಂಬೂಕನೆಂಬ ಶೂದ್ರನು ಘೋರ ತಪಸ್ಸನ್ನು ಆಚರಿಸುತ್ತಿದ್ದನು. ತಪಸ್ಸಿನ ಆಚರಣೆ ಸತ್ಕರ್ಮರೂಪವಾದ ಒಂದು ಕ್ರಿಯೆ. ಆದರೆ, ಆ ಶಂಬೂಕನು ದುರುದ್ದೇಶದಿಂದ ತಪಸ್ಸನ್ನಾಚರಿಸುತ್ತಿದ್ದನು. ಅವನ ದುರುದ್ದೇಶವನ್ನು ಅರಿತ ಶ್ರೀರಾಮಚಂದ್ರನು ಶಂಬೂಕನನ್ನು ಸಂಹರಿಸಿದನು. ಹೀಗೆಯೇ ದುರ್ಯೋಧನ, ಜರಾಸಂಧ, ರಾವಣಾದಿಗಳು ಸತ್ಕರ್ಮಗಳನ್ನು ಆಚರಿಸುತ್ತಿದ್ದರೂ, ಅವುಗಳ ಉದ್ದೇಶ ಸಾಧುವಾಗಿರಲಿಲ್ಲ. ಕೇವಲ ಲೋಕಹಿಂಸೆಗಾಗಿ, ತಮ್ಮ ಸ್ವಾರ್ಥಸಾಧನೆಗಾಗಿ ತಪಸ್ಸ್ಯಾದಿ ಸತ್ಕರ್ಮಗಳನ್ನು ಆಚರಿಸುತ್ತಿದ್ದರು. ಇದರಿಂದ ನಿಷ್ಪಕ್ಷಪಾತಿಯಾದ ಶ್ರೀಹರಿಯು, ಆ ಜೀವರ ಯೋಗ್ಯತೆ, ಅನಾದಿಕರ್ಮಗಳಿಗನುಗುಣವಾಗಿ, ಆ ಸತ್ಕರ್ಮ ಫಲರೂಪವಾದ ಪುಣ್ಯವನ್ನು ಅಪಹರಿಸಿ, ಅಜ್ಞಾನವಶದಿಂದ ಸಜ್ಜನರುಗೈದ ಪಾಪಗಳ ಪರಿ

ಹಾರಕ್ಕಾಗಿ, ಹಂಚುವನು. ಅಸುರರು ಮಾಡಿದ ಸತ್ಕರ್ಮಗಳಿಗೆ ಪುಣ್ಯವನ್ನು ಕೊಟ್ಟರೆ, ಅದರಿಂದ ಮಹದನರ್ಥವಾಗುವುದು. ಧರ್ಮಸಂರಕ್ಷಕನೂ, ಧರ್ಮ ಪ್ರತೀಕನೂ ಆದ ಆ ಧಾರುಣೀಪತಿಯು ವೈಷಮ್ಯರಹಿತನಾದ್ದರಿಂದ, ಆಯಾಯ ಜೀವರಿಗೆ ತಕ್ಕಫಲಗಳನ್ನೇ ಕೊಡುವನು ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯಾಭಿಪ್ರಾಯವು. ॥ ೧೧ ॥

## ಪದ್ಯ ೧೨

**ಮೂಲ**

**ತುಂದಿವಿಡಿದಾಶಿರದ ಪರಿಯಂ**
**ತೊಂದೆ ವ್ಯಾಪಿಸಿ ಇಹುದು ತಾವರೆ**
**ಕಂದನಿಹನದರೊಳಗೆ ಇದಕೀರ್ಕೈದು ಶಾಖೆಗಳು ॥**
**ಒಂದಧಿಕ ದಶಕರಣಗಳು ಸಂ**
**ಬಂಧಗೈದಿಹವಲ್ಲಿ ರವಿ ಶಶಿ**
**ಸಿಂಧು ನಾಸತ್ಯಾದಿಗಳು ನೆಲೆಗೊಂಡಿಹರು ಸತತ ॥ ೧೨ ॥**

**ಅವತರಣಿಕೆ**

ಮೂಲಾಧಾರದಿಂದ ಹೊರಟು, ನೇರವಾಗಿ ಬ್ರಹ್ಮರಂಧ್ರಪರ್ಯಂತ ವ್ಯಾಪಿಸಿರುವ ಸುಷುಮ್ನಾನಾಡಿಯ ವಿಚಾರವನ್ನು ತಿಳಿಸುತ್ತಾರೆ–

**ಪ್ರತಿಪದಾರ್ಥ**

**ತುಂದಿ**=ವೃಷಣಗಳು ಮತ್ತು ಆಸನ ಇವುಗಳ ಮಧ್ಯಗತವಾದ ಮೂಲಾಧಾರವಾದ ತುಂದಿ ಎಂಬ ಗಡ್ಡೆಯಿಂದ, **ವಿಡಿದು**=ಪ್ರಾರಂಭಿಸಿ (ಅಲ್ಲಿಂದ ಉತ್ಪತ್ತಿಯಾಗಿ ಹೊರಟು), ಆ **ಶಿರದ ಪರಿಯಂತ**=ಶಿರಸ್ಸಿನಲ್ಲಿರುವ ಬ್ರಹ್ಮರಂಧ್ರದವರೆಗೂ, **ಒಂದೆ**=ಸುಷುಮ್ನಾನಾಡಿ ಎಂಬ ಏಕನಾಡಿಯು, **ವ್ಯಾಪಿಸಿ ಇಹುದು**

=ನೇರವಾಗಿ ದೇಹದ ಮಧ್ಯಭಾಗದಲ್ಲಿ ವ್ಯಾಪಿಸಿಕೊಂಡಿರುವುದು. **ಅದರೊಳಗೆ** =ಆ ಸುಷುಮ್ನಾನಾಡಿಯಲ್ಲಿ, **ತಾವರೆ ಕಂದನು**=ಶ್ರೀಪದ್ಮನಾಭದೇವರ ನಾಭೀಪ್ರದೇಶದಿಂದ ಹೊರಟ ಕಮಲದಲ್ಲಿ ಉದ್ಭವರಾದ ಚತುರ್ಮುಖ ಬ್ರಹ್ಮ ದೇವರು, (ತಾವರೆ-ನಾಭೀಕಮಲ. ಕಂದ-ಅದರಲ್ಲಿ ಉದ್ಭವವಾದವರು, ಅಥವಾ ಶ್ರೀಲಕ್ಷ್ಮೀನಾರಾಯಣರ ಜ್ಯೇಷ್ಠಪುತ್ರ ಬ್ರಹ್ಮದೇವರು), **ಇಹ**=ಸುಷುಮ್ನಾ ನಾಡಿಗೆ ಅಭಿಮಾನಿಗಳಾಗಿದ್ದಾರೆ. ಇದರಿಂದ ಈ ನಾಡಿಗೆ ಬ್ರಹ್ಮನಾಡಿ ಎಂತಲೂ ಹೆಸರು. **ಇದಕೆ**=ಇಂತಹ ಸುಷುಮ್ನಾನಾಡಿಗೆ, **ಈರೈದು ಶಾಖೆಗಳು**=ಹತ್ತು ಶಾಖಾನಾಡಿಗಳು ಇವೆ (ಈರೈದು-ಎರಡು ಐದು ೨X೫=೧೦). **ಒಂದಧಿಕ ದಶಕರಣಗಳು**=ಹನ್ನೊಂದು ಇಂದ್ರಿಯಗಳು (ಒಂದಧಿಕದಶ=೧+೧೦=೧೧. ಮನಸ್ಸು-೧, ಜ್ಞಾನೇಂದ್ರಿಯಗಳು-೫, ಕರ್ಮೇಂದ್ರಿಯಗಳು-೫. ಅಂತು ೧+೫+೫=೧೧) **ಅಲ್ಲಿ**=ಆ ಸುಷುಮ್ನಾನಾಡಿಯಲ್ಲಿ, **ಸಂಬಂಧಗೈದಿಹವು** =ಹೊಂದಿಕೊಂಡಿರುವುವು. **ರವಿ**=ಸೂರ್ಯ, **ಶಶಿ**=ಚಂದ್ರ, **ಸಿಂಧು**= ಸಮುದ್ರರಾಜನಾದ ವರುಣ, **ನಾಸತ್ಯಾದಿಗಳು**=ಅಶ್ವಿನೀದೇವತೆಗಳು, **ಸತತ ನೆಲೆಗೊಂಡಿಹರು**=ಯಾವಾಗಲೂ ಆವಾಸವಾಗಿದ್ದಾರೆ. ॥ ೧೨ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇಂದ್ರಿಯಗಳು ವ್ಯಾಪಿಸಿದ ನಾಡಿಗಳ ಹೇಳತಾರೆ.

ವೃಷಣಾಸನದ ಮಧ್ಯಗತ ಪೂರ್ವೋಕ್ತ ನಾಡಿ ಉತ್ಪತ್ತಿಗೆ ಕಾರಣವಾದ ಗಡ್ಡಿ, ಈ ಗಡ್ಡಿಯಲ್ಲಿ ಸುಷುಮ್ನಾನಾಡಿ ಉತ್ಪನ್ನವಾಗಿ, ಇದು ಆರಂಭಮಾಡಿ, ಆಯಾ ದೇಹಗತ ಶಿರಸ್ಸಿನಲ್ಲಿ ವಿದ್ಯಮಾನವಾದ ಬ್ರಹ್ಮರಂಧ್ರ ಪರಿಯಂತ ಈ ಸುಷುಮ್ನಾನಾಡೀ ಒಂದೇ ವ್ಯಾಪಿಸಿ ಇರೋದಾಗಿ ಅದೆ. ಈ ಪ್ರಕಾರ ಋಜು ವಾಗಿ ವ್ಯಾಪಿಸಿ ಇರೋ ನಾಡಿ ಇದು ಒಂದೇ. ಅನ್ಯನಾಡಿಗಳು ಹೀಂಗಿಲ್ಲ, ವಕ್ರಸ್ತ ಥಾಗಿ ಅವೆ, ಈ ಸುಷುಮ್ನಾನಾಡಿ ಒಳಗೆ ಕಮಲದಲ್ಲಿ ಉತ್ಪನ್ನರಾದ

ಬ್ರಹ್ಮದೇವರು ಅಭಿಮಾನಿಯಾಗಿ ಇದ್ದಾರೆ. ಈ ಸುಷುಮ್ನಾಕ್ಕೆ ಹತ್ತು ಶಾಖಾಗಳು, ಅಂತು ಹನ್ನೊಂದು ಆಗತವೆ. ಈ ಹನ್ನೊಂದು ಶಾಖಾಗಳು ದಶೇಂದ್ರಿಯಗಳು, ಮನೋಇಂದ್ರಿಯ ಅಂತು ಏಕಾದಶೇಂದ್ರಿಯಗಳು. ಇವುಗಳಲ್ಲಿ ಸಂಬಂಧವಾಗಿ ಇರೋವಾಗಿವೆ. ಇದರ ವಿವರ ಪೂರ್ವದಲ್ಲಿ ೧೦೧ ನಾಡಿ ವಿಭಾಗ ಹೇಳಿದ್ದು ಸುಷುಮ್ನಾನಾಡಿ ವ್ಯತಿರಿಕ್ತ ಸುಷುಮ್ನಾ ಸಾಂಕೇತ ಆಯುಕಾ, ವಜ್ರಿಕಾ, ಪ್ರಕಾಶಿನೀ, ವೈದ್ಯುತೀ ಎಂತ ನಾಲ್ಕುನಾಡಿಗಳ ವಿಭಾಗ. ಈಗ ಹೇಳೋದು ಸುಷುಮ್ನಾ ಶಾಖಾ ಎಂತ ತಿಳಿಯಬೇಕು.

## ಸುಷುಮ್ನಾಶಾಖಾ ನಾಡಿಗಳು, ಇಂದ್ರಿಯಗಳಲ್ಲಿ ನಾಡಿಗಳು ತದಭಿಮಾನಿಗಳು ತನ್ನಿಯಾಮಕ ಭಗವದ್ರೂಪಗಳು.

| ನಾಡಿ | ಇಂದ್ರಿಯ | ತದಭಿಮಾನಿದೇವತೆ | ತನ್ನಿಯಾಮಕ ಭಗವದ್ರೂಪ |
|---|---|---|---|
| ೧. ಶಬ್ದಕೃತು ನಾಡೀ ಇದೇ ಸುಷುಮ್ನಾ | ಮನಸ್ಸು | ಗರುಡಶೇಷ ಇಂದ್ರಕಾಮ | ಗೋವಿಂದ |
| ೨. ಶಬ್ದಗ್ರಹನಾಡೀ | ಶ್ರವಣೇಂದ್ರಿಯ | ಚಂದ್ರ | ವಿಷ್ಣು |
| ೩. ರೂಪಗ್ರಹನಾಡೀ | ನೇತ್ರೇಂದ್ರಿಯ | ಸೂರ್ಯ | ಮಧುಸೂದನ |
| ೪. ಸ್ಪರ್ಶಗ್ರಹನಾಡೀ | ತ್ವಗಿಂದ್ರಿಯ | ಅಹಂಕಾರಪ್ರಾಣ | ತ್ರಿವಿಕ್ರಮ |
| ೫. ರಸಗ್ರಹನಾಡೀ | ಜಿಹ್ವೇಂದ್ರಿಯ | ವರುಣ | ವಾಮನ |
| ೬. ಗಂಧಗ್ರಹನಾಡೀ | ನಾಸಿಕೇಂದ್ರಿಯ | ಅಶ್ವಿನೀದೇವತೆಗಳು | ಶ್ರೀಧರ |
| ೭. ಹಸ್ತಿಜಿಹ್ವಾ-ಅಲಂಬುಸಾ | ಪಾಣಿದ್ವಯ | ದಕ್ಷ | ಪದ್ಮನಾಭ |
| ೮. ಯಶಸ್ವಿನೀ ನಾಡೀ | ವದನ | ಅಗ್ನಿ | ಹೃಷಿಕೇಶ |
| ೯. ಗಾಂಧಾರೀ-ಪೂಷಾ | ಪಾದದ್ವಯ | ಜಯಂತ | ದಾಮೋದರ |
| ೧೦. ಶಂಖಿನೀನಾಡೀ | ಗುದ | ಮಿತ್ರ ನಾಮಕಸೂರ್ಯ | ಸಂಕರ್ಷಣ |
| ೧೧. ಕುಹುನಾಡೀ | ಉಪಸ್ಥ | ಸ್ವಾಯಂಭುವಮನು | ವಾಸುದೇವ |

ಈ ಪ್ರಕಾರ ನಾಡಿಗಳಲ್ಲಿ ಇಂದ್ರಿಯಗಳು ತದಭಿಮಾನಿಗಳು, ತನ್ನಿಯಾಮಕ ಭಗವದ್ರೂಪಗಳು ಇರೋವಾಗಿ ಅವೆ. ಆ ಎರಡು ನಾಡಿಗಳು ಹೆಚ್ಚಾಗಿ ಅವೆ ಎಂತ ತೋರತದೆ ಒಂದರಲ್ಲಿ ಪ್ರಭೇದಗಳು.

## ಪ್ರಕಾರಾಂತರ

| | |
|---|---|
| ಇಡಾ = ಎಡದ ಮೂಗು<br>ಪಿಂಗಳಾ = ಬಲದ ಮೂಗು<br>ಸುಷುಮ್ನಾ = ಬ್ರಹ್ಮರಂಧ್ರ<br>ಗಾಂಧಾರೀ = ಎಡದ ಕಣ್ಣು<br>ಹಸ್ತಿಜಿಹ್ವಾ = ಬಲದ ಕಣ್ಣು<br>ಪೂಷಾ = ಬಲದ ಕಿವಿ<br>ಯಸ್ವಿನೀ = ಎಡದ ಕಿವಿ<br>ಅಲಂಬುಸಾ = ಮುಖದ್ವಾರಾ<br>ಕುಹು = ಲಿಂಗ, ಶಿಶ್ನ<br>ಶಂಖಿನೀ = ಗುದಸ್ಥಾನ | ಇವುಗಳು ದಶದ್ವಾರಗಳ ಆಶ್ರಯಿಸಿ ಇರತಕ್ಕ ನಾಡಿಗಳು, ಆ ಏಕಾದಶೇಂದ್ರಿಯಗಳಲ್ಲಿ ಸೂರ್ಯ, ಚಂದ್ರ, ವರುಣ ಅಶ್ವಿನೀದೇವತೆಗಳು ಮೊದಲಾದವರು ಇವರು ಯಾವತ್ತೂ ಮಂದಿ ಇಂದ್ರಿಯಾಭಿಮಾನಿಗಳು ನಿರಂತರ ಆವಾಸರಾಗಿ ಇದ್ದಾರೆ ಎಂತ ತಿಳಿಯಬೇಕು. ॥ ೧೨ ॥ |

**೨. ಭಾವಪ್ರಕಾಶಿಕೆ :**

ಹೊಕ್ಕಳಿಗೆ ಕೆಳಭಾಗದ ಹೊಟ್ಟೆಗೆ. ತುಂದಿ ಎಂದು ಹೆಸರು. ಆ ತುಂದಿಯು ವೃಷಣದ ಬುಡದವರೆಗೂ ಇರುವುದು. ತುಂದಿಯ ಮೂಲಸ್ಥಾನ ಹಿಡಿದು ತಲೆಯವರೆಗೂ ಬ್ರಹ್ಮನಾಡಿಯು ವ್ಯಾಪಿಸಿಕೊಂಡಿರುವುದು. ಅದರಲ್ಲಿ ಶ್ರೀಬ್ರಹ್ಮದೇವರು ಮತ್ತು ವಾಯುದೇವರು ಇರುವರು. ಇಲ್ಲಿ ವಾಯುದೇವರನ್ನು ಬೇರೆಯಾಗಿ ಹೇಳದಿದ್ದರೂ ಮುಂದಿನ ಪದ್ಯದಲ್ಲಿ ಸ್ಪಷ್ಟವಾಗಿ ಹೇಳಿರುವುದರಿಂದಲೂ ವಾಯುದೇವರೇ ಬ್ರಹ್ಮದೇವರಾಗುವುದರಿಂದಲೂ, ಬ್ರಹ್ಮದೇವರನ್ನು ಹೇಳಿದ್ದರಿಂದ ವಾಯುದೇವರನ್ನು ಹೇಳಿದಂತಾಯಿ ತೆಂಬ ಭಾವ. ಈ ಬ್ರಹ್ಮನಾಡಿಗೆ ೧೦ ನಾಡಿಗಳು ಶಾಖೆಗಳಾಗಿ ಹೊರಟಿರುವವು. ಬ್ರಹ್ಮನಾಡಿಯನ್ನು ಸೇರಿಸಿ ಒಟ್ಟು ಹನ್ನೊಂದು ನಾಡಿಗಳು. ಈ ಹನ್ನೊಂದು ನಾಡಿಗಳಲ್ಲಿ ಮನಸ್ಸು–೧. ಜ್ಞಾನೇಂದ್ರಿಯಗಳು-೫. ಕರ್ಮೇಂದ್ರಿಯಗಳು-೫, ಅಂತು ೧೧ ಇಂದ್ರಿಯಗಳು ಸಂಬಂಧಿಸಿ ಇರುವವು. ಅವುಗಳಲ್ಲಿ ಸೂರ್ಯ, ಚಂದ್ರ, ವರುಣ, ಅಶ್ವಿನೀ ದೇವತೆಗಳು

ಮೊದಲಾದವರು ವಾಸವಾಗಿರುವರು. ಮೇಲೆ ೧೮೧ ನಾಡಿಗಳ ಲೆಖ್ಖವನ್ನು ಹೇಳಿದಾಗ, ಸುಷುಮ್ನಾನಾಡಿಯನ್ನು ಒಂದನ್ನಾಗಿ ತೆಗೆದುಕೊಂಡು ಮಿಕ್ಕ ನಾಲ್ಕು ನಾಡಿಗಳಲ್ಲಿ ೨೫ರಂತೆ ಶಾಖೆಯನ್ನು ಹೇಳಿ, ಒಟ್ಟು ೧೦೧ ಎಂದು ಹೇಳಿದರು. ಈಗ ಸುಷುಮ್ನಾನಾಡಿಯ ಶಾಖೆಯನ್ನು ಹೇಳುವರು. ॥ ೧೨ ॥

## ೩ ಭಾವದರ್ಪಣ

ಕೆಳಹೊಟ್ಟೆ ಆರಂಭಿಸಿ ಶಿರಪರ್ಯಂತ ಇರತಕ್ಕ ಬ್ರಹ್ಮನಾಡಿಯೊಳಗೆ ವಾಯುದೇವರು ಇರುತ್ತಾರೆಂತಲೂ ಇದಕ್ಕೆ ಸೇರಿದ ಹತ್ತು ಶಾಖೆಗಳಲ್ಲಿ ಸೂರ್ಯಾದಿಗಳು ಇದ್ದಾರೆಂತಲೂ ಹೇಳುತ್ತಾರೆ, ತುಂದೀತಿ ॥ ೧೨ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ತುಂದಃ–ಇತಿ ॥ ನಾಭ್ಯಧಃ ಮೂಲಾಧಾರಂ ಸಮಾರಭ್ಯತ್ವಾ ಮೂರ್ಧಾನಂ ಶುಷುಃ ಸ್ಮೃತಾ ॥ ಇತ್ಯುಕ್ತೇಃ ॥ ಮೂಲಾಧಾರಂ ಗುದಂ ಸ್ಮೃತಮ್ ॥ ತಾವರೆ-ಕಮಲ ॥ ಕಂದ– ಮಗ–ಪುತ್ರಃ ॥ ಈರೈದು-ಹತ್ತು ॥ ೧೨ ॥

### ಕನ್ನಡಾರ್ಥ

ನಾಭಿಯ ಕೆಳಭಾಗದಲ್ಲಿ ಇರುವ ನಾಡೀಕೋಶದ ಮೂಲಭಾಗಕ್ಕೆ ತುಂದಿ ಎಂದು ಹೆಸರು. ಮೂಲಾಧಾರದಿಂದ ಆರಂಭಿಸಿ ಮಸ್ತಕದವರೆಗೆ ಸರಳವಾಗಿ ಹೊರಟಿರುವ ನಾಡಿಯು ಸುಷುಮ್ನಾನಾಡಿ ಎಂದು ಪ್ರಮಾಣವಚನವಿರುತ್ತದೆ, ಗುದದ್ವಾರವು ಮೂಲಾಧಾರವೆಂದು ಪ್ರಸಿದ್ಧವಾಗಿರುತ್ತದೆ. ತಾವರೆ ಕಂದ ಎಂದರೆ, ತಾವರೆ–ಕಮಲ, ಕಮಲದಲ್ಲಿ ಜನಿಸಿದ್ದರಿಂದ ತಾವರೆ ಕಂದನೆಂದರೆ ಚತುರ್ಮುಖಬ್ರಹ್ಮನು. ಈರೈದು ರೂಪಗಳು ಅಂದರೆ ಹತ್ತು ರೂಪಗಳು ಎಂದರ್ಥ. ॥ ೧೨ ॥

## ೫. ಗುರುಹೃದಯಪ್ರಕಾಶಿಕೆ

ಸುಷುಮ್ನಾನಾಡಿ ಇರುವ ರೀತಿ ಮೂರು ಪದ್ಯದಿಂದ ತಿಳಿಸುತ್ತಾರೆ. ತುಂದಿ ಎಂದು, ತುಂದೀ ಎಂಬ ನಾಡೀಕೋಶದ ಬುಡ ಆರಂಭಿಸಿ ಶಿರಸ್ಸಿನ ತನಕ ಒಂದೇ

ನಾಡಿ ಸುಷುಮ್ನಾ ಎಂಬ ಹೆಸರಿನಿಂದ ಇರುವುದು. ಆ ನಾಡಿಯಲ್ಲಿ ತಾವರೆಕಂದ ನೆಂಬ ಬ್ರಹ್ಮನು ಇರುವನು. ಆ ನಾಡಿಗೆ ಈರೈದೆಂದರೆ ಹತ್ತು ಕವಲುನಾಡಿಗಳು ಇರುವುವು, ಆ ನಾಡಿಗಳಲ್ಲಿ ಮನಸ್ಸು ಮೊದಲಾದ ಹನ್ನೊಂದು ಇಂದ್ರಿಯಗಳೂ ಇಂದ್ರಿಯಾಭಿಮಾನಿಗಳಾದ ಇಂದ್ರ, ಸೂರ್ಯ, ಚಂದ್ರ, ವರುಣ, ಅಶ್ವಿನೀದೇವತೆ ಗಳೂ ಸಹ ಸದಾ ಇರುವರು ॥ ೧೨ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ನಾಭೀಪ್ರದೇಶದ ಕೆಳಭಾಗದಲ್ಲಿ ವೃಷಣಗಳು ಮತ್ತು ಆಸನ ಇವುಗಳ ನಡುವೆ ಇರುವ ಗ್ರಂಥಿಗೆ ತುಂದಿ ಎಂದು ಹೆಸರು. ನಾಡಿಗಳು ಈ ಗಡ್ಡೆಯಿಂದ ಉತ್ಪತ್ತಿಯಾಗಿ ಹೊರಡುವುದರಿಂದ ನಾಡಿಗಳ ಈ ಮೂಲಸ್ಥಾನಕ್ಕೆ ಮೂಲಾ ಧಾರವೆಂತಲೂ ಹೆಸರು,

ತುಂದಿ ಎಂಬ ಮೂಲಾಧಾರದಿಂದ ಪ್ರಾರಂಭಿಸಿ, ಶಿರಸ್ಸಿನ ಪರ್ಯಂತ ನೇರವಾಗಿ ಹೋಗಿರುವ ಸೂಕ್ಷ್ಮನಾಡಿಗೆ ಸುಷುಮ್ನಾನಾಡಿ ಎಂದು ಹೆಸರು. ಈ ನಾಡಿಯೇ ಪ್ರಧಾನನಾಡಿಯು. ಇದು ದೇಹದ ಮಧ್ಯಭಾಗದಲ್ಲಿ ನೇರವಾಗಿ ವ್ಯಾಪಿಸಿರುವುದರಿಂದ ಈ ನಾಡಿಗೆ ಋಜುನಾಡಿ ಎಂತಲೂ ಹೆಸರು. ಈ ಅತ್ಯಂತ ಸೂಕ್ಷ್ಮನಾಡಿಯು ತೇಜೋಮಯವಾಗಿದ್ದು ಅತೀಂದ್ರಿಯವಾಗಿರುವುದು.

ಈ ಸುಷುಮ್ನಾನಾಡಿಯಲ್ಲಿ ಚತುರ್ಮುಖಬ್ರಹ್ಮದೇವರು ಮುಖ್ಯ ಅಭಿಮಾನಿಗಳಾಗಿದ್ದಾರೆ. ಬ್ರಹ್ಮದೇವರನ್ನು ದಾಸರಾಯರು ತಾವರೆಕಂದ ಎಂದಿ ದ್ದಾರೆ. ಶ್ರೀಹರಿಯ ಇಚ್ಛೆಯಂತೆ ಉತ್ಪತ್ತಿಯಾದ ನಾಭೀಕಮಲವು ರಮಾಭಿಮನ್ಯ ಮಾನವಾಗಿದ್ದು. ಅದರಲ್ಲಿ ಚತುರ್ಮುಖ ಬ್ರಹ್ಮದೇವರು ಉದ್ಭವರಾದರು. ಇಂತಹ ಕಮಲೋದ್ಭವರಾದ ಚತುರ್ಮುಖ ಬ್ರಹ್ಮದೇವರೇ ತಾವರೆಕಂದನು.

ಪೂರ್ವೋಕ್ತ ಸುಷುಮ್ನಾನಾಡಿಗೆ ಹತ್ತು ಶಾಖೆಗಳಿವೆ, ಪ್ರಧಾನನಾಡಿ ಸುಷುಮ್ನಾ ಒಂದು. ಒಟ್ಟು ಸೇರಿ ೧೦ + ೧ = ೧೧ ಆಯಿತು, ಈ ೧೧ ನಾಡಿ

ಗಳಿಗೆ ಸಂಬಂಧಿಸಿದಂತೆ ಹನ್ನೊಂದು ಇಂದ್ರಿಯಗಳಿವೆ.

ಈ ಏಕಾದಶೇಂದ್ರಿಯಗಳಲ್ಲಿ ಸೂರ್ಯ, ಶಶಾಂಕನಾದ ಚಂದ್ರ ಸಮುದ್ರ ರಾಜನಾದ ವರುಣ, ನಾಸತ್ಯ ಮತ್ತು ದಸ್ರ ಎಂಬ ಅಶ್ವಿನೀದೇವತೆಗಳು ಆದಿಯಾಗಿ ನಾಡ್ಯಭಿಮಾನಿದೇವತೆಗಳಾಗಿ ನೆಲೆಸಿದ್ದಾರೆ. ಏಕಾದಶೇಂದ್ರಿಯಗಳು ತದಭಿಮಾನಿದೇವತಾವರ್ಗ, ದೇವತಾವರ್ಗದ ಭಗವದ್ರೂಪಗಳ ವಿವರಗಳನ್ನು ಈ ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ.

| ಕ್ರಮ ಸಂಖ್ಯೆ | ಏಕಾದಶೇಂದ್ರಿಯಗಳು | ನಾಡಿಗಳ ಹೆಸರು | ಅಭಿಮಾನಿ ದೇವತಾವರ್ಗ | ತದಂತರ್ಯಾಮಿ ಭಗವದ್ರೂಪಗಳು |
|---|---|---|---|---|
| ೧ | ಮನಸ್ಸು | ಸುಷುಮ್ನಾನಾಡಿ | ಗರುಡ, ಶೇಷ, ರುದ್ರ, ಇಂದ್ರ, ಕಾಮ | ಗೋವಿಂದ |
| ೨ | ಶ್ರವಣೇಂದ್ರಿಯ | ಶಬ್ದಗ್ರಹ ನಾಡಿ | ಚಂದ್ರ (ಶಶಿ) | ವಿಷ್ಣು |
| ೩ | ತ್ವಗಿಂದ್ರಿಯ | ಸ್ಪರ್ಶಗ್ರಹನಾಡಿ | ಅಹಂಕಾರಿಕಪ್ರಾಣ | ತ್ರಿವಿಕ್ರಮ |
| ೪ | ನೇತ್ರೇಂದ್ರಿಯ | ರೂಪಗ್ರಹನಾಡಿ | ಸೂರ್ಯ (ರವಿ) | ಮಧುಸೂದನ |
| ೫ | ಜಿಹ್ವೇಂದ್ರಿಯ | ರಸಗ್ರಹನಾಡಿ | ವರುಣ (ಸಿಂಧು) | ವಾಮನ |
| ೬ | ನಾಸಿಕೇಂದ್ರಿಯ | ಗಂಧಗ್ರಹನಾಡಿ | ಅಶ್ವಿನೀದೇವತೆಗಳು | ಶ್ರೀಧರ |
| ೭ | ಹಸ್ತದ್ವಯ | ಹಸ್ತಿಜಿಹ್ವಾ ಅಲಂಬುಸಾ | ದಕ್ಷ (ನಾಸತ್ಯ–ದಸ್ರ) | ಪದ್ಮನಾಭ |
| ೮ | ಪಾದದ್ವಯ | ಗಾಂಧಾರಿ ಪೂಷಾ | ಜಯಂತ | ದಾಮೋದರ |
| ೯ | ವದನ | ಯಶಸ್ವಿನೀ | ಅಗ್ನಿ | ಹೃಷಿಕೇಶ |
| ೧೦ | ಗುದೇಂದ್ರಿಯ | ಶಂಖಿನೀ | ಮಿತ್ರನಾಮಕ ಸೂರ್ಯ | ಸಂಕರ್ಷಣ |
| ೧೧ | ಉಪಸ್ಥೇಂದ್ರಿಯ | ಕುಹನಾಡೀ | ಸ್ವಾಯಂಭುವಮನು | ವಾಸುದೇವ |

## ಪದ್ಯ ೧೩

### ಮೂಲ

ಪೊಕ್ಕಳಡಿವಿಡಿದೊಂದೆ ನಾಡಿಯು ।
ಸುಕ್ಕದಲೆ ಧಾರಾಳರೂಪದಿ ।
ಸಿಕ್ಕಿಹುದು ನಡುದೇಹದೊಳಗೆ ಸುಷುಮ್ನ ನಾಮದಲಿ ॥
ರಕ್ಕಸರನೊಳಪೊಗಗೊಡದೆ ದಶ ।
ದಿಕ್ಕಿನೊಳಗೆ ಸಮೀರದೇವನು ।
ಲೆಕ್ಕಿಸದೆ ಮತ್ತೊಬ್ಬರನು ಸಂಚರಿಪ ದೇಹದೊಳು ॥ ೧೩ ॥

### ಅವತರಣಿಕೆ

ಸುಷುಮ್ನಾನಾಡಿಯಲ್ಲಿ ವಿದ್ಯಮಾನರಾಗಿರುವ ಶ್ರೀವಾಯುದೇವರು ದಶ ದಿಕ್ಕುಗಳಲ್ಲಿ ಸಂಚರಿಸುತ್ತ ಆ ನಾಡಿಯಲ್ಲಿ ದೈತ್ಯರು ಪ್ರವೇಶಿಸದಂತೆ ರಕ್ಷಿಸುತ್ತಾರೆಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಪೊಕ್ಕಳ** = ನಾಭಿಯ, **ಅಡಿವಿಡಿದು** = ಕೆಳಭಾಗದಲ್ಲಿರುವ ವೃಷಣಗಳು ಮತ್ತು ಆಸನಗಳ ನಡುವೆ ಇರುವ ತುಂದಿ ಎಂಬ ಮೂಲಾಧಾರದಿಂದ ಆರಂಭಿಸಿ, **ಒಂದೆ ನಾಡಿಯು** = ಸುಷುಮ್ನಾನಾಡಿ ಎಂಬ ಏಕೈಕ ನಾಡಿಯು, **ಸುಕ್ಕದಲೆ** = ಯಾವ ವಕ್ರತೆಯೂ ಇಲ್ಲದೆ (ನೇರವಾಗಿ), **ಧಾರಾಳರೂಪದಿ** = ಉದ್ದಕ್ಕೂ ನೇರವಾಗಿ, **ಸುಷುಮ್ನಾ ನಾಮದಲಿ** = ಸುಷುಮ್ನಾ ಎಂಬ ಹೆಸರಿನಿಂದ, **ನಡು ದೇಹದೊಳಗೆ** = ಶರೀರದ ಮಧ್ಯಭಾಗದಲ್ಲಿ, **ಸಿಕ್ಕಿಹುದು** = ಶಿರಃಪರ್ಯಂತ ವ್ಯಾಪಿಸಿ, ಅತ್ಯಂತ ಸೂಕ್ಷ್ಮರೂಪದಿಂದ ಇದೆ, **ರಕ್ಕಸರನು** = ಸ್ಥೂಲಶರೀರಗತ ದೈತ್ಯರನ್ನು, **ಒಳಪೊಗಗೊಡದೆ** = ಸುಷುಮ್ನಾನಾಡಿಯ ಒಳಗೆ ಪ್ರವೇಶ

**ಮಾಡದಂತೆ, ದಶದಿಕ್ಕಿನೊಳಗೆ**=ಹತ್ತು ದಿಕ್ಕುಗಳಲ್ಲಿ ವ್ಯಾಪಿಸಿರುವ ಹತ್ತು ನಾಡಿಗಳು ಮತ್ತು ಅವುಗಳಿಗೆ ಸಂಬಂಧಿಸಿದ ಹತ್ತು ಇಂದ್ರಿಯಗಳಲ್ಲಿ, **ಸಮೀರದೇವನು**=ಶ್ರೀವಾಯುದೇವರು, **ಮತ್ತೊಬ್ಬರನು**=ದೇವತೆಗಳನ್ನು ಬಿಟ್ಟು ಇತರ ದೈತ್ಯರನ್ನು, **ಲೆಕ್ಕಿಸದೆ**=ಲಕ್ಷ್ಯ ಮಾಡಿದೆ, **ದೇಹದೊಳು**=ಈ ಸ್ಥೂಲ ಶರೀರದಲ್ಲಿ, **ಸಂಚರಿಪ**=ಪ್ರಾಣಾದಿ ಪಂಚರೂಪ, ನಾಗಾದಿ ಪಂಚರೂಪಗಳಿಂದ ವಿದ್ಯಮಾನರಾಗಿದ್ದು ದಶನಾಡಿಗಳಲ್ಲಿ ಸಂಚರಿಸುತ್ತಿರುವರು. ॥ ೧೩ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸುಷುಮ್ನಾನಾಡಿಯಲ್ಲಿ ವಾಯುದೇವರು ದೈತ್ಯರನ್ನು ಪ್ರವೇಶ ಮಾಡಿಸೋದಿಲ್ಲ ಎಂದು ಹೇಳುತ್ತಾರೆ.

ನಾಭಿಗೆ ಅಧೋಭಾಗಗತ ವೃಷಣಾಸನಮಧ್ಯಗತ ತುಂದಿಸ್ಥಾ ಆರಂಭ ಮಾಡಿ ಸುಷುಮ್ನಾನಾಡಿ ಒಂದೇ, ಡೊಂಕು ಇಲ್ಲದೇನೇ ಸರಿಯಾಗಿ ಉರ್ಧ್ವಕ್ಕೆ ಧಾರಾಳ ರೂಪದಿಂದ, ಸುಷುಮ್ನಾ ಎಂಬ ಹೆಸರಿನಿಂದ ಹೊರಟು ದೇಹದ ಒಳಗೆ ವಜ್ರಿಕಾ, ಆರ್ಯಕಾ, ಪ್ರಕಾಶಿನೀ, ವೈದ್ಯುತೀ ಈ ನಾಡಿಗಳ ಮಧ್ಯದಲ್ಲಿ, ಶಿರಃಪರಿಯಂತ ವ್ಯಾಪಿಸಿ ಅತಿ ಕೃಶವಾಗಿ, ಸೂಕ್ಷ್ಮವಾಗಿ ಅದೆ. ಈ ಸುಷುಮ್ನಾನಾಡಿ ಒಳಗೆ ಸ್ಥೂಲದೇಹಗತರಾದ ದೈತ್ಯರನ್ನು ಪ್ರವೇಶ ಮಾಡಿಸದ ಹಾಂಗೆ, ಹತ್ತುದಿಕ್ಕುಗಳಲ್ಲಿ ವ್ಯಾಪಿಸಿರುವ ಹತ್ತು ನಾಡಿ, ಹತ್ತು ಇಂದ್ರಿಯಗಳು ಇವುಗಳಲ್ಲಿ ವಾಯುದೇವರು ಪ್ರಾಣಾದಿ ಪಂಚರೂಪ, ನಾಗಾದಿ ಪಂಚರೂಪ, ಅಂತು ದಶರೂಪದಿಂದ ಕಾದಿದ್ದು, ಅಸುರರನ್ನು ಲಕ್ಷ್ಯಮಾಡದೆ, ದೇವತೆಗಳ ವ್ಯತಿರಿಕ್ತ ಮತ್ತೊಬ್ಬರಾದ ದೈತ್ಯರನ್ನು ನಾಡೀ ಒಳಗೆ ಪ್ರವೇಶ ಮಾಡಿಸಧಾಂಗೆ ತಾನು ದೇಹದಲ್ಲಿ ದಶರೂಪದಿಂದ ದಶಸ್ಥಾನದಲ್ಲಿ ಸಂಚರಿಸುವವನಾಗಿದ್ದಾನೆ, ॥ ೧೩ ॥

### ೨. ಭಾವಪ್ರಕಾಶಿಕೆ

ಮೇಲಿನ ಪದ್ಯದಲ್ಲಿ ಹೇಳಿದಂತೆ ಹೊಕ್ಕಳ ಕೆಳಗಿನಿಂದ ಹೊರಟ

ಸುಷುಮ್ನಾ ನಾಡಿಯು, ಮಧ್ಯದಲ್ಲಿ ನೆಟ್ಟಗೆ ಸುಂಕುಗಳಿಲ್ಲದೆ, ತಲೆಯವರೆಗೂ ಹೋಗಿರುವುದು. ಅದರಲ್ಲಿ ವಾಯುದೇವರು ಇದ್ದುಕೊಂಡು, ದೇಹದೊಳಗೆ ಹತ್ತು ದಿಕ್ಕುಗಳಲ್ಲಿಯೂ ತಿರುಗುತ್ತಾ ರಾಕ್ಷಸರನ್ನು ಆ ನಾಡಿಯ ಸಮೀಪದಲ್ಲಿ ಬರಗೊಡಿಸದೆ ಮತ್ತಾರನ್ನೂ ಲಕ್ಷ್ಯಮಾಡದೆ ಸಂರಕ್ಷಿಸುತ್ತಿರುವರು. ॥ ೧೩ ॥

೩. ಭಾವದರ್ಪಣ

ಪೂರ್ವದಲ್ಲಿ ಹೇಳಿದ ಬ್ರಹ್ಮನಾಡಿಯಲ್ಲಿ ತಾನೇ ಇದ್ದು, ಈ ಸುಷುಮ್ನಾ ನಾಡಿಯಲ್ಲಿ ಸಹ ದೈತ್ಯರು ಬಾರದಂತೆ ವಾಯುದೇವರು ಕಾದಿರುತ್ತಾರೆಂದು ಹೇಳುತ್ತಾರೆ, ಪೊಕ್ಕಳು ಇತಿ ॥

ಸುಕ್ಕದಲೆ-ಒಣಗದ ಹಾಂಗೆ, ಧಾರಾಳ– ವಿಸ್ತಾರ ॥ ೧೩ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಪೊಕ್ಕಳ–ಇತಿ, ॥ ಪೊಕ್ಕಳ = ಹೊಕ್ಕಳ, ಅಡಿ = ಬುಡ, ಸುಕ್ಕದಲೆ = ಶುಕ್ಲವಾಗದಲೆಃ ಧಾರಾಳ = ಅವಕ್ರ, ಲೆಕ್ಕಿಸದೆ = ಲಕ್ಷಿಸದೆ ॥ ೧೩ ॥

ಕನ್ನಡಾರ್ಥ

ಪೊಕ್ಕಳಡಿ = ಹೊಕ್ಕಳ, ಅಡಿ = ಬುಡ. ಸುಕ್ಕದಲೆ = ಶುಕ್ಲವಾಗದಲೆ, (ಸೊಟ್ಟವಾಗದೆ), ಧಾರಾಳ = ಸರಳವಾಗಿ, ಲೆಕ್ಕಿಸದೆ = ಲಕ್ಷಿಸದೆ, ಮೂಲಾಧಾರ ದಿಂದ ಹೊಕ್ಕಳಬುಡದಿಂದ ನೇರವಾಗಿ ತುಸುವೂ (ಬಾಗದೇ) ವಕ್ರ ವಾಗದೇ ಹೊರಟಿರುವ ಶಿರಃಪರ್ಯಂತವಾದ, ಸುಷುಮ್ನಾನಾಡಿಯಲ್ಲಿ ಪ್ರಾಣ ದೇವರು ರಾಕ್ಷಸರನ್ನು ಒಳಗೆ ಬರದಂತೆ ಮಾಡುತ್ತಾ ದಶದಿಕ್ಕುಗಳಲ್ಲಿ ಸಂಚರಿಸು ವರು ಎಂದು ಈ ಪದ್ಯದ ಭಾವ ॥ ೧೩ ॥

೫. ಶ್ರೀಗುರುಹೃದಯಪ್ರಕಾಶಿಕೆ

ಹೊಕ್ಕಳ ಬುಡ ಆರಭ್ಯ ಶಿರಸ್ಸಿನ ತನಕ ಸುಕ್ಕದೆ ಎಂದರೆ ನೆಟ್ಟಗೆ ಧಾರಾಳ

ವೆಂಬ ದೀರ್ಘಾಕಾರವಾಗಿ (ಋಜುವಾಗಿ) ಮಧ್ಯದಲ್ಲಿ ಸುಷುಮ್ನ ಎಂದು ಇರುವ ನಾಡಿಯಲ್ಲಿ ಪ್ರಾಣದೇವರು, ರಕ್ಕಸರು ಎಂಬ ಅಸುರರನ್ನು ನಾಡಿಯೊಳಕ್ಕೆ ಬರದಂತೆಯೂ, ಮತ್ತೊಬ್ಬರನು ಲೆಕ್ಕಿಸದೆ ಅಂದರೆ, ತನ್ನಧೀನದೇವತೆಗಳನ್ನು ಲಕ್ಷ್ಯ ಮಾಡದೆ, ಅಸಹಾಯನಾಗಿ ಹತ್ತುದಿಕ್ಕುಗಳಲ್ಲೂ ದೇಹದೊಳಗೆ ಸಂಚರಿಸುವನು. ॥ ೧೩ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಪ್ರಸಕ್ತ ಪದ್ಯದಲ್ಲಿ ಸುಷುಮ್ನಾನಾಡಿಯ ವಿವರಗಳನ್ನು ತಿಳಿಸುತ್ತಾರೆ. ಸುಷುಮ್ನಾ ನಾಡಿಯು ದೇಹದ ಮಧ್ಯಭಾಗದಲ್ಲಿ ನೇರವಾಗಿ ಯಾವ ಸುಕ್ಕುಗಳೂ ಇಲ್ಲದಂತೆ ಶಿರಃಪರ್ಯಂತ ವ್ಯಾಪಿಸಿರುವುದು, ಈ ಕಾರಣದಿಂದ ಸುಷುಮ್ನಾನಾಡಿಗೆ ಋಜುನಾಡಿ ಎಂತಲೂ ಹೆಸರು. ಚತುರ್ಮುಖಬ್ರಹ್ಮ ದೇವರು ಈ ನಾಡಿಯಲ್ಲಿ ಮುಖ್ಯಾಭಿಮಾನಿಗಳಾಗಿರುವದರಿಂದ ಈ ನಾಡಿಗೆ ಬ್ರಹ್ಮ ನಾಡಿ ಎಂದು ಹೆಸರು.

ಇಂತಹ ಸುಷುಮ್ನಾನಾಡಿಯಲ್ಲಿ ಭಾರತೀರಮಣರಾದ ಶ್ರೀವಾಯು ದೇವರು ದಶದಿಕ್ಕುಗಳಲ್ಲಿ ವ್ಯಾಪಿಸಿರುವ ಸುಷುಮ್ನಾನಾಡಿಯ ದಶಶಾಖಾನಾಡಿಗಳಲ್ಲಿ ವಿದ್ಯಮಾನರಾಗಿದ್ದಾರೆ.

ಸುಷುಮ್ನಾನಾಡಿಸ್ಥಿತ ಶ್ರೀಸಮೀರದೇವನು ಅಲ್ಲಿರುವ ಲಕ್ಷ್ಮೀನರಸಿಂಹ ರೂಪೀ ಶ್ರೀಹರಿಯನ್ನು ಸೇವಿಸುತ್ತಾ ದೈತ್ಯರು ಆ ನಾಡಿಯಲ್ಲಿ ಎಂದೆಂದಿಗೂ ಪ್ರವೇಶಿಸದಂತೆ ತಡೆಯುವನು. ಮಧ್ಯದೇಹಗತ ಸುಷುಮ್ನಾನಾಡಿಯಲ್ಲಿ ಸಂಚರಿಸುತ್ತಾ ಅದರ ದ್ವಾರಾ ದೇಹಾದ್ಯಂತ ಹಬ್ಬಿ ಹರಡಿರುವ ೭೨,೦೦೦ ನಾಡಿಗಳಲ್ಲಿ ಸಂಚಾರಮಾಡುತ್ತಾ ಈಶ ಪ್ರೇರಣೆಯಂತೆ ನಾಡ್ಯಭಿಮಾನಿ ದೇವತೆಗಳ ದ್ವಾರಾ ನಾಡೀಕ್ರಿಯೆಯನ್ನು ಮಾಡಿ ಮಾಡಿಸುತ್ತಿರುವನು. ॥ ೧೩ ॥

## ಪದ್ಯ ೧೪

ಮೂಲ:-

ಇನಿತು ನಾಡೀಶಾಖೆಗಳು ಈ ।
ತನುವಿನೊಳಗಿಹನೆಂದು ಏಕಾ ।
ತ್ಮನು ದ್ವಿಸಪ್ತತಿ ಸಾವಿರಾತ್ಮಕನಾಗಿ ನಾಡಿಯೊಳು ॥
ವನಿತೆಯಿಂದೊಡಗೂಡಿ ನಾರಾ ।
ಯಣ ದಿನಾರಾತ್ರಿಯೊಳಗೀ ಪರಿ ।
ವನಜಜಾಂಡದೊಳಖಿಳ ಜೀವರೊಳಿದ್ದು ಮೋಹಿಸುವ ॥ ೧೪ ॥

**ಅವತರಣಿಕೆ**

ಸ್ಥೂಲಶರೀರಗತ ನಾಡಿಗಳಲ್ಲಿ ಏಕಾತ್ಮಾಭಿಧಾನನಾದ ಬಿಂಬರೂಪೀ ಶ್ರೀಹರಿಯು ವಿಹರಿಸುತ್ತಾ ಜೀವಾಂತರ್ಯಾಮಿಯಾಗಿದ್ದು ಜೀವರನ್ನು ಮೋಹಯುಕ್ತರನ್ನಾಗಿ ಮಾಡುತ್ತಾನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಇನಿತು** = ಹಿಂದೆ ಹೇಳಿದ ಪ್ರಕಾರ, **ನಾಡೀಶಾಖೆಗಳು** = ಪ್ರಧಾನ ನಾಡಿಯಾದ ಸುಷುಮ್ನಾನಾಡಿಯಿಂದ ಹೊರಡುವ ೭೨,೦೦೦ ಸಂಖ್ಯಾಕವಾದ ಶಾಖಾನಾಡಿಗಳು, **ಈ ತನುವಿನೊಳು** = ಈ ಸ್ಥೂಲದೇಹದಲ್ಲಿ, **ಇಹವೆಂದು** = ಇವೆ ಎಂಬುದಾಗಿ ತಿಳಿದು, **ಏಕಾತ್ಮನು** = ಏಕಾಮೇವಾದ್ವಿತೀಯನಾದ, ಸರ್ವೋತ್ತಮನಾದ, **ನಾರಾಯಣ** = ಮೂಲರೂಪೀ ಶ್ರೀಮನ್ನಾರಾಯಣನು, **ವನಿತೆಯಿಂದೊಡಗೂಡಿ** = ತನ್ನ ಪತ್ನಿಯಾದ ಶ್ರೀಲಕ್ಷ್ಮೀದೇವಿಯರಿಂದ ಸಹಿತನಾಗಿ, **ನಾಡಿಯೊಳು** = ನಾಡಿಗಳಲ್ಲಿ, **ದ್ವಿಸಪ್ತತಿಸಾವಿರಾತ್ಮಕನಾಗಿ** = ಎಪ್ಪತ್ತೆರಡು ಸಾವಿರ ಸಂಖ್ಯಾಕವಾದ, ಭಗವದ್ರೂಪಗಳಿಂದ ವಿದ್ಯಮಾನನಾಗಿದ್ದು

**ದಿನಾರಾತ್ರಿಯೊಳಗೆ**=ನಾಡೀಗತ ಹಗಲಭಿಮಾನಿ ದೇವತೆಗಳು, ರಾತ್ರಿ ಅಭಿಮಾನಿದೇವತೆಗಳ ಒಳಗೆ, ಅಂತರ್ಯಾಮಿಯಾಗಿದ್ದು, **ಈ ಪರಿ**=ಈ ಪ್ರಕಾರವಾಗಿ, **ವನಜಜಾಂಡದೊಳು**=ಬ್ರಹ್ಮಾಂಡದಲ್ಲಿರುವ **ಅಖಿಳ ಜೀವರೊಳಿದ್ದು** = ಸಮಸ್ತ ತ್ರಿವಿಧ ಜೀವರ ಅಂತರ್ಯಾಮಿಯಾಗಿದ್ದು **ಮೋಹಿಸುವ**=ಆ ಜೀವರನ್ನು ಮೋಹಯುಕ್ತರನ್ನಾಗಿ ಮಾಡುತ್ತಾನೆ. ॥ ೧೪ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರನ್ನು ಮೋಹಯುಕ್ತರನ್ನಾಗಿ ಮಾಡತಾನೆಂತ ಹೇಳತಾರೆ. ಈ ಪೂರ್ವೋಕ್ತ ಪ್ರಕಾರ ಎಪ್ಪತ್ತೆರಡು ಸಾವಿರ ನಾಡೀಶಾಖೆಗಳು, ಈ ವರ್ತಮಾನ ಸ್ಥೂಲದೇಹದೊಳಗೆ ಇರೋವಾಗಿ ಅವೆ ಎಂತ ತಿಳಿದು, ನಾಡೀಗತ ವಿಚಾರ ಪೂರ್ವೋಕ್ತಪ್ರಕಾರ ಅನುಸಂಧಾನದಿಂದ ಅರಿತವನಾಗಿ ಷತ್ತೆ, ಸರ್ವೋತ್ತಮನಾದ ಸ್ವಾಮಿಯಾದ, ಮೂಲರೂಪನಾದ ನಾರಾಯಣದೇವರು ತನ್ನ ಪತ್ನಿಯಾದ ಲಕ್ಷ್ಮೀದೇವಿಯರಿಂದ ಕೂಡಿಕೊಂಡು ಎಪ್ಪತ್ತೆರಡುಸಾವಿರ ನಾಡಿಯೊಳಗೆ ಎಪ್ಪತ್ತೆರಡು ಸಾವಿರ ಸಂಖ್ಯಾಯುಕ್ತವಾದ ರೂಪಗಳಿಂದ ಯುಕ್ತನಾಗಿ ಮತ್ತೆ ಅಷ್ಟೇ ಸಂಖ್ಯಾ ಲಕ್ಷ್ಮೀರೂಪಗಳಿಂದ ಸಹಿತ, ನಾಡೀಗತ ಹಗಲಭಿಮಾನಿ, ರಾತ್ರೀ ಅಭಿಮಾನಿ ದೇವತೆಗಳ ಒಳಗೆ ಅಂತರ್ಯಾಮಿಯಾಗಿ ಇದ್ದಾನೆ. ಇದೇ ಪ್ರಕಾರ ಉದಕದ ದೆಶೆಯಿಂದ ಉತ್ಪನ್ನವಾದ ಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರ ದೇಹಸಂಕೇತವಾದ ಐವತ್ತು ಕೋಟಿ ವಿಸ್ತಾರವಾದ ಬ್ರಹ್ಮಾಂಡದಲ್ಲಿ ಇರತಕ್ಕ ಸಮಸ್ತ ಪ್ರಾಣಿಗಳ ಅಂತರ್ಗತನಾಗಿದ್ದು ಆಯಾ ಜೀವರ ಯೋಗ್ಯತಾನುಸಾರ ವಿಷಯದಲ್ಲಿ ಮೋಹಯುಕ್ತರನ್ನಾಗಿ ಮಾಡತಾನೆ.

(ದಾವ ದಾವ ನಾಡಿಯಿಂದ ದಾವ ದಾವ ಇಚ್ಛಾ ಹುಟ್ಟಿಸುತ್ತಾನೆಂದರೆ;

ಸುದರ್ಶನನಾಡೀ–ಪ್ರತ್ಯಕ್ಷದಿಂದ ಜ್ಞಾಪಕದಿಂದ ಭಕ್ತರ ಸಂದರ್ಶನೇಚ್ಛಾ, ಈ ನಾಡೀ ಶ್ರೋತ್ರಪ್ರವೇಶ

ಜಿತಾನಾಡೀ–ಈ ನಾಡೀದ್ವಾರಾ ಧೈರ್ಯಜನಕ, ಈ ನಾಡೀ ನಾಸಾಪ್ರವೇಶ

ಸೌಮ್ಯನಾಡೀ–ಶಾಂತಿ ಉತ್ಪತ್ತಿ, ಜಿಹ್ವಾಪ್ರವೇಶ

ಮೋಹನಾಡೀ–ಮೋಹಜ್ಞಾನ ಉತ್ಪತ್ತಿ, ತ್ವಗಿಂದ್ರಿಯಪ್ರವೇತ

ಕುಮಾರನಾಡೀ–ಸಂತಾನೇಚ್ಛಾ, ವಾಕ್‌ಪ್ರವೇಶ

ಮೃತಾನಾಡೀ–ಮರಣೇಚ್ಛಾ, ಹಸ್ತಪ್ರವೇಶ

ಸತ್ಯಾನಾಡೀ–ಸತ್ಯೇಚ್ಛಾ, ಪಾದಪ್ರವೇಶ

ಸುಮಧ್ಯನಾಡೀ–ಮಿಶ್ರಜ್ಞಾನ, ಗುದಪ್ರವೇಶ

ಮಾನಾಶನಾಡೀ–ಉಪಾಸೇಚ್ಛಾ, ಚಕ್ಷುಪ್ರವೇಶ

ನಾಶೀನಾಡೀ–ತಿನಸು ಉಂಟಾಗತದೆ. ಸ್ತ್ರೀಭೋಗೇಚ್ಛಾ, ಉಪಸ್ಥಪ್ರವೇಶ

ಶಿರಾನಾಡೀ–ಸಂಭೋಗಕ್ರಿಯಾ, ಮನಃಪ್ರವೇಶ

ಅಸುರಾನಾಡೀ–ಸುರಾಪಾನೇಚ್ಛಾ, ಅಹಂಕಾರವೃತ್ತಿಪ್ರವೇಶ

ಸೂರ್ಯನಾಡೀ–ತಿಳುವಳಿಕೆ ಉಂಟಾಗೋ ಇಚ್ಛಾ, ಬುದ್ಧಿಪ್ರವೇಶ

ಭಾಸ್ವತೀನಾಡೀ–ತಿಳುವಳಿಕೆ ಉಂಟಾಗೋಣ, ಚಿತ್ತಪ್ರವೇಶ

ಈ ಪ್ರಕಾರ, ನಾಡೀಗತ ನಾರಾಯಣ ಮೋಹ ಹುಟ್ಟಿಸತಾನಂತ ತಾತ್ಪರ್ಯ. ಆಯಾ ಇಂದ್ರಿಯಗಳಲ್ಲಿ ಆಯಾ ನಾಡಿಗಳು ಪ್ರವೇಶಮಾಡಿ, ಆದೇ ಪೂರ್ವೋಕ್ತ ಹದಿನಾಲ್ಕು ನಾಡಿಗಳಲ್ಲಿ, ದಾವ ದಾವ ನಾಡಿಯಲ್ಲಿ ಪರಮಾತ್ಮ ಜೀವನ ಮನಸ್ಸು ಪ್ರವೇಶ ಮಾಡಸತಾನೋ ಆಯಾ ನಾಡಿಯಂತೆ ಇಚ್ಛಾ ಉಂಟುಮಾಡತಾನೆ. ಈ ಪ್ರಕಾರ ಪ್ರತಿನಾಡಿಯಲ್ಲಿ ಕಾರ್ಯಭೇದಗಳು ಅವೆ ಎಂತ ಅರ್ಥ. ॥ ೧೪ ॥

## ೨. ಭಾವಪ್ರಕಾಶಿಕೆ

ಈ ಪ್ರಕಾರ ದೇಹದೊಳಗೆ ನಾಡಿಯು ಕವಲು ಒಟ್ಟು ೭೨,೦೦೧ ಇರುವವೆಂದು ಹೇಳಿರುವರಷ್ಟೇ ? ಈ ನಾಡಿಗಳಲ್ಲಿ ಪರಮಾತ್ಮನು ಒಬ್ಬನೇ ಆದರೂ ೭೨,೧೦೧ ರೂಪಗಳನ್ನು ತಾನು ಧರಿಸಿಕೊಂಡು, ಇದರಂತೆ ೭೨,೧೦೧ ರೂಪಗ

ಳನ್ನು ಧರಿಸಿಕೊಂಡಿರುವ ಲಕ್ಷ್ಮೀದೇವಿಯರಿಂದೊಡಗೂಡಿ, ಹಗಲೂ ರಾತ್ರಿಯೂ ಸಹ ಈ ಬ್ರಹ್ಮಾಂಡದೊಳಗಿರುವ ಎಲ್ಲಾ ಪ್ರಾಣಿಗಳಲ್ಲಿ ಇದ್ದು, ಜನರನ್ನು ಮೋಹಗೊಳಿಸುತ್ತಿರುವನೆಂದು ತಿಳಿದು ಉಪಾಸನೆ ಮಾಡಬೇಕೆಂದು ತಾತ್ಪರ್ಯ. ॥ ೧೪ ॥

೩. ಈ ಪದ್ಯಕ್ಕೆ ಭಾವದರ್ಪಣ ಟೀಕಾಕಾರರು ವ್ಯಾಖ್ಯಾನ ಬರೆದಿಲ್ಲ.

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಇನಿತೇತಿ ॥ ಏಕಾತ್ಮೇತಿ ॥ ಏಕಾತ್ಮಾನ್ಯೈಕ ಕರ್ಮಕೃತ್ ಇತ್ಯುಕ್ತೇಃ ॥ ಒಡಗೂಡಿ–ಯುಕ್ತನಾಗಿ. ॥ ೧೪ ॥

ಕನ್ನಡಾರ್ಥ

ಈ ಶರೀರದಲ್ಲಿ ನಾಡೀ ಶಾಖಾಗತ ಏಕಾತ್ಮ ರೂಪದಿಂದ ಹರಿಯು ಇರುವನೆಂದು ತಿಳಿಸುತ್ತಾರೆ. ಇನಿತು–ಎಂಬ ಪದ್ಯದಿಂದ. ಇನಿತು–ಇಷ್ಟು. ವನಿತೆ ಎಂದರೆ–ಶ್ರೀರಮಾದೇವಿಯರು. ॥ ೧೪ ॥

೫. ಶ್ರೀಗುರುಹೃದಯಪ್ರಕಾಶಿಕೆ

ಈ ಶರೀರದಲ್ಲಿರುವ ನಾಡೀಶಾಖಾಗತ ಏಕಾತ್ಮರೂಪ ಪರಮಾತ್ಮನ ಚಿಂತನಾ ಪ್ರಕಾರವನ್ನು ನಿರೂಪಿಸುತ್ತಾರೆ, ಇನಿತೆಂದು. ಹಿಂದೆ ಹೇಳಿದಷ್ಟು ನಾಡೀಶಾಖೆಗಳು ಯಾವಾಗಲೂ ಈ ಶರೀರಗಳಲ್ಲಿರುತ್ತವೆ. ಏಕಾತ್ಮನು ಎಂದರೆ, ತನ್ನ ಸ್ವರೂಪದಲ್ಲಿ ಭೇದರಹಿತನಾದ ಒಂದೇ ರೂಪದೇವರು, ಎಪ್ಪತ್ತೆರಡುಸಾವಿರ ರೂಪನಾಗಿ, ಹೀಗೆ ದಿವಾರಾತ್ರಿಅಭಿಮಾನಿಗಳಿಂದ ಕೂಡಿ ನಾಡಿಗಳಲ್ಲಿದ್ದು, ಬ್ರಹ್ಮಾಂಡದಲ್ಲಿ ಅಖಿಳ ಎಂದರೆ, ಸಮಸ್ತ ಜೀವರನ್ನೂ ಮೋಹಿಸುವ ಎಂದರೆ, ಯೋಗ್ಯತೆಗೆ ಹೆಚ್ಚು ಜ್ಞಾನವನ್ನು ಕೊಡದೆ ಬಾಹ್ಯವಿಷಯಾಸಕ್ತರನ್ನಾಗಿ ಮಾಡುವನು. ॥ ೧೪ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಹಿಂದಿನ ಪದ್ಯಗಳಲ್ಲಿ ವಿವರಿಸಿದಂತೆ, ಈ ರೀತಿಯಲ್ಲಿ ಪ್ರಧಾನ ನಾಡಿಯಾದ ಸುಷುಮ್ನಾನಾಡಿಯಿಂದ ಹೊರಟ ೭೨,೦೦೦ ಶಾಖಾನಾಡಿಗಳಲ್ಲಿ ಶ್ರೀಹರಿಯು ವಿದ್ಯಮಾನನಾಗಿದ್ದಾನೆ.

ಪ್ರಧಾನ ನಾಡಿಯು ಸುಷುಮ್ನಾ ಎಂಬ ಬ್ರಹ್ಮನಾಡಿ. ಇದಕ್ಕೆ ನಾಲ್ಕು ಶಾಖಾನಾಡಿಗಳು. ಪ್ರತಿಯೊಂದು ನಾಡಿಯೂ ೨೫ ನಾಡಿಗಳಿಂದ ಯುಕ್ತವಾಗಿದೆ. ಅಲ್ಲಿಗೆ ೨೫X೪=೧೦೦ ಶಾಖಾನಾಡಿಗಳು. ಪ್ರಧಾನ ನಾಡಿಯೂ ಸೇರಿದಂತೆ ೧+೧೦೦=೧೦೧ ಮುಖ್ಯನಾಡಿಗಳಾದುವು. ಸ್ಥೂಲದೇಹಾದ್ಯಂತ ಹಬ್ಬಿ ಹರಡಿರುವ ನಾಡಿಗಳ ಸಂಖ್ಯೆ=೭೨,೦೦೦. ಅಲ್ಲಿಗೆ ೭೨,೧೦೧ ನಾಡಿಗಳ ಸಂಖ್ಯೆ. ಇಷ್ಟು ಸಂಖ್ಯಾಕವಾದ ನಾಡಿಗಳು ಸಾಧನಶರೀರವೆಂಬ ಈ ಸ್ಥೂಲ ದೇಹದಲ್ಲಿ ವ್ಯಾಪಿಸಿ, ಹರಡಿಕೊಂಡಿವೆ ಎಂಬ ತತ್ತ್ವವನ್ನು ಶಾಸ್ತ್ರಯೋನಿತ್ವಾತ್ ಗುರೂಪದೇಶ ದ್ವಾರಾ, ಉತ್ತಮ ಜ್ಞಾನಾನುಸಂಧಾನಪೂರ್ವಕವಾಗಿ ತಿಳಿಯಬೇಕು.

ಈ ಶಾಖಾನಾಡಿಗಳಲ್ಲಿ ಶ್ರೀಹರಿಯು ಏಕಾತ್ಮನೆಂಬ ಅಭಿಧಾನದಿಂದ ವಿದ್ಯಮಾನನಾಗಿದ್ದಾನೆ. ಅವನೊಬ್ಬನೇ ಸರ್ವೋತ್ತಮದೇವನು. ಅವನಿಗೆ ಸಮರೂ ಇಲ್ಲ ಮತ್ತು ಅಧಿಕರಂತೂ ಇಲ್ಲವೇ ಇಲ್ಲ. ಇಂತಹ ಶ್ರೀಮನ್ನಾರಾಯಣನೇ ಏಕಾತ್ಮನು.

ಶ್ರೀಮನ್ನಾರಾಯಣನು ೭೨,೧೦೧ ರೂಪಗಳಿಂದ ಪೂರ್ವೋಕ್ತ ಶಾಖಾನಾಡ್ಯಂತರ್ಗತನಾಗಿದ್ದಾನೆ,

ಶ್ರೀಹರಿಯ ಪತ್ನಿ, ನಿತ್ಯಾವಿಯೋಗಿನಿಯಾದ ಲಕ್ಷ್ಮೀದೇವಿಯರೂ ಸಹ ಅಷ್ಟೇ ೭೨,೧೦೧ ರೂಪಗಳಿಂದ ಶ್ರೀಹರಿಯ ಇಚ್ಛಾನುವರ್ತಿಗಳಾಗಿದ್ದಾರೆ. ಏಕಾತ್ಮನು ಅಷ್ಟೇ ರಮಾರೂಪಸಹಿತನಾಗಿ ಈ ಶಾಖಾನಾಡಿಗಳಲ್ಲಿ ವಿಹರಿಸುತ್ತಾ ಸಂಚರಿಸುತ್ತಿರುವನು.

ವನ–ಎಂದರೆ ನೀರು. ವನಜ–ಎಂದರೆ, ನೀರಿನಲ್ಲಿ ಹುಟ್ಟುವ ಕಮಲ. ವನಜವನಜ–ಎಂದರೆ, ನಾಭೀಕಮಲದಲ್ಲಿ ಉತ್ಪತ್ತಿಯಾದ ಚತುರ್ಮುಖಬ್ರಹ್ಮ

ದೇವರು. ವನಜಜಾಂಡ-ಎಂದರೆ ಬ್ರಹ್ಮಾಂಡ ಎಂದರ್ಥ. ಅದು ಬೃಹತ್ ಬ್ರಹ್ಮಾಂಡವಾದರೆ, ನಮ್ಮ ಸ್ಥೂಲಶರೀರವು ಸೂಕ್ಷ್ಮರೂಪದಲ್ಲಿರುವ ಬ್ರಹ್ಮಾಂಡವು ಅಂದರೆ ಪಿಂಡಾಂಡವು. ಬ್ರಹ್ಮಾಂಡದಲ್ಲಿ ೧೪ ಲೋಕಗಳಿರುವಂತೆ, ಪಿಂಡಾಂಡ ರೂಪವಾದ ಈ ಸ್ಥೂಲಶರೀರದಲ್ಲಿಯೂ ಸಹ, ಆಪಾದಮೌಳಿ ಪರ್ಯಂತ, ಪಾತಾಳಾದಿ, ಸತ್ಯಲೋಕ ಪರ್ಯಂತ ಚತುರ್ದಶಭುವನಾತ್ಮಕವಾದ ಬ್ರಹ್ಮಾಂಡ ಇದೆ. ಇದರಲ್ಲಿ ಶ್ರೀಹರಿಯೇ ಬಿಂಬರೂಪನಾಗಿ ತಾನೇ ನಿಂತು, ಸಕಲ ನಾಡೀಗತ ವ್ಯಾಪಾರಗಳನ್ನು ಬಿಂಬರೂಪದಿಂದ ತಾನೇಮಾಡಿ, ಶ್ರೀವಾಯುದೇವರು ಮತ್ತು ನಾಡ್ಯಭಿಮಾನಿ ದೇವತೆಗಳ ದ್ವಾರಾ ಮಾಡಿಸಿ, ಈ ಸ್ಥೂಲಶರೀರದಲ್ಲಿ ಪ್ರಕಾಶತೋ ವ್ಯಾಪ್ತನಾದ ಜೀವನ ಅನುಭವಕ್ಕೆ ಆ ಫಲವನ್ನು ತಂದೀಯುವನು. ಆ ತೋಯಜಾಂಬಕನು ಜೀವರೊಳಗಿದ್ದು ಮೋಹಿಸುವ ಎಂದಿದ್ದಾರೆ. ತ್ರಿವಿಧವಾದ ಸಕಲ ಜೀವರಲ್ಲಿ ಜೀವಾಕಾರನಾಗಿ, ಜೀವನಾಮಕನಾಗಿ ತಾನೇ ಇದ್ದು, ಜೀವರು ತಾವೇ ಸಕಲ ಕಾರ್ಯಗಳಿಗೂ ಕರ್ತರು ಎಂಬ ಭಾವನೆಯನ್ನು ಕೊಟ್ಟು ಮೋಹಯುಕ್ತರನ್ನಾಗಿ ಮಾಡುತ್ತಾನೆ. ಈ ರಹಸ್ಯವನ್ನರಿತ ಜ್ಞಾನಿಗಳು ಮೋಹರಹಿತರಾಗಿರುತ್ತಾರೆ.

ಯಾವ ಯಾವ ನಾಡಿಗಳಲ್ಲಿ ಏಕಾತ್ಮನ ವ್ಯಾಪಾರ ವಿಶೇಷ, ಇಂದ್ರಿಯ ಸ್ಥಾನಗಳು ನಾಡಿಗಳ ಹೆಸರು ಇತ್ಯಾದಿ ಪೂರ್ಣವಿವರಗಳನ್ನು ಈ ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ.

## ನಾಡಿಗಳಲ್ಲಿ ಕಾರ್ಯಪ್ರವೃತ್ತಿ

| ಕ್ರ. ಸಂ. ಇಂದ್ರಿಯಗಳು | ಇಂದ್ರಿಯಸ್ಥಾನ | ನಾಡಿಯ ಹೆಸರು | ಕ್ರಿಯಾವಿಶೇಷ |
|---|---|---|---|
| | ಶ್ರೋತ್ರಪ್ರವೇಶ (ಶಬ್ದ) | ಸುದರ್ಶನನಾಡೀ | ಪ್ರತ್ಯಕ್ಷದಿಂದ, ಜ್ಞಾಪಕಶಕ್ತಿ. ಸಂದರ್ಶನೇಚ್ಛಾ |
| ೧ ಪಂಚ ಜ್ಞಾನೇಂದ್ರಿಯಗಳು | ತ್ವಗಿಂದ್ರಿಯ ಪ್ರವೇಶ (ಸ್ಪರ್ಶ) | ಮೋಹನನಾಡೀ | ಮೋಹಜ್ಞಾನದ ಉತ್ಪತ್ತಿ |
| | ಚಕ್ಷುಪ್ರವೇಶ (ರೂಪ) | ಮಾನಾಶನಾಡೀ | ಉಪಾಸೇಚ್ಛ |
| | ಜಿಹ್ವಾಪ್ರವೇಶ (ರಸ) | ಜಿತಾನಾಡೀ | ಶಾಂತಿ ಜನಕ |
| | ನಾಸಾಪ್ರವೇಶ (ಗಂಧ) | ಸೌಮ್ಯನಾಡೀ | ಧೈರ್ಯ ಜನಕ |
| | ಹಸ್ತಪ್ರವೇಶ | ಮೃತಾನಾಡಿ | ಮರಣೇಚ್ಛಾ |
| | ಪಾದಪ್ರವೇಶ | ಸತ್ಯಾನಾಡೀ | ಸತ್ಯೇಚ್ಛಾ ಉತ್ಪತ್ತಿ |
| ೨ ಪಂಚ ಕರ್ಮೇಂದ್ರಿಯಗಳು | ವಾಕ್‌ಪ್ರವೇಶ | ಕುಮಾರನಾಡೀ | ಸಂತಾನೇಚ್ಛಾ |
| | ಗುದಪ್ರವೇಶ | ಸುಮಧ್ಯನಾಡೀ | ಮಿಶ್ರಜ್ಞಾನ |
| | ಉಪಸ್ಥಪ್ರವೇಶ | ನಾಶೀನಾಡೀ | ಸ್ತ್ರೀಭೋಗೇಚ್ಛಾ |
| | ಮನಃಪ್ರವೇಶ | ಶಿರಾನಾಡೀ | ಸಂಭೋಗಕ್ರಿಯಾ |
| | ಅಹಂಕಾರ ಪ್ರವೃತ್ತಿ ಪ್ರವೇಶ | ಅಸುರಾನಾಡೀ | ಸುರಾಪಾನೇಚ್ಛಾ |
| ೩ ಮನೋ ಪ್ರವೃತ್ತಿಗಳು | ಬುದ್ಧಿಪ್ರವೇಶ | ಸೂರ್ಯನಾಡೀ | ತಿಳಿವಳಿಕೆಯ ಪ್ರಕ್ರಿಯೆ |
| | ಚಿತ್ತಪ್ರವೇಶ | ಭಾಸ್ವತೀನಾಡೀ | ಸಂಕಲ್ಪಶಕ್ತಿ |

## ಪದ್ಯ ೧೫

**ಮೂಲ**

**ದಿನ ದಿನದಿ ವರ್ಧಿಸುವ ಕುಮುದಾ ।**
**ಪ್ತನ ಮಯೂಖದ ಸೊಬಗ ಗತ ಲೋ ।**
**ಚನ ವಿಲೋಕಿಸಿ ಮೋದಬಡ ಬಲ್ಲನೆ ನಿರಂತರದಿ ॥**
**ಕುನರಗೀ ಸುಕಥಾಮೃತದ ಭೋ ।**
**ಜನದ ಸುಖ ದೊರಕುವದೆ ಲಕುಮಿ ।**
**ಮನೋಹರನ ಸದ್ಗುಣವ ಕೀರ್ತಿಪ ಭಕುತಗಲ್ಲದಲೆ ॥ ೧೫ ॥**

**ಅವತರಣಿಕೆ**

ಈ ಗ್ರಂಥೋಕ್ತ ತತ್ತ್ವಪ್ರಮೇಯಗಳು ಮತ್ತು ಶ್ರೀಹರಿಯ ಗುಣಕಥಾಮೃತಸಾರದ ಸವಿಯನ್ನು ಹರಿಭಕ್ತರು ಮಾತ್ರ ಅನುಭವಿಸಿ, ಆನಂದಪಡುವರಲ್ಲದೇ, ಅನ್ಯರಾದ ಅಭಕ್ತರಿಗೆ ದೊರೆಯುವುದಿಲ್ಲವೆಂದು, ದೃಷ್ಟಾಂತಪೂರ್ವಕ ಹೇಳುತ್ತಾರೆ.

**ಪ್ರತಿಪದಾರ್ಥ**

**ದಿನದಿನದಿ** = ಪ್ರತಿದಿವಸದಲ್ಲೂ, **ವರ್ಧಿಸುವ** = ಶುಕ್ಲಪಕ್ಷದಲ್ಲಿ ಕಾಂತಿಯಿಂದ ಕ್ರಮೇಣ ಅಭಿವೃದ್ಧಿ ಹೊಂದುವ, **ಕುಮುದಾಪ್ತನ** = ಕುಮುದ ಪುಷ್ಪಗಳಿಗೆ ಆಪ್ತನಾದ ಚಂದ್ರನ, **ಮಯೂಖದ** = ಕಿರಣಗಳ, **ಸೊಬಗ** = ಸೌಂದರ್ಯವು, **ಗತಲೋಚನ** = ಕುರುಡನು, **ವಿಲೋಕಿಸಿ** = ಚೆನ್ನಾಗಿ ನೋಡಿ, **ಮೋದಬಡಬಲ್ಲನೆ** = ಆನಂದಿಸಬಲ್ಲನೇ ?, **ಕುನರಗೆ** = ತದ್ವತ್, ವಿಷಯಾಸಕ್ತನಾದ ಜ್ಞಾನನೇತ್ರಹೀನನಾದ ಕುತ್ಸಿತಬುದ್ಧಿಯುಳ್ಳ ಅಭಕ್ತನಿಗೆ, **ಈ ಸುಕಥಾಮೃತದ** = ಪ್ರಸಕ್ತ ಗ್ರಂಥಗತವಾದ ಸಮೀಚೀನವಾದ ಶ್ರೀಹರಿಯ ಕಥಾಮೃತಸಾರದ, **ಭೋಜನದ ಸುಖ** = ಶ್ರವಣೇಂದ್ರಿಯ ದ್ವಾರಾ ಕೇಳಿ, ಅದ

ರಿಂದುಂಟಾಗುವ ಸವಿಯ ಆನಂದವು, **ನಿರಂತರದಿ**=ಸರ್ವಕಾಲವೂ, **ದೊರಕುವದೆ**=ಪ್ರಾಪ್ತಿಯಾಗುವುದೇ ಎಂದರೆ, **ಲಕುಮೀ ಮನೋಹರನ**=ಲಕ್ಷ್ಮೀದೇವಿಯರ ಮನಸ್ಸನ್ನೂ ಅಪಹರಿಸಿರುವ ಶ್ರೀಪರಮಾತ್ಮನ, **ಸದ್ಗುಣವ**=ಸಚ್ಚಿದಾನಂದಾತ್ಮಕವಾದ ಅನಂತಕಲ್ಯಾಣಗುಣಗಳನ್ನು, **ಕೀರ್ತಿಪ**=ಜ್ಞಾನಾನುಸಂಧಾನದಿಂದ ಕೀರ್ತನೆ ಮಾಡತಕ್ಕ, **ಭಕುತಗಲ್ಲದೆ**=ಶ್ರೀಹರಿಯ ನಿಜಭಕ್ತನಿಲ್ಲಗದೆ, ಇತರರಿಗೆ **ದೊರಕುವುದೇ**=ಪ್ರಾಪ್ತಿಯಾಗುವುದೇ ಎಂದು ಪ್ರಶ್ನಿಸುತ್ತಾರೆ. ॥ ೧೫ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಗ್ರಂಥ ಪರಿಭಕ್ತರಿಗೆ ಪ್ರಯೋಜನ ಎಂತ ಹೇಳತಾರೆ.

ಪ್ರತಿದಿನದಲ್ಲೂ, ಶುಕ್ಲಪಕ್ಷದಲ್ಲಿ ಕಾಂತಿಯಿಂದ ಅಭಿವೃದ್ಧಿಯಾಗುವ ಕುಮುದಪುಷ್ಪಗಳಿಗೆ ಆಪ್ತನಾದ ಚಂದ್ರನ ಕಿರಣಗಳ ಸೌಂದರ್ಯವು, ಅಂಧಕನಾದ ಪುರುಷ ವಿಶೇಷಾಕಾರವಾಗಿ ನೋಡಿ, ಸಂತೋಷಬಡೋದಕ್ಕೆ ಅರಿಯೋನೆ ? ಅರಿಯಲಾರ. ತದ್ವತ್, ದಿನದಿನದಲ್ಲಿ ಹರಿಕಥಾಮೃತಸಾರವೆಂಬ ಚಂದ್ರನು ಜ್ಞಾನಭಕ್ತ್ಯಾದಿಗಳನ್ನು ಅಭಿವೃದ್ಧಿ ಮಾಡತಕ್ಕವನು. ಇಂಥಾ ಚಂದ್ರನ್ನ ಕಣ್ಣು ಇಲ್ಲದೆ ಕುರುಡನಾದ ವಿಷಯಾಸಕ್ತನಾದ, ಜ್ಞಾನನೇತ್ರದಿಂದ ಶೂನ್ಯನಾದ ಕುತ್ಸಿತ ನರನಿಗೆ, ವರ್ತಮಾನ ಸಮೀಚೀನವಾದ ಹರಿಕಥಾಮೃತಸಾರದ ಭೋಜನ ಎಂದರೆ, ಶ್ರವಣೇಂದ್ರಿಯದ್ವಾರಾ ಭೋಜನಮಾಡಿ ಅದರಿಂದ ಆಗತಕ್ಕ ಸುಖ ಸದಾ ಸರ್ವಕಾಲವೂ ಸಿಕ್ಕೋದೆ ಎಂದರೆ, ಸಿಕ್ಕಲಾರದೆಂದು ತಾತ್ಪರ್ಯ. ಲಕ್ಷ್ಮೀದೇವೇರ ಮನಸ್ಸನ್ನು ಅಪಹರಿಸತಕ್ಕ ಲಾವಣ್ಯಾದಿ ಸೌಂದರ್ಯವುಳ್ಳ, ಮಹಾಮಹಿಮನಾದ ಪರಮಾತ್ಮನ ಸತು ಚಿತು ಆನಂದ ಈ ಗುಣಗಳ ಮಹಾತ್ಮ್ಯ ತಿಳಿದು ಪರಮಾತ್ಮನ್ನ ಕೀರ್ತನ ಮಾಡತಕ್ಕ ಭಕ್ತರಿಗೇ ಹೊರ್ತು, ಅನ್ಯರಿಗೆ ಇದರ ಭೋಜನದ ಸುಖ ದೊರೆಯಲಾರದು ಎಂತ ತಾತ್ಪರ್ಯ ॥ ೧೫ ॥

## ೨. ಭಾವಪ್ರಕಾಶಿಕೆ

ದಿನೇದಿನೇ ವೃದ್ಧಿಯಾಗುತ್ತಿರುವ ಚಂದ್ರಕಿರಣದ ಸೊಬಗನ್ನು ನೋಡಿ ಆನಂದಪಡಬೇಕಾದರೆ, ಕಣ್ಣಿದ್ದವನಿಗೆ ಸಾಧ್ಯವೇ ಹೊರತು, ಕುರುಡನಿಗೆ ಹೇಗೆ ಸಾಧ್ಯವಿಲ್ಲವೋ, ಹಾಗೆ ಈ ಹರಿಕಥೆ ಎಂಬ ಉತ್ಕೃಷ್ಟವಾದ ಅಮೃತವನ್ನು ಪಾನ ಮಾಡಲು ಭಗವದ್ಭಕ್ತರಿಗಲ್ಲದೆ, ಜ್ಞಾನಶೂನ್ಯನಾಗಿ ಭಗವದ್ದ್ವೇಷ, ಭಗವದ್ಭಕ್ತರ ದ್ವೇಷವನ್ನು ಮಾಡುತ್ತಿರುವ ಕುತ್ಸಿತ ಮನುಷ್ಯನಿಗೆ ಈ ಸುಖವು ದೊರಕುವು ದೆಂತು ? ಎಂದೆಂದಿಗೂ ಇಲ್ಲವೆಂದು ತಾತ್ಪರ್ಯ ॥ ೧೫ ॥

## ೩. ಭಾವದರ್ಪಣ

ದಿನದಿನದೀತಿ ॥ ಪ್ರತಿದಿವಸ ಕುಮುದಾಪ್ತನ–ಚಂದ್ರನ, ಮಯೂಖ–ಕಿರಣ. ಸೊಬಗು–ಅಲಂಕಾರ. ಗತಲೋಚನ-ಕುರುಡ, ಮೋದ-ಸಂತೋಷ, ಕುನರ–ಕುತ್ಸಿತ ಮನುಷ್ಯ ॥ ೧೫ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ದಿನದಿನದಿ–ಇತಿ ॥ ಕುಮುದಾಪ್ತ–ಚಂದ್ರಃ ॥ ಮಯೂಖ–ಕಿರಣ ॥ ಸೊಬಗು–ಸೌಂದರ್ಯ ॥ ೧೫ ॥

### ಕನ್ನಡಾರ್ಥ

ನಾಡೀಗತ ಪರಮಾತ್ಮನ ವ್ಯಾಪಾರಬೋಧಕ ಈ ಹರಿಕಥಾಮೃತವು ಹರಿಭಕ್ತರಿಗೆ ಮಾತ್ರ ಅಳವಡಿಸುವುದು. ಮಿಕ್ಕವರಿಗಿಲ್ಲ–ಎಂಬುದನ್ನು ಈ ನಿದರ್ಶನದಿಂದ ತಿಳಿಸುತ್ತಾರೆ-ದಿನದಿನದಿ ಎಂಬ ಪದ್ಯದಿಂದ. ಕುಮುದಾಪ್ತ-ಚಂದ್ರ. ಮಯೂಖ–ಕಿರಣ. ಸೊಬಗು–ಸೌಂದರ್ಯ ॥ ೧೫ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಶುಕ್ಲಪಕ್ಷದಲ್ಲಿ ದಿನದಿನಕ್ಕೂ ವೃದ್ಧಿಯಾಗುವ ಕುಮುದಾಪ್ತನೆಂಬ ಚಂದ್ರನ ಮಯೂಖದ ಸೊಬಗ ಎಂದರೆ, ಬೆಳದಿಂಗಳ ಸೌಂದರ್ಯವನ್ನು ಹೇಗೆ ಗತಲೋಚನ

ಎಂದರೆ, ಕಣ್ಣಿಲ್ಲದವನು ವಿಲೋಕಿಸಿ ನೋಡಿ ಸುಖಿಸಲರಿಯನೋ ಹಾಗೆ ಕುನರಗೆ ಎಂದರೆ, ಶಬ್ದಸ್ಪರ್ಶಾದಿಭೋಗಾಸಕ್ತ ಅಜ್ಞಜನಕ್ಕೆ, ಈ ಸುಕಥಾಮೃತದ ಭೋಜನಸುಖದೊರಕುವುದೇ ಎಂದರೆ, ದೇವರ ರೂಪ ಮಹಿಮಾದಿ ವಿಶೇಷ ವನ್ನು ಹೇಳುವ ಈ ಗ್ರಂಥಾಭಿಪ್ರಾಯ ತಿಳಿಯುವ ಸುಖ ದೊರಕದು. ಲಕ್ಷ್ಮೀ ಮನೋಹರನಾದ ದೇವರ ಸುಗುಣಾತಿಶಯಗಳನ್ನು ಕೀರ್ತಿಪ ಭಕ್ತಗೆ, ಅಂದರೆ ವರ್ಣಿಸಿ ತಿಳಿದು ಸಂತೋಷಪಡುವ ಜ್ಞಾನಿಗೆ ಹೊರ್ತು ಇತರರ್‍ಯಾರಿಗೂ ರುಚಿ ಸದು ॥ ೧೫ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀಹರಿಯ ಕಥಾ ಎಂಬ ಅಮೃತದ ಸಾರದ ಸವಿಯನ್ನು ಹರಿಭಕ್ತರಲ್ಲದೆ, ಅಭಕ್ತರಾದ ಕುತ್ಸಿತಜನರಾರೂ ಅನುಭವಿಸಿ, ಆನಂದ ಪಡಲು ಸಾಧ್ಯವಿಲ್ಲವೆಂದು, ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ–

ಚಂದ್ರನು ಉದಯಿಸಿದ ಕೂಡಲೇ, ಚಂದ್ರನ ಅಮೃತಕಿರಣಗಳ ದೆಸೆ ಯಿಂದ ಕನ್ನೈದಿಲೆ ಪುಷ್ಪವು ಅರಳಿ ವಿಕಸಿತವಾಗುವುದು. ಈ ಕಾರಣದಿಂದ ಚಂದ್ರನಿಗೆ ಕುಮುದಾಪ್ತನೆಂದು ಹೆಸರು.

ಶುಕ್ಲಪಕ್ಷದಲ್ಲಿ ಪ್ರತಿಪದದಿಂದ ಪ್ರಾರಂಭಿಸಿ, ಪೂರ್ಣಿಮಾ ಪರ್ಯಂತ, ದಿನದಿನಕ್ಕೆ ಕ್ರಮವಾಗಿ ಚಂದ್ರನ ಕಲೆಗಳು ವೃದ್ಧಿಯಾಗುತ್ತಾ ಹೋಗುವುವು. ಅದರಿಂದ ಚಂದ್ರನ ಕಿರಣಗಳ ಸೌಂದರ್ಯವು ಅಭಿವೃದ್ಧಿಯಾಗುವುದು.

ಕುಮುದಾಪ್ತನ ಅಮೃತಕಿರಣಗಳ ಸೌಂದರ್ಯವನ್ನು ಕುರುಡನು ಚೆನ್ನಾಗಿ ನೋಡಿ, ಆನಂದಪಡಬಲ್ಲನೆ ? ಎಂದೆಂದಿಗೂ ಸಾಧ್ಯವಿಲ್ಲ.

ಅದರಂತೆ, ಅನಂತಕಲ್ಯಾಣಗುಣಗಣಧಾಮನಾದ, ನಿರ್ದೋಷಿಯಾದ ಶ್ರೀಪರಮಾತ್ಮನ ಸಮೀಚೀನವಾದ ಕಥಾವಿಶೇಷವೆಂಬ ಅಮೃತವನ್ನು ಶ್ರೀಹರಿಯ ಭಕ್ತರು ಸವಿದು ಸಂತೋಷಪಡಬಲ್ಲರಲ್ಲದೆ, ಕುತ್ಸಿತ ಮನೋಭಾವದ ಮಾನವರಿಗೆ ಎಂದೆಂದಿಗೂ ದಕ್ಕುವುದಿಲ್ಲ.

ಈ ಪದ್ಯದಲ್ಲಿ ಪ್ರಯೋಗಿಸಿದ ಉಪಮಾನಾಲಂಕಾರದಲ್ಲಿ, ಹರಿಕಥೆಯು ಚಂದ್ರನ ಸದೃಶ. ಚಂದ್ರನ ಕಿರಣ ಶೀತಲವಾದದ್ದು. ಚಂದ್ರಕಿರಣಗಳಿಗೆ ಅಮೃತ ಕಿರಣಗಳೆಂದು ಹೆಸರು. ಹರಿಭಕ್ತರು ಕನ್ನೈದಿಲೆ ಪುಷ್ಪ ಸದೃಶರು. ಚಂದ್ರನ ಶೀತಲಕಿರಣಗಳಿಂದ, ಕುಮುದಪುಷ್ಪವು ಅರಳುವಂತೆ, ಶ್ರೀಹರಿಕಥಾಶ್ರವಣ ದಿಂದ, ಹರಿಭಕ್ತರ ಮನಸ್ಸೆಂಬ ಕುಮುದ ಪುಷ್ಪವು ಭಕ್ತಿಭಾವದಿಂದ ವಿಕಸಿತವಾಗು ವುದು. ಅಂತೆಯೇ ಶ್ರೀಹರಿಯ ಸಮೀಚೀನವಾದ ಕಥಾಶ್ರವಣದಿಂದ ಅಮೃತ ಸದೃಶವಾದ ಆನಂದ ಪ್ರಾಪ್ತಿ. ತನ್ಮೂಲಕ ನಿತ್ಯಾನಂದರೂಪವಾದ ಮೋಕ್ಷಸುಖವು ಲಭ್ಯ. ಶುಕ್ಲಪಕ್ಷದಲ್ಲಿ ಚಂದ್ರನ ಕಿರಣಗಳ ಕಾಂತಿ ದಿನೇದಿನೇ ವೃದ್ಧಿಯಾಗುವುದು. ಅದರಂತೆ, ಶ್ರೀಹರಿಕಥಾಮೃತದ ಭೋಜನದ ಸವಿಯನ್ನುಂಬುವ ಭಕ್ತರಿಗೆ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳೆಂಬ ದೈವೀಸಂಪತ್ತು ವರ್ಧಿಸುತ್ತಾ ಹೋಗುವುದು. ಕುಜನರು, ಗತಲೋಚನನಾದ ಕುರುಡನ ಸದೃಶರು. ಕುರುಡನು ಚಂದ್ರನ ಅಮೃತಕಿರಣಗಳ ಸೌಂದರ್ಯವನ್ನು ನೋಡಿ ಆನಂದಿಸಲಾರ. ಅಂತೆಯೇ ಮತ್ಸರಿ ಗಳಾದ ಕುಜನರು ಹರಿಕಥಾಮೃತದ ಸವಿಯನ್ನು ಎಂದೆಂದಿಗೂ ಅನುಭವಿಸಿ, ಸುಖಪಡಲಾರರೆಂದು ಪ್ರಸಕ್ತ ಪದ್ಯದ ತಾತ್ಪರ್ಯ ॥ ೧೫ ॥

## ಪದ್ಯ ೧೬

**ಮೂಲ**

**ಈ ತನುವಿನೊಳಗಿಹವು ಓತ ।**
**ಪ್ರೋತರೂಪದಿ ನಾಡಿಗಳು ಪುರು ।**
**ಹೂತಮುಖರಲ್ಲಿಹರು ತಮ್ಮಿಂದಧಿಕರೊಡಗೂಡಿ ॥**
**ಭೀತಿಗೊಳಿಸುತ ದಾನವರ ಸಂ ।**
**ಘಾತನಾಮಕ ಹರಿಯ ಗುಣ ಸಂ ।**
**ಪ್ರೀತಿಯಲಿ ಸದುಪಾಸನೆಯ ಗೈವುತಲೆ ಮೋದಿಪರು ॥ ೧೬ ॥**

**ಅವತರಣಿಕೆ**

ಈ ಸ್ಥೂಲಶರೀರಾದ್ಯಂತ ನಾಡಿಗಳಲ್ಲಿ ಇಂದ್ರಾದಿ ತತ್ತ್ವದೇವತೆಗಳು

ಸಂಘಾತನಾಮಕನಾದ ಶ್ರೀಹರಿಯನ್ನು ಭಕ್ತಿಭಾವದಿಂದ ಉಪಾಸನೆಮಾಡುತ್ತಾ ಆನಂದಯುಕ್ತರಾಗಿರುತ್ತಾರೆಂದು ತಿಳಿಸುತ್ತಾರೆ–

## ಪ್ರತಿಪದಾರ್ಥ

**ಈ ತನುವಿನೊಳಗೆ** = ಈ ಸ್ಥೂಲಶರೀರಾದ್ಯಂತ, **ನಾಡಿಗಳು** = ೭೨,೦೦೦ ಸಂಖ್ಯಾಕವಾದ ನಾಡಿಗಳು, **ಓತಪ್ರೋತರೂಪದಿ** = ಬಟ್ಟೆಯಲ್ಲಿರುವ ಎಳೆಗಳಂತೆ, ಅಡ್ಡವಾಗಿ, ಉದ್ದವಾಗಿ (ನಿಬಿಡವಾಗಿ), **ಇಹವು** = ಇರುವುವು. **ಪುರುಹೂತಮುಖರು** = ಇಂದ್ರನೇ ಮೊದಲಾದ ತತ್ತ್ವಾಭಿಮಾನಿ ದೇವತೆಗಳು, **ತಮ್ಮಿಂದ ಅಧಿಕರೊಡಗೂಡಿ** = ತಾರತಮ್ಯ ಕ್ರಮದಲ್ಲಿ ತಮಗಿಂತ ಉತ್ತಮರಾದ ಗರುಡ, ಶೇಷ, ರುದ್ರ, ವಾಯು, ಬ್ರಹ್ಮ ಇತ್ಯಾದಿ ಸ್ವೋತ್ತಮರ ಸಹಿತರಾಗಿದ್ದು, **ದಾನವರ** = ದೇಹದಲ್ಲಿರುವ ದೈತ್ಯರನ್ನು, **ಭೀತಿಗೊಳಿಸುತ** = ಭಯಪಡಿಸುತ್ತಾ, **ಸಂಘಾತನಾಮಕ** = ದೇಹಗತ ದಾನವರ ವ್ಯಾಪಾರ ನಡೆಯದಂತೆ, ದೈತ್ಯರ ಸಂಹಾರಕರೂಪವಾದ ಸಂಕರ್ಷಣ ನಾಮಾತ್ಮಕನಾದ, **ಹರಿಯ** = ಶ್ರೀಪರಮಾತ್ಮನ, **ಗುಣ** = ಅಪಾರ ಮಹಿಮಾನ್ವಿತವಾದ ಮಂಗಳ ಗುಣಗಳನ್ನು, **ಸಂಪ್ರೀತಿಯಲಿ** = ಶುದ್ಧವಾದ ಭಕ್ತಿಭಾವದಿಂದ, **ಸದುಪಾಸನೆಗೈವುತಲೆ** = ಸಮೀಚೀನವಾದ ಉಪಾಸನೆ ಮಾಡುತ್ತಾ, **ಮೋದಿಪರು** = ಸದಾ ಸಂತೋಷದಿಂದಿರುತ್ತಾರೆ. ॥ ೧೬ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ದೇಹಗತ ದೈತ್ಯರನ ದೇಹಗತದೇವತೆಗಳು ಭೀತಿಪಡಿಸತಾರೆ ಅಂತ ಹೇಳತಾರೆ.

ಈ ಸ್ಥೂಲದೇಹದ ಒಳಗೆ ಎಪ್ಪತ್ತೆರಡುಸಾವಿರ ನಾಡಿಗಳು, ತಂತುಗಳಿಂದ ವಸ್ತ್ರ, ತಿರ್ಯಕ್‌ತಂತುಗಳಿಂದಲೂ, ಊರ್ಧ್ವತಂತುಗಳಿಂದಲೂ ನಿರ್ಮಾಣ ಹ್ಯಾಂಗೋ್ತದ್ವತ್, ವಸ್ತ್ರಗತ ದಾರಗಳು ದೃಷ್ಟಾಂತವಾಗಿ ಇರೋವಾಗಿ ಅವೆ,

ದೃಷ್ಟಾಂತಾನುಸಾರ ಸುತ್ತಿಕೊಂಡು ಇರೋವಾಗಿ ಅವೆ. ಈ ಪ್ರಕಾರ ಇರತಕ್ಕ ಎಪ್ಪತ್ತೆರಡುಸಾವಿರ ನಾಡಿಗಳಲ್ಲಿ, ಇಂದ್ರನೇ ಮೊದಲಾದ ತತ್ತ್ವದೇವತೆಗಳು, ತಮ್ಮ ನೋಡಲು ಅಧಿಕರಾದ ಗರುಡ, ಶೇಷ, ವಾಯು, ಬ್ರಹ್ಮ, ಸರಸ್ವತೀ ಮೊದಲಾದವರ ಸಂಗಾತ ಕೂಡಿಕೊಂಡು, ನಾಡೀಗಳಲ್ಲಿ ಇರೋವರಾಗಿದ್ದಾರೆ. ನಾಡಿಗಳಲ್ಲಿ ಇರತಕ್ಕ ದೈತ್ಯರನ್ನ ಭಯಪಡಿಸುತ್ತ, ನಾಡೀಗಳಲ್ಲಿ ಇರತಕ್ಕ ದೈತ್ಯರ ವ್ಯಾಪಾರ ನಡೆಯದಂತೆ ಅವರನ್ನ ಚಂದಾಗಿ ಸಂಹಾರಮಾಡುತ್ತ, ದೈತ್ಯರ ಸಂಹಾರಕಾರಕನಾದ ಸಂಕರ್ಷಣನಾಮದಿಂದ ಕರಸತಕ್ಕ, ನಾಡೀಗತನಾದ ಸಂಘಾತ ನಾಮಕನಾದ ಪರಮಾತ್ಮನ ಸುಗುಣಗಳ ಅತ್ಯಂತ ಪ್ರೀತಿಯಿಂದ, ತಥಾ ಆಸಕ್ತಿ ಯಿಂದ ಸಮೀಚೀನವಾದ ಉಪಾಸನಾ ಮಾಡುತಲೇ, ಸದಾ ಸಂತೋಷದಿಂದ ಇರೋವರಾಗಿದ್ದಾರೆ. ಈ ಪ್ರಕಾರ ಅನುಸಂಧಾನದಿಂದ ಯುಕ್ತರಾದವರಿಗೆ ದೇಹ ದಲ್ಲಿ ದೈತ್ಯರ ವ್ಯಾಪಾರ ದೇವತೆಗಳು ನಡಿಸೋದಿಲ್ಲ.

ನಾಡಿಗಳ ವಿಶೇಷಪ್ರಮಾಣಗಳು ಬರಿಯಲ್ಪಡುತ್ತವೆ.

**ಕಂಠಮಧ್ಯೇ ಸ್ಥಿತಾ ನಾಡೀ ಸುಷುಮ್ನೇತಿ ಪ್ರಕೀರ್ತಿತಾ ।**
**ತಿಷ್ಠಂತಿ ಪರಿತಸ್ಸರ್ವಾಶ್ಚಕ್ರೇಸ್ಮಿನ್ನಾಡಿಕಾಸ್ತತಃ ॥ ೧ ॥**

**ಸಾರ್ಧತ್ರಿಕೋಟಿನಾಡ್ಯೋ ಹಿ ಸ್ಥೂಲಸೂಕ್ಷ್ಮಾಶ್ಚ ದೇಹಿನಾಂ ।**
**ನಾಭಿಕಂದನಿಬದ್ಧಾಸ್ತಾಃ ತಿರ್ಯಗೂರ್ಧ್ವಮಧಃ ಸ್ಥಿತಾಃ ॥ ೨ ॥**

**ತಿಸ್ರಃ ಕೋಟ್ಯರ್ಧಕೋಟೀ ಚ ಯಾನಿ ಲೋಮಾನಿ ಮಾನುಷೇ ।**
**ನಾಡೀಮುಖಾನಿ ಸರ್ವಾಣಿ ಧರ್ಮಬಿಂದುಂ ಕ್ಷರಂತಿ ಚ ॥ ೩ ॥**

**ನಾನಾ ನಾಡೀಪ್ರಸವಗಂ ಸರ್ವಭೂತಾಂತರಾತ್ಮನಿ ।**
**ಊರ್ಧ್ವಮೂಲಮಧಃಶಾಖಂ ವಾಯುಮಾರ್ಗೇಣ ಸರ್ವಗಂ**
**ದ್ವಿಸಪ್ತತಿಸಹಸ್ರಾಣಿ ನಾಡ್ಯಃ ಸ್ಯುಃ ವಾಯುಗೋಚರಾಃ ॥ ೪ ॥**

**ಕರ್ಮಮಾರ್ಗೇಣ ಸುಷಿರಾ ತಿರ್ಯಂಚ ಸುಶಿರಾತ್ಮಕಾ ।**
**ತರ್ಪಯಂತಿ ರಸೈರ್ದೇಹಂ ನದ್ಯಸ್ತ್ವೋಯೈರಿವಾರ್ಣವಂ ॥ ೫ ॥**

ದ್ವಿಸಪ್ತತಿಸಹಸ್ರಂ ತು ತಾಸಾಂ ಸ್ಥೂಲಂ ಪ್ರಕೀರ್ತಿತಾಃ ।
ದೇಹೇ ಧಮನ್ಯೋ ಧನ್ಯಾಸ್ತಾಃ ಪಂಚೇಂದ್ರಿಯಗುಣಾವಹಾಃ ॥ ೬ ॥

ನಾಭೀಕಂದಸ್ಥಿತಾಸ್ತಾಸ್ತು ನಾಭೌ ಚಕ್ರೇ ಪ್ರವೇಷ್ಟಿತಾಃ ।
ತಾಸಾಂ ಚ ಸೂಕ್ಷ್ಮಸುಶಿರ ಶತಾನಿ ಸಪ್ತಸ್ವಧಾನಿ ವೈ ॥ ೭ ॥

ರಸಕೃದನ್ನರಸಂ ವಹದ್ಭಿಃ ಆಪ್ಯಾಯತೇ ವಪುರಿದಂ ಹಿ ನೃಣಾ ।
ಮಮೀಷಾಮಂಬು ಪ್ರಸಿದ್ಧಿರಿವ ಸಿಂಧುಶಲ್ಯೈಸಮುದ್ರಂ ॥ ೮ ॥

ಆಪಾದತಃ ಪ್ರಭೃತಿ ಗಾತ್ರಮಶೇಷಮಾಸಾಂ ।
ಆಮಸ್ತಕಾದಪಿ ಚ ನಾಭಿಪುರಃಸ್ಥಿತೇನ ॥
ಏತನ್ಮೃದಂಗ ಇವ ಚರ್ಮಚಯೋನ ಬಂಧಂ ॥
ಕಾಯಂ ಸೃಣಾಮಿಹಸಿರಾಶತಸಪ್ತಕೇನ ॥ ೯ ॥

ಇಳಾ ಚ ಪಿಂಗಳಾ ಚೈವ ಸುಷುಮ್ನಾ ಚ ಸರಸ್ವತೀ ।
ವಾರುಣೀ ಚೈವ ಪೂಷಾ ಚ ಹಸ್ತಿಜಿಹ್ವಾಯಶಸ್ವಿನೀ ॥ ೧೦ ॥

ವಿಶ್ವೋದರಿ ಕುಹೂಶ್ಚೈವ ಶಂಖಿನೀ ಚ ಯಶಸ್ವಿನೀ ।
ಅಲಂಬುಸಾ ಚ ಗಾಂಧಾರೀ ಮುಖಾಶ್ಚೈತಾಶ್ಚತುರ್ದಶ ॥ ೧೧ ॥

ಇಳಾ ಚ ಪಿಂಗಳಾಚೈವ ಸುಷುಮ್ನಾ ಚ ಸರಸ್ವತೀ ।
ಗಾಂಧಾರೀ ಹಸ್ತಿಜಿಹ್ವಾ ಚ ಕುಹೂ ಪೂಷಾ ಯಶಸ್ವಿನೀ ॥ ೧೨ ॥

ಏತಾಶ್ಚ ಪ್ರಾಣನಾಡ್ಯೋ ಹಿ ಜೀವಕೋಶ ಪ್ರತಿಷ್ಠಿತಾಃ ।
ತತ್ರ ಪ್ರಧಾನನಾಡ್ಯಸ್ತು ದತ್ತಾ ವಾಯುಪ್ರವಾಹಕಾಃ ॥ ೧೩ ॥

ಇಳಾ ಪಿಂಗಳಯೋಶ್ಚೈವ ಸುಷುಮ್ನಾ ಚೋರ್ಧ್ವಗಾಮಿನೀ ।
ಗಾಂಧಾರೀ ಹಸ್ತಿಜಿಹ್ವಾ ಚ ಪೂಷಾ ಚ ಗಮನೇ ಸ್ಥಿತಾ ॥ ೧೪ ॥

ಅಲಂಬುಸಾಯಶಸ್ವಿನ್ಯೌ ದಕ್ಷಿಣಾಂಗೇ ಸಮನ್ವಿತೌ ।
ಕೂಹೂ ಚ ಶಂಖಿನೀ ಚೈವ ವಾಮಾಂಗೇ ಚಾವಲಂಬಿತೇ ॥ ೧೫ ॥

ಏತಾಃ ಸುದರ್ಶನಾಡೀಷು ನಾನಾಕಾರ್ಯ ಪ್ರಸೂತಿಕಾಃ ।
ಇಳಾ ಚ ವಾಮನಾಸಾಯಾಂ ದಕ್ಷಿಣೇ ಪಿಂಗಳಾ ಮತಾ ।
ಸುಷುಮ್ನಾ ಬ್ರಹ್ಮರಂಧ್ರೇ ಚ ಗಾಂಧಾರೀ ವಾಮಚಕ್ಷುಷಿ ॥ ೧೬ ॥

ದಕ್ಷಿಣೇ ಹಸ್ತಿಜಿಹ್ವಾ ಚ ಪೂಷಾ ಕರ್ಣೇತಿ ದಕ್ಷಿಣೇ ।
ವಾಮೇ ಯಶಸ್ವಿನೀ ಜ್ಞೇಯಾ ಮುಖೇ ಚಾಲಂಬುಸಾ ಮತಾ ॥೧೭॥

ಕುಹುಶ್ಚ ಲಿಂಗಮೂಲೇಸ್ಯಾಚ್ಛಂಖಿನೀ ಶಿರಸೋಪರಿ ।
ಏವಂ ದ್ವಾರಂ ಸಮಾಶ್ರಿತ್ಯ ತಿಷ್ಠಂತಿ ದಶನಾಡಿಕಾಃ ॥ ೧೮ ॥

ಪ್ರಾಣಾಪಾನಸಮಾನಾಶ್ಚ ಉದಾನೋ ವ್ಯಾನ ಏವ ಚ ।
ನಾಗಃ ಕೂರ್ಮೋಽಥ ಕೃಕಲೋ ದೇವದತ್ತೋ ಧನಂಜಯಃ ॥೧೯॥

ಏತೇ ನಾಡೀಷು ಸರ್ವಾಸು ಚರಂತಿ ದಶವಾಯವಃ ।
ಏತೇಷು ವಾಯವಃ ಪಂಚ ಮುಖ್ಯಪ್ರಾಣಾದಯಃ ಸ್ಮೃತಾಃ ॥೨೦॥

ತೇಷು ಮುಖ್ಯತಮಾವೇತೌ ಪ್ರಾಣಾಪಾನೌ ನರೋತ್ತಮೌ ।
ಪ್ರಾಣ ಏವೈತಯೋರ್ಮುಖ್ಯಸ್ಸರ್ವಪ್ರಾಣ ಭೃತಾಂ ಸದಾ ॥ ೨೧ ॥

ಶಬ್ದಗ್ರಹಾ ಶ್ರುತೌ ನಾಡೀ ರೂಪಗ್ರಹಾ ಚ ಲೋಚನೇ ।
ಗಂಧಗ್ರಹಾ ನಾಸಿಕಾಯಾಂ ರಸನಾಯಾಂ ರಸಾವಹಾ ॥ ೨೨ ॥

ಏವಂ ತ್ವಚಿ ಸ್ಪರ್ಶನಾಹಾ ಶಬ್ದಕೃದ್ಧೃದಯಾನ್ಮುಖೇ ।
ಮನೋಬುದ್ಧ್ಯಾಧಿಕಂ ಸರ್ವಂ ಹೃದಯೇಷು ಪ್ರತಿಷ್ಠಿತಂ ॥ ೨೩ ॥

ಪುರೀತತಾಮುಸಸ್ತ್ವಸ್ಯಾ ನಿದ್ರಾ ಸಮಭಿಜಾಯತೇ ।
ಗಾಂಧಾರೀ ಹಸ್ತಿಜಿಹ್ವಾಖ್ಯಾ ಸಪೂಷಾಲಂಬುಸಾ ಮತಾ ॥ ೨೪ ॥

ಯಶಸ್ವಿನೀ ಶಂಖಿನೀ ಚ ಕುಹುಃ ಸ್ಯುಸ್ಸಪ್ತ ನಾಡಯಃ ।
ಇಳಾ ಪೃಷ್ಠೇ ತು ಗಾಂಧಾರೀ ಮಯೂರ ಗಳಸನ್ನಿಭಾ ॥ ೨೫ ॥

ಸವ್ಯಪಾದಾದಿ ನೇತ್ರಾಂತಾ ಗಾಂಧಾರೀ ಪ್ರಕೀರ್ತಿತಾ ।
ಹಸ್ತಿಜಿಹ್ವಾತ್ಪಲಪ್ರೇಕ್ಷ್ಯಾ ನಾಡೀ ತಸ್ಯಾಃ ಪುರಃ ಸ್ಥಿತಾಃ ॥ ೨೬ ॥

ಸವ್ಯಭಾಗಸ್ಯ ಮೂರ್ಧಾದಿ ಪಾದಾಂಗುಷ್ಠಾಂತಮಾಶ್ರಿತಾಃ ।
ಪೂಷಾ ತು ಪಿಂಗಳಾ ಪೃಷ್ಠೇ ನೀಲಜೀಮೂತ ಸನ್ನಿಭಾ ॥ ೨೭ ॥
॥ ೧೬ ॥

೨. ಭಾವಪ್ರಕಾಶಿಕೆ

ನಾಡಿಗಳು ಈ ಶರೀರದಲ್ಲಿ ದಾರಗಳನ್ನು ಅಡ್ಡೆಳೆ, ಉದ್ದೆಳೆ ಹಾಕಿ ವಸ್ತ್ರಗಳನ್ನು ನೇಯುವಂತೆ, ಅಡ್ಡ ಕವಲುಗಳು, ಉದ್ದ ಕವಲುಗಳು ಹೊರಟು, ಒಂದಕ್ಕೊಂದು ಹೆಣೆದುಕೊಂಡಿರುವುವು. ಆ ನಾಡಿಗಳಲ್ಲಿ ಇಂದ್ರಾದಿ ದೇವತೆಗಳು ತಮಗಿಂತಲೂ ಉತ್ತಮರಾದ ಗರುಡ, ಶೇಷ, ರುದ್ರ, ಸೌಪರ್ಣೀ, ವಾರುಣೀ, ಪಾರ್ವತೀ, ಸರಸ್ವತೀ, ಭಾರತೀ, ವಾಯುದೇವರು, ಬ್ರಹ್ಮದೇವರು ಇವರುಗಳಿಂದೊಡಗೂಡಿ ದೇಹದಲ್ಲಿರುವ ದೈತ್ಯರನ್ನು ಭಯಪಡಿಸುತ್ತಾ, ಸಂಘಾತ ಮತ್ತು ಸಂಧಾತ ಎಂಬ ಹೆಸರಿನಿಂದ ಈ ದೇಹದೊಳಗಿರುವ ಪರಮಾತ್ಮನನ್ನು ಉಪಾಸನೆ ಮಾಡುತ್ತಾ ಆನಂದಪಡುತ್ತಿರುವರು. ॥ ೧೬ ॥

೩. ಭಾವದರ್ಪಣ

ಈ ತನು ಇತಿ ॥ ಓತಪ್ರೋತ–ಉದ್ದ, ಅಗಲ ಎಂಬರ್ಥ. ಸಂಘಾತ–ಸಂಹಾರಕ ॥ ೧೬ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಈ ತನವು ಇತಿ ॥ ಪುರುಹೂತಃ–ಇಂದ್ರಃ ॥ ಸಂಧಾತಾ–ಓಂ ದಿವೇ ಜನಾಯ ತನ್ವೇ ಗೃಣಾನಃ ಅನುದ್ಯಾವಾಪೃಥಿವೀ ತತ(ತ್ರ) ಓಜೋsಮರ್ತ್ಯಾ ಜ(ಜಿ)ತಹ ಇಂದ್ರ ದೇವಾಃ ॥ ಕೃಷ್ವಾ ಕೃತ್ನೋ(ತ್ನೋ) ಓಂ ॥ ವೃಷ್ಟಿಕಾಲೇ ದ್ಯಾವಾಪೃಥಿವ್ಯೌ ಸಂಧಾರಯತಿ ಇತಿ ತಥೋಕ್ತಃ ॥ ೧೬ ॥

### ಕನ್ನಡಾರ್ಥ

ಸ್ವೋತ್ತಮ ದೇವತೆಗಳೊಡನೆ ಇಂದ್ರಾದಿ ದೇವತೆಗಳು ನಾಡಿಗಳಲ್ಲಿ ಇರುತ್ತಾ ಪರಮಾತ್ಮನನ್ನು ಉಪಾಸಿಸುವರೆಂದು ತಿಳಿಸುತ್ತಾರೆ–ಈ ತನುವಿನೊಳಗೆ–ಎಂಬ ಪದ್ಯದಿಂದ

ಪುರುಹೂತ–ಪದಕ್ಕೆ ಇಂದ್ರ ಎಂದರ್ಥ. ಸಂಧಾತ-ಎಂಬ ಪಾಠವನ್ನು ಅನುಸರಿಸಿ ವ್ಯಾಖ್ಯಾನಿಸಿರುತ್ತಾರೆ. ಕೆಲವು ಮೂಲಪುಸ್ತಕಗಳಲ್ಲಿ 'ಸಂಘಾತ'-ಎಂಬ ಪಾಠವು ಕಂಡುಬರುತ್ತದೆ. ಆದರೆ ಈ ಪಾಠವನ್ನೇ ವ್ಯಾಖ್ಯಾನಕಾರರು ಪರಿಗ್ರಹಿಸಿರುತ್ತಾರೆ. ಆದುದರಿಂದ, ಸಂಧಾತ ನಾಮದ ಅರ್ಥವಿವರಣರೂಪವಾದ ಬೃಹತೀಋಙ್ಮಂತ್ರವನ್ನು ಉದಾಹರಿಸುತ್ತಾರೆ.

ವೃಷ್ಟಿಕಾಲದಲ್ಲಿ ಮಳೆಯಾಗುವ ವೇಳೆಯಲ್ಲಿ ಭೂಮಿ ಮತ್ತು ಆಕಾಶಗಳನ್ನು ಪರಸ್ಪರ ಹೊಂದಿಸುವನು. ಆದ್ದರಿಂದ ಸಂಧಾತನು ಎಂದು ಬೃಹತೀ ಮಂತ್ರಾನುಗುಣವಾದ ನಾಮಾರ್ಥ ॥ ೧೬ ॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ನಾಡಿಗಳಿರುವ ಬಗ್ಗೆ, ದೇವತೆಗಳ ಕಾರ್ಯ ಸಹಾ ತಿಳಿಸುತ್ತಾರೆ, ಈ ತನುವೆಂದು.

ಈ ಶರೀರದಲ್ಲಿ ಓತಪ್ರೋತರೂಪ ಎಂದರೆ, ಬಟ್ಟೆಯಲ್ಲಿ ನೂಲು ಅಡ್ಡ ಉದ್ದವಾಗಿ ನೇಯ್ದಿರುವಂತೆ ನಾಡಿಗಳು ಇರುವುವು. ಪುರೂಹೂತನೆಂಬ ದೇವೇಂದ್ರ ಮೊದಲಾದ ದೇವತೆಗಳು, ತಮಗೆ ಹೆಚ್ಚಾದ ರುದ್ರಾದಿ ದೇವತೆಗಳಿಂದ ಕೂಡಿದ್ದು, ದಾನವರೆಂಬ ದೇಹಾದ್ಯಭಿಮಾನಿ ಅಸುರರನ್ನು ಭಯಪಡಿ

ಸುತ್ತಾ ಸಂಘಾತ ಎಂದರೆ, ಶರೀರನಾಮಧಾರಕ ಶ್ರೀಹರಿಯ ಸದ್ಗುಣಗಳನ್ನು ಭಕ್ತಿಯಿಂದ ಚಿಂತಿಸುತ್ತಾ ಸುಖಪಡುವರು. ॥ ೧೬ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಬಟ್ಟೆಯಲ್ಲಿರುವ ನೂಲುಗಳು (ತಂತು) ಅಡ್ಡವಾಗಿಯೂ ಮತ್ತು ಉದ್ದವಾಗಿಯೂ ಇರುವುವು. ನೇಯಿಗೆ ಯಂತ್ರದಲ್ಲಿ ಎಳೆಗಳನ್ನು ಅಡ್ಡವಾಗಿ ಮತ್ತು ಉದ್ದವಾಗಿ ಮೊದಲು ಜೋಡಿಸಿಕೊಂಡು ನೇಯ್ದಾಗ, ಅವು ಪರಸ್ಪರ ಹೊಂದಿಕೊಂಡು ವಸ್ತ್ರವಾಗುವುದು. ಇದರಿಂದ ವಸ್ತ್ರವನ್ನು ತಂತುಪಟ–ಎನ್ನುವರು. ಹೀಗೆ ಉದ್ದ ಮತ್ತು ಅಡ್ಡವಾಗಿರುವ ಜೋಡಣೆಗೆ ಓತಪ್ರೋತಎಂದು ಹೆಸರು.

ವಸ್ತ್ರದಲ್ಲಿರುವ ನೂಲಿನ ಎಳೆಗಳಂತೆ, ಈ ಸ್ಥೂಲದೇಹದಲ್ಲಿ ಸಕಲ ನಾಡಿಗಳೂ, ಉದ್ದಗಲವಾಗಿ ದೇಹಾದ್ಯಂತ ಹಬ್ಬಿ ಹರಡಿವೆ. ಎಡದಿಂದ ತಿರುಗಿ ಬಲಕ್ಕೆ, ಬಲದಿಂದ ತಿರುಗಿ ಎಡಕ್ಕೆ ಹೀಗೆ ಕತ್ತರಿಯ ಆಕಾರದಲ್ಲಿ, ತುಂದಿಯಿಂದ ಊರ್ಧ್ವಭಾಗಕ್ಕೂ, ಅಧೋಭಾಗಕ್ಕೂ, ದೇಹದ ಎಡಬಲಪಾರ್ಶ್ವಗಳಿಗೂ ಓತಪ್ರೋತವಾಗಿ ಹರಡಿವೆ.

ನಾಡಿಗಳಲ್ಲಿ ಪುರುಹೂತ ನಾಮಕ ಇಂದ್ರದೇವರೇ ಆದಿಯಾಗಿ ದೇವತಾ ವರ್ಗವಿದೆ. ಇಂದ್ರಾದಿ ಸುರರು ತಾರತಮ್ಯದಲ್ಲಿ ತಮಗಿಂತ ಉತ್ತಮರಾದ ಗರುಡ, ಶೇಷ, ರುದ್ರ, ತತ್ಪತ್ನೀಯರಾದ ಸೌಪರ್ಣೀ, ವಾರುಣೀ, ಪಾರ್ವತೀ, ವಾಯು–ಬ್ರಹ್ಮರು, ಭಾರತೀ, ಸರಸ್ವತೀ ಇತ್ಯಾದಿ ಸ್ವೋತ್ತಮ ದೇವತೆಗಳಿಂದ ಸಹಿತರಾಗಿ ನಾಡಿಗಳಲ್ಲಿ ವಿದ್ಯಮಾನರಾಗಿದ್ದಾರೆ.

ಪೂರ್ವೋಕ್ತ ಅಮರ ವರ್ಗ, ದೇಹಗತ ದುಷ್ಟ ದೈತ್ಯರನ್ನು ಭೀತಿಗೊಳಿಸುವ ಸಂಘಾತ ನಾಮಕ ಶ್ರೀಹರಿಯನ್ನು ಸದಾ ಉಪಾಸನೆಮಾಡುತ್ತಲಿರುವರು. ದೈತ್ಯರಿಂದ ಸಾಧನಶರೀರವೆಂದೆನಿಪ ಈ ದೇಹಕ್ಕೆ ನಾನಾವಿಧವಾದ ಈತಿಬಾಧೆಗಳುಂಟಾಗುವುವು. ಈ ದೈತ್ಯರ ಉಪಟಳವನ್ನು ತಪ್ಪಿಸುವುದಕ್ಕಾಗಿ, ಶ್ರೀಹರಿಯು

ಸಂಘಾತ ಎಂಬ ಅಭಿಧಾನದಿಂದ ವಿದ್ಯಮಾನನಾಗಿದ್ದಾನೆ. ಸಂಘಾತ–ಎಂದರೆ, ಸಂಹಾರಕ ಎಂದರ್ಥ (ಸಮ್ಯಕ್ + ಘಾತ = ಚೆನ್ನಾಗಿ ಘಾತಿಸುವವನು, ಇದರಿಂದ ದೈತ್ಯರ ಪ್ರಾಬಲ್ಯವು ನಶಿಸಿ, ನಿರ್ವೀರ್ಯರಾಗುವರು. ಪುನಃ ಚೇತರಿಸಿಕೊಳ್ಳುವರು. ನಾಡೀಗತ ದೇವತಾಗಣದಿಂದ ಪ್ರಾರ್ಥ್ಯಮಾನನಾದ ಸಂಘಾತನಾಮಕನು ಪುನಃ ಆ ದೈತ್ಯರ ವೀರ್ಯವನ್ನು ಕ್ಷೀಣಿಸುವನು.

ಕೆಲವು ಪಾಠಾಂತರಗಳಲ್ಲಿ ಸಂಘಾತ ಎಂಬ ಪದಕ್ಕೆ ಬದಲಾಗಿ ಸಂಧಾತ ಎಂದಿದೆ. ಈ ಹೆಸರು ಬೃಹತೀಋುಙ್ಮಂತ್ರದಲ್ಲಿದೆ. ಮಳೆಯಾಗುವ ಸಮಯ ದಲ್ಲಿ ಭೂಮಿ ಮತ್ತು ಆಕಾಶಗಳನ್ನು ಪರಸ್ಪರ ಹೊಂದಿಸುವುದರಿಂದ, ಪರಮಾತ್ಮ ನಿಗೆ ಸಂಧಾತ–ಎಂದು ಹೆಸರು.

ಇಲ್ಲಿ ಸಂಧಾತ ಶಬ್ದಕ್ಕೆ–ಸರ್ವಪ್ರಾಣಿಗಳಿಗೂ ಅವರವರ ಕರ್ಮಫಲ ಕೊಡಿಸುವವನು–ಎಂದರ್ಥ.

ಇಂದ್ರಾದಿಗಳು ಸ್ವೋತ್ತಮರ ಸಹ ಈ ದೇಹದ ನಾಡಿಗಳಲ್ಲಿ ಉಪಾಸನೆ ಮಾಡುತ್ತ ಶ್ರೀಹರಿಯನ್ನು ಕೊಂಡಾಡುತ್ತಾರೆ.

## ಪದ್ಯ ೧೭

**ಮೂಲ**

**ಜಲಟ ಕುಕ್ಕುಟ ಖೇಟಜೀವರ ।**
**ಕಳೆವರದೊಳಗಿದ್ದು ಕಾಣಿಸಿ ।**
**ಕೊಳದೆ ತತ್ತದ್ರೂಪ ತನ್ನಾಮದಲಿ ಕರೆಸುತಲಿ ॥**
**ಜಲರುಹೇಕ್ಷಣ ವಿವಿಧ ಕರ್ಮಂ ।**
**ಗಳ ನಿರಂತರ ಮಾಡಿ ಮಾಡಿಸಿ ತ ।**
**ತ್ಫಲಗಳುಣ್ಣದೆ ಸಂಚರಿಸುವನು ನಿತ್ಯಸುಖಪೂರ್ಣ ॥ ೧೭ ॥**

**ಅವತರಣಿಕೆ**

ಶ್ರೀಹರಿಯು ಜಲಚರ, ಭೂಚರ, ಖೇಚರ ಎಂಬ ಪ್ರಾಣಿಗಳ ಸ್ಥೂಲ ದೇಹಗತ ನಾಡಿಗಳಲ್ಲಿ ತನ್ನಾಮಕನಾಗಿ ಕರ್ಮಫಲಗಳನ್ನು ಜೀವನ ಅನುಭವಕ್ಕೆ ತಂದೀಯುತ್ತಾ, ವಿಹರಿಸುತ್ತಿರುವನು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಜಲಟಿ** = ನೀರಿನಲ್ಲಿ ಸಂಚರಿಸುವ ಜಲಚರ ಪ್ರಾಣಿಗಳು (ಜಲ-ಉದಕ, ಅಟ-ಸಂಚಾರ). **ಕುಕ್ಕುಟಿ** = ಭೂಚರ ಪ್ರಾಣಿಗಳು (ಕು-ಭೂಮಿ), **ಖೇಟಿ** = ಆಕಾಶದಲ್ಲಿ ಸಂಚರಿಸುವ ಪಕ್ಷಿ ಇತ್ಯಾದಿ, **ಜೀವರ** = ಸರ್ವ ತ್ರಿವಿಧ ಚೇತನ, **ಕಳೇವರಗಳೊಳು** = ಸ್ಥೂಲದೇಹ ಮತ್ತು ದೇಹಗತ ನಾಡಿಗಳಲ್ಲಿ, **ಇದ್ದು** = ವಿದ್ಯಮಾನನಾಗಿ ಇದ್ದುಕೊಂಡು, **ಕಾಣಿಸಿಕೊಳದೆ** = ಜೀವರಿಗೆ ಗೋಚರನಾಗದೆ **ತತ್ತದ್ರೂಪ** = ಆಯಾಯ ನಾಡಿಗಳ ರೂಪದಿಂದಲೂ, **ತನ್ನಾಮದಲಿ** = ಆಯಾಯ ನಾಡಿಗಳ ಹೆಸರಿನಿಂದಲೇ, **ಕರೆಸುತಲಿ** = ಕರೆಯಿಸಿಕೊಳ್ಳುತ್ತಾ, **ಜಲರುಹೇಕ್ಷಣ** = ಕಮಲ ದಳದಂತೆ ವಿಶಾಲವಾದ ನೇತ್ರವುಳ್ಳ ಶ್ರೀಪರಮಾತ್ಮನು (ಜಲ-ನೀರು, ಜಲರುಹ-ನೀರನ್ನು ಭೇಧಿಸಿಕೊಂಡು ಮೇಲಕ್ಕೆ ಬರುವ ಕಮಲಪುಷ್ಪ. ಜಲರುಹೇಕ್ಷಣ-ಕಮಲದಳಾಯತಾಕ್ಷ) **ವಿವಿಧ ಕರ್ಮಂಗಳ** = ದೇಹೇಂದ್ರಿಯಗಳ ದ್ವಾರಾ, ನಾಡೀಗತ ಆಯಾಯ ಜೀವರ ಯೋಗ್ಯತಾನುಸಾರವಾದಸಮಸ್ತ ವ್ಯಾಪಾರಗಳನ್ನೂ, **ಮಾಡಿ** = ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, **ಮಾಡಿಸಿ** = ನಾಡೀಗತ ದೇವತೆಗಳ ದ್ವಾರಾ ಜೀವನ ಕಡೆಯಿಂದ ಮಾಡಿಸುತ್ತಾ, **ತತ್ಫಲಗಳುಣ್ಣದೆ** = ಕರ್ಮಗಳ ಫಲಗಳನ್ನು ತಾನು ಉಣ್ಣದೆ ನಿರ್ಲಿಪ್ತನಾಗಿ, **ನಿತ್ಯಸುಖಪೂರ್ಣ** = ಸದಾ ಆನಂದ ಉದ್ರಿಕ್ತ ವಸ್ತುವಾದ ಶ್ರೀಪರಮಾತ್ಮನು, **ಸಂಚರಿಸುವನು** = ದೇಹಗತ ನಾಡಿಗಳಲ್ಲಿ ವಿಹರಿಸುತ್ತಾನೆ. ॥ ೧೭ ॥

## ವ್ಯಾಖ್ಯಾನಗಳು

**೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ**

ನಾಡೀದ್ವಾರಾ ವ್ಯಾಪಾರಗಳ ನಡಸತಾನೆ ಎಂತ ಹೇಳತಾರೆ,

ಉದಕದಲ್ಲಿ ಸಂಚಾರ ಮಾಡತಕ್ಕ ಜಲಚರ ಪ್ರಾಣಿಗಳು, ಕು ಎಂದರೆ ಭೂಮಿ, ಈ ಭೂಮಿಯಲ್ಲಿ ಸಂಚರಿಸತಕ್ಕ ಪ್ರಾಣಿಗಳೂ, ಮಾನುಷಾದಿ,ಪಶ್ವಾದಿ, ಆಕಾಶದಲ್ಲಿ ಸಂಚರಿಸತಕ್ಕ ಪ್ರಾಣಿಗಳು ಪಕ್ಷಿಗಳೂ, ಬ್ರಹ್ಮಾದಿ ತ್ರಿವಿಧಜೀವರೂ ಇದರಲ್ಲೇ ಅಂತರ್ಭೂತರು. ಈ ಯಾವತ್ತೂ ಪ್ರಾಣಿಗಳ, ಪೂರ್ವೋಕ್ತ ಪ್ರಕಾರ, ಸ್ಥೂಲದೇಹದಲ್ಲಿ ನಾಡೀಗಳಲ್ಲಿ ಇದ್ದು, ದೇಹಗತ ಸರ್ವನಾಡಿಗಳ ಒಳಗೆ, ಸರ್ವ ಇಂದ್ರಿಯಗಳ ಒಳಗೆ ಪ್ರಕಾಶತೋ ಜೀವನೇನು, ಜೀವನ ಇಂದ್ರಿಯಗಳೇನು ವ್ಯಾಪ್ತವಾಗಿ ಅವೆ, ಆ ವ್ಯಾಪ್ತವಾದ ಸ್ವರೂಪೇಂದ್ರಿಯಗಳಿಂದ ಜಡೇಂದ್ರಿಯ ಗಳ ದ್ವಾರಾ ಸರ್ವಪದಾರ್ಥಗಳ ನೋಡತಾನೆ. ನೋಡಿ ಅದರನ್ನ ತಿಳಕೋತಾನೆ, ತದ್ವತ್ ದೇಹದ ಒಳಗಿನ ನಾಡ್ಯಾದಿಗಳ ಸ್ಥಿತಿಗಳ ಕಾಣೋದಿಲ್ಲ. ಅದಕ್ಕೆ ದೃಷ್ಟಾಂತ, ಲೋಕದಲ್ಲಿ ಸರ್ವಪ್ರಾಣಿಗಳಿಗೆ ಎದುರಿಗೆ ಇರೋ ಪದಾರ್ಥ ಕಾಣತದೆ ಹೊರತು, ಹಿಂದಿರುವ ಪದಾರ್ಥಗಳು ಕಾಣೋದಿಲ್ಲ. ಹಿಂದೆ ತಿರುಗಿ ನೋಡಿದರೆ ಹಿಂದಿನ ಪದಾರ್ಥಗಳು ಕಾಣತವೆ ಹೊರತು, ಮುಂದಿನ ಪದಾರ್ಥಗಳು ಕಾಣೋ ದಿಲ್ಲ. ತದ್ವತ್ ಜೀವನ ಇಂದ್ರಿಯಗಳು, ಸ್ಥೂಲದೇಹದಲ್ಲಿ ಅಭಿಮುಖವಾಗಿ ವ್ಯಾಪ್ತವಾಗಿ ಪ್ರಾಕೃತ ವಿಷಯಗಳ ನೋಡುತ್ತಾ ಅವೆ. ತನಗೆ ಹಿಂದೆ ಇರತಕ್ಕಂಥ ನಾಡಿಗಳ, ತದ್ಗತ ಪರಮಾತ್ಮನ ದಾವಾಗ ತಿರುಗಿ ನೋಡತಾನೋ ಆಗ್ಗೆ ಕಾಣ ತಾನೆ. ಆಗ್ಗೆ ಎದುರಿಗೆ ಇದ್ದ ವಿಷಯಾದಿಗಳು ಕಾಣೋದಿಲ್ಲ. ಆದ್ದರಿಂದ ಅಂತರ ಸ್ಥಿತಿ, ಅಂತರ್ಗತ ಪರಮಾತ್ಮ ಜೀವರಿಗೆ ಕಾಣಿಸಿಕೊಡದೆ ಇದ್ದಾನೆ. ಮತ್ತು ಜೀವ ರಿಗೆ ಅತಿ ಸಮೀಪನಾದ ಪರಮಾತ್ಮ, ಅತಿ ಸಮೀಪವಾದ ರೆಪ್ಪೆ ಕಣ್ಣಿಗೆ ಕಾಣದೆ ಹ್ಯಾಂಗದೋ, ತದ್ವತ್ ಕಾಣಿಸಿಕೊಳ್ಳದೆ ಇರೋವನಾಗಿದ್ದಾನೆ. ಕಮಲಪತ್ರದೋ ಪಾದಿಯಲ್ಲಿ ಕಣ್ಣುಗಳು ಉಳ್ಳ ಪರಮಾತ್ಮ, ಆಯಾ ನಾಡೀರೂಪದಿಂದಲೂ, ಆಯಾ ನಾಡೀ ನಾಮದಿಂದಲೂ ಕರಸುತ್ತಾ, ಪ್ರತಿದಿನದಲ್ಲೂ ದೇಹೇಂದ್ರಿಯಾದಿ ಗಳಿಂದ ಆಯಾ ನಾಡಿಗಳ ದ್ವಾರಾ ನಾನಾ ವಿಚಿತ್ರಕರ್ಮಗಳ ಬಿಂಬಕ್ರಿಯಾದ್ವಾರಾ ಮಾಡಿ, ಜೀವನಕಡಿಯಿಂದ ದೇಹದ್ವಾರಾ ಮಾಡಿ ಮಾಡಿಸಿ, ಆಯಾ ಜಡಕರ್ಮಜನಿತ ಜಡಫಲಗಳ ತಾನು ಉಣ್ಣದೆ, ಜೀವರಿಗೆ ಉಣ್ಣಿಸುತ್ತಾ, ಆ ಜೀವಭುಕ್ತಗತ ನಿತ್ಯ ವಾದ ಸುಖಪೂರ್ಣಗಳಾದ ತದ್ವಾಚ್ಯ ಸ್ವಾಖ್ಯರೂಪಗಳಾದ ತನ್ನ ರೂಪಗಳ ಫಲದಿಂದ ತಾನೇ ಭೋಜನ ಮಾಡಿ, ದೇಹಗತ ನಾಡಿಗಳೊಳಗೆ ಸಂಚಾರ ಮಾಡ ತಾನೆ. ಮಾನುಷರೋಪಾದಿಯಲ್ಲಿ ನಾಡಿಗಳು ಸರ್ವಪ್ರಾಣಿಗಳಿಗೂ ಏಕಪ್ರಕಾರ

ವಲ್ಲ, ತಾರತಮ್ಯಾನುಸಾರ ನ್ಯೂನಗಳಾಗಿ ಇರೋವಾಗಿವೆ. ॥ ೧೭ ॥

**೨. ಭಾವಪ್ರಕಾಶಿಕೆ**

ಅಟಗತೌ–ಎಂಬ ಧಾತುವಿನಿಂದ ಜಲಟ, ಎಂದರೆ ನೀರಿನೊಳು ಸಂಚರಿಸುವ ಪ್ರಾಣಿಗಳೆಂದರ್ಥ. ಕುಕ್ಕುಟ ಎಂದರೆ, ವಾಡಿಕೆಯಲ್ಲಿ ಕೋಳಿಗಳಿಗೆ ಹೆಸರಾದರೂ, ಸಾಮಾನ್ಯವಾಗಿ ಭೂಮಿಯಲ್ಲಿ ಸಂಚರಿಸುವ ಎಲ್ಲಾ ಪ್ರಾಣಿಗಳುನ್ನೂ ತೆಗೆದುಕೊಳ್ಳಬೇಕು. ಖೇಟ ಅಂದರೆ, ಅಂತರಿಕ್ಷಚಾರಿಗಳು. ಇಂತಹ ತ್ರಿವಿಧ ಪ್ರಾಣಿಗಳಲ್ಲಿಯೂ, ಇದ್ದು ಕಮಲನೇತ್ರನಾದ, ನಿತ್ಯಸುಖಪೂರ್ಣನಾದ ಶ್ರೀಹರಿಯು, ಆ ಪ್ರಾಣಿಗಳು ಮಾಡುವ ನಾನಾವಿಧ ಕರ್ಮಗಳನ್ನು ತಾನು ಮಾಡಿ, ಅವುಗಳ ಫಲವನ್ನು ಮಾತ್ರ ತಾನುಣ್ಣದೆ ಸುಖದಿಂದ ಸಂಚರಿಸುತ್ತಿರುವನು. ॥ ೧೭ ॥

**೩. ಭಾವದರ್ಪಣಾ**

ಜಲಟೇತಿ । ಜಲದಲ್ಲಿ ಸಂಚಾರ ಮಾಡತಕ್ಕ ಜೀವರು ಎಂಬರ್ಥ. ಕುಕ್ಕುಟ–ಭೂಮಿಯಲ್ಲಿ ಸಂಚಾರ ಮಾಡತಕ್ಕ ಜೀವರು ಎಂಬರ್ಥ. ಖೇಟ–ಆಕಾಶದಲ್ಲಿ ಸಂಚಾರ ಮಾಡತಕ್ಕ ಪಕ್ಷಿಗಳು ಎಂಬರ್ಥ. ॥ ೧೭ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)**

ಜಲಟ–ಇತಿ ॥ ಖೇಟ–ಪಕ್ಷೀ ॥ ಜಲರುಹ–ಪದ್ಮವತ್. ಜಲ-ಸ್ಥಲ–ಆಕಾಶಗಳಲ್ಲಿರುವ ಸ್ಥಲ ಜೀವರಲ್ಲಿರುವ ಪರಮಾತ್ಮನ ಸಂಚಾರಗಳನ್ನು ತಿಳಿಸುತ್ತಾರೆ ಜಲಟ–ಎಂಬ ಪದ್ಯದಿಂದ. ಖೇಟ-ಆಕಾಶದಲ್ಲಿ ಚಲಿಸುವ ಪಕ್ಷಿಗಳು. ಜಲರುಹ-ನೀರಿನಲ್ಲಿ ಬೆಳೆಯುವುದು ಪದ್ಮ ॥ ೧೭. ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಸರ್ವಜೀವದೇಹಸ್ಥ ದೇವರಕ್ರಿಯೆಗಳನ್ನು ತಿಳಿಸುತ್ತಾರೆ, ಜಲಟವೆಂದು. ಅಟಗತೌ ಎಂಬ ಧಾತುರೀತ್ಯಾ. ಜಲಟ, ಕುಕ್ಕುಟ, ಖೇಟ ಎಂದರೆ, ನೀರಲ್ಲಿ

ಭೂಮಿಯಲ್ಲಿ, ಅಂತರಿಕ್ಷದಲ್ಲಿ ಸಹಾ ಸಂಚರಿಸುವ ಸರ್ವಜೀವರ ಕಳೇವರಗಳೆಂಬ ದೇಹಗಳಲ್ಲಿ, ಜಲರಹೇಕ್ಷಣನೆಂಬ ಕಮಲದಳನಯನನಾನ ದೇವರು ಇದ್ದು, ಕಾಣಿಸಿಕೊಳ್ಳದೆ ಎಂದರೆ, ಸರ್ವಕ್ರಿಯಾಪ್ರೇರಕ ದೇವರೇ ಎಂದು ಅಜ್ಞರಿಗೆ ತಿಳಿಸಿಕೊಳ್ಳದೆ, ಆಯಾಯಾ ದೇಹನಾಮ ರೂಪಧಾರಕನಾಗಿ, ಸರ್ವಕ್ರಿಯೆಗಳನ್ನು ವ್ಯಕ್ತಿ ಮಾಡಿ, ಸದಾ ಆಯಾಯಾ ಪುಣ್ಯಪಾಪ ಫಲಗಳನ್ನು ತಾನು ಹೊಂದದೆ, ಜೀವರಿಗೆ ಕೊಡುತ್ತಾ ವಿಹರಿಸುತ್ತಿರುವನು. ಆದ್ದರಿಂದ ನಿತ್ಯಸುಖ ಪೂರ್ಣನು. ॥ ೧೭ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸಮಸ್ತಚೇತನರಾಶಿಗಳಲ್ಲಿ ನಾಡಿಗತನಾಗಿದ್ದು, ಗೋಚರವಾಗದಲೆ, ನಾಡೀಗತ ನಾನಾವಿಧ ವ್ಯಾಪಾರ ವಿಶೇಷಗಳನ್ನು ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ ಮಾಡಿಸುತ್ತಾ ತತ್ಕರ್ಮಫಲರೂಪವಾದ ಅನುಭವಗಳಿಂದ ನಿರ್ಲಿಪ್ತನಾಗಿರುವ ನಿತ್ಯಸುಖಪೂರ್ಣನ ಮಹಾಮಹಿಮೆಯನ್ನು ತಿಳಿಸುತ್ತಾರೆ.

'ಅಟಗತೌ'–ಎಂಬ ಧಾತುವಿನಿಂದ ನಿಷ್ಪನ್ನವಾದ ಅರ್ಥದಿಂದ, ಅಟ–ಎಂದರೆ ಸಂಚರಿಸುವುದು ಎಂದು ಅರ್ಥ. ಇದರಿಂದ ಜಲಟ–ಎಂದರೆ ನೀರಿನಲ್ಲಿ ಸಂಚರಿಸುವ, ಮೀನು, ಮೊಸಳೆ, ತಿಮಿಂಗಿಲ ಇತ್ಯಾದಿ ನಾನಾಜಾತಿಯ ಜಲಚರಜಂತುಗಳು.

ಕುಕ್ಕುಟ–ಎಂದರೆ ಭೂಮಿಯಮೇಲೆ ಸಂಚರಿಸುವ ಪಶ್ವಾದಿ ಪ್ರಾಣಿಗಳು, ಸರೀಸೃಪಗಳು, ಮಾನವರು, ಇತ್ಯಾದಿ ನಾನಾಪ್ರಕಾರವಾದ ಭೂಚರ ಪ್ರಾಣಿಗಳು. ಕುಕ್ಕುಟ ಎಂಬ ಪದಕ್ಕೆ ಕೋಳಿ–ಎಂದು ರೂಢ್ಯರ್ಥ.

ಖೇಟ–ಎಂದರೆ, ಆಕಾಶದಲ್ಲಿ ಸಂಚರಿಸುವ ಪಕ್ಷಿವರ್ಗ. (ಖಂ–ಆಕಾಶ, ಅಟ–ಸಂಚರಿಸುವ ಪ್ರಾಣಿಗಳು)

ಹೀಗೆ ಜಲಚರ, ಭೂಚರ, ಖೇಚರಗಳಾದ ಸಕಲ ಪ್ರಾಣಿಗಳ ಸ್ಥೂಲ ದೇಹಗತ ನಾಡಿಗಳಲ್ಲಿದ್ದು ಸಮಸ್ತ ನಾಡೀಗತ ವ್ಯಾಪಾರಗಳನ್ನು ತಾನೇ ಮಾಡು

ತ್ತಿದ್ದರೂ, ತಾನು ಮಾತ್ರ ಸಾಮಾನ್ಯಜನರಿಗೆ ಗೋಚರಿಸದೇ ಇರುವನು. ಇದಲ್ಲವೇ ಅದ್ಭುತಚರಿತ್ರನಾದ ಅನಂತಮಹಿಮನ ವೈಶಿಷ್ಟ್ಯ !

ನಾಡೀಗತನಾಗಿರುವ ಶ್ರೀಹರಿಯು ಆಯಾಯಾ ನಾಡಿಗಳ ರೂಪದಿಂದಲೇ ಇದ್ದಾನೆ. ಅಂತೆಯೇ, ಆ ನಾಡಿಗಳ ಹೆಸರುಗಳಿಂದಲೇ, ನಾಡಿಗತದೇವತೆಗಳ ಹೆಸರಿನಿಂದಲೇ ವಾಚ್ಯನಾಗಿ ಕರೆಯಿಸಿಕೊಳ್ಳುತ್ತಾನೆ.

ಅನಂತ ಸೌಂದರ್ಯನಿಧಿಯಾದ ಆ ಪರಮಾತ್ಮನ ನೇತ್ರಗಳು ಕಮಲದಳದಂತೆ ವಿಶಾಲವಾಗಿವೆ. ನೀರಿನಲ್ಲಿ ಉತ್ಪತ್ತಿಯಾಗಿ ನೀರಿನಿಂದ ಹೊರಗೆ ಬರುವ ಕಮಲ ಪುಷ್ಪ. ಈಕ್ಷಣ–ನೇತ್ರ. ಕಮಲದ ದಳಗಳು ವಿಶಾಲ ಹಾಗೂ ಮನೋಹರ. ಹಾಗೆ ಕಮಲದಳಾಯತಾಕ್ಷನಾದ ಶ್ರೀಹರಿ.

ಶರೀರಗತ ಸಮಸ್ತ ವ್ಯಾಪಾರಗಳೂ ಇಂದ್ರಿಯಗಳ ದ್ವಾರಾ ನಡೆಯುತ್ತಿರುವುವು. ಜಲರುಹೇಕ್ಷಣನು ಸ್ಥೂಲಶರೀರಗತ ನಾಡಿಗಳಲ್ಲಿ ಇದ್ದು, ಕಾಣಿಸಿಕೊಳ್ಳದೆ, ನಾಡಿಗಳ ದ್ವಾರಾ, ಸಕಲವಿಧವಾದ ದೇಹಗತಕಾರ್ಯಗಳನ್ನು ತಾನೇ ಬಿಂಬರೂಪನಾಗಿದ್ದು ಜೀವನಿಗೋಸ್ಕರ ಮಾಡುತ್ತಾನೆ. ತದ್ದ್ವಾರಾ ನಾಡೀಗತ ದೇವತೆಗಳು ಪ್ರತಿಬಿಂಬಭೂತರಾದ್ದರಿಂದ, ಬಿಂಬಕ್ರಿಯಾದ್ವಾರಾ ನಡೆಯುವ ಸಮಸ್ತ ವ್ಯಾಪಾರವಿಶೇಷಗಳೂ ಪ್ರತಿಬಿಂಬಭೂತರಾದ ದೇವತೆಗಳ ದ್ವಾರಾ ನಡೆಯುವುವು. ಹೀಗೆ ವಿವಿಧಕರ್ಮಗಳನ್ನು ನಿರಂತರ ಮಾಡಿ ಮಾಡಿಸುತ್ತಾನೆ. ಶರೀರಗತ ಇಂದ್ರಿಯಗಳಲ್ಲಿ ಪ್ರಾಕಾಶತೋವ್ಯಾಪ್ತನಾಗಿರುವ ಜೀವನ ಅನುಭವಕ್ಕೆ ಆ ಕರ್ಮಗಳ ಫಲರೂಪವಾದ ಅನುಭವವನ್ನು ತಂದೀಯುವನು. ಆಗ ಜೀವರು ಅಜ್ಞಾನದಶೆಯಿಂದ ತಾವೇ ಆ ಕರ್ಮಗಳಿಗೆ ಕರ್ತೃಗಳೆಂದು ಭ್ರಮಿಸುವರು. ಇದೇ ಕಾಣಿಸಿಕೊಳ್ಳದೆ, ಆ ಕಮಲನೇತ್ರನು ಮಾಡುವ ಕಾರ್ಯರಹಸ್ಯ !

ಶ್ರೀಶನು ಜೀವಜಡಗಳಿಂದ ಅತ್ಯಂತ ವಿಲಕ್ಷಣನು. ಜಗದಾತ್ಯಂತಭಿನ್ನನಾದ ಸರ್ವಸ್ವತಂತ್ರನಾದ ಶ್ರೀಪರಮಾತ್ಮನೇ ಆ ಸಕಲ ಕಾರ್ಯಗಳನ್ನೂ ಮಾಡಿ ಮಾಡಿಸಿದ್ದಾಗ್ಯೂ, ಆ ಕರ್ಮಸಂಬಂಧವಾದ ಫಲ ಲೇಪ ಅವನಿಗಿಲ್ಲ. ಇದರಿಂದ ಜೀವರ ಅಧಿಷ್ಠಾನದಲ್ಲಿ ನಡೆಯುತ್ತಿರುವ ಸಕಲ ಕರ್ಮಗಳಿಂದ ನಿರ್ಲಿಪ್ತನು.

ಶ್ರೀರಮಾರಮಣನು ನಿತ್ಯಾನಂದಉದ್ರಿಕ್ತವಸ್ತು. ಪರಾತ್ಪರನಾದ ಪರಮಾತ್ಮನು ನಿತ್ಯಸುಖಪೂರ್ಣನು, ಅವನ ಆನಂದಾದಿ ಗುಣಸ್ತೋಮಗಳಿಗೆ ಎಂದೂ

ದಿಗೂ ನ್ಯೂನತೆ ಇಲ್ಲ. ಸರ್ವವಿಧಗಳಲ್ಲಿಯೂ ಪರಿಪೂರ್ಣನಾದ ಜ್ಞಾನಾನಂದ ಮಯನು ಈ ಸ್ಥೂಲಶರೀರಗತ ನಾಡಿಗಳಲ್ಲಿದ್ದು, ವಿಹಾರ ಮಾಡುತ್ತಾ ವಿವಿಧ ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ॥ ೧೭ ॥

## ಪದ್ಯ ೧೮

**ಮೂಲ**

**ತಿಳಿದುಪಾಸನೆಗೈವುತೀ ಪರಿ ।**
**ಮಲಿನನಂತಿರು ದುರ್ಜನರ ಕಂ ।**
**ಗಳಿಗೆ ಗೋಚರಿಸದೆ ವಿಪಶ್ಚಿತರೊಡನೆ ಗರ್ವಿಸದೆ ॥**
**ಮಳೆ ಬಿಸಿಲು ಹಸಿ ತೃಷೆ ಜಯಾಪಜಯ ।**
**ಖಳರ ನಿಂದಾನಿಂದೆ ಭಯಗಳಿ ।**
**ಗಳುಕದಲೆ ಮದ್ದಾನೆಯಂದದಿ ಚರಿಸು ಧರೆಯೊಳಗೆ ॥ ೧೮ ॥**

**ಅವತರಣಿಕೆ**

ಶ್ರೀಹರಿಯ ಅಂತರಂಗಭಕ್ತರ ಲಕ್ಷಣವನ್ನು ತಿಳಿಸುತ್ತಾರೆ ॥ ೧೮ ॥

**ಪ್ರತಿಪದಾರ್ಥ**

**ತಿಳಿದು** = ಪೂರ್ವೋಕ್ತ ಜ್ಞಾನಾನುಸಂಧಾನ ಕ್ರಮದಲ್ಲಿ ಅರಿತವನಾಗಿ, **ಉಪಾಸನೆಗೈವುತ** = ನಾಡೀಗತ ಶ್ರೀಪರಮಾತ್ಮನ ಸದ್ಗುಣಗಳು, ರೂಪವಿಶೇಷ ಗಳು, ವ್ಯಾಪಾರ ವಿಶೇಷಗಳು ಇತ್ಯಾದಿ ಭಗವತ್ಸಂಬಂಧವಾದ ವಿಷಯಗಳನ್ನು ಧ್ಯಾನಕ್ಕೆ ವಿಷಯವನ್ನಾಗಿಸಿ ಸ್ಮರಿಸುತ್ತಾ, **ಈ ಪರಿ** = ಮುಂದೆ ತಿಳಿಸಿರುವ ಪ್ರಕಾರ, **ಮಲಿನನಂತಿರು** = ಏನೂ ತಿಳಿಯದ ಅಜ್ಞಾನಿಯಂತಿರು. (ಮಲಿನ— ಎಂದರೆ ಕೊಳೆಯಾಗಿರು ಎಂದರ್ಥವಲ್ಲ) **ದುರ್ಜನರ** = ಗುಣ ಸ್ವಭಾವಗಳಲ್ಲಿ ದುಷ್ಟರಾದ ತಮೋಯೋಗ್ಯರ, **ಕಂಗಳಿಗೆ ಗೋಚರಿಸದೆ** = ಅವರ

ದೃಷ್ಟಿಗೆ ಬೀಳಬೇಡ. ಅಯೋಗ್ಯರ ಮುಂದೆ ನಿನ್ನ ಜ್ಞಾನಸಂಪತ್ತನ್ನು ತೋರಿಸಿಕೊಳ್ಳಬೇಡ. ಅವರ ದೃಷ್ಟಿಯಲ್ಲಿ ನೀನೊಬ್ಬ ಮೂಢನಂತಿರು. (ಜಡಭರತರ ದೃಷ್ಟಾಂತ) **ವಿಪಶ್ಚಿತರೊಡನೆ**=ಬ್ರಹ್ಮಜ್ಞಾನಿಗಳಾದ ಭಗವದ್ಭಕ್ತರ ಸಹವಾಸದಲ್ಲಿದ್ದು, **ಗರ್ವಿಸದೆ**=ನಿನ್ನ ಅಹಂಕಾರವನ್ನು ಪ್ರದರ್ಶಿಸದೆ, ಅತ್ಯಂತ ವಿನೀತನಾಗಿದ್ದು, **ಮಳೆ**=ವರ್ಷಾಕಾಲದಲ್ಲಿ ಸುರಿಯುತ್ತಿರುವ ಮಳೆ, **ಬಿಸಿಲು**=ಬೇಸಿಗೆಯ ಸಹಿಸಲಸಾಧ್ಯವಾದ ಬಿಸಿಲಿನ ತಾಪ, **ಹಸಿ**=ಹಸಿವು, **ತೃಷೆ**=ಬಾಯಾರಿಕೆ, **ಜಯ**=ಯತ್ನಕಾರ್ಯದಲ್ಲಿ ಗೆಲುವು, **ಅಪಜಯ**=ಸೋಲು. **ಖಳರ**=ಅಯೋಗ್ಯರಾದ ದುರ್ಜನರ **ನಿಂದಾ**=ದೂಷಣೆ **ಅನಿಂದೆ**=ಸ್ತುತಿ, **ಭಯ**=ರೋಗಾದಿ ಭಯ, ಮರಣಭಯ ಇತ್ಯಾದಿ ಭಯಗಳಿಂದ, **ಅಳುಕದಲೆ**=ಪೀಡಿತನಾಗದೆ (ವಶನಾಗದೆ), **ಧರೆಯೊಳಗೆ**=ಭೂಮಿಯಲ್ಲಿ, **ಮದ್ದಾನೆಯಂದದಿ**=ಸರ್ವವೂ ಈಶ್ವರಾಧೀನವೆಂಬ ಜ್ಞಾನಾನುಸಂಧಾನದಿಂದ ಮದಗಜದಂತೆ, **ಸಂಚರಿಸುತಿರು**=ವ್ಯವಹರಿಸುವವನಾಗು ॥ ೧೮ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜ್ಞಾನಿಯಾದವ ಇರತಕ್ಕ ಕ್ರಮ ಹೇಳತಾರೆ.

ಪೂರ್ವೋಕ್ತ ಅನುಸಂಧಾನ ಮರಿಯದಲೆ ಸರ್ವಕರ್ತನಾದವ ಈಶ, ನಾನು ಅವನ ಅಧೀನಕರ್ತನೆಂದು ತಿಳಿದು ಮತ್ತು ದಾವಾಗಾದರೆ ಪೂರ್ವೋಕ್ತ ಅನುಸಂಧಾನದ ಮರವು ಬಂದರೆ, ಆಗ್ಗೆ ಅಹಂ ಕರ್ತಾ ಎಂಬ ಅಜ್ಞಾನ ಪ್ರಾಪ್ತವಾಗತದೆ ಎಂತ ತಿಳಿದು, ಹೃದಯಾಕಾಶದಲ್ಲಿ, ದೇಹೇಂದ್ರಿಯಾದಿ ಸರ್ವಗತ ಪರಮಾತ್ಮನ, ದೇಹೇಂದ್ರಿಯಾದಿಗಳ ವ್ಯಾಪಾರ ಮಾಡಿಸೋದರಲ್ಲಿ ಸ್ವತಂತ್ರಕರ್ತನೆಂದು ಉಪಾಸನಾ ಮಾಡತಾ ಈ ಪ್ರಕಾರ ಇರಬೇಕು. (ಈ ಪ್ರಕಾರ ಕ್ರಮ), ಏನೂ ತಿಳಿಯದ ಅಜ್ಞಾನಿಯಂತಿದ್ದು, ದುರ್ಜನರಾದ ತಮೋಯೋಗ್ಯರ ಕಣ್ಣುಗಳಿಗೆ ಈ ಅನುಷ್ಠಾನ ಗೋಚರ ಮಾಡಬ್ಯಾಡ, ಅವರಿಗೆ ನಿನ್ನ ಯೋಗ್ಯತೆ ತಿಳಿಸಿ

ಕೊಡಬ್ಯಾಡ. ಅವರ ಕಣ್ಣಿಗೆ ಕಾಣಬ್ಯಾಡ. ಅವರ ಸಾಂಗತ್ಯ ಮಾಡಬೇಡ ಎಂತ ತಾತ್ಪರ್ಯ. ಭಗವದ್ಭಕ್ತರ ಸಂಗ ಮಾಡುತ್ತಾ, ಅವರ ಸಂಗತ ಅಹಂಕಾರಯುಕ್ತ ಮಾತುಗಳಾಡುತ್ತಾ ಅವರನ್ನು ಅಹಂಕಾರದಿಂದ ಧಿಕ್ಕಾರ ಮಾಡದೆ, ನಾನು ಸರ್ವವೂ ತಿಳಿದವನು ಎಂದು ಗರ್ವಪಡದೆ, ಮಹಾ ದೀನನಾಗಿ ಮತ್ತು ಮಳಿ ಏನು ಬಿಸಿಲೇನು ಕ್ಷುತ್ ನೀರಡಿಕೆ, ಯತ್ನವಾದ ಕಾರ್ಯ ಜಯವಾವ ಕಾಲಕ್ಕೂ, (ಇವುಗಳಿಂದ ನಾನಾಪ್ರಕಾರ ಬಾಧಿತನಾದ ಕಾಲಕ್ಕೂ), ತಮೋಯೋಗ್ಯರ ಹಾಂಗೆ ಅಜ್ಞಾನಿಯಾದವರ ದೂಷಣೆ, ಭೂಷಣೆ, ರೋಗಾದಿ ಭಯ, ಮರಣಭಯ, ರಾಜಭಯ, ಲೋಕಭಯ ಇತ್ಯಾದಿಗಳು ಪ್ರಾಪ್ತವಾದಕಾಲಕ್ಕೂ ಅದರದರ ವಶ ನಾಗಿ ಹೆದರದೆ, ಈ ಯಾವತ್ತರ ಅಂತರ್ಗತನಾದ ಪರಮಾತ್ಮನಲ್ಲಿ ಲಕ್ಷ್ಯ ಇಟ್ಟು ಸರ್ವಕರ್ತ ಪರಮಾತ್ಮನ್ನ ಮರಿಯದೆ, ಜೀವರಲ್ಲಿ ಸ್ವಾಧೀನಕರ್ತೃತ್ವ ಆರೋಪಿ ಸದೆ, ಸರ್ವವೂ ಈಶ್ವರನಿಂದ ಪ್ರಾಪ್ತವಾದದ್ದೆಂದು ತಿಳಿದು, ಅನುಸಂಧಾನ ಮಾಡುತ್ತಾ ಭೂಮಿಯೊಳಗೆ ಮದಹಿಡಿದ ಆನೆ ದಾವ ರೀತ್ಯಾ ನಿರ್ಲಕ್ಷ್ಯದಿಂದ ಸಂಚಾರ ಮಾಡತದೋ ತದ್ವತ್ ನೀನು ಸಂಚಾರ ಮಾಡೋವನಾಗು.

ಅಸ್ವತಂತ್ರನಾದ ಜೀವನ್ನ, ನೀನು ಹೀಂಗೆ ಮಾಡು ಹಾಂಗೆ ಮಾಡು ಎಂತ ಹೇಳೋಣದರಿಂದ ಜೀವರಿಗೆ ಇರತಕ್ಕ ಅನಾದಿಸ್ವರೂಪಭೂತಸ್ವಾತಂತ್ರ್ಯ ಈಶಾ ಧೀನವಲ್ಲ ಎಂತ ತೋರತದೆ. ಪರಸ್ಪರ ಬರತಕ್ಕ ವಿರೋಧಕ್ಕೆ ಪರಿಹಾರವೇನೆಂ ದರೆ–ಜೀವನಸ್ವರೂಪಭೂತ ಅನಾದಿ ಸ್ವಾತಂತ್ರ್ಯ ಈಶಾಧೀನ. ತದ್ವತ್ ಜೀವೇಂ ದ್ರಿಯಗಳು, ಜೀವ, ಜೀವನ ಪ್ರಯತ್ನ, ಜೀವಭೋಗ್ಯ ಅನಾದಿಕರ್ಮ ಈಶಾಧೀನ ವೆಂಬುದು ಪ್ರತ್ಯಕ್ಷ್ಯಾದಿಗಳಿಂದ ಸಿದ್ಧವು. ಪ್ರಮಥಃ ಜೀವನ ಪ್ರಯತ್ನಾದಿಗಳು ಸೃಷ್ಟಿಗೆ ಬಾರದೆ ಅಸೃಜ್ಯರಾಶಿಗತರಾಗಿ ಇರೋಕಾಲದಲ್ಲಿ ಸುಪ್ತವಾಗಿ ಇರುತ್ತವೆ. ಜೀವರಸೃಷ್ಟಿಗೆ ತಂದ ಕಾಲದಲ್ಲಿ ಜಾಗ್ರದಾವಸ್ಥಾಯುಕ್ತರನ್ನಾಗಿ ಮಾಡಿ, ಅನಾದಿ ಕರ್ಮವನುಸರಿಸಿ ಪ್ರಯತ್ನಾದಿಗಳು ವ್ಯಕ್ತಮಾಡಿ, ತದಾರಭ್ಯ ಸುಪ್ತಿಕಾಲ ವ್ಯತಿರಿಕ್ತ ಜಾಗ್ರತರಾಗಿ ಇರೋ ಸರ್ವಕಾಲದದಲ್ಲಿ, ಜೀವನ ಪ್ರಯತ್ನಾದಿಗಳ ವ್ಯಕ್ತಮಾಡಿ, ಜೀವನ ಪ್ರಯತ್ನಾದಿಗಳ ದ್ವಾರಾ ಜೀವಗೆ ತಿಳಿಸಿ ಪರಮಾತ್ಮ ವ್ಯಾಪಾರಗಳ ನಡಸತಾನೆ. ಅರಲವಕಾಲವಾದರೂ ಸುಮ್ಮಗೆ ಇರೋದಿಲ್ಲ. ಅವರಲ್ಲಿ ಅನಾದಿ ಜಡಕರ್ಮಾನುಸಾರ ವಿಧಿನಿಷೇಧಗಳು, ಜ್ಞಾನಾಜ್ಞಾನಗಳು ಅನುಸಂಧಾನ ಮಾರ್ಗವು

ಜೀವನಪ್ರಯತ್ನ ವ್ಯಕ್ತಮಾಡಿ ತದ್ದ್ವಾರಾ ಜೀವನಿಗೆ ತಿಳಿಸಿ, ಅವನ ಕರ್ಮದ್ವಾರಾ ಅವನ ಇಂದ್ರಿಯಗಳಿಂದ ಅವನ ದ್ವಾರಾ ಕರ್ಮಾದಿಗಳ ಮಾಡಸತಾನೆ. ಆಗ್ಗೆ ಜೀವಗೆ ವಿಧಿ ನಿಷೇಧಾದಿಗಳು ತಿಳಿಯುತ್ತಾ ಬರುತ್ತವೆ. ಕಾರಣ ಹೊರತು ಕಾರ್ಯ ಅಭಿವ್ಯಕ್ತಿಯಿಲ್ಲ. ಆದ್ದರಿಂದ ಜೀವನ ಪ್ರಯತ್ನಾದಿಗಳು ಕಾರಣ, ತಜ್ಜನಿತಾದಿಗಳು ಕಾರ್ಯಗಳು. ಈ ಕಾರಣಗಳು ಇಲ್ಲದ ಈಶ್ವರನ ವ್ಯಾಪಾರಗಳು, ಈಶ್ವರನ ಸ್ವಾಖ್ಯಪ್ರದೇಶಗತ ಸ್ವರಮಣ ವ್ಯಾಪಾರಗಳು. ಜೀವನೆಂಬೋ ಕಾರಣ ಅಂಗೀಕರಿಸದಿದ್ದರೆ ಜಗತ್ತೇ ಇಲ್ಲ. ಜೀವನೆಂಬೋ ಕಾರಣ ಅಂಗೀಕರಿಸಿ, ಪರಾಧೀನತ್ವ ಅಂಗೀಕರಿಸದಿದ್ದರೆ, ಸರ್ವೋತ್ತಮನಾದ ಈಶನೇ ಇಲ್ಲದಾಗತವೆ. ಈ ಪ್ರಕಾರ ಮಾಡು ಎಂತ ಜೀವನ್ನೇ ವಿವಕ್ಷಾ ಮಾಡುವುದು ಅನುಪಚಾರಕ್ಕೆ ಕಾರಣ. ಇದರಿಂದ ಜೀವ, ಅವನ ಪ್ರಯತ್ನ, ಸ್ವಾತಂತ್ರ್ಯ ಇತ್ಯಾದಿಗಳು ಅನಾದಿಯಿಂದ ಇವೆ ಎಂತಲೂ, ಅವು ಈಶಾಧೀನ ಎಂತಲೂ, ಈ ಈಶ್ವರ ಬ್ಯಾರೆ, ಜೀವ ಬ್ಯಾರೆ ಎಂತಲೂ, ದ್ಯೋತಕಾರ್ಥ ಜೀವನ ವಿವಕ್ಷಾ ಮಾಡಿ, ಮಾಡು ಎಂತ ಹೇಳೋದಕ್ಕೆ ಕಾರಣ. ಹಾಂಗೆ ವಿವಕ್ಷಾ ಮಾಡದೆ, ಅಸ್ವತಂತ್ರನ ಯಾಕೆ ವಿವಕ್ಷಾ ಮಾಡಬೇಕೆಂದು ಬಿಟ್ಟರೆ, ಈಶ್ವರನ್ನೇ ವಿವಕ್ಷಾ ಮಾಡಬೇಕು. ಅವನು ಮಾಡು ಎಂತ ನಿಯಮನ ಮಾಡಿಸಿಕೋತಕ್ಕ ಅಸ್ವತಂತ್ರನಲ್ಲವಾದ್ದರಿಂದ, ಜೀವನೇ ಆಗಬೇಕಾಯಿತು. ಪೂರ್ವೋಕ್ತ ವಿವಕ್ಷಾದಿಂದ ಜೀವನ್ನ ತೆಗೆದುಕೋಬೇಕು. ಜೀವಗೆ ಶಾಸ್ತ್ರದ್ವಾರಾ, ಸತ್ಸಂಗತಿದ್ವಾರಾ ಶುಭಾಶುಭಗಳು, ಅನುಷ್ಠಾನಕ್ರಮಗಳು ಅನ್ಯರಲ್ಲಿ ಇದ್ದು ತಿಳಿಸುತ್ತಾ, ಮತ್ತೊಬ್ಬರಲ್ಲಿ ಹಾಂಗೆ ಮಾಡತೇನಂತ ಅನಿಸುತ್ತಾ ಲಿಂಗಭಂಗವಾಗೋವರೆವಿಗೂ, ತದನಂತರ ಅರಲವಕಾಲ ಬಿಡದೆ ತಿಳಸತಾನೆ ಇರತಾನೆ. ಮಾಡು ಎಂತ ಪ್ರಯೋಗ ಮಾಡಿದ್ದಕ್ಕೆ ಇದು ತಾತ್ಪರ್ಯ. ಜೀವನ ವಿವಕ್ಷಾ ಮಾಡದಿದ್ದರೆ, ಪರಮಾತ್ಮನ ವಿವಕ್ಷಾ ಮಾಡಬೇಕಾಗತದೆ. ಪರಮಾತ್ಮಗೆ ನಿಯಾಮಕರು ದಾರೂ ಇಲ್ಲ. ಈ ವಿವಕ್ಷಾದಿಂದ ಮಾಡು ಎಂತ ಜೀವಗೆ ಸಂಬೋಧನ ಅಷ್ಟೇ ಹೊರತು, ಈಶಾಧೀನವಲ್ಲದೆ ಜೀವಗೆ ಬ್ಯಾರೆ ಕರ್ತೃತ್ವ ಅದೆ ಎಂತ ತಾತ್ಪರ್ಯದಿಂದ ಮಾಡು ಎಂತ ತಾತ್ಪರ್ಯವಲ್ಲ ॥ ೧೮ ॥

೨. ಭಾವಪ್ರಕಾಶಿಕೆ

ಮೇಲಿನ ಪದ್ಯಗಳಲ್ಲಿ ಹೇಳಿದಂತೆ, ತಿಳಿದು ಉಪಾಸನೆ ಮಾಡುತ್ತಾ ನಿನ್ನ

ಜ್ಞಾನವನ್ನು ದುಷ್ಟಜನರಿಗೆ (ತಮೋಯೋಗ್ಯರಿಗೆ) ತೋರ್ಪಡಿಸದೇ "ಬುಧೋ ಬಾಲವತ್ಕ್ರೀಡೇತ್ಕುಶಲೋಜ್ಜಡವಚ್ಚರೇತ್" ಎಂದು ಭಾಗವತದಲ್ಲಿ ಹೇಳಿದಂತೆ ಜ್ಞಾನಿಯಾದರೂ ಮಾನಾಪಮಾನಾದಿಗಳಿಗೆ ಹಿಗ್ಗಿ, ಕುಗ್ಗದೆ, ಹುಡುಗನಂತೆ ತೋರಿಸಿಕೊಳ್ಳಬೇಕು. ಎಂತಹ ಕುಶಲನಾದರೂ ಮಂದಮತಿ ಅಥವಾ ಹುಚ್ಚನಂತೆ ಕಾಣಿಸಿಕೊಳ್ಳಬೇಕು. ಯೋಗ್ಯರಾದ ಭಗವದ್ಭಕ್ತರೊಂದಿಗೆ ನೀನು ಸೇರಿದಾಗ ನಾನು ಜ್ಞಾನಿಯೆಂದು ಅಹಂಕಾರ ಪಡದೆ ಅವರಲ್ಲಿ ವಿನಯದಿಂದಿರು. ಶೀತ, ಉಷ್ಣ, ಹಸಿವು, ಬಾಯಾರಿಕೆ, ಜಯ, ಅಪಜಯ, ಅಯೋಗ್ಯರು ಮಾಡುವ ನಿಂದಾ, ಸ್ತುತಿ, ಅವರಿಂದಾಗುವ ಹೆದರಿಕೆ, ಇವುಗಳಿಗೆ ಕೊರಗದೆ, ಹಿಗ್ಗದೆ,

ಏತರ ಭಯ ಶ್ರೀನಾಥನ ಪರಮಪ್ರೀತಿಯ ಪಡೆದವಗೆ ।
ಬಂಧು ಜನರು ತನಗೊಂದಿಸಿದಾಕ್ಷಣ ಬಂದ ಭಾಗ್ಯವೇನೋ ।
ಹಿಂದೆ ಮುಂದೆ ತನ ನಿಂದಿಸಿ ನುಡಿಯಲು ಕುಂದಾದದ್ದೇನೋ ॥
ಮಂಧರಧರ ಗೋವಿಂದನ ಮಾನಸಮಂದಿರದೊಳು
ತಂದಿಟ್ಟವನಿಗ್ಯಾತರ ಭಯ"

–ಎಂಬ ದಾಸರ ವಾಕ್ಯದಂತೆಯೂ, "ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ"–ಎಂಬ ಗೀತಾವಾಕ್ಯದಂತೆಯೂ, ಮೇಲೆ ಹೇಳಿದ ದ್ವಂದ್ವವಾದ ಸುಖದುಃಖಗಳನ್ನು ಸಮವಾಗಿ ತಿಳಿದು, ಮದಗಜವು ಹೇಗೆ ಒಬ್ಬರಿಗೆ ಹೆದರದೆ, ಸ್ವೇಚ್ಛೆಯಿಂದ ವಿಹರಿಸುವುದೋ ಹಾಗೆ ಸಂಚರಿಸುತ್ತಿರು. ॥ ೧೮ ॥

೩ ಭಾವದರ್ಪಣ ಟೀಕಾಕಾರರು ಈ ಪದ್ಯಕ್ಕೆ ವ್ಯಾಖ್ಯಾನ ಬರೆದಿಲ್ಲ.

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ತಿಳಿದೇತಿ ॥ ಸಜ್ಜನಾನ್ ಶಿಕ್ಷಯತಿ ॥ ಮಲಿನೇತಿ ॥ ಅಳುಕದಲೆ–ಖಿನ್ನನಾಗದಲೇ ॥ ತದುಕ್ತಮೇಕಾದಶಸ್ಕಂದೇ ॥ "ಬಾಹ್ಯಾಂತರ್ಭಜನೋಽಹ್ಯತ್ರ ಸಾಧುವರ್ಯೈ ದುರ್ಜನೈರೀತ್ಯೈಃ ॥ ವಚೋಭಿರ್ಭಿನ್ನ ಮಾತ್ಮಾನಂ ಯಃ ಸಮಾಧಾತುಮೀಶ್ವರ ಇತಿ"॥ ಮದ್ವಾನೇತಿ॥ ನೋದ್ವಿಜೇತ್ ಜನಾದ್ವೀರ ಇತ್ಯುಕ್ತೇಃ॥ "ಬುಧೋ ಬಾಲವತ್ ಕ್ರೀಡೇತು ಕುಶಲೋ ಜಡವಚ್ಚರೇತ್"

ತಿಳಿದು_ಇತಿ ॥ ಗೈವುತ_ಮಾಡುತ ॥ ಕಂಗಳು_ಕಣ್ಣುಗಳು ॥ ವಿಪಶ್ಚಿತರು _ಜ್ಞಾನಿಗಳು ॥ ನಿದ್ರಾಂತಸಹನೇ ಮಾನಮ್_ಶೀತವಾತಾತಪಾದೀನಿ ತತ್ಕಾಲೇ ದುಃಖದಾನ್ಯಪಿ ॥ ಪಾರತ್ರಿಕ ಸುಖಾಯ್ಯೆವ ಸಹಂತೇ ಧನ್ಯಪೂರುಷಾಃ ॥ **ಇತಿ ವಿಷ್ಣು ರಹಸ್ಯೇ ॥ ೧೮ ॥**

**ಙ. ಗುರುಹೃದಯಪ್ರಕಾಶಿಕೆ**

ಈ ಉಪಾಸನೆ ತಿಳಿದ ಜ್ಞಾನಿಚರ್ಯ ತಿಳಿಸುತ್ತಾರೆ, "ತಿಳಿದು" ಎಂದು. ಮೇಲೆ ಹೇಳಿದ ಪ್ರಕಾರ ದೇವರ ಗುಣರೂಪಮಹಿಮೆಗಳನ್ನು ತಿಳಿದು ಚಿಂತಿಸುತ್ತಾ, ದುರ್ಜನರ ಕಣ್ಣಿಗೆ ಇವನು ಕೊಳಕು ಮನುಷ್ಯನೆಂದು ಕಾಣಿಸುತ್ತಾ, ಅವರು ತನ್ನನ್ನು ಅರಿಯುದ ಹಾಗೂ ಇದ್ದು, ವಿಪಶ್ಚಿತರೆಂಬ ಜ್ಞಾನಿಗಳ ಸಂಗಡ ಗರ್ವಿಸದೆ ಎಂದರೆ, ನಾನೇ ತಿಳಿದವ ಇವರೇನು ಬಲ್ಲವರೆಂದಹಂಕರಿಸದೆ ವಿನೀತನಾಗಿ, ಮಳೆ ಬಿಸಿಲು, ಹಸಿವು ಬಾಯಾರಿಕೆ, ಜಯ ಅಪಜಯ, ದುರ್ಜನರಿಂದ ನಿಂದೆ, ಇತರರ ಸ್ತುತಿ, ಉದಾಸೀನ, ಭಯ ಮುಂತಾದ್ದಕ್ಕೆ, ಮದ್ದಾನೆ ಶರೀರದಾರ್ಢ್ಯದಿಂದ ನೋಯದೆ ಇರುವಂತೆ, ದೇವರಲ್ಲೇ ಮನಸ್ಸಿಟ್ಟಿರುವನಾಗಿ ಧೈರ್ಯದಿಂದ ನೋವು ಮೊದಲಾದ್ದು ಚಿಂತಿಸದೆ ದೇವರನ್ನೇ ಚಿಂತಿಸುತ್ತಾ ಧರೆಯೊಳಗೆ ಸಂಚರಿಸಬೇಕೆಂದರ್ಥ. ॥ ೧೮ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ನಾಡೀಗತ ಶ್ರೀಪರಮಾತ್ಮನ ವ್ಯಾಪಾರ ವಿಶೇಷಗಳನ್ನು ಜ್ಞಾನಾನುಸಂಧಾನದಿಂದ ಅರಿತು, ಧ್ಯಾನೋಪಾಸನೆ ಮಾಡುತ್ತಿರುವ ಜೀವರ ಸಲ್ಲಕ್ಷಣಗಳನ್ನು ತಿಳಿಸುತ್ತಾರೆ.

ಸಾಧನಶರೀರವೆಂದೆನಿಪ ಈ ಸ್ಥೂಲದೇಹಾದ್ಯಂತ ಓತಪ್ರೋತವಾಗಿ ಹಬ್ಬಿ ಹರಡಿರುವ ನಾಡಿಗಳಲ್ಲಿ ಶ್ರೀಪರಮಾತ್ಮನು ನಾಡ್ಯಭಿಮಾನಿ ದೇವತೆಗಳಂತರ್ಯಾಮಿಯಾಗಿದ್ದು, ನಾಡೀಗತ ವ್ಯಾಪಾರವಿಶೇಷಗಳನ್ನು ತಾನೇ ಮುಖ್ಯ ಬಿಂಬರೂಪದಿಂದ ಮಾಡಿ, ಬಿಂಬಕ್ರಿಯಾ ದ್ವಾರಾ ನಾಡ್ಯಭಿಮಾನಿ ದೇವತೆಗಳ ದ್ವಾರಾ ಮಾಡಿ

ಸುತ್ತಾ, ನಾಡಿಗಳಿಗೆ ಸಂಬಂಧಪಟ್ಟ ಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತನಾಗಿರುವ ಜೀವನಿಗೆ ಆ ಕರ್ಮಾನುಭವದ ಫಲವನ್ನು ತಂದೀಯುತ್ತಿರುವನು. ಈ ರಹಸ್ಯತತ್ತ್ವವನ್ನು ಸಚ್ಛಾಸ್ತ್ರಗಳ ದ್ವಾರಾ ಗುರೂಪದೇಶ ದ್ವಾರಾ ತಿಳಿದು ಗುರೂಪದೇಶ ದ್ವಾರಾ ಮನದಟ್ಟು ಮಾಡಿಕೊಂಡು, ಸ್ವಾನುಭವದಿಂದ ಅರಿಯಬೇಕೆಂದು ತಿಳಿಸುತ್ತಾರೆ.

ಪೂರ್ವೋಕ್ತ ಜ್ಞಾನಾನುಸಂಧಾನದಿಂದ ಅರಿತ ರಹಸ್ಯಾರ್ಥಗಳನ್ನು ಧ್ಯಾನಕ್ಕೆ ವಿಷಯವನ್ನಾಗಿಸಿ, ನಿರಂತರ ಸದುಪಾಸನೆಯನ್ನು ಮಾಡುತ್ತಿರಬೇಕೆಂದು ಮಾರ್ಗದರ್ಶನ ಮಾಡಿಸುತ್ತಾರೆ.

ಅಂತಹ ಸದುಪಾಸಕರು ತಮಗೆ ಏನೂ ತಿಳಿಯದಂತೆ, ಜನರ ದೃಷ್ಟಿಗೆ ಅಜ್ಞಾನಿಗಳಂತಿರುವರು. ಅವಧೂತರಂತೆ ಜಗತ್ತಿನಲ್ಲಿ ಚರಿಸುತ್ತಿರುವರು. ಕೇವಲ ಜಡಕರ್ಮಾಚರಣೆರಹಿತರಾಗಿ, ನೋಡುವವರಿಗೆ ಅಜ್ಞಾನಿಗಳೋಪಾದಿಯಲ್ಲಿ ಮಲಿನನಂತಿರುವರು. ಇದಕ್ಕೆ ಜ್ವಲಂತ ದೃಷ್ಟಾಂತ ಜಡಭರತನು. ಆದರೆ ಅವರು ನಿತ್ಯ ಜ್ಞಾನಗಂಗೆಯಲ್ಲಿ ಮೀಯುತ್ತಾ, ನಾಡೀಗತನದಿಗಳಲ್ಲಿ ಸ್ನಾನಮಾಡುತ್ತಾ ಪವಿತ್ರಮನಸ್ಕರಾಗಿರುವರು.

ಪ್ರಾಕೃತರ ಸಂಗದಿಂದ ದೂರವಾಗಿದ್ದು, ಜನರ ಮಧ್ಯದಲ್ಲಿ ವ್ಯಾಪ್ತರಾಗದೆ ತಮೋಯೋಗ್ಯರಾದ ದುರ್ಜನರ ದೃಷ್ಟಿಗೆ ಬೀಳದೆ, ಗುಪ್ತರಾಗಿ ಸಂಚರಿಸುತ್ತಿರುವರು. ಇಂತಹ ಗುಪ್ತಸಾಧಕರು ಲೋಕದ ಯಶಸ್ಸಿಗಾಗಲೀ, ಕೀರ್ತಿಗಾಗಲೀ ಮನಸೋಲುವವರಲ್ಲ. ಲೋಕವಾರ್ತೆಯಿಂದ ದೂರರಾಗಿದ್ದು, ಜನರಿಂದ ಯಾವ ಬಗೆಯ ಮೆಚ್ಚುಗೆಯನ್ನೂ ಬಯಸದೇ ದ್ವಂದ್ವಾತೀತರಾಗಿರುವರು.

ಬ್ರಹ್ಮಜ್ಞಾನಿಗಳಾದ ಶ್ರೀಹರಿಯ ಅಂತರಂಗಭಕ್ತರಲ್ಲಿ ಎಂದೆಂದಿಗೂ ತಮ್ಮ ಗರ್ವವನ್ನು ಪ್ರದರ್ಶಿಸುವುದಿಲ್ಲ. ಜ್ಞಾನಿಗಳ ಮುಂದೆ ಬಿಲ್ಲಾಗಿ ಬಾಗಿ ನಿಂತು, ವಿನಯಸಂಪನ್ನರಾಗಿರುವರು. ವಿನಯ ಮತ್ತು ನೈಜ್ಞಾನುಸಂಧಾನವೇ ಅವರಿಗೆ ಭೂಷಣಗಳು.

ಇಂತು ವಿಪಶ್ಚಿತರೊಡನೆ ಗರ್ವಿಸದೆ, ಪ್ರಕೃತಿಯ ಋತುಧರ್ಮಗಳನ್ನು ಸಮಾನವಾಗಿ ನೋಡುತ್ತಾ, ವರ್ಷಕಾಲದಲ್ಲಿ ಎಡಬಿಡದೆ ಸುರಿಯುತ್ತಿರುವ

ಮಳೆಯ ಧಾರೆ, ಬೇಸಿಗೆಯ ಕಾಲದಲ್ಲಿ ಸಹಿಸಲಸಾಧ್ಯವಾದ ಬಿಸಿಲಿನ ತಾಪಗಳ ಬಾಧೆಯನ್ನು ಶಾಂತಚಿತ್ತರಾಗಿ ಸಹಿಸುತ್ತಾ, ಋತುಧರ್ಮಗಳಿಗೆ ಮುಖ್ಯ ಪ್ರವರ್ತಕನಾದ ಕಾಲಾಂತರ್ಗತ ಶ್ರೀಹರಿಯ ಮಹಾಮಹಿಮೆಗಳನ್ನು ಕೊಂಡಾಡುತ್ತಿರುವರು.

ದೇಹ ಧರ್ಮಕ್ಕನುಗುಣವಾದ ಹಸಿವು, ಬಾಯಾರಿಕೆಗಳನ್ನು ಸಹಿಸುತ್ತಾ, ಸತ್ಯಸಂಕಲ್ಪನು ಕಾಲಕಾಲಕ್ಕೆ ಏನಿತ್ತುದೇ ಪರಮಪುರುಷಾರ್ಥವೆಂದರಿತು, ಸಂತೋಷಚಿತ್ತರಾಗಿರುವರು. ಕೇವಲ ಉದರಪೋಷಣೆಗಾಗಿ ತಮ್ಮ ಬಾಳನ್ನು ಎಂದೆಂದಿಗೂ ವ್ಯರ್ಥಮಾಡುವುದಿಲ್ಲ.

ತಮ್ಮ ಬಾಳಿನ ದಾರಿಯಲ್ಲಿ ಒದಗುವ ಗೆಲವು ಅಥವಾ ಸೋಲುಗಳನ್ನು ಸಮಾನದೃಷ್ಟಿಯಿಂದ ನೋಡುತ್ತಾ, ದ್ವಂದ್ವಾತೀತರಾಗಿರುತ್ತಾರೆ. ಅವರು ಜಯದಿಂದ ಹಿಗ್ಗುವುದಿಲ್ಲ. ಅಪಜಯದಿಂದ ಕುಗ್ಗುವುದಿಲ್ಲ.

ಅಯೋಗ್ಯರೂ ದುರ್ಜನರೂ ಆದವರ ನಿಂದೆ ಅಥವಾ ಸ್ತುತಿಗಳಿಗೆ ಪರವಶರಾಗುವುದಿಲ್ಲ.

ಅಂತಹ ದ್ವಂದ್ವಾತೀತರಾದ, ಗುಪ್ತೋಪಾಸಕರಾದ ಬುಧರು ಮದ್ದಾನೆಯಂತೆ ಈ ಭೂಮಿಯಲ್ಲಿ ಸಂಚರಿಸುವರೆಂದು ಹೇಳುತ್ತಾರೆ. ಮದಿಸಿದ ಆನೆಯು ತನ್ನ ಪಾಡಿಗೆ ತಾನು ರಾಜಮಾರ್ಗದಲ್ಲಿ ಸಂಚರಿಸುವುದು. ಆ ಮದಗಜಕ್ಕೆ ಜನಗಳ ಕಡೆ ಲಕ್ಷ್ಯವಿಲ್ಲ. ಅಂತೆಯೇ ಶ್ರೀಹರಿಯ ಕಥಾಮೃತದ ಸವಿಯಿಂದ, ಭಕ್ತ್ಯುದ್ರೇಕದ ಪರಿಣಾಮವಾಗಿ, ಅಚ್ಯುತನ ನಾಮವೆಂಬ ಅಚ್ಚ ಮದ ತಲೆಗೆ ಏರಿ, ಮದೋನ್ಮತ್ತವಾದ ಆನೆಯಂತೆ ಈ ಭುವಿಯಲ್ಲಿ ವಿಹರಿಸುತ್ತಿರುವರೆಂದು ಸದೃಷ್ಟಾಂತಪೂರ್ವಕ, ಶ್ರೀಹರಿಯ ಅಂತರಂಗಭಕ್ತರ ಲಕ್ಷಣವನ್ನು ತಿಳಿಸುತ್ತಾರೆ. ಯಾತರ ಭ[illegible] ಶ್ರೀನಾಥನ ಪರಮಪ್ರೀತಿಯ ಪಡೆದವಗೆ–ಎಂದಲ್ಲವೇ ಇದರರ್ಥ ! ॥೧೮॥

## ಪದ್ಯ ೧೯

**ಮೂಲ**

**ಕಾನನ ಗ್ರಾಮಸ್ಥ ಸರ್ವ ।**
**ಪ್ರಾಣಿಗಳು ಪ್ರತಿದಿವಸದಲಿ ಏ ।**
**ನೇನು ಮಾಡುವ ಕರ್ಮಗಳು ಹರಿಪೂಜೆಯೆಂದರಿದು ॥**
**ಧೇನಿಸುತ ಸದ್ಭಕ್ತಿಯಲಿ ಪವ ।**
**ಮಾನಮುಖ ದೇವಾಂತರಾತ್ಮಕ ।**
**ಶ್ರೀನಿವಾಸನಿಗರ್ಪಿಸುತ ಮೋದಿಸುತ ನಲಿಯುತಿರು ॥ ೧೯ ॥**

**ಅವತರಣಿಕೆ**

ಸಕಲ ವ್ಯಾಪಾರ ವಿಶೇಷಗಳನ್ನೂ ಭಗವತ್ಪೂಜೆ ಎಂಬ ಜ್ಞಾನಾನುಸಂಧಾನದಿಂದ ಆ ಅರವಿಂದನಾಭನ ಅಡಿದಾವರೆಗಳಲ್ಲಿ ಭಕ್ತಿಪೂರ್ವಕವಾಗಿ ಅರ್ಪಿಸುತ್ತಿರು ಎಂದು ತಿಳಿಸುತ್ತಾರೆ ॥೧೯॥

**ಪ್ರತಿಪದಾರ್ಥ**

**ಕಾನನ** = ಅರಣ್ಯಗಳಲ್ಲಿ, **ಗ್ರಾಮಸ್ಥ** = ಹಳ್ಳಿ, ಊರು, ಪಟ್ಟಣ, ನಗರ ಇತ್ಯಾದಿ ಪ್ರದೇಶಗಳಲ್ಲಿ ವಾಸಮಾಡುವ, **ಸರ್ವಪ್ರಾಣಿಗಳು** = ಸಕಲ ಜಂಗಮ ಜೀವರು (ಖೇಚರ-ಭೂಚರ-ಜಲಚರ ಪ್ರಾಣಿಗಳು ಗ್ರಾಹ್ಯ). **ಏನೇನು ಮಾಡುವ ಕರ್ಮಗಳು** = ಶರೀರದ್ವಾರಾ, ಮಾನಸಿಕವಾಗಿ, ಬೌದ್ಧಿಕವಾಗಿ ಮಾಡುವ ಸಕಲ ಕ್ರಿಯೆಗಳನ್ನೂ (ಶುಭ-ಮಿಶ್ರ-ಅಶುಭ ಕರ್ಮಗಳು) **ಹರಿಪೂಜೆ** = ಸರ್ವಪ್ರಾಣಿಗಳ ಬಿಂಬನಾದ ಶ್ರೀಪರಮಾತ್ಮನೇ ಮಾಡಿ ಮಾಡಿಸುತ್ತಿರುವನೆಂಬ ಉತ್ತಮ ಜ್ಞಾನಾನುಸಂಧಾನದಿಂದ, ಅವೆಲ್ಲವೂ ಶ್ರೀಹರಿಯ ಪೂಜೆಗಳು, **ಎಂದರಿದು** = ಎಂಬುದಾಗಿ ಅನುಸಂಧಾನ ದ್ವಾರಾ ತಿಳಿದು, **ಸದ್ಭಕ್ತಿಯಲಿ** = ನಿಷ್ಕಲ್ಮಷವಾದ ಭಕ್ತಿಭಾವದಿಂದ, **ಧೇನಿಸುತ** = ಧ್ಯಾನಕ್ಕೆ ತಂದುಕೊಂಡು, ಸ್ಮರಣಪೂರ್ವಕ ಉಪಾಸನಾಮಾಡುತ್ತಾ, **ಪವಮಾನಮುಖ** = ವಾಯುದೇವರೇ

ಆದಿಯಾಗಿ, ದೇಹಾಂತರಾತ್ಮಕ=ಇಂದ್ರಿಯಾಭಿಮಾನಿ ದೇವತೆಗಳಲ್ಲಿ ಅಂತರ್ಗತನಾಗಿರುವ, **ಶ್ರೀನಿವಾಸನಿಗೆ**=ಶ್ರೀಹರಿಗೆ **ಅರ್ಪಿಸುತ**=ಕರ್ಮಾಂತರ್ಗತ, ವಿಷಯಾಂತರ್ಗತ, ಇಂದ್ರಿಯಾಂತರ್ಗತ, ಕರಣಾಭಿಮಾನಿಗಳ ಅಂತರ್ಗತ ಭಗವದ್ರೂಪಗಳಿಗೂ ಸ್ವಬಿಂಬನಲ್ಲಿ ಐಕ್ಯಚಿಂತನಾಪೂರ್ವಕ ಅರ್ಪಿಸುತ್ತಾ, **ಮೋದಿಸುತ**=ಆನಂದಿಸುತ್ತಾ, **ನಲಿಯುತಿರು**=ಸಂಚರಿಸುತ್ತಿರು ॥ ೧೯ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಸರ್ವಪ್ರಾಣಿಗಳು ಮಾಡತಕ್ಕ ಕರ್ಮ ಭಗವತ್ಪೂಜಾತ್ವೇನ ಅರ್ಪಿಸು ಎಂತ ಹೇಳತಾರೆ.

ಅಡವಿಗಳಲ್ಲಿ ವಿದ್ಯಮಾನಗಳಾದ, ಗ್ರಾಮಗಳಲ್ಲಿ ವಿದ್ಯಮಾನಗಳಾದ, ಕರಚರಣಾದಿಗಳಿಂದಲೂ, ರೆಕ್ಕೆಗಳಿಂದಲೂ ಸಹಿತವಾದ ಸರ್ವಪ್ರಾಣಿಗಳು–ಸ್ಥಾವರಜೀವರು ವ್ಯತಿರಿಕ್ತ ಎಂತ ಅರ್ಥ–ಪ್ರತಿದಿನ ಹಗಲುರಾತ್ರಿಗಳಲ್ಲೂ, ದೇಹಭೇದಗಳಿಂದ ಮಾಡುವ ಪಾಪವೋ ಪುಣ್ಯವೋ ಇಂಥಾದ್ದು ಏನೇನು ಕಾರ್ಯಗಳ ಮಾಡತಾರೋ ಆಯಾ ಕಾರ್ಯಗಳು, ನಿನ್ನ ದೃಷ್ಟಿಗೆ ಗೋಚರವಾದದ್ದು ಹಾಂಗೆ ನೀನು ಮಾಡುವ ಯಾವತ್ತೂ ಕಾರ್ಯಗಳು ಪರಮಾತ್ಮನ ಪೂಜಾ ಎಂತ ಅರಿತವನಾಗಿ, ಅರಿಯೋ ಪ್ರಕಾರ ವಾಯುದೇವರೇ ಮೊದಲಾದ ಇಂದ್ರಿಯಾಭಿಮಾನಿಗಳಾದ ದೇವತೆಗಳ, ಆಯಾ ಪ್ರಾಣಿಗಳ ಕರ್ಮಕ್ಕೆ ಕಾರಣಗಳಾದ ಇಂದ್ರಿಯಗಳಲ್ಲಿ ತಿಳಿದು, ಅಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಅಂತರಾತ್ಮನಾಗಿರತಕ್ಕ ಶ್ರೀನಿವಾಸನಿಗೆ, ವಿಷಯವಿರಕ್ತಿಪೂರ್ವಕ ಮಾಹಾತ್ಮ್ಯಸುದೃಢಜ್ಞಾನದಿಂದ, ಅತಿಸ್ನೇಹದಿಂದ ಯುಕ್ತವಾದ ಭಕ್ತಿಯಿಂದ, ಆಯಾ ಇಂದ್ರಿಯಗಳಲ್ಲಿ ತಜ್ಜನಿತ ಕರ್ಮಗಳಲ್ಲಿ ಹಾಂಗೆ ನಿನ್ನ ದೇಹೇಂದ್ರಿಯಾದಿಕರ್ಮಗಳಲ್ಲಿ ನಿನ್ನ ಹೃದಯಾಕಾಶಗತ ಉಪಾಸ್ಯಮೂರ್ತಿಯನ್ನ ಐಕ್ಯ ಚಿಂತಿಸಿ, ಏಕಮನಸ್ಕನಾಗಿ ಧ್ಯಾನ ಮಾಡುತ್ತಾ, ಪರಸ್ಪರ ಅಂತರ್ಗತ ಭಗವದ್ರೂಪಗಳಿಂದ ಭಗವದ್ರೂಪಗಳಿಗೆ ಐಕ್ಯಚಿಂತನರೂಪದಿಂದ, ಶ್ರೀದೇವಿ ವಕ್ಷಸ್ಥಳವಾಗಿ ಉಳ್ಳ ಶ್ರೀಹರಿಗೆ ಅರ್ಪಣ ಮಾಡುತ್ತಾ,

ಸಂತೋಷಪಡುತ್ತಾ ಸಂಚಾರ ಮಾಡುತ್ತಾ ಇರು. ಇದರಿಂದ ನೋಡಿದ ಪಾಪಗಳ ಲೋಪವಿಲ್ಲ. ನೋಡಿದ ಪುಣ್ಯದೊಳಗೆ ಭಾಗ ಬರುತದೆ. ಪೂರ್ವೋಕ್ತ ಪ್ರಕಾರ ಅರ್ಜಿತ ಪುಣ್ಯದಿಂದ ಜ್ಞಾನಭಕ್ತ್ಯಾದಿಗಳು, ಅಭಿವೃದ್ಧಿ ಆಗೋವಾಗತವೆ. ಈ ರೀತ್ಯಾ ಶಾಸ್ತ್ರಮೂಲಕವಾಗಿ, ಅನ್ಯಾಧಿಷ್ಠಾನದಲ್ಲಿ ಇದ್ದು ಆ ಜೀವರ ದ್ವಾರಾ ಈ ಜೀವಗೆ ಮಾಡು ಎಂತ ತಿಳಿಸತಾನೆ. ಈ ಜೀವಾಂತರ್ಗತನಾದ ಪರ ಾತ್ಮ, ಈ ಜೀವನ ದ್ವಾರಾ ಉಪದೇಶಮಾಡಿದ ಜೀವನ ಮುಂದೆ ಹಾಂಗೇ ಮಾಡುತೇನೆ ಸರ್ವವೂ ತಿಳಿಯಿತು ಎಂತ ನುಡಿಸೋವನಾಗತಾನೆ. ಈ ಪ್ರಕಾರ ಅಸ್ವತಂತ್ರರಾದ ಜೀವರು ಶಿಷ್ಯರಾದ ಜೀವರಿಗೆ ಮಾಡು ಎಂತ ಹೇಳೋಣವೇನು, ಎರಡೂ ಜೀವನ್ನ ಜೀವರ ವಿವಕ್ಷಾ ಮಾಡಿ ಹೇಳೋ ಕ್ರಮ. ಇದೇ ಹೊರತು, ಉಭಯ ಜೀವರೂ ಪರಾಧೀನಸ್ವಾತಂತ್ರ್ಯರು, ಅಲ್ಲದೇನೆ ಈಶ್ವರನೋಪಾದಿಯಲ್ಲಿ ಸ್ವಾಧೀನ ಸ್ವಾತಂತ್ರ್ಯರಾಗಿ, ಆದರಿಂದ ಹೇಳೋಣವೇನು, ಅದನನುಸರಿಸಿ ಪ್ರತ್ಯುತ್ತರಗಳು ಕೊಡೋಣವೇನು ಅಲ್ಲ. ಆತ ಏವ ಮಾಡು ಎಂಬುದಕ್ಕೆ ಇದು ತಾತ್ಪರ್ಯ ॥ ೧೯ ॥

## ೨. ಭಾವಪ್ರಕಾಶಿಕೆ

ಅರಣ್ಯಗಳಲ್ಲಿರುವ ಹುಲಿ, ಸಿಂಹ ಮೊದಲಾದ ಪ್ರಾಣಿಗಳು, ಗ್ರಾಮಸ್ಥವಾದ ಶ್ವಾನ ಸೂಕರ ಗೋವು ಮೊದಲಾದವು ಆಯಾ ಪ್ರಾಣಿಗಳ ಯೋಗ್ಯತಾನುಸಾರ ಹಿಂಸಾದಿಗಳೋ, ಉಪಕಾರಗಳೋ, ಅವವು ಏನನ್ನು ಕಾರ್ಯಗಳನ್ನು ಮಾಡುತ್ತಿರುವುವೋ, ಅವುಗಳನ್ನು ನೋಡಿದಾಗ, ಆಯಾ ಪ್ರಾಣಿಗಳಲ್ಲಿ ಪರಮಾತ್ಮನೇ ಆಯಾ ರೂಪಗಳಿಂದಿದ್ದು, ಆಯಾ ಕಾರ್ಯಗಳನ್ನು ಮಾಡುತ್ತಿರುವನೆಂದು ಭಾವಿಸಿ, ಅಲ್ಲಲ್ಲಿ ಭಗವದ್ರೂಪಗಳನ್ನು ಚಿಂತಿಸುವುದೇ ಹರಿಪೂಜೆಯೆಂದು ತಿಳಿದು, ಸರ್ವತ್ರ ಪರಮಾತ್ಮನನ್ನು ಉತ್ತಮ ಭಕ್ತಿಯಿಂದ ಧ್ಯಾನಿಸುತ್ತಾ, ವಾಯುದೇವರ ಮೊದಲಾದ ದೇವತೆಗಳ ಅಂತರ್ಯಾಮಿಯಾದ ಶ್ರೀ ಲಕ್ಷ್ಮೀಪತಿಗೆ ಮೇಲೆ ಹೇಳಿದಂತೆ ಚಿಂತನರೂಪವಾದ ಪೂಜೆಯನ್ನೂ ಸಹ ಸಮರ್ಪಿಸುತ್ತಾ ಆನಂದದಿಂದ ಕುಣಿಯುತ್ತಿರು. ಗುರುಪರಂಪರಾ ಪ್ರಾಪ್ತವಾದ ಪರಮರಹಸ್ಯವಾದ ಉಪಾಸನಾ ಮಾರ್ಗವನ್ನು ಉಪದೇಶವ ಮಾಡಿರುವರೆಂದು ತಿಳಿಯಬೇಕು, ॥ ೧೯ ॥

**೩. ಭಾವದರ್ಪಣ**

ಕಾನನೇತಿ ॥ **"ಶ್ವೇತದ್ವೀಪೀಗತೋ ಯಶ್ಚ ಬಾಹ್ಯಹೃತ್ಪದ್ಮಗಶ್ಚ ಯಃ ॥ ತಯೋರೈಕ್ಯಂ ಚಿಂತನಂ ಪರಮಾರ್ಚನಮ್" ॥** – ಎಂಬ **ಪಂಚರಾತ್ರಾಗಮ** ಉಕ್ತಿ ಸಂಗ್ರಹಿಸಿ, **ಐಜಿಸ್ವಾಮಿಗಳು ಮಾನಸಸ್ಮೃತಿಯಲ್ಲಿ** ಹೇಳಿದ ತಾತ್ಪರ್ಯವನ್ನೇ ಇಲ್ಲಿ ಪದ್ಯದಿಂದ ಹೇಳಿರುತ್ತಾರೆ. ಇಂಥಾ ಸುಲಭೋಪಾಯದಿಂದ ಶ್ರೀ ಕರುಣಾರ್ಣವಮುದ್ರನ ಒಲಿಸತಕ್ಕ ಸನ್ಮಾರ್ಗ ಬಿಟ್ಟು, ಸ್ತ್ರೀ ಪುತ್ರಾದಿಗಳೆಂಬ ಜಲಚರ ಪ್ರಾಣಿಗಳಿಂದ ಯುಕ್ತವಾದ ಸಂಸಾರಾಬ್ಧಿಯಲ್ಲಿ ಏಕದೇಶಮಗ್ನನಾಗಿ ತಲೆಕೆಳಗಾಗಿ ಬಿದ್ದು, ಕುಯೋನಿಗಳ ಐದಿ, ಬಾರಿಬಾರಿ ಬಳಲಬೇಡಿರೆಂದು ಪರಮಾಂತಃಕರಣದಿಂದ ಗುರುಪಾರಂಪರ್ಯ ಪ್ರಾಪ್ತವಾದಂಥ **ಪಂಚರಾತ್ರಾಗಮ**ವೆಂಬ ವೈಷ್ಣವೀ ತಂತ್ರದ ಪರಮರಹಸ್ಯವಾದ ಪಥವನ್ನು ತೋರಿಸಿದ್ದಾರೆ. ಅದನ್ನು ತಿಳಿದು ಉಪಾಸನೆ ಮಾಡತಕ್ಕದ್ದು. ॥ ೧೯ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)**

ಕಾನನ–ಇತಿ ॥ ಪೂಜಾ–ಭಗವದಾಜ್ಞಾ ಪಾಲನಾತ್ ॥ ಧೇನಿಸುತ–ಚಿಂತಿಸುತ । ಶ್ರೀನಿವಾಸಃ ॥ ಓಂ ಅಸ್ಮಾವೇ ಸ್ವಾಪಿಭಿಃ ಅಜಿತುರಂ ಸತ್ಪತಿಂ । ವಿಶ್ವಚರ್ಷಣಿ । ಕೃಧಿ ಪ್ರಜಾಸ್ವಾಭಗವತ್ ॥ ಪ್ರಸೂತಿರಾಶಬೀಭಿರ್ಯೇತ್ ಉಕ್ಥೀನಃ ಓಂ ॥ ಶ್ರಿಯತೇ ಇತಿ ಶ್ರೀಃ ಸಂಪತ್ ಜ್ಞಾನೈಶ್ವರ್ಯಾದಿ ಷಡ್ಗುಣಜಾತಂ ನಿವಸತಿ ಅತ್ರ ಇತಿ ತಥೋಕ್ತಃ ॥ ೧೯ ॥

**ಕನ್ನಡಾರ್ಥ**

ಸಕಲವೂ ಮಾಡುವುದು ಪರಮಾತ್ಮನ ಪೂಜೆಯೆಂದರಿದು, ಭಗವಂತನಲ್ಲಿ ಭಕ್ತಿಯಿಟ್ಟು ನಲಿದಾಡಬೇಕೆಂದು ತಿಳಿಸುತ್ತಾರೆ–"ಕಾನನದ"–ಎಂಬ ಪದ್ಯದಿಂದ. ಭಗವದಾಜ್ಞೆಯು ಪರಿಪಾಲನಾರೂಪವಾದುದರಿಂದ, "ಹರಿಪೂಜೆ" ಎನಿಸಿಕೊಳ್ಳುವುದು. ಶ್ರೀ ಎಂದರೆ, ಜ್ಞಾನೈಶ್ವರ್ಯ ಇತ್ಯಾದಿ ಸಂಪತ್ತು. ಅದು ಪರಮಾತ್ಮನಲ್ಲಿ ಇರುವುದರಿಂದ, ಶ್ರೀನಿವಾಸನು ಹರಿಯು ಎಂದು "ಶ್ರೀನಿವಾಸ"–ನಾಮದ **ಬೃಹತೀಮಂತ್ರಾರ್ಥಸಾರ,** ॥ ೧೯ ॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಮೇಲೆ ಹೇಳಿದ ಸರ್ವಜೀವಕ್ರಿಯೆಗಳನ್ನು ದೇವರು ತನ್ನ ಪೂಜಾತ್ವೇನ ತಾನು ಆಚರಿಸುವನೆಂದು ಸದಾ ಸ್ಮರಿಸಬೇಕೆಂದು, ಕಾನನ ಗ್ರಾಮಸ್ಥ ಎಂಬ ಪದ್ಯ ದಿಂದ ಎರಡು ಪದ್ಯಗಳಲ್ಲಿ ತಿಳಿಸುತ್ತಾರೆ. ಕಾನನ ಎಂಬ ಅಡವಿಯಲ್ಲಿ, ಗ್ರಾಮ ಎಂಬ ಊರಲ್ಲೂ ಸಹಾ ಇರುವ ಸರ್ವಜೀವರು ಸದಾ ಏನೇನು ಪುಣ್ಯ ಪಾಪಾದಿ ಕರ್ಮ ಮಾಡುವರೋ, ಆ ಸರ್ವಕ್ರಿಯೆಗಳನ್ನೆಲ್ಲಾ ದೇವರೇ ತನ್ನ ಪೂಜಾರೂಪ ವನ್ನಾಗಿ ಮಾಡುವನೆಂದು ತಿಳಿದು ಚಿಂತಿಸುತ್ತಾ, ಸದ್ಭಕ್ತಿಯಿಂದ ಮುಖ್ಯಪ್ರಾಣ ದೇವತೆಗಳಂತರ್ಯಾಮಿ ಶ್ರೀನಿವಾಸಗೆ ಅರ್ಪಿಸುತ್ತಾ ಎಂದರೆ, ಸರ್ವಕ್ರಿಯವೂ ದೇವರ ಅಧೀನವೆಂದು ಭಾವಿಸುವುದೇ ದೇವರ ಪೂಜೆಯೆಂದರ್ಪಿಸಿ ನಲಿಯುತಿರು-ಎಂದರೆ, ನರ್ತನದಿಂದ ಲಕ್ಷಿತವಾದ ಮೋದವೆಂಬ ಸಂತೋಷ ಹೊಂದು ವುದು. ॥ ೧೯ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅಡವಿಗಳಲ್ಲಿ ಸ್ವೇಚ್ಛೆಯಾಗಿ ಸಂಚರಿಸುತ್ತಿರುವ ಸಿಂಹ, ಹುಲಿ ಇತ್ಯಾದಿ ವನ ಮೃಗಗಳೂ ಮತ್ತು ರೂಕ್ಷರಾದ ಕಾಡುಜನರು, ಬೇಟೆಗಾರರು-ಇವರೆಲ್ಲರೂ **ಕಾನನಸ್ಥ ಪ್ರಾಣಿಗಳು.** ಪ್ರಾಣಿ ಎಂದರೆ ಚೇತನವರ್ಗವೆಂದರ್ಥ.

ಗ್ರಾಮ, ಊರು, ಪಟ್ಟಣ, ನಗರ ಇತ್ಯಾದಿ ಪ್ರದೇಶಗಳಲ್ಲಿ ವಾಸಿಸುವ ಜನರು ಗ್ರಾಮಸ್ಥರು.

ಇಂತು ವಾಸಿಸುವ ಸಕಲ ಜೀವರಲ್ಲಿ ಪ್ರತಿ ದಿವಸವು ನಾನಾಪ್ರಕಾರವಾದ ಕರ್ಮಗಳು ನಡೆಯುತ್ತಿರುವುವು. ಸತ್ವಗುಣಪ್ರಾಚುರ್ಯದಿಂದ ಪುಣ್ಯ ಕರ್ಮ ಗಳು (ಶುಭ), ರಜೋಗುಣದಿಂದ ಪುಣ್ಯ-ಪಾಪ ಕರ್ಮಗಳೂ (ಮಿಶ್ರ) ಮತ್ತು ತಮೋಗುಣದಿಂದ ಪಾಪಕರ್ಮಗಳೂ (ಅಶುಭ) ಪ್ರವರ್ತಿತವಾಗಿ ನಡೆಯುತ್ತಿರು ವುವು. ಕರ್ಮಗಳಿಗೆ ಕಾರಣಗಳಾದ ಗುಣತ್ರಯಂಗಳಿಗೆ ಮುಖ್ಯಪ್ರವೃತ್ತಿಯಿಂದ ಕಾರಣನು ಶ್ರೀಹರಿಯೇ. ಜೀವರ ಅನಾದಿ ಸ್ವಭಾವಕ್ಕನುಗುಣವಾಗಿ ಈ ಕರ್ಮ

ಗಳು ಬಿಂಬನಿಂದ ಪ್ರೇರಿತವಾಗುವುವು. ಹೀಗೆ ಪ್ರೇರ್ಯರಾದ ಸಕಲ ತ್ರಿವಿಧರಾದ ಜೀವವರ್ಗಗಳಲ್ಲಿ ನಿರಂತರವೂ ನಡೆಯುತ್ತಿರುವ ನಾನಾ ಪರಿಯಾದ ಕರ್ಮಗಳೂ ಶ್ರೀಹರಿಯ ಪೂಜೆ–ಎಂಬ ಉತ್ತಮ ಜ್ಞಾನಾನುಸಂಧಾನವಿರಬೇಕು.

ಈ ರೀತಿಯಲ್ಲಿ ಜ್ಞಾನಾನುಸಂಧಾನಪೂರ್ವಕ ತಿಳಿದು, ಸರ್ವಕರ್ಮಗಳಲ್ಲಿ, ಕರ್ಮಪತಿಯಾದ ಆ ಕಮಲದಳಾಯತಾಕ್ಷನನ್ನು ಸದಾ ಮನಸ್ಸಿನಲ್ಲಿ ಧ್ಯಾನಿಸುತ್ತಾ ನಿಷ್ಕಲ್ಮಷವಾದ ಭಕ್ತಿಭಾವದಿಂದ ಉಪಾಸಿಸುತ್ತಿರಬೇಕೆಂದು ತಿಳಿಸುತ್ತಾರೆ.

ಪಾವನಮೂರ್ತಿಗಳಾದ ಶ್ರೀವಾಯುದೇವರಿಗೆ "ಪವಮಾನ" ಎಂದು ಹೆಸರು. ಪವನಾವಾಭಿಧರಾದ ಶ್ರೀವಾಯುದೇವರೇ ಆದಿಯಾಗಿ, ಗರುಡ, ಶೇಷ, ರುದ್ರ ಇಂದ್ರ, ಕಾಮ, ತತ್ಪತ್ನಿಯರು ಮುಂತಾದ ತತ್ತ್ವಾಭಿಮಾನಿದೇವತೆಗಳಲ್ಲಿ ಅಂತ ರ್ಯಾಮಿರೂಪದಿಂದ ಇರುವ ಶ್ರೀನಿವಾಸನಿಗೆ, ಭಗವತ್ಪೂಜೆ ಎಂಬ ಅನುಸಂಧಾ ನದಿಂದ, ಸಕಲ ಜೀವರ ಅಧಿಷ್ಠಾನಗಳಲ್ಲಿ ನಡೆಯುತ್ತಿರುವ ಶುಭ ಮತ್ತು ಅಶುಭ ಕರ್ಮಗಳನ್ನು ಅರ್ಪಿಸುತ್ತಿರು. ಆಗ ಆ ಜಗದ್ವಿಲಕ್ಷಣನಾದ ಜಗತ್ಪತಿಯು, ಜೀವ ರನ್ನು ಆ ಕರ್ಮಲೇಪನದಿಂದ ದೂರಗೊಳಿಸುವನು. ಶುದ್ಧ ಮನೋಭಾವದಿಂದ ಭಕ್ತ್ಯುದ್ರೇಕದಿಂದ, ಆ ಅಪಾರ ಮಹಿಮಾಸಂಪನ್ನನ ಗುಣಸ್ತೋತ್ರದಿಂದ ಉಬ್ಬಿ ನಲಿಯುತ್ತಾ ಆನಂದಿಸುತ್ತಿರು–ಎಂದು ತಿಳಿಸುತ್ತಾರೆ. ॥ ೧೯ ॥

## ಪದ್ಯ ೨೦

### ಮೂಲ

ನೋಕನೀಯನು ಲೋಕದೊಳು ಶುನಿ ।
ಸೂಕರಾದಿಗಳೊಳಗೆ ನೆಲೆಸಿ ।
ದ್ದೇಕನೇವಾದ್ವಿತೀಯ ಬಹುರೂಪಾಹ್ವಯಗಳಿಂದ ॥
ತಾ ಕರೆಸುತೊಳಗಿದ್ದು ತಿಳಿಸದೆ ।
ಶ್ರೀ ಕಮಲಭವ ಮುಖ್ಯ ಸಕಲ ದಿ ।
ವೌಕಸಗಣಾರಾಧ್ಯ ಕೈಕೊಂಡನುದಿನದಿ ಪೊರೆವ ॥ ೨೦ ॥

**ಅವತರಣಿಕೆ**

ಶ್ರೀಹರಿಯು ಸಮಸ್ತ ಹೀನಯೋನಿಗತ ಪ್ರಾಣಿಗಳಲ್ಲಿ ನೆಲೆಸಿದ್ದು, ಬ್ರಹ್ಮಾದಿ ದೇವತಾವರ್ಗದಿಂದ ಆರಾಧಿತನಾಗಿದ್ದಾನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ನೋಕನೀಯನು** = ಸಮಸ್ತ ಜೀವರುಗಳಿಗಿಂತ ಅತ್ಯಧಿಕನಾದ, ಸರ್ವೋತ್ತಮನಾದ ಶ್ರೀಹರಿಯು (ಕನೀಯ–ಸಣ್ಣವನು, ನೋಕನೀಯ–ಅತ್ಯಂತ ದೊಡ್ಡವನು, ನಿಷೇದಾರ್ಥ) **ಲೋಕದೊಳು** = ಬ್ರಹ್ಮಾಂಡಗತ ಹದಿನಾಲ್ಕು ಲೋಕಗಳಲ್ಲಿ, **ಶುನಿ** = ನಾಯಿ, **ಸೂಕರ** = ಹಂದಿ, **ಆದಿಗಳೊಳಗೆ** = ಇತ್ಯಾದಿ ನೀಚ ಪ್ರಾಣಿಗಳಿಂದ, ತೃಣಾಂತ ತ್ರಿವಿಧಜೀವರಲ್ಲಿ, **ಏಕಮೇವಾದ್ವಿತೀಯ** = ತನ್ನ ಹೊರತು ಅನ್ಯರಾರೂ ಇಲ್ಲದ ಅದ್ವಿತೀಯನಾದ (ಶ್ರೀಹರಿಯು ಒಬ್ಬನೇ, ಅವನ ಹೊರತು ರಮಾದಿ, ತೃಣಾಂತ ಜೀವಗಣದಲ್ಲಿ ಅವನಿಗೆ ಸಮರಾಗಲೀ ಅಧಿಕರಾಗಲೀ ಯಾರೂ ಇಲ್ಲದ ಏಕಮೇವ ಅದ್ವಿತೀಯನೆಂದರ್ಥ–ಸಮಾಭ್ಯಧಿಕ ಶೂನ್ಯನು) **ಬಹುರೂಪ** = ಬ್ರಹ್ಮ, ವಾಯ್ವಾದಿ ದೇವತೆಗಳ ರೂಪ ಧರಿಸಿ, **ಆಹ್ವಯಗಳಿಂದ** = ಆಯಾಯಾ ಜೀವರನಾಮಕನಾಗಿ, **ನೆಲಸಿದ್ದು** = ಜೀವರ ಸ್ವರೂಪದಲ್ಲಿ ಬಿಂಬರೂಪನಾಗಿ ವಿದ್ಯಮಾನನಾಗಿದ್ದು, **ತಾ ಕರೆಸುತ** = ಆಯಾಯಾ ಜೀವರುಗಳ ನಾಮಗಳಿಂದಲೇ ಕರೆಯಿಸಿಕೊಳ್ಳುತ್ತ, **ಒಳಗಿದ್ದು** = ಜೀವರ ಅಂತರ್ಯಾಮಿಯಾಗಿದ್ದು, **ತಿಳಿಸದೆ** = ತನ್ನ ಇರುವಿಕೆಯನ್ನು ವ್ಯಕ್ತ ಮಾಡದೆ, **ಶ್ರೀಕಮಲಭವಮುಖ್ಯ** = ಬ್ರಹ್ಮ ದೇವರೇ ಆದಿಯಾಗಿ, **ಸಕಲದಿವೌಕಸಗಣಾರಾಧ್ಯ** = ಸಮಸ್ತರಾದ ತತ್ತ್ವೇಶರಾದ ದೇವತಾವರ್ಗದಿಂದ ಪೂಜಿತನಾದವನಾಗಿದ್ದು, **ಕೈಕೊಂಡು** = ತನ್ನಿಂದಲೇ ಪ್ರೇರಿತರಾದ ಜೀವರುಗಳ ಅಧಿಷ್ಠಾನಗಳಲ್ಲಿ ಆಚರಿಸಲ್ಪಟ್ಟ ಸಕಲ ಕರ್ಮಗಳನ್ನೂ ತಾನು ಸ್ವೀಕರಿಸಿ, **ಅನುದಿನದಿ** = ನಿರಂತರದಲ್ಲಿ, **ಪೊರೆವ** = ಬ್ರಹ್ಮಾದಿ ತೃಣಾಂತ ಸಕಲ ಜೀವವರ್ಗವನ್ನೂ ಸಂರಕ್ಷಿಸುವನು. ॥ ೨೦ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇಂಥಾ ಐಕ್ಯಾನುಸಂಧಾನದಿಂದ ಮಾಡತಕ್ಕ ಸರ್ವಪೂಜಾ ಸ್ವೀಕಾರ ಮಾಡ ತಾನೆಂತ ಹೇಳತಾರೆ.

ನೋಕನೀಯನು ಎಂದರೆ, ಕಡಿಮೆ ಅಲ್ಲ, ಕಡಿಮೆ ಆದವನಲ್ಲ, ಎಲ್ಲರ ಕ್ಕಿಂತಲೂ ದೊಡ್ಡವ, ಸರ್ವೋತ್ತಮ ಎಂತ ಅರ್ಥ. ಇಂಥ ಪರಮಾತ್ಮ ಹದಿ ನಾಲ್ಕು ಲೋಕದೊಳು, ಹಾಂಗೆ ತಮಸ್ಸು, ವೈಕುಂಠ ಏತಾದೃಶಲೋಕಗಳು ಎರಡು ಅಂತು ಹದಿನಾಲ್ಕುಲೋಕಗತ ನಾಯಿ, ಹಂದಿ ಇವೇ ಮೊದಲಾದ ಬ್ರಹ್ಮಾದಿ ತೃಣಾಂತ ತ್ರಿವಿಧ ಜೀವರುಗಳ ಸ್ವರೂಪದೇಹದೊಳಗೆ ತಾನು ಒಬ್ಬ ನೇನೇ, ದ್ವಿತೀಯ ಶೂನ್ಯ, ಅಕ್ಷರಳಾದ ರಮಾ ಸಹಿತನಾಗಿ, ವಾಯು ಬ್ರಹ್ಮಾದಿ ಕ್ಷರರಾದ ದ್ವಿತೀಯರಿಂದ ಶೂನ್ಯನಾಗಿ, ಬ್ರಹ್ಮ ವಾಯ್ವಾದಿ ತತ್ತ್ವೇ ಶರ ರೂಪ ತಾನಾಗಿ, ಬ್ರಹ್ಮವಾಯ್ವಾದಿ ನಾಮಗಳಿಂದ ಯುಕ್ತನಾಗಿ, ಇತ್ಯಾದಿ ನಾಮರೂಪಗಳಿಂದ ಆವಾಸನಾಗಿದ್ದು, ಆಯಾ ಜೀವಾಕಾರ ಜೀವನಾಮದಿಂದ ಬಿಂಬನೆಂದು ತಾ ಕರೆಸುತಾ ಜೀವನ ಅಂತರ್ಗತನಾಗಿದ್ದು, ತಾನು ಇರೋ ಸಂಗತಿ, ಸಾಧನಾತ್ಪೂರ್ವದಲ್ಲಿ ಅಪರೋಕ್ಷದಿಂದ ತಿಳಿಸದೆ ಆಯಾ ಜೀವರ ಸ್ವರೂಪದಲ್ಲಿ ಇರೋವನಾಗಿದ್ದಾನೆ. ಸ್ಥೂಲ ದೇಹದಲ್ಲಿ ಆದರೋ ಶ್ರೀದೇವಿಯರು ಬ್ರಹ್ಮ ದೇವರು, ಇನ್ನೂ ಮುಖ್ಯರಾದ ಸಮಸ್ತರಾದ ತತ್ತ್ವಾಭಿಮಾನಿ ದೇವತಾಗಣ ಗಳಿಂದ ಪೂಜಿತನಾದವ, ಜೀವದೇಹಾಂತರ್ಗತನಾಗಿ ಇದ್ದು ಪೂರ್ವೋಕ್ತ ಪ್ರಕಾರ ಜೀವರಿಗೆ ಯೋಗ್ಯತಾನುಸಾರ ಅನುಸಂಧಾನಮಾರ್ಗ ಪ್ರೇರಿಸಿ, ಅವರ ದ್ವಾರಾ ತಾನೂ ಅರ್ಪಣೆ ಮಾಡಿಸಿಕೊಂಡು, ಅದರಲ್ಲಿ ತನ್ನ ಸ್ವಾಖ್ಯಗಳ ತಾನು ಕೈಕೊಂಡು ಅಂದರೆ ಸ್ವೀಕಾರ ಮಾಡಿ ಪ್ರತಿದಿನದಲ್ಲೂ ಜ್ಞಾನಭಕ್ತಿ ವೈರಾಗ್ಯಗಳ ಅತಿಶಯಮಾಡಿ ರಕ್ಷಿಸುವನಾಗತಾನೆ. ॥ ೨೦ ॥

### ೨. ಭಾವಪ್ರಕಾಶಿಕೆ

ಕನೀಯನು ಅಂದರೆ, ಸಣ್ಣವನೆಂದರ್ಥ, ನೋಕನೀಯನೆಂದರೆ, ಸಣ್ಣ

ವನಲ್ಲದವನು. ಪ್ರಪಂಚದಲ್ಲಿ ಎಲ್ಲರಿಗಿಂತಲೂ ದೊಡ್ಡವನೆಂಬ ತಾತ್ಪರ್ಯ. ಅದ್ವಿತೀಯನೆಂದರೆ—ಸಮವಿಲ್ಲದವನೆಂದರ್ಥ. ಇಂತಹ ಗುಣವುಳ್ಳ ವಸ್ತು ಒಂದೇ ಇರುವುದೇ ಹೊರತು ಎರಡಿಲ್ಲ. ಆ ವಸ್ತುವೇ ಪರಬ್ರಹ್ಮ. ಆ ಪರಬ್ರಹ್ಮನೇ ನಾರಾಯಣನೆಂದು ತಿಳಿಯಬೇಕು. ಅದಕ್ಕೆ ಆಧಾರವೇನೆಂದರೆ– ಬ್ರಹ್ಮವಿದಾಪ್ನೋತಿ ಪರಂ– ಎಂಬ ಶ್ರುತಿಯಿಂದ ಬ್ರಹ್ಮನನ್ನು ತಿಳಿದವನು ಪರನನ್ನು ಹೊಂದುವನು. ಬ್ರಹ್ಮನನ್ನು ತಿಳಿದವನು ಮತ್ತೊಬ್ಬನನ್ನು ಹೊಂದುವನು ಎಂಬ ವಚನವು ಕೂಡುವುದಿಲ್ಲ. ಆದ್ದರಿಂದ ಬ್ರಹ್ಮನ ಸ್ವರೂಪವನ್ನು ತಿಳಿದವನು ಬ್ರಹ್ಮನನ್ನು ಹೊಂದುವನೆಂದು ಹೇಳಬೇಕಾಗಿತ್ತು. ಪರನೆಂದು ಹೊಂದುತ್ತಾನೆಂದು ಹೇಳಿದ್ದರಿಂದ ಬ್ರಹ್ಮನೇ ಪರನು ಎಂದು ಹೇಳಿದಂತಾಯಿತು. ಇದಲ್ಲದೆ ಬ್ರಹ್ಮನೆಂತಲೂ, ಪರನೆಂತಲೂ ಶ್ರೀಮನ್ನಾರಾಯಣನಿಗೆ ಹೆಸರೆಂದು ಸ್ಪಷ್ಟವಾಗಿ ಭಾಗವತ ಪ್ರಥಮಸ್ಕಂಧದ ಪ್ರಥಮಶ್ಲೋಕದ ವಿಜಯಧ್ವಜೀಯದಲ್ಲಿ

**ಯದೇತತ್ಪರ ಬ್ರಹ್ಮವೇದವಾದೇಷು ಪಠ್ಯತೇ ।**
**ಸದೇವಃ ಪುಂಡರೀಕಾಕ್ಷಃ ಸ್ವಯಂ ನಾರಾಯಣಃ ಪರಃ ॥**

—ವೇದಾದಿಗಳಲ್ಲಿ ಅಲ್ಲಲ್ಲಿ ಪರಬ್ರಹ್ಮನೆಂದು ಯಾವ ವಸ್ತುವನ್ನು ಹೇಳುತ್ತಿರುವುವೋ, ಅದೇ ಪರಬ್ರಹ್ಮನೇ ಕಮಲನೇತ್ರನಾದ ಪರಶಬ್ದವಾಚ್ಯನಾದ ಶ್ರೀನಾರಾಯಣನು ಎಂದು ಸ್ಪಷ್ಟ ಮಾಡಿರುವರು. ಅದೇ ಪ್ರಥಮಸ್ಕಂಧದಲ್ಲಿ

**ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ**

—ಎಂದು ಹೇಳಿದ ವಾಕ್ಯಗಳಿಂದಲೂ ಪರಬ್ರಹ್ಮನೇ ನಾರಾಯಣನೆಂದು ಸ್ಪಷ್ಟವಾಗುವುದು. ಭಾಗವತ ಏಕಾದಶಸ್ಕಂಧ ೨ನೆಯ ಅಧ್ಯಾಯ, ೪೨ನೆಯ ಶ್ಲೋಕದ ತಾತ್ಪರ್ಯದಲ್ಲಿ

**ಪೂರ್ಣತ್ವಾದಾತ್ಮ ಶಬ್ದೋಕ್ತಃ ಕಶ್ಚಿತ್ಸರ್ವ ನರೋತ್ತಮಃ ।**
**ಸೋಽಪಿ ನಾರಾಯಣೋನಾನ್ಯಃ ಸದಾ ಸರ್ವೇಷು ಸಂಸ್ಥಿತಃ ।**
**ತದ್ವಶಾ ಇತರೇ ಸರ್ವೇ ಶ್ರೀ ಬ್ರಹ್ಮೇಶ ಪುರಸ್ಸರಾಃ ॥**

–ಪೂರ್ಣನಾದ್ದರಿಂದ ಆತ್ಮನೆಂದು ಹೆಸರು. ಅವನೇ ನಾರಾಯಣನೇ ಹೊರತು ಮತ್ತಾರೂ ಅಲ್ಲ. ಅವನೇ ಸರ್ವತ್ರವ್ಯಾಪ್ತನಾಗಿರುವನು. ಶ್ರೀಲಕ್ಷ್ಮೀ ಬ್ರಹ್ಮ ವಾಯು ಈಶ್ವರ ಮೊದಲಾದವರು ಅವನ ವಶದಲ್ಲಿರುವರು– ಎಂದು ಹೇಳಿರುವರು.

ಇತ್ಯಾದಿ ಅನೇಕ ಪ್ರಮಾಣಗಳಿಂದ ಜೀವನ ವ್ಯತಿರಿಕ್ತ ಪರಮಾತ್ಮನೊಬ್ಬನೇ ಸರ್ವೋತ್ತಮನು. ಜೀವನಿಗೂ ಪರಮಾತ್ಮನಿಗೂ ವೈಲಕ್ಷಣ್ಯವಿರುವುದ ರಿಂದ ಏಕಮೇವಾದ್ವಿತೀಯಂ ಎಂಬ ಪದವು ಜೀವರು ಬೇರೆ ಇಲ್ಲ–ಪರಮಾತ್ಮ ನೊಬ್ಬನೇ ಎಂಬ ಅದ್ವೈತ ಸಾಧನವೆಂದು ಭಾವಿಸಬಾರದು. ಜೀವರು ಬೇರೆ ಇದ್ದೇ ಇರುವರು. ಪರಮಾತ್ಮನ ರೂಪಗಳಲ್ಲಿ ಪರಸ್ಪರ ಭೇದವಿಲ್ಲ. ಸರ್ವತಂತ್ರ ಸ್ವತಂತ್ರನಾಗಿ ಸಮರಹಿತನಾಗಿರುವವನು ಪರಮಾತ್ಮನೊಬ್ಬನೇ ಎಂದು ತಾತ್ಪರ್ಯ. ಇಂತಹ ಸ್ವಾಮಿಯು ಒಬ್ಬನೇ ಆದರೂ ಅನಂತಾನಂತರೂಪಗಳಿಂದ ಸರ್ವತ್ರವಾಸ ವಾಗಿರುತ್ತ, ಬಹುರೂಪಗಳಿಂದ ಬಹು ನಾಮಗಳನ್ನು ಪಡೆದಿರುವನು. ಶ್ವಾನ ಸೂಕರಾದಿ ಪ್ರಾಣಿಗಳಲ್ಲಿ ತತ್ತದಾಕಾರನಾಗಿದ್ದರೂ, ಯಾರಿಗೂ ತೋರಿಸಿಕೊಳ್ಳದೆ ಇರುವನು. ನಾವು ಮಾಡುವ ಪೂಜಾ-ಧ್ಯಾನಾದಿಗಳನ್ನು ರಮಾಬ್ರಹ್ಮಾದಿವಂದ್ಯ ನಾದ ಶ್ರೀಹರಿಯು ಸ್ವೀಕರಿಸಿ, ನಿತ್ಯದಲ್ಲಿಯೂ ಸಂರಕ್ಷಿಸುವನು. ॥ ೨೦ ॥

**೩. ಭಾವದರ್ಪಣಾ**

ನೋಕನೀಯೇತಿ ॥ ನ ಕರ್ಮಣಾ ವರ್ಧತೇ ನೋಕನೀಯಾನಿತಿ ಶ್ರುತೇಃ ॥ ಶುನಿ–ನಾಯಿ. ಸೂಕರ–ಹಂದಿ. ಅದ್ವಿತೀಯ – ಸಮಾಧಿಕ ಶೂನ್ಯ. ಆಹ್ವಯ–ಹೆಸರು. ॥ ೨೦ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)**

ನೋಕನೀಯನು–ಇತಿ ॥ ನೋಕನೀಯಃ ಉತ್ತಮಃ ॥ ನೋಕನೀ ಯಾನ್–ಇತಿ ಶ್ರುತೇಃ ॥ ಏಕಂ–ಅಂತರ್ನಿರ್ಭೇದಂ ॥ ಏವೇತಿ ಗುಣಕರ್ಮಾ ಭೇದೇ ॥ ಅದ್ವಿತೀಯಃ–ಇತಿ ಸ್ವಸದೃಶ ದ್ವಿತೀಯ ವಸ್ತು ರಹಿತಃ ॥ ೨೦ ॥

### ಕನ್ನಡಾರ್ಥ

ನೋಕನೀಯನು–ಎಂದರೆ ಉತ್ತಮನು–ಸರ್ವೋತ್ತಮನು ಎಂದರ್ಥ. ನವರ್ಧತೇ ನೋಕನೀಯಾನ್–ಪರಮಾತ್ಮನು ಯಾರಿಂದಲೂ ಕಡಿಮೆಯವನಲ್ಲ ಎಂದು ಶ್ರುತಿವಾಕ್ಯವಿರುವುದರಿಂದ, ಹೀಗೆ ಅರ್ಥ ಹೇಳಬೇಕು. ಏಕ–ಈ ಶಬ್ದಕ್ಕೆ ಸ್ವಗುಣಕರ್ಮಗಳಿಂದಲೂ ಭೇಧವಿಲ್ಲವೆಂದರ್ಥ. ಅದ್ವಿತೀಯ ಶಬ್ದಕ್ಕೆ ತನಗೆ ಸಮಾನವಾದ ಬೇರೆ ದ್ವಿತೀಯ ವಸ್ತುವಿನಿಂದ ರಹಿತನೆಂದರ್ಥ. ॥ ೨೦ ॥

### ೫. ಶ್ರೀಗುರುಹೃದಯಪ್ರಕಾಶಿಕೆ

ಈ ಉಪಾಸನೆ ಮುಖ್ಯ ದೇವಾಧಿಕಾರಿಕವೆಂದು ತಿಳಿಸುತ್ತಾರೆ, ನೋಕನೀಯನು ಎಂದು. ನೋಕನೀಯನು ಎಂದರೆ ಕನೀಯವೆಂಬ ಹೀನತ್ವವನ್ನು ಹೊಂದದ ದೇವರು, ಲೋಕದಲ್ಲಿ ಶುನಿ ಎಂಬ ನಾಯಿ, ಸೂಕರ ಎಂಬ ಹಂದಿ ಮೊದಲಾದ ಸರ್ವಜೀವರಲ್ಲೂ ಏಕಮೇವಾದ್ವಿತೀಯ ಎಂದರೆ, ಅನೇಕ ರೂಪನಾಗಿದ್ದರೂ ಒಬ್ಬನೇ ಆಗಿ, ಅನೇಕ ರೂಪನಾಮವುಳ್ಳವನಾಗಿ ವೇದದಲ್ಲಿ ಕರೆಸುತ್ತಾ, ಅಜ್ಞರಿಗೆ ತನ್ನ ಸ್ವರೂಪ ತಿಳಿಸದೆ ಶ್ರೀದೇವಿ, ಕಮಲಭವ ಎಂಬ ಬ್ರಹ್ಮ ಮೊದಲಾದ ದೇವತೆಗಳ ಗಣವೆಂಬ ಸಮೂಹದಿಂದ ಸೇವಿತನಾಗಿ ಕೈಕೊಂಡು ಎಂದರೆ, ಅವರು ಸರ್ವಕ್ರಿಯೆಗಳನ್ನೂ ಪೂಜೆಯನ್ನಾಗಿ ಭಾವಿಸಿದ್ದನ್ನು ಅಂಗೀಕರಿಸಿ, ಅನುದಿನದಿ ಪೊರೆವಾ ಎಂದರೆ ಸದಾ ಸಂರಕ್ಷಿಸುವ.

ಪ್ರಮಾಣ—

**ಸ ಋತೇ ತ್ವತ್ಕ್ರಿಯತೇ ಕಿಂಚನಾರೇ ಮಹಾಮರ್ಕಂ ಮಘವನ್**
**ಚಿತ್ರಮರ್ಚ** ಎಂಬ ಶ್ರುತಿ,
**ಪ್ರಕ್ರಮವಸ್ಸ್ವ ಸತ್ಕೃತೇಷು ದುರುಷೇಷು ಧೀಷು ಬಹಿರಂತರ**
**ಸಚ್ಚರಣೆ ।**
**ತವ ಪುರುಷವದಂತ್ಯಖಿಳಶಕ್ತಿ ಧೃತ ಸ್ವಕೃತಂ ॥** ಎಂಬ ಭಾಗವತ,
**ನವರ್ಧತೇ ಕರ್ಮಣಾ ನೋಕನಿಯಾನಿತಿ ಶ್ರುತಿಃ ।**
**ಏಕಮೇವಾದ್ವಿತೀಯಂ, ನೇಹನಾನಾಸ್ತಿಕಿಂಚನ ।**
ಎಂಬ ಶ್ರುತ್ಯರ್ಥಗಳು ಈ ಮೂರು ಪದ್ಯಗಳಲ್ಲಿ ನಿರೂಪಿಸಲ್ಪಟ್ಟವು. ॥೨೦ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಕನೀಯ–ಎಂದರೆ, ಹೀನತ್ವ ಎಂದರ್ಥ. ಕನೀಯಸು–ಎಂದರೆ, ಸಣ್ಣವನು (ಕಿರಿಯ) ಎಂದು ತಾತ್ಪರ್ಯ. ನೋಕನೀಯಸು–ಎಂದರೆ, ನಿಷೇದಾರ್ಥದಲ್ಲಿ, ಸಣ್ಣವನಲ್ಲ ಅಥವಾ ಕಿರಿಯನಲ್ಲ ಎಂದು ಅರ್ಥವಾಗುವುದು. ಅಂದರೆ ಸರ್ವೋತ್ಕೃಷ್ಟನು ಎಂದರ್ಥ.

ಅಂತಹ ಸರ್ವೋತ್ತಮನಾದ ಶ್ರೀಮನ್ನಾರಾಯಣನು ಚತುರ್ದಶ ಭುವನಾತ್ಮಕವಾದ ಈ ಬ್ರಹ್ಮಾಂಡದಲ್ಲಿ ಸರ್ವ ಚೇತನರ ಅಂತರ್ಯಾಮಿಯಾಗಿ ನೆಲೆಸಿದ್ದಾನೆ. ಶ್ರೀಪರಮಾತ್ಮನಿಂದ ಸೃಷ್ಟರಾದ ಸಕಲ ಜೀವರಾಶಿಗಳ ಮಧ್ಯದಲ್ಲಿ ನಾಯಿ, ಹಂದಿ ಇತ್ಯಾದಿ ಪ್ರಾಣಿಗಳು ಹೀನಯೋನಿಯಲ್ಲಿ ಜನಿಸಿರುವ ಜೀವವರ್ಗ. ಜೀವರು ಈಶ್ವರನ ಸಂಕಲ್ಪಾನುಸಾರ, ಅವರವರ ಅನಾದಿಕರ್ಮ ಫಲರೂಪವಾಗಿ ೮೪ ಲಕ್ಷ ಯೋನಿಗಳಲ್ಲಿ ಜನ್ಮ ತಾಳುವರು. ನಾಯಿ, ಹಂದಿ ಇತ್ಯಾದಿ ಜನ್ಮಗಳು ನೀಚಯೋನಿಗಳೆಂದೆನಿಸುವುವು. ಆದರೆ ಆ ನೀಚ ಯೋನಿಗಳಲ್ಲಿ ಜನಿಸಿರುವ ಜೀವರು ತ್ರಿವಿಧ ವರ್ಗದಲ್ಲಿ ಸತ್ತ್ವ ಜೀವರಾಗಿರಬಹುದು, ರಜೋಜೀವರಾಗಿರಬಹುದು. ತಮೋಜೀವರಾಗಿರಬಹುದು. ಆದರೆ ಜೀವರಿಂದ ಅತ್ಯಂತ ಭಿನ್ನನಾದ ಶ್ರೀಪರಮಾತ್ಮನು ಅಂತಹ ನೀಚಯೋನಿಗತರಾದ ಜೀವರ ಸ್ವರೂಪದೇಹದಲ್ಲಿ ಅಂತರ್ಯಾಮಿಯಾಗಿದ್ದು ವಿದ್ಯಮಾನನಾಗಿರುವನು.

ಸಕಲ ಜೀವ ಜಡರಾಶಿಗಳಿಗಿಂತ ಪರಮ ವಿಲಕ್ಷಣನಾದ ಶ್ರೀಶನು ತಾನೊಬ್ಬನೇ ಹೊರತು, ಅನ್ಯರಿಲ್ಲ. ಇದರಿಂದ ಏಕಮೇವನು. ಅವನಿಗೆ ಸಮರಾದವರಾಗಲೀ ಅಧಿಕರಾದವರಾಗಲೀ ಮತ್ತೊಬ್ಬರಿಲ್ಲ. ಇದರಿಂದ ಅದ್ವಿತೀಯನು, ಸ್ವಸದೃಶ ದ್ವಿತೀಯ ವಸ್ತುರಹಿತನು. ಅದ್ವಿತೀಯನೆಂದರೆ, ಶ್ರೀಶನನ್ನು ಬಿಟ್ಟು ಬೇರೆ ಇನ್ಯಾವ ವಸ್ತುಗಳೂ ಇಲ್ಲವೆಂದರ್ಥವಲ್ಲ. ಅವನಿಗಿಂತ ಭಿನ್ನರಾದ ಜೀವ ಕೋಟಿ ಅಪಾರವಾಗಿದೆ. ಜಡವಸ್ತುಗಳು ಅನಂತವಾಗಿವೆ. ಶ್ರೀಪರಮಾತ್ಮನ ರೂಪಗಳಿಗಾಗಲೀ, ಗುಣಗಳಿಗಾಗಲೀ, ದೇಹಗತ ಅಂಗಾಂಗಗಳಿಗಾಗಲೀ, ಕ್ರಿಯಾ ವಿಶೇಷಗಳಿಗಾಗಲೀ, ಅವತಾರಗಳಿಗಾಗಲೀ ಪರಸ್ಪರ ಭೇದವಿಲ್ಲ ಎಂದರ್ಥ. ಇದರಿಂದ ಅದ್ವಿತೀಯನಾದ ಆ ಅಪ್ರಮೇಯನು ಸ್ವಗತಭೇದವಿವರ್ಜಿತನು.

ಇಂತಹ ನೋಕನೀಯನೂ, ಏಕಮೇವಾದ್ವಿತೀಯನೂ ಆದ ಆ ಏಕಾತ್ಮನು ನಾನಾ ರೂಪಗಳಿಂದ ಶ್ವಾನ ಸೂಕರಾದಿ ಪ್ರಾಣಿಗಳಲ್ಲಿ, ಆಯಾಯಾ ಹೆಸರುಗಳಿಂದಲೇ ಕರೆಯಿಸುತ್ತಾ ನೆಲೆಸಿರುವನು. ಸಕಲ ಜೀವರಲ್ಲಿ ಜೀವಾಕಾರನಾಗಿ, ಜೀವನಾಮಕನಾಗಿ, ಜೀವರೂಪನಾಗಿದ್ದಾನೆ.

ಹೀಗಿದ್ದರೂ ಸಾಮಾನ್ಯ ಜನರ ದೃಷ್ಟಿಗೆ ಗೋಚರಿಸದೆ ಅವ್ಯಕ್ತನಾಗಿದ್ದಾನೆ.

ಒಮ್ಮೆ ಶ್ರೀಕನಕದಾಸರ ಪ್ರಾರ್ಥನೆಯಂತೆ ಶ್ರೀಹರಿಯು ನಾಯಿ ರೂಪದಲ್ಲಿ ಗೋಚರನಾದನು. ಆಗ ಮಠದಲ್ಲಿ ನೆರೆದಿದ್ದ ಜನರೆಲ್ಲರೂ ಮೈಲಿಗೆಯಾಗುವುದೆಂದು ಭಯದಿಂದ ಆ ನಾಯಿಯನ್ನು ಹೊಡೆದು ಓಡಿಸಿದರು.

ಇನ್ನೊಮ್ಮೆ ಸರ್ಪರೂಪದಲ್ಲಿ ಗೋಚರಿಸಿದ ಶ್ರೀಪರಮಾತ್ಮನನ್ನು ಗುರ್ತಿಸಲಾರದೇ ಭಯದಿಂದ ತಾವೇ ಓಡಿದರು. ಈ ಪ್ರಸಂಗ ವಿನೋದವನ್ನು ಆನಂದದಿಂದ ನೋಡಿ ಅನುಭವಿಸುತ್ತಿದ್ದ ಶ್ರೀಚಂದ್ರಿಕಾಚಾರ್ಯರು, ಶ್ರೀಕನಕದಾಸರು ಮತ್ತು ಶ್ರೀಪುರಂದರದಾಸರು ಮೌನವಾಗಿದ್ದರು.

ನಾಭೀಕಮಲದಲ್ಲಿ ಉತ್ಪನ್ನರಾದವರೇ ಹಿರಣ್ಯಗರ್ಭನಾಮಕರಾದ ಚತುರ್ಮುಖಬ್ರಹ್ಮದೇವರು.

ಶ್ರೀ ಕಮಲಭವ ಮುಖ್ಯ ಸಕಲ ದಿವೌಕಸ ಗಣಾರಾಧ್ಯನಾದ ಕಮಲದಳಾಯತಾಕ್ಷನು ಶ್ವಾನ, ಸೂಕರಾದಿ ಸಕಲ ಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿದ್ದು, ಅವರ ದ್ವಾರಾ ತಾನೇ ಮಾಡಿ ಮಾಡಿಸುತ್ತಿರುವ ಸಕಲ ಕರ್ಮಗಳನ್ನೂ ಸ್ವೀಕರಿಸುತ್ತಾ ಸದಾ ಅವರನ್ನು ಸಂರಕ್ಷಿಸುತ್ತಿರುವನು. ॥ ೨೦ ॥

## ಪದ್ಯ ೨೧

ಮೂಲ

ಇನಿತುಪಾಸನೆಗೈವುತಿಹ ಸ ।
ಜ್ಜನರು ಸಂಸಾರದಲಿ ಪ್ರತಿ ಪ್ರತಿ ।
ದಿನಗಳಲಿ ಏನೇನೂ ಮಾಡುವುದೆಲ್ಲ ಹರಿಪೂಜೆ ॥

**ಎನಿಸಿಕೊಂಬುವು ಸತ್ಯವೀ ಮಾ ।**
**ತಿನಲಿ ಸಂಶಯ ಬಡುವ ನರನ ।**
**ಲ್ಪನು ಸುನಿಶ್ಚಯ ಬಾಹ್ಯಕರ್ಮವ ಮಾಡಿ ಫಲವೇನು ॥೨೧॥**

**ಅವತರಣಿಕೆ**

ದೇಹೇಂದ್ರಿಯ ಹಾಗೂ ನಾಡ್ಯಂತರ್ಗತನಾದ ಶ್ರೀಹರಿಯೇ ಕರ್ಮವನ್ನು ಮಾಡಿ ಮಾಡಿಸುತ್ತಿರುವನೆಂಬ ಉತ್ತಮ ಜ್ಞಾನಾನುಸಂಧಾನವಿಲ್ಲದೇ ಕರ್ಮಗಳನ್ನು ಮಾಡಿದರೆ, ಅವುಗಳಿಂದ ಕೇವಲ ಶ್ರಮವೇ ಹೊರತು ಫಲಪ್ರಾಪ್ತಿ ಇಲ್ಲವೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಇನಿತು**=ಪೂರ್ವೋಕ್ತ ಪ್ರಕಾರ, **ಉಪಾಸನೆ**=ನಾಡ್ಯಂತರ್ಗತ ಶ್ರೀಹರಿಯ ಕ್ರಿಯಾವಿಶೇಷಗಳನ್ನು ಧ್ಯಾನಕ್ಕೆ ವಿಷಯವಾಗಿ ಮಾಡಿ, ಸ್ಮರಣೆ ಪೂರ್ವಕ, **ಗೈವುತಿಹ**=ಮಾಡುತ್ತಿರುವ (ಅನುಷ್ಠಾನದಲ್ಲಿರುವ), **ಸಜ್ಜನರು**=ಜ್ಞಾನಿಗಳಾದ ಭಗವದ್ಭಕ್ತರು, **ಸಂಸಾರದಲಿ**=ಪತ್ನೀಪುತ್ರರಿಂದ ಸಹಿತವಾದ ಈ ಕೌಟುಂಬಿಕ ಜೀವನದಲ್ಲಿ, **ಪ್ರತಿ ಪ್ರತಿದಿನಗಳಲಿ**=ಪ್ರತಿ ದಿವಸಗಳಲ್ಲಿ, **ಏನೇನು ಮಾಡುವುದೆಲ್ಲ**=ತನ್ನ ಅಧಿಷ್ಠಾನದಲ್ಲಿ ಯಾವ ಯಾವ ಕರ್ಮಗಳು ನಡೆಯುತ್ತಿವೆಯೋ, **ಹರಿಪೂಜೆ**=ಅವೆಲ್ಲವೂ ದೇಹಾಕಾರನಾದ, ನಾಡೀಗತ ಅಂತರ್ಯಾಮಿಯಾದ ಬಿಂಬರೂಪೀ ಶ್ರೀಹರಿಯ ಪೂಜೆಗಳು, **ಎನಿಸಿ ಕೊಂಬುವು**=ಎಂದು ಕರೆಯಿಸಲ್ಪಡುವುವು, **ಈ ಮಾತಿನಲಿ**=ಹೀಗೆ ನುಡಿದ ವಾಕ್ಯದಲ್ಲಿ, **ಸತ್ಯವು**=ಸತ್ಯವಾದದ್ದು, **ಸಂಶಯ ಬಡುವ**=ಸತ್ಯಭೂತವಾದ ಈ ವಚನದಲ್ಲಿ ಸಂದೇಹಪಡುವ, **ನರನು**=ಮಾನವನು, **ಅಲ್ಪನು**=ಕೇವಲ ಕನಿಷ್ಠನಾದ ಅಜ್ಞಾನಿಯು, **ಸುನಿಶ್ಚಯ**=ಇದು ಅತ್ಯಂತ ನಿಶ್ಚಯವಾದ ವಿಷಯವು, **ಬಾಹ್ಯಕರ್ಮವ ಮಾಡಿ**=ಬಾಹ್ಯದಲ್ಲಿ ಕೇವಲ ಡಾಂಭಿಕನಂತೆ ಮಾಡುವ ಕರ್ಮಗಳಿಂದ, **ಫಲವೇನು ?** ಅಂದರೆ ಫಲವೇನೂ ಇಲ್ಲ ವೆಂದರ್ಥ. ॥ ೨೧ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಂತರಾನುಸಂಧಾನವಿಲ್ಲದವ ಬಾಹ್ಯಕರ್ಮ ಮಾಡಿಯೂ ಫಲವಿಲ್ಲ ಎಂತ ಹೇಳತಾರೆ.

ಈ ಪೂರ್ವೋಕ್ತ ಪ್ರಕಾರ ಅಂತರ್ಗತನ ತಿಳಿದು ಭಗವದುಪಾಸನೆ ಮಾಡತಾ ಇರತಕ್ಕ ಜ್ಞಾನಿಗಳಾದ ಭಗವದ್ಭಕ್ತರು, ದಾರಾಪುತ್ರಾದಿಗಳಿಂದ ಸಹಿತವಾದ ಸಂಸಾರದಲ್ಲಿ ಪ್ರತಿಪ್ರತಿ ದಿವಸಗಳಲ್ಲೂ ಏನೇನು ವ್ಯಾಪಾರಗಳ ಮಾಡತಾರೋ ಅವು ಯಾವತ್ತೂ, ಆಯಾ ಅಂತರ್ಗತನಾದ ಪರಮಾತ್ಮನ ಪೂಜಾ ಎಂತ ಅನುಸಂಧಾನ ಮಾಡಿದ ಅಧಿಕಾರಿಗೆ ಅವು ಹರಿಪೂಜಾ ಎಂತಲೇ ಹೇಳಿಸಿಕೊಳ್ಳಲ್ಪಡುತ್ತವೆ. ಅದರ ಪ್ರಕಾರ ದೃಷ್ಟಾಂತ-ಲೋಕದಲ್ಲಿ ಪರಮಾತ್ಮನ ಪೂಜಾಕ್ಕೆ ಅಧಿಷ್ಠಾನಗಳು ಜಡ, ಚೇತನ ಎಂತ ಎರಡು. ಸರ್ವರೂ ಅಧಿಷ್ಠಾನಗತ ಪರಮಾತ್ಮನ ಪೂಜಾಧಿಕಾರಿಗಳು. ಲಿಂಗಭಂಗಾನಂತರ ದೇಹಾಧಿಷ್ಠಾನಗತ ಭಗವತ್ಪೂಜಾ, ಸಂಸಾರದಶಾದಲ್ಲಿ ಸಾಲಿಗ್ರಾಮಾದಿ ಪ್ರತಿಮಾದಿ ದೇವರ ಪೂಜಾದಿಗಳು ಮಾಡಿದರೇನೇ ದೇವರಪೂಜೆ ಆಗತದೆ, ಇಲ್ಲದಿದ್ದರೆ ಇಲ್ಲ. ತದ್ವ್ಯತಿರಿಕ್ತ ಸಂಸಾರದಶಾದಲ್ಲಿ ಇದ್ದ ಪುರುಷ ಅಹಂಮಮತಾದಿಗಳಿಂದ ದೂರನಾಗಿ, ಅಂತರ್ಗತ ಪರಮಾತ್ಮನ್ನ ತಿಳಿದು ಮಾಡತಕ್ಕ ಆಚಾರ-ಉಪಚಾರ ಮೊದಲಾದ್ದು ಯಾವತ್ತೂ ಹರಿಪೂಜಾ ಎಂತ ತಿಳಿದರೆ, ಎಲ್ಲಾನೂ ಪರಮಾತ್ಮನ ಪೂಜಾ ಎಂತ ಹೇಳಿಸಿಕೊಳ್ಳಲ್ಪಡುತ್ತದೆ. ಇದು ನಿಶ್ಚಯವಾದದ್ದು.

ಈ ಆಡಿದ ಮಾತಿನಲ್ಲಿ, ಇದು ಯಾವತ್ತೂ ವೇದವಾಕ್ಯ ಎಂತ ತಿಳಿಯದೆ, ಉಪಾಸನೆ ಮಾಡದೇ ಇರತಕ್ಕ, ಸಂದೇಹಜ್ಞಾನಿಯಾದ ಮನುಷ್ಯ ಅಜ್ಞಾನಿಯಾದವನು. ಸಮೀಚೀನವಾದ ಶಾಸ್ತ್ರಾದಿಗಳಿಂದ ಸರ್ವೋತ್ತಮನೆಂದು ನಿಶ್ಚಯುನಾದ ಪರಮಾತ್ಮನ ಅನುಸಂಧಾನದಿಂದ ರಹಿತನಾಗಿ, ಬಾಹ್ಯದಲ್ಲಿ ಕಾಣತಕ್ಕ ಅಧಿಷ್ಠಾನವನ್ನೇ ದೇವರಪೂಜಾ ಎಂತ ಪೂಜಾದಿ ಕಾರ್ಯಗಳು ಮಾಡಿದರೂ ಫಲವಿಲ್ಲ ಎಂತ ತಾತ್ಪರ್ಯ. ವಿಧ್ಯುಕ್ತಾನುಸಾರ ಅಂತರ್ಗತನ ತಿಳಿದೇ, ಸಂಸಾರದಲ್ಲಿ

ಇದ್ದು ಏನೇನು ಮಾಡುವ ಕರ್ಮಗಳು ಯಾವತ್ತೂ ದೇವರ ಪೂಜಾನೇ ಆಗತವೆ ಎಂತ ತಾತ್ಪರ್ಯ. ॥ ೨೧ ॥

೨. ಭಾವಪ್ರಕಾಶಿಕೆ

ಈ ಪ್ರಕಾರ, ಮೇಲೆ ಹೇಳಿದ ರೀತಿಯಿಂದ ಉಪಾಸನೆ ಮಾಡುತ್ತಿರುವ ಸಜ್ಜನರು ಪ್ರತಿದಿವಸದಲ್ಲಿ ಏನೇನು ಕಾರ್ಯವನ್ನು ಮಾಡಲಿ, ಅವೆಲ್ಲವೂ ಶ್ರೀಹರಿಯ ಪೂಜೆಯೆಂದೆನಿಸಿಕೊಳ್ಳುವುವು. ಇದು ಸತ್ಯವೆಂದು ತಿಳಿಯಿರಿ. ಈ ವಿಷಯದಲ್ಲಿ ಸ್ವಲ್ಪವಾದರೂ ಸಂಶಯ ಪಡಬೇಡಿ. ಹಾಗೆ ಸಂಶಯಪಡುವವರು, ಬಹಳ ಅಲ್ಪ ಮನುಷ್ಯರು. ಇದು ನಿಶ್ಚಯ. ಹೀಗೆ ಉಪಾಸನೆ ಮಾಡುವ ಕ್ರಮವನ್ನರಿಯದವನು ಬಾಹ್ಯಪೂಜ–ಎಂದರೆ. ಪ್ರತಿಮಾಗಳನ್ನಿಟ್ಟುಕೊಂಡು, ಆಡಂಬರದ ಪೂಜೆಯನ್ನು ಮಾಡಿದ್ದರಿಂದ ಫಲವೇನು ? ಆ ಪೂಜೆಯು ಜನಮೆಚ್ಚಿಸುವುದಕ್ಕೆ ಆಗುವುದೇ ಹೊರತು, ಭಗವಂತನನ್ನು ಮೆಚ್ಚಿಸಲು ಆಗುವುದಿಲ್ಲ–ಎಂದು ದಾಸರಾಯರು ಶಪಥಪೂರ್ವಕವಾಗಿ ಆಪ್ತ ಶಿಷ್ಯಜನರಿಗಾಗಿ ಈ ಬೋಧನಾ ಮಾಡಿರುವರೆಂದು ತಿಳಿಯಬೇಕು. ॥ ೨೧ ॥

೩. ಭಾವದರ್ಪಣ

ಮೇಲೆ ಹೇಳಿದ ರೀತ್ಯಾ ಉಪಾಸನೆ ಮಾಡತಕ್ಕ ಪುರುಷನು ಸಂಸಾರದಲ್ಲಿ ಇದ್ದಾಗ್ಯೂ ಆತನು ಮಾಡಿದ ಕರ್ಮ ಭಗವತ್ಪೂಜಾ ಎನಿಸಿಕೊಳ್ಳುತ್ತದೆಂದು ಹೇಳುತ್ತಾರೆ, ಇನಿತು ಇತಿ ॥ ೨೧ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ನಿಗಮಯತಿ– ಇನಿತು ಇತಿ ॥ ೨೧ ॥

ಈ ಉಪಾಸನೆಯನ್ನು ಮಾಡುವವರಿಗೆ ಇರುವ ಮಹತ್ವವನ್ನು ತಿಳಿಸುತ್ತಾರೆ– ಇನಿತು– ಎಂಬ ಪದ್ಯದಿಂದ. ॥ ೨೧ ॥

೫. ಶ್ರೀಗುರುಹೃದಯಪ್ರಕಾಶಿಕೆ

ನಂಬಿದವರಿಗೆ ಈ ಉಪಾಸನೆಯಲ್ಲಿ ಸ್ವವಾಕ್ಯಗಳಿಂದ ದಾರ್ಢ್ಯ ಹುಟ್ಟಿ

ಸುತ್ತಾರೆ, ಇನಿತೆಂದು. ಹೀಗೆ ಉಪಾಸನೆ ಎಂಬ ದೇವರ ಆರಾಧನೆಯನ್ನು ಮಾಡುವ ಸಜ್ಜನರು ಸಂಸಾರದಲ್ಲಿ ನಿತ್ಯವೂ ಏನೇನು ಮಾಡುವ ಸರ್ವಕ್ರಿಯವೂ, ಹರಿಪೂಜೆ ಎನ್ನಿಸಿಕೊಳ್ಳುವುದು. ಸತ್ಯ ಎಂದರೆ ವೇದಸಿದ್ಧವು. ಹೀಗೆ ಹೇಳಿದ ಮಾತಿನಲ್ಲಿ ಸಂಶಯ ಪಡುವವನು ಅಲ್ಪನು ಎಂದರೆ ಅಧಮನು. ಸುನಿಶ್ಚಯ ಎಂದರೆ, ತೋಳಿನ್ನೆತ್ತಿ ಪ್ರತಿಜ್ಞಾ ಮಾಡುತ್ತೇವೆ ಎಂದು ಅರ್ಥ. ಅಥವಾ ಸಂಶಯ ಪಡುವವನು ಅಧಮನೆನ್ನುವುದು ಯಥಾರ್ಥ. ಬಾಹ್ಯಕರ್ಮವ ಮಾಡಿ ಫಲವೇನು ಎಂದರೆ, ಮನಸ್ಸಿನಲ್ಲಿ ಸರ್ವಕ್ರಿಯವೂ ದೇವರಪೂಜೆ ಎಂದು ಭಾವಿಸುವುದ ಬಿಟ್ಟು, ಹೊರಗೆ ದೇವರ ಪೂಜೆ ಮಾಡುತ್ತಾ, ಮನಸ್ಸಿನಲ್ಲಿ ಇತರ ವಿಷಯ ಚಿಂತನೆಯಿದ್ದರೆ ಆ ಪೂಜೆ ನಿಷ್ಫಲವೆಂದರ್ಥ. ॥ ೨೧ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಹಿಂದಿನ ಪದ್ಯಗಳಲ್ಲಿ ಹೇಳಿರುವಂತೆ, ಶಾಸ್ತ್ರಾಧ್ಯಯನಪೂರ್ವಕ, ಉತ್ತಮ ಗುರುಗಳ ಉಪದೇಶದ್ವಾರಾ, ತತ್ತ್ವಾರ್ಥಗಳ ಮರ್ಮಗಳನ್ನು ಅರಿತು, ತಮ್ಮ ದಿನಚರಿಯ ಜೀವನದಲ್ಲಿ ಅನುಷ್ಠಾನಕ್ಕೆ ತಂದು, ಸ್ವಾನುಭವದಿಂದ, ಭಗವದುಪಾಸನೆ ಮಾಡುತ್ತಿರುವವರೇ ನಿಜವಾದ ಭಗವದ್ಭಕ್ತರು. ಅಂತಹ ಸಜ್ಜನರೇ ಅಂತರಂಗಭಕ್ತರು.

ಉತ್ತಮ ಜ್ಞಾನಾನುಸಂಧಾನಪೂರ್ವಕ, ಜನನನ ಮರಣಾಖ್ಯವಾದ ಈ ಘೋರ ಸಂಸಾರದಲ್ಲಿ, ಪ್ರತಿದಿನದಲ್ಲಿಯೂ ನಾವು ಮಾಡುತ್ತಿರುವ ಅವಲೋಕನ ಶ್ರವಣಕ್ರಿಯೆ, ಸ್ಪರ್ಶಾನುಭವ, ರಸನೇಂದ್ರಿಯದಿಂದ ರುಚಿಯ ಅನುಭವ, ಗಂಧಸ್ವೀಕಾರ, ಗಮನಾಗಮನ, ದಾನಾದಾನಾದಿಗಳು, ಮಾನಸಿಕ, ಕಾಲಿಕ, ದೈಹಿಕ ಇತ್ಯಾದಿ ಕ್ರಿಯೆಗಳೆಲ್ಲವೂ ಬಿಂಬನಿಂದ ಪ್ರೇರಿತವಾಗಿ, ಜೀವನದ್ವಾರಾ ನಡೆಯುತ್ತಿರುವುವು ಎಂಬ ಜ್ಞಾನವೇ ನಿಜವಾದ ಭಗವದುಪಾಸನೆಯು. ಈ ಉತ್ತಮ ಜ್ಞಾನಾನುಸಂಧಾವಿಲ್ಲದೇ, ಅಹಂಕರ್ತೃತ್ವದಿಂದ ಮಾಡಿದ ಕರ್ಮಗಳೆಲ್ಲವೂ ನಿರರ್ಥಕ. ಅವೆಲ್ಲವೂ ಕೇವಲ ಜನರ ಮೆಚ್ಚುಗೆಗಾಗಿ ಹೂಡಿರುವ ಕರ್ಮಕಲಾಪಗಳ ಡಾಂಭಿಕತನದ ಪ್ರದರ್ಶನವೇ ಹೊರತು ಭಗವದನುಗ್ರಕ್ಕೆ ವಿಷಯವಾಗುವುದಿಲ್ಲ.

ಈ ಹೇಳಿಕೆಯಲ್ಲಿ ಸಂಶಯವೇ ಇಲ್ಲ ಎಂದು ಪ್ರತಿಜ್ಞಾಪೂರ್ವಕವಾಗಿ, ದಾಸವರ್ಯರು ಘೋಷಿಸುತ್ತಾ ಕರ್ಮದ ನೈಜಮರ್ಮವನ್ನು ಅರುಹಿದ್ದಾರೆ. ಈ ಮಾತಿನಲ್ಲಿ ಸಂಶಯಪಡುವವನು ಅಲ್ಪನು ಎಂದಿದ್ದಾರೆ. ಅಂತಹ ನರನು ಸಂಶಯಜ್ಞಾನದಿಂದ ವಿನಾಶ ಹೊಂದುವನು. ಅಲ್ಪನೆಂದರೆ, ಅಧಮ ಮಾನವ ನೆಂದರ್ಥ. ಅಂತಹ ಕೇವಲ ಬಾಹ್ಯಕರ್ಮ ಕಲಾಪಗಳಿಗೆ ಫಲಪ್ರಾಪ್ತಿ ಇಲ್ಲವೇ ಇಲ್ಲವೆಂದು ತಾತ್ಪರ್ಯ. ಅಂತಹ ಬಾಹ್ಯ ಕರ್ಮಗಳನ್ನು ದಾನವರು ಸೆಳೆದೊಯ್ವರಲ್ಲದೇ, ದಾನವಾರಿಯು ಎಂದೆಂದಿಗೂ ಸ್ವೀಕರಿಸುವುದಿಲ್ಲ ಎಂದು ತಾತ್ಪರ್ಯ. ॥ ೨೦ ॥

## ಪದ್ಯ ೨೨

**ಮೂಲ**

**ಭೋಗ್ಯ ಭೋಕ್ತೃಗಳೊಳಗೆ ಹರಿ ತಾ ।**
**ಭೋಗ್ಯ ಭೋಕ್ತನು ಎನಿಸಿ ಯೋಗ್ಯಾ ।**
**ಯೋಗ್ಯರಸಗಳ ದೇವದಾನವಗಣಕೆ ಉಣಿಸುವನು ॥**
**ಭಾಗ್ಯನಿಧಿ ಭಕ್ತರಿಗೆ ಸದ್ವೈ ।**
**ರಾಗ್ಯ ಭಕ್ತಿ ಜ್ಞಾನವೀವಾ ।**
**ಯೋಗ್ಯರಿಗೆ ದ್ವೇಷಾದಿಗಳ ತನ್ನಲ್ಲಿ ಕೊಡುತಿಪ್ಪ ॥ ೨೨॥**

**ಅವತರಣಿಕೆ**

ಭೋಗ್ಯವಸ್ತುಗಳಲ್ಲಿಯೂ ಮತ್ತು ಭೋಕ್ತೃಗಳಲ್ಲಿಯೂ ಅಂತರ್ಯಾಮಿ ರೂಪದಿಂದ ಶ್ರೀಹರಿಯೇ ಇದ್ದು, ಶುಭ ಹಾಗೂ ಅಶುಭ ರಸಗಳನ್ನು ಕ್ರಮವಾಗಿ ದೇವತೆಗಳಿಗೂ ಮತ್ತು ದಾನವರಿಗೂ ಉಣಿಸುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಭೋಗ್ಯ**=ಭೋಗಮಾಡುವುದಕ್ಕೆ ಯೋಗ್ಯವಾದ ದ್ರವ್ಯಗಳಲ್ಲಿಯೂ,

**ಭೋಕ್ತೃಗಳ**=ಆಯಾಯಾ ಭೋಗ್ಯ ವಸ್ತುಗಳನ್ನು ಸ್ವೀಕರಿಸುವ (ಭೋಜನ ಮಾಡುವ) ಜೀವರುಗಳಲ್ಲಿ, **ಒಳಗೆ**=ಭೋಗ್ಯ ಹಾಗೂ ಭೋಕ್ತೃಗಳಲ್ಲಿ ಅಂತರ್ಗತನಾಗಿ, ತದಾಕಾರನಾಗಿ, ತನ್ನಾಮಕನಾಗಿ ಇರತಕ್ಕ, **ಹರಿ**=ಹರಿ ನಾಮಕನಾದ ಶ್ರೀಪರಮಾತ್ಮನು, **ತಾ**=ಸ್ವಯಂ, **ಭೋಗ್ಯ**=ಭೋಗ್ಯ ಪದಾರ್ಥಗಳಲ್ಲಿ ಭೋಗ್ಯನೆಂತಲೂ, **ಭೋಕ್ತೃ**=ಭೋಜನ ಮಾಡುವವರಲ್ಲಿ ಭೋಕ್ತೃನಾಮಕನಾಗಿ, **ಎನಿಸಿ**=ಆಯಾಯಾ ನಾಮಗಳಿಂದ ಕರೆಯಿಸಿ ಕೊಳ್ಳುತ್ತಾ, ತತ್ತಚ್ಛಬ್ದವಾಚ್ಯನಾಗಿ, **ಯೋಗ್ಯ**=ಅನಿಷಿದ್ಧವಾದ ಶುಭವಾದ **ಅಯೋಗ್ಯ ರಸಗಳ**=ಅಶುಭವಾದ ರಸಗಳನ್ನು (ವಸ್ತುಗತ ಸಾರಭೂತವಾದ ಅಂಶ) **ದೇವ**=ದೇಹಗತ ತತ್ತ್ವಾಭಿಮಾನಿ ದೇವತಾವರ್ಗಕ್ಕೆ, **ದಾನವಗಣಕೆ** =ದೇಹಗತ ತತ್ತ್ವಾಭಿಮಾನಿ ದೈತ್ಯಸಮೂಹಕ್ಕೆ, **ಉಣಿಸುವನು**=ಬಿಂಬ ಕ್ರಿಯಾ ದ್ವಾರಾ ಭೋಜನ ಮಾಡಿಸುವನು, **ಭಾಗ್ಯನಿಧಿ**=ದೇವೀಸಂಪತ್ತೆಂಬ ಭಾಗ್ಯವನ್ನೇ ಆಕರವಾಗಿ ಉಳ್ಳ ಶ್ರೀಹರಿಯು, **ಭಕ್ತರಿಗೆ**=ತನ್ನ ಅಂತರಂಗ ಭಕ್ತರಾದ ಸಜ್ಜನರಿಗೆ, **ಸದ್ವೈರಾಗ್ಯ**=ವಿಷಯವಿರಕ್ತಿರೂಪವಾದ ವೈರಾಗ್ಯ ವೆಂಬ ಭಾಗ್ಯವನ್ನೂ, **ಭಕ್ತಿ**=ಶ್ರೀಹರಿಯ ಪಾದಕಂಜಗಳಲ್ಲಿ ಅವಿಚ್ಛಿನ್ನರೂಪ ವಾದ ಪ್ರೇಮ ಪ್ರವಾಹವೆಂಬ ಭಕ್ತಿ ಭಾಗ್ಯವನ್ನೂ, **ಜ್ಞಾನ**=ಸಮೀಚೀನವಾದ ಜ್ಞಾನಭಾಗ್ಯವನ್ನೂ, **ಈವ**=ಕೊಡುವನು, **ಅಯೋಗ್ಯರಿಗೆ**=ತಮೋ ಯೋಗ್ಯರಾದ ದೈತ್ಯರಿಗೆ, **ತನ್ನಲ್ಲಿ**=ಶ್ರೀಹರಿಯಲ್ಲಿ, **ದ್ವೇಷಾದಿಗಳ ಕೊಡು ತಿಪ್ಪ**=ನವವಿಧವಾದ ದ್ವೇಷಗಳನ್ನು ಕೊಡುವನು. ॥ ೨೨ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಪರಮಾತ್ಮ ತನ್ನ ಸ್ವಾಖ್ಯಗಳ ತಾನು ಸ್ವೀಕರಿಸಿ, ತದನ್ಯ ಅನ್ಯರಿಗೆ ಕೊಡ ತಾನೆ ಎಂತ ಹೇಳತಾರೆ.

ಭೋಜನಾದಿಗಳಿಂದ ಭೋಗ ಮಾಡೋದಕ್ಕೆ ಯೋಗ್ಯವಾದ ಅನೇಕ ದ್ರವ್ಯಗಳೇನು, ಆಯಾ ಪದಾರ್ಥಗಳ ಭೋಜನ ಮಾಡತಕ್ಕ ದೇಹಧಾರಿಗಳಾದ ಪ್ರಾಣಿಗಳು ಇವರುಗಳೇನು, ಈ ಉಭಯ ಅಧಿಷ್ಠಾನಗಳೊಳಗೆ ಇವುಗಳಿಗೆ

ಬಿಂಬನಾಗಿ, ಅದರಲ್ಲಿ ತದಾಕಾರ ತನ್ನಾಮದಿಂದ ಇರತಕ್ಕ ಹರಿನಾಮಕ ಪರ ಮಾತ್ಮನು ತಾನು ಭೋಗ್ಯವಸ್ತುವಿನಲ್ಲಿ ಭೋಗ್ಯ ಎಂತಲೂ, ಭೋಜನ ಮಾಡೋವನಲ್ಲಿ ಭೋಕ್ತ ಎಂತಲೂ ತನ್ನಾಮದಿಂದ ಕರೆಸಿ ಇರೋವನಾಗಿದ್ದಾನೆ. ಈ ಪ್ರಕಾರ ಇದ್ದು ಯೋಗ್ಯರಾದ ಭಗವದ್ಭಕ್ತರು, ಅಯೋಗ್ಯರಾದ ಭಗದ್ವೇಷಿ ಗಳು ಈ ಉಭಯರೂ ಭೋಜನ ಮಾಡತಕ್ಕ ಯೋಗ್ಯಾಯೋಗ್ಯ ರಸಗಳಿಂದ ಯುಕ್ತವಾದ ಪದಾರ್ಥಗಳ ಬಿಂಬಕ್ರಿಯಾದ್ವಾರಾ ಭೋಜನ ಮಾಡಿಸಿ, ತದ್ಗತ ತನ್ನ ಸ್ವಾಖ್ಯಗಳಾದ ಯೋಗ್ಯಾಯೋಗ್ಯ ವಾಚ್ಯಗಳಾದ ತನ್ನ ರಸಗಳ ತಾನು ಸ್ವೀಕಾರ ಮಾಡಿ, ಅನ್ಯವಾದ ತದ್ಗತ ದೇವತಾರಸಗಳು, ದೈತ್ಯರಸಗಳು ಎಂದರೆ, ದೇವದೈತ್ಯರು ರಸರೂಪದಿಂದ ಪದಾರ್ಥದಲ್ಲೂ, ದೇಹದಲ್ಲೂ ಇರೋವರಾಗಿ ದ್ದಾರೆ, ಈ ಉಭಯರಿಗೂ ಅವರವರಿಗೆ ಯೋಗ್ಯವಾದ ರಸಗಳ, ದೇಹಗತ ದೇವತೆಗಳಿಗೆ ದೈತ್ಯರಿಗೆ, ತನ್ನ ಕ್ರಿಯಾದ್ವಾರಾ, ಅವರವರ ರಸಗತ ರಸಾಕಾರ ರೂಪಗಳ ದೇಹಗತ ರೂಪಗಳಲ್ಲಿ ಐಕ್ಯ ಐದಿಸುತ ಈ ರೀತಿಯಾಗಿ ಉಣಿಸುವನು. ಜಡರಸ ದೇಹಕ್ಕೆ ಉಪಚಯ ಮಾಡಿಸುವ. ಈ ಅನುಸಂಧಾನದಿಂದ ಮಾಡತಕ್ಕ ಸರ್ವಕರ್ಮವೂ ಭಗವತ್ಪೂಜಾ ಎಂತ ಕರಸತದೆ. ಇದರಿಂದ ಸ್ವರೂಪಸ್ವಭಾವ ದಲ್ಲಿ ಭಕ್ತಿಯುಳ್ಳ ಪ್ರಾಣಿಗಳಿಗೆ, ವಿಷಯವಿರಕ್ತಿಪೂರ್ವಕವಾದ ಸಮೀಚೀನ ಭಾವವೈರಾಗ್ಯವೇನು, 'ಸ್ನೇಹೊ ಭಕ್ತಿರಿತಿ ಪ್ರೋಕ್ತಃ' ಎಂತ ಅನಿಸತಕ್ಕ ಭಕ್ತಿ ಏನು, ತಾರತಮ್ಯ ಪಂಚಭೇಧದಿಂದ ಯುಕ್ತವಾದ ಹರಿಸರ್ವೋತ್ತಮ, ವಾಯು ಜೀವೋತ್ತಮ ಪೂರ್ವಕ ದಿವ್ಯಜ್ಞಾನ, ಏತಾದೃಶವಾದ ಸಮುದ್ರಸದೃಶವಾದ ಭಾಗ್ಯಗಳ ಕೊಡೋವನಾಗತಾನೆ. ಇಂಥಾ ಅನುಸಂಧಾನರಹಿತರಾದ ಸ್ವರೂಪ ಸ್ವಭಾವದಲ್ಲಿ ಅಯೋಗ್ಯರಾದ ದೈತ್ಯರಿಗೆ ಪರಮಾತ್ಮನಾದ ತನ್ನಲ್ಲಿ ನವವಿಧ ದ್ವೇಷಗಳ ಕೊಡತಾ ಇರೋವನಾಗತಾನೆ. ಅಯೋಗ್ಯ ಶಬ್ದದಿಂದ ಮಿಶ್ರ ಜೀವರೂನೂ ಅಂತರ್ಭೂತರೆಂದು ತಾತ್ಪರ್ಯ ॥

**ವಿಶೇಷಾರ್ಥ—ಶಾಂಡಿಲ್ಯತತ್ತ್ವ**

**ವಿನಾ ಯದರ್ಪಣಂ ಸಮ್ಯಕ್ ಫಲಂ ನಾಪ್ನೋತ್ಯಸಂಶಯಃ ।**
**ದೇಹಿನಾ ಯಾಃ ಪ್ರವರ್ತಂತೇ ಪ್ರಾತರಾರಭ್ಯ ಸತ್ಕ್ರಿಯಾಃ ।**
**ತಾಶ್ಚ ವಿಷ್ಣ್ವರ್ಪಣಂ ಕುರ್ವನ್ ಕರ್ಮಪಾಶಾತ್ ವಿಮುಚ್ಯತೇ ॥೨೩॥**

### ೨. ಭಾವಪ್ರಕಾಶಿಕೆ :

ಲೋಕದಲ್ಲಿ ಬೇಕಾದ ಭೋಗಗಳನ್ನು ಅನುಭವಿಸುವುದಕ್ಕೆ ದುಷ್ಟವಾದ ಪದಾರ್ಥಗಳು, ಉತ್ತಮ ಪದಾರ್ಥಗಳು, ಅನೇಕವಾಗಿರುವುವು. ಭೋಜನ ಪದಾರ್ಥಗಳಲ್ಲಿ ಗೋಧಿ, ಅಕ್ಕಿ, ಬಾಳೆ, ಹಲಸು, ಸುವರ್ಣ ಮೊದಲಾದ ಗಡ್ಡೆಗಳು, ಇವಗಳು ಸಾತ್ವಿಕಾಹಾರವೆಂತಲೂ, ಹೀರೆಕಾಯಿ, ಪಡವಳಕಾಯಿ ಕಡ್ಲೆ, ತೊಗರಿ ಮೊದಲಾದವು ರಾಜಸವೆಂತಲೂ, ಬದನೇಕಾಯಿ, ಈರುಳ್ಳಿ ತಂಗಳು, ಮೊದಲಾದವು ತಾಮಸವೆಂತಲೂ, ಧರ್ಮಶಾಸ್ತ್ರಗಳಲ್ಲಿ ಹೇಳಿರುವರು. ಇದರ ವಿಸ್ತಾರವನ್ನು, ವರಾಹಪುರಾಣ, ಚಾತುರ್ಮಾಸ್ಯಮಾಹಾತ್ಮ್ಯ, ಸ್ಮೃತ್ಯರ್ಥಸಾಗರವೆಂಬ ಛಲಾರಿ ಆಚಾರ್ಯ ಕೃತ ಧರ್ಮಶಾಸ್ತ್ರ ಮೊದಲಾದವುಗಳಲ್ಲಿ ನೋಡತಕ್ಕದ್ದು. ಈ ಮೂರುವಿಧ ಪದಾರ್ಥಗಳು ಎಲ್ಲರಿಗೂ ರುಚಿಸುವುದಿಲ್ಲ. ಆದ್ದರಿಂದಲೆ "ಲೋಕೋಭಿನ್ನರುಚಿಃ" ಎಂದು ಹೇಳಿರುವರು. ಮುಖ್ಯವಾಗಿ ಸಾತ್ವಿಕರಿಗೆ ಸಾತ್ವಿಕ ಪದಾರ್ಥವೂ, ರಾಜಸರಿಗೆ ರಾಜಸ ಪದಾರ್ಥವೂ ತಾಮಸರಿಗೆ ತಾಮಸಪದಾರ್ಥವೂ ರುಚಿಸುವುದು. ಶ್ರೀಹರಿಯು ತ್ರಿಗುಣ ರಹಿತನೇ ಆದರೂ ಈ ಮೂರು ವಿಧವಾದ ಪದಾರ್ಥಗಳಲ್ಲಿಯೂ ತದ್ರೂಪ ತದಾಕಾರನಾಗಿ, ನಿರ್ಲಿಪ್ತನಾಗಿ ಇರುವನು. ಸಾತ್ವಿಕ ರಾಜಸ ತಾಮಸ ಜನರಲ್ಲಿಯೂ ಇದ್ದು ಆ ರಸಗಳನ್ನು ಅಂದರೆ ಅವುಗಳ ರುಚಿಯನ್ನು ಆಯಾ ಜೀವರಿಗೆ ಕೊಡಿಸುವನು. ಭೋಗ್ಯವಸ್ತು ಅಂದರೆ ಬರೆ ಭೋಜನಮಾಡುವ ವಸ್ತುಗಳೇ ಅಲ್ಲ. ಉಡುವುದು, ತೊಡುವುದು, ಭೂಷಣಾದಿಗಳನ್ನು ಧರಿಸುವುದು, ಸ್ತ್ರೀಯಾದಿ ಭೋಗಗಳು ಎಲ್ಲವೂ ಬಂದಂತಾಯಿತು. ವೇಷಭೂಷಣಾದಿಗಳು, ಉಡುವುದು ಮೊದಲಾದ ಒಂದೊಂದರಲ್ಲಿಯೂ ಒಂದೇ ಕುಲ, ಒಂದೇ ಮತದಲ್ಲಿ ಹುಟ್ಟಿದವರಲ್ಲಿಯೂ ಈಗಿನ ಕಾಲದಲ್ಲಿ ಎಷ್ಟು ಭೇದಗಳಾಗಿ ರುಚಿಸುವುದೆಂಬುದು ವಾಚಕರ ಮನಸ್ಸಿಗೆ ಬರದೇ ಇರಲಿಕ್ಕಿಲ್ಲ. ಉದಾಹರಣೆಗಾಗಿ ಕೆಲವು ಮಾತ್ರ ಸೂಚಿಸಲ್ಪಡುತ್ತವೆ. ವೇಷಗಳಲ್ಲಿ ಪೂರ್ವಕಾಲದ ಬ್ರಾಹ್ಮಣವೇಷವೆಂದರೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತಗಳಲ್ಲಿ ಹುಟ್ಟಿದವರು ಆಯಾ ಮತದ ಚಿನ್ಹೆಗಳನ್ನು ಧರಿಸಿಕೊಂಡು, ಅವರನ್ನು ನೋಡುವಾಗಲೇ ಅವರವರ ಮತವನ್ನು ಚೆನ್ನಾಗಿ ತೋರಿಸಿಕೊಡುತ್ತಿದ್ದಿತು. ವೈಷ್ಣವರು—ಮಾಧ್ವರು

ಊರ್ಧ್ವಪುಂಡ್ರಗಳನ್ನು ಧರಿಸಿ ಗಂಧ, ಅಂಗಾರ, ಅಕ್ಷತೆಗಳನ್ನು ಧರಿಸಿಕೊಂಡು, ೧೨ ಮೊಳಗಳುಳ್ಳ ಧೋತ್ರಗಳನ್ನುಟ್ಟು ಅಂತಹಾ ಧೋತ್ರವನ್ನೇ ಹೊದ್ದುಕೊಂಡು ನೋಡುವಾಗಲೇ ಇವರು ಮಾಧ್ವ ಆಚಾರ್ಯರೆಂತ ಕಾಣಿಸಿಕೊಳ್ಳುತ್ತಿದ್ದರು. ರಾಯರುಗಳು ಮಾತ್ರ ವೇಷಗಳಲ್ಲಿ ವ್ಯತ್ಯಾಸವಿಲ್ಲದೇ ತಲೆಗೆ ಪೇಟಾ ಸುತ್ತಿಕೊಂಡು ಬಗಲುಬಂದಿ ಅಂಗಿಯನ್ನು ತೊಟ್ಟುಕೊಳ್ಳುತ್ತಿದ್ದರು. ಸ್ಮಾರ್ತರು ವಿಭೂತಿಗಳನ್ನೂ, ರುದ್ರಾಕ್ಷಿಗಳನ್ನೂ ಧರಿಸುತ್ತಿದ್ದರು. ಶ್ರೀವೈಷ್ಣವರು, ತ್ರಿನಾಮಗಳನ್ನು ಚೆನ್ನಾಗಿ ಧರಿಸುತ್ತಿದ್ದರು. ಈಗ ಮೂರು ಮತದವರ ಭೇದಗಳನ್ನು ಕಾಣಬೇಕಾದರೆ ನೀವು ಬ್ರಾಹ್ಮಣರೇ ಎಂದು ಮೊದಲನೆಯ ಪ್ರಶ್ನೆ ಮಾಡಬೇಕಾಗಿದೆ. ನಂತರ ಯಾವ ಮತದವರು ಎಂದು ಕೇಳಿ ತಿಳಿದುಕೊಳ್ಳಬೇಕಾಗುವುದು. ಅದಂತಿರಲಿ ! ಪಕೃತ ಆಯಾ ವೇಷಭೂಷಣಗಳು ಅವರವರಿಗೆ ರುಚಿಸದಿದ್ದರೆ ಅವರು ಆ ವೇಷಗಳನ್ನು ಧರಿಸುತ್ತಿದ್ದರೆ ? ಇಲ್ಲ ! ಆದ್ದರಿಂದ ಇಂತಹವೆಲ್ಲವೂ ಭೋಗ್ಯ ವಸ್ತುಗಳೇ. ಎಲ್ಲ ವಸ್ತುಗಳಲ್ಲಿಯೂ ಪರಮಾತ್ಮನು ತದ್ರೂಪ ತದಾಕಾರನಾಗಿದ್ದು ಅವುಗಳನ್ನು ಧರಿಸಲು ಯೋಗ್ಯರು ಯಾರೋ ಅವರಲ್ಲಿ ಪರಮಾತ್ಮನು ತದಾಕಾರನಾಗಿದ್ದು ಆಯಾ ವಸ್ತುಗಳಲ್ಲಿ ಆಯಾ ಜನರ ಯೋಗ್ಯತಾನುಸಾರ ರುಚಿ ಹುಟ್ಟಿಸಿ ಅವುಗಳನ್ನು ಭೋಗಿಸುವಂತೆ ಮಾಡಿ ಆಯಾ ಫಲವನ್ನು ಅವರಿಗೆ ಉಣಿಸುವನು. ಮತ್ತು ಭಾಗವತ ಏಕಾದಶ ಸ್ಕಂದ ತಾತ್ಪರ್ಯದಲ್ಲಿ **ಸ ಏವತು ಸ್ವ ಭಕ್ತೇಷು ಸ್ಥಿತ್ವಾನುಗ್ರಹಕಾರಕಃ || ಅಜ್ಞೇಷ್ವಜ್ಞಾನ ಯಂ ತಾಚ ದ್ವಿಷತ್ಸು ದ್ವೇಷಕಾರಕಃ** ಅದೇ ಪರಮಾತ್ಮನೇ ಭಕ್ತರಲ್ಲಿದ್ದು ಅನುಗ್ರಹ ಮಾಡುವನು. ಅಜ್ಞಾನಿಗಳಲ್ಲಿದ್ದು ಅಜ್ಞಾನವನ್ನು ವೃದ್ಧಿಮಾಡಿಸುವನು. ದ್ವೇಷಿಗಳಲ್ಲಿದ್ದು ತನ್ನಲ್ಲಿ ದ್ವೇಷವನ್ನು ಹುಟ್ಟಿಸುವನು, ಎಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ ಇಲ್ಲಿ ಹೇಳಿರುತ್ತಾರೆ. ಭಕ್ತಿ ಜ್ಞಾನಾದಿಗಳೇ ಐಶ್ವರ್ಯವೆಂದು ಭಾವಿಸುವ ಭಕ್ತರಿಗೆ ನಿಧಿಯಂತಿರುವ ಶ್ರೀಪರಮಾತ್ಮನು, ಅವರಲ್ಲಿದ್ದು ಉತ್ತಮವಾದ ವೈರಾಗ್ಯ, ಭಕ್ತಿ, ಜ್ಞಾನಗಳನ್ನು ಕೊಡಿಸುವನು. ತಮೋಯೋಗ್ಯರಿಗೆ ತನ್ನಲ್ಲಿ ದ್ವೇಷಾದಿಗಳನ್ನೇ ವೃದ್ಧಿಮಾಡಿಸುತ್ತಿರುವನು. ಹೀಗೆ ಮಾಡುವುದಕ್ಕೆ, ಅವರವರ ಯೋಗ್ಯತೆಯೇ ಮುಖ್ಯ ಕಾರಣವೆಂದು ಭಾವಿಸಬೇಕು. ॥ ೨೨ ॥

### ೩. ಭಾವದರ್ಪಣ

ಈ ವಿಷಯ ನಾಲ್ಕನೆ ಸಂಧಿಯಲ್ಲಿ ವಿವರ ಮಾಡಿರುತ್ತದೆ. ಅಲ್ಲೇ ನೋಡತಕ್ಕದ್ದು. ಭೋಗ್ಯೇತಿ. ॥ ೨೨ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಭೋಗ್ಯ ಇತಿ ॥ ೨೨ ॥

### ಕನ್ನಡಾರ್ಥ

ಭೋಜ್ಯ – ಭೊಕ್ತೃಗಳಲ್ಲಿ – ಆ ನಾಮಗಳಿಂದ ಕರೆಯಿಸಿಕೊಳ್ಳುತ್ತ ಶ್ರೀಹರಿಯು, ಉಭಯ ವಿಧ ರಸಗಳನ್ನು ಸುರಾಸುರರಿಗೆ ಉಣಿಸಿ ಭಕ್ತರಿಗೆ ಜ್ಞಾನ ಭಕ್ತಿ ವೈರಾಗ್ಯ ಭಾಗ್ಯಗಳನ್ನೂ, ಅಸುರರಿಗೂ ಅಸಜ್ಜನರಿಗೂ ದ್ವೇಷ ಮುಂತಾದುವುಗಳನ್ನು ಕೊಡುತ್ತಾನೆಂದು ಹೇಳುತ್ತಾರೆ–ಭೋಗ್ಯ ಎಂಬ ಪದ್ಯ ದಿಂದ. ॥ ೨೨ ॥

### ೫. ಗುರುಹೃದಯಪ್ರಕಾಶಿಕೆ

ಭೋಜ್ಯವಸ್ತುಗಳಲ್ಲಿ ಎಂದು ಹಿಂದಿನ ಸಂಧಿಯಲ್ಲಿ ಹೇಳಿದ ಪದ್ಯದರ್ಥ ಇದರಂತೆ ತಿಳಿಯಬೇಕೆಂದು ವಿವರಿಸುತ್ತಾರೆ, ಭೋಗ್ಯವೆಂದು. ಭೋಗ್ಯವೆಂಬ ಭೋಜನ ಮಾಡುವ ಸರ್ವಪದಾರ್ಥಗಳಲ್ಲೂ, ಭೋಕ್ತೃಗಳೆಂಬ ಸರ್ವಜೀವ ರಲ್ಲೂ ಶ್ರೀಹರಿಯೇ ಮುಖ್ಯಸಾರಭೋಜ್ಯವೆಂತಲೂ, ಮುಖ್ಯಸಾರ ತೆಗೆದು ಕೊಳ್ಳುವನೆಂತಲೂ ಹೆಸರುಳ್ಳವನಾಗಿದ್ದು ಯೋಗ್ಯಾಯೋಗ್ಯರಸಗಳೆಂಬ ಶುಭಾ ಶುಭರಸಗಳನ್ನು ದೇವದಾನವ ಶುಭಾಶುಭ ಜೀವಗಣಕ್ಕೆ ಭೋಜನವೆಂಬ ತೃಪ್ತಿಕೊಡುವನು. ಹೀಗೆ ಚಿಂತಿಸುವ ಭಕ್ತರಿಗೆ ಭಾಗ್ಯನಿಧಿಯಾದ ದೇವರು, ಅನ್ಯತ್ರ ದೃಢವೈರಾಗ್ಯವನ್ನೂ ತನ್ನಲ್ಲಿ ದೃಢಭಕ್ತಿ ಜ್ಞಾನವನ್ನೂ ಕೊಡುವನು. ಅಯೋಗ್ಯರಿಗೆ ತಕ್ಕಹಾಗೆ ತನ್ನಲ್ಲಿ ದ್ವೇಷಾದಿಗಳನ್ನು ಕೊಡುವನು. ॥ ೨೨ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಭೋಗ ಮಾಡುವುದಕ್ಕೆ ಅರ್ಹವಾದ ನಿಷಿದ್ಧವಲ್ಲದ ವಿಷಯಗಳಿಗೆ ಭೋಗ್ಯವಸ್ತುಗಳೆಂದು ಹೇಳುವರು. ಕಿವಿಯಿಂದ ಕೇಳುವ ಶಬ್ದ, ನೇತ್ರಕ್ಕೆ ವಿಷಯವಾದ ರೂಪವಿಶೇಷಗಳು, ತ್ವಗಿಂದ್ರಿಯಕ್ಕೆ ವಿಷಯವಾದ ಸ್ಪರ್ಶಾದಿ ಸುಖಗಳು, ರಸನೇಂದ್ರಿಯಕ್ಕೆ ರುಚಿಯ ಅನುಭವ, ನಾಸಿಕೇಂದ್ರಿಯದಿಂದ ಆಘ್ರಾಣಿಸುವ ಗಂಧ ಇತ್ಯಾದಿ ಸುವಿಷಯಗಳೆಲ್ಲವೂ ಭೋಗ್ಯ ಪದಾರ್ಥಗಳೇ.

ಅಂತಹ ವಿಷಯಗಳು ಈ ದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನ ಇಂದ್ರಿಯಗಳಿಗೆ ಸನ್ನಿಕರ್ಷವಾದಾಗ, ಅವು ಮನಸ್ಸಿನ ದ್ವಾರಾ ಬುದ್ಧಿಗೆ ಮುಟ್ಟಿ, ತಜ್ಜನ್ಯವಾದ ವಿಷಯ ಭೋಗರೂಪವಾದ ಅನುಭವವುಂಟಾಗುವುದು. ವಿಷಯೋಪಭೋಗಗಳನ್ನು ಹೊಂದುವ ಜೀವನು ಭೋಕ್ತೃವೆಂದೆನಿಸುವನು.

ಇಂತು, ಭೋಗ್ಯವಸ್ತುಗಳಲ್ಲಿ ಹಾಗೂ ಭೋಕ್ತೃಗಳಲ್ಲಿ ಶ್ರೀಹರಿಯು ವಿದ್ಯಮಾನನಾಗಿದ್ದಾನೆ. ಭೋಗ್ಯ ವಸ್ತುಗಳಲ್ಲಿ ವ್ಯಾಪ್ತರೂಪಗಳಿಂದ ಇದ್ದಾನೆ. ಆ ಪದಾರ್ಥಾಭಿಮಾನಿ ದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದಾನೆ. ಭೋಕ್ತೃಗಳಲ್ಲಿರುವ ಭಗವದ್ರೂಪಕ್ಕೂ, ಭೋಗ್ಯವಸ್ತುವಂತರ್ಗತ, ತದಭಿಮಾನಿ ದೇವತಾಂತರ್ಗತ ಭಗವದ್ರೂಪಗಳಿಗೂ ಐಕ್ಯಚಿಂತನಾಪೂರ್ವಕ ಶ್ರೀಹರಿಗೆ ನಿವೇದಿಸಿ, ಭುಂಜಿಸಬೇಕು. ಇದೇ ಭೋಜನವೆಂಬ ಯಜ್ಞಕ್ರಿಯೆ.

ಭೋಗ್ಯ ಮತ್ತು ಭೋಕ್ತೃಗಳಲ್ಲಿ ವಿರಾಜಮಾನನಾಗಿರುವ ಶ್ರೀಹರಿಯು ಭೋಗ್ಯಶಬ್ದವಾಚ್ಯನಾಗಿಯೂ, ಭೋಕ್ತೃಶಬ್ದವಾಚ್ಯನಾಗಿಯೂ, ತದಾಕಾರನಾಗಿ ತದ್ರೂಪಗಳಿಂದ ಇದ್ದಾನೆ.

ತತ್ತಚ್ಛಬ್ದವಾಚ್ಯನಾದ ಶ್ರೀಪರಮಾತ್ಮನು ದೇವತಾವರ್ಗದಲ್ಲಿ ಮತ್ತು ದೈತ್ಯಗಣದಲ್ಲಿ ಅಂತರ್ಗತನಾಗಿದ್ದು, ಆಯಾಯಾ ಜೀವರ ಯೋಗ್ಯತೆಗೆ ಅನುಗುಣವಾಗಿ, ಶುಭ ಮತ್ತು ಅಶುಭರಸಗಳನ್ನು ಸ್ವಾತ್ಮರಸ ಸ್ವೀಕಾರಪೂರ್ವಕ ಬಿಂಬಕ್ರಿಯಾದ್ವಾರಾ ಪ್ರತಿಬಿಂಬರಾದ ಆ ಚೇತನರ ಅನುಭವಕ್ಕೆ ತಂದೀಯುವನು.

ಕರಣಾಸಾಗರನಾದ ಶ್ರೀಹರಿಯು ತನ್ನ ಅಂತರಂಗಭಕ್ತರಿಗೆ ಇಹದಲ್ಲಿ ಸಂಪತ್ತುಗಳನ್ನೂ, ಸಾಧನೆಗೆ ಅತ್ಯಗತ್ಯವಾದ ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ದೈವೀಸಂಪತ್ತನ್ನು ಅನುಗ್ರಹಿಸಿ, ಅಂತ್ಯದಲ್ಲಿ ಕರ್ಮಬಂಧವಿಮೋಚನ ದ್ವಾರಾ, ನಿತ್ಯಾನಂದರೂಪವಾದ ಮೋಕ್ಷಸುಖವೆಂಬ ಅಮೂಲ್ಯನಿಧಿಯನ್ನು ಕೊಡುವನು.

ಹೀಗೆ ತನ್ನ ಭಕ್ತರಿಗೆ ಸ್ವರೂಪಾನುಸಾರ ಸಮೀಚೀನವಾದ ಜ್ಞಾನ, ತನ್ನ ಚರಣಾರವಿಂದಗಳಲ್ಲಿ ಅವಿಚ್ಛಿನ್ನವಾದ, ನಿರತಿಶಯವಾದ, ಸ್ನೇಹರೂಪರಾದ ದೃಢಭಕ್ತಿಯನ್ನೂ, ಪ್ರಾಪಂಚಿಕ ವಿಷಯಗಳಲ್ಲಿ ಜಿಹಾಸೆ ಹುಟ್ಟಿಸಿ, ತದ್ದ್ವಾರಾ ಉತ್ತಮ ವೈರಾಗ್ಯವೆಂಬ ಭಾಗ್ಯವನ್ನೂ, ತನ್ನಲ್ಲಿ ಹಾಗೂ ತನ್ನ ಭಕ್ತರಲ್ಲಿ ದ್ವೇಷರೂಪವಾದ ದುರ್ಬುದ್ಧಿಯನ್ನೂ ತಮೋಯೋಗ್ಯರಾದ ಜೀವರಿಗೆ ಅವರಸ್ವರೂಪಾನುಸಾರ ಕೊಡುತ್ತಿರುವನು. ಇದರಿಂದ ಶ್ರೀಹರಿಗೆ ವೈಷಮ್ಯ-ನೈರ್ಘೃಣ್ಯ ದೋಷಗಳಿಲ್ಲ. ॥ ೨೨ ॥

## ಪದ್ಯ ೨೩

**ಮೂಲ**

**ಈ ಚತುರ್ದಶ ಭುವನದೊಳಗೆ ಚ ।**
**ರಾಚರಾತ್ಮಕ ಜೀವರಲ್ಲಿ ವಿ ।**
**ರೋಚನಾತ್ಮಜ ವಂಚಕನು ನೆಲೆಸಿದ್ದು ದಿನದಿನದಿ ॥**
**ಯಾಚಕನು ಎಂದೆನಿಸಿಕೊಂಬ ವ ।**
**ರೀಚಿದವನ ಸುಹಂಸರೂಪಿ ನಿ ।**
**ಷೇಚಕಾಹ್ವಯನಾಗಿ ಜನರಭಿಲಾಷೆ ಪೂರೈಪ ॥ ೨೩ ॥**

**ಅವತರಣಿಕೆ**

ಸರ್ವ ಕರ್ಮ ಪ್ರೇರಕನಾದ ಶ್ರೀಹರಿಯು ಜೀವರಲ್ಲಿ ತಾನೆ ಸಮಸ್ತ ಕ್ರಿಯೆಗಳನ್ನೂ ಮಾಡಿಮಾಡಿಸಿ, ಭಕ್ತರ ಅಭಿಲಾಷೆಗಳನ್ನು ಪೂರ್ತಿಮಾಡುತ್ತಾನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಈ ಚತುರ್ದಶಭುವನದೊಳಗೆ**=ಹದಿನಾಲ್ಕು ಲೋಕಗಳನ್ನು ಒಳಗೊಂಡ ಈ ಬ್ರಹ್ಮಾಂಡದಲ್ಲಿ, **ಚರಾಚರಾತ್ಮಕ**=ಸ್ಥಾವರರೂಪದಲ್ಲಿರುವ ವೃಕ್ಷಾದಿಗಳು, ಜಂಗಮರೂಪದಲ್ಲಿ ಸಂಚರಿಸುವ ಮಾನವ ಪಶ್ವಾದಿ, **ಜೀವರಲ್ಲಿ**=ಚೇತನವರ್ಗದಲ್ಲಿ, **ವಿರೋಚನಾತ್ಮಜ**=ವಿರೋಚನನ ಪುತ್ರನಾದ ಬಲಿ ಚಕ್ರವರ್ತಿ, **ವಂಚಕನು**=ಅವನಿಂದ ಮೂರು ಪಾದ ಪ್ರಮಾಣದ ಭೂದಾನವನ್ನು ಬೇಡಿ, ಅವನನ್ನು ಪಾತಾಳಕೊತ್ತಿ, ವಂಚಿಸಿದ ಶ್ರೀವಾಮನದೇವರು, **ನೆಲೆಸಿದ್ದು**=ಹೃದ್ಗುಹಾವಾಸಿಯಾಗಿ ವಿದ್ಯಮಾನನಾಗಿದ್ದು, **ದಿನದಿನದಿ**=ಪ್ರತಿನಿತ್ಯದಲ್ಲಿಯೂ, **ಯಾಚಕನು**=ಬೇಡುವವನು (ಜೀವಕೃತ ಕರ್ಮಗಳನ್ನು ಸ್ವೀಕರಿಸುವುದರ ದ್ವಾರಾ) **ಎನಿಸಿಕೊಂಬ**=ಎಂಬುದಾಗಿ ಕರೆಯಿಸಲ್ಪಡುವನು, **ಮರೀಚಿದಮನ**=ಅನಂತಕೋಟಿಸೂರ್ಯಪ್ರಕಾಶನು (ಮರೀಚಿ=ಕಾಂತಿ ಕಿರಣಗಳಿಂದ ಯುಕ್ತನಾದ ಸೂರ್ಯ) **ಸುಹಂಸರೂಪಿ**=ಸಮೀಚಿನನಾದ (ಶ್ರೇಷ್ಠ) ಹಂಸನಾಮಕ ಪರಮಾತ್ಮನೂ, **ನಿಷೇಚಕ**=ಭಕ್ತರ ಅಭೀಷ್ಟಪ್ರದಾಯಕ, **ಆಹ್ವಯನಾಗಿ**=ಇತ್ಯಾದಿ ನಾಮಗಳಿಂದ ಕರೆಯಿಸುತ್ತಾ, **ಜನರ ಅಭಿಲಾಷೆ**=ತನ್ನ ಭಕ್ತಜನರ ಮನೋಭೀಷ್ಟಗಳನ್ನು, **ಪೂರೈಪ**=ಪೂರ್ಣಗೊಳಿಸುತ್ತಾನೆ. ॥ ೨೩ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪರಮಾತ್ಮಾ ದ್ವಂದ್ವಕರ್ಮಗಳ ಯಾಚನಾ ಮಾಡಿ ತೆಗೆದುಕೊಂಡು ಅದಕ್ಕೆ ಪ್ರತ್ಯಾಮ್ನಾಯಾ ಭಕ್ತರ ಅಭಿಲಾಷೆ ಪೂರ್ತಿ ಆಗತಕ್ಕ ಮತ್ತೊಂದು ಫಲರೂಪವಾದ ಪದಾರ್ಥಗಳ ಕೊಡತಾನೆಂತ ಹೇಳತಾರೆ.

ವರ್ತಮಾನ ಹದಿನಾಲ್ಕು ಲೋಕಗಳೊಳಗೆ ವಿದ್ಯಮಾನರಾದ ಮಾನುಷ ಪಶ್ವಾದಿ ಚಲನಮಾಡತಕ್ಕ ಜೀವರು, ವೃಕ್ಷಾದಿ ಸ್ಥಾವರ ಜೀವರಾದ ಈ

ಉಭಯರಾದ ಜೀವರುಗಳಲ್ಲಿ, ವಿರೋಚನನ ಪುತ್ರನಾದ ಬಲಿಚಕ್ರವರ್ತಿಯ ವಂಚನ ಮಾಡೋ ಉದ್ದಿಶ್ಯ ಅವತಾರಮಾಡಿದ, ಶ್ರೀವಾಮನದೇವರು ಸರ್ವ ಜೀವಾಂತರ್ಗತನಾಗಿದ್ದು ಪ್ರತಿದಿನದಲ್ಲೂನೂ ಯಾಚನಾ ಮಾಡತಕ್ಕವನು ಎಂತ ಕರಸಲ್ಪಡತಾನೆ. (ದೇವರ ವ್ಯತಿರಿಕ್ತ ರಮಾಬ್ರಹ್ಮಾದಿ ಯಾವತ್ತೂ ಜೀವರು ತಾರತಮ್ಯಾನುಸಾರ ಯಾಚಕರೆಂದು ಕರಸೋವರಾಗತಾರೆ. ಆ ಯಾಚನಕರ್ಮ ವಾಮನದೇವರು ಮಾಡಸತಾನೆ. ಯಾಚಕರಲ್ಲಿ ವಾಮನದೇವರ ಅನುಸಂದಾನ ಇರಬೇಕು.) ಅನಂತ ಸೂರ್ಯರ ಕಾಂತಿಗಳ ಸೋಲಿಸತಕ್ಕವನು, ಸಮೀಚೀನನಾದ ಹಂಸನಾಮಕ ಪರಮಾತ್ಮ, ಭಕ್ತರ ಅಭೀಷ್ಟವನ್ನು ಪೂರ್ಣಮಾಡತಕ್ಕವ, ಈ ನಾಮಗಳಿಂದ ಯುಕ್ತವಾದ ಮೂರು ರೂಪಗಳಿಂದ ಯುಕ್ತನಾಗಿ, ಜೀವರ ಇಷ್ಟಾರ್ಥಗಳ (ಜನಶಬ್ದ ಜೀವಪರ ಮಾಡಬೇಕು) ಪೂರ್ಣಮಾಡತಾನೆ. ಒಂದು ರೂಪದಿಂದ ಯಾಚನ ಮಾಡತಾನೆ, ಮೂರು ರೂಪದಿಂದ ಯಾಚಿನಿ ಪೂರ್ಣ ಮಾಡತಾನೆಂತ ತಾತ್ಪರ್ಯ. (ಆ ಪೂರ್ಣ ಎಂಬುದು ಸಾತ್ತ್ವಿಕ ರಾಜಸ ತಾಮಸ ಭೇದೇನ ಪೂರ್ಣಮಾಡತಾನಾದ್ದರಿಂದ ಮೂರಕ್ಕೂ ಮೂರು ಭಗವದ್ರೂಪಗಳು ಪ್ರಕಾಶಾಂತರ) ಜೀವಕೃತಕರ್ಮಗಳ ತನಗೆ ಸಮರ್ಪಿಸಿರೆಂದು ಯಾಚನಾ ಮಾಡಿ ತೆಗೆದುಕೋತಕ್ಕವ. ಅರ್ಪಿತ ಮಾಡಿದ ಕರ್ಮಗಳ ಪುಣ್ಯ–ಪಾಪ ವಿಭಾಗಮಾಡಿ ಪುಣ್ಯ ಭಕ್ತರಿಗೆ ಉಣ್ಣಿಸಿ, ಪಾಪ ದೈತ್ಯರಿಗೆ ಸೇರಿಸತಕ್ಕವ. ದೈತ್ಯರ ತೇಜಸ್ಸನ್ನು ಭಂಗಮಾಡಿ, ಅವರು ಮಾಡಿದ ಕರ್ಮಗಳೊಳಗೆ ಪುಣ್ಯ ತೆಗೆದು ಭಕ್ತರಿಗೆ ವಿಭಾಗ ಮಾಡಿ, ಪಾಪಗಳ ದೈತ್ಯರಿಗೆ ಉಣ್ಣಿಸತಕ್ಕವ. ಭಕ್ತರ ಅಭೀಷ್ಟ ಪೂರ್ಣಮಾಡ ತಕ್ಕವ. ಕ್ರಮ ವಿಷಮದಿಂದ ತ್ರಿವಿಧಜೀವರಲ್ಲೂ ಅನ್ವಯ. ಬಲಿಚಕ್ರವರ್ತಿ ಯೋಪಾದಿಯಲ್ಲಿ ಅತಿಥಿಗಳಿಗೆ ವಿಮುಖನಾಗದವ, ಅಂಥಾವನ ಬಾಗಿಲು ಕಾಯಿ ತಾನೆ. ಭಂಗ ಮಾಡಿದ ತದನ್ಯ ಶುಕ್ರಾಚಾರ್ಯರೋಪಾದಿಯಲ್ಲಿ ಹಾನಿ ಹೊಂದ ತಾನೆ. ತ್ರಿವಿಕ್ರಮ ರೂಪದಿಂದ ಭಾಗೀರಥೀ ದ್ವಾರ ಲೋಕ ಪವಿತ್ರ ಮಾಡಿ ದಂತೆ, ಅತಿಥಿ ಸಂತುಷ್ಟನಾದರೆ ವಂಶ ಉದ್ಧಾರ ಮಾಡತಾನೆ. ತದ್ವ್ಯತಿರಿಕ್ತ ಅಲ್ಲಿ ವಿಪರೀತಗಳೇ ಆಗೋದಾಗತವೆ. ॥ ೨೩ ॥

**೨. ಭಾವಪ್ರಕಾಶಿಕೆ**

ಈ ಹದಿನಾಲ್ಕು ಲೋಕಗಳೊಗಗೆ ಸ್ಥಾವರ ಜಂಗಮರಾದ ಜೀವರೊಳಗೆ

ಶ್ರೀವಾಮನದೇವರು ವಾಸವಾಗಿದ್ದು ಒಬ್ಬರನ್ನೊಬ್ಬರು ಬೇಡುವ ಕಾರ್ಯವನ್ನು ಮಾಡಿಸುತ್ತಿರುವವರು. ವಿಷ್ಣುಸಹಸ್ರನಾಮದಲ್ಲಿ ಪ್ರತಿಪಾದ್ಯವಾಗಿರುವ ಸಹಸ್ರ ನಾಮಗಳ ಪೈಕಿ ಮರೀಚಿರ್ದಮನೋಹಂಸಃ ಮರೀಚಿ, ದಮನ, ಹಂಸ ಎಂಬ ಮೂರು ರೂಪಗಳನ್ನು ತೆಗೆದುಕೊಂಡಿರವರು. ಮರೀಚಿ ಅಂದರೆ ಸಾಮಾನ್ಯ ವಾಗಿ (ರಶ್ಮಿ) ಸೂರ್ಯಾದಿಗಳ ಕಿರಣಗಳಿಗೆ ಹೆಸರು. ಸ್ವಯಂ ರಶ್ಮಿಭೂತ ನಾಗಿರುವುದರಿಂದ ಮರೀಚಿ ಎಂದು ಪರಮಾತ್ಮನಿಗೆ ಹೆಸರು. ಅಥವಾ ವಿಷ್ಣು ಸಹಸ್ರನಾಮವಾಖ್ಯಾನದಲ್ಲಿ ಚಲನಾನ್ಮರೀಚಿಃ ಎಲ್ಲಾ ಪ್ರಾಣಿಗಳಲ್ಲಿ ಇದ್ದು ಚಲನಮಾಡಿಸುವ ಶಕ್ತಿಯು ಪರಮಾತ್ಮನಿಗಿದ್ದುದರಿಂದ ಮರೀಚಿ ಎಂದು ಹೆಸರು. ಈ ಪದ್ಯಕ್ಕೆ ಪದ್ಯಾರ್ಥವನ್ನು ಬರೆಯುವಾಗ ಮರೀಚಿದಮನ ಎಂದು ಒಂದೇ ಪದವನ್ನು ಮಾಡಿ ಸಂಸಾರನಾಶಕನೆಂಬರ್ಥವನ್ನು ಸೂಚಿಸಿರುತ್ತದೆ. ಹಾಗಾದರೆ ಈ ಮರೀಚಿ, ದಮನ, ಎಂಬ ಮೂರು ರೂಪಗಳು ಆಗುವುದಿಲ್ಲವೆಂಬ ಆಕ್ಷೇಪಣೆ ಬರುವುದು. ಅದರ ಪರಿಹಾರ ಹೇಗೆಂದರೆ, ಪದಮಾಡುವಾಗ, ಮರೀಚಿ ಪದ ವನ್ನು ಎರಡುಸಲ ಉಚ್ಚರಿಸಿದರೆ ಸರಿಹೋಗುತ್ತದೆ. ಹೇಗೆಂದರೆ, ಮರೀಚಿ, ಮರೀಚಿದಮನ, ಹಂಸ ಎಂಬ ಮೂರು ರೂಪಗಳೆಂದು ಅರ್ಥ ಮಾಡಬೇಕು. ಹೀಗೆ ಅರ್ಥ ಮಾಡುವುದರಿಂದ ದಾಸರಾಯರ ಮತಕ್ಕೆ ವಿರುದ್ಧವೇನೂ ಬರುವು ದಿಲ್ಲವೆಂದು ಯೋಚಿಸಿ ಈ ಒಂದರ್ಥವನ್ನು ಪದ್ಯಾರ್ಥದಲ್ಲಿ ಹೆಚ್ಚಿಗೆ ಸೇರಿಸಿರು ತ್ತದೆ. ಅದನ್ನು ಸಾಧುವೆಂದು ಕಂಡರೆ ಅಂಗೀಕರಿಸಬಹುದು. ಇಲ್ಲವಾದರೆ ಬಿಡ ಬಹುದು. ದಮನ ಅಂದರೆ ಸಂಸಾರಂ ದಮಯತೀತಿ ದಮನಃ ಸಂಸಾರವನ್ನು ನಾಶಮಾಡುವುದರಿಂದ ದಮನ ಎಂದು ಹೆಸರು. ಮರೀಚಿ ಪದವನ್ನು, ದಮನ ಪದವನ್ನು ಬೇರೆ ಬೇರೆ ಮಾಡಿ ಅರ್ಥ ಹೇಳಬೇಕಾದರೆ ದಮನ ಶಬ್ದಕ್ಕೆ ಸಂಸಾರ ನಾಶಕನೆಂದರ್ಥ, ಮರೀಚಿ ಶಬ್ದಕ್ಕೆ ಮೇಲೆ ಹೇಳಿದಂತೆ ಪ್ರಕಾಶಮಾನನು, ಚಲನಶಕ್ತಿಯುಳ್ಳವನೆಂದರ್ಥ. ಹಂಸನೆಂದರೆ ದುಃಖಂ ಸರ್ವಂ ಹಂತೀತಿ ಹಂಸಃ ಸಕಲ ದುಃಖವನ್ನು ನಾಶಮಾಡುವುದರಿಂದ ಹಂಸನೆಂದು ಹೆಸರು. ಹೀಗೆ ಮರೀಚಿ, ದಮನ, ಹಂಸ ಎಂಬ ವಿಶ್ವಾದಿಸಹಸ್ರರೂಪಗಳೊಳಗೆ ಸೇರಿದ ಮೂರು ರೂಪಗಳಿಂದ ಎಲ್ಲಾ ಜನರಲ್ಲಿ ಇದ್ದು ನಿಷೇಚಕ ಎಂಬ ಹೆಸರಿನಿಂದ ಎಲ್ಲ ಮನೋಭೀಷ್ಟವನ್ನು ಪೂರೈಸುವನು. ನಿಷೇಚಕ = ವರ್ಷಿಸುವುದು. ಮನೋ

ಭೀಷ್ಟವನ್ನು ವರ್ಷಿಸುವವನು ಎಂಬ ತಾತ್ಪರ್ಯ.

### ೩ ಭಾವದರ್ಪಣ

ಈ ಚತುರ್ದಶೇತಿ. ವಿರೋಚನಾತ್ಮಜ ಬಲಚಕ್ರವರ್ತಿಗೆ ವಂಚನೆ ಮಾಡಿದವ ವಾಮನ. ನಿಷೇಚಕ ಎಂದರೆ ಭಕ್ತರಭೀಷ್ಟ ವರ್ಷಿಸಿ ಕೊಡತಕ್ಕವ ಎಂಬರ್ಥ. ॥ ೨೩ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಈ ಚುತುರ್ದಶ ಇತಿ ॥ ವಿರೋಚನಾತ್ಮಜ ಬಲಿಃ ॥ ಯಾಚಕಃ ತದ್ಗತತ್ವಾತ್ ॥ ನಿಷೇಚಕಃ ಭಕ್ತಾಭಿಲಷಿತ ಸೇಚಕಃ ॥ ಉಕ್ಷಾಸಾತ್ ಇತ್ಯುಕ್ತೇಃ ॥ ಮರೀಚಿಃ – ಮರೀಚಿಃ ದಮನೋ ಹಂಸಃ ॥ ಓಂ ॥ ತವೀಯೋऽರಧ್ರುಸ್ಯರಧ್ರುತುರೋ ಬಭೂವ ತನ್ನಃ ಪ್ರತ್ನಂ ಸಖ್ಯಮಸ್ತು ಯುಷ್ಮೇ ಇತ್ಥಾ ವದದ್ಭಿಃ ಬಲಮಂಗಿರೋಭಿಃ ॥ ಓಂ ॥ ಬಲಾಸುರಂ ಮರಣಂ ಪ್ರಾಪಯತಿ ಇತಿ ಮರೀಚಿಃ ॥ ದಮನಃ ಓಂ (ಅ) ಹನ್ನಚ್ಯುದ ಚ್ಯುದ್ವಮ್ಮೇಷಯಂ ತಮೃಣೋಃ ಪುರೋವಿದುರೋ ಅಸ್ಯ ವಿಶ್ವಾಃ ಸ ಹಿ ಧೀಭಿರ್ಹವ್ಯೋ ಅಸ್ತ್ಯುಗ್ರ ಈಶಾನ ಕೃನ್ಮಹತಿ ॥ ಓಂ ॥ ಶತ್ರೂಣಾಂ ದಮಂ ನಿರೋಧಂ ಕರೋತಿ ಇತಿ ತಥೋಕ್ತಃ॥ ಹಂಸಶ್ರುತಿರುಕ್ತಾ ಪುರಸ್ತಾತ್ ॥ ೨೩ ॥

### ಕನ್ನಡಾರ್ಥ

ವಿರೋಚನಾತ್ಮಕಃ– ವಿರೋಚನನೆಂಬ ದೈತ್ಯನ ಮಗ ಬಲಿರಾಜ. ಯಾಚಕರಲ್ಲಿ ಅಂತರ್ಯಾಮಿಯಾಗಿ ಇರುವದರಿಂದ ಯಾಚಕನು ಎಂದು ಹೇಳಿಸಿಕೊಳ್ಳುತ್ತಾನೆ. ನಿಷೇಚಕಾಹ್ವಯ ಎಂದರೆ ಭಕ್ತರ ಅಭಿಲಾಷೆಗಳನ್ನು ಸುರಿಸುವವನು–ಪೂರೈಸುವವನು ಎಂದು ಅರ್ಥ. ಉಕ್ಷಾಸಾತ್ ಎಂಬ ಶ್ರುತಿಯಲ್ಲಿ ಈ ಅರ್ಥವನ್ನು ಹೇಳಲಾಗಿರುತ್ತದೆ. ಅದನ್ನು ಹಿಂದಿನ ಸಂಧಿ ಪದ್ಯಗಳಲ್ಲಿ ವಿವರಿಸಿದ್ದಾಗಿರುತ್ತದೆ. ಮರೀಚಿ ಎಂಬುದು ಶ್ರೀವಿಷ್ಣುಸಹಸ್ರನಾಮಾಂತರ್ಗತವು.

ಅಸುರರನ್ನು ಮರಣ ಹೊಂದಿಸುವನು ಎಂಬುದು ಬೃಹತೀಮಂತ್ರಾನುಗುಣವಾದ ನಾಮಾರ್ಥ.

**ದಮನ**–ಇದೂ ಒಂದು ವಿಷ್ಣುನಾಮ. ಶತ್ರುಗಳನ್ನು ದಮನ ಮಾಡುವವನು. ಅಂದರೆ ಅವರನ್ನು ನಿರೋಧ ಮಾಡುವವನು ಎಂದು ಬೃಹತೀ ಮಂತ್ರಾನುಗುಣವಾದ ನಾಮಾರ್ಥ.

**ಹಂಸ**–ನಾಮದ ವಿವರಣವನ್ನೂ ಶ್ರುತಿಯನ್ನೂ ಮುಂದೆ ಹೇಳಲಾಗುತ್ತದೆ. ॥ ೨೩ ॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಯಾಚಕ ಯಾಚ್ಯರಲ್ಲಿ ದೇವರ ರೂಪಸ್ಮರಣೆ ತಿಳಿಸುತ್ತಾರೆ, ಈ ಚತುರ್ದಶವೆಂದು. ಈ ಹದಿನಾಲ್ಕುಲೋಕದಲ್ಲೂ ವೃಕ್ಷಾದಿ ಅಚರ, ಕ್ರಿಮಿ ಮೊದಲಾದ ಚರವೆಂಬ ಸರ್ವಜೀವರಲ್ಲೂ, ವಿರೋಚನಾತ್ಮಜವಂಚಕನು ಎಂದರೆ, ಬಲಿಯನ್ನು ಮೋಸಮಾಡಿದ ವಾಮನದೇವರು ನೆಲೆಸಿದ್ದು ಎಂದರೆ ಸ್ಥಿರವಾಗಿದ್ದು, ಯಾಚಕರೂಪದಿಂದಿರುವನು. ವೇದಾದಿಗಳಿಂದ ಕರೆಸಿಕೊಳ್ಳುವನು. ಮಾರೀಚನನ್ನು ಕೊಂದ ಶ್ರೀರಾಮನು ಸುಹಂಸನೆಂಬ ಪರಿಶುದ್ಧರೂಪದಿಂದ, ನಿಷೇಚಕಾಹ್ವಯನಾಗಿ ಎಂದರೆ, ಅವರವರ ಇಷ್ಟಾರ್ಥ ಮಳೆಗರೆಯುವನಾಗಿ ಸರ್ವರ ಅಭಿಲಾಷೆ ಪೂರೈಸುವನು. ದದ್ಯಾಂ ನ ಪ್ರತಿಗೃಣ್ಹೀಯಾಂ ಎಂಬ ರಾಮಾಯಣ ವಚನ ವಿವರಿಸಲ್ಪಟ್ಟಿತು. ॥ ೨೩ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯಿಂದ ಸೃಷ್ಟವಾದ ಈ ಬ್ರಹ್ಮಾಂಡವು ಹದಿನಾಲ್ಕು ಲೋಕಗಳಿಂದ ಯುಕ್ತವಾಗಿದೆ.

ಇಂತಹ ಪ್ರಪಂಚದಲ್ಲಿ ವಿದ್ಯಮಾನವಾಗಿರುವ ವಸ್ತುಗಳಲ್ಲಿ ಜೀವ ಮತ್ತು ಜಡಗಳೆಂದು ಎರಡು ಪ್ರಕಾರ. ಜೀವವರ್ಗದಲ್ಲಿ ಸ್ಥಾವರ ಜಂಗಮ

ಎರಡು ಪ್ರಬೇಧ. ಇದ್ದಲ್ಲಿಯೇ ಇದ್ದು, ಚಲಿಸದಿರುವ ವೃಕ್ಷ, ಲತೆ, ಗುಲ್ಮಾದಿ ಚೇತನಗಳೆಲ್ಲವೂ ಸ್ಥಾವರವರ್ಗಕ್ಕೆ ಸೇರಿವೆ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸುವ ಚೇತನವರ್ಗಕ್ಕೆ ಜಂಗಮ ಎಂದು ಹೆಸರು.

ಇಂತಹ ಅಚರ ಮತ್ತು ಚರ ಜೀವಗಣಗಳಲ್ಲಿ ವಾಮನರೂಪೀ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. ವಿರೋಚನನ ಮಗನೇ ಬಲಿ ಚಕ್ರವರ್ತಿಯು. ಇವನು ಇಂದ್ರ ಪದವಿ ಪ್ರಾಪ್ತಿಗಾಗಿ ನೂರನೆಯ ಅಶ್ವಮೇಧ ಯಾಗದಲ್ಲಿ ನಿರತನಾದನು. ಶ್ರೀವಾಮನಾವತಾರೀ ಶ್ರೀಹರಿಯು ಬಲಿ ಚಕ್ರವರ್ತಿಯಲ್ಲಿ ಮೂರುಪಾದ ಭೂಮಿಯನ್ನು ಯಾಚಿಸಿ, ತನ್ನ ಮಹಿಮಾತಿಶಯದಿಂದ ಬಲಿಚಕ್ರವರ್ತಿಯನ್ನು ಮೋಹಗೊಳಿಸಿದ ವಾಮನನೇ ವಿರೋಚನಾತ್ಮಜ ವಂಚಕನು.

ಅಂತಹ ವಾಮನ ರೂಪೀ ಶ್ರೀಹರಿಯು ದಾನವನ್ನು ಬೇಡುವವರಲ್ಲಿ ಯಾಚಕಶಬ್ದವಾಚ್ಯನಾಗಿದ್ದಾನೆ. ದಾನ ಕೊಡುವವರಲ್ಲಿ ಯಾಚ್ಯನಾಮಕನಾಗಿದ್ದಾನೆ. ಯಾಚಕರಲ್ಲಿ ನೆಲೆಸಿದ್ದು, ಬೇಡುವನು. ಯಾಚ್ಯರಲ್ಲಿ ವಿದ್ಯಮಾನನಾಗಿದ್ದು ದಾನ ನೀಡುವನು.

ಅಂತಹ ವಾಮನನಾಮಕ ಶ್ರೀಪರಮಾತ್ಮನಿಗೆ ಮರೀಚಿ ಎಂದು ಹೆಸರು. ಮರೀಚಿ–ಎಂದರೆ ಸೂರ್ಯನ ರಶ್ಮಿ (ಕಿರಣ) ಎಂದು ರೂಢ್ಯರ್ಥ. ಅನಂತ ಕೋಟಿಸೂರ್ಯಪ್ರಕಾಶಮಾನನಾಗಿರುವ, ಸ್ವಯಂ ಜ್ಯೋತಿಯಾದ ಶ್ರೀಪರಮಾತ್ಮನಿಗೆ ಮರೀಚಿ ಎಂದು ಹೆಸರು. ಚಲನಾನ್ಮರೀಚಿಃ ಎಂಬ ಶ್ರೀವಿಷ್ಣು ಸಹಸ್ರನಾಮದ ವ್ಯಾಖ್ಯಾನದಲ್ಲಿರುವ ವಿವರಣೆಯಂತೆ, ಸರ್ವಪ್ರಾಣಿಗಳಲ್ಲಿ ಚಲನ ಮಾಡಿಸುವ ಶಕ್ತಿಯನ್ನು ಕೊಡುವುದರಿಂದ, ಶ್ರೀಹರಿಗೆ ಮರೀಚಿ ಎಂದು ಹೆಸರು.

ಸಂಸಾರವನ್ನು ನಾಶ ಮಾಡುವುದರಿಂದ, ಶ್ರೀಪರಮಾತ್ಮನಿಗೆ ದಮನ ಎಂದು ಹೆಸರು. ಅಂದರೆ ಭವನಾಶಕನೆಂದರ್ಥ.

ಸಜ್ಜನರ ದುಃಖ ಪರಿಹಾರಕನಾಗಿರುವುದರಿಂದ, ಶ್ರೀಪರಮಾತ್ಮನಿಗೆ ಹಂಸ ಎಂತ ನಾಮ.

ಶ್ರೀಹರಿಗೆ ಮರೀಚಿ–ದಮನ–ಹಂಸ ಎಂಬ ಮೂರು ರೂಪಗಳಿವೆ. ತನ್ನ ಭಕ್ತರ ದುಃಖಗಳನ್ನು ಪರಿಹರಿಸಿ, ಅವರವರ ಇಷ್ಟಾರ್ಥಗಳೆಂಬ ಮಳೆಯನ್ನು ಸುರಿಸುವನು. ಇದರಿಂದ ಸಕಲಾಭೀಷ್ಟಪ್ರದನಾದ ಶ್ರೀಹರಿಗೆ ನಿಷೇಚಕನೆಂದು ಹೆಸರು. ಇಂತಹ ನಿಷೇಚಕನಾಮಕನಾದ ಶ್ರೀಪರಮಾತ್ಮನು ಮರೀಚಿ, ದಮನ, ಹಂಸ ಎಂಬ ರೂಪತ್ರಯಗಳಿಂದ ಯಾಚಕರಲ್ಲಿ ಯಾಚಕನಾಮಕನಾಗಿದ್ದು, ಆ ವಾಮನರೂಪೀ ಶ್ರೀಹರಿಯು ಭಕ್ತರ ಅಭಿಲಾಷೆಗಳನ್ನು ಪೂರ್ಣ ಮಾಡುವನು. ॥ ೨೩ ॥

## ಪದ್ಯ ೨೪

**ಮೂಲ**

ಅನ್ನದನ್ನಾದನ್ನಮಯ ಸ್ವಯ
ಮನ್ನ ಬ್ರಹ್ಮಾದ್ಯಖಿಳ ಚೇತನ
ಕನ್ನಕಲ್ಪಕನಾಹನನಿರುದ್ಧಾದಿ ರೂಪದಲಿ ॥
ಅನ್ಯರನಪೇಕ್ಷಿಸದೆ ಗುಣಕಾ ।
ರುಣ್ಯ ಸಾಗರ ಸೃಷ್ಟಿಸುವನು ಹಿ ।
ರಣ್ಯಗರ್ಭನೊಳಿದ್ದು ಪಾಲಿಸುವನು ಜಗತ್ರಯವ ॥

**ಅವತರಣಿಕೆ**

ಶ್ರೀಹರಿಯು ಅವರವರ ಆಹಾರವನ್ನು ನೀಡಿ ಸಂರಕ್ಷಿಸುತ್ತಾನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಅನ್ನದ** = ತ್ರಿವಿಧ ಜೀವವರ್ಗಕ್ಕೆ ಅನ್ನವನ್ನು ಕೊಡುವವನು, **ಅನ್ನಾದ** ದೇಹಾಂತರ್ಗತನಾಗಿ ಅನ್ನವನ್ನು ಭಕ್ಷಿಸುವವನು, **ಅನ್ನಮಯ** = ಅನ್ನಾಂತರ್ಗತನಾಗಿ, ತದಾಕಾರದಿಂದ ಅನ್ನಮಯನೆಂದು ಕರೆಯಿಸುವವನು, **ಸ್ವಯಮನ್ನ** =

ಸ್ವತಃ ಅನ್ನನಾಮಕನಾಗಿ ಇದ್ದು, ಸ್ವಾಖ್ಯ ರಸಸ್ವೀಕಾರ ದ್ವಾರಾ, **ಬ್ರಹ್ಮಾದಿ**= ಚತುರ್ಮುಖ ಬ್ರಹ್ಮದೇವರಿಂದ ಆರಂಭಿಸಿ, **ಅಖಿಳ ಚೇತನಕೆ**=ಸಮಸ್ತ ತ್ರಿವಿಧ ಜೀವ ಸಮೂಹಕ್ಕೆ, **ಅನ್ನಕಲ್ಪಕ**=ಆಯಾಯಾ ಜೀವರ ಯೋಗ್ಯ ತಾನುಸಾರ ಆಹಾರಪ್ರದನೆಂದು, **ಆಹನು**=ಆಗುವವನಾಗಿದ್ದಾನೆ. **ಅನಿರುದ್ಧಾದಿ ರೂಪದಲಿ**=ಅನಿರುದ್ಧ, ಪ್ರದ್ಯುಮ್ನಾದಿ ರೂಪಗಳನ್ನು ಧರಿಸಿ, **ಅನ್ಯರನು**=ತನಗಿಂತ ಭಿನ್ನರಾದ ರಮಾ ಬ್ರಹ್ಮಾದಿಗಳನ್ನು, **ಅಪೇಕ್ಷಿಸದೆ**= ಅಪೇಕ್ಷೆ ಮಾಡದೆ. ಅಂದರೆ, ಸ್ವಪ್ರಯೋಜನ ರಹಿತನಾಗಿ, ಸರ್ವತಂತ್ರ ಸ್ವಾತ್ರಂತ್ಯದಿಂದ, **ಕಾರುಣ್ಯಸಾಗರ**=ಕರುಣಾಸಮುದ್ರನಾದ ಶ್ರೀಪರಮಾತ್ಮನು **ಹಿರಣ್ಯಗರ್ಭನೊಳಿದ್ದು**=ಬ್ರಹ್ಮಾಂತರ್ಗತನಾಗಿ ಬ್ರಹ್ಮರೂಪದಿಂದ ಇದ್ದು, **ಗುಣ**=ಜಡಪ್ರಕೃತ್ಯಾತ್ಮಕ ಗುಣತ್ರಯಗಳ ವೈಷಮ್ಯದಿಂದ, **ಸೃಷ್ಟಿಸುವನು**= ಚರಾಚರಾತ್ಮಕವಾದ ಬ್ರಹ್ಮಾಂಡವನ್ನು ಅಭಿವ್ಯಕ್ತಗೊಳಿಸುವನು, **ಜಗತ್ರಯವ** =ಸ್ವರ್ಗ, ಭೂ, ಪಾತಾಳಗಳೆಂಬ ಲೋಕತ್ರಯಗಳನ್ನು, **ಪಾಲಿಸುವನು**= ಸ್ವಯಂ ವಿಷ್ಣು ರೂಪದಿಂದ ಸಂರಕ್ಷಿಸುವನು. ॥ ೨೪ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅನ್ನಗಳ ಕಲ್ಪನಾ ಮಾಡಿ ಸಂರಕ್ಷಣ ಮಾಡತಕ್ಕ ಭಗವದ್ರೂಪಗಳ ಹೇಳತಾರೆ.

ತ್ರಿವಿಧಜೀವರಿಗೆ ಅನ್ನ ಕೊಡತಕ್ಕವ. ಸರ್ವಾಂತರ್ಗತನಾಗಿ, 'ಅದ ಭಕ್ಷಣೇ' ಇತಿ ಧಾತುಪರ್ಯಾಲೋಚನಯಾ, ದೇಹಾಂತರ್ಗತನಾಗಿ ಅನ್ನವನ್ನು ಭೋಜನ ಮಾಡತಕ್ಕವ. ಅನ್ನಾಂತರ್ಗತನಾಗಿ ತದಾಕಾರದಿಂದ ಅನ್ನಮಯ ಎಂತ ಕರೆಸ ತಕ್ಕವ. ಜೀವರಿಗೆ ಜಡರೂಪವಾದ ಅನ್ನವು, ಪರಮಾತ್ಮ ತನಗೆ ತಾನೇ ಸ್ವಯ ಮಾಗಿ ಅನ್ನನಾಗೇ ಇದ್ದಾನೆ. ಜೀವರಿಗೆ ಜಡಾನ್ನ ಭೋಜನ ಮಾಡಿಸಿ, ತದ್ಗತ ತನ್ನ ಸ್ವಾಖ್ಯ ತಾನು ಭೋಜನ ಮಾಡೋವನಾಗತಾನೆ. ಬ್ರಹ್ಮದೇವರೇ ಆದಿ ಯಾಗಿ ಸಮಸ್ತರಾದ ತ್ರಿವಿಧ ಚೇತನಕ್ಕೆ ಕರುಣಾಸಮದ್ರನಾದ, ರಮಾ ಬ್ರಹ್ಮಾದಿ

ಗಳನ್ನೂ ಅಪೇಕ್ಷಾ ಮಾಡದೇನೆ. ಅನಿರುದ್ಧ, ಪ್ರದ್ಯುಮ್ನಾದಿ ರೂಪಗಳಿಂದ ಅವರವರ ಯೋಗ್ಯತಾನುಸಾರ ಜಡಾನ್ನವನ್ನ ಕಲ್ಪನಾ ಮಾಡೋವನಾಗತಾನೆ. ಮೂಲ ಜಡ ಪ್ರಕೃತ್ಯಾತ್ಮಕ ಗುಣತ್ರಯಗಳಿಂದ ಬ್ರಹ್ಮಾಂತರ್ಗತನಾಗಿ ಬ್ರಹ್ಮ ರೂಪದಿಂದ ಇದ್ದು ಚರಾಚರಾಗಳ ಸೃಷ್ಟಿ ಮಾಡುವನು. ಸ್ವಯಂ ವಿಷ್ಣುರೂಪ ದಿಂದ ಸಂರಕ್ಷಣ ಮಾಡುವನು. ರುದ್ರಾಂತರ್ಗತನಾಗಿ ರುದ್ರರೂಪದಿಂದ ಸಂಹಾರ ಮಾಡುವನು. ಪುನಃ ಪೂರ್ವೋಕ್ತ ಪ್ರಕಾರ ಜಗತ್ರಯಗಳ ಸೃಷ್ಟಿ ಮಾಡುವನು.

**ತಾತ್ಪರ್ಯ**—ಈ ಪ್ರಕಾರ ಅನ್ನ ಕಲ್ಪನಾ ಮಾಡಿ ತನ್ನ ಸ್ವಾಖ್ಯ ಅನ್ನ ವನ್ನು ತಾನು ಭೋಜನಮಾಡಿ, ತದನ್ಯಗಳ ಜೀವರಿಗೆ ವಿಭಾಗ ಮಾಡಿ ಕೊಡತಾ ನೆಂತ ತಾತ್ಪರ್ಯ. ಈ ಪ್ರಕಾರ ಅನ್ನಾದಿಗಳ ಕಲ್ಪನಾ ಮಾಡಿದ ಭಗವದ್ರೂಪಗಳ ತಿಳಿಯಬೇಕು. ಮತ್ತು ಸ್ಥೂಲ ಸೃಷ್ಟಿಯು ಪೂರ್ವೋಕ್ತ ಅನಿರುದ್ಧ ರೂಪ ದಿಂದಲೇ ಆಗೋದಾಗತದೆ. ॥ ೨೪ ॥

**೨. ಭಾವಪ್ರಕಾಶಿಕೆ :**

ಶ್ರೀಪರಮಾತ್ಮನು ಅನಿರುದ್ಧಾದಿ ೫ ರೂಪಗಳಿಂದ ಅನ್ನದ, ಅನ್ನಾದ, ಅನ್ನಮಯ, ಅನ್ನ, ಅನ್ನಕಲ್ಪಕ, ಹೀಗೆ ೫ ಕರ್ಮಗಳನ್ನು ಮಾಡುವನು. ಅನ್ನದ ಅಂದರೆ ಅನ್ನಂ ದದಾತೀತಿ ಅನ್ನದಃ ಎಲ್ಲರಿಗೂ ಅನ್ನವನ್ನು ಕೊಡುವವನಿಗೆ ಹೆಸರು. ಅನಿರುದ್ಧರೂಪದಿಂದ ಎಲ್ಲಾ ಅನ್ನದಾತರಲ್ಲಿದ್ದು ಅನ್ನಪ್ರದನಾಗು ವನು. ಪ್ರದ್ಯುಮ್ನರೂಪಿಯು ಎಲ್ಲಾ ಪ್ರಾಣಿಗಳಲ್ಲಿ ಇದ್ದು ಭೋಜನವನ್ನು ಮಾಡುವನು. ಅನ್ನಮತ್ತೀತಿ ಅನ್ನಾದಃ ಅನ್ನವನ್ನು ಭಕ್ಷಿಸುವುದರಿಂದ ಅನ್ನಾದನೆಂದು ಹೆಸರು. ಆದ್ದರಿಂದ ಪ್ರದ್ಯುಮ್ನನು ಅನ್ನಾದನೆಂದೆನಿಸುವನು. ಅನ್ನಮಯ = ವಾಸುದೇವಮೂರ್ತಿಯು ಅನ್ನಸ್ವರೂಪನಾಗಿರುವನು. ಸ್ವಯ ಮನ್ನಂ ಅಂದರೆ ಅತ್ತೀತ್ಯನ್ನಂ ಎಲ್ಲಾ ಪ್ರಪಂಚವನ್ನೂ ಭಕ್ಷಿಸುವುದರಿಂದ ಅನ್ನನೆಂದು ಹೆಸರು. ಈ ಕಾರ್ಯವು ಸಂಕರ್ಷಣರೂಪದಿಂದ ಆಗುವುದು. ನಾರಾಯಣರೂಪದಿಂದ ಬ್ರಹ್ಮಾದಿ ಸಕಲ ಚೇತನ ಗಣಗಳಿಗೂ ಅನ್ನವನ್ನು ಸೃಷ್ಟಿ ಸುವನು. ಈ ಕಾರ್ಯಗಳನ್ನು ಮಾಡುವುದರಿಂದ ತನಗೆ ಆರಿಂದಲೂ ಯಾವ

ಕಾರ್ಯವೂ ಆಗಬೇಕಾದುದಿಲ್ಲ. ಹಾಗಾದರೆ ಏಕೆ ಈ ಕಾರ್ಯಗಳನ್ನು ಮಾಡು ವನೆಂದರೆ, ಕಾರುಣ್ಯಸಾಗರನೆಂದರು. ಕರುಣಾಸಮುದ್ರನಾದುದರಿಂದಲೇ ಮಾಡವನು. ಅಲ್ಲದೆ ರಜೋಗುಣವನ್ನು ಉಪಾದಾನವಾಗಿ ಸ್ವೀಕರಿಸಿ ಬ್ರಹ್ಮ ದೇವರೊಳಗಿದ್ದು ಜಗತ್ತನ್ನು ಸೃಷ್ಟಿಸುವನು. ಸ್ವಯಂ ವಿಷ್ಣುರೂಪದಿಂದ ಸತ್ವ ಗುಣೋಪಾದಾನದಿಂದ ಪಾಲಿಸುವನು. ತಮೋಗುಣದಿಂದ ರುದ್ರದೇವರಲ್ಲಿದ್ದು ಸಂಹಾರ ಮಾಡುವನು. ಈ ಸೃಷ್ಟ್ಯಾದಿಗಳಿಂದ ಪರಮಾತ್ಮನಿಗೇನೂ ಆಗ ಬೇಕಾದುದಿಲ್ಲ. ಪರಾಪೇಕ್ಷೆ ಇಲ್ಲದೆ ಜನರುದ್ಧಾರಕ್ಕಾಗಿ ಕರುಣಾಸಮುದ್ರನಾದುದ ರಿಂದಲೇ ಈ ಕಾರ್ಯಗಳನ್ನು ಮಾಡುವನೆಂಬ ತಾತ್ಪರ್ಯ. ॥ ೨೪ ॥

## ೩. ಭಾವದರ್ಪಣಾ -

ಅನ್ನದೇತಿ । ಬ್ರಹ್ಮಾದಿ ಚೇತನಕ್ಕೆ ಅನ್ನಕಲ್ಪಕ ಅನ್ನ ನಿರ್ಮಾಣ ಮಾಡಿ ಕೊಡತಕ್ಕವ ಎಂಬರ್ಥ ॥ ೨೪ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಅನ್ನದ ಇತಿ ॥ ಅನ್ನ–ಓಂ ಸಖ್ಯೇತೇ (ತ) ಇಂದ್ರ ವಾಜನೋ ವಾಜಾನಾಂ ಸಪ್ತತಿಂ ಪತಿಂಮಾಭೇಮ ಶವಸಸ್ಪತೇ ॥ ತ್ವಾಮಭಿ ಪ್ರಣೋನುಮೋ ಪೂರ್ವೀರಿಂದ್ರಸ್ಯ ॥ ಓಂ ॥ ಅದ್ಯತೇ ಸರ್ವಪ್ರಾಣಿಭಿಃ ಉಪಜೀವ್ಯತೇ ಇತಿ ಅನ್ನಂ ॥ ಅನ್ನಾದಃ ಓಂ ॥ ಪುರಾಬಿಂಧುರ್ಯುವಾ ಕವಿಃ ಸ್ತೋತೃಭ್ಯಃ ಮಂಹತೇ ಮಘಮ್ ॥ ಜೇತಾರಮಪರಾಜಿತಮ್ ನ ವಿದಸ್ಯಂತ್ಯೂತಯಃ ಯದೀ ವಾಜಸ್ಯ ಗೋಮತಃ ॥ ಓಂ ॥ ಭಕ್ತೋಪಹೃತ ಚರುಪುರೋಡಾಶಾ ದ್ಯನ್ನಂ ಅತ್ತಿ ಇತಿ ಅನ್ನಾದಃ ॥ ಯದ್ವಾ ಅನ್ನಂ ಭಕ್ತಾನಾಂ ಆಸಮಂತಾತ್ ದದಾತಿ ಇತಿ ಅನ್ನಾದಃ ॥ ಅದ್ಯತ್ವಾತ್ತೃತ್ವಪ್ರಾಚುರ್ಯಾತ್ ಅನ್ನಮಯಃ ಅತ್ತಿ ಇತ್ಯನ್ನಮ್ । ಉತ್ತರೇಣ ಅನ್ವಯಃ ॥ ಯಸ್ಯ ಬ್ರಹ್ಮ ಚ ಕ್ಷತ್ರಂ (ಚೋಭೇ ಓದನಂ) ಚ ಇತಿ ಶ್ರುತೇಃ ॥ ಕಲ್ಪಕಃ–ಕರ್ತಾ । ಪಾಲಿಸುವ–ವಿಷ್ಣ್ವಾತ್ಮನಾ ॥ ೨೪ ॥

## ಕನ್ನಡಾರ್ಥ

ಅನ್ನ–ಇದು ವಿಷ್ಣುಸಹಸ್ರಾಂತರ್ಗತನಾಮ, ಸರ್ವ ಪ್ರಾಣಿಗಳಿಂದ

ಉಪಜೀವಿಸಲ್ಪಡುವದರಿಂದ–ಸರ್ವರು ಹರಿಯನ್ನು ಉಪಜೀವಿಸುವುದರಿಂದ ಅನ್ನವೆಂದು ಪರಮಾತ್ಮನ ಹೆಸರು. ಅನ್ನಾದಃ–ಭಕ್ತರಿಂದ ಸಮರ್ಪಿಸಲ್ಪಟ್ಟ ಹೋಮ ಮುಂತಾದುವುಗಳಲ್ಲಿ ಸುರುವಲ್ಪಟ್ಟ ಚರು–ಪುರೋಡಾಶ ಮುಂತಾದ ಅನ್ನ (ಹವಿರ್ದ್ರವ್ಯ) ವನ್ನು ಸ್ವೀಕರಿಸುವವನು ಎಂದು ಬೃಹತೀಮಂತ್ರಾನುಗುಣ ವಾದ ಈ ವಿಷ್ಣುನಾಮಾರ್ಥ. ಸರ್ವಪ್ರಾಣಿಗಳಿಂದ ಉಪಜಿವಿಸಲ್ಪಡುವದು. ಸಮಸ್ತ ಪ್ರಪಂಚವನ್ನು ಸಂಹರಿಸುವುದು. ಪ್ರಚುರವಾದ ಅನ್ನವಿರುವದು–ಮಹಾಭೋಗವಿರುವದು. ಈ ಧರ್ಮಗಳಿಂದ ಪರಮಾತ್ಮನಿಗೆ ಅನ್ನಮಯನೆಂದು ಕರೆಯುತ್ತಾರೆ. ಜಗತ್ತನ್ನು ಸಂಹರಿಸುವದರಿಂದ ಪರಮಾತ್ಮನು ಅನ್ನನೆನಿಸಿರುತ್ತಾನೆ. ಎಲ್ಲ ಭಕ್ತರಿಗೆ ಅನ್ನವನ್ನು ಚೆನ್ನಾಗಿ ಒದಗಿಸಿಕೊಡುವದರಿಂದಲೂ ಅನ್ನಾದ ಎಂದು ಹೇಳುತ್ತಾರೆ.

ಯಸ್ಯ ಬ್ರಹ್ಮಚಕ್ಷತ್ರಂ ಚ ಉಭೇ ಓದನಂ ಚ ಭವತಃ–ಬ್ರಹ್ಮಕ್ಷತ್ರ ಮುಂತಾದ ವರ್ಣವಿಶಿಷ್ಟವಾದುದೆಲ್ಲವೂ ಪರಮಾತ್ಮನಿಗೆ ಅನ್ನವೆನಿಸುವದು ಎಂದು ಶ್ರುತಿಯು ಹೇಳುತ್ತದೆ. ಆದುದರಿಂದ ಅನ್ನವೆನ್ನುತ್ತಾರೆ. ಸೃಷ್ಟಿ–ಸ್ಥಿತಿ–ಲಯಗಳಿಗನುಸಾರವಾಗಿ, ಲಯ ಮಾಡುವವನೆಂದು ಅನ್ನಶಬ್ದವಾಚ್ಯ ಸಂಕರ್ಷಣರೂಪವನ್ನು ತಿಳಿಯಬೇಕು. ವಿಷ್ಣುರೂಪದಿಂದ ಸಂರಕ್ಷಿಸುವನು. ಅನಿರುದ್ಧರೂಪದಿಂದ ಸೃಷ್ಟಿಮಾಡುವ. ॥೨೪॥

**ಶ್ರೀ ಶ್ರೀಗುರುಹೃದಯಪ್ರಕಾಶಿಕೆ**

ಅನ್ನ, ಅನ್ನದ, ಅನ್ನಾದ, ಅನ್ನಕಲ್ಪಕನೆಂಬ ಅನಿರುದ್ಧಾದಿ ಚತುರ್ಮೂರ್ತಿ ಸ್ಮರಣೋಪಾಸನೆ ಸೃಷ್ಟ್ಯಾದಷ್ಟ ಕರ್ತೃತ್ವ ಸಹ ತಿಳಿಸುತ್ತಾರೆ, ಅನ್ನದ ಎಂದು, ಸರ್ವರಿಗೂನೂ ತತ್ತದ್ಯೋಗ್ಯ ಅನ್ನ ಕೊಡುವ ಅನಿರುದ್ಧನು ಅನ್ನದನೆಂದು ಕರೆಸುವನು. ಭೋಜನಮಾಡುವ ಸರ್ವರಲ್ಲೂ ತಚ್ಛಕ್ತಿ ವ್ಯಕ್ತ ಮಾಡುವ ಪ್ರದ್ಯುಮ್ನರೂಪನು ಅನ್ನಾದ ಎಂದರೆ ಅನ್ನಭೋಕ್ತೃ ಎನಿಸುವನು. ವಾಸದೇವಾಶ್ಚಾನ್ನ ಸಂಸ್ಥಃ ಎಂಬ ವಚನಾನುಸಾರ, ಪ್ರಚುರಾನ್ನರ ಉಳ್ಳದ್ದರಿಂದ ವಾಸುದೇವನು ಅನ್ನಮಯನೆಂದು ಕರೆಸುವನು. ಸರ್ವೋಪಜೀವ್ಯನೆಂಬ ಆಶ್ರಯನಾದ್ದರಿಂದ ಸ್ವಯಂ ಅನ್ನಶಬ್ದವಾಚ್ಯನು. ತತ್ತದ್ರಸ ವಿಭಾಗ ಮಾಡಿ

ಕೊಡುವ ಸಂಕರ್ಷಣರೂಪನು ಬ್ರಹ್ಮಾದಿ ಸರ್ವಚೇತನಕ್ಕೆ ಅನ್ನಕಲ್ಪಕನೆನಿಸುವನು. ಅಪರಿಮಿತ ಕರುಣಾಸಮುದ್ರನು, ಇತರ ಸಹಾಯಾಪೇಕ್ಷಿಸದೆ ತಾನೇ ಹಿರಣ್ಯ ಗರ್ಭನೆಂಬ ಬ್ರಹ್ಮನಲ್ಲಿದ್ದು ಜಗತ್ಸೃಷ್ಟಿ ಮಾಡುವನು. ಸ್ವಯಂ ವಿಷ್ಣುರೂಪ ದಿಂದ ರಕ್ಷಿಸುವನು. ರುದ್ರದೇವರಲ್ಲಿದ್ದು ಸಂಹರಿಸುವನು. ಇದರಿಂದ,

**ವಿಶ್ವಂ ವೈ ಬ್ರಹ್ಮ ತನ್ಮಾತ್ರಾ ಸಂಸ್ಥಿತಂ ವಿಷ್ಣುಮಾಯಯಾ ।**
**ಈಶ್ವರೇಣ ಪರಿಚ್ಛಿನ್ನಂ ಕಾಲೇನಾವ್ಯಕ್ತಮೂರ್ತಿನಾ ॥**

ಎಂಬ ಭಾಗವತಾರ್ಥವು ವಿವರಿಸ್ಪಟ್ಟಿತು ॥ ೨೪ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಸರ್ವಶಕ್ತನೂ, ಸರ್ವೇಶ್ವರನೂ ಆದ ಶ್ರೀಪರಮಾತ್ಮನು ಅನಿರುದ್ಧಾದಿ ಪಂಚರೂಪಗಳಿಂದ ಅನ್ನದ, ಅನ್ನಾದ, ಅನ್ನಮಯ, ಅನ್ನ ಮತ್ತು ಅನ್ನಕಲ್ಪಕ ಈ ಪ್ರಕಾರ ಪಂಚಶಬ್ದವಾಚ್ಯನಾಗಿದ್ದಾನೆ.

ಸರ್ವಜೀವರಿಗೂ ಅನ್ನವನ್ನು ಕೊಡುವುದರಿಂದ, ಶ್ರೀಪರಮಾತ್ಮನಿಗೆ ಅನ್ನದ ಎಂದು ಹೆಸರು. ಅನಿರುದ್ಧರೂಪದಿಂದ ಅನ್ನದಾತರಲ್ಲಿ ವಿದ್ಯಮಾನ ನಾಗಿದ್ದು, ಅನ್ನಪ್ರದನಾಗಿ, ಅನ್ನದನೆನಿಸುವನು.

ಸರ್ವಚೇತನರಲ್ಲಿ ಅಂತರ್ಯಾಮಿಯಾಗಿದ್ದು, ಭೋಜನ ಮಾಡುವನಾದ್ದ ರಿಂದ, ಶ್ರೀಪರಮಾತ್ಮನಿಗೆ ಅನ್ನಾದ ಎಂತ ನಾಮ. ಅದ ಭಕ್ಷಣೇ–ಎಂಬ ಧಾತು ವಿನಿಂದ ನಿಷ್ಪನ್ನವಾಗಿರುವ ಶಬ್ದಾರ್ಥದಂತೆ, ದೇಹಾಂತರ್ಗತನಾಗಿ ಪ್ರದ್ಯುಮ್ನ ರೂಪೀ ಶ್ರೀಹರಿಯು ಅನ್ನಾದನೆನಿಸಿದ್ದಾನೆ. ಅನ್ನಮತ್ತೀತಿ ಅನ್ನಾದಃ–ಎಂಬ ಶಬ್ದಾರ್ಥದ ಪ್ರಕಾರ. ಅನ್ನವನ್ನು ಭಕ್ಷಿಸುವುದರಿಂದ, ಅನ್ನಾದನಾಮಕನು.

ಸ್ವಯಂ ಅನ್ನಸ್ವರೂಪನಾಗಿರುವುದರಿಂದ, ವಾಸುದೇವರೂಪೀ ಶ್ರೀಪರಮಾತ್ಮನು ಅನ್ನಮಯನೆನಿಸಿದ್ದಾನೆ.

ಅತ್ತೀತ್ಯನ್ನಂ–ಎಂಬ ವಚನಾನುಸಾರ, ಸಮಗ್ರ ಜಗತ್ತನ್ನು ಭಕ್ಷಿಸುವುದ ರಿಂದ, ಅನ್ನನೆಂದು ವಿಖ್ಯಾತನಾಗಿದ್ದಾನೆ. ಭೋಗ್ಯವಸ್ತುಗಳು, ಭೋಜನ

ಪದಾರ್ಥಗಳು ಇವುಗಳಲ್ಲಿ ಅಂತರ್ಗತ ರೂಪದಿಂದಿರುವ ಸ್ವರಸರೂಪವಾದ ಸ್ವಾಖ್ಯಗಳನ್ನು ಭೋಜನ ಮಾಡುವುದರಿಂದ, ಅನ್ನ ಎಂತ ನಾಮ. ಸಂಕರ್ಷಣ ರೂಪದಿಂದ ಅನ್ನನಾಗಿದ್ದಾನೆ.

ಇಂತು ಶ್ರೀಪರಮಾತ್ಮನು ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವರೂಪಗಳಿಂದ ಸಕಲ ಜೀವರ ದೇಹಾಂತರ್ಗತನಾಗಿದ್ದು, ಕ್ರಮವಾಗಿ ಅನ್ನದ-ಅನ್ನಾದ-ಅನ್ನಮಯ-ಅನ್ನ ಎಂಬ ನಾಮ ಚತುಷ್ಟಯಗಳಿಂದ ಬ್ರಹ್ಮನೇ ಆದಿಯಾಗಿ ಸಮಸ್ತ ಜೀವಕೋಟಿಗೆ ಅನ್ನಕಲ್ಪಕನಾಗಿದ್ದಾನೆ. ನಾರಾಯಣ ರೂಪದಿಂದ ಸಕಲ ಚೇತನರಿಗೆ ಅನ್ನವನ್ನು ಸೃಷ್ಟಿಸುವನು. ಇದರಿಂದ ಅನ್ನ ಕಲ್ಪಕನೆನಿಸಿದ್ದಾನೆ.

ಸೃಷ್ಟಿ-ಸ್ಥಿತಿ-ಲಯಾದಿ ಕಾರ್ಯಗಳನ್ನು ನಿರಾಯಾಸನಾಗಿ ನಿರ್ವಹಿಸುವ ಸರ್ವಶಕ್ತನು. ಪರಾಪೇಕ್ಷರಹಿತನು. ಜಗದ್ವ್ಯಾಪಾರ ಕಾರ್ಯಗಳಿಗೆ ಇತರರ ಸಹಾಯ ಅವನಿಗೆ ಬೇಕಿಲ್ಲ. ಸರ್ವತಂತ್ರ ಸ್ವತಂತ್ರನಾಗಿದ್ದು ತನ್ನ ಇಚ್ಛಾ ಮಾತ್ರದಿಂದ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವನು.

ಅಂತಹ ದಯಾಸಾಗರನಾದ ದಾಮೋದರನು ಹಿರಣ್ಯಗರ್ಭನಾಮಕರಾದ (ಶ್ರೀಪದ್ಮನಾಭರೂಪೀ ಪರಮಾತ್ಮನ ಸುವರ್ಣಾತ್ಮಕವಾದ ನಾಭಿಕಮಲದಲ್ಲಿ ಉದ್ಭವರಾದ ಬ್ರಹ್ಮದೇವರಿಗೆ "ಹಿರಣ್ಯಗರ್ಭ" ರೆಂದುನಾಮ) ಬ್ರಹ್ಮದೇವರಲ್ಲಿ ಅಜನಾಮಕನಾಗಿ ಅಂತರ್ಯಾಮಿಯಾಗಿದ್ದು ಜಗತ್ತನ್ನು ತ್ರಿಗುಣಗಳ ವೈಷಮ್ಯದಿಂದ ಸೃಷ್ಟಿಸುವನು.

ತನ್ನಿಂದ ಸೃಷ್ಟವಾದ ಲೋಕತ್ರಯಯುಕ್ತವಾದ ಜಗತ್ತನ್ನು ಸ್ವಯಂ ವಿಷ್ಣುರೂಪದಿಂದ ಸಂರಕ್ಷಿಸುವನು. ॥ ೨೪ ॥

## ಪದ್ಯ ೨೫

**ಮೂಲ**

ತ್ರಿಪದ ತ್ರಿದಶಾಧ್ಯಕ್ಷ ತ್ರಿಸ್ಥ ।
ತ್ರಿಪಥಗಾಮಿನಿಪಿತ ತ್ರಿವಿಕ್ರಮ ।
ಕೃಪಣವತ್ಸಲ ಕುವಲಯದಳಶ್ಯಾಮ ನಿಸ್ಸೀಮ ॥
ಅಪರಿಮಿತ ಚಿತ್ಸುಖಗುಣಾತ್ಮಕ ।
ವಪುಷ ವೈಕುಂಠಾದಿಲೋಕಾ ।
ಧಿಪ ತ್ರಯೀಮಯ ತನ್ನವರ ನಿಷ್ಕಪಟದಿಂ ಪೊರೆವ ॥ ೨೫ ॥

**ಅವತರಣಿಕೆ :–**

ಅನಂತ ಕಲ್ಯಾಣ ಗುಣಗಣಪರಿಪೂರ್ಣನಾದ ಶ್ರೀಪರಮಾತ್ಮನ ಗುಣಾನು ವರ್ಣನೆ ಮಾಡುತ್ತಾರೆ.

**ಪ್ರತಿಪದಾರ್ಥ :–**

**ತ್ರಿಪದ**= ಲಿಂಗಭಂಗಾನಂತರ ತ್ರಿವಿಧ ಜೀವರಿಗೆ ಮೂರು ಪ್ರಕಾರವಾದ ಅವರವರ ಗತಿಗಳನ್ನು (ಪದ-ಸ್ಥಾನ) ಕೊಡುವ, **ತ್ರಿದಶ**= ದೇವತಾವರ್ಗದಲ್ಲಿ **ಅಧ್ಯಕ್ಷ**=ಶ್ರೇಷ್ಠನಾದ (ಸರ್ವೋತ್ತಮನಾದ), **ತ್ರಿಸ್ಥ**=ಶ್ವೇತದ್ವೀಪ, ಅನಂತಾಸನ ಮತ್ತು ವೈಕುಂಠ ಎಂಬ ಮೋಕ್ಷ ತ್ರಿಧಾಮಗಳಲ್ಲಿ ಇರತಕ್ಕ, **ತ್ರಿಪಥ ಗಾಮಿನಿ**=ಲೋಕತ್ರಯಗಳಲ್ಲಿ ಹರಿಯುವ ಗಂಗಾದೇವಿಗೆ, **ಪಿತ**=ತಂದೆ ಯಾದ, **ತ್ರಿವಿಕ್ರಮ**= ಭುವನತ್ರಯಗಳನ್ನು ಅಳೆದ ತ್ರಿವಿಕ್ರಮರೂಪೀ ಶ್ರೀಪರಮಾತ್ಮನು, **ಕೃಪಣವತ್ಸಲ**= ಶರಣಾಗತರಾದವರಲ್ಲಿ ವಾತ್ಸಲ್ಯ ಭಾವವುಳ್ಳವ, **ಕುವಲಯದಳಶ್ಯಾಮ**=ನೀಲೋತ್ಪಲಪುಷ್ಪದ ದಳಗಳಂತೆ ಶ್ಯಾಮಲವರ್ಣ ವಿಶಿಷ್ಟನಾದ, **ನಿಸ್ಸೀಮ**=ಅತ್ಯಂತ ಶಕ್ತಿವಂತನಾದ (ಸಮಾ ಭ್ಯಧಿಕಶೂನ್ಯನಾದ) **ಅಪರಿಮಿತ**=ಅಪಾರವಾದ (ಅಗಣಿತ) **ಚಿತ್ಸುಖ**= ಜ್ಞಾನ, ಆನಂದಾದಿ **ಗುಣಾತ್ಮಕ**=ಅನಂತಕಲ್ಯಾಣಗುಣಸಮೂಹಗಳಿಂದ

ಪ್ರಚುರನಾಗಿ, ಪೂರ್ಣನಾಗಿರತಕ್ಕ, **ವಪುಷ**=ಶರೀರವುಳ್ಳವನು, **ವೈಕುಂಠಾದಿ**-ವೈಕುಂಠವೇ ಮೊದಲಾದ, **ಲೋಕಾಧಿಪ**=ಮೋಕ್ಷ ಲೋಕಗಳಿಗೆ ಪ್ರಭುವಾದ **ತ್ರಯೀಮಯ**=ಅನಂತ ವೇದಗಳಿಂದ ಪ್ರತಿಪಾದ್ಯನಾದ, **ನಿಷ್ಕಪಟದಿಂ**=ಕಾಪಟ್ಯರಹಿತರಾಗಿ, ಸಮೀಚೀನವಾದ ದೃಡಭಕ್ತಿಯಿಂದ ಭಜಿಸುವ, **ತನ್ನವರ**=ಸ್ವಭಕ್ತವರ್ಗವನ್ನು, **ಪೊರೆವ**=ಸದಾ ಸಂರಕ್ಷಿಸುವವನು ॥ ೨೫ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪರಮಾತ್ಮನ ಗುಣಾನುವರ್ಣನೆ ಮಾಡುತ್ತಾರೆ.

ಲಿಂಗಭಂಗಾನಂತರ ತ್ರಿವಿಧ ಜೀವರಿಗೆ ತ್ರಿವಿಧವಾದ ಪದ ಎಂದರೆ, ನಚ ಪುನರಾವರ್ತಿ ಪದಗಳ ಕೊಡತಕ್ಕವ, ದೇವತೆಗಳೊಳಗೆ ಶ್ರೇಷ್ಠನಾದವ, ಸರ್ವೋತ್ತಮನಾದವ, ಅನಂತಾಸನ ಶ್ವೇತದ್ವೀಪ ವೈಕುಂಠ, ಈ ಮೂರು ಸ್ಥಳಗಳಲ್ಲಿ ಇರತಕ್ಕವ. ತ್ರಿವಿಧ ಜೀವಾಂತರ್ಗತನಾಗಿ ಬಿಂಬನಾಗಿ ಇರತಕ್ಕವ, ಭಾಗೀರಥೀದೇವಿಯವರಿಗೆ ತಂದೆಯಾದವ, ಮೂರು ವಿಧ ಜ್ಞಾನ ಮಾರ್ಗದಿಂದ ಸಂಚಾರ ಮಾಡತಕ್ಕ ತ್ರಿವಿಧರಿಗೆ ತಂದೆಯಾದವ, ತ್ರಿವಿಕ್ರಮರೂಪಿಯಾದವ ನೀಲೋತ್ಪಲದೋಪಾದಿಯಲ್ಲಿ ಶ್ಯಾಮವರ್ಣೋಪೇತನಾದವ, ಆದ್ಯಂತ ಶೂನ್ಯನಾದವ, ಆನಂದವೇನು, ಅಪಾರವಾದ ಜ್ಞಾನವೇನು, ತನಗೆ ಅಭಿನ್ನವಾದ ಸತ್ತಾದಿಗುಣಗಳೇನು ಇವುಗಳಿಂದ ಪ್ರಚುರನಾದ ಶರೀರವುಳ್ಳವ. ವೈಕುಂಠಾದಿ ಲೋಕಗಳಿಗೆ ಸ್ವಾಮಿಯಾದವನು, ವೇದಗಳಿಂದ ತಿಳಿಸಿಕೊಳ್ಳಲ್ಪಟ್ಟ ಇಂಥಾ ಪರಮಾತ್ಮ ಕಪಟದಿಂದ ರಹಿತರಾಗಿ ಭಜಿಸತಕ್ಕ ತನ್ನ ಭಕ್ತರನ್ನು, ಪುಣ್ಯವೇ ಮಾಡೋದರಲ್ಲಿ ಲೋಭವುಳ್ಳಾಂಥಾ ಭಕ್ತರಲ್ಲಿ ಸ್ನೇಹವುಳ್ಳವ, ಇಂಥಾ ಪರಮಾತ್ಮ ಸಂರಕ್ಷಿಸುವ.

**ವಿಶೇಷಾರ್ಥ :-** ಈ ನುಡಿಯಲ್ಲಿ ನಿಷ್ಕಪಟರಾದ ಭಕ್ತರ ಪಾಲಿಸತಾನೆ ಎಂತ ಹೇಳತಾರೆ. ಬ್ರಹ್ಮರೂಪದಿಂದ ಬ್ರಹ್ಮಾಂತರ್ಗತನಾಗಿ ಸೃಷ್ಟಿಯು, ಸಾಕ್ಷಾತ್ ವಿಷ್ಣುರೂಪ ಧರಿಸಿ ಪಾಲನೆ ಮಾಡತಾನೆ ಎಂತ ಹೇಳಿ, ಸಂಹಾರವೂ

ಮಾಡತಾನೆ ಅಂತ ಹೇಳತಾರೆ. ತ್ರಿಪದ ಎಂದರೆ; ಬ್ರಹ್ಮಾಂಡದಲ್ಲಿ ವಿದ್ಯಮಾನ ರಾದ ಯಾವತ್ತೂ ಜೀವರಿಗೆ ತ್ರಿಪದವನ್ನು ಕೊಡತಾನೆ, ಪ್ರಳಯಾನಂತರದಲ್ಲಿ ಎಂತ ತಾತ್ಪರ್ಯ. ಇದರಿಂದ ಪ್ರಳಯವೂ ಹೇಳಿದಂತಾಯಿತು. ಪ್ರಳಯಕ್ಕೆ ದಾವ ಭಗವದ್ರೂಪ ಎಂದರೆ ಸಂಕರ್ಷಣನು ಜಗತ್ಪ್ರಳಯ ಮಾಡತಾನೆ. ತದನಂತರ ತ್ರಿವಿಧಜೀವರಿಗೆ ತ್ರಿಪದ ಎಂದರೆ, ಅವರವರ ಯೋಗ್ಯತಾನುಸಾರ ತ್ರಿವಿಧ ಜೀವರಿಗೆ, ಮುಕ್ತಿಯೋಗ್ಯರಾದವರು ಸುಖಸ್ವರೂಪರಾದ ಕಡಿಯಿಂದ ವೈಕುಂಠಾದಿ ಸುಖಸ್ಥಾನಪದವು; ನಿತ್ಯಸಂಸಾರಿಗಳಿಗೆ ಮಿಶ್ರವಾದ ಸುಖದುಃಖ ಏಕಕಾಲಾವಚ್ಛೇದೇನ ಭೋಗಿಸತಕ್ಕ ಪದ ಎಂತ ತಾತ್ಪರ್ಯ. ತಮೋಯೋಗ್ಯರು ದುಃಖಸ್ವರೂಪವುಳ್ಳವರಾದಕಡಿಯಿಂದ ಅಧಂತಮಾದಿ ದುಃಖಸ್ಥಾನಪದವು. ಈ ಪ್ರಕಾರ ತ್ರಿಪದ ಎಂದರೆ, ತ್ರಿ-ಮೂರಾದಂಥ, ಪ ಎಂದರೆ ಪಾಲನರೂಪವಾದ ಸ್ಥಾನವನ್ನ, ದ ಎಂದರೆ ಕೊಟ್ಟವನಾಗಿ, ಪ ಎಂದರೆ ಅವರವರ ಯೋಗ್ಯತಾನುಸಾರ ಪಾಲನೆ ಮಾಡತಾನೆ. ಪದ ಎಂಬುದರನ್ನ ಆವರ್ತನ ಮಾಡಿಕೊಂಡು ಒಂದಾವರ್ತಿ ಪದ ಎಂತ ಏಕ ಪದವಾಗಿಯೂ, ಮತ್ತೊಂದಾವರ್ತಿ ಪ, ದ, ಎಂತ ಭಿನ್ನ ಪದವಾಗಿಯೂ ಮಾಡಿಕೋಬೇಕು. ತ್ರಿದಶಾಧ್ಯಕ್ಷ, ತ್ರಿ ಎಂದರೆ ತ್ರಿವಿಧಜೀವರಿಗೆ ದಶಾ ಯೋಗ್ಯತಾ ತ್ರಿವಿಧವಾದವ ಪರಮಾತ್ಮನೆ ಹೊರತು ಅನ್ಯರು ದಾರೂ ಇಲ್ಲ ಎಂತ ತಾತ್ಪರ್ಯ. ತ್ರಿಸ್ಥ ಎಂದರೆ, ತ್ರಿವಿಧಜೀವರಲ್ಲಿ ತ್ರಿವಿಧರೂಪದಿಂದ, ಸ್ಥ-ಇರತಕ್ಕವ. ಆ ರೂಪಗಳು ದಾವವೆಂದರೆ, ವಾಸುದೇವರೂಪದಿಂದ ಮುಕ್ತರಲ್ಲಿ, ಸಂಕರ್ಷಣರೂಪದಿಂವ ತಮೋ ಯೋಗ್ಯರಲ್ಲಿ, ನಿತ್ಯ ಸಂಸಾರಿಗಳಲ್ಲಿ ಪ್ರದ್ಯುಮ್ನ ರೂಪದಿಂದ ಇದ್ದಾನೆ. ಆಯಾ ಭಗವದ್ರೂಪಗಳಿಗೆ ಆಯಾ ಜೀವವರ್ಣವೇ ಇರುತ್ತದೆ. ಆಯಾ ಜೀವ ವರ್ಣಗಳು ಎಂಥಾವೆಂದರೆ, ಮುಕ್ತಿಯೋಗ್ಯರು ಶುಭ್ರವರ್ಣ, ನಿತ್ಯಸಂಸಾರಿಗು ರಕ್ತವರ್ಣ, ತಮೋಯೋಗ್ಯರು ಕಪ್ಪುವರ್ಣ, ಈ ಪ್ರಕಾರ ಸ್ವರೂಪದೇಹವರ್ಣ ಉಳ್ಳವರು. ತ್ರಿಪಥಗಾಮಿನಿಪಿತ ಎಂದರೆ, ತ್ರಿ ಎಂದರೆ ಮೂರಾದಂಥಾ, ಪಥ ಜ್ಞಾನ ಮಾರ್ಗದಿಂದ, ಗಾಮಿನಿ-ನಡಿಯುತಕ್ಕವರು. ತ್ರಿವಿಧಜ್ಞಾನ ದಾವದೆಂದರೆ ಮುಕ್ತಿಯೋಗ್ಯರದು ಹರಿ ಸರ್ವೋತ್ತಮ ವಾಯುಜೀವೋತ್ತಮ ತಾರತಮ್ಯ ಪಂಚಭೇದ ಸತ್ಯವೆಂಬ ಭೇದಮಾರ್ಗ. ನಿತ್ಯ ಸಂಸಾರಿಗಳದು ಪಂಚಭೇದ ಅಂಗೀಕರಿಸಿ ತಾರತಮ್ಯ ಅಂಗೀಕರಿಸದ ಮಿಶ್ರಜ್ಞಾನ. ತಮೋಯೋಗ್ಯರು ಮಿಥ್ಯಾಮಾರ್ಗ,

ಈ ಮೂರು ಮಾರ್ಗದಿಂದ ನಡೆಯತಕ್ಕವರಿಗೆ, ಪಿತ-ತಂದೆಯಾದವ ಪರಮಾತ್ಮ ಎಂತ ತಾತ್ಪರ್ಯ, ಇಂಥಾಪರಮಾತ್ಮ ದಾರಲ್ಲಿ ಅನುಗ್ರಹ ಮಾಡತಾನೆಂದರೆ, ಕೃಪಣ ವತ್ಸಲ–ಕೃಪಣ–ಲೋಭಿ, ಭೇದಜ್ಞಾನಪೂರ್ವಕ ಜ್ಞಾನ ಭಕ್ತಿ ವೈರಾಗ್ಯಾದಿಗಳ ವೆಚ್ಚ ಮಾಡದೇ, ತಾನು ಮಾಡಿದ ತಪಸ್ಸನ್ನು ವೆಚ್ಚ ಮಾಡದೆ, ಅದರನ್ನೆ ಆರ್ಜನ ಮಾಡಿ ಸಕಾಮದಲ್ಲಿ ವೆಚ್ಚ ಮಾಡದೆ ಪರಮಾತ್ಮಗೆ ಅರ್ಪಿಸತಕ್ಕ ಇಂಥಾ ಕೃಪಣ ದಾವನೋ ಅವನಲ್ಲಿ, ವತ್ಸಲ-ಎಂದರೆ ವಾತ್ಸಲ್ಯ ಉಳ್ಳವ ಪರಮಾತ್ಮ. ಕುವಲಯದಳಶ್ಯಾಮ—ನೀಲೋತ್ಪಲವರ್ಣದೋಪಾದಿಯಲ್ಲಿ ಶ್ಯಾಮವರ್ಣ ಉಳ್ಳವ ಎಂದರೆ, ಇಂಥಾವರ್ಣವುಳ್ಳವ ಶ್ರೀಕೃಷ್ಣ. ಕಲಿಯುಗದಲ್ಲಿ ಕೃಷ್ಣರೂಪವನ್ನ ಭಜಿಸಬೇಕೆಂತ ತಾತ್ಪರ್ಯ. ನಿಸ್ಸೀಮ–ಸರ್ವಪ್ರಾಣಿಗಳಿಗೂ ಸೀಮಾ ಉಂಟು. ಇವಗೆ ಸೀಮಾ ಇಲ್ಲ. ಎಂದರೆ ಆದ್ಯಂತವಿಲ್ಲ. ಅಪರಿಮಿತ ಎಂದರೆ, ರೂಪವೇನು, ಗುಣವೇನು, ಶಕ್ತಿಯೇನು, ಇನ್ನೂ ಯಾವತ್ತರಿಂದಲೂ ಮಿತರಹಿತನಾದ ಪರಮಾತ್ಮ ಚಿತ್ಸುಖ ಎಂದರೆ ಜ್ಞಾನಸುಖ ಎಂದರೆ ಸಂತೋಷ ಐಶ್ವರ್ಯಗುಣ ಎಂದರೆ ನಿರ್ದೋಷವಾದ ಕಲ್ಯಾಣಗುಣಗಳು; ಆತ್ಮಾ ಎಂದರೆ ಇವುಗಳಿಂದಲೇ ವಪುಷ ಎಂದರೆ, ಶರೀರ ಉಳ್ಳವ. ವೈಕುಂಠಾದಿಲೋಕಾಧಿಪ ಎಂದರೆ, ವೈಕುಂಠ ಶ್ವೇತದ್ವೀಪ ಅನಂತಾಸನ ಈ ಮೂರುಲೋಕಕ್ಕೂ, ತದನ್ಯವಾದ ಹದಿನಾಲ್ಕು ಲೋಕಗಳಿಗೂ ತದ್ಗತ ಪ್ರಾಣಿಗಳಿಗೂ ಅಧಿಪತಿ ಎಂದರೆ ಯಜಮಾನನಾದವ. ತ್ರಯೀಮಯ ಎಂದರೆ ವೇದಪ್ರತಿಪಾದ್ಯನಾಗಿ ಇರತಕ್ಕವ. ಇಂಥಾ ಪರಮಾತ್ಮ ತನ್ನವರ, ನಿಷ್ಕಪಟದಿಂ ಪೊರೆವ ಎಂದರೆ ನಿಷ್ಕಾಪಟ್ಯದಿಂದ ತನ್ನ ನಂಬಿದ ಭಕ್ತರ ಸಂರಕ್ಷಿಸತಾನೆ. ನಿಷ್ಕಾಪಟ್ಯದಿಂದ ಪರಮಾತ್ಮನ ಪಾದ ನಂಬಬೇಕೆಂಬ ತಾತ್ಪರ್ಯ. ತಮೋಯೋಗ್ಯರಲ್ಲಿ ಇರತಕ್ಕ ಪರಮಾತ್ಮ, ನಿತ್ಯಸಂಸಾರಿಗಳು ಇವರ ಅಂತರ್ಗತ ಪರಮಾತ್ಮನ ವರ್ಣಗಳು ಮ್ಯಾಲೆ ಹೇಳಲ್ಪಟ್ಟಿವೆ. ॥ ೨೫ ॥

**೨. ಭಾವಪ್ರಕಾಶಿಕೆ**

ತ್ರಿಪದಾಗಾಯತ್ರಿ ಎಂದು ಪ್ರಸಿದ್ಧವಾಗಿರುವುದು. ಅಂತಹ ಗಾಯತ್ರೀ ಪ್ರತಿಪಾದ್ಯನು, ತ್ರಿದಶಾ ವಿಬುಧಾಃ ಸುರಾಃ ಎಂದು ಅಮರ ಇರುವುದರಿಂದ ತ್ರಿದಶ ಅಂದರೆ ದೇವತೆಗಳು. ಅವರಿಗೆ ಅಧ್ಯಕ್ಷ. ಗಂಗಾ ತ್ರಿಪಥಗಾಮಿನಿ ಎಂಬ ಪ್ರಮಾಣಾನುಸಾರವಾಗಿ ಗಂಗೆಯನ್ನು ಪಡೆದವನೆಂದರ್ಥ. ವಾಮನಾ

ವತಾರ ಮಾಡಿ ಬಲಿಯನ್ನು ಮೂರಡಿ ಭೂಮಿಯನ್ನು ಬೇಡಿದಾಗ ಮೂರು ಹೆಜ್ಜೆಗಳಿಂದ ೧೪ ಲೋಕಗಳನ್ನು ಅಳೆದವನು. ಕ್ರಮ ಅಂದರೆ ಹೆಜ್ಜೆಗೆ ಹೆಸರು. ಆದ್ದರಿಂದ ತ್ರಿವಿಕ್ರಮ ಎಂದು ಹೆಸರಾಯಿತು. ಕೃಪಣ ಎಂದು ಲೋಭಿಗಳಿಗೆ ಹೇಳುವುದುಂಟು. ಕೃಪಣವತ್ಸಲ ಅಂದರೆ ಲೋಭಿಗಳಲ್ಲಿ ವಾತ್ಸಲ್ಯ ಉಳ್ಳವ ನೆಂದರ್ಥವಲ್ಲ. ಭಾಗವತ ಏಕಾದಶಸ್ಕಂಧದಲ್ಲಿ ಕೃಪಣನು ಯಾರೆಂದು ಉದ್ಧವನು ಪ್ರಶ್ನೆ ಮಾಡಿದಾಗ, ಶ್ರೀಪರಮಾತ್ಮನು ಹೇಳಿದುದು ಕೃಪಣೋಯೋಽ ಜಿತೇಂದ್ರಿಯಃ ಎಂದು ೧೯ನೆಯ ಅಧ್ಯಾಯ ೪೫ನೆಯ ಶ್ಲೋಕದಲ್ಲಿ ವಿವರ ಮಾಡಿರುವರು. ಈ ಶ್ಲೋಕದ ವಿಜಯಧ್ವಜೀಯ ವ್ಯಾಖ್ಯಾನದಲ್ಲಿ ತಾತ್ಪರ್ಯ ಶ್ಲೋಕವನ್ನು ಉದಾಹರಿಸಿ ಆ ಪದದ ಅರ್ಥವನ್ನು ನಿಃಸಂಶಯ ಮಾಡಿರುವರು. ಅದಾವುದೆಂದರೆ ವಿಷಯೇ ದೋಷಬುದ್ಧಿಸ್ಸನ್ ಇಂದ್ರಿಯಾಣಾಂ ವಶೇ ಸ್ಥಿತಃ ॥ ಕೃಪಣಃ ಸತು ಸಂಪ್ರೋಕ್ತೋ ಗುಣಬುದ್ಧಿ ವಿಪರ್ಯಯಃ ಪರಮಾತ್ಮನಲ್ಲಿ ಭಕ್ತಿ ಯನ್ನಿಟ್ಟು ಸಂಸಾರಸುಖವನ್ನು ಸುಖವೆಂದು ಭಾವಿಸದೆ ಅದರಲ್ಲಿ ದೋಷಗ್ರಹಣ ವನ್ನೂ ಮಾಡಿರೋಣ, ಅದರಾಶೆಯನ್ನು ಬಿಟ್ಟಿರೋಣ, ಇಷ್ಟಿದ್ದರೂ ಇಂದ್ರಿ ಯಗಳನ್ನು ತನ್ನ ವಶ ಮಾಡಿಕೊಳ್ಳಲು ಸಾಧ್ಯವಿಲ್ಲದೇ ಇರುವವನೇ ಕೃಪಣನು. ಅಂದರೆ ಇವನಲ್ಲಿ ಇರುವ ಗುಣಕ್ಕೂ, ಬುದ್ಧಿಗೂ ಪರಸ್ಪರ ವಿರುದ್ಧ ಧರ್ಮ ವಾಗಿರುವುದು. ಗುಣವು ವಿಷಯಾಸಕ್ತಿಯನ್ನು ಬಿಟ್ಟು ಪರಮಾತ್ಮನನ್ನು ಭಜಿಸು ವುದು. ಬುದ್ಧಿಯೋ, ಇಂದ್ರಿಯಗಳನ್ನು ವಶಮಾಡಲೊಲ್ಲದು, ಇಂತಹವರು ಸ್ವಾಮಿ ! ಇಂದ್ರಿಯಗಳನ್ನು ವಶಮಾಡಿಕೊಳ್ಳಲು ಶಕ್ತರಲ್ಲದ ನಮ್ಮನ್ನುದ್ಧರಿ ಸೆಂದು ಪಶ್ಚಾತ್ತಾಪದಿಂದ ಬೇಡಿಕೊಳ್ಳುತ್ತಿರುವರು. ಅವರಲ್ಲಿ ವಾತ್ಸಲ್ಯ ಉಳ್ಳ ವನೆಂದರ್ಥ. ತ್ರಯೀಮಯ ಎಂದರೆ ಶ್ರೀಭೂರ್ಮಿರಿತಿ ರೂಪಾಭ್ಯಾಂ ಪ್ರಕೃತಿ ರ್ವಿಷ್ಣುನಾ ಸಹ ॥ ಶೇತೇ ಶ್ರುತಿ ಸ್ವರೂಪೇಣ ಸೌತಿಬ್ರಹ್ಮಲಯೇ ಹರಿಂ ಎಂಬ ಶ್ರುತಿಗೀತೆಯ ತಾತ್ಪರ್ಯಾನುಸಾರವಾಗಿ ವೇದವು ಲಕ್ಷ್ಮೀಸ್ವರೂಪವೇ ಆದರೂ ಅದರಲ್ಲಿ ಪರಮಾತ್ಮನು ವ್ಯಾಪಿಸಿಕೊಂಡಿರುವುದರಿಂದ ವೇದಸ್ವರೂಪ ನೆಂದು ಹೇಳುವುದಕ್ಕೆ ಬಾಧಕವೇನೂ ಇಲ್ಲ. ಇಂತಹಾ ಸ್ವಾಮಿಯು ವಂಚನೆಇಲ್ಲದೆ ಭಕ್ತರನ್ನು ರಕ್ಷಿಸುವನೆಂಬ ಭಾವ. ಆದರೆ ಈ ವಿಷಯದಲ್ಲಿ ಸ್ವಲ್ಪ ಆಕ್ಷೇಪಣೆ ಬರಬಹುದು. ಹೇಗೆಂದರೆ, ಬಲಿಚಕ್ರವರ್ತಿಯನ್ನು, ವಾಮನರೂಪದಿಂದ ವಂಚಿಸಿದನು. ಪಾಂಡವರಿಗೆ ಭಗವದನುಗ್ರಹವಿದ್ದುದೇ ಆದರೆ ವನವಾಸಾದಿಗಳು

ಪ್ರಾಪ್ತವಾಗುತ್ತಿರಲಿಲ್ಲ. ಪಾಂಡವರು ವನವಾಸಕ್ಕೆ ಹೋದಮೇಲೆ ಅವರನ್ನು ಕಂಡು, ನಾನು ಊರಿನಲ್ಲಿದ್ದಿದ್ದರೆ ನಿಮಗೆ ಇಂತಹ ಅನರ್ಥವು ಪ್ರಾಪ್ತಿಯಾಗುತ್ತಿರಲಿಲ್ಲ. ನಾನು ಸಾಲ್ವರಾಜನ ಸಂಗಡ ಯುದ್ಧಕ್ಕೆ ಹೋಗಿದ್ದ ಕಾಲದಲ್ಲಿ ಈ ಅನರ್ಥವು ನಿಮಗೆ ಪ್ರಾಪ್ತವಾಯಿತೆಂದು ನೆಪ ಹೇಳಿಬಿಟ್ಟನು. ಭಗವದಿಚ್ಛೆ ಇದ್ದಿದ್ದರೆ ಸಾಕ್ಷಾತ್ತಾಗಿ ಕೃಷ್ಣನಿಗೆ ಸೋದರಳಿಯನೂ, ಪರಮಪ್ರಿಯನಾದ ಅರ್ಜುನನ ಮಗನೂ ಆದ ಅಭಿಮನ್ಯು ಸಾಯುತ್ತಿದ್ದನೇ? ಇವುಗಳೆಲ್ಲವೂ ವಂಚನೆಯಲ್ಲವೇ? ನಿಷ್ಕಪಟದಿಂದ ಭಕ್ತರನ್ನು ಪೊರೆವ ಎಂದು ಹೇಗೆ ಹೇಳಬಹುದು ? ಅಂದರೆ ಇವುಗಳು ಭಕ್ತರನ್ನು ವಂಚಿಸಲು ಮಾಡಿದ ಕಾರ್ಯಗಳಲ್ಲ. ಬಲಿಯನ್ನು ಬೇಡಿದುದರಿಂದ ಅವನ ಕೀರ್ತಿಯನ್ನು ಶಾಶ್ವತವಾಗಿ ಪ್ರಖ್ಯಾತಿಪಡಿಸಿದಂತಾಯಿತು. ವನವಾಸಾದಿಗಳಿಂದ ಪಾಂಡವರ ಯೋಗ್ಯತೆಯೂ, ದುರ್ಯೋಧನಾದಿಗಳ ಅಯೋಗ್ಯತೆಯೂ ವ್ಯಕ್ತವಾದಂತಾಯಿತು. ಅಭಿಮನ್ಯು ಹುಟ್ಟುವ ಕಾಲದಲ್ಲಿಯೇ ೧೬ನೆಯ ವರ್ಷದಲ್ಲಿ ನಿನ್ನ ಮಗನು ನಿನ್ನಲ್ಲಿ ಬರುವನೆಂದು ಚಂದ್ರನಿಗೆ ಪರಮಾತ್ಮನು ವರಕೊಟ್ಟಿದುದರಿಂದ ಅದನ್ನು ಸತ್ಯಮಾಡಲು ಅವನನ್ನು ಕೊಲ್ಲಿಸಿದನು. ಹೀಗೆ ಸತ್ಯಸಂಕಲ್ಪನಾದ ಸ್ವಾಮಿಯು ತಾನು ಮಾಡುವ ಕಾರ್ಯದಿಂದ ಭಕ್ತರಿಗೆ ಕೆಲವುಕಾಲ ಕಷ್ಟವಾದಂತೆ ಕಂಡುಬಂದರೂ ಅದರಿಂದ ಅವರಿಗೆ ಅನಂತ ಸುಖವೇ ಆಗುವುದು. ಭಕ್ತರಿಗೆ ಕಷ್ಟಕೊಡುವ ಕಾರಣವನ್ನು ಅವನೇ ಬಲ್ಲ. ಅಂತಹ ಕಷ್ಟದ ಫಲವನ್ನು ಅವನ ಏಕಾಂತ ಭಕ್ತರು ಬಲ್ಲರು. ಇದಕ್ಕೆ ಅನೇಕ ದಾಸರಾಯರುಗಳು ಭಗವಂತನನ್ನು ಕಷ್ಟವನ್ನೇ ಕೊಡೆಂದು ಬೇಡಿಕೊಂಡಿರುವುದೇ ಸಾಕ್ಷಿ. ಅಂತು ಸರ್ವಪ್ರಕಾರದಿಂದಲೂ ಭಕ್ತರನ್ನು ಉದ್ಧರಿಸಬೇಕೆಂಬುದೇ ಅವನ ಇಚ್ಛೆಯೇ ಹೊರತು ಕೆಡಿಸುವ ಉದ್ದೇಶವೆಂದಿಗೂ ಇಲ್ಲ. ಆದ್ದರಿಂದಲೇ ದಾಸರಾಯರು ಈ ಮಾತನ್ನು ಹೇಳಿದರೆಂದು ತಿಳಿಯಬೇಕು. ॥ ೨೫ ॥

**ಭಾವದರ್ಪಣ**

ತ್ರಿಪದೇತಿ । ಗಾಯತ್ರೀನಾಮಕ ದೇವೇಶ ಶ್ವೇತದ್ವೀಪಾನಂತಾಸನದಲ್ಲಿ ಇರತಕ್ಕವ ಗಂಗಾಪಿತಾ ಶ್ರೀಹರಿ. ಕೃಪಣವತ್ಸಲ ಎಂದರೆ ಪುಣ್ಯ ವೆಚ್ಚ ಮಾಡೋದರಲ್ಲಿ ಲೋಭವುಳ್ಳ ಭಕ್ತರಲ್ಲಿ ಸ್ನೇಹವುಳ್ಳವ. ಮಿಕ್ಕಾದ ಶಬ್ದಗಳಿಗೆ ಹಿಂದೆ ಬರೆದದೆ ॥ ೨೫ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ತ್ರಿಪದ ಇತಿ॥ ತ್ರಿಪದ-ಓಂ ವೃಷಣಸ್ತೇ ಅಭೀಶವೋ ವೃಷಾಕಶಾ ಹಿರಣ್ಯಯೀ (ಣ್ಯೈ) ವೃಷಾ ರಥೋ ಮಘವನ್ ॥ ವೃಷಣಾ ಹರೀ ವೃಷಾ ತ್ವಂ ಶತಕ್ರತೋ ॥ ಓಂ ॥ ತ್ರೀಣಿ–ಅಶ್ವರಥ ಕಶಾದೀನಿ, ಪದಾನಿ ಲಕ್ಷಣಾನಿ ಚಿಹ್ನಾನಿ ಯಸ್ಯಸಃ ತಥೋಕ್ತಃ ॥ ತ್ರಿದಶಾಧ್ಯಕ್ಷ–ಓಂ ವೃಷಾ ಸೋತಾ ಸುನೋತು ತೇ ವೃಷನ್ನೃಜೀಪಿನ್ನಾಭರ ॥ ವೃಷಾದಧನ್ವೇ ವೃಷಣಂ ನದೀಷ್ವಾ ತುಭ್ಯಂ ಸ್ಥಾತ ರ್ಹರೀಣಾಂ ಐಂದ್ರ ॥ ಓಂ ॥ ತಿಸ್ರಃ ದಶಾಃ ಶ್ರೇಷ್ಠಯಷ್ಟೃತ್ವಾಧಿಕಾರ, ಯ್ಯಾಗ ಕ್ರತುತ್ವ ಅಶ್ವಧಾನಾ ದಾನಾಖ್ಯಾಃ ಅವಸ್ಥಾಃ ಯೇಷಾಂ ತೇ ತ್ರಿದಶಾಃ ಯಾಗಾಧಿ ಕಾರಿಣಃ ॥ ತದಧ್ಯಕ್ಷಃ ತತ್ಸ್ವಾಮೀ ॥ ತ್ರಿಸ್ಥಃ ಶ್ವೇತದ್ವೀಪಾದಿಸ್ಥಃ ॥ ತ್ರಿಪಥ ಗಾಮಿನೀ–ಗಂಗಾ ॥ ತ್ರಿವಿಕ್ರಮಃ–ಓಂ ಇಂದ್ರೋ ಯಃ ಪೂರ್ಭಿದಾರಿತಃ॥ ಯೋ ಧೃಷಿತೋ ಯೋ ವೃತೋ ಯೋ ಅಸ್ತಿಶ್ಮಶ್ರುಷು (ಶು) ಶ್ರಿತಃ ॥ ವಿಭೂತ ದ್ಯುಮ್ನ ಯಶ್ಚ್ಯವನಃ ಪುರುಷ್ಟುತಃ ಕೃತ್ವಾ ॥ ಓಂ ॥ ತ್ರಿಷು ಲೋಕೇಷು ಆಧ್ಯಾತ್ಮಿಕಾಧಿಭೌತಿಕಾಧಿದೈವಿಕಾಖ್ಯೇಷು ತ್ರಿಷು ಸ್ಥಾನೇಷು, ವಿಕ್ರಮಃ ದೇಹಸ್ಥಿತಸ್ಯಾಪಿ ವಿಕಾರಾದ್ಯಭಾವಾದಿರೂಪಃ, ಸರ್ವಭೂತ್ಯೈಃ ಅನಾವೃತತ್ವಾದಿ ರೂಪಃ ಶತ್ರು(ಷು) ಭೇದಕತ್ವಾದಿರೂಪಶ್ಚ ಶೌರ್ಯವಿಶೇಷಃ ಯಸ್ಯ ಸಃ ತಥೋಕ್ತಃ ॥ ಕೃಪಣಾಃ ದೀನಾಃ ॥ ಕುವಲಯ ಕುಮುದಮ್ ॥ ನಿಸ್ಸೀಮ ಅಪರಿಮಿತ ॥ ಆತ್ಮಕ-ರೂಪ ॥ ತ್ರಯೀಮಯ ವೇದಪ್ರತಿಪಾದ್ಯೇಷು ಉತ್ತಮಃ ॥ ೨೫ ॥

### ಕನ್ನಡಾರ್ಥ

**ತ್ರಿಪದ**–"ಅಶ್ವ–ರಥಕಶ (ಚಾಬೂಕು)ಗಳೆಂಬ ಮೂರು ಚಿನ್ಹಗಳಿಂದ ಚಿನ್ಹಿತನಾದವನು" ಎಂದು ಬೃಹತೀ ಮಂತ್ರಾನುಗುಣವಾದ ನಾಮಾರ್ಥ

**ತ್ರಿದಶಾಧ್ಯಕ್ಷ**–ಯಾಗ ಮಾಡಿಸುವ–ಯಾಗ ಮಾಡುವ ಅಶ್ವಾಲಂಭನಗಳೆಂಬ ಮೂರು ಅಧಿಕಾರಗಳುಳ್ಳವರು ತ್ರಿದಶರು. ಅವರಿಗೆ ಅಧ್ಯಕ್ಷ–ಸ್ವಾಮಿ ಎಂದು ಬೃಹತೀಮಂತ್ರಾನುಗುಣವಾದ ನಾಮಾರ್ಥ.

**ತ್ರಿಸ್ಥ**–ಶ್ವೇತದ್ವೀಪ ಅನಂತಾಸನ ವೈಕುಂಠ, ಈ ಮೂರು ಸ್ಥಲಗಳಲ್ಲಿ ಇರು

ವವನು. ತ್ರಿಪಥಗಾಮಿನೀ–ಗಂಗಾ ॥ ತ್ರಿವಿಕ್ರಮ ತ್ರಿಲೋಕಗಳಲ್ಲಿ ಆಧ್ಯಾತ್ಮಿಕ– ಆಧಿದೈವಿಕ–ಆದಿಭೌತಿಕಗಳೆಂಬ ಮೂರು ಸ್ಥಾನಗಳಲ್ಲಿ ವಿಕ್ರಮಃ ದೇಹದಲ್ಲಿದ್ದರೂ ವಿಕಾರ ಮುಂತಾದುವುಗಳಿಲ್ಲದಿರುವುದು, ಯಾವುದರಿಂದಲೂ ಆವೃತವಾಗದಿರುವದು, ಶತ್ರುಗಳನ್ನು ಭೇದಿಸುವುದು, ಈ ಮುಂತಾದ ರೂಪವಾದ ಶೌರ್ಯಗುಣವು ಯಾರಿಗೆ ಇರುವದೋ ಅವನು ತ್ರಿವಿಕ್ರಮನು ಎಂದು ಬೃಹತೀಮಂತ್ರಾನುಗುಣವಾದ ನಾಮಾರ್ಥ ॥ ಕೃಪಣ–ದೀನರು. ಕುವಲಯ ಕುಮುದವೆಂಬ ಕರಿಯ ಕಮಲ. ನಿಸ್ಸೀಮ ಅಪರಿಮಿತ. ಚಿತ್ಸುಖಗುಣಾತ್ಮಕವಪುಷ ಜ್ಞಾನಾನಂದ ಮುಂತಾದ ಗುಣಗಳೇ ದೇಹವಾಗಿ ಉಳ್ಳವನು. ತ್ರಯೀಮಯ ಪರಮಮುಖ್ಯ ವೃತ್ತಿಯಿಂದ ಸರ್ವವೇದಗಳ ಮುಖ್ಯಾರ್ಥನೂ, ವೇದಗಳ ಮುಖ್ಯ ಮಹಾತಾತ್ಪರ್ಯ ವಿಷಯೀಭೂತನೂ ಎಂದು ಅರ್ಥ. ॥ ೨೫ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ದುಷ್ಟನಿಗ್ರಹ ಶಿಷ್ಟಪರಿಪಾಲನಾರೂಪಸ್ಮರಣೆ ತಿಳಿಸುತ್ತಾರೆ, ತ್ರಿಪದ ಎಂದು, ಅಕಾರ, ಉಕಾರ, ಮಕಾರವೆಂಬ ಮೂರಕ್ಷರ ಸ್ವರೂಪ ಓಂಕಾರದಲ್ಲಿ ಪ್ರತಿಪಾದ್ಯನಾಗಿರುವುದ್ದರಿಂದ ತ್ರಿಪದ ಎಂದು ಹೆಸರುಳ್ಳ ಅಥವಾ ತ್ರಿಪಾದಭೂಮಿ ಬೇಡಿದ್ದರಿಂದಲೂ ತ್ರಿಪದನೆಂಬ, ತ್ರಿದಶಾಧ್ಯಕ್ಷ ಎಂದರೆ, ತ್ರಿದಶರೆಂಬ ದೇವತೆಗಳಿಗೆ ಸ್ವಾಮಿಯಾದ, ತ್ರಿಸ್ಥ ಎಂದರೆ ತ್ರಿಲೋಕ ವ್ಯಾಪಿಸಿರುವ, ಸ್ವರ್ಗ, ಮರ್ತ್ಯ, ಪಾತಾಳ ಮಾರ್ಗವಾಗಿ ಮೂರುಬಗೆ ಪ್ರವಾಹವಾದ್ದರಿಂದ ತ್ರಿಪಥಗಾಮಿನಿ ಎಂಬ ಗಂಗೆಯ ಪಿತ, ಜನಕನಾದ, ಮೂರುಲೋಕವನ್ನೂ ಎರಡು ಹೆಜ್ಜೆಯಿಂದ ಅಳೆದುದರಿಂದ ತ್ರಿವಿಕ್ರಮನೆಂಬ, ದೀನಜನ ಕೃಪಾಳುವಾದ್ದರಿಂದ ಕೃಪಣವತ್ಸಲನೆಂಬ, ಕನ್ನೈದಿಲೆ ಹೂವಿನ ವರ್ಣದಂತೆ ನೀಲವರ್ಣನಾದ, ದೇಶಕಾಲಗುಣಗಳಿಂದ ಕೊನೆಯಿಲ್ಲದ್ದರಿಂದ ನಿಸ್ಸೀಮನೆಂದು ಹೆಸರುಳ್ಳ, ಅಪರಿಮಿತಚಿತ್ಸುಖಗುಣಾತ್ಮಕವಪುಷ ಎಂದರೆ, ಅನಂತಜ್ಞಾನನಂದಾದಿಗುಣಗಳೇ ಶರೀರವಾಗಿವುಳ್ಳ, ವೈಕುಂಠಾದಿ ಲೋಕಸ್ವಾಮಿಯಾದ, ತ್ರಯೀಮಯ ಎಂದರೆ, ವೇದಪ್ರತಿಪಾದ್ಯರಲ್ಲಿ ಮುಖ್ಯನಾದುದರಿಂದ ತ್ರಯೀಮಯನೆಂಬ ದೇವರು, ತನ್ನವರೆಂಬ ಅನಾದಿ ಸ್ವಭಕ್ತಜೀವರನ್ನ, ನಿಷ್ಕಪಟದಿಂದ ಎಂದರೆ, ನಿರ್ವ್ಯಾಜವಾಗಿ ರಕ್ಷಿಸುವನು. ಅನಾದಿದ್ವೇಷಿಗಳೇ

ಮೊದಲಾದ ಇತರರನ್ನು ಬಲಿ ಜಿನ ಮೊದಲಾದವರನ್ನು ರಕ್ಷಿಸಿದಂತೆ ಕಪಟಸಹಿತ ವಾಗಿ ರಕ್ಷಿಸುವನೆಂದರ್ಥ. ॥ ೨೫ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ತ್ರಿವಿಧ ಜೀವರಿಗೆ ಲಿಂಗಭಂಗಾನಂತರ, ಅವರವರ ಗತಿಗಳನ್ನು ಕೊಡುವು ದರಿಂದ ಶ್ರೀಪರಮಾತ್ಮನಿಗೆ ತ್ರಿಪದನೆಂದು ಹೆಸರು.

ಗಾಯತ್ರೀಮಂತ್ರವು ಮೂರು ಪಾದಗಳಿಂದ ಕೂಡಿದೆ. ೧. ಓಂ ತತ್ಸ ವಿತೃವರೇಣ್ಯಂ ೨. ಭರ್ಗೋದೇವಸ್ಯ ಧೀಮಹಿ ೩. ಧೀಯೋನಃ ಪ್ರಚೋದ ಯಾತ್–ಎಂಬ ಪಾದತ್ರಯಗಳಿಂದ ವಿಭಕ್ತವಾಗಿದೆ. ಅಂತಹ ತ್ರಿಪಾದಯುಕ್ತ ವಾದ ಗಾಯತ್ರೀಮಂತ್ರ ಪ್ರತಿಪಾದ್ಯನಾದ್ದರಿಂದಲೂ ತ್ರಿಪದ ಎಂತ ನಾಮ.

ಅಶ್ವ-ರಥ-ಕಶ (ಲಗಾಮು) ಎಂಬ ಮೂರು ಸಾಂಕೇತಗಳಿಂದ ಚಿನ್ಹಿತನಾ ದವನಾದ್ದರಿಂದಲೂ ತ್ರಿಪದನಾಮಕನು

"ತ್ರಿದಶಾ ವಿಬುಧಾಃ ಸುರಾಃ" ಎಂಬ ಅಮರಕೋಶ ರೀತ್ಯಾ, ತ್ರಿದಶ ರೆಂದರೆ, ದೇವತೆಗಳೆಂದರ್ಥ. ಅಂತಹ ದೇವತಾವರ್ಗದಲ್ಲಿ ಸರ್ವಶ್ರೇಷ್ಠನಾದ್ದ ರಿಂದಲೂ ಶ್ರೀಹರಿಗೆ ತ್ರಿದಶಾಧ್ಯಕ್ಷನೆಂದು ಹೆಸರು.

ಯಾಗ ಮಾಡಿಸುವ, ಯಾಗ ಮಾಡುವ ಅಶ್ವಾಲಂಭನಗಳೆಂಬ ಮೂರು ಅಧಿಕಾರವುಳ್ಳ ದೇವತೆಗಳಿಗೆ ತ್ರಿದಶರೆಂದು ಹೆಸರು. ಅವರಿಗೆ ಪ್ರಭು (ಸ್ವಾಮಿ) ವಾದ್ದರಿಂದಲೂ ಸರ್ವೋತ್ತಮನಾದ ಶ್ರೀಪರಮಾತ್ಮನು ತ್ರಿದಶಾಧ್ಯಕ್ಷನು.

ಶ್ವೇತದ್ವೀಪ, ಅನಂತಾಸನ ಮತ್ತು ವೈಕುಂಠ ಎಂಬ ಮೂರುಲೋಕಗಳು ಮೋಕ್ಷಧಾಮಗಳು. ಇಂತಹ ತ್ರಿಧಾಮಗಳಲ್ಲಿ ವಿದ್ಯಮಾನನಾಗಿರುವ ಶ್ರೀಹರಿಗೆ ತ್ರಿಸ್ಥನೆಂದು ಹೆಸರು.

ತ್ರಿವಿಕ್ರಮದೇವರ ವಾಮಪಾದಾಂಗುಷ್ಠನಖಾಗ್ರದಿಂದ, ಬ್ರಹ್ಮಾಂಡಕಟಾಹ ಬೇಧಿಸಿದಾಗ ಗಂಗಾವತರಣವಾಯಿತು. ವಿಷ್ಣುಪಾದೋದ್ಭವೆಯಾದ ಆ ಪವಿತ್ರ ಗಂಗಾಮಾತೆಯು ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ತ್ರಿಲೋಕಗಳಲ್ಲಿ ಪ್ರವಹಿಸು

ವುದರಿಂದ, ಗಂಗೆಯು ತ್ರಿಪಥಗಾಮಿನಿ ಎನಿಸಿದಳು. ಅಂತಹ ಗಂಗಾಜನಕನಾದ ಶ್ರೀತ್ರಿವಿಕ್ರಮರೂಪೀ ಶ್ರೀಹರಿಯು ತ್ರಿಪಥಗಾಮಿನಿಪಿತನು.

ಗಂಗಾತ್ರಿಪಥಗಾಮಿನೀ–ಎಂಬ ಪ್ರಮಾಣವಾಕ್ಯ.

'ಬಲಿಚಕ್ರವರ್ತಿಯಿಂದ ಮೂರು ಪಾದ ಪ್ರಮಾಣದಷ್ಟು ಭೂಮಿಯನ್ನು ಬೇಡಿದ ವಾಮನನು ತ್ರಿವಿಕ್ರಮನಾಗಿ ಬೆಳೆದು, ಸಮಗ್ರ ಬ್ರಹ್ಮಾಂಡವನ್ನು ವ್ಯಾಪಿಸಿದ. ತ್ರಿಭುವನಾತ್ಮಕವಾದ ಜಗತ್ತನ್ನು ತನ್ನ ಎರಡು ಪಾದಗಳಿಂದ ಅಳೆದ ಮಹಾಮಹಿಮನೇ ತ್ರಿವಿಕ್ರಮನು.

ಕೃಪಣ–ಎಂಬ ಶಬ್ದಕ್ಕೆ "ಲೋಭಿ" ಎಂಬ ಅರ್ಥ ರೂಢಿಯಲ್ಲಿದೆ. ಆದರೆ ಇಲ್ಲಿ ಶರಣಾಗತರಾಗಿ ಬಂದ ದೀನ ಜನರಿಗೆ ಕೃಪಣ ಎಂತ ನಾಮ.

ಕೃಪಣೋಯೋಽಜಿತೇಂದ್ರಿಯಃ–ಎಂದು ಭಾಗವತ ಏಕಾದಶಸ್ಕಂಧದ ೧೯ನೆಯ ಅಧ್ಯಾಯ–೪೫ನೆಯ ಶ್ಲೋಕದಲ್ಲಿ ವಿವರಿಸಿರುವಂತೆ, ಪರಮಾತ್ಮನಲ್ಲಿ ಭಕ್ತಿಯನ್ನಿಟ್ಟು, ಸಂಸಾರ ಸುಖವನ್ನು ಕ್ಷಣಿಕವೆಂದು ಭಾವಿಸುವವರೇ ಕೃಪಣರು. ಪುಣ್ಯವೆಂಬ ದ್ರವ್ಯದಲ್ಲಿ ಲೋಭವುಳ್ಳವರು. ಅಂತಹ ಕೃಪಣರಲ್ಲಿ ವಾತ್ಸಲ್ಯವನ್ನು ಹೊಂದಿ, ರಕ್ಷಿಸುವವನಾದ್ದರಿಂದ ಕೃಪಣವತ್ಸಲನು.

ಕನ್ನೈದಿಲೆ ಪುಷ್ಪವು ನೀಲವರ್ಣವಾದದ್ದು. ಆ ಪುಷ್ಪದ ದಳಗಳಂತೆ ಶ್ರೀಪರಮಾತ್ಮನು ನೀಲಮೇಘಶ್ಯಾಮನಾದ್ದರಿಂದ, ಕುವಲಯದಳಶ್ಯಾಮನು.

ಶ್ರೀಹರಿಗೆ ಸಮರಾಗಲೀ, ಅಧಿಕರಾಗಲೀ ಯಾರೂ ಇಲ್ಲವೇ ಇಲ್ಲ. ಸಮಾಭ್ಯಧಿಕ ಶೂನ್ಯನಾದ್ದರಿಂದ ನಿಸ್ಸೀಮನು. ದೇಶಕಾಲಗುಣಾತೀತನಾದ್ದರಿಂದ ನಿಸ್ಸೀಮನು.

ಅವನ ದೇಹವು ಜ್ಞಾನಾಂದಾತ್ಮಕವಾದದ್ದು. ಅಪರಿಮಿತ ಜ್ಞಾನನಂದಾದಿ ಅನಂತಕಲ್ಯಾಣಗುಣಗಣಪರಿಪೂರ್ಣದೇಹವಿಶಿಷ್ಟನಾಗಿರುವುದರಿಂದಲೇ, ಅಪರಿಮಿತಚಿತ್ಸುಖಗುಣಾತ್ಮಕವಪುಷನು.

ವೈಕುಂಠ, ಶ್ವೇತದ್ವೀಪ, ಅನಂತಾಸನಗಳೆಂಬ ಮೋಕ್ಷಸ್ಥಾನಗಳಿಗೆ ಸ್ವಾಮಿಯಾಗಿದ್ದಾನೆ. ಇದರಿಂದ ವೈಕುಂಠಾದಿಲೋಕಾಧಿಪನು.

ಅನಂತಸಂಖ್ಯಾಕವಾದ ವೇದಸಮೂಹಗಳಿಗೆ ತ್ರಯೀ ಎಂದು ಹೆಸರು. ವೇದಪ್ರತಿಪಾದ್ಯನಾದ್ದರಿಂದ, ತ್ರಯೀಮಯನು.

ವೇದವು ಲಕ್ಷ್ಮೀಸ್ವರೂಪವು. ಲಕ್ಷ್ಮಿಯಲ್ಲಿ ಪೂರ್ಣನಾಗಿ ವ್ಯಾಪಿಸಿಕೊಂಡಿರುವುದರಿಂದ, ವೇದಸ್ವರೂಪನಾಗಿದ್ದಾನೆ.

**ಶ್ರೀಃ ಭೂರ್ಮಿರಿತಿ ರೂಪಾಭ್ಯಾಂ ಪ್ರಕೃತಿರ್ವಿಷ್ಣುನಾಸಹ ।**
**ಶೇತೇ ಶ್ರುತಿಸ್ವರೂಪೇಣ ಸ್ತೌತಿ ಬ್ರಹ್ಮಾಲಯೇ ಹರಿಮ್ ॥**

**–ಎಂಬ ಶ್ರುತಿಗೀತೆಯ ಪ್ರಮಾಣವಿದೆ.**

ನಿಷ್ಕಪಟವಾದ, ನಿಷ್ಕಲ್ಮಶ ಭಕ್ತಿಯಿಂದ ಸೇವಾಮಾಡತಕ್ಕ ತನ್ನ ಅಂತರಂಗ ಭಕ್ತರಿಗೆ ಒಲಿದು, ಆ ಕೃಪಣವತ್ಸಲನು ಅವರನ್ನು ಸರ್ವಕಾಲಗಳಲ್ಲಿಯೂ ಸಂರಕ್ಷಿಸುತ್ತಾನೆಂದು ತಿಳಿಸುತ್ತಾರೆ. ॥ ೨೫ ॥

## ಪದ್ಯ ೨೬

**ಮೂಲ**

**ಲವಣ ಮಿಶ್ರಿತ ಜಲವು ತೋರ್ಪುದು ।**
**ಲವಣದೋಪಾದಿಯಲಿ ಜಹ್ನೆಗೆ ।**
**ವಿವರಗೈಸಲು ಶಕ್ಯವಾಗುವುದೇನೋ ನೋಳ್ಪರಿಗೆ ॥**
**ಸ್ವವಶವ್ಯಾಪಿಯೆನಿಸಿ ಲಕ್ಷ್ಮೀ ।**
**ಧವ ಚರಾಚರದೊಳಗೆ ತುಂಬಿಹ ।**
**ನವಿದಿತನ ಸಾಕಲ್ಯ ಬಲ್ಲವರಾರು ಸುರರೊಳಗೆ**

ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಸರ್ವತ್ರವ್ಯಾಪ್ತನಾದ ಶ್ರೀಪರಮಾತ್ಮನು ಅಗೋಚರನಾಗಿದ್ದಾನೆ. ಈ ತತ್ತ್ವವನ್ನು ಸುಂದರವಾದ ದೃಷ್ಟಾಂತದಿಂದ ವಿವರಿಸುತ್ತಾರೆ.

**ಪ್ರತಿಪದಾರ್ಥ**

**ಲವಣ ಮಿಶ್ರಿತ**=ಉಪ್ಪುಬೆರೆತ, **ಜಲವು**=ಸಿಹಿನೀರು, **ಜಿಹ್ವೆಗೆ**=ನಾಲಿಗೆಗೆ, **ಲವಣದೋಪಾದಿಯಲ್ಲಿ**=ಉಪ್ಪುನೀರಿನಂತೆ, **ತೋರ್ಪುದು**=ರುಚಿಯು ಅನುಭವವಾಗುವುದು, **ನೋಳ್ಪರಿಗೆ**=ಅದೇ ಲವಣ ಮಿಶ್ರಿತವಾದ ನೀರನ್ನು ಕಣ್ಣಿಂದ ನೋಡತಕ್ಕವರಿಗೆ **ವಿವರಗೈಸಲು**=ನೀರಿನಲ್ಲಿ ಬೆರತಉಪ್ಪನ್ನು ಪ್ರತ್ಯೇಕವಾಗಿ ತಿಳಿಯುವುದಕ್ಕೆ **ಶಕ್ಯನಾಗುವದೇನೊ**=ಸಾಧ್ಯವಾಗುತ್ತದೆಯೇ? ಎಂದೆಂದಿಗೂ ಸಾಧ್ಯವಾಗಲಾರದು ಎಂತ ತಾತ್ಪರ್ಯ. **ಸ್ವವಶ**=ತನ್ನ ವಶದಲ್ಲಿರುವ, **ವ್ಯಾಪಿ**=ಸರ್ವತ್ರ ವ್ಯಾಪ್ತನಾದವನು, ಎನಿಸಿ=ಎಂತ, **ಲಕ್ಷ್ಮೀಧವ**=ರಮಾಪತಿಯಾದ ಪರಮಾತ್ಮನು, **ಚರಾಚರದೊಳು**=ಚೇತನ ಮತ್ತು ಅಚೇತನ ಸಮಸ್ತ ವಸ್ತುಗಳಲ್ಲಿ, **ತುಂಬಿಹನು**=ತದ್ರೂಪನಾಗಿ, ತದಾಕಾರವಾಗಿ ವ್ಯಾಪಿಸಿ ಹರಡಿದ್ದಾನೆ, **ಅವಿದಿತನ**=ತವೋಯೋಗ್ಯರಿಗೆ ತಿಳಿಯದೇ ಇರುವ ಶ್ರೀಪರಮಾತ್ಮನನ್ನು, **ಸುರರೊಳಗೆ**=ರಮಾಬ್ರಹ್ಮ ದೇವತಾವರ್ಗದಲ್ಲಿ, **ಸಾಕಲ್ಯ**=ಆದ್ಯಂತವಾಗಿ (ಪರಿಪೂರ್ಣವಾಗಿ) **ಬಲ್ಲವರಾರು**=ತಿಳಿದವರು ಯಾರು ? ಯಾರ್ಯಾರೂ ಇಲ್ಲವೆಂದರ್ಥ ॥ ೨೬ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಬಿಂಬನಾದ ಪರಮಾತ್ಮಗೆ, ಪ್ರತಿಬಿಂಬರಾದ ಜೀವರಿಗೆ ಭೇದ ಹೇಳತಾರೆ. ಪರಮಾತ್ಮ ಸರ್ವತ್ರದಲ್ಲಿ ವ್ಯಾಪ್ತನಾಗಿ ಗೋಚರನಾಗದೆ ಇದ್ದಾನೆ. ಗೋಚರ ನಾಗದ ಮಾತ್ರಕ್ಕೆ ಇಲ್ಲ ಎಂತ ತಿಳಿಯಬಾರದು. ದೃಷ್ಟಾಂತದಿಂದ ಹೇಳತಾರೆ. ಜಗತ್ತಿಗೂ ಪರಮಾತ್ಮಗೂ ಭೇದ ಎಂತ ತಿಳಿಯಬೇಕು.

ಚಲೋ ಸೀನೀರು ತಂದು ಅದರಲ್ಲಿ ಉಪ್ಪು ಮೇಳನ ಮಾಡಿದರೆ ಎರಡೂ ಕಲತು ಹೋಗತವೆ. ಆ ನೀರು ನಾಲಿಗೆಗೆ ಸ್ಪರ್ಶವಾದರೆ ಉಪ್ಪು ನೀರಿನೋಪಾದೆ ಯಲ್ಲಿ ತೋರೋದಾಗತದೆ.ಅದೇ ಉದಕವನ್ನು ಕಣ್ಣಿಂದ ನೋಡತಕ್ಕವರಿಗೆ ಉಪ್ಪು ಮಿಶ್ರಿತವಾದ ನೀರು ಎಂತಲೂ, ಈ ಉದಕದಲ್ಲಿ ಉಪ್ಪು ಭಾಗ ಬ್ಯಾರೆ ಅದೇಎಂತ

ತಿಳಿಯಲಾರದು. ನಾಲಿಗೆ ನೀರಿನಲ್ಲಿ ಉಪ್ಪು ಮಿಶ್ರಿತವಾಗಿದೆ ಎಂತ ತಿಳಿಕೋತದೇ ಹೊರತು, ತದ್ಗತ ಲವಣವನ್ನು ಬ್ಯಾರೆ, ಉದಕವನ್ನ ಬ್ಯಾರೆ ವಿವರ ಮಾಡೋದಕ್ಕೆ ಸಾಧ್ಯವಾಗೋದೆ, ಸಾಧ್ಯವಾಗಲಾರದು ಎಂತ ತಾತ್ಪರ್ಯ. ತನ್ನ ವಶ ತಾನೇ ಆದ ಅನ್ಯರ ವಶನಲ್ಲದ ಸ್ವತಂತ್ರನಾದ ಸರ್ವತ್ರವ್ಯಾಪ್ತನಾದವನು ಎಂತ ರಮಾಪತಿಯಾದ ಪರಮಾತ್ಮ ಚೇತನಾಚೇತನ ಸರ್ವತ್ರದಲ್ಲೂ, ಆಯಾ ಜೀವಾಕಾರದಂತೆ ಬಿಂಬನಾಗಿ ಅವಿಯೋಗಿಯೋಗನಾಗಿ ತುಂಬಿದ್ದಾನೆ. ಜಲದಲ್ಲಿ ವಿದ್ಯಮಾನವಾದ ಲವಣಜ್ಞಾನ ಜಿಹ್ವೆಗೆ ತಿಳಿಯೋದಾಗತದೆ ತದ್ವತ್, ಜ್ಞಾನಸ್ವರೂಪಿಗಳಾದ ಭಗವದ್ಭಕ್ತರಿಗೆ ಜೀವ, ಜೀವಾಂತರ್ಗತ ಪರಮಾತ್ಮ ಬ್ಯಾರೆ ಬ್ಯಾರೆ ಆಗಿರೋದು ತಿಳಿಯೋದಾಗತದೆ. ಅದೇ ಜಲವನ್ನು ನೇತ್ರದಿಂದ ನೋಡೋ ಜನರಿಗೆ ತದ್ಗತ ಭೇದ ಹ್ಯಾಂಗೆ ತಿಳಿಯೋದಿಲ್ಲವೊ ತದ್ವತ್ ಸ್ವರೂಪತಃ ಅಜ್ಞಾನಸ್ವರೂಪಿಗಳಾದ ದೈತ್ಯರಿಗೆ ಕಾಣೋದಿಲ್ಲ. ಈ ಪ್ರಕಾರ ದೈತ್ಯರಿಗೆ ತಿಳಿಯದೇ ಇರತಕ್ಕವನು ದೇವತೆಗಳಿಗೇ ತಿಳಿದವನು ಇಂಥಾಪರಮಾತ್ಮನ ಆದ್ಯಂತಸಹಿತಗಳಾಗಿ, ರಮಾ ಬ್ರಹ್ಮಾದಿ ದೇವತೆಗಳ ಒಳಗೆ ತಿಳಿದವರು ಯಾರು? ದಾರೂ ಇಲ್ಲ ಎಂತ ತಾತ್ಪರ್ಯ.

ತಾತ್ಪರ್ಯ–ಯೋಗ್ಯತಾನುಸಾರ ಕಾಣೋವರಾಗುತ್ತಾರೆ. ಕ್ಷೀರೋದಕಗಳು ಮೇಳನವಾಗಿದ್ದಂತೆ ಪರಮಾತ್ಮ ಚರಾಚರದಲ್ಲಿ ತುಂಬಿದ್ದಾನೆ. ಕ್ಷೀರ, ನೀರು ವಿಭಾಗ ಮಾಡಿ ಯೋಗ್ಯತೆ ಗ್ರಹಣ ಮಾಡತಕ್ಕದ್ದು ಹಂಸಪಕ್ಷಿಯೇ ಹೊರತು, ಅನ್ಯವಾದ ಪಕ್ಷಿಗಳಿಗೆ ಇಂಥಾ ಯೋಗ್ಯತೆ ಇಲ್ಲ. ಹಂಸದೋಪಾದಿಯಲ್ಲಿ ಭಗವದ್ಭಕ್ತರು, ಅನ್ಯಪಕ್ಷಿಗಳೋಪಾದಿಯಲ್ಲಿ ಭಗವದ್ದ್ವೇಷಿಗಳು ಎಂತ ತಾತ್ಪರ್ಯ ॥ ೨೬ ॥

೨. ಭಾವಪ್ರಕಾಶಿಕೆ

ನೀರಿನಲ್ಲಿ ಉಪ್ಪನ್ನು ಸೇರಿಸಿ, ಆ ನೀರನ್ನು ಬಾಯಲ್ಲಿ ಹಾಕಿಕೊಂಡರೆ ಮಾತ್ರ ಉಪ್ಪು ಕಾಣುವುದು, ನೀರನ್ನು ಕಣ್ಣಿಂದ ನೋಡಿದರೆ ಉಪ್ಪು ಕಾಣುವುದೆ? ಆ ಉಪ್ಪನ್ನು ಬೇರ್ಪಡಿಸಿ ತೋರಿಸಲು ಸುಲಭ ಸಾಧ್ಯವೆ ? ಹಾಗೆ ಶ್ರೀಪರಮಾತ್ಮನು ನೀರಿನಲ್ಲಿ ಉಪ್ಪು ಬೆರತಂತೆ ಸರ್ವತ್ರ ತುಂಬಿರುವನು, ಇಂತಹ ಭಗವಂತನ ಸ್ವರೂಪವನ್ನು ಅರಿಯಲು ರಮಾದೇವಿಯರಿಗೆ ಸಾಧ್ಯವಿಲ್ಲ. ಹಾಗಿರಲು ಇನ್ನು ಇತರ ದೇವತೆಗಳು ಅವನ ಸ್ವರೂಪವನ್ನು ಪ್ರಪಂಚದಿಂದ ಬೇರ್ಪಡಿಸಿ

ಸಾಕಲ್ಯೇನ ಕಾಣುವುದೆಂತು ? ದೇವತೆಗಳೇ ಕಾಣದವೋಲೆ ಮನುಷ್ಯರ ಪಾಡೇನು ! ಅವನ ಅನುಗ್ರಹದಿಂದ ಯತ್ಕಿಂಚಿತ್ ಬಲ್ಲರೇ ಹೊರತು ಸಾಕಲ್ಯವಾಗಿ ಯಾರೂ ಅರಿಯರು. ಭಗವದನುಗ್ರಹವಿಲ್ಲದವರು ಏನೇನೂ ಅರಿಯರೆಂದು ತಿಳಿಯಬೇಕು. ॥ ೨೬ ॥

## ೩. ಭಾವದರ್ಪಣ

ಸ್ವಾದೋದಕದಲ್ಲಿ ಲವಣ ಮಿಶ್ರವಾದರೆ ಲವಣಪ್ರಾಬಲ್ಯವೇ ಹ್ಯಾಗೆ ತೋರುತ್ತದೋ ತದ್ವತ್ ಶ್ರೀಹರಿ ಸ್ವವಶರಾದ ಚೇತನರಲ್ಲಿ ನಿಂತು ವ್ಯಾಪ್ತಿ ಆಗಿರೋದರ ವಿವರ ಮಾಡಲಿಕ್ಕೆ ಲಕ್ಷ್ಮೀದೇವಿ ಸಹ ಅಶಕ್ಯಳು. ಆದಕಾರಣ ಇಂಥ ಪರಮಾತ್ಮನನ್ನು ಸಾಕಲ್ಯೇನ ಇತರದೇವತೆಗಳೇನು ತಿಳಿದಾರೆಂದು ಹೇಳುತ್ತಾರೆ, ಲವಣೇತಿ ॥ ೨೬ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಲವಣ ಇತಿ ॥ ತೋರ್ಪುದು–ತೋರೋದು । "ಗೈಸಲು"–ಮಾಡಲು । ಸ್ವವಶಃ ಓಂ ಉಭಯಂ ಕರಂ ಮಂಹಿಷ್ಟ ಮುಭಯಾವಿನಂ ಯಚಿದ್ಧಿ ತ್ವಾಜನಾ ಇಮೇ ನಾನಾ ಹವಂತ ಊತಯೇ ಅಸ್ಮಾಕಂ ಬ್ರಹ್ಮೇದಮಿಂದ್ರ ॥ಓಂ॥ ಸ್ವಸ್ಯೈವ ವಶಃ ನಾನ್ಯಸ್ಯ ಇತಿ ಸ್ವವಶಃ ॥ವ್ಯಾಪೀ–ಓಂ ಭೂತು ತೇಽಹಾ ವಿಶ್ವಾಚರ್ಷಣಿನಂ ವಿತತೂರ್ಯಂತೇ ಮಘವನ್ ವಿಪಶ್ಚಿತೋರ್ನಾ ವಿಪ್ರೋ ಜನಾನಾಂ ಉಪಕ್ರಮಸ್ವ ಪುರುರೂಪಂ (ಪುರುಷಂ) ಬಹುರೂಪಾಣ್ಯಸ್ಯ ಸಂತಿ ಇತಿ ವ್ಯಾಪೀ ॥ಓಂ॥ ಇಹ ಇರುವವ ॥ ೨೬ ॥

## ಕನ್ನಡಾರ್ಥ

ಪರಮಾತ್ಮನ ಸರ್ವವ್ಯಾಪ್ತಿಯನ್ನು ತಿಳಿಸುತ್ತಾರೆ. – ಲವಣ ಎಂಬ ಪದ್ಯದಿಂದ. ತೋರ್ಪುದು ತೋರುವುದು-ತೋರುತ್ತದೆ. ಗೈಸಲು-ಮಾಡಲು, ಸ್ವವಶ-ತನ್ನ ವಶದಲ್ಲಿಯೇ ತಾನಿರುವವನು–ಇನ್ನೊಬ್ಬರ ಅಧೀನನಲ್ಲ ಎಂದು ಬೃಹತೀ-ಮಂತ್ರಾನುಗುಣವಾದ ನಾಮಾರ್ಥ, ಇಹ ಇರುವವನು. ॥ ೨೬ ॥

೫. ಶ್ರೀಗುರುಹೃದಯಪ್ರಕಾಶಿಕೆ

ಸರ್ವವ್ಯಾಪ್ತರೂಪಸ್ಮರಣೆ ತಿಳಿಸುತ್ತಾರೆ, ಲವಣ ಎಂದು. ಉಪ್ಪು ಬೆರಸಿದ ನೀರು ಉಪ್ಪಾಗಿದೆ ಎಂದು ನಾಲಿಗೆಗೆ ಮಾತ್ರ ಗೊತ್ತಾಗಿ, ಕಣ್ಣು ಮೊದಲಾದ್ದರಿಂದ ವಿವರಿಸುವುದಕ್ಕೆ ಅಸಾಧ್ಯವಾದಂತೆ, ತನ್ನ ವಶವಾದ ಜಗತ್ತಿನಲ್ಲಿ ಲಕ್ಷ್ಮೀಪತಿಯಾದ ದೇವರು, ಜಡ–ಚೇತನದಲ್ಲಿ ಸಹ ವ್ಯಾಪಿಸಿ ತುಂಬಿರುವನು. ಸಾಕಲ್ಯ ಅವಿದಿತನ ಅಂದರೆ, ಗುಣರೂಪಾದಿಗಳು ಇಷ್ಟೇ ಸರಿ ಎಂದು ನಿರ್ಧರಿಸಿ ತಿಳಿಯಲು ಅಶಕ್ಯನಾದ ಸ್ವಾಮಿಯನ್ನು ಸಂಪೂರ್ಣ ತಿಳಿದವರು ಯಾರು ಇಲ್ಲ. ದೇವರೇ ಸಂಪೂರ್ಣ ತನ್ನನ್ನು ತಾನು ಬಲ್ಲನೆಂದರ್ಥ. ॥ ೨೬ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಉಪ್ಪಿನ ಕಣಗಳೆಲ್ಲವೂ ನೀರಿನಲ್ಲಿ ಕರಗುವವು. ಆಗ ದ್ರಾವಣವು ಉಪ್ಪಿನ ರುಚಿಯನ್ನೇ ಹೊಂದಿರುವುದು. ಉಪ್ಪು ಕಣ್ಣಿಗೆ ಕಾಣಿಸುವುದಿಲ್ಲ. ಅಂತೆಯೇ ಶ್ರೀಪರಮಾತ್ಮನು ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಸಮಸ್ತ ವಸ್ತುಗಳಲ್ಲಿ ಅಣು ರೇಣು ತೃಣ ಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ವ್ಯಾಪ್ತನಾಗಿರುವನು. ನೀರಿನಲ್ಲಿ ಕರಗಿದ ಉಪ್ಪು ಹೇಗೆ ದೃಗ್ಗೋಚರವಲ್ಲದೋ, ಅಂತೆಯೇ ಸರ್ವವಸ್ತುಗತ ಶ್ರೀಪರಮಾತ್ಮನು ಅಗೋಚರನಾಗಿದ್ದಾನೆ.

ತನ್ನಿಂದ ಸೃಷ್ಟರಾದ ಸಮಸ್ತ ಜೀವಕೋಟಿಯಲ್ಲಿ ಬಿಂಬನಾಗಿ ವ್ಯಾಪ್ತನಾಗಿದ್ದಾನೆ. ಜಡ ವಸ್ತುಗಳಲ್ಲಿ ಕಣಕಣಗಳಲ್ಲಿ ಸೂಕ್ಷ್ಮ ರೂಪದಿಂದ ವ್ಯಾಪ್ತನಾಗಿದ್ದಾನೆ. ಈ ಸಮಗ್ರ ಜಗತ್ತು ಶ್ರೀಪರಮಾತ್ಮನ ವಶದಲ್ಲಿದೆ. ಅದಕ್ಕೆ ಅವನೇ ನಿಯಾಮಕನು.

ಮೇಲಿನ ದೃಷ್ಟಾಂತದಲ್ಲಿ ನೀರು ಮತ್ತು ಉಪ್ಪು ಎರಡೂ ಭಿನ್ನ ವಸ್ತುಗಳು. ಆದರೆ ಉಪ್ಪಿನ ಕಣಗಳು ನೀರಿನ ಅಂತಃಕಣ ಪ್ರದೇಶದಲ್ಲಿ ಸೇರಿಕೊಂಡು ವ್ಯಾಪಿಸಿವೆ. ಸ್ವವಶವಾದ ಚರ ಮತ್ತು ಅಚರ ಪದಾರ್ಥಗಳಲ್ಲಿ ಸರ್ವೇಶ್ವರನಾದ

ಶ್ರೀಹರಿಯು ತದ್ರೂಪ, ತದಾಕಾರ, ತದ್ವ್ಯಾಪ್ಯ, ತನ್ನಾಮಕನಾಗಿ ವ್ಯಾಪಿಸಿ ಕೊಂಡಿದ್ದರೂ ಜಗತ್ತಿನಿಂದ ಅತ್ಯಂತ ಭಿನ್ನವಾಗಿದ್ದಾನೆ.

ಲಕ್ಷ್ಮೀಧವ ಎಂದರೆ ರಮಾಪತಿಯಾದ ಆ ಸ್ವರಮಣನು ಚರಾಚರದೊಳಗೆ ತುಂಬಿಹನು. ಅಂತಹ ಸರ್ವತ್ರ ವ್ಯಾಪ್ತನ ಮಹಾಮಹಿಮೆಗಳನ್ನು ದೇವತಾವರ್ಗ ದಲ್ಲಿ ಆದ್ಯಂತವಾಗಿ ಅಂದರೆ, ಸಾಕಲ್ಯೇನ ತಿಳಿದವರಾರೂ ಇಲ್ಲ. ಅವನ ಮಹಿಮೆ ಅವನೇ ಬಲ್ಲ. ॥ ೨೬ ॥

## ಪದ್ಯ ೨೭

**ಮೂಲ**

**ವ್ಯಾಪ್ಯನಂದದಿ ಸರ್ವಜೀವರೊ ।**
**ಳಿಪ್ಪ ಚಿನ್ಮಯ ಘೋರಭವಸಂ ।**
**ತಪ್ಯಮಾನರು ಭಜಿಸಿ ಭಕುತಿಗಳಿಂದಲಿಹಪರದಿ ॥**
**ಪ್ರಾಪ್ಯನಾಗುವನವರವಗುಣಗ ।**
**ಳೊಪ್ಪುಗೊಂಬನು ಭಕ್ತವತ್ಸಲ ।**
**ತಪ್ಪಿಸುವ ಬಹುಜನ್ಮದೋಷಗಳವರಿಗನವರತ ॥ ೨೭ ॥**

**ಅವತರಣಿಕೆ**

ದುಃಖಗಳಿಂದ ಬಳಲುತ್ತಿರುವ ಭಕ್ತರು ತನ್ನನ್ನು ಭಕ್ತಿಭಾವದಿಂದ ಭಜಿಸಿ ದಾಗ, ಅವರ ಕ್ಲೇಶಾದಿಗಳನ್ನು ಪರಿಹರಿಸಿ, ಅವರಿಗೊಲಿದು, ಬಹುಜನ್ಮಗಳ ದೋಷಗಳನ್ನು ತಪ್ಪಿಸುವನೆಂದು ತಿಳಿಸುತ್ತಾರೆ–

**ಪ್ರತಿಪದಾರ್ಥ**

**ವ್ಯಾಪ್ಯನಂದದಿ** = ವ್ಯಾಪಕ ರೂಪಗಳಿಂದ, **ಸರ್ವಜೀವರೊಳು** = ಬ್ರಹ್ಮಾದಿ ತೃಣಾಂತ ಸಕಲ ತ್ರಿವಿಧ ಜೀವರುಗಳಲ್ಲಿ, **ಇಪ್ಪ** = ಬಿಂಬನಾಗಿ ವಿದ್ಯ

ಮಾನನಾಗಿರುವ, **ಚಿನ್ಮಯ**=ಪರಿಪೂರ್ಣಜ್ಞಾನಾನಂದಸ್ವರೂಪನಾದ ಶ್ರೀಪರಮಾತ್ಮನು, **ಘೋರ**=ಭಯಂಕರವಾದ, **ಭವ**=ಜನನ ಮರಣಾಖ್ಯವಾದ ಈ ಸಂಸಾರದಲ್ಲಿ, **ಸಂತಪ್ಯಮಾನರು**=ಬಳಲಿ, ಬಸವಳಿದು, ತಪ್ತರಾಗಿ ನಾನಾ ದುಃಖಗಳನ್ನು ಅನುಭವ ಮಾಡುತ್ತಿರುವ ಜೀವರು, **ಭಕುತಿಗಳಿಂದಲಿ**=ಸಮೀಚೀನವಾದ ದೃಢಭಕ್ತಿಭಾವದಿಂದ, **ಭಜಿಸೆ**=ನಿನ್ನನ್ನು ಕೊಂಡಾಡಿದರೆ, **ಇಹ**=ಈ ಲೋಕದಲ್ಲಿಯೂ, **ಪರದಿ**=ಪರಲೋಕದಲ್ಲಿಯೂ, **ಪ್ರಾಪ್ಯನಾಗುವನು**=ಅವರ ದುಃಖಾದಿಗಳನ್ನು ಪರಿಹರಿಸಿ, ಅವರಿಗೆ ಹೃದಯಗತ ಬಿಂಬನಾಗಿ ತನ್ನ ಅಪರೋಕ್ಷದರ್ಶನಭಾಗ್ಯ ಕರುಣಿಸುವನು. **ಅವರವರ**=ಆಯಾಯಾ ಜೀವರ, **ಅವಗುಣಗಳ**=ದೋಷಯುಕ್ತವಾದ ಅವಗುಣಗಳನ್ನು, **ಒಪ್ಪುಗೊಂಬನು**=ಕ್ಷಮಾಮಾಡಿ, ಅವರ ಸೇವೆಗೆ ಒಲಿಯುವನು. **ಭಕ್ತವತ್ಸಲ**=ತನ್ನ ಭಕ್ತರಲ್ಲಿ ವಾತ್ಸಲ್ಯವನ್ನು ಹೊಂದಿರುವ ಶ್ರೀಹರಿಯು, **ಅವರಿಗೆ**=ತನ್ನ ನಿಜಭಕ್ತರಿಗೆ, **ಬಹುಜನ್ಮದೋಷಗಳ**=ಹಿಂದಿನ ಅನೇಕಾನೇಕ ಜನ್ಮಗಳ ದೋಷಗಳನ್ನು, **ತಪ್ಪಿಸುವ**=ನಾಶಗೈದು, ಉದ್ಧರಿಸುವನು. ॥ ೨೭ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಭಕ್ತರ ದೋಷ ಪರಿಹಾರ ಮಾಡಿ ಉದ್ಧಾರ ಮಾಡತಾನೆಂತ ಹೇಳತಾರೆ.

ವ್ಯಾಪ್ಯ, ವ್ಯಾಪಕ ಎಂತ ಎರಡು ವಿಧ. ವ್ಯಾಪ್ಯ ಎಂದರೆ, ಅಲ್ಪಶಕ್ತಿ ಅಲ್ಪಜ್ಞಾನ ಇತ್ಯಾದಿ ಅಲ್ಪಗಳ ಸಾಂಕೇತವು. ವ್ಯಾಪಕ ಎಂದರೆ ಪೂರ್ಣಶಕ್ತಿ ಪೂರ್ಣಜ್ಞಾನ ಇತ್ಯಾದಿ ಮಹತ್ತುಗಳಿಗೆ ಸಾಂಕೇತವು. ಅಲ್ಪಶಕ್ತಿ ಅಲ್ಪಜ್ಞಾನಾದಿಗಳಿಂದ ಯುಕ್ತರಾದ ಬ್ರಹ್ಮಾದಿ ತೃಣಾಂತ ತ್ರಿವಿಧಜೀವರೊಳು, ರಮಾದೇವಿಯುರಲ್ಲೂ, ಪೂರ್ಣಶಕ್ತಿ ಪೂರ್ಣಜ್ಞಾನನಾದ ಅಪರಿಚ್ಛಿನ್ನನಾದ ಪರಮಾತ್ಮ ಅವರವರಿಗೆ ಬಿಂಬನಾಗಿ, ವ್ಯಾಪ್ಯರಾದ ಅಸ್ವತಂತ್ರ ಚೇತನರ ಸ್ವರೂಪಶಕ್ತಿ, ಜ್ಞಾನ ಇವುಗಳೋಪಾದಿಯಲ್ಲಿ, ತನ್ನ ಜ್ಞಾನ-ಶಕ್ತಿಗಳ ಪ್ರದರ್ಶನ ಮಾಡತಾ ಇರೋವನಾಗಿದ್ದಾನೆ. ಇದರಿಂದ ಅಲ್ಪಶಕ್ತ ಎಂತಾಗಲೀ, ಅಲ್ಪಜ್ಞಾನಿ ಎಂತಾಗಲೀ ತಿಳಿಯು

ಬಾರದು. ಅಧಿಷ್ಠಾನದ ಯೋಗ್ಯತಾನುಸಾರ ಇರೋವನಾಗಿದ್ದಾನೆ. ಜೀವನಲ್ಲಿ ಜೀವಗೆ ತಿಳಿಸದೇನೆ ತನ್ನ ಅಚಿಂತ್ಯ ಕಾರ್ಯಗಳ ನಡೆಸತಾನೆ ಇರತಾನೆ. ಕ್ರೂರವಾದ ನರಕಾದಿಗಳಿಗೆ ಗುರಿಮಾಡತಕ್ಕ ಸಂಸಾರದಲ್ಲಿ, ಮಹಾಕ್ಲೇಶಾದಿಗಳ ಕೊಡತಕ್ಕ ಅನೇಕ ವಿಧವಾದ ಪಾಪಗಳ ಮಾಡಿಸುವಂಥಾ ಘೋರವಾದ ಅಹಂಮಮತಾದಿಗಳಿಂದ ಸಂಸಾರದಲ್ಲಿ ಚಂದಾಗಿ ತಪ್ತರಾಗಿ ನಾನಾದುಃಖಗಳ ಅನುಭವ ಮಾಡತಕ್ಕವರು, ಭಕ್ತಿ ಜ್ಞಾನ ವೈರಾಗ್ಯಗಳಿಂದ ಯುಕ್ತರನ್ನಾಗಿ ಮಾಡಿ, ಅಹಂಮಮತಾದಿಗಳ ಬಿಡಿಸಿ, ಉದ್ಧಾರಮಾಡಬೇಕೆಂದು ಗುರೂಪದೇಶಮಾರ್ಗದಿಂದ ಭಜಿಸಿದರೆ, ಅಹಂಮಮತಾದಿಗಳ ಬಿಡಿಸಿ ಇಹಲೋಕದಲ್ಲಿ ಸಂಸಾರದುಃಖಗಳ ಪರಿಹಾರ ಮಾಡಿ ಪರಲೋಕದಲ್ಲಿ ನರಕಾದ್ಯನರ್ಥಗಳ ತಪ್ಪಿಸಿ ಹೃದಯಗತಬಿಂಬ ಅಪರೋಕ್ಷದಿಂದ ತಿಳಿಸಿಕೋತಾನೆ. ಇಂಥಾವರ ಅವಗುಣಗಳ ಸುಗುಣತ್ವೇನ ಒಪ್ಪಿಕೋತಾನೆ. ತನ್ನ ಭಕ್ತರಲ್ಲಿ ಅತಿ ಪ್ರೇಮಾಸ್ಪದನಾದ ಪರಮಾತ್ಮ ಇಂಥಾ ಅಧಿಕಾರಿಗೆ, ಅಪರೋಕ್ಷಾತ್ಪೂರ್ವದಲ್ಲಿ ಮಾಡಿದ ಬಹುಜನ್ಮದೋಷಗಳ ನಾಶರೂಪದಿಂದ ತಪ್ಪಿಸೋವನಾಗತಾನೆ. ಇಂಥಾ ಅಧಿಕಾರಿಗಳು ಅಪರೋಕ್ಷಾನಂತರ ಅನವರತ ಮಾಡಿದ ಕರ್ಮಗಳ ಅವರಿಗೆ ನಿರ್ಲೇಪ ಮಾಡತಾನೆಂತ ತಾತ್ಪರ್ಯ ಮತ್ತು ಅವರಿಗೆ ಅನವರತ ಜ್ಞಾನ-ಭಕ್ತ್ಯಾದಿಗಳು ನ್ಯೂನವಾಗದೇ ಅತಿಶಯವಾಗತಾ ಇರತವೆ ಎಂತ ತಾತ್ಪರ್ಯ.

**ವಿಶೇಷಾರ್ಥ**– ಈ ಶ್ಲೋಕದಲ್ಲಿ ಮುಕ್ತಿಯೋಗ್ಯರಿಗೆ ಅಪರೋಕ್ಷವಿಚಾರ ಹೇಳಿತು. ಆದರೆ ತಮೋಯೋಗ್ಯರಿಗೆ, ನಿತ್ಯಸಂಸಾರಿಗಳಿಗೆ ಅಪರೋಕ್ಷ ಆಗೋ ವಿಚಾರ ಬಹಳ ಗಹನವಾದಕಡಿಯಿಂದ ಸಂಧ್ಯಂತ್ಯದಲ್ಲಿ ಸೂಕ್ಷ್ಮವಾಗಿ ಸಾರಾಂಶವು ಬರೆಯಲ್ಪಡುತ್ತದೆ. ॥ ೨೭ ॥

**೨. ಭಾವಪ್ರಕಾಶಿಕೆ**

ವ್ಯಾಪ್ತನೆಂದರೆ ಒಳಗೂ ಹೊರಗೂ, ಸಂಪುಟದಿಂದ ಸಕಲ ಪ್ರಾಣಿಗಳನ್ನೂ ಆವರಿಸಿಕೊಂಡಿರುವವನು. ವ್ಯಾಪ್ಯನೆಂದರೆ ಆವರಿಸಿಕೊಳ್ಳಲ್ಪಟ್ಟವನೆಂದರ್ಥ. ಚಿದಾನಂದ ಸ್ವರೂಪನಾದ ಶ್ರೀಹರಿಯು, ವ್ಯಾಪ್ಯರಾದ ಸಾಮಾನ್ಯ ಜೀವರಂತೆ ಸರ್ವಜೀವರೊಳಗೂ ಇರುವನು. ಅವರಲ್ಲಿ ಘೋರವಾದ ಸಂಸಾರದಿಂದ ಸಂತ

ಪ್ತರಾಗಿ ಭಕ್ತಿಯಿಂದ ತನ್ನನ್ನು ಮೊರೆಹೊಕ್ಕವರಾರೊ ಅವರಿಗೆ ಭಕ್ತವತ್ಸಲನೆಂದು ಬಿರಿದು ಪೊತ್ತಾಮೇಲೆ ಭಕ್ತರಧೀನನಾಗಿರಬೇಡವೆ ಎಂಬ ದಾಸರಾಯರ ವಾಕ್ಯದಂತೆ ಸ್ವಯಂ ವಶನಾಗುವನು. ಅವರಲ್ಲಿರುವ ಅವಗುಣಗಳನ್ನು ಲಕ್ಷೀಕರಿಸನು. ಭಕ್ತವತ್ಸಲನಾದ ಸ್ವಾಮಿಯು, ಆ ಭಕ್ತರಿಗೆ ಬರುವ ಜನನ ಮರಣಾದಿ ಕಷ್ಟಗಳನ್ನು ಪರಿಹರಿಸಿ, ಶಾಶ್ವತ ಸುಖವನ್ನು ಕೊಡುವನು. ॥ ೨೭ ॥

**೩. ಭಾವದರ್ಪಣ**

ವ್ಯಾಪ್ಯೇತಿ । ತಿಳಿಯದೇ ಇದ್ದವ, ಅಂದದಿ ವ್ಯೋಪಾದೇಲಿ, ಪ್ರಾಪ್ಯನಾಗುವ ಹೊಂದಲಿಕ್ಕೆ ಯೋಗ್ಯನಾಗುವ ॥ ೨೭ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ವ್ಯಾಪ್ಯ–ಇತಿ ॥ ಅಲ್ಪದೇಶವೃತ್ತಿತ್ವಾತ್ ॥ ಚಿನ್ಮಯ–ಜ್ಞಾನಪ್ರಚುರ । ಸೇ ಇರಲು । ಒಪ್ಪುಗೊಂಬನು ಕ್ಷಮಿಸುವ ॥ ೨೭ ॥

**ಕನ್ನಡಾರ್ಥ**

ಹರಿಯು ಸರ್ವಗತತ್ವವನ್ನು ನಿರೂಪಿಸುತ್ತಾರೆ–ವ್ಯಾಪ್ಯ ಎಂಬ ಪದ್ಯದಿಂದ. ಕಡಿಮೆಯಾದ ಪ್ರದೇಶದಲ್ಲಿ ಇರುವ ವಸ್ತುವಿಗೆ ವ್ಯಾಪ್ಯವೆಂದು ಕರೆಯುತ್ತಾರೆ. ವ್ಯಾಪ್ಯವಸ್ತುವಿನಂತೆ ಜೀವನಲ್ಲಿ ಪರಮಾತ್ಮನ ಸಂಬಂಧವಿದ್ದರೂ ಪರಮಾತ್ಮನು ಪೂರ್ಣನೇ ಆಗಿರುತ್ತಾನೆ. ಜೀವರ ದೇಹವ್ಯಾಪಾರ ಮಾಡಿಸುವದಕ್ಕಾಗಿ ಜೀವ ದೇಹಗಳಲ್ಲಿ ಬಂದು ಇರುತ್ತಿದ್ದರೂ ಹರಿಯ ಪೂರ್ಣತ್ವಕ್ಕೆ ವಿರೋಧ ಬರುವುದಿಲ್ಲ.

ಚಿನ್ಮಯ–ಪೂರ್ಣವಾದ ಜ್ಞಾನದಿಂದ ತುಂಬಿಕೊಂಡಿರುವವನು. ಭಜಿಸೆ–ಭಜನೆಮಾಡಲು, ಒಪ್ಪಗೊಂಬುವ ಅವರ ಅಪರಾಧಗಳನ್ನು ಕ್ಷಮಿಸಿಬಿಡುತ್ತಾನೆ ॥ ೨೭ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ತತ್ತಚ್ಛಕ್ತಿಪ್ರದನಾಗಿ ಅಲ್ಲಲ್ಲಿದ್ದಾನೆಂದು ತಿಳಿಸುತ್ತಾರೆ, ವ್ಯಾಪ್ತನೆಂದು,

ಸರ್ವಜೀವರಲ್ಲೂ ವ್ಯಾಪ್ತನಂದದಲಿ ಎಂದರೆ, ಅಧೀನ ಸ್ವಲ್ಪಶಕ್ತಿಯಿದ್ದವನಂತೆ ಅವರ ಶಕ್ತ್ಯಾದಿಗಳನ್ನೇ ವ್ಯಕ್ತಮಾಡುತ್ತಾ, ತಾನು ಪೂರ್ಣಶಕ್ತನಾಗಿರುವನು. ಚಿನ್ಮಯ ಎಂಬ ಜ್ಞಾನಸ್ವರೂಪ ಶ್ರೀಹರಿ, ದುಃಖ–ಭಯಾದಿಗಳಿಂದ ಕ್ರೂರವಾದ ಭವವೆಂಬ ಜನನ ಮರಣರೂಪವಾದ ಸಂಸಾರದಲ್ಲಿ ಸಂತಾಪಪಡುತ್ತಿರುವ ಭಕ್ತರು ಪರಮಸ್ನೇಹರೂಪಭಕ್ತಿಯಿಂದ ಭಜಿಸಿದರೆ, ಇಹಪರದಲ್ಲೂ ಸಹ ಪ್ರಸಾದದಿಂದ ದೊರಕುವನು. ಭಕ್ತವತ್ಸಲನಾದ್ದರಿಂದ ಆ ಸಜ್ಜನರ ಅಪರಾಧವೆಂಬ ಅವಗುಣಗಳನ್ನು ಕ್ಷಮಿಸಿ ಒಪ್ಪಿಕೊಳ್ಳುವನು. ಸದಾ ಅವರಿಗೆ ಜನ್ಮಾದಿ ದೋಷವನ್ನೂ ಬಂಧನವನ್ನೂ ತಪ್ಪಿಸುವನು. ॥ ೨೭ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಸರ್ವಜೀವರುಗಳಲ್ಲಿ ಶ್ರೀಹರಿಯು ವ್ಯಾಪಕನಾಗಿರುವನು. ಜೀವರು ಶ್ರೀಹರಿಯಿಂದ ವ್ಯಾಪ್ತರಾಗಿದ್ದಾರೆ. ಶ್ರೀಪರಮಾತ್ಮನು ತ್ರಿವಿಧಜೀವರುಗಳಲ್ಲಿ ತದಾಕಾರನಾಗಿ, ತದ್ರೂಪನಾಗಿ, ಜೀವನಾಮಕನಾಗಿ ಬಿಂಬರೂಪದಿಂದ ವ್ಯಾಪಕನಾಗಿರುವನು. ಜೀವಾಂತರ್ಗತ ಈ ಭಗವದ್ರೂಪಕ್ಕೆ ಅಂತರಾತ್ಮನೆಂದು ಹೆಸರು. ಜೀವರು ಅಲ್ಪಶಕ್ತರು. ಅಸ್ವತಂತ್ರರು, ಅಲ್ಪಜ್ಞರು. ಅಂತಹ ಜೀವರ ಸ್ವರೂಪದಲ್ಲಿ ಅಂತರ್ಯಾಮಿರೂಪದಿಂದ ಸರ್ವಚೇಷ್ಟಾಪ್ರವರ್ತಕನಾದ ಬಿಂಬನು ಪರಿಪೂರ್ಣನು, ಸರ್ವತಂತ್ರ ಸ್ವತಂತ್ರನು.

ನಿತ್ಯನೂ, ಅನಾದಿಯೂ ಆದ ಜೀವನು ಜನನಮರಣಾಖ್ಯವಾದ ಈ ಸಂಸಾರದ ಸುಳಿಯಲ್ಲಿ ಸಿಕ್ಕು, ಅಹಂಮಮಕಾರಾದಿಗಳಿಂದ ಗ್ರಸ್ತನಾಗಿ, ಅಹಂಕರ್ತೃತ್ವಭಾವವನ್ನು ಹೊಂದಿ, ಬಸವಳಿದು ಬೆಂಡಾಗುವನು. ಇದರಿಂದ ನೊಂದ ಜೀವರು ಸರ್ವೇಶನಾದ ಶ್ರೀಹರಿಯನ್ನು ಭಕ್ತಿಭಾವದಿಂದ ಕೊಂಡಾಡಿದಾಗ, ಕರುಣಾಮಯನಾದ ಆ ಕಮಲದಳಾಯತಾಕ್ಷನು, ತನ್ನ ಭಕ್ತರ ಆಪತ್ತಿಗೆ ಬಂದೊದಗಿ, ಅವರ ಭವಜನಿತ ಕ್ಲೇಶಗಳನ್ನು ಪರಿಹರಿಸಿ, ಇಹದಲ್ಲಿ ಸಕಲ ಸುಖಗಳನ್ನು ಇತ್ತು, ಪರದಲ್ಲಿ ನಿತ್ಯಾನಂದರೂಪವಾದ ಮುಕ್ತಿಸುಖವನ್ನು ಕೊಡುವನು.

ತನ್ನ ಭಕ್ತರ ಅವಸರಕೆ ಪ್ರಾಪ್ಯನಾಗುವನು. ಅಂದರೆ, ಭಕ್ತರಿಂದ ಹೊಂದ

ಲ್ಪಡುವನು. ಅವರ ದೋಷಗಳೇನೇ ಇರಲಿ, ನ್ಯೂನತೆಗಳು ಎಷ್ಟೇ ಇರಲಿ, ಅವರ ನಿಷ್ಕಲ್ಮಷವಾದ ಭಕ್ತಿಗೆ ವಶನಾಗುವನು. ಆದ್ದರಿಂದ ಭಕ್ತವತ್ಸಲನೆನಿಸಿದ್ದಾನೆ.

## ಪದ್ಯ ೨೮

**ಮೂಲ**

**ಹಲವು ಬಗೆಯಲಿ ಹರಿಯ ಮನದಲಿ ।**
**ಒಲಿಸಿ ನಿಲ್ಲಿಸಿ ಏನು ಮಾಡುವ ।**
**ಕೆಲಸಗಳು ಅವನಂಘ್ರಿಪೂಜೆಗಳೆಂದು ನೆನೆವುತಿರು ॥**
**ಹಲಧರಾನುಜ ತಾನೆ ಸರ್ವ ।**
**ಸ್ಥಳಗಳಲಿ ನೆಲೆಸಿದ್ದು ನಿಶ್ಚಂ ।**
**ಚಲ ಭಕುತಿ ಸುಜ್ಞಾನ ಭಾಗ್ಯವ ಕೊಟ್ಟು ಸಂತೈಪ ॥ ೨೮ ॥**

**ಅವತರಣಿಕೆ**

ಶ್ರೀಹರಿಯನ್ನು ಒಲಿಸಿಕೊಂಡು, ತಾನು ಮಾಡುವ ಸರ್ವಕರ್ಮಗಳೂ ಶ್ರೀಪರಮಾತ್ಮನ ಪಾದಪೂಜೆಗಳೆಂದು ಅನವರತ ಸ್ಮರಿಸುತ್ತಿರುವ ಭಕ್ತಜನರಿಗೆ ಶ್ರೀಕೃಷ್ಣನು, ಸಮೀಚೀನವಾದ ಜ್ಞಾನಗಳೆಂಬ ದೈವೀಸಂಪತ್ತನ್ನು ಕೊಟ್ಟು ಕಾಪಾಡುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಹಲವು ಬಗೆಯಲಿ**=ನಾನಾಪ್ರಕಾರವಾಗಿ, **ಹರಿಯ**=ಸರ್ವೋತ್ತಮನಾದ ಶ್ರೀಪರಮಾತ್ಮನನ್ನು, **ಮನದಲಿ**=ಮನೋಗೋಳಕವಾದ ಹೃದಯಾಕಾಶದಲ್ಲಿ, **ಒಲಿಸಿ**=ಅವನನ್ನು ಮೆಚ್ಚಿಸಿ, **ನಿಲ್ಲಿಸಿ**=ಭಗವತ್ಪ್ರತೀಕವನ್ನು ಸ್ಥಾಪಿಸಿ ಬಿಂಬಾವಾಹನಪೂರ್ವಕವಾಗಿ, **ಏನು ಮಾಡುವ ಕೆಲಸಗಳು**=ತನ್ನ ಅಧಿಷ್ಠಾನ

ದಲ್ಲಿ ನಡೆಯುತ್ತಿರುವ ಸಕಲ ಕರ್ಮರೂಪವಾದ ವ್ಯಾಪಾರಗಳು, **ಅವನಂಘ್ರಿ**=ಮನೋಪ್ರತೀಕಾಂತರ್ಗತ ಪರಮಾತ್ಮನ ಪಾದಪದ್ಮಗಳಿಗೆ ಮಾಡುವ, **ಪೂಜೆಗಳೆಂದು**=ಪೂಜಾರೂಪವಾದ ಸೇವೆ ಎಂಬ ಅನುಸಂಧಾನದಿಂದ, **ನೆನೆವುತಿರು**=ಸ್ಮರಿಸುತ್ತಾ ಇರು. **ಹಲಧರ**=ನೇಗಿಲನ್ನೇ ಆಯುಧವನ್ನಾಗಿ ಧರಿಸಿರುವ ಬಲರಾಮನ, **ಅನುಜ**=ತಮ್ಮನಾದ ಶ್ರೀಕೃಷ್ಣರೂಪೀ ಪರಮಾತ್ಮನು, **ತಾನೇ**=ಸ್ವಯಂ ಇಚ್ಛೆಯಿಂದ, **ಸರ್ವಸ್ಥಳಗಳಲಿ**=ಸಮಸ್ತ ದೇಶಗಳಲ್ಲಿ (ದೇಹಗತ ಏಕಾದಶೇಂದ್ರಿಯಗಳಲ್ಲಿ), **ನೆಲೆಸಿದ್ದು**=ಆವಾಸವಾಗಿದ್ದು, **ನಿಶ್ಚಂಚಲ**=ದೃಢವಾದ, **ಭಕುತಿ**=ಭಕ್ತಿಯೇನು, **ಸುಜ್ಞಾನ**=ಸಮೀಚೀನವಾದ ಜ್ಞಾನವೇನು, **ಭಾಗ್ಯವ**=ದೈವೀಸಂಪತ್ತುಗಳನ್ನು, **ಕೊಟ್ಟು**=ನೀಡಿ, **ಸಂತೈಪ**=ಸಂರಕ್ಷಣೆ ಮಾಡುವನು. ॥ ೨೮ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಪರೋಕ್ಷ ಜ್ಞಾನಕ್ಕೆ ಸಾಧನಮಾರ್ಗ ಹೇಳತಾರೆ.

ಸರ್ವಜ್ಞರ ಶಾಸ್ತ್ರವನ್ನು ಶ್ರವಣ-ಮನನಾದಿಗಳು ಮಾಡಿ ಸಜ್ಜನರ ಸಾಂಗತ್ಯದಿಂದ, ಅವರು ಆಡೋ ಮಾತುಗಳನ್ನು ಶ್ರದ್ಧಾದಿಂದ ಮನಕೆತಂದು, ಹೇಯದಾವುದು, ಅಹೇಯ ದಾವುದು ಇತ್ಯಾದಿಗಳ ನಾನಾ ಪ್ರಕಾರ ಆಲೋಚನಿಮಾಡಿ, ಪರಮಾತ್ಮ ಸರ್ವೋತ್ತಮನೆಂದು ತಿಳಿದು, ಇಂಥಾ ಪರಮಾತ್ಮನ, ಮನೋಗೋಳಕವಾದ ಹೃದಯಾಕಾಶದಲ್ಲಿ, ಸುಲಕ್ಷಣವಾದ ಪ್ರತಿಮಾವನ್ನ ಉಪಾಸಮೂರ್ತಿಯನ್ನಾಗಿ ಮಾಡಿಕೊಂಡು, ಭಕ್ತಿಯಿಂದ ತಂತ್ರಸಾರೋಕ್ತ ಪ್ರಕಾರ ಬಿಂಬಾವಾಹನ ಮಾಡಿ ಎಂದರೆ ಬಿಂಬ ಇಂಥಾವನೆಂದು ತಿಳಿಯುದ್ದರಿಂದ, ಆವಾಹನಮಾಡೋ ವಿಧ ಹ್ಯಾಂಗೆಂದರೆ, ಬಿಂಬನಲ್ಲಿ ಸರ್ವರೂಪಗಳೂ ಇರೋವಾಗಿ ಅವೆ, ನವನಾರೀಕುಂಜರವತ್ (ಏಳನೇ ಸಂಧಿ ಶ್ಲೋಕ ೨೫). ಅದರಲ್ಲಿ ವರ್ತಮಾನ ಉಪಾಸ್ಯರೂಪವೂ ಅದೆ. ಈ ರೂಪ ಬಿಂಬಗತ ಅನೇಕರೂಪಗಳೊಳಗೆ ಏಕದೇಶರೂಪವಾದ್ದರಿಂದ ಉಪಾಸ್ಯ ಪ್ರತಿಮಾಂತರ್ಗತ ತದಾಕಾರರೂಪದಲ್ಲಿ

ಏತಾದೃಶರೂಪವೇ ಬಿಂಬನಲ್ಲಿ ಏಕದೇಶವಾಗಿ ಇರತಕ್ಕದ್ದರನ್ನ ಬಿಂಬ ಕಣ್ಣಿಗೆ ಕಾಣದಕಾಲಕ್ಕೂ, ಅನುಸಂಧಾನದಿಂದ ಮನಃಸಂಕಲ್ಪದಿಂದ ಆವಾಹನ ಮಾಡಿದರೆ, ನಮಗೆ ಗೋಚರವಲ್ಲದೇನೆ ಪರಮಾತ್ಮ ಆವಾಹಿತನಾಗತಾನೆ. ಈ ಪ್ರಕಾರ ಅನುಸಂಧಾನದಿಂದ ಪೂಜಾ ಮಾಡತಾ, ಈ ಪ್ರಕಾರ ಬಾಹ್ಯದಲ್ಲಿ ಬಹುಕಾಲ ಪೂಜಾ ಮಾಡಿ, ಈ ಸಂಸ್ಕಾರಬಲದಿಂದ ಇದೇ ಪ್ರತಿಮಾವನ್ನ ಹೃದಯಾಕಾಶದಲ್ಲಿ ನಿಲ್ಲಿಸಿ, ಅಲ್ಲಿ ಮಾನಸನಿರ್ಮಿತ ದ್ರವ್ಯಾದಿಗಳಿಂದ ಪೂಜಾದಿಗಳ ಮಾಡುತ್ತ, ಅಂತರ್ಗತಗಳಾದ ಭಗವದ್ರೂಪಗಳಿಗೆ ಪರಸ್ಪರ ಐಕ್ಯಚಿಂತನಾ ಮಾಡಿ, ಪೂಜ್ಯ ಪೂಜಕ ಪೂಜಾಸಾಧನಿಗಳು ನೀನೇ ಎಂದು ತಿಳಿದು, ಭಗವದ್ರೂಪಗಳಿಂದ ಭಗವದ್ರೂಪಗಳಿಗೆ ಪೂಜಾತ್ವೇನ ಅನುಸಂಧಾನ ಮಾಡಿ ಅರ್ಪಿಸತಾ ಬಂದರೆ ಪರಮಾತ್ಮ ಒಲಿಯೋವನಾಗತಾನೆ. ಇಂಥಾ ಪೂಜಾದಿಂದ ಒಲಿಸಿ ಏನೇನು ಮಾಡುವ ಕೆಲಸಗಳು, ಏಕದಶೇಂದ್ರಿಯಗಳಿಂದ ಏನೇನು ಮಾಡುವ ವ್ಯಾಪಾರಗಳು, ಸ್ವಾಧೀನಕರ್ತನಾದ ಪರಮಾತ್ಮನ ಕ್ರಿಯಾ ದ್ವಾರಾ ಅವನ ಆಧೀನ ಕರ್ತೃತ್ವ ಉಳ್ಳ ಪ್ರತಿಬಿಂಬನಾದ ತಾನು ಮಾಡತೇನೆಂತ ತಿಳಿದು, ಅಹಂ ಸ್ವಾಧೀನಕರ್ತಾ ಎಂಬುದನ್ನು ಮರೆತು ಈ ರೀತ್ಯಾ ಯಾವತ್ತೂ ಕೆಲಸಗಳ ಮಾಡುತ್ತಾ, ಆ ಯಾವತ್ತೂ ಕೆಲಸಗಳು, ಉಪಾಸ್ಯ ಪ್ರತೀಕಾಂತರ್ಗತ ಪರಮಾತ್ಮನ ಪಾದಗಳಿಗೆ ಮಾಡತಕ್ಕ ಪೂಜಾ ಎಂತ ಅನುಸಂಧಾನ ಮಾಡಿ, ಸರ್ವತ್ರದಲ್ಲಿ, ಸರ್ವಕಾಲದಲ್ಲಿ ಈ ಉಪಾಸ್ಯಮೂರ್ತಿಯನ್ನು ನೆನೆಯುತ್ತಾ ಇರೋವನಾಗು. ಪೂಜಾ ಎಂದರೆ ಅರ್ಪಿಸೋಣ. ಮಾಡತಕ್ಕ ಸರ್ವವ್ಯಾಪಾರಾಂತರ್ಗತ ಭಗವದ್ರೂಪಗಳಿಗೂ, ಉಪಾಸ್ಯಪ್ರತೀಕಾಂತರ್ಗತ ಭಗವದ್ರೂಪಗಳಿಗೂ ಐಕ್ಯಚಿಂತನಾದಿಂದ ನೆನೆಯುತ್ತಾ ಇರು. ಇದೇ ಪೂಜಾ ಎಂತ ತಾತ್ಪರ್ಯ. ನೇಗಿಲು ಧರಿಸಿ ಇರುವಂಥಾ ಬಲರಾಮದೇವರು ಇವನ ತಮ್ಮನಾದ ಶ್ರೀಕೃಷ್ಣದೇವರು ತನ್ನ ಇಚ್ಛಾದಿಂದ ತಾನೇನೇ ತನ್ನ ಸಮಸ್ತವಾದ ಏಕಾದಶೇಂದ್ರಿಯಗಳಲ್ಲಿ ಆವಾಸನಾಗಿದ್ದು ವ್ಯಾಪಾರಗಳ ಮಾಡಿಸತಕ್ಕ ಇಂದ್ರಿಯಾಂತರ್ಗತನಾದ ಪರಮಾತ್ಮ, ಚಂಚಲರಹಿತವಾದ ಭಕ್ತಿಯೇನು, ವೈರಾಗ್ಯವೇನು, ಹರಿಸರ್ವೋತ್ತಮ ವಾಯುಜೀವೋತ್ತಮ ತಾರತಮ್ಯ ಪಂಚಭೇದವೆಂಬೋ ಸಮೀಚೀನಜ್ಞಾನ ಅತಿಶಯವಾಗಿ ಅತಿಧಾರಢ್ರ್ಯರೂಪವಾದ ಇಂಥಾ ಭಾಗ್ಯವ ಕೊಟ್ಟು ಸಂರಕ್ಷಣೆ ಮಾಡುವ, ಅಜ್ಞಾನಾದಿಗಳ ಕೊಡದೆ ಕಾಯುವನು. ॥ ೨೮ ॥

### ೨. ಭಾವಪ್ರಕಾಶಿಕೆ

ಸರ್ವಪ್ರಕಾರದಿಂದಲೂ ಪರಮಾತ್ಮನಲ್ಲಿ ದೃಢವಾದ ಭಕ್ತಿಯನ್ನಿಟ್ಟು ಮಾಡುವ ಭಕ್ತಿಯಿಂದ ಪರಮಾತ್ಮನು ಒಲಿಯುವಂತೆ ಮಾಡಿಕೊಂಡು ನಿಶ್ಚಂಚಲವಾಗಿ ಮನಸ್ಸಿನಲ್ಲಿ ಪರಮಾತ್ಮನನ್ನು ನಿಲ್ಲಿಸಿ ನೀನು ಮಾಡುವ ಪ್ರತಿಯೊಂದು ಕೆಲಸವೂ ಪರಮಾತ್ಮನ ಪೂಜೆ ಎಂದೇ ಭಾವಿಸು. ಹೀಗೆ ಮಾಡುವುದರಿಂದ ಶ್ರೀಕೃಷ್ಣನು ತಾನೇ ಸರ್ವತ್ರ ಇದ್ದು ನೀನು ಮಾಡುವ ಎಲ್ಲಾ ಕೆಲಸವನ್ನೂ ತನ್ನ ಪೂಜೆಯೆಂದೇ ಸ್ವೀಕರಿಸಿ ಅವಿಚ್ಛಿನ್ನವಾದ ಭಕ್ತಿಯನ್ನೂ, ದಿವ್ಯವಾದ ಜ್ಞಾನಸಂಪತ್ತನ್ನೂ ಕೊಟ್ಟು ನಿನ್ನನ್ನು ಉದ್ಧರಿಸುವನು ಎಂದು ದಾಸರಾಯರು ಸಚ್ಛಿಷ್ಯರಿಗೆ ಪ್ರೀತಿಯಿಂದ ಉಪದೇಶರೂಪವಾಗಿ ಹೇಳಿರುತ್ತಾರೆ. ॥ ೨೮ ॥

### ೩. ಭಾವದರ್ಪಣ

॥ ಹಲವು ಬಗೆ ಇತಿ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಹಲವು ಇತಿ ॥ ಹಲವು ಬಗೆ–ಸರ್ವಪ್ರಕಾರ ॥ ಹಲಧರಃ–ಬಲರಾಮಃ ಸಂತೈಪ–ರಕ್ಷಿಪ ॥ ೨೮ ॥

### ಕನ್ನಡಾರ್ಥ

ಹರಿಯ ಒಲುಮೆ ಉಪಾಯುವನ್ನೂ, ಬಗೆಯುನ್ನೂ ತಿಳಿಸುತ್ತಾರೆ– "ಹಲವು ಬಗೆ" ಎಂಬ ಈ ಪದ್ಯದಿಂದ. ಹಲವು ಬಗೆಗಳು–ವಿವಿಧವಾದ ಧ್ಯಾನದ ಪ್ರಕಾರಗಳು. ಖಂಡಧ್ಯಾನ–ಅಖಂಡಧ್ಯಾನ ಎಂದು ಮುಂತಾಗಿ ಭಾಗವತಾದಿ ಶಾಸ್ತ್ರಗಳಲ್ಲಿ ಹೇಳಿದಂತೆ, ಪರಿಪರಿಯಿಂದ ಚಿಂತಿಸಬೇಕು ಎಂದು ತಾತ್ಪರ್ಯ. ಹಲಧರಾನುಜ ಹಲ–ನೇಗಿಲನ್ನು ಧರಿಸಿದ ಬಲರಾಮನ ಅನುಜ ತಮ್ಮನಾದ ಶ್ರೀಕೃಷ್ಣ, ಸಂತೈಪ–ರಕ್ಷಿಸುತ್ತಾನೆ. ॥ ೨೮ ॥

### ೫. ಶ್ರೀಗುರುಹೃದಯಪ್ರಕಾಶಿಕೆ

ಭಕ್ತಿಸಂಪಾದನೋಪಾಯ ಬೋಧಿಸುತ್ತಾರೆ, ಹಲವು ಎಂದು. ದೇವರ ಚರಿತ್ರೆ, ಶ್ರವಣ ಮೊದಲಾದ ಅನೇಕವಿಧ ಸಾಧನಗಳಿಂದ ಅಥವಾ ಅನೇಕವಿಧ ತಾಪತ್ರಯಗಳಲ್ಲೂ, ಮನಸ್ಸು, ಬಿಡದೆ ದೇವರಲ್ಲಿರುವ ಉಪಾಯದಿಂದ ಮನಸ್ಸಿನಲ್ಲಿ ಶ್ರೀಹರಿಯನ್ನು ಒಲಿಸಿ ನಿಲ್ಲಿಸಿಕೊಂಡು, ಏನು ಮಾಡುವ ಲೌಕಿಕ-ವೈದಿಕ ಸರ್ವಕ್ರಿಯೆಗಳೂ ಆ ದೇವರ ಪಾದಪೂಜೆ ಎಂದು ಸ್ಮರಿಸುತ್ತಿರುವುದು. ಹಲಧರನೆಂಬ ಬಲರಾಮನ ತಮ್ಮನಾದ ಶ್ರೀಕೃಷ್ಣನು ಸರ್ವಸ್ಥಳಗಳಲ್ಲಿದ್ದು, ನಿಶ್ಚಂಚಲ ಸುಭಕ್ತಿಜ್ಞಾನವೆಂಬ ಭಾಗ್ಯವನ್ನು ಕೊಟ್ಟು ರಕ್ಷಿಸುವನು.

**ಯಸ್ಯ ಸ್ಮರಣಮಾತ್ರೇಣ ಜನ್ಮಸಂಸಾರ ಬಂಧನಾತ್ ।**
**ವಿಮುಚ್ಯತೇ ನಮಸ್ತಸ್ಮೈ ವಿಷ್ಣವೇ ಪ್ರಭು ವಿಷ್ಣವೇ ॥**

ಎಂಬ ವಿಷ್ಣುಸಹಸ್ರನಾಮಾರ್ಥ ವಿವರಿಸಲ್ಪಟ್ಟಿತು. ॥ ೨೮ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ನಮ್ಮ ಇಂದ್ರಿಯಗಳದ್ವಾರಾ ನಾನಾಪ್ರಕಾರವಾದ ಕರ್ಮರೂಪವಾದ ವ್ಯಾಪಾರಗಳು ಶ್ರೀಹರಿಯ ಪ್ರೇರಣಾನುಸಾರ ನಡೆಯುತ್ತಿರುವುವು. ತೇನವಿನಾ ತೃಣಮಪಿ ನಚಲತಿ–ಎಂಬ ಪ್ರಮಾಣಕ್ಕನುಗುಣವಾಗಿ, ಜೀವರ ಸಕಲಕಾರ್ಯಗಳಿಗೂ ಶ್ರೀಪರಮಾತ್ಮನು ಮುಖ್ಯಕಾರಣನು. ಜೀವರ ಕರ್ತೃತ್ವಶಕ್ತಿಯು ಭಗವದಧೀನವಾಗಿದೆ. ಅವನ ಪ್ರೇರಕ ಶಕ್ತಿಯಿಂದಲೇ ಅಭಿವ್ಯಕ್ತವಾಗುವುವು. ಈ ರೀತಿ ನಡೆಯುತ್ತಿರುವ ಸಕಲ ಕ್ರಿಯಾಕಲಾಪಗಳೂ ಶ್ರೀಹರಿಯ ಪಾದಪೂಜೆಗಳೆಂಬ ಉತ್ತಮಾನುಸಂಧಾನಜ್ಞಾನದಿಂದ ಅರಿತು, ಆ ಮಹಿಮಾಸಂಪನ್ನನನ್ನು ಸದಾ ಸ್ಮರಿಸುತ್ತಿರಬೇಕೆಂದು ಉಪದೇಶಿಸುತ್ತಾರೆ.

ನೇಗಿಲನ್ನು ಆಯುಧವನ್ನಾಗಿ ಹೊಂದಿರುವವನು ಬಲರಾಮನು. ಅವನ ತಮ್ಮ ಶ್ರೀಕೃಷ್ಣರೂಪೀ ಶ್ರೀಪರಮಾತ್ಮನು. ಅಂತಹ ಶ್ರೀಹರಿಯು ಸ್ವಯಂ, ಸರ್ವತಂತ್ರಸ್ವತಂತ್ರನಾಗಿ ತನ್ನನ್ನು ದೃಢವಾದ ಭಕುತಿಯಿಂದ ಭಜಿಸುವ ಭಕ್ತ

ವೃಂದವನ್ನು ಸದಾ ಸಂರಕ್ಷಿಸುತ್ತಿರುವನು.

ಅಂತಹ ಅಂತರಂಗಭಕ್ತರ ಭಕ್ತಿಯನ್ನು ವೃದ್ಧಿಗೈಸಿ, ಭಗವತ್ಸಂಬಂಧವಾದ ಸಮೀಚೀನವಾದ ಜ್ಞಾನವೆಂಬ ಸೌಭಾಗ್ಯವನ್ನು ಕರುಣಿಸಿ ಕ್ಲೇಶಾದಿಗಳನ್ನು ಪರಿಹರಿಸಿ ಸಲಹುವನು. ॥ ೨೮ ॥

## ಪದ್ಯ ೨೯

### ಮೂಲ

ದೋಷಗಂಧವಿದೂರ ನಾನಾ ।
ವೇಷಧಾರಕ ಈ ಜಗತ್ರಯ ।
ಪೋಷಕ ಪುರಾತನಪುರುಷ ಪುರುಹೂತಮುಖವಿನುತ ॥
ಶೇಷವರಪರಿಯಂಕಶಯನ ವಿ ।
ಭೀಷಣಪ್ರಿಯ ವಿಜಯಸಖ ಸಂ ।
ತೋಷಬಡಿಸುವ ಸುಜನರಿಷ್ಟಾರ್ಥಗಳ ಪೂರೈಸಿ ॥ ೨೯ ॥

### ಅವತರಣಿಕೆ

ಸರ್ವದೋಷವಿದೂರನಾದ ಶ್ರೀಹರಿಯು ಸುಜನರಾದ ತನ್ನ ಭಕ್ತರ ಸರ್ವಾಭಿಲಾಷೆಗಳನ್ನು ಪೂರ್ಣಮಾಡುತ್ತಾನೆಂದು ತಿಳಿಸುತ್ತಾರೆ–

### ಪ್ರತಿಪದಾರ್ಥ

**ದೋಷಗಂಧವಿದೂರ**=ಲವಲೇಶವೂ ದೋಷಗಳಿಲ್ಲದ, **ನಾನಾವೇಷಧಾರಕ**=ಕಾಲಕಾಲಕ್ಕೆ ಧರ್ಮಸಂರಕ್ಷಣೆಗಾಗಿ ಪರಿಪರಿಯ ಅವತಾರಗಳನ್ನೆತ್ತಿದ, **ಈ ಜಗತ್ರಯ ಪೋಷಕ**=ತ್ರಿಭುವನಾತ್ಮಕವಾದ ಈ ಜಗತ್ತನ್ನು ಸಂರಕ್ಷಿಸುವ (ಜಗದ್ರಕ್ಷಕ), **ಪುರಾತನ ಪುರುಷ**=ಆದ್ಯಂತ ರಹಿತನಾಗಿ, ಅನಾದ್ಯನಂತಕಾಲ

ದಿಂದ ಏಕಮೇವ ಅದ್ವಿತೀಯ ಪುರುಷನಾದ, **ಪುರುಹೂತಮುಖವಿನುತ**— ಇಂದ್ರ ಮತ್ತು ಅವರಿಂದ ಉತ್ತಮರಾದ ರಮಾಬ್ರಹ್ಮಾದಿ ದೇವತಾವರ್ಗದಿಂದ ಚೆನ್ನಾಗಿ ಸಂಸ್ತುತ್ಯಮಾನನಾದ, **ವರ**=ಸರ್ವಶ್ರೇಷ್ಠರಾದ, **ಶೇಷ**=ಶೇಷದೇವ ರನ್ನೇ, **ಪರಿಯಂಕಶಯನ**=ಮಂಚವನ್ನಾಗಿ ಮಾಡಿಕೊಂಡು ಪವಡಿಸಿರುವ (ಶೇಷಶಯನನಾದ ಶ್ರೀಹರಿ), **ವಿಭೀಷಣಪ್ರಿಯ**=ವಿಭೀಷಣನಿಗೆ ಪ್ರಿಯ ನಾದ, **ವಿಜಯಸಖ**=ಅರ್ಜುನನಿಗೆ ಮಿತ್ರನೆಂದೆನಿಸಿದ ಶ್ರೀಪರಮಾತ್ಮನು (ಏತಾ ದೃಶ ಗುಣಗಣಸಂಪನ್ನ), **ಸುಜನರ**=ಸಾತ್ವಿಕರಾದ ಸಜ್ಜನರ, **ಇಷ್ಟಾರ್ಥಗಳ** =ಮನೋಭಿಲಾಷೆಗಳನ್ನು, **ಪೂರೈಸಿ**=ಪೂರ್ಣಮಾಡಿ, **ಸಂತೋಷಬಡಿಸುವ** =ಆನಂದಪಡಿಸುತ್ತಾನೆ. (ಲಿಂಗಭಂಗಾನಂತರ ಸ್ವಸ್ವರೂಪಾನಂದ ಆವಿರ್ಭಾವ ರೂಪವಾದ ಮುಕ್ತಿಸುಖವನ್ನು ನೀಡಿ ಅನುಗ್ರಹಿಸುವ ಪರಮಕರುಣಾಳು) ॥೨೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಭಗವದ್ಭಕ್ತರ ಇಷ್ಟಗಳ ಪೂರ್ಣಮಾಡತಾನೆ ಎಂತ ಹೇಳತಾರೆ.

ಈ ವರ್ತಮಾನ ತ್ರಿವಿಧಜೀವರ ಅವರವರ ಸ್ವರೂಪಯೋಗ್ಯತಾನುಸಾರ ಜ್ಞಾನಗಳ ವ್ಯಕ್ತಮಾಡಿಕೊಟ್ಟು, ಅವರವರ ಸಾಧನ ಪೂರ್ತಿಮಾಡಿಸಿ, ಲಿಂಗ ಭಂಗಾನಂತರ ಅವರವರ ಯೋಗ್ಯಸ್ಥಾನಗಳಲ್ಲಿ ಇಟ್ಟು ಸಂರಕ್ಷಣ ಮಾಡುವಂಥಾ, ಅನಾದಿಕಾಲದಿಂದ ಏಕಮೇವಾದ್ವಿತೀಯನಾದ ಪುರುಷ, ಇಂದ್ರ ಇವನಿಂದ ಉತ್ತ ಮರಾದ ರಮಾಬ್ರಹ್ಮಾದಿಗಳಿಂದಲೂ, ಅವರರಾದ ಇನ್ನೂ ಯಾವತ್ತೂ ದೇವತೆ ಗಳಿಂದಲೂ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟ, ಸರ್ವಗಳೊಳಗೆ ಶ್ರೇಷ್ಠನಾದ, ಶೇಷದೇವರನ್ನ ಮಂಚವನ್ನಾಗಿ ಮಾಡಿಕೊಂಡು ಮಲಗಿರುವ ಇಂಥಾ ದೇವರು, ವಿಭೀಷಣ-ವಿ-ವಿಶೇಷಾಕಾರವಾಗಿ, ಭೀಷಣ-ಲೋಕಭಯಂಕರನಾದ ಅತಿ ಭೀಷಣ ನಾದ ಪರಮಾತ್ಮ, ತನ್ನಲ್ಲಿ ದೃಢಚಿತ್ತವುಳ್ಳ ಅಧಿಕಾರಿಗಳಿಗೆ ಪ್ರಿಯನಾದವ, ವಿಭೀಷಣಗೆ ಅತಿಪ್ರಿಯನಾದವ. ಇಂದ್ರಿಯಗಳ ವಿಷಯಾದಿಗಳಲ್ಲಿ ಬಿಡದೆ ಜಯ

ಉಳ್ಳ ಅಧಿಕಾರಿಗಳಿಗೆ ಮಿತ್ರನಾದವ, ಪಾಂಡುರಾಯನ ಮಗ ಅರ್ಜುನನಿಗೆ ಸ್ನೇಹಿತನಾದವ ಇಂಥಾ ಪರಮಾತ್ಮ, ಪಾಪಪುಣ್ಯಾತ್ಮಕ ಕರ್ಮಾನುಸಾರ ವೇಷ ಸಾಂಕೇತಗಳಾದ ನಾನಾಜನ್ಮಗಳ ಧರಿಸತಕ್ಕವರಾದ ಪ್ರಾಣಿಗಳ ಮೋಕ್ಷಕ್ಕೆ ಪ್ರತಿ ಬಂಧಕಗಳಾದ ದೋಷಸಂಬಂಧವಾದ ಪಾಪದಿಂದ ದೂರರನ್ನಾಗಿ ಮಾಡಿ, ಸ್ವರೂಪತಃ ಸಜ್ಜನರಾದವರ, ತನ್ನ ಅಪರೋಕ್ಷದ್ವಾರಾ ಲಿಂಗಭಂಗ ಐದಿಸಿ, ಸ್ವರೂಪೇಂದ್ರಿಯಗಳಿಗೆ ಇಷ್ಟವಾದ ಪ್ರಯೋಜನಗಳ ಪೂರ್ಣಮಾಡಿ, ಪ್ರಳಯಾ ವಸಾನದಲ್ಲಿ ತನ್ನ ಭಕ್ತರ ಸಂತೋಷಪಡಿಸೋವನಾಗತಾನೆ. ತ್ರಿವಿಧ ಜೀವರು ಈಶ್ವರನಿಂದ ರಚಿತರಲ್ಲ. ಮತ್ತು ಅವರವರ ಯೋಗ್ಯತಾನೂ ಈಶ್ವರನಿಂದ ರಚಿತವಲ್ಲ. ಸ್ಥೂಲದೇಹಗಳು ಈಶ್ವರನಿಂದ ರಚಿತಗಳು. ಜೀವರ ಅನಾದಿಯೋಗ್ಯ ತಾನುಸಾರ ತ್ರಿವಿಧಗತಿಯು, ಸ್ಥಿತಿಕಾಲದಲ್ಲಿ ಅನಾದಿಕರ್ಮಾನುಸಾರ ಸುಖದುಃಖಾ ದಿಗಳು ಕಾಣೋಣದರಿಂದ ಈಶ್ವರನಲ್ಲಿ ದಾವ ದೋಷವೂ ಕೂಡೋದಿಲ್ಲ. ॥೨೯॥

## ೨. ಭಾವಪ್ರಕಾಶಿಕೆ

ದೋಷಗಂಧವಿದೂರನೆಂದರೆ ಲೇಶವಾದರೂ ದೋಷದ ವಾಸನೆಯು ಹತ್ತದಿದ್ದವನೆಂದರ್ಥ. ವಿಷ್ಣುರಹಸ್ಯ ೧೫ನೆಯ ಅಧ್ಯಾಯ ೩೧ನೆಯ ಶ್ಲೋಕದಲ್ಲಿ 'ಯಥಾನಾಲೋಕತೇ ಸೂರ್ಯಸ್ತಮೋಲೇಶಮಪಿಕ್ವಚಿತ್ । ತಥಾ ದುಃಖಸ್ಯ ಲೇಶೋಽಪಿ ಕರ್ಹಿಚಿನ್ನಮಯೇಕ್ಷ್ಯತೆ'. ಸೂರ್ಯನು ಲೇಶವಾದರೂ ಕತ್ತಲನ್ನು ಹೇಗೆ ಕಾಣಲಾರನೋ ಹಾಗೆ ನಾನು ಯಾವಕಾಲದಲ್ಲಾದರೂ ದುಃಖದ ಲೇಶ ವನ್ನೂ ಕಾಣಲಾರೆನು ಎಂದು ಹಯಗ್ರೀವರೂಪಿ ಶ್ರೀಪರಮಾತ್ಮನು ಬ್ರಹ್ಮದೇವ ರಿಗೆ ಹೇಳಿರುವನು. ಅದೇ ಅಭಿಪ್ರಾಯವನ್ನೇ ದೋಷಗಂಧವಿದೂರನೆಂದು ದಾಸ ರಾಯರು ಹೇಳಿರುವರು. ॥ ೩೯ ॥

## ೩. ಭಾವದರ್ಪಣ

ದೋಷಗಂಧವಿದೂರೇತಿ ॥ ದೋಷದ ವಾಸನೆಸಹ ಅವನ ಚರಣಕ್ಕೆ ತಟ್ಟದು ಎಂಬರ್ಥ । 'ಯಥಾವಲೋಕತೆ ಸೂರ್ಯಸ್ತಮೋಲೇಶಮಪಿ ಕ್ವಚಿತ್ । ತಥಾ ದುಃಖಸ್ಯ ಲೇಶೋಽಪಿ ಕರ್ಹಿಚಿನ್ನಮಯೇಕ್ಷ್ಯತೆ' ಇತಿ ವಿಷ್ಣುರಹಸ್ಯೋಕ್ತೇಃ ॥೨೯॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ದೋಷ–ಇತಿ ॥ ಗಂಧ–ಲೇಶಃ ॥ ವಿಜಯ–ಅರ್ಜುನ ॥ ೨೯ ॥

### ಕನ್ನಡಾರ್ಥ

"ದೋಷಗಂಧವಿದೂರ" ಎಂಬಲ್ಲಿ ಗಂಧಶಬ್ದಕ್ಕೆ "ಲೇಶ"–"ತುಸು" ಎಂದು ಅರ್ಥಮಾಡಬೇಕು. ಅಂದರೆ ದೋಷದ ಲವಲೇಶವೂ ಇಲ್ಲದವನು ಎಂಬ ಅರ್ಥವು ಸಿದ್ಧವಾಗುತ್ತದೆ. "ವಿಜಯ ಸಖ" ವಿಜಯ–ಅರ್ಜುನ. ಅವನ ಸಖ–ಗೆಳೆಯ ॥ ೨೯ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ದೋಷಗಂಧವಿದೂರ ಎಂದರೆ, ದುರ್ಜನರಿಗೆ ಮೋಸ ಮಾಡಿದಾಗ್ಯೂ ನಿರ್ದೋಷ ಎಂದರೆ, ನಾನಾ ವೇಷಧಾರಿಯು ಆಯಾ ಜನರ ದೋಷವನ್ನೇ ಅಣಕಿಸಿ ತೋರಿಸುವುದರಿಂದ ಹ್ಯಾಗೆ ನಿರ್ದೋಷನೋ, ಹಾಗೆ ದೇವರು ಲೇಶ ದೋಷವಿಲ್ಲದವನು. ಈ ಜಗತ್ರಯಸ್ಥ ತ್ರಿವಿಧಜೀವರನ್ನೂ ಯೋಗ್ಯತಾನುಸಾರ ಪೋಷಿಸಿ ತತ್ತತ್ಸ್ವಯೋಗ್ಯಗತಿಪ್ರದನಾದ್ದರಿಂದಲೂ, ಹೀಗೆ ಅನಾದಿಯಿಂದ ಇರುವ ಪುರುಷನಾದ್ದರಿಂದಲೂ, ಪುರುಹೂತನೆಂಬ ಇಂದ್ರ ಮೊದಲಾದ ದೇವತೆಗಳಿಂದ ನಿರ್ದೋಷನೆಂದು ಸ್ತುತಿಸಿಕೊಳ್ಳುವನಾದ್ದರಿಂದಲೂ, ಶೇಷದೇವರಲ್ಲಿರುವ ವಿಷ ಅಹಂಕಾರಾದಿ ದೋಷಗಳೆಣಿಸದೆ ಭಕ್ತಿಗೆ ಮೆಚ್ಚಿ, ಆತನನ್ನು ತನ್ನ ಹಾಸಿಗೆಯನ್ನಾಗಿ ಮಾಡಿಕೊಂಡಿರುವುದರಿಂದಲೂ, ಶತ್ರುಸಂಬಂಧಿಯಾಗಿ ರಾಕ್ಷಸಜಾತಿಯಾದಗ್ಯೂ ನಿರ್ದೋಷಭಕ್ತಿನಿಮಿತ್ತ ವಿಭೀಷಣನಿಗೆ ಪ್ರಿಯನಾದ್ದರಿಂದಲೂ, ಅಹಂಕಾರದೋಷವೆಣಿಸದೆ ಅರ್ಜುನನಿಗೆ ಸ್ನೇಹಿತನಾಗಿ ರಕ್ಷಿಸಿದ್ದರಿಂದಲೂ, ಸುಜನರಿಗೆ ಇಷ್ಟಾರ್ಥಗಳನ್ನು ಪೂರೈಸಿ ಸಂತೋಷಪಡಿಸುವುದರಿಂದಲೂ ಸಹಾ, ದೇವರು ನಿರ್ದೋಷನೆಂಬರ್ಥ. ॥ ೨೯ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನು ಅನಂತಕಲ್ಯಾಣಗುಣಗಣಪರಿಪೂರ್ಣನು. ಅವನಲ್ಲಿ ದೋಷದ ವಾಸನೆಯೇ ಹತ್ತದು.

ಸೂರ್ಯನು ಲೇಶವಾದರೂ ಕತ್ತಲನ್ನು ಕಾಣಲಾರನು. ಅಂತೆಯೇ ನಾನು ಯಾವಕಾಲದಲ್ಲಾದರೂ ದುಃಖದ ಲೇಶವನ್ನೂ ಕಾಣಲಾರೆನು ಎಂದು ಹಯಗ್ರೀವರೂಪೀ ಶ್ರೀಪರಮಾತ್ಮನು ಬ್ರಹ್ಮದೇವರಿಗೆ ಹೇಳಿರುವನು.

ಅಧರ್ಮವನ್ನು ದಮನಮಾಡುವುದೂ, ಧರ್ಮವನ್ನು ರಕ್ಷಿಸುವುದೂ, ಶ್ರೀಪರಮಾತ್ಮನ ಅವತಾರವಿಶೇಷಗಳ ಮುಖ್ಯೋದ್ದೇಶ.

ಜಗತ್ತಿನಲ್ಲಿ ತ್ರಿವಿಧವರ್ಗಕ್ಕೆ ಸೇರಿದ ಜೀವರಿದ್ದಾರೆ. ಅವರವರ ಸ್ವರೂಪ ಯೋಗ್ಯತಾನುಸಾರ, ಬಿಂಬನಾದ ಶ್ರೀಶನು ಅವರಲ್ಲಿ ಸ್ಥಿತನಾಗಿದ್ದು, ರಂಗಸ್ಥಳದ ಮೇಲಿನ ನಟರಂತೆ ವಿವಿಧ ವೇಷಗಳನ್ನು ಧರಿಸುವನು.

ಈ ಜಗತ್ತು ಸ್ವರ್ಗ–ಭೂ–ಪಾತಾಳವೆಂಬ ಲೋಕತ್ರಯಗಳಿಂದ ಯುಕ್ತವಾಗಿದೆ, ಇಂತಹ ತ್ರಿಲೋಕಗತ ಸಮಸ್ತ ಚೇತನರನ್ನೂ ಸಂರಕ್ಷಿಸುತ್ತಿರುವನು.

ಆ ಪರಮಾತ್ಮನು ಮಹಾಪ್ರಳಯಕಾಲದಲ್ಲಿ ಏಕಮೇವನಾಗಿದ್ದಾನೆ. ಅನಾದ್ಯನಂತಕಾಲದಿಂದಲೂ ಏಕಾತ್ಮರೂಪಿಯು.

ಇಂದ್ರಾದಿದೇವತೆಗಳಿಂದಲೂ, ಅವರಿಗಿಂತ ಉತ್ತಮೋತ್ತಮರಾದ ರಮಾಬ್ರಹ್ಮಾದಿಗಳಿಂದಲೂ ಸಂಸ್ತುತ್ಯಮಾನನು.

ಸರ್ವಶ್ರೇಷ್ಠರಾದ ಶೇಷದೇವರೇ ಶ್ರೀಹರಿಗೆ ಪರ್ಯಂಕರೂಪದಲ್ಲಿರುವ ಹಾಸಿಗೆಯಾಗಿದ್ದಾರೆ.

ರಾಕ್ಷಸಯೋನಿಯಲ್ಲಿ ಜನಿಸಿದ್ದರೂ, ವಿಭೀಷಣನು ವಿಷ್ಣುಭಕ್ತಾಗ್ರೇಸರನು. ಭಾಗವತೋತ್ತಮನಾದ ವಿಭೀಷಣನಿಗೆ ಶ್ರೀರಾಮನು ಅತ್ಯಂತ ಪ್ರಿಯನು.

ದಶನಾಮಗಳಿಂದ ಖ್ಯಾತನಾದ ಮಧ್ಯಮಪಾಂಡವ ಅರ್ಜುನನಿಗೆ ವಿಜಯ ಎಂಬ ಅಭಿದಾನ. ಅವನಿಗೆ ಮಿತ್ರನಾಗಿ, ಬಂಧುವಾಗಿ, ಸರ್ವತ್ರ ವಿಜಯವನ್ನು ದೊರಕಿಸಿಕೊಟ್ಟನು.

ಇಂತು, ಜಗತ್ಪ್ರಭುವು ಮುಕ್ತಿಯೋಗ್ಯರಾದ ಸಜ್ಜನರಿಗೆ ಒಲಿದು, ಅವರ ಸಕಲ ಮನೋಭೀಷ್ಟಗಳನ್ನೂ ಪೂರೈಸುವನು. ತದ್ದ್ವಾರಾ ಇಹದಲ್ಲಿ ಅವರಿಗೆ ಸಂತೋಷವನ್ನು ಕೊಟ್ಟು, ಪರದಲ್ಲಿ ಮೋಕ್ಷಾನಂದವನ್ನು ಕರುಣಿಸುವನು ||೨೯||

## ಪದ್ಯ ೩೦

### ಮೂಲ

ಶ್ರೀಮಹೀಸೇವಿತಪದಾಂಬುಜ ।
ಭೂಮ ಸದ್ಭಕ್ತ್ಯೈಕಲಭ್ಯ ಪಿ ।
ತಾಮಹಾದ್ಯಮರಾಸುರಾರ್ಚಿತಪಾದಪಂಕೇಜ ॥
ವಾಮ ವಾಮನ ರಾಮ ಸಂಸಾ ।
ರಾಮಯೌಷಧ ಹೇ ಮಮಕುಲ ।
ಸ್ವಾಮಿ ಸಂತೈಸೆನಲು ಬಂದೊದಗುವನು ಕರುಣಾಳು ॥ ೩೦ ॥

### ಅವತರಣಿಕೆ

ಹೇ ! ಮಮಕುಲಸ್ವಾಮಿಯಾದ ಶ್ರೀಹರಿಯೇ ನನ್ನನ್ನು ಪೊರೆ—ಎಂದು ಮೊರೆ ಇಡುವ ಭಕ್ತರನ್ನು, ಅವರ ಅವಸರಕ್ಕೆ ಒದಗಿ, ಕರುಣಾಸಮುದ್ರನಾದ ಶ್ರೀಪರಮಾತ್ಮನು ಸಂರಕ್ಷಿಸುವನು ಎಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

**ಶ್ರೀ**=ಸತ್ತ್ವಗುಣಾಭಿಮಾನಿಯಾದ ಶ್ರೀ ನಾಮಕಳಾದ ಶ್ರೀಲಕ್ಷ್ಮೀದೇವಿ, **ಮಹೀ**=ಭೂನಾಮಕಳಾದ ಶ್ರೀಲಕ್ಷ್ಮೀದೇವಿ, ಅಂದರೆ ಶ್ರೀ ಭೂ ರೂಪಳಾದ ರಮಾದೇವಿಯಿಂದ, **ಸೇವಿತ**=ಸೇವಿಸಲ್ಪಡುವ, **ಪದಾಂಬುಜ**=ಚರಣ ಕಮಲಗಳುಳ್ಳ, **ಭೂಮ**=ಪರಿಪೂರ್ಣನೂ, ಸಾರ್ವಭೌಮನೂ ಆದ ಶ್ರೀಹರಿ, **ಸದ್ಭಕ್ತ್ಯೈಕಲಭ್ಯ**=ಸಮೀಚೀನವಾದ ಭಕ್ತಿಮಾರ್ಗದಿಂದ ಲಭ್ಯನಾಗುವ, **ಪಿತಾಮಹಾದಿ**=ಬ್ರಹ್ಮದೇವರೇ ಆದಿಯಾಗಿ, **ಅಮರ**=ದೇವತಾವರ್ಗ, **ಅಸುರಾ**=ವಾಯುದೇವರು (ಅಸುಷು ರತಃ=ಅಸುರ=ಅಂದರೆ, ಸರ್ವಪ್ರಾಣಿಗಳಲ್ಲಿ ಇರುವವನು ಎಂದರ್ಥ) **ಅರ್ಚಿತ**=ಪೂಜಿಸಲ್ಪಡುವ, **ಪಾದಪಂಕೇಜ**=ಪಾದಕಮಲವುಳ್ಳವನು, **ವಾಮ**=ಅತಿ ಸುಂದರನೂ, **ವಾಮನ**=ಅತಿ

ಮಂಗಳಸ್ವರೂಪಿಯೂ ಆದ ಶ್ರೀಪರಮಾತ್ಮನು, **ರಾಮ**=ಸ್ವರಮಣನೂ, ಸರ್ವತ್ರ ಕ್ರೀಡಾವಿಶಿಷ್ಟನೂ ಆದ, **ಸಂಸಾರ**=ಭವವೆಂಬ, **ಆಮಯ**=ರೋಗಕ್ಕೆ, **ಔಷಧ**=ಔಷಧರೂಪದಲ್ಲಿರುವ (ಪರಿಹಾರಕ), **ಹೇ ಮಮಕುಲ ಸ್ವಾಮಿ**=ಎಲೈ ನನ್ನ ಕುಲಸ್ವಾಮಿಯಾದ ಶ್ರೀಹರಿಯೇ, **ಸಂತೈಸು**=ಕಾಪಾಡು **ಎನಲು**=ಎಂದು ಮೊರೆಯಿಡಲು, **ಕರುಣಾಳು**=ಕರುಣಾಮಯನು, **ಬಂದೊದಗುವನು**=ಆಪತ್ತಿಗೆ ಒದಗಿ ಸಂರಕ್ಷಿಸುವವನು. ॥ ೩೦ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಪರಮಾತ್ಮನ್ನ ಈ ಪ್ರಕಾರ ಸ್ತೋತ್ರ ಮಾಡಬೇಕಂತ ಹೇಳತಾರೆ. ಹೃದಯಾಕಾಶದಲ್ಲಿ ಪರಮಾತ್ಮನ ಧ್ಯಾನ ಮಾಡಬೇಕೆಂತಲೂ ಹೇಳತಾರೆ.

ಧ್ಯಾನಕ್ಕೆ ಯೋಗ್ಯನಾದ ಪರಮಾತ್ಮನ್ನ ಶ್ರೀದೇವಿಯರು, ಭೂದೇವಿಯರು ಈ ಉಭಯರಿಂದ ಸಹಿತನಾದ ಪರಮಾತ್ಮ ಶ್ರೀಭೂದೇವಿಯರಿಂದ ಸೇವಿತವಾದ ಪಾದಕಮಲಗಳುಳ್ಳವ. ಪೂರ್ಣನಾದಂಥಾವ ತಥಾ ಸಾರ್ವಭೌಮನಾದವ, ಸಮೀಚೀನವಾದ ಹರಿಸರ್ವೋತ್ತಮ, ವಾಯುಜೀವೋತ್ತಮ ತಾರತಮ್ಯ ಪಂಚಭೇದಯುಕ್ತವಾದ, ವಿಷಯವಿರಕ್ತಿಪೂರ್ವಕವಾದ ಸ್ನೇಹಾಖ್ಯ ಒಂದಾದ ಭಕ್ತಿಯಿಂದ ಪ್ರಾಪ್ಯನಾಗತಕ್ಕವ. ತದ್ವ್ಯತಿರಿಕ್ತ ಅನೇಕವಾದ ಸತ್ಕರ್ಮಗಳಿಂದ ಲಭ್ಯನಾಗುವನಲ್ಲ. ಎಂದರೆ ಕರ್ಮತ್ಯಾಗದಲ್ಲಿ ತಾತ್ಪರ್ಯವಲ್ಲ. ನಿಷ್ಕಾಮನಾಗಿ, ಭಕ್ತಿಪೂರ್ವಕವಾಗಿ ಕರ್ಮಮಾಡಬೇಕಂತ ತಾತ್ಪರ್ಯ. ಮತ್ತು ಒಬ್ಬನಾದ ಪರಮಾತ್ಮ ಭಕ್ತಿಗೆ ಲಭ್ಯನಾದವನು. ಬ್ರಹ್ಮದೇವರೇ ಆದಿಯಾಗಿ ದೇವತೆಗಳು, ಇವರು ಎಂಥಾವರೆಂದರೆ, ಜರಾಮರಣ ವರ್ಜಿತರು, ಅಸುರ—ವಾಯುದೇವರು (ಅಸುಷು ರತಃ, ಅಸುರಃ ಎಂತ ವಿಗ್ರಹ), ಪ್ರಾಣಿಗಳಲ್ಲಿ ಇರತಕ್ಕವನೆಂದು ತಾತ್ಪರ್ಯ. ಇಂಥಾವರುಗಳಿಂದ ಪೂಜಿತವಾದ ಪಾದಕಮಲಗಳುಳ್ಳವನು ಎಂತ ಸ್ತೋತ್ರಮಾಡಬೇಕು. ಇನ್ನೂ ಎಂಥಾವನೆಂದರೆ, ಅತಿಸುಂದರವಾಗಿನ್ನು ಅತಿ ಮನೋಹರವಾಗಿನ್ನು, ಸ್ವರಮಣನಾಗಿನ್ನು ಹೃದಯಾಕಾಶದಲ್ಲಿ ಚಿಂತಿಸಿ ಸ್ತೋತ್ರ ಮಾಡಿ, ಅಹಂಮಮತಾ ಎಂಬ ಸಂಸಾರಾಖ್ಯ ರೋಗಕ್ಕೆ ಔಷಧಸ್ಥಾನಾಪನ್ನ

ನಾದವ. ಅಹಂಮಮತಾಖ್ಯರೋಗ ಪರಿಹಾರವಾಗಬೇಕಾದರೆ ಪರಮಾತ್ಮನಶಕ್ತಿ, ಜೀವನಶಕ್ತಿ, ಜೀವ-ಪರಮಾತ್ಮರ ವ್ಯಾಪಾರಗಳು ಇತ್ಯಾದಿಗಳು, ಪ್ರತ್ಯಕ್ಷ ಅನುಮಾನ ಆಗಮಗಳಿಂದ ವಿಚಾರರೂಪವಾದ ಔಷಧ ಪಾನಮಾಡಿದರೇ ಅಹಂಮಮತಾದಿಗಳು ಬಿಡೋವಾಗತವೆ. ಆದ್ದರಿಂದ ಔಷಧರೂಪನಾದ ಎಲೈ ಪರಮಾತ್ಮನೇ ಎಲೈ ನನ್ನ ಕುಲಸ್ವಾಮಿಯಾದವನೇ ಎಂದು ನಿನ್ನ ಹೃದಯಗತ, ನೀನು ಉಪಾಸನಮಾಡತಕ್ಕ ಭಗವತ್ಪ್ರತೀಕದಲ್ಲಿ ಅಂತರ್ಗತನ ತಿಳಿದು, ಪೂರ್ವೋಕ್ತಪ್ರಕಾರ ಧ್ಯಾನಪೂರ್ವಕ ಸ್ತೋತ್ರಮಾಡಿ ಕಾಪಾಡು ಎಂತ ಅಂದರೆ, ದಯಾಳುವಾದ ಪರಮಾತ್ಮ, ವಾಸನಾಪ್ರತೀಕಾಂತರ್ಗತ ತದಾಕಾರ ಪರಮಾತ್ಮ ಪ್ರತಿಮಾದಿಂದ ಭೇದಿಸಿಕೊಂಡು ಪ್ರತ್ಯಕ್ಷನಾಗಿ ಒದಗೋವನಾಗತಾನೆ. ॥ ೩೦ ॥

**೨. ಭಾವಪ್ರಕಾಶಿಕೆ**

ಪಿತಾಮಹಾದ್ಯಮರಾಸುರಾರ್ಚಿತ ಎಂದು ದಾಸರಾಯರು ಪದಪ್ರಯೋಗ ಮಾಡಿರುವರು. ಇದರಲ್ಲಿ ಪಿತಾಮಹಾದಿ = ಬ್ರಹ್ಮದೇವರು ಮೊದಲಾದ, ಅಮರ = ದೇವತೆಗಳಿಂದಲೂ, ಅಸುರಾರ್ಚಿತ = ದೈತ್ಯರುಗಳಿಂದಲೂ, ಪೂಜಿತವಾದ ಪಾದಕಮಲಗಳುಳ್ಳವನೆಂದು ಸಾಮಾನ್ಯವಾಗಿ ಅರ್ಥವಾಗುವುದು. ಅಸುರರು ಎಂಬ ಪದಕ್ಕೆ ದೈತ್ಯರೆಂದು ಅರ್ಥಮಾಡಿದರೆ, ದೈತ್ಯರಿಂದ ಪೂಜಿತವಾದ ಪಾದ ಕಮಲ ಉಳ್ಳವನು ಪರಮಾತ್ಮನೆಂದು ಹೇಳಲು, ದೈತ್ಯರು ಪರಮಾತ್ಮನನ್ನು ಪೂಜಿಸುವುದು ಅಸಂಭವವೆಂದು ಯೋಚಿಸಿ, ಕೆಲವು ವ್ಯಾಖ್ಯಾನಕರ್ತರು, ಅಸುಷು ರತಃ ಅಸುರಃ ಪ್ರಾಣಗಳಲ್ಲಿರುವುದರಿಂದ ಅಸುರ ಎಂದು ಪ್ರಾಣದೇವರಿಗೆ ಹೆಸರೆಂದು ಅರ್ಥ ಮಾಡಿರುವರು. ಹೀಗೆ ಅರ್ಥ ಮಾಡುವುದರಲ್ಲಿ ಒಂದು ಬಾಧಕ ಕಾಣುವುದು. ಹೇಗೆಂದರೆ, ಬ್ರಹ್ಮಾದಿ ದೇವತೆಗಳಿಂದಲೂ, ವಾಯುದೇವರಿಂದಲೂ, ಅರ್ಚಿತವಾದ ಪಾದಕಮಲಗಳುಳ್ಳವನೆಂದರ್ಥವಾಗುವುದು. ಬ್ರಹ್ಮ ಮೊದಲಾದ ದೇವತೆಗಳು ಅಂದಮೇಲೆ ವಾಯುದೇವರು ಅವರಲ್ಲಿ ಸೇರಿಯೇ ಇರುವರು. ಅಸುರ ಶಬ್ದದಿಂದ ಪ್ರತ್ಯೇಕ ವಾಯುದೇವರನ್ನು ಗ್ರಹಣಮಾಡುವುದು ಪುನರುಕ್ತಿ ದೋಷಕ್ಕೆ ಕಾರಣವಾಗುವುದು. ಆದ್ದರಿಂದ ಅಸುರ ಶಬ್ದವನ್ನು ಪ್ರಾಣದೇವರಪರ ಮಾಡುವುದು, ಯೋಚಿಸತಕ್ಕದ್ದಾಗಿದೆ. ಹಾಗಾದರೆ ಇದಕ್ಕೆ

ಹೇಗೆ ಅರ್ಥಮಾಡಬೇಕೆಂದರೆ, ಈ ದೇಹದಲ್ಲಿನ ೨೪ ತತ್ವೇಶರ ಪೈಕಿ ಪ್ರಾಣ ದೇವರೇ ಯುವರಾಜರಂತೆ ೨೩ ತತ್ವೇಶರಿಗೂ ಉತ್ತಮರು. ಎಲ್ಲಾ ತತ್ವೇಶರಿಲ್ಲ ದಿದ್ದರೂ ಒಬ್ಬ ವಾಯುದೇವರಿದ್ದರೆ ಪ್ರಾಣವಿದೆ ಎನ್ನುವರು. ಎಲ್ಲಾ ತತ್ವೇಶರು ಇದ್ದರೂ ವಾಯುದೇವರು ಒಬ್ಬರು ಇಲ್ಲದಿದ್ದರೆ ಆ ಶರೀರದಿಂದ ಯಾವ ಕಾರ್ಯವೂ ಆಗುವಂತಿಲ್ಲ. ಈ ವಿಷಯವನ್ನು ತೃತೀಯಸ್ಕಂಧ ಭಾಗವತದಲ್ಲಿ 'ಅಗ್ನಿರ್ವಾಚಾಮುಖಂ ಭೇಜೆ' ಎಂಬ ಶ್ಲೋಕ, ಮೊದಲು ಅಗ್ನಿದೇವರು ಮುಖ ದಲ್ಲಿ ಪ್ರವೇಶ ಮಾಡಿದರು. ವಿರಾಟ್ ಶರೀರವು ಏಳಲಿಲ್ಲ ಎಂದು ಉಪಕ್ರಮ ಮಾಡಿ ೨೩ ತತ್ವೇಶರು ಶರೀರದಲ್ಲಿ ಪ್ರವೇಶ ಮಾಡಿದರೂ ವಿರಾಟ್ ಶರೀರವು ಏಳಲಿಲ್ಲ. 'ಚಿತ್ತೇನ ಹೃದಯಂ ಚೈತ್ಯಃ ಕ್ಷೇತ್ರಜ್ಞಃ ಪ್ರಾವಿಶದ್ಯದಾ । ವಿರಾಟ್ ತದೈವ ಪುರುಷಃ ಸಲಿಲಾದುದತಿಷ್ಟತ' ಚಿತ್ತಾಭಿಮಾನಿ ಬ್ರಹ್ಮದೇವರು. ವಾಯು ದೇವರೇ ಬ್ರಹ್ಮದೇವರು.ಅವರಂತರ್ಯಾಮಿ ಕ್ಷೇತ್ರಜ್ಞನು. ಹೀಗೆ ಬ್ರಹ್ಮವಾಯು ಗಳಿಂದ ಕೂಡಿ ಅಂತರ್ಯಾಮಿಯಾದ ಕ್ಷೇತ್ರಜ್ಞನು ಪ್ರವೇಶ ಮಾಡಿದ ಕೂಡಲೇ ವಿರಾಟ್‌ಶರೀರವು ಎದ್ದಿತು ಎಂದು ಪ್ರಾಣದೇವರಿಗೆ ಸರ್ವ ಚೇತನೋತ್ತಮತ್ವ ವನ್ನು ಸ್ಥಾಪಿಸಿರುವರು. ಅಸು ಅಂದರೆ ಪ್ರಾಣ. ಪ್ರಾಣಶಬ್ದವಾಚ್ಯರೇ ವಾಯು ದೇವರು. ಅಸೌ ರತಾಃ ಅಸುರಾಃ ಅಂದರೆ ಪ್ರಾಣದೇವರಲ್ಲಿ ಯಾರು ನಿರತರಾಗಿ ಅವರನ್ನು ನಂಬಿ, ವಾಯುಮತವನ್ನು ಆಶ್ರಯಿಸಿರುವರೋ ಅವರಿಗೆ ಅಸುರಾಃ ಎಂಬ ಹೆಸರು ಕೊಡುವುದು. ಪಿತಾಮಹಾದ್ಯಮರಾ ಸುರಾರ್ಚಿತ ಎಂಬ ಸ್ಥಳದಲ್ಲಿ, ಬ್ರಹ್ಮಾದಿದೇವತೆಗಳಿಂದಲೂ, ದೇವತೆಗಳಲ್ಲದ ಇತರರಾದ ವಾಯುಮತಾವಲಂಬಿ ಗಳಿಂದಲೂ ಸಹ ಪೂಜಿತವಾದ ಪಾದಕಮಲವುಳ್ಳವನೆಂಬ ಅರ್ಥವು ಸಾಧುವೆಂದು ಕಾಣುವುದು. ಯಾರು ವಾಯು(ಮಧ್ವ) ಮತವನ್ನಾಶ್ರಯಿಸಿದವರೋ ಅವರೇ ಹರಿಸ್ಸರ್ವೋತ್ತಮ, ವಾಯುಜೀವೋತ್ತಮ ಜ್ಞಾನದಿಂದ ಕೂಡಿ ಶ್ರೀಹರಿಯೇ ಸರ್ವೋತ್ತಮನೆಂದು ಭಜಿಸುವರು. ಇತರರು ಹಾಗೆ ಭಜಿಸುವುದಿಲ್ಲ. ಅದ್ವೈತಿ ಗಳು ಈಶ್ವರ ಬ್ರಹ್ಮವಾದಿಗಳು. ವಿಶಿಷ್ಟಾದ್ವೈತಿಗಳು ಕೇವಲ ವಿಷ್ಣುದೀಕ್ಷಾ ಬದ್ಧರಾಗಿ ವೈಷ್ಣವರಾಗಿದ್ದರೂ—ಯಸ್ತಾನ್‌ದ್ವೇಷ್ಟಿ ಸಮಾಂದ್ವೇಷ್ಟಿ ನನ್ನ ಭಕ್ತ ರಲ್ಲಿ ದ್ವೇಷಮಾಡುವವರನ್ನು ನನ್ನಲ್ಲಿ ದ್ವೇಷ ಮಾಡಿದಂತೆಯೇ ಭಾವಿಸುವೆನು, ಎಂದು ಪರಮಾತ್ಮನ ವಾಕ್ಯವಿರುವುದು. ಇದಕ್ಕೆ ವಿರೋಧವಾಗಿ—ರುದ್ರಾದಿಗಳಲ್ಲಿ

ಅವರು ದ್ವೇಷವನ್ನು ಬೆಳೆಸುವರು. ಆದ್ದರಿಂದ ಮಧ್ವಮತಾವಲಂಬಿಗಳು ಮಾತ್ರವೇ ತಾರತಮ್ಯ ಪ್ರಕಾರ ಭಗವಂತನನ್ನು ಭಜಿಸುವರು. ॥ ೩೦ ॥

## ೩. ಭಾವದರ್ಪಣ

ಶ್ರೀಮಹೀ ಇತಿ । ಶ್ರೀಭೂದೇವೇರಿಂದ ಸೇವಿತ, ಭೂಮ ಪೂರ್ಣಸದ್ಭಕ್ತಿ ಕಲಭ್ಯ ಮುಖ್ಯನಾಗಿ ಸದ್ಭಕ್ತರಿಗೇ ಪ್ರಾಪ್ತನಾಗತಕ್ಕವ ಎಂಬರ್ಥ. ಅಮರಾ ಸುರಾರ್ಚಿತೇತಿ. ಅಮರಾಃ ದೇವತೆಗಳು. ಅಸುರ ಎಂದರೆ ವಾಯುದೇವರು ಎಂತರ್ಥ. ಅಸುಷು ರತಃ ಅಸುರಃ ಯಂತ ವಿಗ್ರಹ. ಪ್ರಾಣಗಳಲ್ಲಿರತಕ್ಕವನೆಂದು, ಇದು ಒಂದು ಪ್ರಕಾರ ಅರ್ಥ. ಉಕ್ತಂಚನಾರದೀಯೆ. ಜ್ಞಾನಪ್ರಧಾನಾ ದೇವಾಸ್ತು ಅಸುರಾ ಸುರತಾ ಅಸಾವಿತಿ. ದಿವಿಕ್ರೀಡಾವಿಜಿಗೀಶಾ ವ್ಯವಹಾರಸ್ತುತಿ ಮೋದಮದಸ್ವಪ್ನಕಾಂತಿಗತಿಶ್ವಿತಿ; ವಾಮ ಸುಂದರ ಆಮಯ; ರೋಗ ॥ ೩೦ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

"ಶ್ರೀಮಹೀ" ಇತಿ ॥ "ಭೂಮ"–ಪೂರ್ಣಃ ॥ "ಅಸುರಾಃ" ಪ್ರಹ್ಲಾದ ವಿಭೀಷಣಾದ್ಯಾಃ ॥ "ಪಂಕೇಜ" ಪದ್ಮಮ್ ॥ "ವಾಮ" ವರೇಣ್ಯಃ ಸುಂದರಃ ॥ "ರಾಮಃ"–ಓಂ ಅಪ್ರತ್ಯಿಕ್ಕಕು (ಷ್ಪು) ತಂ ದೇವೀ ಶುಷ್ಮಂಸ ಪರ್ಯತಃ ॥ ಉಭೇ ಸುಶಿ ಪ್ರರೋದಸೀ ತ್ವಮೇತದಧಾರಯಃ ಕೃಷ್ಣಾಸು ರೋಹಿಣೀಷು ಚ ಪರು ಷ್ಣೀಸು ॥ ಓಂ ॥ ರಮತೇ ಅನೇನ ಇತಿ ರಂ ಬಲಮ್ ॥ ತೇನ "ಆಮಃ" ಅಮಿತ ದ್ಯಾವಾಪೃಥಿವ್ಯಾದ್ಯುಪಜೀವ್ಯ ಬಲವಾನ್ ॥ ಅಥವಾ ರೋ ಘೃತಮಿತ್ಯಭಿಧಾ ನಾತ್ ರೋ ಘೃತಂ, ತತ್ಕಾರಣಂ ಪಯಃ ತತ್ "ಆ" ಸಮಂತಾತ್ ರೋಹಿಣ್ಯಾದಿ ಗೋವ್ಯಕ್ತಿಷು ನಿರ್ಮಾತಿ ಇತಿ ಆಮಃ ರಾಮಃ ॥ ೩೦ ॥

## ಕನ್ನಡಾರ್ಥ

ಭೂಮ ಎಂದರೆ ಸುಜ್ಞಾನ ಆನಂದ ಮುಂತಾದ ಗುಣಗಳಿಂದ ಪೂರ್ಣ ಅಥವಾ ದೇಶ ಕಾಲ ಗುಣಗಳಿಂದ ಪೂರ್ಣ ಎಂದು ಅರ್ಥ. "ಅಸುರಾರ್ಚಿತ"

ಎಂಬಲ್ಲಿ ಭಗವಂತನನ್ನು ಅರ್ಚಿಸಿದ ಅಸುರರು ಪ್ರಹ್ಲಾದ ವಿಭೀಷಣ ಮುಂತಾದವರು ಎಂದು ತಿಳಿಯಬೇಕು. ಪಂಕೇಜ–ಪದ್ಮ. ವಾಮ ಮನಮೆಚ್ಚುಗೆಯಾಗುವಂತಹ ಸುಂದರತಮ ಎಂದು ಅರ್ಥ. ರಾಮಃ-ರಮಣ. ಕ್ರೀಡಾಸಾಧನವಾದುದರಿಂದ ರ ಅಂದರೆ ಬಲ. ಅದರಿಂದ ಆಮಃ ಭೂಮಿ ಆಕಾಶಗಳಿಗೆ ಬಲಪಡಿಸುವವನು. ಆದುದರಿಂದ ರಾಮ ಎಂದು ತಿಳಿಯಬೇಕು. ಅಥವಾ "ರ" ಎಂದರೆ ತುಪ್ಪವೆಂದು ಕೋಶವಿರುವುದರಿಂದ ತುಪ್ಪಕ್ಕೆ ಕಾರಣವಾದ ಹಾಲಿಗೂ ರ ಎಂದು ಹೆಸರು. ಅಂಥ "ರ" ಹಾಲನ್ನು, ಆ–ಎಲ್ಲ ಗೋವುಗಳಲ್ಲಿ ಮಾತಿ–ನಿರ್ಮಾತಿ ಹುಟ್ಟಿಸು ಉಂಟುಮಾಡುವುದರಿಂದ ರಾಮ ಎಂದು ಕರೆಯುತ್ತಾರೆ. ಹೀಗೆ ಬೃಹತಿ ಮಂತ್ರಾನುಗುಣವಾದ ಅರ್ಥ ॥ ೩೦ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಭೂಮ ಎಂದರೆ ಸ್ವಾನಂದಪೂರ್ಣನಾದಾಗ್ಯೂ, ಶ್ರೀಭೂದೇವಿಯರ ಭಕ್ತ್ಯತಿಶಯದಿಂದ ಪೂಜಿತಪಾದಕಮಲನು. ಮುಖ್ಯ ಭಕ್ತಿಯಿಂದಲೇ ದೊರಕ ತಕ್ಕವನು. ಪಿತಾಮಹನೆಂಬ ಬ್ರಹ್ಮದೇವರೇ ಮೊದಲಾದ ದೇವತೆಗಳಿಂದಲೂ, ಅಸುರ ಎಂದರೆ–ಅಸು, ಅಕಾರಪ್ರತಿಪಾದ್ಯ ಶ್ರೀವಿಷ್ಣುವಿನ ಶ್ರೀನೃಸಿಂಹರೂಪದಲ್ಲಿ, ರ, ಉತ್ಕೃಷ್ಟಭಕ್ತಿರೂಪಮನೋಲ್ಲಾಸವುಳ್ಳವರಾದ್ದರಿಂದ, ಅಸುರರೆಂದು ಕರೆಯಲ್ಪಡುವ ಪ್ರಹ್ಲಾದಾದಿಗಳಿಂದಲೂ ಆರಾಧಿತಪಾದಪಂಕಜನು. ವಾಮ ವಾಮನ ಎಂದರೆ, ಪರಮಸುಂದರರೂಪ ವಾಮನಮೂರ್ತಿಯೇ, ಶ್ರೀರಾಮನೇ, ಸಂಸಾರವೆಂಬ ರೋಗಕ್ಕೆ ಶ್ರೇಷ್ಠಔಷದರೂಪನೇ, ನಮ್ಮ ಕುಲಸ್ವಾಮಿಯೇ ಕಾಪಾಡು ಎಂದರೆ, ಬಂದೊದಗುವನು ಎಂದರೆ ಆಪತ್ತುಗಳನ್ನು ಬಿಡಿಸಿ ರಕ್ಷಿಸುವುದರಿಂದ ಪರಮಾತ್ಮನು ಅತ್ಯಂತ ಕರುಣಾಳು ॥ ೩೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸುಜ್ಞಾನ ಆನಂದಾದಿ ಅನಂತಕಲ್ಯಾಣಗುಣಗಳಿಂದ ಪರಿಪೂರ್ಣನಾಗಿರುವ ಶ್ರೀಪರಮಾತ್ಮನಿಗೆ ಭೂಮ ಎಂದು ಹೆಸರು,

ಶ್ರೀಪರಮಾತ್ಮನು ಶ್ರೀ ಭೂನಾಮಕಳಾದ ಶ್ರೀಲಕ್ಷ್ಮೀದೇವಿಯರಿಂದ ಪೂಜಿತನು. ಶ್ರೀಹರಿಯು ಸ್ವರಮಣನು. ಆಪ್ತಕಾಮನು ಪರಾಪೇಕ್ಷರಹಿತನು. ಆದರೂ ಶ್ರೀಲಕ್ಷ್ಮಿಯನ್ನು ಅನುಗ್ರಹಿಸುವುದಕ್ಕಾಗಿ, ಅವಳ ದ್ವಾರದಿಂದಲೇ ಸಮಸ್ತ ಪೂಜೆಗಳನ್ನೂ ಸ್ವೀಕರಿಸುವನು.

ಮಹಾತ್ಮಜ್ಞಾನಪೂರ್ವಕವಾದ, ದೃಢವಾದ ಪ್ರೇಮಪ್ರವಾಹರೂಪವಾದ ಸ್ನೇಹ ಭಾವವೇ ಭಕ್ತಿ ಎನಿಸುವುದು. ಇಂತಹ ನಿಷ್ಕಲ್ಮಶವಾದ ಭಕ್ತಿಭಾವದಿಂದ ಮಾತ್ರ ಶ್ರೀಹರಿಯು ಪ್ರಾಪ್ತನು.

ಋಜುಗಣದ ಬ್ರಹ್ಮದೇವರು ಜೀವೋತ್ತಮರು. ಇದರಿಂದ ಸಮಸ್ತ ಜೀವಕೋಟಿಗೂ ಪಿತಾಮಹ ಸ್ಥಾನಾಪನ್ನರಾಗಿದ್ದಾರೆ. ಬ್ರಹ್ಮದೇವರೇ ಮೊದಲಾದ ಸಮಸ್ತ ದೇವತಾಗಣದಿಂದ ಅರ್ಚಿತ ಪಾದಪಂಕೇಜನು ಶ್ರೀಪರಮಾತ್ಮನು.

ಪ್ರಸಕ್ತ ಪದ್ಯದಲ್ಲಿ ಅಮರಾಸುರಾರ್ಚಿತ ಪಾದಪಂಕೇಜ–ಎಂಬ ಶಬ್ದ ಪ್ರಯೋಗವಿದೆ. ಈ ಪದಸಮುಚ್ಚಯವನ್ನು ಸಂಧಿಮಾಡಿದರೆ, ಅಮರ + ಅಸುರಾರ್ಚಿತ ಪಾದಪಂಕೇಜ ಎಂದಾಗುವುದು. ಅಮರ ಎಂದರೆ, ಸುರರೆಂದರ್ಥ. ಅಸುರ–ಎಂದರೆ, ದೈತ್ಯರೆಂದರ್ಥ. ದೈತ್ಯರು ಶ್ರೀಹರಿಯ ದ್ವೇಷಿಗಳು. ತಮೋಯೋಗ್ಯಜೀವರು. ಅಂತಹ ದೈತ್ಯರಿಂದ ಅರ್ಚಿತನಲ್ಲ ಶ್ರೀಹರಿಯು. ಇಲ್ಲಿ ಅಸುರ ಎಂಬ ಪದವನ್ನು ಅಸೌರತಾಃ ಅಸುರಾಃ ಎಂದು ಅರ್ಥೈಯಿಸಬೇಕು. ಅಸು– ಎಂದರೆ ಮುಖ್ಯಪ್ರಾಣದೇವರಲ್ಲಿ ಯಾರು ದೃಢವಾಗಿ ಭಕ್ತಿರತರಾಗಿರುತ್ತಾರೋ, ಅಂತಹ ವಿಷ್ಣುಭಕ್ತರೆಂದರ್ಥ. ಪ್ರಹ್ಲಾದ, ವಿಭೀಷಣ, ಬಲಿ ಮುಂತಾದ ಭಕ್ತಾಗ್ರಣಿಗಳು ದೈತ್ಯಕುಲದಲ್ಲಿ ಉತ್ಪನ್ನರಾಗಿದ್ದರೂ, ವಿಷ್ಣುಭಕ್ತಿಪರಾಯಣರು, ಭಾಗವತೋತ್ತಮರು. ಪ್ರಾಣದೇವರ ಪಾದಪಂಕಜಗಳಲ್ಲಿ ಭಕ್ತಿಸಂಪನ್ನರು. ಈ ಅರ್ಥದಲ್ಲಿ ಅಸುರಾಃ ಎಂದು ಪರಿಗಣಿಸಬಹುದು. ಅಥವಾ ಪ್ರಧಾನವಾದ ಅರ್ಥವಿಶೇಷವೇನೆಂದರೆ– ಅಸುಷು ರತಃ ಅಸುರಃ ಎಂಬ ವಿಗ್ರಹವಾಕ್ಯರೂಪದಿಂದ, ಅಸುಷು = ಸರ್ವಜೀವರಲ್ಲಿ, ರತಃ = ವಿದ್ಯಮಾನರಾಗಿರುವ ಶ್ರೀವಾಯುದೇವರು ಎಂದರ್ಥ. ಹೀಗೆ ಶ್ರೀವಾಯುದೇವರಿಂದಲೂ, ಭಾಗವತೋತ್ತಮರಾದ ವಿಷ್ಣುಭಕ್ತರಾದ ಪ್ರಹ್ಲಾದಾದಿ ಅಸುರಕುಲೋತ್ಪನ್ನರಿಂದಲೂ, ಪೂಜಿತವಾದ ಪಾದಪಂಕೇಜನು.

ಶ್ರೀಹರಿಯು ಪರಮಮಂಗಳಸ್ವರೂಪನು. ಕೋಟಿಮನ್ಮಥ ಲಾವಣ್ಯನು. ಜೀವರ ಸೌಂದರ್ಯಕ್ಕೆ, ಶ್ರೀಹರಿಯ ವಿಭೂತಿರೂಪವೇ ಕಾರಣವು. ಇಂತಹ ಪರಮಮನೋಹರಮೂರ್ತಿಯಾದ ಸುಂದರತಮ ಹಾಗೂ ಪರಮಪವಿತ್ರವಸ್ತು.

ರಮಾ ಕ್ರೀಡತೇ ಎಂಬ ಧಾತುರೂಪದಿಂದ ರಾಮ ಶಬ್ದವು ನಿಷ್ಪನ್ನವಾಗಿದೆ. ಸರ್ವಕ್ರೀಡಾವಿಶಿಷ್ಟನೂ ಮತ್ತು ಸಮಸ್ತಕ್ರಿಯಾಪ್ರವರ್ತಕನೂ ಆದ್ದರಿಂದ, ಶ್ರೀಪರಮಾತ್ಮನಿಗೆ ರಾಮ ಎಂದು ಹೆಸರು. ರ–ಎಂದರೆ ಬಲ. ಆಮ–ಎಂದರೆ ಭೂಮಿ ಆಕಾಶಗಳನ್ನು ಬಲಪಡಿಸುವವನು ಎಂದರ್ಥ. ಅಥವಾ ರ–ಎಂದರೆ, ತುಪ್ಪವೆಂದು ಕೋಶಾರ್ಥವಿದೆ. ತುಪ್ಪಕ್ಕೆ ಕಾರಣವಾದ ಹಾಲಿಗೂ ರ ಎಂತ ನಾಮ. ಅಂತಹ ಹಾಲನ್ನು ಆ–ಸಮಸ್ತ ಗೋವುಗಳಲ್ಲಿ ಮಾತಿ (ನಿರ್ಮಾತಿ) ಉತ್ಪತ್ತಿ ಮಾಡುವುದರಿಂದ, ರಾಮನಾಮಕನು. ಇದು ಬೃಹತೀಮಂತ್ರಾನುಸಾರವಾದ ಅರ್ಥ.

ಕರ್ಮಬಂಧಕನಾದ ಆ ಕಮಲದಳಾಯತಾಕ್ಷನೇ ಆ ಕರ್ಮವಿಮೋಚನೆಗೂ ಕಾರಣ. ಸ್ವಪ್ರಯತ್ನ ಕೆಲಸಕ್ಕೆ ಬಾರದು. ಅವನ ವಿನಾ ಅನ್ಯಥಾ ಗತಿಯಿಲ್ಲ. ಹೀಗೆ, ಸಂಸಾರವೆಂಬ ರೋಗಕ್ಕೆ ಔಷಧರೂಪದಲ್ಲಿರುವವನು ಶ್ರೀಪರಮಾತ್ಮನ ಹೊರತು ಅನ್ಯರಾರೂ ಇಲ್ಲ. ಇದರಿಂದ ಭವರೋಗ ವೈದ್ಯನು.

ಏತಾದೃಶಮಹಿಮೋಪೇತನಾದ ಸರ್ವೇಶ್ವರನನ್ನು– 'ಹೇ ದಯಾನಿಧೇ, ನನ್ನ ಕುಲಸ್ವಾಮಿಯೇ, ನನ್ನ ಪಾಪಗಳನ್ನು ಪರಿಹರಿಸಿ, ಶುದ್ಧಾತ್ಮನನ್ನಾಗಿ ಮಾಡಿ, ಸಂಸಾರವೆಂಬ ಬಂಧನವನ್ನು ಕಳೆಚು. ನಿತ್ಯಾನಂದರೂಪವಾದ ಮುಕ್ತ ಸುಖವನ್ನು ಅನುಗ್ರಹಿಸು' ಎಂದು ಆರ್ತಭಾವದಿಂದ ಭಕ್ತಿಪರವಶನಾಗಿ ಬೇಡಿಕೊಳ್ಳಲು, ಕರುಣಾಸಾಗರನು ಅವನ ವಿಪತ್ತುಗಳನ್ನು ಪರಿಹರಿಸಿ, ಕ್ಲೇಶಾದಿಗಳನ್ನು ಕಳೆದು, ಆನಂದಪ್ರದನಾಗಿ ಸರ್ವದಾ ಸಂರಕ್ಷಿಸುವನು. ॥ ೩೦ ॥

## ಪದ್ಯ ೩೧

**ಮೂಲ**

**ದನುಜದಿವಿಜರೊಳಿದ್ದು ಅವರವ ।**
**ರನುಸರಿಸಿ ಕರ್ಮಗಳ ಮಾಳ್ಪನು ।**
**ಜನನಮರಣಾದ್ಯಖಿಳದೋಷವಿದೂರ ಎನ್ನೊಡನೆ ॥**
**ಜನಿಸುವನು ಜೀವಿಸುವ ಸಂರ ।**
**ಕ್ಷಣೆಯ ಮಾಡುವ ಎಲ್ಲ ಕಾಲದಿ ।**
**ಧನವ ಕಾಯಿದಿಹ ಸರ್ಪನಂತನಿಮಿತ್ತಬಾಂಧವನು ॥ ೩೧ ॥**

**ಅವತರಣಿಕೆ**

ಸರ್ವ ದೇವತೆಗಳಲ್ಲಿ ಹಾಗೂ ದೈತ್ಯರಲ್ಲಿ ಶ್ರೀಪರಮಾತ್ಮನು ಕರ್ಮಗಳನ್ನು ಮಾಡಿ ಮಾಡಿಸಿ ಅನಿಮಿತ್ತ ಬಂಧುವಾಗಿದ್ದಾನೆಂದು ತಿಳಿಸುತ್ತಾರೆ-

**ಪ್ರತಿಪದಾರ್ಥ**

**ದನುಜ**=ಕಲ್ಯಾದಿ ತೃಣಾಂತ ಸಮಸ್ತ ದೈತ್ಯಜೀವರಲ್ಲಿ, **ದಿವಿಜರೊಳು**= ಬ್ರಹ್ಮಾದಿ ತೃಣಾಂತ ಸಕಲ ಮುಕ್ತಿಯೋಗ್ಯರಾದ ದೇವತೆಗಳಲ್ಲಿ, **ಇದ್ದು**=ಅಂತರ್ಯಾಮಿರೂಪದಿಂದ ವಿದ್ಯಮಾನನಾಗಿದ್ದು, **ಅವರವರ**=ಆಯಾಯಾ ತ್ರಿವಿಧ ಜೀವರ, **ಅನುಸರಿಸಿ**=ಸ್ವರೂಪಯೋಗ್ಯತೆಗನುಗುಣವಾಗಿ, **ಕರ್ಮಗಳ**= ಲಿಂಗದೇಹಗತ ಅನಾದಿಕರ್ಮಕ್ಕನುಸಾರವಾದ ಕ್ರಿಯಾವಿಶೇಷಗಳನ್ನು, **ಮಾಳ್ಪನು** ಜೀವರನ್ನು ಅಸೃಜ್ಯರಾಶಿಯಿಂದ ಸೃಷ್ಟಿಗೆ ತಂದು, ಅವರಿಗೆ ಸ್ಥೂಲದೇಹಗಳನ್ನಿತ್ತು, ತದ್ದ್ವಾರಾ ಮಾಡಿ ಮಾಡಿಸುತ್ತಿರುವನು. (ಕರ್ಮ, ಸ್ವಭಾವ, ಪ್ರಯತ್ನಗಳನ್ನು ಅಭಿವ್ಯಕ್ತ ಮಾಡುತ್ತಾನೆ), **ಜನನ**=ಉತ್ಪತ್ತಿ, **ಮರಣ**=ದೇಹನಾಶ, **ಆದಿ**=ಇವೇ ಮುಂತಾದ, **ಅಖಿಳ**=ಸಮಸ್ತವಾದ, **ದೋಷವಿದೂರನು**= ನ್ಯೂನತಾರೂಪವಾದ ದೋಷಾದಿಗಳಿಂದ ರಹಿತನು. ಅಂದರೆ ಉತ್ಪತ್ತಿನಾಶ

ಶೂನ್ಯನು. **ಎನ್ನೊಡನೆ** = ಜೀವರು ಜನಿಸುವ ಸಮಯದಲ್ಲಿ, ಅವರಂತರ್ಯಾಮಿಯಾಗಿದ್ದು ಬಿಂಬನೆಂದೆನಿಸಿ, ಜೀವರಿಂದ ಅವಿಯೋಗನಾಗಿ, **ಜನಿಸುವ** = ಸ್ಥೂಲ ದೇಹಗಳಲ್ಲಿ ಪ್ರವೇಶಮಾಡುತ್ತಾನೆ. **ಜೀವಿಸುವ** = ಜೀವರ ದೇಹತ್ಯಾಗಮಾಡುವ ತನಕ, ದೇಹಗತನಾಗಿರುತ್ತಾನೆ. **ಎಲ್ಲ ಕಾಲದಿ** = ಸರ್ವಕಾಲಗಳಲ್ಲಿಯೂ, ಅಂದರೆ, ಅಸೃಜ್ಯ ಸ್ಥಿತಿಯಲ್ಲಿ, ಸೃಷ್ಟಿ ಕಾಲದಲ್ಲಿ, ಮುಕ್ತ್ಯಾವಸ್ಥೆಯ ಕಾಲದಲ್ಲಿ, **ಸಂರಕ್ಷಣೆಯ ಮಾಡುವ** = ಜೀವರ ಆಯಾಯಾ ಯೋನಿಗಳನುಸಾರವಾಗಿ ಸ್ಥೂಲದೇಹಗತನಾಗಿ ಕಾಪಾಡುವನು. **ಧನವ ಕಾಯಿದಿಹ** = ಭೂಮಿಯಲ್ಲಿ ಹೂತಿಟ್ಟ ಗುಪ್ತನಿಧಿಯನ್ನು ಕಾಯುತ್ತಲಿರುವ, **ಸರ್ಪನಂತೆ** = ಹಾವಿನಂತೆ, **ಅನಿಮಿತ್ತ ಬಾಂಧವನು** = ಜೀವರಿಂದ ಶ್ರೀಪರಮಾತ್ಮನಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲ. ಆದರೆ ಅಸ್ವತಂತ್ರರಾದ, ಭಗವದಧೀನರಾದ ಜೀವರ ಸಂರಕ್ಷಣೆಗೋಸುಗ, ಅವರ ಅಂತರ್ಯಾಮಿಯಾಗಿ, ಅವಿಯೋಗಬಿಂಬನಾಗಿ, ಎಡಬಿಡದೆ, ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಪರಮಾಪ್ತ ಬಂಧುವಿನಂತೆ ಕಾಪಾಡುವನು–ಎಂಬುದೇ ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು ॥ ೩೧ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಜೀವಗೆ ಬಿಂಬನಾದ ಪರಮಾತ್ಮಗೆ ಉತ್ಪತ್ತ್ಯಾದಿ ಲಕ್ಷಣಗಳ ಹೇಳತಾರೆ.

ಕಲ್ಯಾದಿ ತೃಣಾಂತ ದೈತ್ಯರಲ್ಲಿ, ಇವರ ಅಂತರ್ಭೂತರು ನಿತ್ಯಸಂಸಾರಿಗಳು, ಬ್ರಹ್ಮದೇವರು ಆರಂಭಮಾಡಿ ತೃಣಾಂತ ಮುಕ್ತಿಯೋಗ್ಯರ ಈ ಯಾವತ್ತೂ ತ್ರಿವಿಧಜೀವರ ಸ್ವರೂಪದೊಳಗೆ ಬಿಂಬನಾಗಿದ್ದು, ಅವರವರ ಸ್ವರೂಪಯೋಗ್ಯತಾ ಅನುಸರಿಸಿನ್ನು, ಅದನನುಸರಿಸಿ ಲಿಂಗಗತ ತೃತೀಯ ಪರಿಚ್ಛೇದವಾದ ತಮಃಪರಿಚ್ಛೇದಗತ, ಈಶ್ವರನಿಂದ ರಚಿತವಲ್ಲದ, ಲಿಂಗದೇಹದ ಸಂಗಡ ಅನಾದಿಯಿಂದ ಇರತಕ್ಕ ಜಡಕರ್ಮ ಅನುಸರಿಸಿನ್ನೂ, ಲಿಂಗದ ಪ್ರಥಮ ಪರಿಚ್ಛೇದವಾದ ಸತ್ತ್ವಪರಿಚ್ಛೇದಗತ ಅನಾದಿಭೂತವಾದ ಜೀವನ ಜಡಮನೋ

ಗತಜೀವನ ಜಡಪ್ರಯತ್ನ ಇವು ಮೂರೂ ಆಯಾ ಜೀವರಿಗೆ ಇದ್ದದ್ದರನ್ನ ಅನು ಇರತಕ್ಕ ಆ ಮೂರರಲ್ಲಿ ತದಾಕಾರ ತದ್ವಾಚ್ಯನಾಗಿದ್ದು, ರಾಶೀಗತರಾದ ಜೀವರ ಸೃಷ್ಟಿಗೆತಂದು ಸ್ಥೂಲದೇಹಗಳ ಕೊಟ್ಟು, ಪೂರ್ವೋಕ್ತ ಕರ್ಮ ಪ್ರಯತ್ನ, ಸ್ವಭಾವ ಇವುಗಳ ವ್ಯಕ್ತಮಾಡೋವನಾಗತಾನೆ. ಜೀವರು ಎಂಥಾವರೆಂದರೆ ಪರಮಾತ್ಮನಿಂದ ಉಂಟಾದವರಲ್ಲ, ಪರಮಾತ್ಮನಿಂದ ನಾಶಹೊಂದತಕ್ಕವರಲ್ಲ ಮತ್ತು ಜನನ ಮರಣವೇ ಆದಿಯಾಗಿ ಆಯುಧದಿಂದ ಛೇದವಾಗಲೀ, ಅಗ್ನಿಯಿಂದ ದಹನವಾಗಲೀ ಇತ್ಯಾದಿ ಅನೇಕ ದೋಷಗಳಿಂದ ದೂರರಾದವರು ಜೀವರು, ಅನಾದ್ಯನಂತ ಕಾಲಕ್ಕೂ. ತದ್ವತ್ ಜೀವಾಂತರ್ಗತವಾದ ಪರಮಾತ್ಮ ಜನನಾದ್ಯಖಿಳದೋಷ ದೂರನು. ಜೀವ, ಪರಮಾತ್ಮ ಈ ಉಭಯರೊಳಗೆ ಜೀವನಾದವ ಅಂತರ್ಗತನಾದ ತನ್ನ ಬಿಂಬನಾದ ಪರಮಾತ್ಮನ ಅಧೀನನು. ಪರಮಾತ್ಮ ಜೀವಾಧೀನನಲ್ಲ. ಜೀವನ ನಿತ್ಯತ್ವ, ಜೀವನ ಭೇದಭೇದಾದಿರಹಿತತ್ವ ಅನಾದಿಯಿಂದ ಈಶ್ವರಾಧೀನವಾದದ್ದು, ಈಶ್ವರ ಜೀವಾಧೀನನಲ್ಲ, ಇದು ಅನಾದಿಯಿಂದ ನೇಮ. ಅದರ ಮೇಲೆ ವಿಚಾರವಿಲ್ಲ. ಜೀವರುಗಳ, ಪರಮಾತ್ಮ ಸ್ಥೂಲದೇಹದಿಂದ ಸಹಿತರನ್ನಾಗಿ ಮಾಡೋಣವೇ ಸೃಷ್ಟಿ. ಆ ಸ್ಥೂಲದೇಹಗಳ ಪರಮಾತ್ಮ ಬಿಡಿಸೋಣವೇ ಮರಣ. ಜೀವರಿಗೆ ಜನನ-ಮರಣಾದಿಗಳು ಎಂಬೋದು ಇದೇವೆ, ಜೀವರುಗಳಾದ ನಮ್ಮಗಳಿಗೆ ಬಿಂಬನಾದ, ಅನಾದ್ಯನಂತಕಾಲಕ್ಕೆ ಅವಿಯೋಗನಾದ, ನಮ್ಮ ಸಂಗಾತಲೇ ಇರತಕ್ಕ ಪರಮಾತ್ಮ, ನಮ್ಮ ಸಂಗಾತಲೇ ತಾನೂನೂ ಸ್ಥೂಲದೇಹಗಳ ಒಳಗೆ ಪ್ರವೇಶ ಮಾಡತಾನೆ, ಆದ್ದರಿಂದ ಜನಿಸೋಣ. ಈ ರೀತಿ ದೇಹತ್ಯಾಗದವರಿಗೂ ದೇಹದಲ್ಲಿ ಜೀವನ ಸಹಿತವಾಗಿ ಇರುತ್ತಾನೆ. ಇದೇ ಜೀವಿಸೋಣ ಎಂಬುದು. ಆಯಾ ಸ್ಥೂಲದೇಹಗಳಲ್ಲಿ ಅಂತರ್ಗತನಾಗಿದ್ದು ರಕ್ಷಣೆ ಮಾಡುವ. ಅನಾದ್ಯನಂತಕಾಲಕ್ಕೂ ಈಶ್ವರಾಧೀನ ಜೀವ, ಜೀವೇಶ್ವರರಿಗೆ ಭೇದ, ಜೀವೇಶ್ವರರಿಗೆ ಅವಿಯೋಗ, ಈ ಪ್ರಕಾರ ಇರೋದಾಗಿ ಅದೆ, ಇದಕ್ಕೆ ಆದ್ಯಂತಗಳು ಇಲ್ಲ. ಅತಿ ಸಮೀಪನಾದ ಬಂಧು ಆದವ. ಸ್ವಪ್ರಯೋಜನರಹಿತನಾಗಿ ಧನವನ್ನು ಕಾದಿರತಕ್ಕ, ಸರ್ಪದೋಷಾದಿಯಲ್ಲಿ ಜೀವಾಂತರ್ಗತನಾಗಿ, ಜೀವರನ್ನ ಕಾದುಕೊಂಡಿದ್ದು, ಅವರವರ ಯೋಗ್ಯತಾನುಸಾರ ಕಾಪಾಡತಾನೆಂತ ತಾತ್ಪರ್ಯ ॥ ೩೧ ॥

### ೨. ಭಾವಪ್ರಕಾಶಿಕೆ

ಶ್ರೀಪರಮಾತ್ಮನು ದೇವತೆಗಳಲ್ಲಿದ್ದು ಅವರು ಮಾಡುವ ಭಗವದ್ಭಕ್ತಿ ಸ್ತೋತ್ರ, ಪೂಜೆ ಮೊದಲಾದುವುಗಳನ್ನು ಅವರನ್ನನುಸರಿಸಿ ತಾನು ಮಾಡುವನು, ದೈತ್ಯರೊಳಗಿದ್ದು ತನ್ನೊಳು ದ್ವೇಷಾದಿಗಳು ದೇವತಾದ್ವೇಷಾದಿ ತಮಸ್ಸಾಧನವಾದ ಕಾರ್ಯಗಳನ್ನು ಅವರನ್ನನುಸರಿಸಿ ತಾನು ಮಾಡುವನು. ಪರಮಾತ್ಮನಿಗೆ ಜನನ ಮರಣಾದಿ ದೋಷಗಳಿಲ್ಲದಿದ್ದರೂ, ಜೀವರು ಗರ್ಭಪ್ರವೇಶ ಮಾಡಿ ಶರೀರಗಳಿಂದ ಭೂಮಿಯಲ್ಲಿ ಜನಿಸಿದಾಗ ತಾನೂ ಜನಿಸುವನು. ಅವರು ಬೆಳೆಯುವಾಗ ತಾನೂ ಬೆಳೆಯುತ್ತಾ ಬರುವನು. ಹಣವನ್ನು ಕಾದುಕೊಂಡಿರುವ ಸರ್ಪವು ಹೇಗೆ ಆ ಹಣವನ್ನು ತನ್ನ ಉಪಯೋಗಕ್ಕಾಗಿ ಅಪೇಕ್ಷಿಸದೆ ನಿಷ್ಕಾಮುಕವಾಗಿ ಕಾದುಕೊಂಡು ಮತ್ತೊಬ್ಬರಿಗೆ ಅದನ್ನು ಕೊಡದೆ ರಕ್ಷಿಸುವುದೋ ಹಾಗೆ ಪರಮಾತ್ಮನು ಯಾವ ನಿಮಿತ್ತವೂ ಇಲ್ಲದೆ ಜೀವರಿಗೆ ಬಾಂಧವನೆನಿಸಿ, ಸರ್ವಕಾಲಗಳಲ್ಲಿಯೂ ಅವರನ್ನು ಬಂಧುಗಳಂತೆ ರಕ್ಷಿಸುವನು. ॥ ೩೧ ॥

### ೩. ಭಾವದರ್ಪಣ

ದನುಜೇತಿ । ಜನಿಸುವ–ಜೀವರನ್ನ ಸೃಷ್ಟಿಸಿ ಅವರಲ್ಲಿ ಪ್ರವೇಶನಾಗಿ ಬರುವ ಎಂಬರ್ಥ । ತತ್ಸೃಷ್ಟ್ವಾ ತದೇವಾನುಪ್ರಾವಿಶದಿತಿ ಶ್ರುತೇಃ ॥ ಜನಿತೋತವಿಷ್ಣುರಿತಿ ಶ್ರುತೇಃ ॥ ೩೧ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ದನುಜ ಇತಿ ॥ ಒಡನೆ–ಸಂಗಡ ॥ ಜನಿಸುವ–ಪ್ರಾದುರ್ಭವಿಸುವ ॥ ಜೀವಿಸುವ–ಜೀವಿತನಾಗುವ ॥ ೩೧ ॥

### ಕನ್ನಡಾರ್ಥ

ಜೀವನನ್ನು ಬೆಂಬಿಡದೆ ಸದಾ ಸುರಕ್ಷಿಸುವನೆಂದು ಪರಮಾತ್ಮನ ಮಹಿಮೆಯನ್ನು ತಿಳಿಸುತ್ತಾರೆ. ದನುಜ ಎಂಬ ಪದ್ಯದಿಂದ, ಒಡನೆ–ಸಂಗಡ, ಜೊತೆಯಲ್ಲಿ

ಎವ್ಮೊಡನೆ ಜನಿಸುವನು–ಎಂದರೆ ಜೀವರೊಡನೆ ಪರಮಾತ್ಮನು ಹುಟ್ಟುತ್ತಾನೆ ಎಂದು ಅರ್ಥ ಹೇಳಬಾರದು. ಪರಮಾತ್ಮನಿಗೆ ಜನನವಾಗಲೀ, ಮರಣವಾಗಲೀ ಇರುವುದಿಲ್ಲ. ಪರಮಾತ್ಮನು ಪ್ರಾದುರ್ಭವಿಸುತ್ತಾನೆ, ಎಂದು ಅರ್ಥ ತಿಳಿಯ ಬೇಕು. ಜೀವಿಸುವ–ಎಂದರೆ ಬದುಕುವನು ಎಂದು ಅರ್ಥವಲ್ಲ. ಜೀವನ ಜೀವ ನಕ್ಕೆ ಕಾರಣನಾಗಿ ಅವರನ್ನು ಬದುಕಿಸುವನೆಂದು ಅರ್ಥ ಮಾಡಬೇಕು. ಅಂದರೆ ವಿರೋಧ ಬರುವುದಿಲ್ಲ. ॥ ೩೧ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ದನುಜರೆಂಬ ಅಯೋಗ್ಯರಲ್ಲೂ, ದಿವಿಜರೆಂಬ ಮುಕ್ತಿಯೋಗ್ಯರಲ್ಲೂ ಸಹಾ ಇದ್ದು, ಅವರವರ ಯೋಗ್ಯತಾನುಸಾರ ಕರ್ಮಗಳನ್ನು ವ್ಯಕ್ತಿಮಾಡುವನು. ಜನನ–ಮರಣಾದ್ಯಖಿಳ ದೋಷದೂರನಾದಾಗ್ಯೂ ಎವ್ಮೊಡನೆ ಎಂದರೆ, ಸರ್ವಜೀವರ ಸಂಗಡಲೂ ಜನಿಸುವನು ಅಂದರೆ, ಆಯಾಯಾ ದೇಹದಲ್ಲಿ ಅವತರಿಸಿ ಜೀವಿಸಿ ಅದೃಶ್ಯನಾಗಿದ್ದು ಜೀವರನ್ನು ರಕ್ಷಿಸುವನು. ಆದ್ದರಿಂದ ಧನವನ್ನು ರಕ್ಷಿಸುವ ಸರ್ಪದಂತೆ ಅನಿಮಿತ್ತಬಂಧುವು ॥ ೩೧ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನು ಸಕಲ ದೈತ್ಯರಲ್ಲಿ ಅಂತರ್ಯಾಮಿಯಾಗಿದ್ದಾನೆ. ದೈತ್ಯರು ಸ್ವರೂಪತಃ ಭಗವದ್ದ್ವೇಷಿಗಳು ಹಾಗೂ ಭಗವದ್ಭಕ್ತರ ದ್ವೇಷಿಗಳು. ತಮೋ ಯೋಗ್ಯ ಜೀವರು.

ಅಂತೆಯೇ ಮುಕ್ತಿಯೋಗ್ಯರಾದ, ಸ್ವರೂಪತಃ ಸಾತ್ವಿಕ ಸ್ವಭಾವವುಳ್ಳ ದೇವತೆಗಳಲ್ಲಿಯೂ ಅಂತರ್ಯಾಮಿರೂಪೇಣ ಇದ್ದಾನೆ. ಇದರಿಂದ ನಿತ್ಯಸಂಸಾರಿ ಗಳಾದ ಮಧ್ಯಮಜೀವರೂ ಗ್ರಾಹ್ಯ.

ಜೀವರ ಸ್ವರೂಪ ನಿತ್ಯ, ಅನಾದಿ ಮತ್ತು ಭಗವದಧೀನವಾಗಿದೆ. ಬಿಂಬನಾದ ಜಗದಂಬಾರಮಣನು ಆಯಾಯಾ ಜೀವರ ಸ್ವರೂಪಯೋಗ್ಯತೆ ಹಾಗೂ ಅನಾದಿ

ಕರ್ಮಕ್ಕೆ ತಕ್ಕಂತೆ ನಾನಾ ಪ್ರಕಾರವಾಗಿ ಕರ್ಮಗಳನ್ನು ಮಾಡಿ ಮಾಡಿಸುವನು. ಆದ್ದರಿಂದ ಶ್ರೀಹರಿಗೆ ವೈಷಮ್ಯ-ನೈರ್ಘೃಣ್ಯಾದಿ ದೋಷಗಳಿಲ್ಲ. ದೇವತೆಗಳಲ್ಲಿ ಸತ್ತ್ವಗುಣವೇ ಅವರ ಸ್ವರೂಪಗತ ಧರ್ಮವು. ಅದರಂತೆ ಕಾರ್ಯಗಳ ಅಭಿವ್ಯಕ್ತಿ.

ತಮೋಯೋಗ್ಯರಾದ ದನುಜರಲ್ಲಿದ್ದು, ಅವರ ಸ್ವರೂಪಯೋಗ್ಯತೆಯಂತೆ ಭಗವದ್ದ್ವೇಷ, ಪರಹಿಂಸೆ, ಸಜ್ಜನರ ಪೀಡನೆ ಇತ್ಯಾದಿ ದುಷ್ಕರ್ಮರೂಪವಾದ ವ್ಯಾಪಾರಗಳನ್ನು ಮಾಡಿಸುವನು.

ರಜೋಜೀವಿಗಳಾದ ನಿತ್ಯಸಂಸಾರಿಗಳ ದ್ವಾರಾ ಪುಣ್ಯ–ಪಾಪ ರೂಪವಾದ ಮಿಶ್ರಕರ್ಮವನ್ನು ಮಾಡಿಸುವನು.

ಶ್ರೀಪರಮಾತ್ಮನು ಚತುರ್ವಿಧ ನಾಶರಹಿತನು. ಜೀವನು ಸ್ಥೂಲದೇಹದಿಂದ ಜನಿಸುವುದರಿಂದ, ಅವನಿಗೆ ಉತ್ಪತ್ತಿ ಉಂಟು. ದೇಹತ್ಯಾಗದಿಂದ ಮರಣ ಸಂಭವಿಸುವುದು. ಇದರಿಂದ ಶ್ರೀಪರಮಾತ್ಮನು ಸರ್ವಜೀವರಿಂದಲೂ ಅತ್ಯಂತ ವಿಲಕ್ಷಣನು.

ಜೀವರು ಮಾತೃಗರ್ಭದಿಂದ ಜನಿಸುವಾಗ, ಜೀವರಿಂದ ನಿತ್ಯಾವಿಯೋಗಿಯಾದ ಬಿಂಬನೂ ಸಹ ಜನಿಸುವನು. ಅವನಿಗೆ ಜನನವೆಂದರೆ–ಪ್ರಾದುರ್ಭಾವ. ಅಂದರೆ, ಜೀವನೊಡನೆ ಪ್ರಕಟನಾಗುವನು. ಜೀವರ ಸ್ಥೂಲದೇಹದಲ್ಲಿ ಪ್ರವೇಶಿಸುವನು.

ದೇಹಾಂತರ್ಗತನಾದ ಆ ದೇವಶ್ರೇಷ್ಠನು ದೇಹದ ಬಾಲ್ಯ, ಯೌವ್ವನ, ವೃದ್ಧಾಪ್ಯ ಇತ್ಯಾದಿ ವಿವಿಧ ಅವಸ್ಥಾ ವ್ಯತ್ಯಾಸಗಳಿಗೂ, ಶರೀರದ ಇತರ ವಿಕಾರಗಳಿಗೂ ಶ್ರೀಹರಿಯೇ ಮುಖ್ಯಕಾರಣನು. ಇದರಿಂದ ಜಡವಾದ ಸ್ಥೂಲಶರೀರಕ್ಕೂ, ತದಂತರ್ಯಾಮಿ ಈಶನಿಗೂ ಇರುವ ಜಡೇಶಭೇದ ಸಿದ್ಧಿಸಿತು.

ಜೀವನೊಡನೆ ಪರಮಾತ್ಮನು ನಿತ್ಯಾವಿಯೋಗಿ. ನಿತ್ಯವಾದ ಬಿಂಬ–ಪ್ರತಿಬಿಂಬ ಸಂಬಂಧದಿಂದ ಇದ್ದಾನೆ. ನಿಜವಾದ ಬಂಧುಗಳು ಕಷ್ಟಕ್ಕೆ ಒದಗುವಂತೆ, ಫಲಾಪೇಕ್ಷಾರಹಿತನಾದ ಪರೇಶನು, ಭಕ್ತರ ಆಪತ್ತಿನ ಸಮಯಕ್ಕೆ ಬಂದು ಒದಗಿ, ಅವರನ್ನು ಸದಾ ಸಂರಕ್ಷಿಸುತ್ತಿರುವುದರಿಂದ ಅನಿಮಿತ್ತ ಬಂಧುವಾಗಿದ್ದಾನೆ.

ಶ್ರೀಶನ ಈ ಬಂಧುತ್ವಕ್ಕೆ ದಾಸರಾಯರು ದೃಷ್ಟಾಂತವನ್ನು ಕೊಡುತ್ತಾರೆ. ಸರ್ಪವು ಭೂಗತ ದ್ರವ್ಯವನ್ನು ಯಾವಾಗಲೂ ಕಾಯ್ದಿರುವುದು. ಆ ದ್ರವ್ಯದಿಂದ ಸರ್ಪಕ್ಕೇನೂ ಪ್ರಯೋಜನವಿಲ್ಲ. ಅಂತೆಯೇ ತನ್ನಿಂದ ಸೃಷ್ಟರಾದ ಜೀವರ ಸಂರಕ್ಷಣಾಭಾರ ಹಾಗೂ ಯೋಗಕ್ಷೇಮಕಾರ್ಯವನ್ನು ಬಿಂಬನು ಫಲಾಪೇಕ್ಷೆಯಿಲ್ಲದೆ ನಿರ್ವಹಿಸುತ್ತಿದ್ದಾನೆ ॥ ೩೧ ॥

❀ ❀ ❀

## ಪದ್ಯ ೩೨

**ಮೂಲ**

**ಬಿಸರುಹಾಪ್ತಾಗಸದಿ ತಾನುದ ।**
**ಯಿಸಲು ವೃಕ್ಷಂಗಳ ನೆಳಲು ಪಸ ।**
**ರಿಸುವುವಿಳೆಯೊಳು ಅಸ್ತಮಿಸಲಲ್ಲಲ್ಲೆ ಲೀನಿಪವು ॥**
**ಶ್ವಸನಮುಖ್ಯಮರಾಂತರಾತ್ಮಕ ।**
**ನೊಳಗೊಳಿರುತಿಪ್ಪವು ಜಗತ್ರಯ ।**
**ಬಸಿರೊಳಿಂಬಿಟ್ಟಿಲ್ಲ ಕರ್ಮವ ತೋರ್ಪ ನೋಳ್ಪರಿಗೆ ॥ ೩೨ ॥**

**ಅವತರಣಿಕೆ**

ಸಕಲ ಜೀವರುಗಳಲ್ಲಿದ್ದು, ಸಮಸ್ತ ಕ್ರಿಯಾರೂಪರಾದ ಕರ್ಮಗಳನ್ನು ತಾನೇ ಸ್ವತಃ ಬಿಂಬಕ್ರಿಯಾ ದ್ವಾರಾ ಮಾಡುತ್ತಿದ್ದರೂ, ಜೀವರೇ ಮಾಡುತ್ತಿರುವರೆಂದು ತೋರಿಸುತ್ತಾನೆ ಎಂಬ ತತ್ತ್ವವನ್ನು ದೃಷ್ಟಾಂತದಿಂದ ವಿವರಿಸುತ್ತಾರೆ–

**ಪ್ರತಿಪದಾರ್ಥ**

ಬಿಸರುಹ = ಕಮಲಪುಷ್ಪಕ್ಕೆ, ಆಪ್ತ = ಮಿತ್ರನಾದ ಸೂರ್ಯನು, **ತಾನು** = ಸ್ವತಃ, ಆಗಸದಿ = ಆಕಾಶದಲ್ಲಿ, **ಉದಯಿಸಲು** = ಉದಯಿಸಿದಾಗ, **ವೃಕ್ಷಂ**

**ಗಳ**=ಮರಗಳ, **ನೆಳಲು**=ನೆರಳು, **ಇಳೆಯೊಳು**=ಭೂಮಿಯ ಮೇಲೆ, **ಪಸರಿಸುವುವು**=ವಿಸ್ತಾರವಾಗಿ ಹರಡಿಕೊಳ್ಳುವುವು. **ಅಸ್ತಮಿಸಲು**=ಅದೇ ಸೂರ್ಯನು ಮುಳುಗಿದಾಗ, **ಅಲ್ಲಲ್ಲೆ**=ಆಯಾಯಾ ವೃಕ್ಷಗಳಲ್ಲಿಯೇ, **ಲೀನಿಪವು**=ಸೇರಿಕೊಂಡು ಬಿಡುವುವು. **ಶ್ವಸನಮುಖ್ಯ**=ವಾಯುದೇವರೇ ಆದಿಯಾಗಿ, **ಅಮರ**=ದೇವತಾವರ್ಗದವರಲ್ಲಿ, **ಅಂತರಾತ್ಮಕನ**=ಅಂತರ್ಯಾಮಿಯಾಗಿರುವ ಬಿಂಬರೂಪೀ ಶ್ರೀಪರಮಾತ್ಮನ, **ವಶದೊಳಿರುತಿಪ್ಪವು**=ಚರಾಚರಾತ್ಮಕವಾದ ಈ ಸಕಲಜಗತ್ತೂ ವಶದಲ್ಲಿರುವುದು (ಜಗತ್ತಿಗೆ ನಿಯಾಮಕನು) **ಜಗತ್ರಯ**=ಸ್ವರ್ಗ, ಭೂ, ಪಾತಾಳಗಳೆಂಬ ಬ್ರಹ್ಮಾಂಡಗತ ಮೂರು ಲೋಕಗಳು ಮತ್ತು ಆ ಲೋಕಗತ ತ್ರಿವಿಧ ಜೀವವರ್ಗ, **ಬಸಿರೊಳು**=ತನ್ನ ಉದರದಲ್ಲಿ, **ಇಂಬಿಟ್ಟು**=ಪ್ರಳಯ ಕಾಲದಲ್ಲಿ ಆಶ್ರಯಕೊಟ್ಟು, **ಎಲ್ಲ ಕರ್ಮವ**=ಜಗದ್ವ್ಯಾಪಾರರೂಪವಾದ ಸಮಸ್ತ ಕ್ರಿಯಾವಿಶೇಷಗಳನ್ನೂ, **ನೋಳ್ಪರಿಗೆ**=ಜ್ಞಾನಮಾರ್ಗದಿಂದ ಧ್ಯಾನೋಪಾಸನೆ ಮಾಡುವವರಿಗೆ, **ತೋರ್ಪ**=ತೋರಿಸುತ್ತಾನೆ. ॥ ೩೨ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಚರಾಚರಾತ್ಮಕ ಜಗತ್ತು ಈಶಾಧೀನವೆಂದು ಹೇಳುತಾರೆ.

ಕಮಲಕ್ಕೆ ಆಪ್ತನಾದ ಸೂರ್ಯನಾದ ತಾನು ಆಕಾಶದಲ್ಲಿ ಉದಯನಾದರೆ ಗಿಡಗಳ ನೆರಳು ಭೂಮಿಯೊಳು ವಿಸ್ತಾರವಾಗಿ ವ್ಯಾಪಿಸೋವಾಗತವೆ. ಸೂರ್ಯಾಸ್ತಮಯವಾದರೆ ಆಯಾ ವೃಕ್ಷಾದಿಗಳಲ್ಲೇ ಕತ್ತಲೆಯೊಳಗೆ ವೃಕ್ಷಛಾಯಾ ಸೇರೋದಾಗತದೆ. ವೃಕ್ಷಸದೃಶನಾದ ಜೀವಾಂತರ್ಗತನಾದ ಜೀವಾಕಾರ ಬಿಂಬಗೆ ನೆರಳು ಸದೃಶರಾದವರು ಪ್ರತಿಬಿಂಬರಾದ ಜೀವರು. ವೃಕ್ಷ ಚಲಿಸಿದಂತೆ ನೆಳಲೂ ಚಲಿಸಿ ವೃಕ್ಷಾಧೀನವಾಗಿರುತ್ತದೆ. ವೃಕ್ಷಛಾಯಾಗಳ ದೃಷ್ಟಾಂತಕ್ಕೆ ಜೀವ ಪರಮಾತ್ಮರು ದೃಷ್ಟಾಂತ. ಜೀವರು ಪರಮಾತ್ಮನ ಅಧೀನರು ಎಂತ ತಾತ್ಪರ್ಯ. ವಾಯುದೇವರೇ ಮೊದಲಾದ ಮುಖ್ಯರಾದ ದೇವತೆಗಳೇನು, ಉಪಲಕ್ಷಣಯಾ ಅಸ್ವತಂತ್ರರಾದ

ರಮಾಸಹಿತ ತ್ರಿವಿಧ ಜೀವರೇನು ಇವರಲ್ಲಿ, ಅಂತರ್ಯಾಮಿಯಾಗಿ ಇರುವ ಬಿಂಬ ರೂಪಿ ಪರಮಾತ್ಮನ ಅಧೀನದೊಳಗೆ ಇರೋವರಾಗಿದ್ದಾರೆ, ವೃಕ್ಷಾಧೀನಗತ ಛಾಯಾದೋಷಾದಿಯಲ್ಲಿ ಎಂತ ತಾತ್ಪರ್ಯ. ಸೂರ್ಯೋದಯ, ಸೂರ್ಯಾಸ್ತಮಯ ಎಂಬುದು ಸೃಷ್ಟಿಕಾಲ ಒಂದು, ಲಯಕಾಲ ಒಂದು ಎಂತ ಸಾಂಕೇತ. ಸೂರ್ಯೋದಯವಾದರೆ ವೃಕ್ಷಗತ ನೆರಳುಗಳು ವ್ಯಕ್ತ ಹ್ಯಾಂಗೋ, ಹಾಂಗೆ ಸೃಷ್ಟಿಕಾಲ ಪ್ರಾಪ್ತ ರಾದರೆ ಛಾಯಸದೃಶರಾದ ಪ್ರತಿಬಿಂಬರಾದ, ತನ್ನ ಉದರದಲ್ಲಿ ಪ್ರಳಯಕಾಲದಲ್ಲಿ ಸೇರಿದ ಜೀವರನ್ನ ಸೃಷ್ಟಿರೂಪದಿಂದ ವ್ಯಕ್ತಮಾಡತಾನೆ. ಅಸ್ತಮಾನಕ್ಕೆ ಸದೃಶ ವಾದ ಲಯಕಾಲ ಪ್ರಾಪ್ತವಾದರೆ ವೃಕ್ಷಗಳ ನೆರಳು ವೃಕ್ಷದಲ್ಲಿ ಲಯ ಐದಿದಂತೆ, ಸರ್ವಜೀವರನ್ನ ಉದರದಲ್ಲಿ ಧರಿಸತಾನೆ. ಈ ಪ್ರಕಾರ ಸೃಷ್ಟಿಕಾಲಗಳು ಆಗತಾ ಇರತವೆ. ಅಂತು ವೃಕ್ಷಛಾಯಾ ದೃಷ್ಟಾಂತ ಬಿಂಬ-ಪ್ರತಿಬಿಂಬಕ್ಕೂ, ಸೃಷ್ಟಿ-ಲಯ ಗಳಿಗೂ ಸಮನ್ವಯ. ಇನ್ನು ಸೂರ್ಯನ ದೃಷ್ಟಾಂತ. ಸೃಷ್ಟಿಕಾಲ, ಪ್ರಳಯಕಾಲ ತೋರಿಸಿಕೊಡತಕ್ಕ ಕಾಲನಾಮಕ ಪರಮಾತ್ಮ ಹಾಂಗೆ ಸೃಷ್ಟಿಕಾರಣನಾದ ಮೂಲ ರೂಪಿ ನಾರಾಯಣದೇವರು ಎರಡಕ್ಕೂ ಒಬ್ಬ ಸೂರ್ಯನೇ ದೃಷ್ಟಾಂತ. ತ್ರಿವಿಧ ಜೀವರ ಸೃಷ್ಟಿಮಾಡಿದ ಜೀವರ ಪೂರ್ವೋಕ್ತ ದೃಷ್ಟಾಂತಾನುಸಾರ ತನ್ನ ಉದರ ದಲ್ಲಿ, ಪ್ರಳಯಕಾಲದಲ್ಲಿ ಆಶ್ರಯಮಾಡಿ ಇಟ್ಟು, ಆಗ್ಗೆ ಕರ್ಮರೂಪವಾದ ವ್ಯಾಪಾರಶೂನ್ಯರನ್ನಾಗಿ ಮಾಡಿ, ನಿದ್ರಾಯುಕ್ತರನ್ನಾಗಿ ಮಾಡಿ ಇರತಾನೆ. ಸೃಷ್ಟಿ ಕಾಲ ಪ್ರಾರಂಭವಾಗೋಣವೇ, ಪೂರ್ವೋಕ್ತ ದೃಷ್ಟಾಂತಾನುಸಾರ ಸೃಷ್ಟಿಮಾಡಿ ಉದರಗತರಾಗಿ, ಕರ್ಮಶೂನ್ಯರಾಗಿ ಮಾಡಿ, ನಿದ್ರಾಯುಕ್ತರಾದ ಸರ್ವಪ್ರಾಣಿಗಳಿಗೆ ಪುನಶ್ಚ ಯಾವತ್ತೂ ಕರ್ಮಗಳ ವ್ಯಕ್ತಮಾಡಿ ತೋರಿಸಿ, ಅವರವರು ಮಾಡತಕ್ಕ ಕರ್ಮಗಳ ಅವರವರಿಗೆ ತಿಳಿಸಿ ಮಾಡಸತಾನೆ. ಮತ್ತು ಜ್ಞಾನಮಾರ್ಗದಿಂದ, ತನ್ನ ಧ್ಯಾನಾದಿಗಳಿಂದ ನೋಡತಕ್ಕವರಿಗೆ ತನ್ನ ರೂಪವನ್ನು ಹೃದಯಾಕಾಶದಲ್ಲಿ ತೋರುವನು ಎಂತ ತಾತ್ಪರ್ಯ ॥ ೩೨ ॥

**೨. ಭಾವಪ್ರಕಾಶಿಕೆ**

ಸೂರ್ಯನು ಉದಯವಾದರೆ ಗಿಡಮರಗಳ ನೆಳಲು ಚೆನ್ನಾಗಿ ಕಾಣು ವುದು. ಅಸ್ತಮಯವಾಗಲು, ಅಲ್ಲಲ್ಲೆ ಮರೆಯಾಗುವುದು. ಇದೇ ರೀತಿಯಲ್ಲಿ

ಶ್ರೀಬ್ರಹ್ಮ ವಾಯು ಮೊದಲಾದ ದೇವತೆಗಳ ಅಂತರಾತ್ಮಕನಾದ ಶ್ರೀಪರಮಾತ್ಮನ ವಶದಲ್ಲಿ ಈ ಮೂರು ಲೋಕಗಳೂ ಇರುವವು. ಅವುಗಳನ್ನು ತನ್ನ ಉದರದಲ್ಲಿಟ್ಟುಕೊಂಡು ಪ್ರಳಯಕಾಲದಲ್ಲಿ ಮಲಗಿರುವಾಗ ಯಾವ ಯಾವ ಜೀವರ ಕಾರ್ಯವೇನು ಎಂಬುವುದು ಯಾವ ಜೀವರಿಗೂ ಗೊತ್ತಿರುವುದಿಲ್ಲ. ಜೀವರನ್ನು ಸೃಷ್ಟಿಗೆ ತಂದಕೂಡಲೇ ಅವರವರು ಮಾಡಬೇಕಾದ ಕರ್ಮಗಳನ್ನು ಅವರವರಿಂದ ಮಾಡಿಸಿ ಆಯಾ ಕರ್ಮಗಳನ್ನು ನೋಳ್ಪರಿಗೆ ತೋರ್ಪಡಿಸುವನು. ಸೂರ್ಯನು ಅಸ್ತಮಯವಾದ ಕಾಲದಲ್ಲಿ ನೆಳಲು ಕಾಣದೆ ಉದಯವಾದ ಮೇಲೆ ಹೇಗೆ ಕಾಣುವುದೋ ಹಾಗೆ, ಪ್ರಳಯಕಾಲದಲ್ಲಿ ಜನರ ಕರ್ಮಗಳು ಕಾಣುವುದಿಲ್ಲ. ಸೃಷ್ಟ್ಯಾದಿ ವ್ಯಾಪಾರವನ್ನು ಬಿಟ್ಟು ಪರಮಾತ್ಮನು ಯೋಗನಿದ್ರೆಯಲ್ಲಿರುವುದರಿಂದ ಅಸ್ತಮಯೋಪಮಾನ. ಸೃಷ್ಟಿಯಾದ ಮೇಲೆ ಉದಯವಾದಂತೆ ಜನರ ವ್ಯಾಪಾರಗಳನ್ನು ತೋರ್ಪಡಿಸುವನು. ॥ ೩೨ ॥

### ೩. ಭಾವದರ್ಪಣ

ಸೂರ್ಯ ತಾನುದಯಿಸಿ ವೃಕ್ಷಛಾಯಾ ಹ್ಯಾಗೆ ಪಸರಿಸಿ ತೋರಿಸುತ್ತಾನೋ ತದ್ವತ್ ಜೀವರನ್ನು ಸೃಷ್ಟಿಸಿ ಕರ್ಮ ತೋರಿಸುತ್ತಾನೆಂದು ಸದೃಷ್ಟಾಂತ ಹೇಳುತ್ತಾರೆ. ಬಿಸರುಹಾಪ್ತಾ ಇತಿ. ಲೀನಿಪವು ಕತ್ತಲೆವಳಗೆ ವೃಕ್ಷಛಾಯಾ ಸೇರೋವು. ಬಸಿರೊಳು ಹೊಟ್ಟೆಯೊಳಗೆ, ಇಂಬಿಟ್ಟು ಸ್ಥಳಮಾಡಿ ಎಂಬರ್ಥ. ॥ ೩೨ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಬಿಸರುಹ ಇತಿ ॥ ಯಥಾಪಿಯಂತಿ ತೇಜಾಂಸಿ ಮಹಾ ತೇಜಸಿ ಭಾಸ್ಕರೇ ॥ ಪೃಥಕ್ ಪೃಥಕ್ ಸ್ಥಿತಾನ್ಯಹ್ನಿ ಸ್ವಲ್ಪೈರಪಿ ಚ ಸರ್ವಶಃ ॥ ಪರೇ ಬ್ರಹ್ಮಣೀ ಜೀವಾಖ್ಯ ಬ್ರಹ್ಮಾಣ್ಯಪ್ಯಪಿಯಂತಿ ಹಿ ॥ ಮುಕ್ತೌ ॥ ಇತಿ ಶ್ರೀವಿಷ್ಣುತತ್ವನಿರ್ಣಯೇ॥ ಪದ್ಮಾಪ್ತಃ ಸೂರ್ಯಃ॥ ಆಗಸ_ಆಕಾಶಃ॥ ಪಸರಿಸುವವು_ವಿಸ್ತೃತವಾಗುವವು ॥ ಇಳೆ_ಪೃಥ್ವಿ ॥ ಅಸ್ತಮಿಸೆ ಅಸ್ತವಾಗಲು ॥ ಲೀನಪುವು ಲೀನವಾಗುವುವು ॥ ಶ್ವಸನಃ ವಾಯುಃ ॥ ಮುಖ್ಯೇತಿ ಜಗತಿ ಅನ್ವೇತಿ ॥ ಬಸಿರು ಹೊಟ್ಟೆ ॥ ಇಂಬು ಸ್ಥಳ॥ ತೋರ್ಪ ತೋರಿಸುವ ನೋಳ್ಪ ನೋಡುವ ॥ ೩೨ ॥

**ಕನ್ನಡಾರ್ಥ**

ತತ್ತ್ವೇಶರ ವ್ಯಾಪಾರಗಳಿಂದ ಸಹಿತವಾದ ಸಮಸ್ತ ಪ್ರಪಂಚವು ಭಗವದಧೀನ. ಭಗವದಿಚ್ಛೆಯಿಂದಲೇ ನಿರ್ವಾಹವಾಗುತ್ತದೆ ಎಂಬುದನ್ನು ಸೂರ್ಯ ಹಾಗೂ ಅವನಿಂದಾಗುವ ವೃಕ್ಷಛಾಯಾಗಳ ಈ ದೃಷ್ಟಾಂತದಿಂದ ತಿಳಿಯಪಡಿಸುತ್ತಾರೆ ಬಿಸರುಹಾಪ್ತ ಎಂಬ ಪದ್ಯದಿಂದ.

ಸೂರ್ಯೋದಯ ಸೂರ್ಯಾಸ್ತಗಳನ್ನು ಗಿಡಮರಗಳ ನೆಳಲು ಅನುಸರಿಸಿ ನಡೆವಂತೆ ತತ್ತ್ವೇಶರಿಂದೊಡಗೂಡಿದ ಸಮಸ್ತ ಪ್ರಪಂಚವೂ ಪರಮಾತ್ಮನ ಅಧೀನದಲ್ಲಿ ಇದ್ದು, ಅವನನ್ನನುಸರಿಸಿಯೇ ನಡೆಯುವುದು. ಈ ವಿಷಯದಲ್ಲಿ ಶ್ರೀವಿಷ್ಣುತತ್ತ್ವನಿರ್ಣಯದ ವಚನಗಳು ಆಧಾರವಾಗಿರುತ್ತವೆ. ಹಗಲಿನಲ್ಲಿ ಬೇರೆ ಬೇರೆಯಾಗಿ ಇರುವ ಪ್ರಕಾಶಗಳು ಸೂರ್ಯನಲ್ಲಿಯೇ ಹೇಗೆ ಲೀನವಾಗುವವೋ ಹಾಗೆ ಜೀವರೆಲ್ಲರೂ ಪರಬ್ರಹ್ಮನೆನಿಸಿರುವ ನಾರಾಯಣನಲ್ಲಿ ಮುಕ್ತಿಯಲ್ಲಿ ಪ್ರವೇಶ ಪಡೆಯುತ್ತಾರೆ ಎಂದು ದೃಷ್ಟಾಂತವನ್ನು ತೋರಿಸಿರುತ್ತಾರೆ.

ಪದ್ಮಾಪ್ತ–ಕಮಲಕ್ಕೆ ಬಂಧುವೆನಿಸಿದವನು ಸೂರ್ಯ ॥ ೩೨ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ವೃಕ್ಷಛಾಯೆ ಸೂರ್ಯನಿಂದುಂಟಾಗುವಂತೆ, ತತ್ತ್ವೇಶರಿಂದುಂಟಾದ ಪ್ರಪಂಚ ದೇವರಧೀನವೆಂದು ತಿಳಿಸುತ್ತಾರೆ, ಬಿಸರುಹಾಪ್ತನೆಂದು. ಬಿಸರುಹ ಎಂಬ ಕಮಲಕ್ಕೆ ಆಪ್ತನಾದ ಸೂರ್ಯನು ಉದಯಿಸಿದಾಗ, ವೃಕ್ಷಗಳ ನೆರಳುಗಳು ಭೂಮಿಯಲ್ಲಿ ವಿಸ್ತಾರವಾಗಿ ಕಾಣಿಸಿಕೊಂಡಿದ್ದು, ಸೂರ್ಯಾಸ್ತಮಯಾನಂತರ ವೃಕ್ಷಗಳಲ್ಲೇ ಲೀನವಾಗುವಂತೆ, ಪ್ರಾಣ ಮೊದಲಾದ ತತ್ತ್ವೇಶರ ವಶದಲ್ಲಿ ಈ ಜಗತ್ರಯವೂ ಇರುವುವು. ದೇವರು ಆ ತತ್ತ್ವೇಶರಿಂದ ಸಹಿತವಾದ ಸೂಕ್ಷ್ಮ ಜಡ-ಜೀವಾತ್ಮಕ ಪ್ರಪಂಚವನ್ನು, ತನ್ನುದರದಲ್ಲಿ ಪ್ರಳಯಕಾಲದಲ್ಲಿಟ್ಟಿದ್ದು, ಸೃಷ್ಟಿ-ಸ್ಥಿತಿ ಕಾಲದಲ್ಲಿ ಸ್ಥೂಲವಾಗಿ ನಿರ್ಮಿಸಿ, ಎಲ್ಲರ ಕರ್ಮಗಳನ್ನೂ ತಿಳಿಯತಕ್ಕವರಿಗೆ ತಿಳಿಯಪಡಿಸುತ್ತಾನೆ. ॥ ೩೨ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸೂರ್ಯನಿಗೆ ಕಮಲಮಿತ್ರನೆಂದು ಹೆಸರು. ಬಿಸ–ಎಂದರೆ, ನೀರು. ಬಿಸರುಹ–ಎಂದರೆ, ನೀರನ್ನು ಭೇದಿಸಿಕೊಂಡು ಮೇಲಕ್ಕೆ ಎದ್ದು ಬರುವ ಕಮಲ ಪುಷ್ಪ. ಅಂತಹ ಕಮಲಕ್ಕೆ ಆಪ್ತ–ಎಂದರೆ ಬಂಧುವು.

ಸೂರ್ಯನು ಆಕಾಶದಲ್ಲಿ ಉದಯಿಸಿದಾಗ, ವೃಕ್ಷಗಳ ನೆರಳು ಭೂಮಿಯ ಮೇಲೆ ಬೀಳುವುದು. ಅದೇ ಸೂರ್ಯನು ಸಾಯಂಕಾಲ ಅಸ್ತಂಗತನಾದಾಗ, ವೃಕ್ಷದ ನೆರಳು ವೃಕ್ಷದಲ್ಲಿಯೇ ಪುನಃ ಸೇರಿಕೊಳ್ಳುವುದು. ಈ ದೃಷ್ಟಾಂತದಲ್ಲಿ ವೃಕ್ಷಸದೃಶ, ಶ್ರೀಪರಮಾತ್ಮ ಪ್ರತಿಬಿಂಬರಾದ ಸಮಸ್ತ ಜೀವರೂ ವೃಕ್ಷದ ನೆರಳಿನ ಸದೃಶ. ನೆರಳು ವೃಕ್ಷಾಧೀನವಾಗಿರುವಂತೆ, ಪ್ರತಿಬಿಂಬಭೂತರಾದ ಸಮಸ್ತ ಜೀವವರ್ಗ, ವೃಕ್ಷಸದೃಶನಾದ ಬಿಂಬರೂಪೀ ಶ್ರೀಪರಮಾತ್ಮನ ಆಧೀನ.

ಮುಖ್ಯಪ್ರಾಣದೇವರಿಗೆ ಶ್ವಸನ ಎಂದು ಹೆಸರು. ಸರ್ವಚೇಷ್ಟಾ ಪ್ರವರ್ತಕರೂ, ಶ್ರೀಶನ ಪ್ರಥಮಾಂಗಭೂತರೂ ಆದ ಶ್ರೀವಾಯುದೇವರೇ ಆದಿಯಾಗಿ, ಸಮಸ್ತ ದೇವತೆಗಳಲ್ಲಿ ಶ್ರೀಪರಮಾತ್ಮನು ಬಿಂಬನಾಗಿದ್ದಾನೆ. ಸರ್ವನಿಯಾಮಕನಾದ ಶ್ರೀಪರಮಾತ್ಮನ ವಶದಲ್ಲಿ ಜಗತ್ರಯವಿದೆ.

ಸ್ವರ್ಗ–ಭೂ–ಪಾತಾಳಗಳೆಂಬ ಈ ಲೋಕತ್ರಯಗಳು ಬ್ರಹ್ಮಾಂಡಾಂತರ್ಗತವಾಗಿವೆ. ಬ್ರಹ್ಮಾಂಡಗತ ಸಮಸ್ತ ತ್ರಿವಿಧಜೀವರನ್ನು ಪ್ರಳಯಕಾಲದಲ್ಲಿ ಶ್ರೀಪರಮಾತ್ಮನು, ತನ್ನ ಉದರದಲ್ಲಿ ಆಶ್ರಯಕೊಟ್ಟು ಸಂರಕ್ಷಿಸುವನು. ವಿಶ್ವಾಧಾರನಾದ ವಿಶ್ವನಿಯಾಮಕನು ಆಯಾಯಾ ಜೀವರಲ್ಲಿದ್ದು, ಅವರಂತೆ ಸಮಸ್ತ ಕರ್ಮಗಳನ್ನೂ ಮಾಡಿ ಮಾಡಿಸುತ್ತಿರುವನು. ಧ್ಯಾನಮಾರ್ಗದಿಂದ ಉಪಾಸಿಸುವ ಸಾಧಕರಿಗೆ ತನ್ನ ಸಕಲ ಕರ್ಮ ಪ್ರೇರಕಶಕ್ತಿರೂಪವಾದ ಸಂದರ್ಶನವನ್ನು ಕೊಡುವನು.

**ಕರ್ಮವ ತೋರ್ಪನೋಳ್ಪರಿಗೆ**– ಎಂಬ ವಾಕ್ಯವನ್ನು ಎರಡು ಪ್ರಕಾರವಾಗಿ ಅರ್ಥೈಯಿಸಬಹುದು.

೧. ಬಿಂಬಕ್ರಿಯಾ ದ್ವಾರಾ ತಾನೇ ಜೀವರಂತರ್ಯಾಮಿಯಾಗಿದ್ದು ಸಕಲ ಕ್ರಿಯೆ

ಗಳನ್ನು ಮಾಡುತ್ತಿದ್ದರೂ, ಜೀವರಿಗೆ ತಾವೇ ಆ ಸಮಸ್ತಕರ್ಮಗಳನ್ನೂ ಮಾಡುತ್ತಿದ್ದೇವೆ ಎಂಬ ಭ್ರಾಂತಿಯನ್ನುಂಟುಮಾಡುವನು.

೨. ಅಹಂಕರ್ತೃತ್ವಾಭಿಮಾನವನ್ನು ಬಿಟ್ಟು, ಸಮಸ್ತಕ್ಕೂ ಶ್ರೀಹರಿಯೇ ಮುಖ್ಯ ಕಾರಣ ಮತ್ತು ಕರ್ತನೆಂಬ ಜ್ಞಾನಾನುಸಂಧಾನವುಳ್ಳ ಧ್ಯಾನೋಪಾಸಕರಿಗೆ, ತನ್ನಿಂದಲೇ ನಡೆಯುತ್ತಿರುವ ಸಕಲ ಕರ್ಮಗಳ ನಿಯಾಮಕ ರೂಪವನ್ನು ತೋರಿಸುವನು.

ಈ ಪದ್ಯದಲ್ಲಿ ಸೂರ್ಯೋದಯವು ಜಗತ್ಸೃಷ್ಟಿಗೆ ದೃಷ್ಟಾಂತವು.
ಸೂರ್ಯಾಸ್ತಮವು ಜಗತ್ತಿನ ಲಯಕ್ಕೆ ದೃಷ್ಟಾಂತವು.

ಸೃಷ್ಟಿಕಾರ್ಯದಿಂದ ಜಗತ್ತಿನ ಅಭಿವ್ಯಕ್ತಿ. ಅಂತೆಯೇ ಸೂರ್ಯೋದಯದಿಂದ ವೃಕ್ಷಚ್ಛಾಯಾ ಅಭಿವ್ಯಕ್ತಿ. ಲಯಕಾಲದಲ್ಲಿ, ಸಮಸ್ತ ಜಗತ್ತೂ ಶ್ರೀಪರಮಾತ್ಮನ ಉದರದಲ್ಲಿ ಸೇರುವುದು. ಅದರಂತೆ, ಸೂರ್ಯನು ಅಸ್ತಮಿಸಲು, ನೆರಳು ಮೂಲವಾದ ವೃಕ್ಷವನ್ನೇ ಸೇರುವುದು. ॥ ೩೨ ॥

✲ ✲ ✲

## ಪದ್ಯ ೩೩

ಮೂಲ

ತ್ರಿಭುವನೈಕಾರಾಧ್ಯ ಲಕ್ಷ್ಮೀ ।
ಸುಭುಜಯುಗಳಾಲಂಗಿತಾಂಗ ।
ಸ್ವಭು ಸುಖಾತ್ಮ ಸುವರ್ಣವರ್ಣ ಸುಪರ್ಣವರವಹನ ॥
ಅಭಯದಾನಂತಾರ್ಕ ಶಶಿಸ ।
ನ್ನಿಭ ನಿರಂಜನ ನಿತ್ಯದಲಿ ತನ ।
ಗಭಿನಮಿಸುವರಿಗೀವ ಸರ್ವಾರ್ಥಗಳ ತಡೆಯದಲೆ ॥ ೩೩ ॥

**ಅವತರಣಿಕೆ**

ತ್ರಿಲೋಕಗತ ಸಮಸ್ತ ಯೋಗ್ಯಜೀವರಿಂದ ಪೂಜಿತನಾದ, ಶ್ರೀಲಕ್ಷ್ಮೀ ಬಾಹುಲತಾಲಿಂಗಿತನಾದ, ಸರ್ವಸ್ವತಂತ್ರಪ್ರಭುವಾದ, ಅಸದೃಶ ಆನಂದಸ್ವರೂಪ ನಾದ, ಗರುಡವಾಹನನಾದ, ಭಕ್ತರಿಗೆ ಅಭಯಪ್ರದನಾದ, ಅನಂತಕೋಟಿ ಸೂರ್ಯಚಂದ್ರ ಪ್ರಕಾಶನಾದ, ದೋಷದೂರನಾದ ಶ್ರೀಸರ್ವೇಶ್ವರನು ತನ್ನಲ್ಲಿ ಭಕ್ತಿಭಾವದಿಂದ ವಂದನಮಾಡುವ ಶರಣಜನರಿಗೆ ಸಮಸ್ತ ಮನೋಭಿಲಾಷೆಗಳನ್ನು ಶೀಘ್ರದಲ್ಲಿಯೇ ಸಲ್ಲಿಸುವನೆಂದು ತಿಳಿಸುತ್ತಾರೆ **ತ್ರಿಭುವನೈಕಾರಾಧ್ಯ** ಎಂಬ ಪ್ರಸಕ್ತ ಸಂಧಿಗತ ೩೩ನೆಯ ಈ ಪದ್ಯದಿಂದ. ॥ ೩೩ ॥

**ಪ್ರತಿಪದಾರ್ಥ**

**ತ್ರಿಭುವನ** = ತ್ರಿಲೋಕಾತ್ಮಕವಾದ ಈ ಬ್ರಹ್ಮಾಂಡದಲ್ಲಿರುವ ಸಮಸ್ತ ಯೋಗ್ಯಜೀವರುಗಳಿಂದ, **ಏಕ** = ಮುಖ್ಯತ್ವೇನ ಒಬ್ಬನೇ ಆಗಿ, **ಆರಾಧ್ಯ** = ಪೂಜಿತನಾದ, **ಲಕ್ಷ್ಮೀ** = ಶ್ರೀರಮಾದೇವಿಯರ, **ಸುಭುಜಯುಗಳ** = ಪರಮ ಪವಿತ್ರವಾದ ಉಭಯ ಕರಗಳಿಂದ, **ಆಲಂಗಿತಾಂಗ** = ಆಲಿಂಗಿಸಲ್ಪಟ್ಟ ಶರೀರ ವುಳ್ಳ, **ಸ್ವಭು** = ತನಗೆ ತಾನೇ ಪ್ರಭುವಾದ (ಸರ್ವತಂತ್ರಸ್ವತಂತ್ರನಾದ) **ಸುಖಾತ್ಮ** = ಅಸದೃಶ ಆನಂದಸ್ವರೂಪಿಯಾದ, **ಸುವರ್ಣವರ್ಣ** = ಬಂಗಾರದ ಕಾಂತಿಯಂತೆ ಶರೀರವುಳ್ಳ, **ಸುಪರ್ಣವರ** = ಶ್ರೇಷ್ಠವಾದ ರೆಕ್ಕೆಗಳುಳ್ಳ ಗರುಡ ದೇವರನ್ನು, **ವಹನ** = ವಾಹನವನ್ನಾಗಿ ಉಳ್ಳ (ಗರುಡಗಮನನಾದ) **ಅಭಯದ** = ತನ್ನ ಭಕ್ತರಿಗೆ ಅಭಯಪ್ರದನಾದ, **ಅನಂತ** = ಅನಂತಾನಂತ ಸಂಖ್ಯಾಕವಾದ **ಅರ್ಕ** = ಸೂರ್ಯ, **ಶಶಿ** = ಚಂದ್ರರಂತೆ, **ಸನ್ನಿಭ** = ಪ್ರಕಾಶಮಾನನಾದ (ಅನಂ ತಾನಂತಕೋಟಿಸೂರ್ಯಚಂದ್ರ ಪ್ರಕಾಶ ದೇಹವುಳ್ಳವನು) **ನಿರಂಜನ** = ದೋಷ ದೂರನಾದ ಶ್ರೀಪರಮಾತ್ಮನು, **ನಿತ್ಯದಲಿ** = ಎಡಬಿಡದೆ **ತನಗಭಿನಮಿಸುವರಿಗೆ** = ತನಗೆ ನಮಸ್ಕಾರಮಾಡುವ ಭಕ್ತರಿಗೆ, **ಸರ್ವಾರ್ಥಗಳ** = ಅವರವರ ಯೋಗ್ಯ ತೆಗೆ ತಕ್ಕಂತೆ ಸಕಲ ಮನದಿಷ್ಟಾರ್ಥಗಳನ್ನು, **ತಡೆಯದಲೆ** = ಶೀಘ್ರವಾಗಿ (ತಡ ಮಾಡದೆ), **ಈವ** = ಕೊಡುತ್ತಾನೆ. ॥ ೩೩ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಭಕ್ತರ ಇಷ್ಟಾರ್ಥಗಳ ಪೂರ್ತಿಮಾಡತಾನೆಂತ ಹೇಳತಾರೆ.

ಚತುರ್ದಶ ಲೋಕದಲ್ಲಿ ಇರುವ ಸಮಸ್ತ ಪ್ರಾಣಿಗಳಿಂದ ಚಂದಾಗಿ ಪೂಜಿತನಾದವ ಮುಖ್ಯನಾದ ಅಸದೃಶನಾದ ಸರ್ವೋತ್ತಮನಾದ, ಸರ್ವೋತ್ತಮತ್ವೇನ ಪೂಜಾ ತೆಗೆದುಕೊಳ್ಳತಕ್ಕವ ಪರಮಾತ್ಮ ಒಬ್ಬನೇ ಹೊರತು ಅನ್ಯರಲ್ಲ. ಮತ್ತು ಪ್ರಳಯಕಾಲದಲ್ಲಿ ನಿತ್ಯಮುಕ್ತರಾದ ಲಕ್ಷ್ಮೀದೇವಿಯರ ಎರಡಾದಂಥ ಸಮೀಚೀನವಾದ ಭುಜಗಳಿಂದ ಆಲಿಂಗನಮಾಡಿಸಿಕೊಳ್ಳಲ್ಪಟ್ಟ ಶರೀರವುಳ್ಳವ. ತನಗೆ ತಾನೇ ಸ್ವಾಮಿ. ತನ್ನಿಂದ ತಾನೇ ಅವತರಿಸತಕ್ಕವ. ಅಸದೃಶ ಆನಂದರೂಪಿಯಾದವ. ಬಂಗಾರದೋಪಾದಿಯಲ್ಲಿ ಶರೀರಕಾಂತಿ ಉಳ್ಳವ ಶ್ರೇಷ್ಠನಾದ, ಸಮೀಚೀನವಾದ ಪಕ್ಷವುಳ್ಳ ಗರುಡದೇವರ ವಾಹನವಾಗಿ ಉಳ್ಳವ. ತನ್ನ ಭಕ್ತರಿಗೆ ಬರುವ ಭಯ ಪರಿಹಾರ ಮಾಡಿ, ಅಭಯರೂಪವಾದ ಸುಖವನ್ನು ಕೊಡತಕ್ಕವ. ಅನಂತ ಸೂರ್ಯರೇನು, ಅನಂತಚಂದ್ರರೇನು ಇವರುಗಳೋಪಾದಿಯಲ್ಲಿ ಕಾಂತಿಯುಕ್ತನಾದವ ಎಂದರೆ, ಬಂಗಾರವರ್ಣದೋಪಾದಿಯಲ್ಲಿ ಕೆಲವರಿಗೆ, ತಾರತಮ್ಯಾನುಸಾರ ಅನಂತ ಸೂರ್ಯಕಾಂತಿಯುಕ್ತನಾಗಿ ಕೆಲವರಿಗೆ, ಇನ್ನು ಕೆಲವರಿಗೆ ಚಂದ್ರಕಾಂತಿಯುಕ್ತನಾಗಿ ತೋರತಾನೆ. ಸುವರ್ಣ, ಸೂರ್ಯ-ಚಂದ್ರಾದಿ ಸಮಸ್ತಕಾಂತಿಗಳು ಮೇಳನವಾದ ಕಾಂತಿಯುಕ್ತನಾದವ ಮತ್ತು ದೇಹಕಾಂತಿ ಸೂರ್ಯನೋಪಾದಿಯಲ್ಲಿ, ಮುಖಕಾಂತಿ ಚಂದ್ರನೋಪಾದಿಯಲ್ಲಿ ಉಳ್ಳವ. ದೋಷದೂರನಾದ ಇಂಥೀ ಪರಮಾತ್ಮನೆಂದು ಸ್ತುತಿಸುವವರಿಗೆ ಪ್ರತಿದಿನದಲ್ಲೂ ತನಗೆ ವಂದನಾ ಮಾಡತಕ್ಕವರಿಗೆ ಆಲಸ್ಯಮಾಡದೆ ಅವರವರ ಯೋಗ್ಯತಾಕ್ಕೆ ಮಿಂಚದಂತೆ ಸರ್ವ ಪ್ರಯೋಜನಗಳ ಕೊಡೋವನಾಗತಾನೆ. ॥ ೩೩ ॥

## ೨. ಭಾವಪ್ರಕಾಶಿಕೆ

ತಾತ್ಪರ್ಯ–ಸ್ಪಷ್ಟವಾಗಿರುವುದು. ॥ ೩೩ ॥

### ೩ ಭಾವದರ್ಪಣ

ತ್ರಿಭುವನೇತಿ । ಮುಖ್ಯವಾಗಿ ಮೂರು ಲೋಕದಿಂದ ಪೂಜ್ಯ. ಲಕ್ಷ್ಮೀ ಬಾಹುಲತಾದಿಂದ ಆಲಿಂಗಿತ. ಸ್ವಭೂ ತನ್ನಿಂದತಾನೇ ಅವತರಿಸತಕ್ಕವ. ಸುಖಾತ್ಮ ಆನಂದಶರೀರ. ಸುವರ್ಣವರ್ಣ ಭಂಗಾರವರ್ಣ. ಗರುಡವಾಹನ. ಅಭಯದ ಅಭಯಪ್ರದನಾದವ. ಅನಂತಸೂರ್ಯಸೋಮಪ್ರಕಾಶ. ನಿರಂಜನ ದೋಷ ರಹಿತ ॥ ೩೩ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ತ್ರಿಭುವನ ಇತಿ ॥ ತ್ರಿಭುವನೈಕಾರಾಧ್ಯ ಉತ್ತಮತ್ವೇನ ಆರಾಧ್ಯಃ ॥ ಸ್ವಭೂಃ–ಸ್ವತಃ ಏವ ಅಪರಾಧೀನ ಸತ್ತಾವಾನ್ ॥ ಓಂ ॥ ರಂಭಂ ನ ಜಿವ್ರಯೋ (ಜೀರಯೋ) ರರಂಭಾ (ಶ್ಮಾ) ಶವಸಸ್ಪತೇ ಉಶ್ಮಸಿತ್ವಾ ಸಧಸ್ಥ ಆ ಸ್ತೋತ್ರಮಿಂದ್ರಾಯ ಗಾಯತ ಪುನರುಮ್ಣಾಯ ಸತ್ವನೇ ॥ ಓಂ ॥ ಭವತಿ ಇತಿ ಭೂಃ–ಸತ್ತಾವಾನ್ ॥ ನಿರಂಜನಃ–ನಿಷ್ಪಾಪಃ ॥ ೩೩ ॥

### ಕನ್ನಡಾರ್ಥ

ತ್ರಿಭುವನೈಕಾರಾಧ್ಯವೆಂದರೆ ಮೂರುಲೋಕಗಳಿಂದ ಸರ್ವೋಚ್ಚತಮನೆಂದು ಮುಖ್ಯವಾಗಿ ಆರಾಧಿಸಲ್ಪಡುವವನು ಎಂದು ಅರ್ಥ. ಸ್ವಭೂಃ–ಸ್ವತಃ ತನ್ನ ಸಹಜ ಸ್ವಭಾವ ಮಹಿಮೆಯಿಂದಲೇ–ಪರರ ಅಧೀನವಾಗದಂತಹ ಸ್ವತಂತ್ರವಾದ ಸತ್ತಾ ಇರುವದು, ತಿಳಿದುಕೊಳ್ಳುವುದು, ಪ್ರವರ್ತಿಸುವದು–(ಸ್ಥಿತಿ-ಪ್ರಮಿತಿ, ಪ್ರವೃತ್ತಿ) ಇವುಗಳಿಂದ ಯುಕ್ತನಾದುದು. ಅಂದರೆ, ತನ್ನ ಸತ್ತಾ ಇರುವಿಕೆ, ಜ್ಞಾನಪ್ರವೃತ್ತಿಗಳಲ್ಲಿ ಯಾರಿಗೂ ಅಧೀನವಾಗದೇ ಇರುವದು ಎಂದು ಅರ್ಥ. ಭೂಃ ಎಂಬ ವಿಷ್ಣುಸಹಸ್ರನಾಮಾಂತರ್ಗತ ನಾಮದ ಬೃಹತೀ ಮಂತ್ರದಲ್ಲಿ ಈ ಅರ್ಥವನ್ನು ನಿರೂಪಿಸಲಾಗಿರುತ್ತದೆ.

ನಿರಂಜನ-ಪಾಪವಿಲ್ಲದವನು ॥ ೩೩ ॥

ಈ ಅರ್ಥವನ್ನೇ ವಿಶೇಷಣಗಳಿಂದ ವಿವರಿಸಿ ತಿಳಿಸುತ್ತಾರೆ, ತ್ರಿಭುವನವೆಂದು. ಜನ್ಮಾದಿ ಸರ್ವದೋಷರಹಿತನಾದ, ಅಪ್ರಾಕೃತಾನಂದಸ್ವರೂಪನಾದ, ಸ್ವಭು ಎಂದರೆ, ತನ್ನಿಂದ ತಾನೇ ನಿತ್ಯವ್ಯಕ್ತನಾಗಿರುವ, ಸುವರ್ಣದ ಕಾಂತಿಯಂತೆ ಕೆಲವು ಭಕ್ತರ ಹೃದಯದಲ್ಲಿ ಅಪ್ರಾಕೃತ ಕಾಂತಿಯಿಂದ ಕಾಣಿಸುತ್ತಿರುವ, ಕೆಲವರಿಗೆ ಅನಂತಸೂರ್ಯರಂತೆಯೂ ಅನಂತಚಂದ್ರರಂತೆಯೂ ಸ್ವಪ್ರಕಾಶದಿಂದ ಕಾಣಿಸುವ, ಗರುಡವಾಹನನಾದ ಶ್ರೀಹರಿ, ಪ್ರಳಯಕಾಲದಲ್ಲಿ ಜಗದ್ವ್ಯಾಪಾರ ಉಪರಮ ಮಾಡುವುದರಿಂದ, ಲಕ್ಷ್ಮೀಸುಭುಜಯುಗಳಗಳಿಂದಾಲಿಂಗಿತನಾಗಿ. ಸ್ವಾನಂದದಿಂದ ಇರುವನು. ಸೃಷ್ಟ್ಯಾದಿಕಾಲದಲ್ಲಿ ತ್ರಿಭುವನಜೀವರಿಂದಲೂ ಮುಖ್ಯವಾಗಿ ಸೇವಿಸಿಕೊಳ್ಳುವನು. ಅಭಯವೆಂಬ ಮೋಕ್ಷಪ್ರದನು. ಅಯೋಗ್ಯರಿಗೆ ಅಕಾರ್ಯ ಧೈರ್ಯಾದಿ ಪ್ರದನು. ನಿತ್ಯದಲ್ಲಿ ತನಗೆ ಅಭಿನಮಿಸುವವರಿಗೆ ಎಂದರೆ, ನಮ್ರರಾಗಿ ಭಕ್ತಿಭಾವನೆಯಿಂದಿರುವವರಿಗೆ ಸಕಲ ಇಷ್ಟಾರ್ಥಗಳನ್ನೂ ಕೊಡುವನು. ಇದರಿಂದ,

**ಯಥೈಷಾ ಪುರುಷೇಛಾಯ ಏತಸ್ಮಿನ್ನೇತದಾ ತತಂ** ಎಂಬ ಶ್ರುತಿ,

**ಆದಿತ್ಯವರ್ಣಂ ತಮಸಃ ಪರಸ್ತಾತ್** ಇತ್ಯಾದರ್ಥಗಳು ವಿವರಿಸಲ್ಪಟ್ಟವು. ॥ ೩೩ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸತ್ಯಭೂತವಾದ ಈ ಜಗತ್ತು ಹದಿನಾಲ್ಕು ಲೋಕಗಳಿಂದ ಯುಕ್ತವಾಗಿದೆ. ಈ ಲೋಕಗಳು ಸ್ವರ್ಗಲೋಕ–ಭೂಲೋಕ–ಪಾತಾಳಲೋಕ ಎಂಬ ಮೂರು ಲೋಕಗಳೆಂದು ಮುಖ್ಯತಃ ಪ್ರಖ್ಯಾತವಾಗಿವೆ. ಇವುಗಳಿಗೆ ತ್ರಿಭುವನ ಎನ್ನುವರು.

ಇಂತಹ ತ್ರಿಭುವನಗಳಲ್ಲಿ ವಿದ್ಯಮಾನರಾದ ಸಕಲ ಸಜ್ಜನರಾದ ಜೀವರುಗಳಿಂದ ಶ್ರೀಪರಮಾತ್ಮನು ಆರಾಧಿತನಾಗಿದ್ದಾನೆ. ಅಂತಹ ತ್ರಿಭುವನಾರಾಧ್ಯನಾದ ತ್ರಿಲೋಕೇಶನು ಸರ್ವೋತ್ತಮನು. ಸಮಾಭ್ಯಧಿಕಶೂನ್ಯನು. ಏಕಮೇವಾದ್ವಿತೀಯನು. ಇದರಿಂದ ಏಕಶಬ್ದವಾಚ್ಯನಾಗಿದ್ದಾನೆ.

ತ್ರಿಭುವನೈಕರಾಧ್ಯನಾದ ಶ್ರೀಶನು ಶ್ರೀಲಕ್ಷ್ಮಿಗೆ ನಿತ್ಯ ಆಶ್ರಯದಾತನು. ಮಹಾಪ್ರಳಯಕಾಲದಲ್ಲಿ ರಮಾದೇವಿಯರ ಎರಡು ಬಾಹುಗಳಿಂದಲೂ ಆಲಿಂಗಿ

## ೫. ಶ್ರೀಗುರುಹೃದಯಪ್ರಕಾಶಿಕೆ

ತನು. ಲಕ್ಷ್ಮೀ ಬಾಹುಯುಗಳಾಲಂಗಿತನಾದ ಆ ಮಂಗಳಾಂಗನು ಶ್ರೀಲಕ್ಷ್ಮೀ ದೇವಿಯ ದ್ವಾರವೇ ಸಕಲವಿಧವಾದ ಪೂಜಾರೂಪವಾದ ಸೇವೆಗಳನ್ನು ಸ್ವೀಕರಿಸುವನು.

ಲಕ್ಷ್ಮೀವಿಲಾಸಾಸ್ಪದನಾದ ಲಕುಮೀಪತಿಯು ಸರ್ವತಂತ್ರಸ್ವತಂತ್ರನು. ಸ್ವತಃ ತನ್ನ ಸಹಜವಾದ ಮಹಿಮೆಯಿಂದಲೇ ಅಭಿವ್ಯಕ್ತನಾಗುವವನು. ಪರಾಪೇಕ್ಷಾ ರಹಿತನು. ಇದರಿಂದ ಸ್ವಭು ನಾಮಕನು. ಭೂಃ ಎಂಬ ಶ್ರೀವಿಷ್ಣುಸಹಸ್ರ ನಾಮಾಂತರ್ಗತ ನಾಮವು ಇದರ ಪರಿಷ್ಕಾರವನ್ನು ವಿವರಿಸುವುದು.

ಸ್ವಭುವಾದ ಶ್ರೀಹರಿಯು ಆನಂದಾದಿ ನಿರತಿಶಯವಾದ ಗುಣಸ್ವರೂಪನು. ಅವನ ಆನಂದ ಅಪರಿಮಿತ, ಅಪರಿಚ್ಛಿನ್ನ. ಇದರಿಂದ ಸುಖಸ್ವರೂಪನಾದ ಶ್ರೀಪರಮಾತ್ಮನು ಸುಖಾತ್ಮಕನು.

ಸುಖಾತ್ಮನಾದ ಆ ಸ್ವರಮಣನಿಗೆ ಗರುಡದೇವರೇ ವಾಹನವು. ಗರುಡನ ಎರಡು ರೆಕ್ಕೆಗಳೂ ಬಂಗಾರದ ಕಾಂತಿಯಂತೆ ಪ್ರಕಾಶಮಾನವಾಗಿವೆ (ಸುವರ್ಣ ವರ್ಣ) ಅಂತಹ ಸುವರ್ಣವರ್ಣಕಾಂತಿವಿಶಿಷ್ಟವಾದ ಉಭಯ ಪಕ್ಷಗಳಿರುವ ಗರುಡನು ಸುಪರ್ಣವರನು (ಪಕ್ಷಿಶ್ರೇಷ್ಠನು). ಗರುಡಗಮನನಾದ ಶ್ರೀಹರಿಯು ಸುಪರ್ಣವರವಹನು.

ತನ್ನ ಭಕ್ತರನ್ನು ವಿಪತ್ತಿನಿಂದ ಸಂರಕ್ಷಿಸುವ ಆ ವಿಪವಾಹನನು ಭಕ್ತರಿಗೆ ಅಭಯಪ್ರದನು (ಅಭಯದ). ಮೋಕ್ಷಾನಂದದಾಯಕನಾದ್ದರಿಂದ, ಅಭಯದ ನೆಂದು ಇನ್ನೊಂದರ್ಥ.

ಅನಂತಕೋಟಿ ಸೂರ್ಯ ಅಥವಾ ಚಂದ್ರರು ಉದಯಿಸಿದರೆ, ಎಷ್ಟು ಪ್ರಕಾಶವುಂಟಾಗುವುದೋ, ಅದಕ್ಕಿಂತ ಅತಿಶಯವಾದ ದೇಹಕಾಂತಿ ಉಳ್ಳವನು. ಸೂರ್ಯನ ಪ್ರಕಾಶ ಪ್ರಖರವಾದದ್ದು. ಚಂದ್ರನ ಕಾಂತಿ ಶೀತಲವಾದದ್ದು ಮತ್ತು ಆಹ್ಲಾದದಾಯಕ. ಅಂತೆಯೇ ಶ್ರೀಪರಮಾತ್ಮನ ಶರೀರಕಾಂತಿಯು ಅನಂತಾನಂತಕೋಟಿಸೂರ್ಯ ಪ್ರಕಾಶದಂತಿರುವುದು. ಇದು ಕೇವಲ ದೃಷ್ಟಾಂತವೇ ಹೊರತು, ಸಾಕಲ್ಯೇನ ವಿವರಣೆಯಲ್ಲ. ಅಂತೆಯೇ ಶ್ರೀಶನ ವದನಾರ

ವಿಂದವು ಅನಂತಕೋಟಿ ಚಂದ್ರಪ್ರಕಾಶದಂತೆ ಮಂದಹಾಸಯುಕ್ತವಾಗಿ, ಭಕ್ತ ಜನರ ಹೃತ್ತಾಪವನ್ನು ಕಳೆಯುವ ಚಂದ್ರಿಕೆಯಂತಿದೆ. ಸೂರ್ಯಪ್ರಕಾಶವನ್ನು ಅಜ್ಞಾನವೆಂಬ ತಮಸ್ಸಿನ ಪರಿಹಾರಕ್ಕೂ, ಚಂದ್ರಕಾಂತಿಯನ್ನು ಭಕ್ತರ ಹೃತ್ತಾಪ ರೂಪವಾದ ಕ್ಲೇಶಾದಿಗಳ ಪರಿಹಾರಕ್ಕೂ ಹೋಲಿಸಿದೆ. (ಅನಂತ ಅರ್ಕಶಶಿ ಸನ್ನಿಭ)

ಅನಂತಾರ್ಕಶಶಿಸನ್ನಿಭನಾದ ಅಪ್ರಮೇಯನು ಸಮಸ್ತ ದೋಷವಿದೂರನು. ಇದರಿಂದ ನಿರಂಜನನಾಮಕನು. ಸದಾನಂದನಾದ್ದರಿಂದ ನಿರಂಜನನು.

ಇಂತಹ ನಿರಂಜನನಾದ ನಿರುಪಮಾನಂದಾತ್ಮನು ಪ್ರತಿನಿತ್ಯವೂ ತನ್ನನ್ನು ನಂಬಿ, ಭಕ್ತಿಭಾವದಿಂದ ಸಾಷ್ಟಾಂಗಪೂರ್ವಕ ನಮಸ್ಕರಿಸುವ (ನಿತ್ಯದಲಿ ತನಗಭಿ ನಮಿಸುವ) ಭಕ್ತಜನರ ಸಕಲ ಮನೋಭಿಲಾಷೆಗಳನ್ನು ಅವರವರ ಯೋಗ್ಯತಾನು ಸಾರ ಸಲ್ಲಿಸಿ, ಶೀಘ್ರವಾಗಿ ಇಷ್ಟಾರ್ಥಪ್ರದನಾಗಿದ್ದಾನೆ. ಭಕ್ತರಿಗೆ ಕ್ಷಿಪ್ರ ಫಲ ಪ್ರದನು. ॥ ೩೩ ॥

❋ ❋ ❋ ❋

## ಪದ್ಯ ೩೪

**ಮೂಲ**

**ಕವಿಗಳಿಂದಲಿ ತಿಳಿದು ಪ್ರಾತಃ ।**
**ಸವನ ಮಾಧ್ಯಂದಿನವು ಸಾಯಮ ।**
**ಸವನಗಳು ವಸುರುದ್ರರಾದಿತ್ಯರೊಳು ರಾಜಿಸುವ ॥**
**ಪವನನೊಳು ಕೃತಿ ಜಯ ಸುಮಾಯಾ ।**
**ಧವನ ಮೂರ್ತಿತ್ರಯವ ಚಿಂತಿಸಿ ।**
**ದಿವಸವೆಂಬಾಹುತಿಗಳಿಂದರ್ಚಿಸುತ ಸುಖಿಸುತಿರು ॥ ೩೪ ॥**

**ಅವತರಣಿಕೆ :-**

ಕಾಲತ್ರಯಾಭಿಮಾನಿ ದೇವತೆಗಳಲ್ಲಿ, ವಾಯುದೇವರ ಗೋಳಕದಲ್ಲಿ ಅಂತರ್ಯಾಮಿಯಾಗಿರುವ ಭಗವನ್ಮೂರ್ತಿಗಳನ್ನು ಚಿಂತಿಸುತ್ತಾ, ನಿನ್ನ ಆಯುರ್ಮಾನವನ್ನು ಕಳೆಯುತ್ತಾ, ಸಂತೋಷದಿಂದಿರು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಪ್ರಾತಃ ಸವನ** = ಪ್ರಾತಃಕಾಲವೆಂಬ ಕಾಲವಿಶೇಷ, **ಮಾಧ್ಯಂದಿನವು** = ಮಧ್ಯಾಹ್ನಕಾಲವೆಂಬ ಕಾಲವಿಶೇಷ, **ಸಾಯಂ ಸವನಗಳು** = ಸಾಯಂಕಾಲವೆಂಬ ಕಾಲವಿಶೇಷ ಇಂತಹ ಸವನಗಳೆಂಬ ಕಾಲತ್ರಯಗಳಲ್ಲಿ, **ವಸು** = ಪ್ರಾತಃ ಸವನಕ್ಕೆ ಅಭಿಮಾನಿದೇವತೆಗಳಾದ ಅಷ್ಟವಸುಗಣ, **ರುದ್ರರು** = ಮಾಧ್ಯಂಸವನಕ್ಕೆ ಅಭಿಮಾನಿಗಳಾದ ಏಕಾದಶ ರುದ್ರಗಣ, **ಆದಿತ್ಯರೊಳು** = ಸಾಯಂಸವನಾಭಿಮಾನಿಗಳಾದ ದ್ವಾದಶಾದಿತ್ಯವರ್ಗ ಇವರಲ್ಲಿ, **ರಾಜಿಸುವ** = ಚೇಷ್ಟಾಪ್ರವರ್ತಕರಾಗಿ ವಿರಾಜಮಾನರಾಗಿರುವ, **ಪವನನೊಳು** = ಜೀವೋತ್ತಮರಾದ ಶ್ರೀವಾಯುದೇವರಲ್ಲಿ, **ಕೃತಿ** = ಕೃತಿನಾಮಕ ಲಕ್ಷ್ಮೀದೇವಿಯರ ಪತಿ ಪ್ರದ್ಯುಮ್ನ, **ಜಯ** = ಜಯಾಪತಿ ಸಂಕರ್ಷಣ, **ಸುಮಾಯಾ** = ಶ್ರೇಷ್ಠಳಾದ (ಪರನಾಮಕಳು) ಮಾಯಾದೇವಿಯ ರಮಣ ವಾಸುದೇವ, **ಮೂರ್ತಿತ್ರಯವ** = ಶ್ರೀಪರಮಾತ್ಮನ ಮೂರು ರೂಪಗಳನ್ನು, **ಚಿಂತಿಸಿ** = ಮನಸಾ ಧ್ಯಾನಿಸುತ್ತ, **ಕವಿಗಳಿಂ ತಿಳಿದು** = ಜ್ಞಾನಿಗಳಿಂದ ಅರಿತು, **ದಿವಸವೆಂಬ** = ಸವನತ್ರಯಾತ್ಮಕವಾದ ದಿವಸ ಎಂಬ, **ಆಹುತಿಗಳಿಂದ** = ಆಹುತಿಗಳೆಂದು ತಿಳಿದು, **ಅರ್ಚಿಸುತ** = ಆಯುರ್ಹೋಮರೂಪವಾದ ಪೂಜೆಯಿಂದ, **ಸುಖಿಸುತಿರು** = ಸಂತೋಷದಿಂದಿರು.

॥ ೩೪ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಛಾಂದೋಗ್ಯೋಪನಿಷದ್ಭಾಷ್ಯೋಕ್ತ ಸವನತ್ರಯ ವಿಚಾರ ಹೇಳತಾರೆ.

ಕಾಲವಿಶೇಷವು, ಆ ಕಾಲ ಎಂಬುದು ಆಯುಷ್ಕಾಲವು. ಮಾತೃಗರ್ಭ

ದಿಂದ ಭೂಪತನಕಾಲ ದಾವದದೇ ಇದು ಪ್ರಾತಃ ಶಬ್ದದಿಂದ ಪ್ರಥಮಸವನ ಪ್ರಥಮಭಾಗದ ಆಯುಷ್ಯಕಾಲ. ಒಂದುದಿನಕ್ಕೆ ಎರಡನೇ ಕಾಲವಾದ ಮಧ್ಯಾಹ್ನ ಹ್ಯಾಂಗೋ ಹಾಂಗೆ ಆಯುಸ್ಸಿಗೆ ಮಧ್ಯಕಾಲ ದಾವದದೇ ಇದೇ ಎರಡನೇದಾದ ಮಧ್ಯಕಾಲ ಆಯುಷ್ಕಾಲ. ಒಂದು ದಿನಕ್ಕೆ ಅಂತ್ಯಭಾಗವಾದ ಸಾಯಂಕಾಲ ಸದೃಶವಾದ ಆಯುಸ್ಸಿಗೆ ಅಂತ್ಯಭಾಗದ ಕಾಲ. ಅಂತು ಒಂದು ದಿನಕ್ಕೆ ಕಾಲತ್ರಯಗಳು ಇದ್ದಂತೆ, ಆಯುಷ್ಕಾಲಕ್ಕೆ ಕಾಲತ್ರಯಗಳು ತಿಳೀಬೇಕು. ಸೂರ್ಯೋದಯಾರಭ್ಯ ಅಸ್ತಮಾನದವರಿಗೂ ಕಾಲತ್ರಯಗಳು ಹ್ಯಾಂಗೋ, ಹಾಂಗೆ ಒಬ್ಬ ಜೀವಗೆ ಜನನಾರಭ್ಯ ಮರಣಾಂತವರಿಗೂ ಕಾಲತ್ರಯ ಎಂತ ಸಾಂಕೇತವು. ಸವನ ಸಾಂಕೇತ ಆಯುಸ್ಸಿಗೆ ಆಗತಕ್ಕ ಕಾಲತ್ರಯಗಳಲ್ಲಿ ಅನುಸಂಧಾನ ಮಾಡತಕ್ಕ ಕ್ರಮವನ್ನು ಭಗವದ್ಭಕ್ತರಾದ ಜ್ಞಾನಿಗಳಿಂದ ತಿಳಿದು, ಸವನತ್ರಯಗಳಿಗೆ ಅಭಿಮಾನಿಗಳಾದ, ಪ್ರಾತಃಸವನಕ್ಕೆ ಅಷ್ಟವಸುಗಳು ಅಭಿಮಾನಿದೇವತೆಗಳು. ಮಧ್ಯಾಹ್ನ ಸವನಕ್ಕೆ ಏಕಾದಶರುದ್ರರು ಅಭಿಮಾನಿದೇವತೆಗಳು. ಸಾಯಮಸವನಕ್ಕೆ ದ್ವಾದಶಾದಿತ್ಯರು. ಈ ಪ್ರಕಾರ ನೂರು ವರ್ಷದ ಆಯುಃ ಕಾಲಕ್ಕೂ ಆದಕ್ಕೆ ಸಂಬಂಧಿಸಿದ ಪ್ರತಿದಿನಕ್ಕೂ ತಿಳಿಯೋವನಾಗಬೇಕು. ಹತ್ತು ಹತ್ತು ಘಳಿಗೆಗೆ ಒಂದೊಂದು ಸವನವೆಂದು ತಾತ್ಪರ್ಯ. ಸವನತ್ರಯಾಭಿಮಾನಿಗಳಾದ ವಸುರುದ್ರಾದಿತ್ಯರೊಳಗೆ, ಜೀವೋತ್ತಮರಾದ ವಾಯುದೇವರು ಪ್ರಕಾಶಮಾನರಾಗಿ ಇದ್ದಾರೆ. ಈ ಭಾರತೀರಮಣಮುಖ್ಯಪ್ರಾಣದೇವರೊಳು, ಪ್ರಾತಃಸವನಕ್ಕೆ ಕೃತಿನಾಮಕ ಲಕ್ಷ್ಮೀದೇವೇರ ಪತಿ ಪ್ರದ್ಯುಮ್ನ, ಮಧ್ಯಾಹ್ನ ಸವನಕ್ಕೆ ಜಯನಾಮಕ ಲಕ್ಷ್ಮೀದೇವಿಯರ ಪತಿ ಸಂಕರ್ಷಣ, ಸಾಯಮಸವನಕ್ಕೆ ಮಾಯಾನಾಮಕ ಲಕ್ಷ್ಮೀದೇವಿಯರ ಪತಿ ವಾಸುದೇವ, ನಿರ್ದೋಷಗಳಾದ ರಮಾರೂಪಗಳಿಗೆ ಪತಿಯಾದ ಪ್ರದ್ಯುಮ್ನಾದಿ ಭಗವದ್ರೂಪಗಳು. ಈ ಪ್ರಕಾರ, ರಮಾರೂಪಗಳು ಮೂರು, ಪರಮಾತ್ಮನ ರೂಪಗಳು ಮೂರು ಮನಸಾ ಆಯಾ ಅಧಿಷ್ಠಾನಗಳಲ್ಲಿ ಚಿಂತಿಸಿ, ದಿವಸಗಳು ಎನ್ನತಕ್ಕವೇ ಆಹುತಿದ್ರವ್ಯಗಳ ಮಾಡಿ ಹೋಮ ರೂಪದಿಂದಲೂ, ಈ ದಿವಸಗತ ಕ್ಷಣಲವಾದಿಕಾಲಗಳನ್ನು ಪೂಜಾದ್ರವ್ಯತ್ವೇನ ಅನುಸಂಧಾನಮಾಡಿನ್ನು ಇವುಗಳೆಂಬ ಆಹುತಿಗಳಿಂದ ಪೂರ್ವೋಕ್ತ ಪ್ರದ್ಯುಮ್ನ, ಸಂಕರ್ಷಣ ವಾಸುದೇವರೂಪಗಳಿಗೆ ಅರ್ಚನೆ ಮಾಡುತ, ಈ ಪ್ರಕಾರ ಆಯುಸ್ಸು

ಸಾರ್ಥಕ್ಯ ಮಾಡಿಕೊಂಡು ಭಗವದುಪಾಸನಾ ಮಾಡುತ್ತಾ ಸುಖಪಡುತ್ತಾ ಇರೋವನಾಗು ಎಂತ ತಾತ್ಪರ್ಯ. ಮೇಲೆ ಹೇಳಿದ ಅರ್ಚನಿ ಪ್ರಕಾರ ಖಂಡಕಾಲ ಗತ ಪರಮಾತ್ಮನ ರೂಪಗಳ ಅಖಂಡಕಾಲಗತ ಪರಮಾತ್ಮನಲ್ಲಿ ಐಕ್ಯಚಿಂತನಾ ರೂಪದಿಂದ ಅರ್ಚನಿ ಹೋಮ ಮಾಡುತ್ತಾ ಮತ್ತು ಕಾಲಾಂತರ್ಗತ ಪರಮಾತ್ಮಗೂ, ಸೂರ್ಯಾಂತರ್ಗತ ಪರಮಾತ್ಮಗೂ ಐಕ್ಯ ಚಿಂತಿಸುತ್ತಾ, ದೇಹಾಂತರ್ಗತ ಬಿಂಬಗೂ, ಕಾಲಾಂತರ್ಗತ ಬಿಂಬಗೂ ಐಕ್ಯ ಚಿಂತಿಸುತ್ತಾ ಇದೇ ಪ್ರಕಾರ ರಾತ್ರಿ ಕಾಲ ಅನುಸಂಧಾನ ಚಂದ್ರಾಂತರ್ಗತನಲ್ಲೂ ಅರ್ಚನಿ ಮಾಡುತ್ತಾ, ರಾತ್ರಿಗೆ ಸ್ತ್ರೀದೇವತೆಗಳ ತಿಳಿಯಬೇಕು. ॥ ೩೪ ॥

೨. ಭಾವಪ್ರಕಾಶಿಕೆ

ಯಾಗಗಳಲ್ಲಿ ಮೂರುಕಾಲಗಳಲ್ಲಿ ಆಹುತಿ ಕೊಡುವುದಕ್ಕೆ ತ್ರಿಸವನವೆಂದು ಸಂಕೇತ. ಈ ಪ್ರಾತಃಸವನ, ಮಧ್ಯಾಹ್ನಸವನ, ಸಾಯಂಸವನವೆಂಬ ಮೂರು ಸವನಗಳಿಗೂ ಅಭಿಮಾನಿಗಳು ವಸುಗಣ, ರುದ್ರಗಣ, ಆದಿತ್ಯಗಣರು. ಈ ಮೂರುಗಣಗಳಲ್ಲಿಯೂ ಭಾರತೀರಮಣ ಮುಖ್ಯಪ್ರಾಣದೇವರಿರುವರು. ಅವರೊಳಗೆ ಕೃತಿರಮಣಪ್ರದ್ಯುಮ್ನ, ಜಯಾರಮಣ ಸಂಕರ್ಷಣ, ಮಾಯಾರಮಣ ವಾಸುದೇವ ಎಂಬ ಮೂರುರೂಪಗಳಿಂದ ಪರಮಾತ್ಮನು ವಾಸಮಾಡುವನೆಂದು ತಿಳಿದು, ಆ ಪರಮಾತ್ಮನಿಗೆ ನಮ್ಮ ಆಯುಷ್ಯದ ದಿನಗಳನ್ನೇ ಹವಿಸ್ಸೆಂದು ಭಾವಿಸಿ ಪೂಜಿಸಿದರೆ ಯಾಗಮಾಡಿದ ಉತ್ತಮ ಫಲವೇ ಬರುವುದೆಂದು ತಾತ್ಪರ್ಯ.

೩. ಭಾವದರ್ಪಣ

ಕವೀತಿ । ಕವಿ ಜ್ಞಾನಿ ಎಂಬರ್ಥ. ಸವನ ತ್ರಿಸಂಧ್ಯಾವಂದನ. ಕೃತಿಜಯಾಸು-ಮಾಯಾಧವ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಈ ಮೂರ್ತಿತ್ರಯ ಚಿಂತನಮಾಡಿ ದಿವಸೆಂಬ ಆಹುತಿ ಕೊಡು ಎಂಬ ಭಾವ.

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಕವಿ ಇತಿ ॥ ಮಹಾ ಮತಿತ್ವಾತ್ ಉಪನಿಷದರ್ಥಜ್ಞಾಃ ॥ ಶ್ರೀ ಮಧ್ವ ವಿಜಯೇ ಚ ಘಟನೋಪನಿಷತ್ಸು ನಾಲ್ಪ ಬುದ್ಧೇಃ ಸುಘಟ ಇತಿ ॥ ಕೃತಿ ಇತಿ॥

ಪ್ರದ್ಯುಮ್ನ ಸಂಕರ್ಷಣ ವಾಸುದೇವಾಃ ।। ಚತುರ್ದಶೋಪಾಸನಾಯಾಂ ಚ–ಅಥ ಸರ್ವ ಮುಮುಕ್ಷು ಯೋಗ್ಯಂ ಅಪರೋಕ್ಷಾಂತರಂಗಸಾಧನಂ ಇದಮುಪಾಸನಂ ಗೌಪ್ಯತಮಂ ಶೃಣುತ ಯೋಗ್ಯಾಃ–ನಿರಂತರಂ ಪರಮಾದರೇಣೈವ ಅನುಸಂದಧೀತ ।। ಅಹಮೇವ ವಿಷ್ಣುಪೂಜಾತ್ಮಕ ಯಜ್ಞರೂಪಃ ॥ ಯಜ್ಞಾರಂಭಾತ್ ಪೂರ್ವಂ ನಾರಾಯಣೋ ದೇವತಾ ।। ಪ್ರಸಿದ್ಧ ಯಜ್ಞೇ ಸವನತ್ರಯಂ ಅಸ್ತಿ ।। ಅತ್ರಾಪಿ ತದಸ್ತಿ।। ಕಥಮ್? ಪುರುಷಸ್ಯ ಶತಮಾಯುಃ ।। ತಸ್ಯ ಕಿಂಚಿತ್ ಪಲಾಧಿಕ ವಿಂಶತಿ ಘಟಿಕಾಧಿಕ ದಶದಿನಾಧಿಕ ದಶಮಾಸಾತ್ಮಕ ವರ್ಷವಿವಕ್ಷಯಾ ಷೋಡಷೋತ್ತರ ಶತವರ್ಷಾಣಿ ಭವಂತಿ ।। ತತ್ರ ಭಾಗತ್ರಯಮ್ ।। ಪೂರ್ವ ಚತುರ್ವಿಂಶತಿ ವರ್ಷಾತ್ಮಕಃ ಏಕಃ ಕಾಲಃ ।। ತದುತ್ತರಃ ಚತುಶ್ಚತ್ವಾರಿಂಶದ್ವರ್ಷಾತ್ಮಕಃ ಅಪರಃ ।। ತದುತ್ತರಃ ಅಷ್ಟಚತ್ವಾರಿಂಶದ್ವರ್ಷಾತ್ಮಕಃ ಅನ್ಯಃ ॥ ಪ್ರಸಿದ್ಧ ಯಜ್ಞಃ ಪ್ರಾತಃಸವನಂ ಮಾಧ್ಯಂದಿನಸವನಂ ಸಾಯಂಸವನಂ ಇತಿ ಸವನತ್ರಯಾತ್ಮಕಃ ।। ತತ್ರ ಪ್ರಾತಃಸವನಂ ಚತುರ್ವಿಂಶತ್ಯಕ್ಷರಾತ್ಮಕ ಗಾಯತ್ರೀಛಂದಸ್ಕ ಮಂತ್ರೋಪೇತಮ್ ।। ಅಯಮಪಿ ಚತುರ್ವಿಂಶತಿ ವರ್ಷಾತ್ಮಕ ಕಾಲೋಪೇತಃ ಪ್ರಾತಃ ಸವನಮ್ ।। ಪ್ರಾತಃಸವನಸ್ಯ ವಸವಃ ದೇವತಾಃ ।। ಮಾಧ್ಯಂದಿನಸವನಸ್ಯ ರುದ್ರಾಃ ।। (ಸಾಯಂ ಸವನಸ್ಯ) ತೃತೀಯಸ್ಯ ಆದಿತ್ಯಾಃ ।। ಅತ್ರ ತು ತತ್ತ್ವೇಶಾಃ ಏವ ಸುಖೇನ ಯೋಗ್ಯಂ ಪ್ರಾಣಿಜಾತಂ ವಾಸಯಂತಿ ಇತಿ ವಸುನಾಮಾನಃ ಪ್ರಾತಃಸವನಸ್ಯ ದೇವತಾಃ ।।

ಮಾಧ್ಯಂದಿನಂ ಸವನಂ ಚತುಶ್ಚತ್ವಾರಿಂಶದಕ್ಷರಾತ್ಮಕ ತ್ರಿಷ್ಟುಪ್ ಛಂದಸ್ಕ ಮಂತ್ರೋಪೇತಮ್ ।। ಅಯಮಪಿ ಚತುಶ್ಚತ್ವಾರಿಂಶದ್ವರ್ಷಾತ್ಮಕ ಕಾಲೋಪೇತಃ ।। ಮಾಧ್ಯಂದಿನ ಸವನಮ್ ।। ಅಸ್ಯ ಸಂಕರ್ಷಣಃ ದೇವತಾ ।। ಅತ್ರ ತತ್ತ್ವೇಶಾಃ ಏವ ಅಯೋಗ್ಯಜನಂ ರೋಧಯಂತಿ ಇತಿ ರುದ್ರನಾಮಾನಃ ದೇವತಾಃ ಪ್ರಸಿದ್ಧಮ್ ॥ ತೃತೀಯಂಸವನಂ ಅಷ್ಟಚತ್ವಾರಿಂಶದಕ್ಷರಾತ್ಮಕ ಜಗತೀ ಛಂದಸ್ಕ ಮಂತ್ರೋಪೇತಮ್ ।। ಅಯಮಪಿ ಅಷ್ಟಚತ್ವಾರಿಂಶದ್ವರ್ಷಾತ್ಮಕ ಕಾಲೋಪೇತಃ ತೃತೀಯ ಸವನ ಮಿತ್ಯುಚ್ಯತೇ ।। ಅಸ್ಯ ವಾಸುದೇವಃ ದೇವತಾ।। ತತ್ತ್ವೇಶಾಃ ಏವ ಆದಾನಾದಿಕಾರಯಿತೃತ್ವಾತ್ ಆದಿತ್ಯನಾಮಾನಃ ದೇವತಾಃ ।।

ಪ್ರಸಿದ್ಧಸವನೇಷು ವಸ್ವಾದಯಃ ಯಜಮಾನೈಃ ಪ್ರಾರ್ಥಿತಾಃ ಸ್ವಾಧಿಷ್ಠಿತ

ಕಾಲೇ ಪ್ರಾಪ್ತವಿಘ್ನಾನ್ ನಿವಾರಯಿತ್ವಾ ಯಜ್ಞಂ ಸಮಾಪಯಂತಿ ।। ಅತ್ರಾಪಿ ಪ್ರಾತಃಸವನೇ ಭೋಃ ವಸವಃ । ವಿಷ್ಣುಪೂಜಾತ್ಮಕ ಯಜ್ಞರೂಪಸ್ಯ ಜ್ವರಾದ್ಯುಪದ್ರವೇಣ ಯಥಾ ಲೋಪಃ ಮಾ ಭೂತ್ ತಥಾ ರಕ್ಷತ ।। ಭಾಗವತಾನಾಂ ಭವತಾಂ ಆಧಿಪತ್ಯೇ ವಿಷ್ಣುಪೂಜಾ ವಿಚ್ಛೇದಃ ನ ಉಚಿತಃ ।। ಇತಿ ಪ್ರಾರ್ಥಿತಾಃ ರಕ್ಷಂತಿ ।। ಏವಮೇವ ಉತ್ತರತ್ರ ಸವನದ್ವಯೇ ದ್ರಷ್ಟವ್ಯವ್" ।।

ಪ್ರಸಿದ್ಧೇ ದೀಕ್ಷಾಃ ಉಪಸದಃ ಸ್ತುತಶಸ್ತ್ರೇ ದಕ್ಷಿಣಾ ಸೋಷ್ಯತಿ ಇತಿ ವ್ಯವಹಾರಃ ಅಸೋಷ್ಟೇತಿ ವ್ಯವಹಾರಃ ಅವಭೃತಃ ಇತಿ ಸಪ್ತಸಂತಿ ।। ಅತ್ರ ಅಶನಾಯಾಪಿಪಾಸೇ ವ್ಯಾಧ್ಯಾಧಿ ಸಕಲೋಪದ್ರವೈಃ ಪ್ರಾಪ್ತಾವಸ್ಥಾ ಚ ದೀಕ್ಷಾ ।। ಸ್ವಾಯಂಭುವಭಾರ್ಯಾ ಶತರೂಪಾ ತದಭಿಮಾನಿನೇ ।। ಅಶನಪಾನಸುಖಾವ-ಸ್ಥಾನಾನಿ ಯಜಮಾನ ವ್ಯಾಪಾರರೂಪೌ ಪಸದ ಸಂಜ್ಞಕಾನಿ ।। ಹಾಸ-ತಾಂಬೂಲ ಭಕ್ಷಣ ಮೈಥುನ ಶವಹೃತಿ ತದ್ವಾಹ ಪ್ರಭೃತೀನಿ ಸ್ತುತಶಸ್ತ್ರ ಸಂಜ್ಞತಾಸ್ ।। ಋಕ್ಷು ಸಾಮಗಾನಂ ಸ್ತೋತ್ರಮ್।। ಕೇವಲಂ ಮಂತ್ರಪಾಠಃ ತು ಸ್ತುತಶಸ್ತ್ರಮ್।। ಇತಿ ಭೇದಃ ।। ಕಾಯಕ್ಲೇಶಾದಿರೂಪಂ ವೇದಾಭ್ಯಾಸಾದಿರೂಪಂ ಚಿಂತನಾದಿ ರೂಪಂ ತಪಃ ವಿದ್ಯಾದಾನಂ ಅನ್ನಾದಿದಾನಂ ಚ ಆರ್ಜನಂ ಅಹಿಂಸಾ ಸತ್ಯವಾಕ್ಯಂ ಇತಿ ದಕ್ಷಿಣಾ ।। ಸ್ವಾಯಂಭುವಮನುಃ ತದಭಿಮಾನೀ ।। ಪಿತುಃ ಸಕಾಶಾತ್ ಮಾತುಃ ಉದರೇ ಪ್ರವೇಶೇ ಜನಿಷ್ಯತಿ ಇತಿ ಯಃ ವ್ಯವಹಾರಃ ಸ ಏವ ಸವನಂ ಕರಿಷ್ಯಾಮಿ ಇತಿ ವ್ಯವಹಾರಃ ।। ಮಾತುಃ ಸಕಾಶಾತ್ ಉತ್ಪತ್ತೌ ಜನಿತಃ ಇತಿ ಯಃ ವ್ಯವಹಾರಃ ಸ ಏವ ಸವನಂ ಕರಿಷ್ಯಾಮಿ ಇತಿ ವ್ಯವಹಾರಃ ।। ಮಾತುಃ ಸಕಾಶಾತ್ ಉತ್ಪತ್ತೌ ಜನಿತಃ ಇತಿ ಯಃ ವ್ಯವಹಾರಃ ಸ ಏವ ಅಕರೋತ್ ವ್ಯವಹಾರಃ ।। ಮರಣಮೇವ ಅವಭೃತ ಸ್ನಾನಮ್ ।।

ತತ್ರ ಮಂತ್ರತ್ರಯಮ್ ।। ಓಂ ಅಕ್ಷತಮಸೀ ।। ಓಂ । ಅಚ್ಯುತಮಸಿ ಓಂ ।। ಓಂ । ಪ್ರಾಣಶಂಸಿತಮಸಿ ಓಂ ।। ಇತಿ ।।

ಹೇ ಭಗವನ್ ! ತ್ವಂ ಸ್ವರೂಪೇಣ ಅಕ್ಷಯಃ ಅಸಿ ।। ಗುಣೈಃ ಅಚ್ಯುತಃ ಅಸಿ ।। ಮುಖ್ಯಪ್ರಾಣಾದಪಿ ಅಧಿಕಸುಖಃ ಅಸಿ ।। ಇತಿ ಮಂತ್ರತ್ರಯಾರ್ಥಃ ।।

ಯಜ್ಞಾಂತೇ ಅನಿರುದ್ಧಃ ದೇವತಾ ।। ಏತದುಪಾನಸ್ಯ ಮೋಕ್ಷಾರ್ಥಃ ಅಪರೋಕ್ಷಃ ಏವ ಮುಖ್ಯಂ ಫಲಮ್ ।। ರೋಗಾದಿ ವಿಘ್ನಪರಿಹಾರಃ ಆಯು

ರಭಿವೃದ್ಧಿಶ್ಚೇತಿ ದ್ವಯಂ ಅವಾಂತರ ಫಲಮ್ ಇತಿ ॥ ಯಸ್ಮಿನ್ ಜನ್ಮನಿ ಏವ ಮನುಸಂಧಾನ ಸಾಮರ್ಥ್ಯಂ ಈಶ್ವರಃ ದದಾತಿ॥ ತತ್ರೈವ ಅತೀತಾಶೇಷದೇಹಾನಾಂ ಏಷ್ಯತಾಂ ಅಪಿ ಸರ್ವೇಷಾಂ ಏವಮೇವ ಇತಿ ಅನುಸಂಧೇಯಮ್ ॥ ತೇನ ಭಗವದ್ಭಕ್ತಾನಾಂ ಸರ್ವಾಣಿ ಅಪಿ ಜನ್ಮಾನಿ ಭಗವತ್ಪೂಜಾತ್ಮಕಾನಿ ಭವಂತಿ ॥ ಇತಿ ಆಯುಃಸಾರ್ಥಕ್ಯಮ್ ॥ ಇತಿ ಛಾಂದೋಗ್ಯೇ ದ್ವಿತೀಯೇ ಚತುರ್ವಿಂಶತಿ ಖಂಡೇ ಚ "ಓಂ ಬ್ರಹ್ಮವಾದಿನೋ ವದಂತಿ" ಇತಿ ಚ ಉಕ್ತಮ್ ॥ ಅನೇನ ಕಂ ಸುಖಂ ಹರಿಂ, "ವೇತ್ತಿ" ಇತಿ ಕವಿಪದಂ ನಿರುಕ್ತಂ ಭವತಿ ॥ ಯದ್ ವಸೂನಾಂ ಪ್ರಾತಃ ಸವನಂ ರುದ್ರಾಣಾಂ ಮಾಧ್ಯಂದಿನಸವನಂ ಆದಿತ್ಯಾನಾಂ ವಿಶ್ವೇಷಾಂ ಚ ದೇವಾನಾಂ ತೃತೀಯಂ ಸವನಮ್ ಇತಿ ॥ ತದ್ಭಾಷ್ಯೇ ಚ ವಸುರುದ್ರಾದಿತೇಯೇಷು ವಿಶ್ವೇಷು ಸ್ಥಿತಮೀಶ್ವರಮ್ ॥ ತನ್ನಾಮಾನಂ ಹರಿಂ ಮಂತ್ರೈಃ ಲೋಕದ್ವಾರಾದಿಭಿಃ ಪ್ರಭುಮ್ ॥ ಪ್ರಾರ್ಥಯಿತ್ವಾ ದಿವಂ ತ್ವಜ್ಞಃ ಮೋಕ್ಷಂ ಪ್ರಾಪ್ನುಯಾತ್ ಧ್ರುವಮ್ ।। ಇತಿ ।। ಯೋ ದೇವಾನಾಂ ನಾಮಧಾ ಇತಿ ಶ್ರುತೇಃ ಭಗವತಃ ಏವವಸ್ವಾದಿನಾಮ (ಮಾನಿ) ॥ ೩೪ ॥

## ಕನ್ನಡಾರ್ಥ

ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಲ್ಪಟ್ಟ ಪುರುಷ ಯಜ್ಞವನ್ನು ನಿರೂಪಿಸುತ್ತಾರೆ–ಕವಿಗಳಿಂದಲಿ ಎಂಬ ಪದ್ಯದಿಂದ. ಕವಿ ಎಂದರೆ ಉಪನಿಷತ್ತುಗಳ ರಹಸ್ಯಾರ್ಥಗಳನ್ನು ತಿಳಿದ ಮಹಾಮತಿಗಳು. ಸುಮಧ್ವವಿಜಯದಲ್ಲಿ ಅಲ್ಪಮತಿಗಳಿಗೆ ಉಪನಿಷತ್ತಿನ ರಹಸ್ಯಾರ್ಥಗಳ ಸಮೀಚೀನವಾದ ನಿರ್ಣಯಜ್ಞಾನವು ಸುಲಭವಲ್ಲ, ದುರ್ಘಟವೆಂಬುದಾಗಿ ನಿರೂಪಿತವಾಗಿರುತ್ತದೆ. ಉಪನಿಷದ್ರಹಸ್ಯವನ್ನರಿತವರು ಕವಿಗಳು. ಕೃತಿ ಜಯಾಮಾಯಾಪತಿಗಳೆಂದರೆ ಕ್ರಮವಾಗಿ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಎಂಬ ಭಗವಂತನ ರೂಪಗಳು ಎಂದು ತಿಳಿಯಬೇಕು.

ಹದಿನಾಲ್ಕು ಉಪಾಸನೆಗಳನ್ನು ನಿರೂಪಿಸುವಾಗ ಶ್ರೀವಿಷ್ಣುತೀರ್ಥರು ಮಾದನೂರು ಶ್ರೀಗಳವರು ಭಾಗವತಸಾರೋದ್ಧಾರಕಾರರು ಮುಮುಕ್ಷುಗಳಿಗೆ ಅತ್ಯವಶ್ಯಕವಾಗಿ ಬೇಕಾಗುವ ಅಪರೋಕ್ಷಜ್ಞಾನದ ಅಂತರಂಗಸಾಧನವಾದ ಆಯುರ್ಯಜ್ಞ ಅತಿ ಗೌಪ್ಯವಾದ ಉಪಾಸನೆಯನ್ನು ಕೇಳಿರಿ ಎಂದು ನಿರೂಪಿಸಿರು

ತ್ತಾರೆ. ಸದಾ ಆದರಾತಿಶಯದಿಂದ ಈ ಪ್ರಮೇಯವನ್ನು ಅನುಸಂಧಾನದಲ್ಲಿ ತರಬೇಕು.

ಜೀವನು ವಿಷ್ಣುಪೂಜಾತ್ಮಕ ಯಜ್ಞರೂಪನು. ಯಜ್ಞವು ಪ್ರಾರಂಭವಾಗುವ ಮೊದಲು ನಾರಾಯಣನು ದೇವತೆ. ಪ್ರಸಿದ್ಧವಾದ ಯಜ್ಞಗಳಲ್ಲಿ ಮೂರು ಸವನಗಳಿರುತ್ತವೆ. ಪ್ರಾತಃ, ಮಾಧ್ಯಂದಿನ, ಸಾಯಂ ಎಂಬುದಾಗಿ ಸವನಗಳ ಹೆಸರು. ಜೀವರೂಪ ಯಜ್ಞದಲ್ಲಿಯೂ ಪ್ರಾತಃ, ಮಾಧ್ಯಂದಿನ, ಸಾಯಂ ಎಂಬ ಮೂರೂ ಸವನಗಳಿರುತ್ತವೆ. ಹೇಗೆಂದರೆ ಪುರುಷನಿಗೆ ಒಂದುನೂರು ಆಯುಷ್ಯ ಇದೆ. ಒಂದು ವರ್ಷಕ್ಕೆ 12 ತಿಂಗಳುಗಳನ್ನು ಮಾಡದೆ, ೧೦ತಿಂ. ೧೦ದಿ. ೨೦ಘ. ಕಲಪಳಗಳಿಗೆ ಒಂದು ವರ್ಷವೆಂದು ವರ್ಷದ ಮಾಸವನ್ನು ತಿಳಿದುಕೊಂಡರೆ, ಪ್ರಚಲಿತ ೧೦೦ ವರ್ಷದ ಆಯುಷ್ಯವು ಪರಿಗಣಿತವಾದ ನೂತನ ಮಾನದಿಂದ ೧೧೬ ವರ್ಷಗಳಾಗುತ್ತವೆ. ಹೀಗೆ ೧೧೬ ವರ್ಷಾತ್ಮಕವಾದ ಆಯುಷ್ಯದಲ್ಲಿ ಮೂರು ಭಾಗಗಳನ್ನು ಮಾಡಬೇಕು ಮೊದಲಿನ ೨೪ ವರ್ಷಗಳ ಒಂದುಭಾಗ, ಮುಂದೆ ೪೪ ವರ್ಷಗಳು ಅಂದರೆ ೬೮ರ ವರೆಗೆ ಎರಡನೆಯ ಭಾಗ, ೬೮ರ ನಂತರ ೪೮ ವರ್ಷಗಳು ಅಂದರೆ ೬೯-೧೧೬ರ ವರೆಗೆ ಮೂರನೆಯ ಭಾಗ. ಹೀಗೆ ಮೂರು ಭಾಗಗಳು. ಪ್ರಸಿದ್ಧವಾದ ಯಜ್ಞದಲ್ಲಿ ಪ್ರಾತಃಸವನ, ಮಾಧ್ಯಂದಿನಸವನ, ಸಾಯಂಸವನಗಳೆಂಬ ಮೂರು ಸವನಗಳಿರುತ್ತವೆ. ೨೪ ವರ್ಷದ ಆಯುಷ್ಯದ ಪ್ರಥಮಭಾಗವು ಪ್ರಾತಃಸವನವೆನಿಸಿಕೊಳ್ಳುತ್ತದೆ. ಅದರ ನಂತರದ ೪೪ ವರ್ಷಗಳ (೬೪-೬೮) ಭಾಗವು ಮಾಧ್ಯಂದಿನಸವನವೆನಿಸಿಕೊಳ್ಳುತ್ತದೆ. ಅದರ ಮುಂದಿನ ೪೮ ವರ್ಷಗಳ ಭಾಗವು ಸಾಯಂಸವನವೆನಿಸಿಕೊಳ್ಳುತ್ತದೆ.

ಪ್ರಾತಃಸವನವು ೨೪ ಅಕ್ಷರಗಳಿಂದ ಯುಕ್ತವಾದ ಗಾಯತ್ರೀ ಛಂದಸ್ಸಿನಿಂದ ಕೂಡಿದ ಮಂತ್ರದಿಂದ ಯುಕ್ತವಿರುತ್ತದೆ. ಈ ಪುರುಷಾಯುಷ್ಯದ ಮೊದಲನೆ ಭಾಗವು ೨೪ ವರ್ಷಾತ್ಮಕ ಕಾಲದಿಂದ ಯುಕ್ತವಾಗಿರುತ್ತದೆ. ಆದುದರಿಂದ ಪ್ರಾತಃಸವನವೆನಿಸಿಕೊಳ್ಳುತ್ತದೆ. ಪ್ರಾತಃಸವನಕ್ಕೆ ದೇವತೆಗಳು ವಸುಗಳು. ಮಾಧ್ಯಂದಿನಸವನದ ದೇವತೆಗಳು ರುದ್ರರು. ಸಾಯಂಸವನದ ದೇವತೆಗಳು ಆದಿತ್ಯರು. ಈ ಆಯುರ್ಯಜ್ಞದ ಮೊದಲನೆಯಭಾಗವಾದ ಪ್ರಾತಃಸವನದಲ್ಲಿ ತತ್ತ್ವೇಶರಾದ ತತ್ತ್ವನಿಯಾಮಕರಾದ ದೇವತೆಗಳೇ ವಸುಗಳೆಂದು ಹೇಳಿಸಿಕೊಳ್ಳು

ತ್ತಾರೆ. ತತ್ತ್ವಪತಿದೇವತೆಗಳು ಯೋಗ್ಯಪ್ರಾಣಿಗಳಿಗೆ ಸುಖದಿಂದ ಆಚ್ಛಾದಿಸುತ್ತಾರೆ. ಅಂದರೆ ಸುಖವನ್ನು ಹೊಂದಿಸುತ್ತಾರೆ. ಆದ್ದರಿಂದ "ವಸುಗಳು" ಎಂದು ಅನ್ನಿಸಿಕೊಳ್ಳುತ್ತಾರೆ.

ಮಾಧ್ಯಂದಿನಸವನವು ೪೪ ಅಕ್ಷರಯುಕ್ತವಾದ ತ್ರಿಷ್ಟುಪ್ ಛಂದೋಬದ್ಧವಾದ ಮಂತ್ರಯುಕ್ತವಾದುದು. ಪ್ರಕೃತ ಆಯುರ್ಯಜ್ಞದ ಮಾಧ್ಯಂದಿನಸವನವೂ ಸಹ ೪೪ ವರ್ಷಗಳಿಂದ ಯುಕ್ತವಾಗಿರುತ್ತದೆ. ಈ ಮಾಧ್ಯಂದಿನಸವನಕ್ಕೆ ಮುಖ್ಯವಾಗಿ ಸಂಕರ್ಷಣನು ದೇವತೆಯು. ರುದ್ರರು ಅವಾಂತರ ದೇವತೆಗಳು. ಪ್ರಕೃತ ದೇಹದೊಳಗಿರುವ ತತ್ತ್ವಾಭಿಮಾನಿದೇವತೆಗಳೇ ಅಯೋಗ್ಯರನ್ನು ರೋಧಿಸುವುದರಿಂದ ರುದ್ರರೆನಿಸಿಕೊಳ್ಳುತ್ತಾರೆ.

ಸಾಯಂಸವನವು ೪೮ ಅಕ್ಷರಯುಕ್ತವಾದ ಜಗತೀ ಛಂದೋಬದ್ಧವಾಗಿರುತ್ತದೆ. ಪ್ರಕೃತ ಸಾಯಂಸವನವೂ ೪೮ ವರ್ಷ (ಅವಧಿ) ರೂಪಕಾಲದಿಂದ ಯುಕ್ತವಾಗಿರುತ್ತದೆ. ಇದಕ್ಕೆ ವಾಸುದೇವನು ಮುಖ್ಯದೇವತೆಯು. ತತ್ತ್ವನಿಯಾಮಕ ದೇವತೆಗಳು ಆದಾನಾದಿಗಳನ್ನು =ಸ್ವೀಕಾರ ಮುಂತಾದುವುಗಳನ್ನು ಮಾಡಿಸುವುದರಿಂದ ಆದಿತ್ಯರೆಂದೆನಿಸಿಕೊಳ್ಳುತ್ತಾರೆ.

ಲೋಕಪ್ರಸಿದ್ಧವಾದ ಯಜ್ಞದಲ್ಲಿ-ಸವನಗಳಲ್ಲಿ ವಸು ಮುಂತಾದ ದೇವತೆಗಳು ಯಜಮಾನರಿಂದ (ಯಾಗಯಜಮಾನರಿಂದ) ಪ್ರಾರ್ಥಿತರಾಗಿ ತಮ್ಮ ಅಧಿಷ್ಠಾನಕಾಲಗಳಲ್ಲಿ ಬಂದಿರುವ ವಿಘ್ನಗಳನ್ನು ದೂರಗೊಳಿಸಿ ಯಜ್ಞವನ್ನು ಮುಗಿಯಿಸಿತ್ತಾರೆ ಎಂದು ಸ್ತುತಿಯಾಗಿರುತ್ತದೆ. ಅದರಂತೆ ಪ್ರಕೃತ ಆಯುರ್ಯಜ್ಞದ ಪ್ರಾತಃಸವನದಲ್ಲಿಯೂ ಹೇ ವಸುಗಳೇ ! ವಿಷ್ಣುಪೂಜಾತ್ಮಕವಾದ ಯಜ್ಞರೂಪವಾದ ಈ ಆಯುಷ್ಯವನ್ನು ಜ್ವರ ಮುಂತಾದ ಉಪದ್ರವಗಳಿಂದ ಲೋಪಗೊಳ್ಳದಂತೆ ಮಾಡಿ ಸಂರಕ್ಷಿಸಿರಿ. ಭಗವತ್ಸೇವಕರಾದ ತಮ್ಮ ಆಧಿಪತ್ಯವಿರುವಾಗ ವಿಷ್ಣುಪೂಜೆಯ ವಿಚ್ಛೇದವು ಉಚಿತವೆನಿಸುವುದಿಲ್ಲ. ಹೀಗೆ ಪ್ರಾರ್ಥಿತರಾಗಿ ವಸುಗಳು ಸಂರಕ್ಷಿಸುತ್ತಾರೆ. ಹೀಗೆಯೇ ಮುಂದಿನ ಸವನಗಳಲ್ಲಿಯೂ ಈ ಬಗೆಯ ಸ್ತೋತ್ರಗಳಿರುವುದಾಗಿ ತಿಳಿದುಕೊಳ್ಳಬೇಕು.

ಲೋಕರೂಢವಾದ ಯಜ್ಞಗಳಲ್ಲಿ–ದೀಕ್ಷಾ–ಉಪಸದ–ಸ್ತುತಶಸ್ತ್ರ–ದಕ್ಷಿಣ ಸೋಷ್ಯತಿ ಎಂಬ ವ್ಯವಹಾರ (ಶಬ್ದಗಳು) ಅಸೋಷ–ಎಂಬ ವ್ಯವಹಾರ ಶಬ್ದ ಗಳು ಅವಭೃತ ಹೀಗೆ ಏಳು ಅಂಗಗಳಿರುತ್ತವೆ. ಈಗ ಪ್ರಕೃತವಾದ ಆಯು ರ್ಯಜ್ಞದಲ್ಲಿಯೂ ಏಳು ಅಂಗಗಳಿರುತ್ತವೆ. ಹೇಗೆಂದರೆ ಹಸಿವೆ, ನೀರಡಿಕೆ, ವ್ಯಾಧಿ ಮುಂತಾದ ರೋಗಗಳಿಂದಾಗುವ ಅವಸ್ಥೆ. ಇವು ದೀಕ್ಷಾ ಎನಿಸಿಕೊಳ್ಳು ತ್ತವೆ. ಉಣ್ಣುವುದು, ಕುಡಿಯುವುದು, ಸುಖವಾಗಿ ಇರುವುದು ಇವುಗಳು ಯಜಮಾನನ ವ್ಯಾಪಾರಗಳು, ಉಪಸದಗಳು. ನಗೆ, ತಾಂಬೂಲ ಸೇವನೆ, ಸ್ತ್ರೀ ಸಂಭೋಗ, ಶವಹರಣ, ಶವವನ್ನು ದಹನಮಾಡುವುದು ಈ ಮುಂತಾದುವುಗಳು ಸ್ತುತಶಸ್ತ್ರಗಳೆನಿಸಿಕೊಂಡಿರುವುವು. ಋಕ್ಕುಗಳಲ್ಲಿ ಸಾಮಸ್ವರದಿಂದ ಗಾನಮಾಡು ವುದು ಸ್ತೋತ್ರವೆನಿಸಿಕೊಳ್ಳುತ್ತದೆ. ಕೇವಲ ಮಂತ್ರಪಾಠವು ಸ್ತುತಶಸ್ತ್ರವೆನಿಸಿ ಕೊಳ್ಳುತ್ತದೆ. ಹೀಗೆ ಎರಡರಲ್ಲಿರುವ ವ್ಯತ್ಯಾಸವನ್ನು ತಿಳಿಯಬೇಕು. ಶರೀರ ಶೋಷಣ, ವೇದಾಭ್ಯಾಸ, ಭಗವದ್ರೂಪಚಿಂತನ, ತಪಸ್ಸು, ವಿದ್ಯಾದಾನ, ಅನ್ನ ಮುಂತಾದುವುಗಳ ದಾನ, ಋಜುತನ, ಸರಳಭಾವ, ಅಹಿಂಸಾ, ಸತ್ಯವಚನಗಳು ದಕ್ಷಿಣೆ ಎನಿಸಿಕೊಳ್ಳುತ್ತವೆ. ತಂದೆಯಿಂದ ತಾಯಿಯ ಉದರದಲ್ಲಿ ಪ್ರವೇಶವಾ ಗಲು ಹುಟ್ಟುವನು, ಜನಿಸುವನು ಎಂಬ ಶಬ್ದಗಳೇ ಸೋಷ್ಯತಿ ಎಂಬ ವ್ಯವಹಾರ ವೆನಿಸುವವು. ಸವನವನ್ನು ಮಾಡುವೆ ಎಂಬ ಶಬ್ದಗಳೆನಿಸುವವು. ತಾಯಿಯಿಂದ ಉತ್ಪನ್ನನಾಗಲು ಆಗುವ "ಜನಿಸಿದನು" ಎಂಬ ವ್ಯವಹಾರವು ಸವನವನ್ನು ಮಾಡಿ ದನು–ಅಸೋಷ್ಟ ಎಂಬ ವ್ಯವಹಾರವೆನಿಸಿಕೊಳ್ಳುತ್ತದೆ. ಮರಣವೇ ಅವಭೃತ ವೆನಿಸಿಕೊಳ್ಳುತ್ತದೆ.

ಈ ಯಜ್ಞದಲ್ಲಿಯ ಮಂತ್ರಗಳು—(೧) ಓಂ ಅಕ್ಷತಮಸಿ, (೨) ಓಂ ಅಚ್ಯುತಮಸಿ, (೩) ಓಂ ಪ್ರಾಣಶಂಸಿತಮಸಿ ಎಂಬವುಗಳು.

(೧) ಹೇ ಭಗವಂತನೇ ! ನೀನು ನಾಶರಹಿತವಾದ ಸ್ವಭಾವದವನಿರುತ್ತೀ !

(೨) ಹೇ ಭಗವಂತನೇ ! ಗುಣಗಳಿಂದ ಸದಾ ಪೂರ್ಣನಿರುತ್ತೀ !

(೩) ಹೇ ಭಗವಂತನೇ ! ನೀನು ಜೀವೋತ್ತಮನಾದ ಮುಖ್ಯಪ್ರಾಣನಿಗಿಂತಲೂ ಅಧಿಕ ಸುಖಪೂರ್ಣನಿರುತ್ತೀ ! ಎಂದು ಮೂರೂ ಮಂತ್ರದ ಅರ್ಥ,

ಯಜ್ಞಾಂತದಲ್ಲಿ ಅನಿರುದ್ಧನು ದೇವತೆಯು. ಮೋಕ್ಷಕಾರಣವಾದ ಅಪ ರೋಕ್ಷಜ್ಞಾನವು ಈ ಆಯುರ್ಯಜ್ಞರೂಪ ಉಪಾಸನಕ್ಕೆ ಮುಖ್ಯವಾದ ಪ್ರಧಾನ ಫಲ. ರೋಗ ಮುಂತಾದ ವಿಘ್ನಪರಿಹಾರ-ಆಯುಷ್ಯಾಭಿವೃದ್ಧಿ ಮುಂತಾದುವು ಗಳು ಅವಾಂತರ ಫಲಗಳು.

ಯಾವಜನ್ಮದಲ್ಲಿ ಇಂಥ ಅನುಸಂಧಾನಶಕ್ತಿಯನ್ನು ಹರಿಯು ಪಾಲಿಸು ವನೋ ಆ ಜನ್ಮದಲ್ಲಿ ಹಿಂದೆ ಕಳೆದುಹೋಗಿರುವ ಹಾಗೂ ಮುಂಬರುವ ದೇಹ ಗಳಿಗೆ ಹಿಂದೆ ಹೇಳಿದ ರೀತಿಯಲ್ಲಿ ಆಯುರ್ಯಜ್ಞಾಹುತಿ ಭಾವವನ್ನು ಅನು ಸಂಧಾನದಲ್ಲಿ ತರಬೇಕು. ಇದರಿಂದ ಭಗವದ್ಭಕ್ತರ ಸಕಲ ಜನ್ಮಗಳೂ ಭಗವ ತ್ಪೂಜಾಪರಗಳೆನಿಸಿಕೊಳ್ಳುತ್ತವೆ. ಆದುದರಿಂದ ಆಯಾ ಜನ್ಮಗಳ ಆಯುಷ್ಯವೂ ಸಫಲವಾಗುತ್ತದೆ.

ಛಾಂದೋಗ್ಯೋಪನಿಷತ್ತಿನ ೩ನೆಯ ಅಧ್ಯಾಯ ೧೬ನೆಯ ಖಂಡದಲ್ಲಿ ಬ್ರಹ್ಮವಾದಿನಃ ವದಂತಿ ಎಂಬುದಾಗಿ ಆರಂಭಿಸಿ ಈ ವಿಷಯವು ನಿರೂಪಿತವಾಗಿ ರುತ್ತದೆ.

ಇದರಿಂದ್ಕ-ಸುಖಮಯ ಸುಖಪೂರ್ಣನಾದ ಹರಿಯನ್ನು ವಿ-ತಿಳಿದು ಕೊಳ್ಳುವವನು, ಕವಿ ಎಂದು ಕವಿಪದವನ್ನು ನಿರ್ವಚನದಿಂದ ವಿವರಿಸಿದಂತಾಗು ತ್ತದೆ.

ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿ ಶ್ರೀಮದಾಚಾರ್ಯರು ವಸು- ರುದ್ರ-ಆದಿತ್ಯರುಗಳಲ್ಲಿರುವ ಹರಿಯ ಪ್ರದ್ಯುಮ್ನ-ಸಂಕರ್ಷಣ-ವಾಸುದೇವ ರೂಪಗಳನ್ನು ಅಜ್ಞರು ಸ್ವರ್ಗಾದಿ ಲೋಕಗಳಿಗಾಗಿ ಪ್ರಾರ್ಥಿಸುತ್ತಾರೆ. ಮಹಾ ಜ್ಞಾನಿಗಳು ಮಾತ್ರ ಮೋಕ್ಷವನ್ನಪೇಕ್ಷಿಸಿ ಈ ಉಪಾಸನವನ್ನು ಮಾಡುತ್ತಾರೆ. ಯೋ ದೇವಾನಾಂ ಎಂಬ ಶ್ರುತಿಗೆ ಅನುಸಾರವಾಗಿ ಸರ್ವನಾಮಗಳೂ ಭಗವಂತ ನಲ್ಲಿಯೇ ಸಮನ್ವಯಿಸುವುದರಿಂದ "ವಸು-ರುದ್ರ-ಆದಿತ್ಯ" ಈ ನಾಮಗಳು ತತ್ತದಂತರ್ಗತನಾದ ಹರಿಯನ್ನೇ ಹೇಳುತ್ತವೆ. ॥ ೩೪ ॥

೫. ಶ್ರೀಗುರುಹೃದಯಪ್ರಕಾಶಿಕೆ

ಛಾಂದೋಗ್ಯೋಪನಿಷದುಕ್ತ ೧೧೬ ವರ್ಷ ಪುರುಷಾಯುಸ್ಸು ದೇವರಾರಾ

ಧನರೂಪ ಯಜ್ಞವನ್ನಾಗಿ ಭಾವಿಸುವ ವಿವರ ತಿಳಿಸುತ್ತಾರೆ, 'ಕವಿಗಳಿಂದಲಿ' ಎಂಬ ಪದ್ಯ ಮೊದಲು 'ಪಿತೃಗಳನೆ ಪೊರೆವ' ಎಂಬುವರೆವಿಗೆ ನಾಲ್ಕು ಪದ್ಯದಿಂದ. ಉಪನಿಷದರ್ಥ ಬಲ್ಲ ಕವಿಗಳೆಂಬ ಜ್ಞಾನಿಗಳಿಂದ, ಪ್ರಾತಸ್ಸವನ, ಮಾಧ್ಯಂದಿನಸವನ, ಸಾಯಮಸವನಗಳೆಂಬ ಪೂರ್ವವಯಸ್ಸು ಮಧ್ಯಮವಯಸ್ಸು ವಾರ್ಧಿಕ್ಯವಯಸ್ಸು ಯಜ್ಞಗಳೆಂತ ಹೇಳುವ ಕಾಲವಿಶೇಷಗಳಲ್ಲಿ ಅಭಿಮಾನಿಗಳಾದ ವಸು, ರುದ್ರ, ಆದಿತ್ಯಾಂತರ್ಯಾಮಿಯಾಗಿ ಪ್ರಕಾಶಿಸುವ ಪ್ರಾಣಾಂತರ್ಗತ ಕೃತಿಪತಿ ಪ್ರದ್ಯುಮ್ನ, ಜಯಾಪತಿಸಂಕರ್ಷಣ, ಮಾಯಾರಮಣನಾದ ವಾಸುದೇವ ಈ ಮೂರ್ತಿತ್ರಯಗಳನ್ನು ಚಿಂತಿಸಿ, ಕಳೆದ ದಿವಸಗಳನ್ನು ಆಹುತಿಯಾಗಿ ಎಣಿಸಿ ಸಮರ್ಪಿಸಿ ಸಂತೋಷಪಡುವುದು ॥ ೩೪ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

ಯಜ್ಞಯಾಗಾದಿಗಳಲ್ಲಿ, ಮೂರುಕಾಲಗಳಲ್ಲಿ ಆಹುತಿ ಕೊಡುವುದಕ್ಕೆ ತ್ರಿಷವನ ಎಂದು ಹೆಸರು. ತ್ರಿಷವನಗಳೆಂಬ ಕಾಲವಿಶೇಷವು ಮೂರುಪ್ರಕಾರ:-

(1) ಪ್ರಾತಃಸವನ (ಸೂರ್ಯೋದಯದಿಂದ ಆರಂಭಿಸಿ, ಮಧ್ಯಾಹ್ನಕಾಲಪರ್ಯಂತ)

(2) ಮಾಧ್ಯಂಸವನ (ಮಧ್ಯಾಹ್ನಕಾಲದಿಂದ ಸೂರ್ಯಾಸ್ತಮ ಪರ್ಯಂತ)

(3) ಸಾಯಂಸವನ (ಸೂರ್ಯಾಸ್ತಮಕಾಲದಿಂದ ಶಯನಕಾಲ ಪರ್ಯಂತ)

ಮಾನವನ ಆಯುರ್ಮಾನವೇ ಒಂದು ಯಜ್ಞರೂಪವಾದ ಕರ್ಮವು. ಇದನ್ನು ಆಯುರ್ಯಜ್ಞವೆಂದು ಕರೆಯುವರು. ಕಾಲಗಣನೆಯ ಪ್ರಕಾರ, ಒಂದು ಸಂವತ್ಸರಕ್ಕೆ ೧೨ ತಿಂಗಳುಗಳೆಂದು ರೂಢಿ. ಆದರೆ ಒಂದು ವರ್ಷವು ೧೦ತಿಂಗಳು, ೧೦ ದಿನಗಳು ೨೦ ಘಂಟೆ ಕೆಲಪಳಗಳೆಂದು ಪರಿಗಣಿಸಿದಾಗ, ೧೦೦ ವರ್ಷಗಳ ಮಾನವನ ಆಯುರ್ಮಾನವು ೧೧೬ ವರ್ಷಗಳಾಗುವುವು. ಈ ಕಾಲಮಾನವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಈ ಕಾಲಮಾನತ್ರಯಗಳ ವಿವರ:-
ಜನನಕಾಲದಿಂದ ಮೊದಲಿನ ೨೪ ವರ್ಷಗಳ ಪರ್ಯಂತ_ಪ್ರಾತಃಸವನ (ಪ್ರಥಮ ಸವನ) ಅಷ್ಟವಸುಗಳು ಅಭಿಮಾನಿಗಳು ೨೫ರಿಂದ ೬೮ರವರೆಗೆ ಮುಂದಿನ

೪೪ ವರ್ಷಗಳು–ಮಧ್ಯಸವನ (ದ್ವಿತೀಯಸವನ) ಏಕಾದಶರುದ್ರರು ಅಭಿಮಾನಿಗಳು. ೬೯ರಿಂದ ೧೧೬ ವರ್ಷಗಳ ಪರ್ಯಂತ, ೪೮ ವರ್ಷಗಳು–ಸಾಯಂಸವನ (ತೃತೀಯಸವನ) ದ್ವಾದಶಾದಿತ್ಯರು ಅಭಿಮಾನಿಗಳು.

ಪೂರ್ವೋಕ್ತ ವಸುಗಳು, ರುದ್ರರು, ಆದಿತ್ಯರು ಈ ದೇವತಾಗಣಗಳಲ್ಲಿ ಮುಖ್ಯಪ್ರಾಣದೇವರು ವಿದ್ಯಮಾನರಾಗಿದ್ದು, ಕಾಲಾನುಸಾರ ವ್ಯಾಪಾರಗಳನ್ನು ಮಾಡಿಸುತ್ತಾ, ಮಾನವರ ಆಯುಷ್ಯವನ್ನು ನಿಯಂತ್ರಿಸುತ್ತಿರುವರು. ಅಷ್ಟವಸುಗಳಲ್ಲಿ ಪ್ರೇರಕರಾಗಿರುವ ವಾಯುದೇವರಲ್ಲಿ ಕೃತಿಪತಿಪ್ರದ್ಯುಮ್ನನಾಮಕ ಶ್ರೀಪರಮಾತ್ಮನು ಕಾಲಪ್ರವರ್ತಕನಾಗಿದ್ದಾನೆ. ಏಕಾದಶರುದ್ರಾಂತರ್ಗತ ಪವನಾಂತರ್ಗತ ಜಯಾಪತಿ ಸಂಕರ್ಷಣ ನಾಮಕ ಶ್ರೀಹರಿಯು ಕಾಲಪ್ರವರ್ತಕನಾಗಿದ್ದಾನೆ. ದ್ವಾದಶಾದಿತ್ಯರಲ್ಲಿ ವಾಯ್ವಂತರ್ಗತ ಮಾಯಾರಮಣ ವಾಸುದೇವನು ಕಾಲ ನಿಯಾಮಕನಾಗಿದ್ದಾನೆ.

ಹೀಗೆ, ನಮ್ಮ ಆಯುಸ್ಸಿನ ಪ್ರತಿದಿನದಲ್ಲಿಯೂ, ಸವನತ್ರಯಾಭಿಮಾನಿ ವಸು, ರುದ್ರ, ಆದಿತ್ಯಾಂತರ್ಗತ, ಮುಖ್ಯಪ್ರಾಣಾಂತರ್ಗತ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂದು ಮೂರುಪ್ರಕಾರವಾಗಿ ಭಗವನ್ಮೂರ್ತಿಗಳನ್ನು ಧ್ಯಾನಿಸುತ್ತಾ, ನಮ್ಮ ಆಯುಸ್ಸೇ ಒಂದು ಹೋಮರೂಪವಾದ ಭಗವದ್ಯಜ್ಞವೆಂದು ಭಾವಿಸಿ, ಈ ಗೂಢಾರ್ಥಗಳನ್ನು ಬಲ್ಲ ಬ್ರಹ್ಮಜ್ಞಾನಿಗಳಿಂದ ತಿಳಿದು, ದಿವಸಗಳನ್ನೇ ಈ ಪುರುಷನಾಮಕನಾದ ಯಜ್ಞರೂಪೀ ಹರಿಗೆ ಹವಿಸ್ಸುಗಳೆಂದು ಸವನತ್ರಯಗಳಲ್ಲಿ ಅರ್ಪಿಸುತ್ತಾ, ನಿನ್ನ ಬಾಳನ್ನು ಶ್ರೀಕೃಷ್ಣಾರ್ಪಣಭಾವದಿಂದ ಸಾರ್ಥಕ ಮಾಡಿಕೊಂಡು, ಸದಾ ಆನಂದಚಿತ್ತನಾಗಿರು ಎಂದು ಛಾಂದೋಗ್ಯ ಉಪನಿಷದ್ಗತ ಸಂದೇಶವನ್ನು ದಾಸರಾಯರು ಸಾರಿದ್ದಾರೆ. ॥ ೩೪ ॥

## ಸವನತ್ರಯಗಳ ವಿಹಂಗಮನೋಟದ ಪಟ್ಟಿ

| ಕ್ರಮ ಸಂಖ್ಯೆ | ಸವನತ್ರಯಗಳು | ಕಾಲಾವಧಿ | ಆಯುರ್ಮಾನ | ಅಭಿಮಾನಿದೇವತಾ | ಭಗವದ್ರೂಪ |
| --- | --- | --- | --- | --- | --- |
| ೧ | ಪ್ರಾತಃಸವನ | ಸೂರ್ಯೋದಯದಿಂದ ಮಧ್ಯಾಹ್ನ ಕಾಲ ಪರ್ಯಂತ | ಜನನಾರಭ್ಯ ಮೊದಲಿನ ೨೪ ವರ್ಷಗಳ ಅವಧಿ | ಅಷ್ಟವಸುಗಳು | ಕೃತಿಪತಿಪ್ರದ್ಯುಮ್ನ |
| ೨ | ಮಾಧ್ಯಂಸವನ | ಮಧ್ಯಾಹ್ನದಿಂದ ಸೂರ್ಯಾಸ್ತಮ ಪರ್ಯಂತ | ೨೫ರಿಂದ ೬೮ರವರೆಗೆ ೪೪ ವರ್ಷಗಳು | ಏಕಾದಶರುದ್ರರು | ಜಯಾಪತಿಸಂಕರ್ಷಣ |
| ೩ | ಸಾಯಂಸವನ | ಸೂರ್ಯಾಸ್ತಮದಿಂದ ಶಂಕುನ ಪರ್ಯಂತ | ೬೯ರಿಂದ ೧೧೬ರವರೆಗೆ ಶೇಷಾಯುಷ್ಯ | ದ್ವಾದಶಾದಿತ್ಯರು | ಮಾಯಾರಮಣ ವಾಸುದೇವ |

## ಪದ್ಯ ೩೫

### ಮೂಲ

ಚತುರವಿಂಶತ್ಯಬ್ದ ವಸುದೇ ।
ವತೆಗಳೊಳು ಪ್ರದ್ಯುಮ್ನನಿಪ್ಪನು ।
ಚತುಶ್ಚತ್ವಾರಿಂಶತಿಗಳಲಿ ಸಂಕರ್ಷಣಾಖ್ಯ ॥
ಹುತವಹಾಕ್ಷನೊಳಿಹನು ಮಾಯಾ ।
ಪತಿಯು ಹದಿನಾರಧಿಕ ದ್ವಾತ್ರಿಂ ।
ಶತಿ ವರುಷಗಳಲಿಪ್ಪನಾದಿತ್ಯನೊಳು ಸಿತಕಾಯ ॥ ೩೫ ॥

### ಅವತರಣಿಕೆ

ಮಾನವನ ಆಯುರ್ಮಾನವಾದ ೧೧೬ ವರ್ಷಾವಧಿಯಲ್ಲಿ ಧ್ಯಾನೋಪಾಸನಾ ಕ್ರಮವನ್ನು ತಿಳಿಸುತ್ತಾರೆ–

### ಪ್ರತಿಪದಾರ್ಥ

**ಚತುರವಿಂಶತಿ** = ೨೪ ಸಂಖ್ಯಾಕವಾದ, **ಅಬ್ದ** = ವರ್ಷಗಳೆಂಬ ಪ್ರಾತಃಸವನವು, **ವಸುದೇವತೆಗಳೊಳು** = ಪ್ರಥಮಸವನಾಭಿಮಾನಿಗಳಾದ ಅಷ್ಟವಸುಗಳಲ್ಲಿ, **ಪ್ರದ್ಯುಮ್ನನಿಪ್ಪನು** = ಕೃತಿಪತಿಪ್ರದ್ಯುಮ್ನನು ಎಂಟು ರೂಪಗಳಿಂದ ವಾಯ್ವಂತರ್ಗತನಾಗಿದ್ದಾನೆ. **ಚತುಶ್ಚತ್ವಾರಿಂಶತಿಗಳಲಿ** = ೪೪ ಸಂಖ್ಯಾಕವಾದ ಮುಂದಿನ ದ್ವಿತೀಯಸವನವೆಂದೆನಿಪ ಮಧ್ಯಾಹ್ನ ಸವನದಲ್ಲಿ (ಚತುಃ ಚತ್ವಾರಿಂಶತಿ = ೪ + ೪೦ = ೪೪ ವರ್ಷಾವಧಿ) **ಹುತವಹಾಕ್ಷನೊಳು** = ಅಗ್ನಿನೇತ್ರನಾದ (ಫಾಲನೇತ್ರದಲ್ಲಿ ಅಗ್ನಿ) ರುದ್ರಾಖ್ಯ ಏಕಾದಶರುದ್ರಗಣದಲ್ಲಿ, **ಸಂಕರ್ಷಣಾಖ್ಯ** = ಸಂಕರ್ಷಣನಾಮಕನಾಗಿ ಜಯಾದೇವಿ ಸಮೇತನಾಗಿ ಪವನಾಂತರ್ಗತನಾಗಿ ೧೧ ರೂಪಗಳಿಂದ ವಿರಾಜಮಾನನಾಗಿದ್ದಾನೆ. **ಹದಿನಾರಧಿಕ** = ೧೬ ಹೆಚ್ಚಾದ, **ದ್ವಾತ್ರಿಂಶತಿ ವರುಷಗಳಲಿ** = ೩೨ ವರ್ಷಗಳಲ್ಲಿ ಅಂದರೆ, ೧೬ + ೩೨ = ೪೮

ಸಂಖ್ಯಾಕವಾದ ತೃತೀಯಸವನವೆಂಬ ಸಾಯಂಸವನದಲ್ಲಿ, ಇಷ್ಟ ಆದಿತ್ಯನೊಳು =ಸವನಾಭಿಮಾನಿಗಳಾದ ದ್ವಾದಶಾದಿತ್ಯಗಣದಲ್ಲಿ, **ಸಿತಕಾಯ** = ಪರಿಶುದ್ಧವಾದ ಜ್ಞಾನಾನಂದಾದಿ ಶರೀರವುಳ್ಳ, **ಮಾಯಾಪತಿಯು** = ಮಾಯಾರಮಣನಾದ ವಾಸುದೇವನು ೪೮ ರೂಪಗಳಿಂದ ವಿದ್ಯಮಾನನಾಗಿದ್ದು, ತೃತೀಯಸವನಕ್ಕೆ ಮುಖ್ಯ ಕಾಲಾಭಿಮಾನಿಯಾಗಿ, ಕಾಲರೂಪನಾಗಿದ್ದಾನೆ. ॥ ೩೫ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಸವನತ್ರಯ ವಿಚಾರವೇ ಪ್ರತಿಸವನಕ್ಕೆ ಆಗತಕ್ಕ ವರುಷಗಳ ಸಂಖ್ಯಾ ಹೇಳತಾರೆ.

ಇಪ್ಪತ್ತುನಾಲ್ಕು ಸಂಖ್ಯಾಕವಾದ ವರುಷಗಳು ಪ್ರಾತಃಸವನವು. ಇದಕ್ಕೆ ಅಷ್ಟವಸುಗಳು ಅಭಿಮಾನಿದೇವತೆಗಳು ಇವರೊಳಗೆ ಕೃತಿಸಮೇತನಾಗಿ ಭಾರತೀರಮಣಮುಖ್ಯಪ್ರಾಣಾಂತರ್ಗತನಾಗಿ ಪ್ರದ್ಯುಮ್ನ ಎಂಟು ರೂಪಗಳಿಂದ ಇರೋವನಾಗಿದ್ದಾನೆ. ನಾಲ್ವತ್ತುನಾಲ್ಕು ಸಂಖ್ಯಾಕವಾದ ಮಧ್ಯಾಹ್ನಸವನ ವರುಷಗಳಿಗೆ ಮನಿಗಳಾದ, ಅಗ್ನಿಸದೃಶ ನೇತ್ರವುಳ್ಳ ಹನ್ನೊಂದು ರುದ್ರರಲ್ಲಿ, ಜಯಾಸಮೇತನಾಗಿ ಮುಖ್ಯಪ್ರಾಣಾಂತರ್ಗತನಾಗಿ ಸಂಕರ್ಷಣ ಹನ್ನೊಂದು ರೂಪದಿಂದ ಇರೋವನಾಗಿದ್ದಾನೆ. ಮೂವತ್ತೆರಡು ಅಧಿಕ ಹದಿನಾರು ಎಂದರೆ ನಾಲ್ವತ್ತೆಂಟು, ತೃತೀಯಸವನವಾದ ಸಾಯಮಸವನ ನಾಲ್ವತ್ತೆಂಟು ವರ್ಷಗಳಲ್ಲಿ ಅಭಿಮಾನಿಗಳಾಗಿ ಇರತಕ್ಕ ದ್ವಾದಶಾದಿತ್ಯರು, ಈ ದ್ವಾದಶಾದಿತ್ಯರಲ್ಲಿ ಶುದ್ಧವಾದ ಶರೀರವುಳ್ಳ ಮಾಯಾನಾಮಕ ಲಕ್ಷ್ಮೀಸಮೇತನಾದ ವಾಸುದೇವನು ಹನ್ನೆರಡು ರೂಪದಿಂದ ಇರೋವನಾಗಿದ್ದಾನೆ. ಪ್ರಥಮಸವನ ಇಪ್ಪತ್ತುನಾಲ್ಕು ವರ್ಷಗಳಲ್ಲಿ ಪ್ರದ್ಯುಮ್ನರೂಪ. ದ್ವಿತೀಯಸವನ ನಾಲ್ವತ್ತನಾಲ್ಕು ವರ್ಷಗಳಲ್ಲಿ ಸಂಕರ್ಷಣ ರೂಪಗಳು. ತೃತೀಯಸವನ ನಾಲ್ವತ್ತೆಂಟು ವರುಷಗಳಲ್ಲಿ ವಾಸುದೇವರೂಪಗಳು. ಅಂತು ೧೧೬ ವರ್ಷಗಳು. ಈ ೧೧೬ ವರ್ಷಗಳ ಅನುಸಂಧಾನ ಮಾಡಬೇಕೆಂತ ತಾತ್ಪರ್ಯ. ಪ್ರಕಾರಾಂತರ ಪ್ರಥಮಸವನಕ್ಕೆ ಅಷ್ಟವಸುಗಳೊಳಗೆ ಅಗ್ನಿ, ಒಬ್ಬನೇ

ಪ್ರದ್ಯುಮ್ನ. ದ್ವಿತೀಯಸವನಕ್ಕೆ ಕೈಲಾಸಪತಿರುದ್ರ, ಒಬ್ಬನೇ ಸಂಕರ್ಷಣ. ತೃತೀಯಸವನಕ್ಕೆ ವಿವಸ್ವಾನ್ ನಾಮಕ ಸೂರ್ಯ, ಒಬ್ಬನೇ ವಾಸುದೇವ ಎಂತ. ಈ ರೀತ್ಯಾನೂ ಸಮನ್ವಯ ಮಾಡಬಹುದೆಂದು ತಾತ್ಪರ್ಯ ॥ ೩೫ ॥

## ೨. ಭಾವಪ್ರಕಾಶಿಕೆ

ಮನುಷ್ಯಾಯುಷ್ಯದಲ್ಲಿ ಮೊದಲು ೨೪ ವರ್ಷಗಳು ಅಷ್ಟವಸುಗಳಭಿಮಾನಿಗಳೆನಿಸುವ ಪ್ರಾತಃಸವನಕಾಲವೆಂದೆನಿಸುವುದು. ಆ ವಸುದೇವತೆಗಳೊಳಗೆ ಪ್ರದ್ಯುಮ್ನರೂಪೀ ಶ್ರೀಪರಮಾತ್ಮನಿರುವನು. ಅದರ ಮೇಲೆ ೪೪ ವರ್ಷಗಳವರೆಗೂ ಮಾಧ್ಯಾನ್ಹಸವನ. ಅದರ ಅಭಿಮಾನಿಗಳು ರುದ್ರಗಣ. ಅವರಲ್ಲಿ ಸಂಕರ್ಷಣ ರೂಪದಿಂದ ಪರಮಾತ್ಮನು ವಾಸಮಾಡುವನು. ತದನಂತರ ೪೮ ವರ್ಷಗಳ ವರೆಗೂ ಸಾಯಂಸವನ, ಅದರಭಿಮಾನಿಗಳು ಆದಿತ್ಯಗಣ. ಅವರಲ್ಲಿ ವಾಸುದೇವ ಮೂರ್ತಿ ವಾಸಮಾಡುವನು.

## ೩. ಭಾವದರ್ಪಣ

ವಸುರುದ್ರಾದಿತ್ಯರಲ್ಲಿ ತತ್ತನ್ನಾಮ ತದ್ರೂಪ ತದಾಕಾರರಾಗಿ ಪಿತೃಗಣ ಸಂಬಂಧಿ ೧೧೬ ವರ್ಷಗಳಲ್ಲಿ ತನ್ನಾಮ ತದ್ರೂಪ ತದಾಕಾರದಿಂದ ಇದ್ದು ಎಂಭತ್ತುಮೂರುಸಾವಿರದ ಐನೂರಿಪ್ಪತ್ತು ರೂಪಗಳನ್ನು ಧರಿಸಿ ಪ್ರದ್ಯುಮ್ನ ಸಂಕರ್ಷಣ ವಾಸುದೇವ ಈ ರೂಪಗಳಿಂದ ಪ್ರಕಾಶಿಸುತ್ತಾನೆಂದು ಮೂರು ಪದ್ಯ ದಿಂದ ಹೇಳುತ್ತಾರೆ. ಚತುರ್ವಿಂಶತಿನಾಮಕನಾದ ಪ್ರದ್ಯುಮ್ನನು ವಸುಗಳಲ್ಲಿ ೭೪ ರೂಪದಿಂದ ಇದ್ದಾನೆ. ನಾಲ್ವತ್ತುನಾಲ್ಕು ವರ್ಷನಾಮಕ ಸಂಕರ್ಷಣನು ರುದ್ರ ರಲ್ಲಿ ೫೨ ರೂಪದಿಂದ ಇದ್ದಾನೆ. ನಾಲ್ವತ್ತೆಂಟು ವರ್ಷನಾಮಕ ವಾಸುದೇವನು ಆದಿತ್ಯರಲ್ಲಿ ೨೩೧ ರೂಪದಿಂದ ಇದ್ದಾನೆ. ಅಂತು ೩೫೭ ಭಗವದ್ರೂಪಗಳಾದುವು. ಇದಲ್ಲದೆ ವರ್ಷನಾಮಕ ಭಗವದ್ರೂಪದ ನೂರಾಹದಿನಾರು ವರ್ಷಾಂತರ್ಗತ ಭಗವದ್ರೂಪ ನೂರಾಹದಿನಾರು. ಇವೆರಡೂ ಸೇರಿ ೨೩೨ ಆದವು. ಹಿಂದಿನ ೩೫೭ಕ್ಕೂ ಈ ೨೩೨ಕ್ಕೂ ಗುಣಿಸಿದರೆ ೮೨೮೨೪ ಭಗವದ್ರೂಪಗಳಾದವು. ಇನ್ನು ಇದಕ್ಕೆ ಸೇರತಕ್ಕ ಭಗವದ್ರೂಪದ ವಿವರ–ಪ್ರಾಣಗತ ಭಗವದ್ರೂಪ ೫೧೩,

ಭಾರತೀಗತ ಭಗವದ್ರೂಪ ೧೨೪. ಸತಿಸಹಿತ (ಎಂದರೆ ರಮಾದೇವಿಯೆಂಬರ್ಥ) ರಮಾಯೆಂಬೋ ಸ್ಥಳದಲ್ಲಿ ಳಮಾಯೆಂದು ಅನಬೇಕು. ಇದಕ್ಕೆ ಉದಾಹರಣ ಶ್ಲೋಕ ನಹಿ ವಿಕೃತಿಂ ತ್ಯಜಂತಿ ಕನಕಸ್ಯ ತದಾತ್ಮತಯಾಸ್ವಕೃತಮನುಪ್ರವಿಷ್ಟ ಇದಮಾತ್ಮತಯಾ ರಸಿತಂ ಎಂಬ ದಶಮಭಾಗವತ ಶ್ರುತಿಗೀತಾಕ್ಕೆ ಛಲಾರೀ ಯವರು ಮಾಡಿದ ಟೀಕಾದಲ್ಲಿ ರಸಿತಂ ಎಂಬೋದಕ್ಕೆ ರಲಯೋರಭೇದಾಲ್ಲಸಿತಂ ಯೆಂತ ಬರದಿದ್ದಾರಾದಪ್ರಯುಕ್ತ ರಮಾ ಎಂಬ ಸ್ಥಳದಲ್ಲಿ ಳಮಾಯೆಂಬುವುದೇ ಸಿದ್ಧವೆಂದು ತಿಳಿದು ಶ್ರೀಮಜ್ಜಗನ್ನಾಥದಾಸಾರ್ಯರು ವಾಮಾಂಕದಿಂದ ೫೯ ಭಗವದ್ರೂಪ ಸೇರಿಸಿ ಎಂಭತ್ತುಮೂರುಸಾವಿರದ ಐನೂರಾಇಪ್ಪತ್ತು ಭಗವ ದ್ರೂಪಗಳಾದುವು ಎಂದು ೩೭ನೇ ಪದ್ಯದಿಂದ ಸೂಚಿಸಿದ್ದನ್ನು ತಿಳಿದು ಉಪಾಸನೆ ಮಾಡತಕ್ಕದ್ದು. ಹಿಂಕಾರಾದಿ ಪಂಚರೂಪದಿಂದಲೂ ಪಿತೃಗಳನ್ನು ಪರಿಪಾಲಿಸುವ ನೆಂಬೋ ಭಾವ.

| | | |
|---|---|---|
| ೨೪ ಮೂರು ಅಂಶದಿಂದ ವಸುಗಳಲ್ಲಿ ಪ್ರದ್ಯುಮ್ನ ಇಪತ್ತುನಾಲಕ್ಕು ರೂಪನಾಗಿದ್ದಾನೆ. | ೪೪ ನಾಲ್ಕು ಅಂಶದಿಂದ ರುದ್ರರಲ್ಲಿ ಸಂಕರ್ಷಣ ನಾಲ್ವತ್ತುನಾಲ್ಕು ರೂಪವಾಗಿದ್ದಾನೆ. | ೪೮ ನಾಲ್ಕು ಅಂಶದಿಂದ ಆದಿತ್ಯರಲ್ಲಿ ವಾಸುದೇವ ನಾಲ್ವತ್ತೆಂಟು ರೂಪನಾಗಿದ್ದಾನೆ. |

(ಒಟ್ಟು ವರ್ಷಗಳು ೧೧೬)

ರೀತಿ

೧೧೬ x ೭೨೦ ಮನುಷ್ಯಮಾನದಿವಸ

———

೨೩೨

೮೧೨

————

೮೩೫೨೦ ಒಟ್ಟು ಭಗವದ್ರೂಪಗಳು

ಏವಂರೀತ್ಯಾ ಇದ್ದು ಅಬ್ದರೂಪಯೆಂತ ಎನಿಸಿಕೊಂಡ ಈ ಪಿತೃಗಳ ಸಂಬಂಧ ಅಬ್ದಗತ ಭಗವದ್ರೂಪಗಳಿಗೆ ಮನುಷ್ಯಸಮಾನ ಸಂಬಂಧ ಸಂವತ್ಸರದ್ದಿಯೂ

ಎಂದು ಪುರುಷನು ಉಪಾಸಿಸಬೇಕು. ಪುರುಷನಿಗೆ ಯಜ್ಞನೆಂಬುದನ್ನು ಹೇಳಿದರೆ ಬೇಕಾಗುವ ಸವನ ಮುಂತಾದುವುಗಳನ್ನು ನಿರೂಪಿಸಿರುತ್ತಾರೆ. ಪುರುಷನ ಮೊದಲಿನ ೨೪ ವರ್ಷದ ಆಯುರ್ಭಾಗವು ಪ್ರಾತಃಸವನವೆನಿಸುತ್ತದೆ. ನಂತರ ೪೪ ದಿವಸಗತ ಭಗವದ್ರೂಪಗಳಿಂದ ಹೆಚ್ಚು ಗುಣಿಸಿದರೆ ಇಪ್ಪತ್ತುಮೂರುಸಾವಿರದ ಐನೂರಾ ಇಪ್ಪತ್ತು ಭಗವದ್ರೂಪಗಳಾಗುತ್ತವೆ. ಇದು ಒಂದುರೀತಿ ಅರ್ಥ. ಹಿರಿಯರು ಹೇಳಿದ್ದು ತಿಳಿಯತಕ್ಕದ್ದು. ॥ ೩೫ ॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಚತುರ–ಇತಿ ॥ ತೃತೀಯೇ ಷೋಡಶಖಂಡೇ–ಪುರುಷೋ ವಾವಯಜ್ಞಃ । ತಸ್ಯ ಯಾನಿ ಚತುರ್ವಿಂಶತಿ ವರ್ಷಾಣಿ ತತ್ಪ್ರಾತಃಸವನಮ್ । ಇತ್ಯುಕ್ತ್ವಾ ಯಾನಿ ಅಸ್ಯ ಚತುಶ್ಚತ್ವಾರಿಂಶದ್ವರ್ಷಾಣಿ ತನ್ಮಾಧ್ಯಂದಿನಸವನಮ್ ॥ ಇತ್ಯುತ್ತರಂ ಯಾನಿ ಅಷ್ಟಚತ್ವಾರಿಂಶದ್ವರ್ಷಾಣಿ ತೃತೀಯಂ ಸವನಮ್ ಇತಿ ॥ ಏತದ್ಧಸ್ಮ ತದ್ವಿದ್ವಾನಾಹ ಮಹಿದಾಸ ಐತರೇಯಃ ಸಹ ಷೋಡಶಂ ಶತವರ್ಷಂ ಅಜೀವತ್ ಪ್ರಾಹ। ಷೋಡಶಂ ವರ್ಷಶತಂ ಜೀವತಿ ಯ ಏವಂ ವೇದ ಇತಿ ಚ ಇತಿ ॥ ತದ್ಭಾಷ್ಯಂ ಚ ವಿಷ್ಣು ಪೂಜಾರ್ಥ ಯಜ್ಞೋಽಹಂ ಇತ್ಯುಪಾಸನಮಾದರಾತ್ ॥ ಕುರ್ವೀತ ಪುರುಷಃ ನಿತ್ಯಂ ತಸ್ಯಯತ್ ಷೋಡಶೋತ್ತರಮ್ ॥ ಶತಮಾಯುಃ ತತ್ಸವನತ್ರಯಮೀರಿತಮುತ್ತಮಮ್ ॥ ಚತುರ್ವಿಂಶತ್ತು ಯತ್ಪೂರ್ವಂ ಪ್ರಾತಃಸವನಮೇವ ತತ್ ॥ ಪ್ರಾರ್ಥಯಿತ್ವಾ ವಸೂಂಸ್ತದ್ಗಂ ಪುಮಾನ್ ಮೃತ್ಯುಮುಪಾನುದೇತ್ ॥ ಮಧ್ಯೇ ಚತುಶ್ಚತ್ವಾರಿಂಶನ್ ಮಧ್ಯಮಂ ಸವನಂ ಸ್ಮೃತಮ್ ॥ ರುದ್ರಾಣಾಂ ಪ್ರಾರ್ಥನೇನಾತ್ರ ಪುಮಾನ್ ಮೃತ್ಯುಮುಪಾನುದೇತ್ ॥ ತತೋಽಷ್ಟಚತ್ವಾರಿಂಶಚ್ಚ ತೃತೀಯಂ ಸವನಂ ಸ್ಮೃತಮ್ ॥ ಆದಿತ್ಯಾನಾಂ ಪ್ರಾರ್ಥನೇನ ತದ್ಗಂ ಮೃತ್ಯುಮುಪಾನುದೇತ್ ॥ ಇತಿ ಸರ್ವಜ್ಞಃ ಇತಿ ॥ ಹುತವಹಾಕ್ಷ ರುದ್ರಃ ॥ ಸ್ವತಕಾಮಃ ವಾಸುದೇವಃ । ವ್ರೀಡಾ ಲಜ್ಜಾ ॥ ಬಳಿ ಸಮೀಪ ॥

ಕನ್ನಡಾರ್ಥ

ಛಾಂದೋಗ್ಯೋಪನಿಷತ್ತಿನ ೩ನೆಯ ಅಧ್ಯಾಯದ ೧೬ನೆಯ ಖಂಡದಲ್ಲಿ ಈ ಪುರುಷಯಜ್ಞವನ್ನು ನಿರೂಪಿಸಲಾಗಿದೆ. "ಪುರುಷನೇ–ಜೀವನೇ ಭಗವತ್ಪೂಜಾರ್ಥವಾದ ಯಜ್ಞನು ಅಂದರೆ ನಾನು ಭಗವತ್ಪೂಜಾರ್ಥ ಯಜ್ಞರೂಪನು

ವರ್ಷಗಳು ಅಂದರೆ ೨೪–೬೮ ವರ್ಷಗಳ ಅವಧಿಯು ಮಾಧ್ಯಂದಿನ ಸವನವೆನಿಸುತ್ತದೆ. ಅನಂತರದ ೪೮ ವರ್ಷಗಳ ಅವಧಿಯು ಸಾಯಂಸವನವೆನಿಸುತ್ತದೆ ಎಂದು ಹೇಳಿ, ಈ ಉಪಾಸನೆಯ ಫಲವನ್ನೂ ಪ್ರಶಂಸಿಸಿರುತ್ತಾರೆ.

ಮಹಿದಾಸನು ಇತರಾದೇವಿಯ ಪುತ್ರನು. ಮಹರ್ಷಿಯು. ಅವನು ಪುರುಷಯಜ್ಞ ಪ್ರಕಾರವನ್ನೂ ವಸ್ವಾದಿಗಳನ್ನೂ ಕುರಿತು ಮಾಡುವ ಪ್ರಾರ್ಥನೆಯನ್ನೂ ತಿಳಿದವನು. ಆದುದರಿಂದ ಹೇ ರೋಗವೇ ! ನೀನು ನನ್ನ ಶರೀರವನ್ನು (ವ್ಯರ್ಥವಾಗಿ) ಏಕೆ ಕ್ಲೇಶಗೊಳಿಸುತ್ತೀ ? ಈ ನಿನ್ನ ತಾಪದಿಂದ ನಾನು ಮೃತನಾಗುವುದಿಲ್ಲ ಎಂದು ಹೇಳಿ ತಾನು ೧೧೬ ವರ್ಷ ಜೀವಿಸಿದನು. ಹೀಗೆ ಉಪಾಸನೆಯನ್ನು ತಿಳಿದವನಿಗೂ ೧೧೬ ವರ್ಷಾಯುಷ್ಯದ ಜೀವನವೆಂದು ಫಲವನ್ನೂ ಉಪನಿಷತ್ತು ಹೇಳಿರುತ್ತದೆ.

ಛಾಂದೋಗ್ಯಭಾಷ್ಯದಲ್ಲಿ ಜೀವನು ತಾನು ವಿಷ್ಣುಪೂಜಾರ್ಥವಾದ ಯಜ್ಞರೂಪನು ಎಂದು ತಿಳಿದು ಉಪಾಸಿಸಬೇಕು. ನಿತ್ಯದಲ್ಲಿಯೂ ಈ ಉಪಾಸನವನ್ನು ಮಾಡುವ ಪುರುಷನಿಗೆ ೧೧೬ ವರ್ಷದ ಆಯುಷ್ಯಾಭಿವೃದ್ಧಿಯಾಗುತ್ತದೆ. ಅದರಲ್ಲಿ ಪ್ರಾತಃ, ಮಾಧ್ಯಂದಿನ–ಸಾಯಂ ಎಂದು ಸವನಗಳಿರುತ್ತವೆ. ಪೂರ್ವದ ೨೪ ವರ್ಷಗಳು ಪ್ರಾತಃಸವನವೆನಿಸುತ್ತದೆ. ಅದಕ್ಕೆ ದೇವತೆಗಳಾದ ವಸುಗಳನ್ನೂ ಅಲ್ಲಿರುವ ಹರಿಯ ರೂಪ(ಪ್ರದ್ಯುಮ್ನ)ವನ್ನೂ ಪ್ರಾರ್ಥಿಸಿ ಆ ಅವಧಿಯ ಅಪಮೃತ್ಯುವನ್ನು ಕಳೆದುಕೊಳ್ಳುತ್ತಾನೆ (ಕೊಳ್ಳಬೇಕು). ನಡುವಿನ ೪೪ ವರ್ಷಗಳು ಮಾಧ್ಯಂದಿನ ಸವನವೆನಿಸುತ್ತದೆ. ಅದಕ್ಕೆ ದೇವತೆಗಳಾದ ರುದ್ರರನ್ನೂ ತದಂತರ್ಗತವಾದ ಸಂಕರ್ಷಣನನ್ನೂ ಪ್ರಾರ್ಥಿಸಿ ಆ ಕಾಲದ ಅಪಮೃತ್ಯುವನ್ನು ತಪ್ಪಿಸಿಕೊಳ್ಳುತ್ತಾನೆ. (ತಪ್ಪಿಸಿಕೊಳ್ಳಬೇಕು). ಅನಂತರದ ೪೮ ವರ್ಷಗಳು ಸಾಯಂಸವನವೆನಿಸುತ್ತದೆ. ಅದಕ್ಕೆ ದೇವತೆಗಳಾದ ಆದಿತ್ಯರನ್ನೂ ತದಂತರ್ಗತನಾದ ಶ್ರೀವಾಸುದೇವನನ್ನೂ ಪ್ರಾರ್ಥಿಸಿ ಆ ಕಾಲದ ಅಪಮೃತ್ಯುವನ್ನು ತಪ್ಪಿಸಿಕೊಳ್ಳುತ್ತಾರೆ. (ತಪ್ಪಿಸಿಕೊಳ್ಳಬೇಕು). ಇದು ಸರ್ವಯಜ್ಞ ಎಂಬುದಾಗಿ ಶ್ರೀಮದಾಚಾರ್ಯರು ನಿರೂಪಿಸಿರುತ್ತಾರೆ.

ಹುತವಹಾಕ್ಷ–ರುದ್ರ. ಹುತವಹ–ಅಗ್ನಿ (ಆಹುತಿಯನ್ನು ನುಂಗುವವ) ಅಗ್ನಿಯೇ ಅಕ್ಷ–ಕಣ್ಣು ಆಗಿರುವವನು. ಅಂದರೆ ಕಣ್ಣಿನಲ್ಲಿ ಅಗ್ನಿಯನ್ನಿಟ್ಟುಕೊಂಡಿರುವವನು ವಾಸುದೇವನು. ವ್ರೀಡಾ–ಲಜ್ಜಾ, ನಾಚಿಕೆ. ಬಳಿ–ಹತ್ತಿರ ॥೩೫-೩೬॥

೫. ಶ್ರೀಗುರುಹೃದಯಪ್ರಕಾಶಿಕೆ

ಇದನ್ನೇ ವಿಸ್ತರಿಸುತ್ತಾರೆ, ಚತುರ ಎಂದು. ಪೂರ್ವವಯಸ್ಸು ೨೪ ವರುಷ ಪ್ರಾತಸ್ಸವನವೆಂಬ ಯಜ್ಞದಲ್ಲಿ ವಸುದೇವತೆಗಳು ಅಭಿಮಾನಿಗಳು. ಅಲ್ಲಿ ಪ್ರದ್ಯುಮ್ನಮೂರ್ತಿ ಇರುವನು. ಮಾಧ್ಯಂದಿನಸವನವೆಂಬ ಮಧ್ಯಮ ವಯಸ್ಸು ೪೪ ವರುಷಗಳಕಾಲ ಆಯುಸ್ಸೆಂಬ ಯಜ್ಞದಲ್ಲಿ ಹುತವಹಾಕ್ಷನೆಂಬುವ ರುದ್ರಾಂತ ರ್ಗತ ಸಂಕರುಷಣಮೂರ್ತಿ ಇರುವನು. ನಂತರ ವಾರ್ಧಿಕವೆಂಬ ಸಾಯಂಸವನ ಕಾಲ ೪೮ ವರುಷ ಆಯುಸ್ಸೆಂಬ ಯಜ್ಞದಲ್ಲಿ ಅಭಿಮಾನಿದೇವತೆಯಾದ ಆದಿತ್ಯಾಂ ತರ್ಗತ ಮಾಯಾಪತಿ ಶುಭ್ರಶರೀರನಾದ ವಾಸುದೇವನು ಇರುವನು. ॥ ೬೫ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಮಾನವನ ಆಯುರ್ಮಾನದ ಅವಧಿಯನ್ನು ೧೧೬ ವರ್ಷಗಳೆಂದು ಪರಿ ಗಣಿಸಿದಾಗ, ಆ ಆಯುಸ್ಸಿನ ಕಾಲಾವಧಿಯನ್ನು ಮೂರು ಪ್ರಕಾರವಾಗಿ ವಿಂಗಡಿಸ ಬಹುದು–ಪ್ರಾತಃಸವನ, ಮಾಧ್ಯಂಸವನ ಮತ್ತು ಸಾಯಂಸವನ.

೨೪ ವರ್ಷಗಳ ಪ್ರಾತಃಸವನಕ್ಕೆ ಅಷ್ಟವಸುಗಳು ಅಭಿಮಾನಿಗಳು. ಈ ಅಷ್ಟವಸುಗಳಲ್ಲಿ ಕಾಲನಾಮಕರಾಗಿರುವ ವಾಯುದೇವರ ಅಂತರ್ಗತನಾಗಿ ಕೃತಿಪತಿ ಪ್ರದ್ಯುಮ್ನ ನಾಮಕ ಶ್ರೀಪರಮಾತ್ಮನು ಎಂಟುರೂಪಗಳಿಂದ ವಿದ್ಯಮಾನನಾ ಗಿದ್ದು, ಪ್ರಾತಃಸವನನಿಯಾಮಕನಾಗಿದ್ದಾನೆ.

ನಲವತ್ತುನಾಲ್ಕು ವರ್ಷಗಳ ಮಾಧ್ಯಂಸವನಕ್ಕೆ ಏಕಾದಶರುದ್ರರು ಅಭಿ ಮಾನಿಗಳು. ಇವರಲ್ಲಿ ಚೇಷ್ಟಾಪ್ರವರ್ತಕನಾಗಿರುವ ಪವನನಲ್ಲಿ ಅಂತರ್ಯಾಮಿ ರೂಪದಿಂದ ಇರುವ ಜಯಾರಮಣನಾದ ಸಂಕರ್ಷಣ ನಾಮಕ ಶ್ರೀಪರಮಾ ತ್ಮನು ನಿಯಾಮಕನಾಗಿ ಕಾಲರೂಪನಾಗಿದ್ದಾನೆ.

೪೮ ವರ್ಷಗಳ ಅವಧಿಯು ಸಾಯಂಸವನವು. ದ್ವಾದಶಾದಿತ್ಯರು ಈ ಸಾಯಂಸವನಾಭಿಮಾನಿದೇವತೆಗಳು, ಇವರಲ್ಲಿ ಕ್ರಿಯಾಪ್ರವರ್ತಕನಾದ ಪವಮಾನ

ನಲ್ಲಿ ಅಂತರ್ಗತ ಭಗವದ್ರೂಪವು ಮಾಯಾಪತಿಯಾದ ವಾಸುದೇವ ನಾಮಕ ಶ್ರೀಪರಮಾತ್ಮನು. ವಾಸುದೇವನು ದ್ವಾದಶಾದಿತ್ಯರಲ್ಲಿ ೧೨ ರೂಪಗಳಿಂದ ವಿದ್ಯ ಮಾನನಾಗಿದ್ದು, ಕಾಲರೂಪಿಯಾಗಿದ್ದಾನೆ.

**ವಿಶೇಷಾರ್ಥ**

ಅಷ್ಟವಸುಗಳಲ್ಲಿ ಅಗ್ನಿಯು ಪ್ರಮುಖನು.
ಏಕಾದಶರುದ್ರರಲ್ಲಿ ಪಾರ್ವತೀಪತಿ ರುದ್ರನು.
ದ್ವಾದಶಾದಿತ್ಯರಲ್ಲಿ ವಿವಸ್ವಾನ್ ನಾಮಕ ಸೂರ್ಯನು. ॥ ೩೫ ॥

## ಪದ್ಯ ೩೬

**ಮೂಲ**

**ಷೋಡಶೋತ್ತರಶತ ವರುಷದಲಿ ।**
**ಷೋಡಶೋತ್ತರಶತ ಸುರೂಪದಿ ।**
**ಕ್ರೀಡಿಸುವ ವಸುರುದ್ರರಾದಿತ್ಯರೊಳು ಸತಿಸಹಿತ ॥**
**ವ್ರೀಡವಿಲ್ಲದೆ ಭಜಿಪ ಭಕ್ತರ ।**
**ಪೀಡಿಸುವ ದುರಿತೌಘಗಳ ದೂ ।**
**ರೋಡಿಸುತ ಬಳಿಯಲಿ ಬಿಡದೆ ನೆಲಸಿಪ್ಪ ಭಯಹಾರಿ ॥೩೬॥**

**ಅವತರಣಿಕೆ**

ತನ್ನ ಪತ್ನಿಯಾದ ಶ್ರೀಲಕ್ಷ್ಮೀದೇವಿಯರ ೧೧೬ ರೂಪಗಳಿಂದ ಸಹಿತ ನಾಗಿ, ಪೂರ್ವೋಕ್ತ ಅನುಸಂಧಾನವುಳ್ಳವರನ್ನು ಪೀಡಿಸುತ್ತಿರುವ ಪಾಪಸಮೂಹ ಗಳನ್ನು ಪರಿಹರಿಸುತ್ತಾ, ಆಪ್ತಬಂಧುವಿನಂತೆ ಅವರಲ್ಲಿ ಬಿಂಬನಾಗಿ ನೆಲೆಸಿದ್ದಾ ನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಷೋಡಶೋತ್ತರಶತ ವರುಷದಲಿ**=೧೧೬ ಸಂಖ್ಯಾಕವಾದ ಮಾನವನ ಆಯುರ್ಮಾನದಲ್ಲಿ (ಷೋಡಶ=೧೬. ಉತ್ತರ=ಅದರಮೇಲೆ. ಶತ=೧೦೦. ಅಂದರೆ ೧೦೦+೧೬=೧೧೬ ವರ್ಷಗಳ ಅವಧಿ) **ಷೋಡಶೋತ್ತರಶತ**= ೧೧೬ ಸಂಖ್ಯಾಕವಾದ, **ಸುರೂಪದಿ**=೨೪ ಪ್ರದ್ಯುಮ್ನರೂಪಗಳು+೪೪ ಸಂಕರ್ಷಣ ರೂಪಗಳು+೪೮ ವಾಸುದೇವ ರೂಪಗಳು–ಎಲ್ಲಾ ಸೇರಿ ೧೧೬ ಸಮೀಚೀನವಾದ ಭಗವದ್ರೂಪಗಳಿಂದ, **ವಸು**=ಅಷ್ಟವಸುಗಳಲ್ಲಿ ೨೪ ವರ್ಷಗಳಿಗೆ ಸಂವತ್ಸರಾಂತರ್ಗತ ೨೪ ಪ್ರದ್ಯುಮ್ನ ರೂಪಗಳಿಂದ, **ರುದ್ರ**=ಏಕಾದಶರುದ್ರರಲ್ಲಿ ೪೪ ವರ್ಷಗಳಿಗೆ ಕಾಲಾಂತರ್ಗತ ೪೪ ಸಂಕರ್ಷಣ ರೂಪಗಳಿಂದ, **ಆದಿತ್ಯರೊಳು**=ದ್ವಾದಶಾದಿತ್ಯರಲ್ಲಿ ೪೮ ವರ್ಷಗಳಿಗೆ ಕಾಲರೂಪೀ ೪೮ ವಾಸುದೇವ ರೂಪಗಳಿಂದ, **ಸತಿಸಹಿತ**=ಸತಿಯಾದ ಶ್ರೀರಮಾದೇವಿಯರ ಅಷ್ಟೇ ಸಂಖ್ಯಾಕವಾದ ೧೧೬ ರಮಾರೂಪಗಳಿಂದ ಕೂಡಿಕೊಂಡು, **ಕ್ರೀಡಿಸುವ**=ಮಾನವರ ೧೧೬ ವರ್ಷಗಳ ಆಯುರ್ಮಾನದಲ್ಲಿ ವಿಹರಿಸುವನು. **ವ್ರೀಡವಿಲ್ಲದೆ**=ಲಜ್ಜೆಯಿಲ್ಲದೆ (ಭಗವದ್ಧ್ಯಾನಗಳಲ್ಲಿ ಲಜ್ಜಾರಹಿತರಾಗಿ) **ಭಜಿಪ**=ಕೊಂಡಾಡುವ, **ಭಕ್ತರ** =ಭಗವದ್ಭಕ್ತರ, **ಪೀಡಿಪ**=ಹಿಂಸಿಸುವ, **ದುರಿತೌಘಗಳ**=ಪಾಪಸಮೂಹಗಳನ್ನು, **ದೂರೋಡಿಸುತ**=ದೂರಕ್ಕೆ ಅಟ್ಟುತ್ತಾ, **ಭಯಹಾರಿ**=ಭಯಪರಿಹಾರಕನಾದ ಶ್ರೀಹರಿಯು, **ಬಳಿಯಲಿ ಬಿಡದೆ**=ಭಕ್ತರನ್ನು ಬಿಟ್ಟು ಅಗಲದೆ, **ನೆಲೆಸಿಪ್ಪ**=ಬಿಂಬನಾಗಿ ನೆಲೆಸಿದ್ದಾನೆ. ॥ ೩೬ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಸವನತ್ರಯ ವಿಚಾರವೇ ಹೇಳಿ, ನೂರಹದಿನಾರು ರೂಪಗಳಿಂದ ದುರಿತಗಳ ಪರಿಹಾರ ಮಾಡತಾನೆಂದು ಪ್ರಸ್ತಾಪಿತವಿಷಯವೇ ತಿಳಿಸುತ್ತಾರೆ.

ನೂರಹದಿನಾರು ವರುಷಗಳಲ್ಲಿ ಎಂದರೆ, ಇದರ ಪ್ರಕಾರ ವರುಷಕ್ಕೆ ಹತ್ತು

ತಿಂಗಳು, ಹತ್ತುದಿನಗಳು, ಇಪ್ಪತ್ತು ಘಳಿಗೆ, ಎಂಟು ಪಳಗಳು. ಈ ಸಾಂಕೇತದಿಂದ ಒಂದು ವರುಷ. ಇಂಥಾ ವರುಷಗಳು ೧೧೬ಕ್ಕೆ, ಹನ್ನೆರಡು ತಿಂಗಳು, ಅಂದರೆ ರೂಢಿಯಲ್ಲಿರತಕ್ಕ ಹನ್ನೆರಡು ತಿಂಗಳು ಸಾಂಕೇತವಾದ ವರುಷಗಳು ನೂರೇ ಆಗೋವಾಗತವೆ. ಇಂಥಾ ನೂರಾಹದಿನಾರು ವರುಷಗಳಲ್ಲಿ ಮತ್ತು ಹನ್ನೆರಡು ತಿಂಗಳು ಸಾಂಕೇತ ನೂರಾಹದಿನಾರು ವರುಷಗಳು ಒಂದು, ಇಪ್ಪತ್ತನಾಲ್ಕು ಪ್ರದ್ಯುಮ್ನರೂಪ, ನಲವತ್ತನಾಲ್ಕು ಸಂಕರ್ಷಣರೂಪ, ನಲವತ್ತೆಂಟು ವಾಸುದೇವರೂಪ, ಅಂತು ೧೧೭ ರೂಪಗಳಿಂದ ತದಭಿಮಾನಿಗಳಾದ ವಸುವಾದ ಅಗ್ನಿರೂಪಗಳು, ೨೪ ವರುಷಕ್ಕೆ ೨೪ ರೂಪಗಳು. ತದಂತರ್ಗತ ಇಷ್ಟೇ ಪ್ರದ್ಯುಮ್ನರೂಪಗಳು. ಕೈಲಾಸಾಧಿಪತಿಯಾದ ರುದ್ರರೂಪಗಳು ೪೪ ವರುಷಕ್ಕೆ ೪೪ ರೂಪಗಳು. ತದಂತರ್ಗತ ಇಷ್ಟೇ ಸಂಕರ್ಷಣರೂಪಗಳು. ವಿವಸ್ವಾನ್ ನಾಮಕ ಸೂರ್ಯನ ರೂಪಗಳು ೪೮ ವರುಷಕ್ಕೆ ೪೮ ರೂಪಗಳು. ತದಂತರ್ಗತ ಇಷ್ಟೇ ವಾಸುದೇವರೂಪಗಳು. ಈ ವಸುರುದ್ರಾದಿತ್ಯರೂಪಗಳೊಳು ಪ್ರದ್ಯುಮ್ನಾದಿರೂಪಗಳು ಪತ್ನೇರು ಸಹ ೧೧೬ ರೂಪಗಳಿಂದ ಆಯುರ್ಮಾನ ವರುಷಗಳಲ್ಲಿ ಸಂಚಾರ ಮಾಡುವನು. ಲಜ್ಜಾರಹಿತರಾಗಿ ಪೂರ್ವೋಕ್ತ ಅನುಸಂಧಾನದಿಂದಲೂ, ಇನ್ನೂ ಅನೇಕ ಪ್ರಕಾರ ಪರಮಾತ್ಮನ ಭಜನ ಮಾಡತಕ್ಕ ಭಗವದ್ಭಕ್ತರ, ಈ ೧೧೬ ವರುಷ ಆಯುಷ್ಕಾಲಗಳಲ್ಲಿ ರೋಗಾದ್ಯುಪದ್ರವಗಳಿಂದ ಪೀಡಿಸತಕ್ಕ ಜನ್ಮಾಂತರೀಯವಾದ ಪಾಪಸಮೂಹಗಳ, ತನ್ನ ಧ್ಯಾನಾದಿಗಳಿಂದ ಪ್ರಾಯಶ್ಚಿತ್ತದಿಂದ ಓಡಿಸಿ, ತದ್ದ್ವಾರ ಬರತಕ್ಕ ರೋಗಾದ್ಯುಪದ್ರವಗಳನ್ನು ದೂರಮಾಡಿ ಓಡಿಸುತ್ತಾ, ನಾನಾವಿಧ ಸಂಸಾರಭಯಗಳ ಪರಿಹರಿಸತಕ್ಕ ಪರಮಾತ್ಮ ಇಂಥಾ ಅಧಿಕಾರಿಯ ಬಿಡದೆ, ಭಕ್ತನೆಂದು ಸ್ವೀಕರಿಸಿ, ತನ್ನ ವಿಸ್ಮೃತಿ ಬಾರದಂತೆ ಸ್ಮೃತಿರೂಪನಾಗಿ ಮನಸ್ಸಿನಲ್ಲಿ ವಾಸವಾಗಿರುತ್ತಾನೆ. ॥ ೩೬ ॥

**೨. ಭಾವಪ್ರಕಾಶಿಕೆ**

ಮೇಲಿನ ಪದ್ಯದಲ್ಲಿ ಮೂರು ಸವನಗಳನ್ನು ಆಯುಷ್ಯ ವರ್ಷಗಳಲ್ಲಿ ಹಂಚುವಾಗ ಮೊದಲು ಸವನ ೨೪ ವರ್ಷಗಳು, ಎರಡನೆಯದು ೪೪ ವರ್ಷಗಳು, ಮೂರನೆಯ ಸವನಕ್ಕೆ ೪೮ ವರ್ಷಗಳೆಂದು ಹೇಳಿದರು. ಒಟ್ಟು ೧೧೬

ವರ್ಷಗಳಾದುವು. ಮನುಷ್ಯರಿಗೆ ೧೦೦ ವರ್ಷಗಳಾಯುಷ್ಯವಿರಲು ೧೧೬ ವರ್ಷಗಳನ್ನು ಹೇಳಿದವರ ಅಭಿಪ್ರಾಯವೇನೆಂದರೆ, ಛಾಂದೋಗ್ಯಭಾಷ್ಯ ३ನೆಯ ಅಧ್ಯಾಯದಲ್ಲಿ ವಿಷ್ಣುಪೂಜಾರ್ಥ ಯಜ್ಞೋऽಹಮಿತ್ಯುಪಾಸನಮಾದರಾತ್ ॥ ಕುರ್ವೀತ ಪುರುಷೋನಿತ್ಯಂ ತಸ್ಯಯತ್ಷೋडಶೋತ್ತರಂ ॥ ಶತಮಾಯುಸ್ತತ್ಸವನ ತ್ರಯವಿಭಾರಿತಮುತ್ತಮಂ ॥ ಚತುರ್ವಿಂಶತ್ತು ಯತ್ಪೂರ್ವಂ ಪ್ರಾತಃಸವನಮೇವ ತತ್ ॥ ಪ್ರಾರ್ಥಯಿತ್ವಾ ವಸೂಂಸ್ತದ್ಗಂ ಪುಮಾನ್ ಮೃತ್ಯುಮಪಾನುದೇತ್ ॥ ಮಧ್ಯೇ ಚತುಶ್ಚತ್ವಾರಿಂತನ್ ಮಧ್ಯಮಂಸವನಂ ಸ್ಮೃತಂ ॥ ರುದ್ರಾಣಾಂ ಪ್ರಾರ್ಥನೇತಾತ್ರ ಪುಮಾನ್ ಮೃತ್ಯುಮಪಾನುದೇತ್ ॥ ತತೋಽಷ್ಟ ಚತುರ್ವಿಂಶತ್ತು ತೃತೀಯಂ ಸವನಂ ಸ್ಮೃತಂ ॥ ಆದಿತ್ಯಾನಾಂ ಪ್ರಾರ್ಥನೇನ ತದ್ಗಂ ಮೃತ್ಯುಮಪಾನುದೇದಿತಿ ಸರ್ವಯಜ್ಞೇ

ಇದರರ್ಥ :_ ವಿಷ್ಣುಪೂಜಾರ್ಥವಾಗಿ ನಾನೇ ಯಜ್ಞಭೂತನು. ಅಂದರೆ ನನ್ನ ಸ್ವರೂಪವೇ ಯಜ್ಞವು ಎಂದು ಪುರುಷನು ಪ್ರತಿನಿತ್ಯದಲ್ಲೂ ಉಪಾಸನೆ ಮಾಡಬೇಕು. ಹೀಗೆ ಮಾಡುವುದರಿಂದ ಅವನಿಗೆ ಆಯುಷ್ಯವು (೧೧೬) ನೂರಹದಿನಾರು ವರ್ಷಗಳಾಗುವವು. ಈ ಆಯುಷ್ಯ ವರ್ಷಗಳನ್ನೇ ಯಾಗದಲ್ಲಿ ಹೋಮಿಸುವ ಸವನವನ್ನಾಗಿ ಹಂಚಬೇಕು. ಅದರಲ್ಲಿ ಮೊದಲು ೨೪ ವರ್ಷಗಳವರೆವಿಗೂ ಪ್ರಾತಃಸವನವೆನಿಸುವುದು. ಆ ಸವನಕ್ಕೆ ಅಭಿಮಾನಿಗಳು ವಸುಗಣವು. ಆ ವಸುಗಳನ್ನು ಪ್ರಾರ್ಥಿಸಿ ಆ ವರ್ಷದವರೆವಿಗೂ ಇರುವ ಅಪಮೃತ್ಯುವನ್ನು ಪರಿಹರಿಸಿಕೊಳ್ಳಬೇಕು. ಅಂದರೆ ಅವರ ಅಂತರ್ಯಾಮಿ ಪ್ರದ್ಯುಮ್ನದೇವರು ಪರಿಹರಿಸುವರೆಂಬ ತಾತ್ಪರ್ಯ. ಅದರಮೇಲೆ ಆಯುಷ್ಯದ ಮಧ್ಯಕಾಲದ ೪೪ ವರ್ಷಗಳು ಮಧ್ಯಮಸವನವೆನಿಸುವುದು. ಆ ಕಾಲಾಭಿಮಾನಿಗಳಾದ ರುದ್ರಗಣವನ್ನು ಪ್ರಾರ್ಥಿಸಿ ಆ ಕಾಲದ ಮೃತ್ಯುವನ್ನು ಪರಿಹರಿಸಿಕೊಳ್ಳಬೇಕು. ಅದರಮೇಲೆ ೪೮ ವರ್ಷಗಳು ಮೂರನೆಯ ಸವನವೆನಿಸುವುದು. ಆ ಕಾಲದ ಅಭಿಮಾನಿಗಳಾದ ಆದಿತ್ಯಗಣವನ್ನು ಆರಾಧಿಸಿ ಆ ಕಾಲದ ಮೃತ್ಯುವನ್ನು ಕಳೆದುಕೊಳ್ಳಬೇಕು ಎಂದು ಸರ್ವಯಜ್ಞವೆಂಬ ಗ್ರಂಥದಲ್ಲಿ ಹೇಳಲ್ಪಟ್ಟಿರುವುದು. ಹೀಗೆಮಾಡಿದವರಾರಾದರೂ ಇರುವರೆ ಎಂಬ ವಿಷಯದಲ್ಲಿ ಶಿಷ್ಟಾಚಾರವನ್ನು ತೋರಿಸುವುದಕ್ಕಾಗಿ ಐತರೇಯ,

ಇತರಾದೇವಿಯು ಕುಮಾರನಾದ ಮಹಿದಾಸನಾಮಕ (ಪರಮಾತ್ಮನಲ್ಲದ ಮತ್ತೊಬ್ಬ ಇತರಾಕುಮಾರನಾದ ಮಹಿದಾಸನೆಂಬ) ಋಷಿಯು ಇಂತಹಾ ಉಪಾಸನೆಯನ್ನು ಮಾಡಿ ೧೧೬ ವರ್ಷಗಳು ಬದುಕಿದ್ದನು. ಆದ್ದರಿಂದ ಹೀಗೆ ಉಪಾಸನೆಯನ್ನು ಮಾಡುವವರು ೧೧೬ ವರ್ಷ ಆಯುಷ್ಯವಂತರಾಗುವರೆಂದು ಛಾಂದೋಪನಿಷದ್ಭಾಷ್ಯದಲ್ಲಿ ಇರುವುದು. ಅದೇ ಅಭಿಪ್ರಾಯವನ್ನೇ ದಾಸರಾಯರು ಮೇಲಿನ ಪದ್ಯದಲ್ಲಿ ತೋರಿಸಿ ಈ ಪದ್ಯದಲ್ಲಿ ಆ ವರ್ಷಗಳಂತರ್ಯಾಮಿ ಭಗವದ್ರೂಪ ಚಿಂತನೆಯ ಫಲವನ್ನು ಹೇಳುತ್ತಾರೆ. ೧೧೬ ವರ್ಷಗಳಲ್ಲಿ ೧೧೬ ರೂಪಗಳಿಂದ ಭಾರ್ಯಾಸಮೇತನಾಗಿ ಶ್ರೀಹರಿಯು ವಸು, ರುದ್ರ, ಆದಿತ್ಯರೊಳಗೆ ಕ್ರೀಡಿಸು ತ್ತಿರುವನು. ಲಜ್ಜೆಯನ್ನು ಬಿಟ್ಟು ಯಾವ ಮನುಷ್ಯರು ಹೀಗೆ ಭಜಿಸುವರೋ ಅಂತಹಾ ಭಕ್ತರನ್ನು ಪೀಡಿಸುವ ಅಪಮೃತ್ಯು ಮೊದಲಾದ ದುಃಖ ಸಮೂಹ ಗಳು ಏನಿದ್ದರೂ ಅವುಗಳನ್ನು ದೂರ ಓಡಿಸುತ್ತಾ, ಅವರ ಸಮೀಪದಲ್ಲೇ ಸರ್ವದಾ ಇದ್ದು, ಭಯಹಾರಕನು, ಸಂರಕ್ಷಿಸುತ್ತಿರುವನು. ॥ ३೬ ॥

**೩. ಭಾವದರ್ಪಣ**

॥ ಷೋಡಶೋತ್ತರೇತಿ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಈ ಪದ್ಯದ ತಾತ್ಪರ್ಯವನ್ನು ಹಿಂದಿನ ಪದ್ಯದ ತಾತ್ಪರ್ಯದಲ್ಲೇ ಸೇರಿ ಸುವುದರಿಂದ ಪ್ರತ್ಯೇಕವಾಗಿ ಕೊಟ್ಟಿಲ್ಲ. ಬೇರೆ ಟೀಕಾ ಬರೆದಿಲ್ಲ.

**೫. ಶ್ರೀಗುರುಹೃದಯಪ್ರಕಾಶಿಕೆ**

ಒಟ್ಟು ವರ್ಷಲೆಖ್ಖವನ್ನು ತಿಳಿಸಿ ಫಲವನ್ನು ಬೋಧಿಸುತ್ತಾರೆ, ಷೋಡಶ ಎಂದು, ಪೂರ್ವವಯಸ್ಸು ೨೪, ಮಧ್ಯಮದ್ದು ೪೪ ವರುಷ, ವಾರ್ಧಿಕ್ಯ ೪೮ ವರುಷ ಸೇರಿ ಒಟ್ಟು ಪುರುಷಾಯುಸ್ಸು ೧೧೬ ವರುಷಗಳಲ್ಲಿ ೧೧೬ ರೂಪಗಳಿಂದ ವಸು–ರುದ್ರಾದಿತ್ಯಾಂತರ್ಗತ ಪ್ರಾಣಾಂತರ್ಯಾಮಿಯಾಗಿ, ಪತ್ನಿಸಮೇತ ವಿನೋ ದಿಸುವ ಪ್ರದ್ಯುಮ್ನ, ಸಂಕರುಷಣ, ವಾಸುದೇವರೂಪ ಮೂರನ್ನೂ, ವ್ರೀಡ ವೆಂಬ ಲಜ್ಜಾದಿದೋಷ ಬಿಟ್ಟು ಭಜಿಸುವ ಭಕ್ತರ ಅಪಮೃತ್ಯು ಮೊದಲಾದ ದುರಿತಗಳನ್ನು ದೂರದಲ್ಲೇ ಓಡಿಸಿ, ಭಯಪರಿಹಾರಕನಾಗಿ ದೇವರು ಬಳಿ ಯಲ್ಲೇ ವಾಸವಾಗಿರುವನು. ॥ ३೬ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ರೂಢಿಯಲ್ಲಿ ಮಾನವರ ಆಯುರ್ಮಾನವನ್ನು ೧೦೦ ವರ್ಷಗಳೆಂದು (ಮೂವತ್ತು ದಿನಗಳ ಒಂದು ತಿಂಗಳು ಹನ್ನೆರಡಕ್ಕೆ ಒಂದು ವರ್ಷದಂತೆ) ಪರಿಗಣಿಸಿರುವರು. (ಶತಮಾನಂಭವತಿ ಶತಾಯುಃ—ಎಂಬ ಆಶೀರ್ವಚನ ಪ್ರಕಾರ) ಜ್ಯೋತಿಶಾಸ್ತ್ರರೀತ್ಯಾ ಗಣನೆ ಮಾಡಿದಾಗ, ಮಾನವರ ೧೦೦ ವರ್ಷಗಳ ಆಯುರ್ಮಾನಾವಧಿಯು ೧೧೬ ವರ್ಷಗಳಾಗುವುವು (೩೪ನೇ ಪದ್ಯದ ವ್ಯಾಖ್ಯಾನವನ್ನು ನೋಡುವುದು)

ಹಿಂದೆ ಐತರೇಯ ಇತರಾದೇವಿಯ ಕುಮಾರ ಮಹಿದಾಸನಾಮಕನಾದ ಋಷಿಯು (ಶ್ರೀಹರಿಯ ಅವತಾರಭೂತನಾದ ಮಹಿದಾಸನಲ್ಲಿ) ಇಂತಹಾ ಉಪಾಸನಾ ಕ್ರಮದಿಂದ ೧೧೬ ವರ್ಷಗಳು ಜೀವಿಸಿದ್ದನು.

ಈ ೧೧೬ ವರ್ಷಗಳ ಅವಧಿಯು ಮೂರು ಪ್ರಕಾರವಾಗಿರುವುದು.

ಪೂರ್ವೋಕ್ತ ೧೧೬ ವರ್ಷಗಳ ಅವಧಿಯಲ್ಲಿ ಸವನತ್ರಯಾಂತರ್ಗತನಾದ ಶ್ರೀಹರಿಯ ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ರೂಪಗಳನ್ನು ಚಿಂತಿಸಬೇಕೆಂದು ಪದ್ಯಾಭಿಪ್ರಾಯವು. ಅದರ ವಿವರ ಇಂತಿದೆ:

ಜನನಾರಭ್ಯ ೨೪ ವರ್ಷಗಳಲ್ಲಿ ಪ್ರಾತಃಸವನಾಭಿಮಾನಿಗಳಾದ ಅಷ್ಟವಸುಗಳಲ್ಲಿ ಒಬ್ಬನಾದ ಅಗ್ನಿಯಲ್ಲಿ ವಿಶೇಷರೂಪೋಪಾಸನೆ.

ಮಾಧ್ಯಂಸವನಾಭಿಮಾನಿ ಏಕಾದಶರುದ್ರರಲ್ಲಿ (ಕೈಲಾಸಾಧಿಪತಿಯಾದ ರುದ್ರನಲ್ಲಿ) ಮುಖ್ಯಪ್ರಾಣಾಂತರ್ಗತ ಭಗವದ್ರೂಪೋಪಾಸನೆ.

ಸಾಯಂಸವನಾಭಿಮಾನಿ ದೇವತೆಗಳಾದ ದ್ವಾದಶಾದಿತ್ಯರಲ್ಲಿ ವಿವಸ್ವಾನ್ ಸೂರ್ಯನಲ್ಲಿ ಪವನಾಂತರ್ಗತ ಭಗವದ್ರೂಪೋಪಾಸನೆ.

| | | |
|---|---|---|
| ಹೀಗೆ, | ವಸ್ವಂತರ್ಗತ ಕೃತಿಪತಿ ಪ್ರದ್ಯುಮ್ನನ ರೂಪಗಳು | = ೨೪ |
| | ರುದ್ರಾಂತರ್ಗತ ಜಯಾಧವ ಸಂಕರ್ಷಣನ ರೂಪಗಳು | = ೪೪ |
| | ಆದಿತ್ಯಾಂತರ್ಗತ ಮಾಯಾರಮಣ ವಾಸುದೇವನ ರೂಪಗಳು | = ೪೮ |
| | ಒಟ್ಟು ಷೋಡಶೋತ್ತರಶತ ಸುರೂಪಗಳು | = ೧೧೬ |

೧೧೬ ಸಂಖ್ಯಾಕವಾದ ಮಾನವರ ಆಯುರ್ಮಾನದಲ್ಲಿ, ಪ್ರತಿ ಸಂವತ್ಸರ ದಲ್ಲಿಯೂ ಕಾಲನಿಯಾಮಕನಾಗಿದ್ದು, ಸವನಾಹ್ವಯನಾಗಿ, ಕಾಲರೂಪಿಯಾ ಗಿದ್ದು ಶ್ರೀಹರಿಯು ವಿಹರಿಸುತ್ತಿರುವನು.

ಈ ರೀತಿಯಲ್ಲಿ ವಿಧ್ಯುಕ್ತವಾಗಿ ಅರಿತು, ಗುರೂಪದೇಶದ್ವಾರಾ ಜ್ಞಾನಾನು ಸಂಧಾನಪೂರ್ವಕ ಉಪಾಸನೆಮಾಡುವ ಭಕ್ತರು ಪರಮಸಾಧಕರು. ಅಂತಹ ಜೀವಿ ಗಳು ಭಗವದುಪಾಸನೆಯಲ್ಲಿ ಲಜ್ಜೆಯನ್ನು ತೊರೆದು, ಲೋಕದ ಜನರ ಅಪ ಹಾಸ್ಯ, ಅಣಕಕ್ಕೆ ಹೆದರಿ ಹಿಂಜರಿಯದೇ, ದ್ವಂದ್ವಾತೀತಚಿತ್ತವುಳ್ಳವರಾಗಿರು ತ್ತಾರೆ. ಪ್ರಾಪಂಚಿಕ ವಿಷಯೋಪಭೋಗಗಳಲ್ಲಿ ಲಜ್ಜೆಯಿರಬೇಕೇ ಹೊರತು, ಭಗವದ್ಧ್ಯಾನದಲ್ಲಿ ಅಲ್ಲ ಎಂಬ ತತ್ತ್ವವನ್ನು ನಿರ್ದೇಶಿಸಿದ್ದಾರೆ.

ಅಂತಹ ಉಪಾಸಕರನ್ನು ಆಪ್ತಬಂಧುವಿನಂತೆ ಶ್ರೀಹರಿಯು ಕಾಯ್ದು ಸಂಸಾರದಲ್ಲಿ ಬರತಕ್ಕ ಸಕಲ ಭಯಗಳನ್ನೂ ಪರಿಹರಿಸುವನು.

'ವಿಷ್ಣುಪೂಜಾರ್ಥವಾಗಿ ನಾನೇ ಯಜ್ಞಭೂತನು. ನನ್ನ ಸ್ವರೂಪವೇ ಯಜ್ಞವು' ಎಂಬ ಉತ್ತಮಾನುಸಂಧಾನದಿಂದ ಅರಿತು, ಮಾನವನು ಪ್ರತಿನಿತ್ಯ ದಲ್ಲಿಯೂ ಉಪಾಸನೆ ಮಾಡುತ್ತಾ, ಸವನತ್ರಯಾತ್ಮಕವಾದ ಆಯುರ್ಮಾನದಲ್ಲಿ ಪ್ರತಿ ಸಂವತ್ಸರ, ಅಯನ, ಋತು, ಮಾಸ, ಪಕ್ಷ, ದಿನ, ಝಾವ, ಮುಹೂರ್ತ, ಘಳಿಗೆ ಇತ್ಯಾದಿ ಸಮಸ್ತ ಕಾಲಾಂಶಗಳನ್ನೂ ವಿಷ್ಣುಪ್ರೇರಣೆಯಾ ವಿಷ್ಣು ಪ್ರೀತ್ಯರ್ಥಂ ಎಂದು, ಆಯುರ್ಹೋಮರೂಪವಾದ ಕಾಲಯಜ್ಞದಲ್ಲಿ ಹವಿಸ್ಸ ನ್ನಾಗಿ ಅರ್ಪಿಸಬೇಕು. ಇದರಿಂದ ಅಪಮೃತ್ಯುಪರಿಹಾರವಾಗಿ, ಉತ್ತಮ ಆಯುಸ್ಸು, ಆರೋಗ್ಯಭಾಗ್ಯವನ್ನು ಮಾನವನು ಶ್ರೀಹರಿಯ ಪರಮಾನುಗ್ರಹ ದಿಂದ ಪಡೆಯುವನು. ॥ ೩೬ ॥

## ಪದ್ಯ ೩೭

**ಮೂಲ**

ಮೂರಧಿಕ ಎಂಭತ್ತು ಸಹಸ್ರ ।
ನೂರು ಇಪ್ಪತ್ತೆನಿಪರೂಪದಿ ।
ತೋರುತಿಪ್ಪ ದಿವಾನಿಶಾಧಿಪರೊಳಗೆ ನಿತ್ಯದಲಿ ॥
ಭಾರತಿ ಪ್ರಾಣರೊಳಗಿದ್ದು ನಿ ।
ವಾರಿಸುತ ಭಕ್ತರ ದುರಿತ ಹೀಂ ।
ಕಾರ ನಿಧನ ಪ್ರಥಮರೂಪದಿ ಪಿತೃಗಳನೆ ಪೊರೆವ ॥ ೩೭ ॥

**ಅವತರಣಿಕೆ :–**

ಈ ಸ್ಥೂಲದೇಹದ ಉತ್ಪತ್ತಿಗೆ ಕಾರಣರಾದ ಪಿತೃದೇವತೆಗಳನ್ನು ಶ್ರೀಹರಿಯು ಸಂರಕ್ಷಿಸುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಮೂರಧಿಕ ಎಂಭತ್ತು ಸಹಸ್ರ**=ಮೂರು ಹೆಚ್ಚಾದ ಎಂಭತ್ತುಸಹಸ್ರ, ಅಂದರೆ ೮೩ ಸಹಸ್ರ, **ಐನೂರು ಇಪ್ಪತ್ತೆನಿಪ**=೫೨೦ ಎಂಬ ಸಂಖ್ಯಾಕವಾದ, ಅಂದರೆ ೮೩,೦೦೦+೫೨೦=೮೩,೫೨೦ ಸಂಖ್ಯಾಕವಾದ, **ರೂಪದಿ**=ಭಗವದ್ರೂಪಗಳಿಂದ, **ದಿವಾ**=ಹಗಲಿನ, ಹಾಗೂ **ನಿಶಾಧಿಪರೊಳಗೆ**=ರಾತ್ರಿಯ ಕಾಲಾಭಿಮಾನಿಗಳಾದ ದೇವತೆಗಳಲ್ಲಿ, **ತೋರುತಿಪ್ಪ**=ವಿದ್ಯಮಾನನಾಗಿ ನೆಲೆಸಿದ್ದಾನೆ. **ನಿತ್ಯದಲಿ**=ಪ್ರತಿದಿವಸದಲ್ಲಿಯೂ, **ಭಾರತಿ**=ಶ್ರೀವಾಯುಪತ್ನಿ ಭಾರತೀದೇವಿ, **ಪ್ರಾಣರೊಳಗಿದ್ದು**=ಮುಖ್ಯಪ್ರಾಣರಾದ ಶ್ರೀವಾಯುದೇವರಲ್ಲಿ ಅಂತರ್ಯಾಮಿ ರೂಪದಿಂದ ಇದ್ದು, **ಭಕ್ತರ**=ಭಗವದ್ಭಕ್ತರ (ಸವನತ್ರಯಾಂತರ್ಗತ ಭಗವದ್ರೂಪೋಪಾಸಕರು); **ದುರಿತ**=ದಿವಸದಲ್ಲಿ ಮಾಡಿದ ಪಾಪಗಳನ್ನು, **ನಿವಾರಿಸುತ**=ದೂರಮಾಡುತ್ತಾ, **ಹೀಂಕಾರ**=ಹೀಂಕಾರ ರೂಪದಿಂದ, **ನಿಧನ**=

ನಿಧನನಾಮಕನಾಗಿ, **ಪ್ರಥಮರೂಪದಿ**=ಪ್ರಥಮರೂಪವಾದ ಹಿಂಕಾರ ರೂಪ ದಿಂದ, **ಪಿತೃಗಳನೆ**=ಸಾಧನಶರೀರವೆನಿಸಿದ ನಮ್ಮ ಸ್ಥೂಲಶರೀರದ ಉತ್ಪತ್ತಿಗೆ ಕಾರಣರಾದ ಪಿತೃಗಳನ್ನು, **ಪೊರೆವ**=ಕಾಪಾಡುತ್ತಾನೆ. ॥ ೩೭ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಸವನತ್ರಯ ವಿಚಾರವೇ, ನೂರುವರುಷಕ್ಕೆ ರಾತ್ರಿ-ಹಗಲು ಗಳಿಗೆ ಆಗತಕ್ಕ ಭಗವದ್ರೂಪಗಳ ಹೇಳತಾರೆ.

ಎಂಭತ್ತುಸಾವಿರ, ಅಧಿಕ ಮೂರುಸಾವಿರ ಐದುನೂರ ಇಪ್ಪತ್ತು ಪ್ರದ್ಯುಮ್ನ ಸಂಕರ್ಷಣ ವಾಸುದೇವ ಎನತಕ್ಕ ಮೂರುರೂಪಗಳಿಂದ ಎಂದರೆ, ವರುಷಕ್ಕೆ ಹನ್ನೆರಡು ತಿಂಗಳು ಮ್ಯಾರಿಗೆ ೧೧೬ ವರುಷಕ್ಕೆ ಆಗತಕ್ಕ ಅಹೋರಾತ್ರಿಗಳು ಹ್ಯಾಂಗೆಂದರೆ–

| | ವರುಷ | ಹಗಲು | ರಾತ್ರಿ | ಮೊತ್ತ | ಭಗವದ್ರೂಪಗಳು |
|---|---|---|---|---|---|
| | ೨೪ | ೮,೬೪೦ | ೮,೬೪೦ | ೧೭,೨೮೦ | ಪ್ರದ್ಯುಮ್ನರೂಪಗಳು |
| | ೪೪ | ೧೫,೮೪೦ | ೧೫,೮೪೦ | ೩೧,೬೮೦ | ಸಂಕರ್ಷಣರೂಪಗಳು |
| | ೪೮ | ೧೭,೨೮೦ | ೧೭,೨೮೦ | ೩೪,೫೬೦ | ವಾಸುದೇವರೂಪಗಳು |
| ಅಂತು | ೧೧೬ | ೪೧,೭೬೦ | ೪೧,೭೬೦ | ೮೩,೫೨೦. | |

ಪ್ರದ್ಯುಮ್ನಾದಿ ಎಂಭತ್ತುಮೂರುಸಾವಿರದ ಐನೂರಿಪ್ಪತ್ತು ರೂಪದಿಂದ ಹಗಲುಗಳಿಗೆ, ರಾತ್ರಿಗಳಿಗೆ ಅಭಿಮಾನಿಗಳಾದ ದೇವತೆಗಳೊಳಗೆ ಪ್ರತಿದಿನದಲ್ಲೂ, ರಾತ್ರಿ ಅಭಿಮಾನಿದೇವತೆಗಳಲ್ಲಿ ಭಾರತೀದೇವಿಯರು, ಹಗಲಭಿಮಾನಿದೇವತೆ ಗಳಲ್ಲಿ ವಾಯುದೇವರು, ಈ ಭಾರತೀರಮಣಮುಖ್ಯಪ್ರಾಣಾಂತರ್ಗತನಾಗಿ, ೮೩,೫೨೦ ರೂಪಗಳಿಂದ ತದಾಕಾರದಿಂದ ಇದ್ದು, ಹಗಲು ರಾತ್ರಿಗಳ ವ್ಯಕ್ತ ಮಾಡಿ, ಪ್ರಾಣಿಗಳಿಗೆ ತೋರಿಸುತ್ತ ಇರೋವನಾಗಿದ್ದಾನೆ. ಈ ಪೂರ್ವೋಕ್ತ ಪ್ರಕಾರ ಇದ್ದು, ಪ್ರಕಾಶಮಾನನಾಗಿರುವ ಪರಮಾತ್ಮನ್ನ ಅನುಸಂಧಾನದಿಂದ

ತಿಳಿದು, ಆಯುಷ್ಕಾಲವನ್ನು ಹೋಮರೂಪದಿಂದ, ಅರ್ಚನೆರೂಪದಿಂದ ಅರ್ಪಿತ ಮಾಡತಕ್ಕ ತನ್ನ ಭಕ್ತರಾದವರ, ಹಗಲು ಮಾಡಿದ ಪಾಪಗಳ, ರಾತ್ರಿ ಮಾಡಿದ ಪಾಪಗಳ, (೬ನೇ ಸಂಧಿ, ೧೪ನೇ ಶ್ಲೋಕದ ಟೀಕಾ ನೋಡಿ) ಹಿಂಕಾರ–

**ಸಂಕರ್ಷಣೋ ಹಿ ಸಂಹರ್ತಾ ಪ್ರದ್ಯುಮ್ನಃ ಪರಮೇಶ್ವರಃ ।**

**ಹೀಂಕಾರ ಇತಿ ಸಂಪ್ರೋಕ್ತೋ ಹೀತಿ ಸೃಷ್ಟಿರುದೀರ್ಯತೇ ॥** ಎಂತ ಛಾಂದೋಗ್ಯಭಾಷ್ಯರೀತ್ಯಾ ಹೀಂಕಾರಶಬ್ದವಾಚ್ಯನಾಗಿ ಹಗಲಿನಲ್ಲಿ ಮಾಡಿದ ಪಾಪ ಗಳನ್ನು, ನಿಧನ–

**ಪ್ರಸ್ತಾವೋ ನಿಧನಂ ಚಾಪಿ ಸಂಕರ್ಷಣ ಉದಾಹೃತಃ ॥** ಎಂಬ ಛಾಂದೋಗ್ಯಭಾಷ್ಯರೀತ್ಯಾ ನಿಧನಶಬ್ದವಾಚ್ಯನಾಗಿ, ರಾತ್ರಿ ಮಾಡಿದ ಪಾಪಗಳ, ಅವರವರ ಅನುಸಂಧಾನ, ದಾರಢ್ಯಾನುಸಾರ ಪರಿಹಾರ ಮಾಡುತ್ತಾ, ಪ್ರಥಮ ರೂಪವಾದ ಹಿಂಕಾರರೂಪದಿಂದ ಅವನ ಪಿತೃಗಳನ್ನ ಸಂರಕ್ಷಿಸುತ್ತಾನೆ. ನಿಧನ–ಹಿಂಕಾರರೂಪಗಳು, ಹಗಲು ಮಾಡಿದ ಪಾಪದಲ್ಲಿ ಹಿಂಕಾರ, ರಾತ್ರಿ ಮಾಡಿದ ಪಾಪಗಳಲ್ಲಿ ನಿಧನ ಇರೋವರಾಗಿ ಪರಿಹರಿಸುತ್ತಾರೆ. ಇವನ ಯೋಗ್ಯತಾ ಹಿಡಿದು, ಈ ಪುಣ್ಯದೊಳಗೆ ಪಿತೃಗಳಿಗೆ ಸೇರಬೇಕಾದ ಭಾಗ ಎಷ್ಟೋ ಅಷ್ಟುಭಾಗ ಹಿಂಕಾರ ತೆಗೆದುಕೊಂಡು ಪಿತೃಗಳ ರಕ್ಷಿಸುತ್ತಾನೆ. ಈ ದೇಹ ಮಾತಾ-ಪಿತೃಗಳ ದೇಹಾಂಶವಾದ್ದರಿಂದ, ಪಾಪ–ಪುಣ್ಯಗಳಿಗೆ ಈ ದೇಹವೇ ಕಾರಣವಾದ್ದರಿಂದ ಈ ದೇಹಾಂಶ ವಿವಕ್ಷಯಾ ಪಿತೃಗಳಿಗೆ ಭಾಗ ಉಂಟು. ಆ ಭಾಗದಿಂದ ಪಿತೃಗಳ ರಕ್ಷಣಾ ಮಾಡಶಾನೆ ಎಂತ ತಾತ್ಪರ್ಯ. ಪುಣ್ಯ–ಪಾಪಗಳು ಎರಡೂ ಪಿತೃಗಳಿಗೆ ಭಾಗ ಉಂಟು. ರಾತ್ರಿ-ಹಗಲುಗಳಿಗೆ ಅಭಿಮಾನಿಗಳಾದ ದೇವತೆಗಳು ಪ್ರಾಚುರ್ಯಾ ಪ್ರಾಚುರ್ಯದಿಂದ ಉಭಯರೂ ಉಭಯಕಡಿ ಇದ್ದಾರೆಂದು ತಾತ್ಪರ್ಯ ॥೩೭॥

## ೨. ಭಾವಪ್ರಕಾಶಿಕೆ

ಮೇಲಿನ ಪದ್ಯದಲ್ಲಿ ಹೇಳಿದ ೧೧೬ ವರ್ಷಗಳಿಗೆ, ವರ್ಷಒಂದಕ್ಕೆ ೩೬೦ ಹಗಲಿನಂತೆ ಒಟ್ಟು ಹಗಲು ೧೧೬X೩೬೦=೪೧,೭೬೦, ಇದರಂತೆ ರಾತ್ರಿ ೪೧೭೭೦, ೮೩೫೨೦ ರೂಪಗಳಿಂದ, ಹಿಂಕಾರ ನಿಧನ ಪ್ರಸ್ತಾವರೂಪಗಳಿಂದ

ತೋರುವನು. ಇದರ ವಿವರ–ಮೊದಲ ಸವನದ ೨೪ ವರ್ಷಗಳಿಗಾಗುವ ೨೪X೩೬೦=೮೬೪೦ ಹಗಲು, ಅಷ್ಟೇ ರಾತ್ರಿ, ಇವುಗಳಿಗೆ ಹಿಂಕಾರನಾಮಕ ಪ್ರದ್ಯುಮ್ನನು. ಎರಡನೆಯ ಸವನ ೪೪ ವರ್ಷಗಳಿಗಾಗುವ ಹಗಲು, ೪೪X೩೬೦ =೧೫೮೪೦, ರಾತ್ರಿ ೧೫೮೪೦, ಇಷ್ಟು ಹಗಲು ರಾತ್ರಿಗಳಿಗೆ ನಿಧನನಾಮಕ ಸಂಕರ್ಷಣನು, ಮೂರನೆಯ ಸವನ ೪೮ ವರ್ಷಗಳಿಗಾಗುವ ಹಗಲು ೪೮X೩೬೦ =೧೭೨೮೦, ರಾತ್ರಿ ೧೭೨೮೦, ಈ ಹಗಲು ತಾತ್ರಿಗಳಿಗೆ ಪ್ರಥಮರೂಪದಿ ಅಂದರೆ ಪ್ರಥಮಾವತಾರವಾದುದರಿಂದ ಪ್ರಸ್ತಾವನಾಮಕ ವಾಸುದೇವರೂಪದಿಂದ ಎಂದರ್ಥ. ನಿಧನ ಹಿಂಕಾರ ಪ್ರಥಮ ರೂಪದಿ ಎಂದು ದಾಸರಾಯರು ಹೇಳಿರುವರು. ಇದರಲ್ಲಿರುವ ಪ್ರಥಮ ಶಬ್ದಕ್ಕೆ ಪ್ರಸ್ತಾವ ಎಂದು ಹೇಗೆ ಅರ್ಥವೆಂದರೆ ಛಾಂದೋಗ್ಯಭಾಷ್ಯ ೨ನೆಯ ಅಧ್ಯಾಯ ೨ನೆಯ ಉಪನಿಷದ್ವಾಕ್ಯದಲ್ಲಿ 'ಪ್ರಥಮಾವತಾರರೂಪತ್ವಾದ್ವಾಸುದೇವಃ ಪರಃ ಪುಮಾನ್ ॥ ಪ್ರಸ್ತಾವೋ ನಿಧನಂ ಚಾಪಿ ಸಂಕರ್ಷಣ ಉದಾಹೃತಃ ॥ ಸಂಕರ್ಷಣೋಹಿ ಸಂಹರ್ತಾ ಪ್ರದ್ಯುಮ್ನಃ ಪರಮೇಶ್ವರಃ ॥ ಹಿಂಕಾರ ಇತಿ ಸಂಪ್ರೋಕ್ತೋ ಹೀತಿ ಸೃಷ್ಟಿರುದೀರ್ಯತೇ' ಪ್ರಥಮಾವತಾರ ರೂಪವಾದುದರಿಂದ, ಪರಮಪುರುಷನಾದ ವಾಸುದೇವನು ಪ್ರಸ್ತಾವನೆನಿಸುವನು. ಸಂಕರ್ಷಣನು ಸಂಹಾರಕರ್ತನಾದುದರಿಂದ ನಿಧನನೆನಿಸುವನು. ಪ್ರದ್ಯುಮ್ನನು ಸೃಷ್ಟಿಕರ್ತನಾದುದರಿಂದ 'ಹಿಂಕರೋತೀತಿ ಹಿಂಕಾರಃ' ಹಿ ಅಂದರೆ ಸೃಷ್ಟಿ, ಅದನ್ನು ಮಾಡುವವನಾದುದರಿಂದ ಹಿಂಕಾರನೆಂದೆನಿಸುವನು ಎಂದು ಹೇಳಿರುವರು. ಆದ್ದರಿಂದ ಇಲ್ಲಿ ಪ್ರಥಮ ಎಂಬ ಪದಕ್ಕೆ ಪ್ರಸ್ತಾವ ಎಂತಲೂ ಹಿಂಕಾರ, ನಿಧನ, ಪ್ರಸ್ತಾವ ಪದಗಳಿಗೆ ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೆಂತಲೂ ಅರ್ಥಮಾಡಲು ಕಾರಣವಾಯಿತು. ಇಂತಹಾ ಮೂರು ರೂಪಗಳಿಂದ ಭಾರತೀಪ್ರಾಣದೇವರಂತರ್ಯಾಮಿಯಾಗಿ ಒಟ್ಟು ೮೩೫೨೦ ರಾತ್ರಿ ಹಗಲುಗಳಿಗೆ ಅಭಿಮಾನಿಗಳಾದ ವಸು, ರುದ್ರ, ಆದಿತ್ಯರೊಳಗೆ ಇದ್ದು, ಭಕ್ತರಿಗೆ ಬರುವ ದುರಿತಗಳನ್ನು ಪರಿಹರಿಸುತ್ತ, ಅವರ ಪಿತೃಗಳನ್ನು ರಕ್ಷಿಸುತ್ತ ಇರುವನೆಂಬ ತಾತ್ಪರ್ಯ.

**೩ ಭಾವದರ್ಪಣ**

॥ ಮೂರಧಿಕೇಶಿ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಮೂರು ಇತಿ ॥ ತ್ರ್ಯುತ್ತರಾಧಿಕ ಸಾಹಸ್ರ (ಸಪ್ತತ್ಯಾ) ಪಂಚೋತ್ತರ ಶತೇನ ಚ ॥ ದಿವಾನಿಶಾಧಿಪಾಂಸ್ತಸ್ಯ ಹಿಂಕಾರಾದಿಃ ಮರುತ್ಪತೌ (ತೇಃ) ॥ ಇತಿ ಕೌಸ್ತುಭೇ ॥ ಪ್ರಥಮಾ–ತದಾದಯಃ ॥ ೩೭ ॥

**ಕನ್ನಡಾರ್ಥ**

ಒಟ್ಟು ಹಗಲುರಾತ್ರಿಗಳಿಗೆ ಸೇರಿ ೮೩೫೨೦ ಅಭಿಮಾನಿ ದೇವತೆಗಳು ಇವುಗಳಿಗೆ ನಿಯಾಮಕನಾಗಿ ಪರಮಾತ್ಮನು ಹಿಂಕಾರ ಪ್ರದ್ಯುಮ್ನ–ನಿಧನ ಸಂಕರ್ಷಣ (ಪ್ರಸ್ತಾ) ಪ್ರಥಮ ವಾಸುದೇವಗಳೆಂಬ ಮೂರು ರೂಪಗಳಿಂದ ಇದ್ದುವ ಪಿತೃಗಳನ್ನು ರಕ್ಷಿಸುತ್ತಿರುತ್ತಾನೆ ಎಂದು ಕೌಸ್ತುಭದಲ್ಲಿಯೂ ಹೇಳಲಾಗಿರುತ್ತದೆ. ॥೩೭॥

## ೫. ಶ್ರೀಗುರುಹೃದಯಪ್ರಕಾಶಿಕೆ

ಈ ವರ್ಷಗಳಿಗೆ ಹಗಲೂ ರಾತ್ರಿ ಒಟ್ಟು ರೂಪವಾಗುವುದರನ್ನು ತಿಳಿಸುತ್ತಾರೆ, ಮೂರಧಿಕ ಎಂದು. ದಿವಾನಿಶಾಧಿಪರೆಂಬ ಹಗಲಭಿಮಾನಿದೇವತೆಗಳು ೪೧೭೬೦, ರಾತ್ರಿಅಭಿಮಾನಿದೇವತೆಗಳು ೪೧,೭೬೦ ಸಹ ಒಟ್ಟು ೮೩,೫೨೦ ರೂಪಗಳಿಂದ ಭಕ್ತರ ದುರಿತ ಪರಿಹರಿಸಿ ಹಿಂಕಾರ ಎಂಬ ಪ್ರದ್ಯುಮ್ನ, ನಿಧನನೆಂಬ ಸಂಕರುಷಣ, ಪ್ರಥಮ ಎಂಬ ವಾಸುದೇವ ಈ ಮೂರು ರೂಪಗಳಿಂದ ಪಿತೃಗಳನ್ನು ರಕ್ಷಿಸುತ್ತಾ ಇರುವನು. ಮೇಲೆ ಹೇಳಿದ ಅರ್ಥಗಳಿಗೆ ಪ್ರಮಾಣ ವಾಕ್ಯಗಳಾದ ಛಾಂದೋಗ್ಯೋಪನಿಷದ್ಭಾಷ್ಯಗಳನ್ನು ನಿರೂಪಿಸುತ್ತಾರೆ.

**ವಿಷ್ಣುಪೂಜಾರ್ಥ ಯಜ್ಞೋಹಮಿತ್ಯುಪಾಸನಮಾದರಾತ್ ।**
**ಕುರ್ವೀತ ಪುರುಷೋ ನಿತ್ಯಂ ತಸ್ಯಯತ್ ಷೋಡಶೋತ್ತರಂ ॥**

**ಶತಮಾಯುಸ್ತು ಸವನತ್ರಯಮೀರಿತಮುತ್ತಮಂ ।**
**ಚತುರ್ವಿಂಶತಿ ಯತ್ಪೂರ್ವಂ ಪ್ರಾತಸ್ಸವನಮೇವ ತತ್ ॥**

**ಪ್ರಾರ್ಥಯಿತ್ವಾ ವಸುಂ ತದ್ಗಂ ಪುಮಾ್ ಮೃತ್ಯುಮುಪಾನುದೇತ್ ।**
**ಮಧ್ಯೇ ಚತುಶ್ಚತ್ವಾರಿಂಶನ್ಮಧ್ಯಮಾಸನಂ ಸ್ಮೃತಂ ॥**

**ರುದ್ರಾಣಾಂ ಪ್ರಾರ್ಥನೇನಾತ್ರ ಪುನರಾಮೃತ್ಯುಮುಪಾನುದೇತ್ ।**
**ತತೋಽಷ್ಟಚತ್ವಾರಿಂಶತ್ತು ತ್ರಿತೀಯಂ ಸದನಂ ಸ್ಮೃತಂ ॥**

**ಆದಿತ್ಯಾನಾಂ ಪ್ರಾರ್ಥನೇನ ತದ್ಗನ್ಯೃತ್ಯುಮುಪಾನುದೇದಿತಿ ॥** ಎಂಬ ಭಾಷ್ಯಾರ್ಥವು ವಿವರಿಸಲ್ಪಟ್ಟಿತು. ॥ ೩೭ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಾತಃಸವನಕ್ಕೆ ೮೬೪೦ ಹಗಲು + ೮೬೪೦ ರಾತ್ರಿಗಳು = ಒಟ್ಟು ೧೭,೨೮೦
ಮಾಧ್ಯಂಸವನಕ್ಕೆ ೧೫೮೪೦ ಹಗಲು + ೧೫೮೪೦ ರಾತ್ರಿಗಳು = ಒಟ್ಟು ೩೧,೬೮೦
ಸಾಯಂಸವನಕ್ಕೆ ೧೭೨೮೦ ಹಗಲು + ೧೭೨೮೦ ರಾತ್ರಿಗಳು = ಒಟ್ಟು ೩೪,೫೬೦

ಒಟ್ಟು ಹಗಲು ಮತ್ತು ರಾತ್ರಿಗಳ ಸಂಖ್ಯಾ ಗಣನೆ = ೮೩,೫೨೦

ಮಾನವರ ಆಯುಃಪ್ರಮಾಣವಾದ ೧೧೬ ವರ್ಷಗಳ ಕಾಲಾವಧಿಯಲ್ಲಿ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ರೂಪತ್ರಯಗಳಿಂದ ೮೩೫೨೦ ಭಗವದ್ರೂಪಗಳನ್ನು ಧರಿಸಿ, ಕಾಲನಾಮಕನಾಗಿದ್ದಾನೆ.
ಇದರ ವಿವರ ಇಂತಿದೆ :–

ಪ್ರಾತಃಸವನಕ್ಕೆ ಹಿಂಕಾರನಾಮಕ ಪ್ರದ್ಯುಮ್ನ ರೂಪಗಳು = ೧೭,೮೮೦
ಮಾಧ್ಯಂಸವನಕ್ಕೆ ನಿಧನ ನಾಮಕ ವಾಸುದೇವ ರೂಪಗಳು = ೩೧,೬೮೦
ಸಾಯಂಸವನಕ್ಕೆ ಪ್ರಸ್ತಾವ ನಾಮಕ ವಾಸುದೇವ ರೂಪಗಳು = ೩೪,೬೫೦

ಒಟ್ಟು ರೂಪಗಳ ಸಂಖ್ಯೆ = ೮೩,೫೨೦

ನಮ್ಮ ಸ್ಥೂಲಶರೀರದಲ್ಲಿ ಬಲಪಾರ್ಶ್ವದಲ್ಲಿ ೩೬,೦೦೦ ಪುರುಷನಾಡಿಗಳಿವೆ (ದಿವಾನಾಡಿಗಳು). ಎಡಪಾರ್ಶ್ವದಲ್ಲಿ ೩೬,೦೦೦ ಸ್ತ್ರೀನಾಡಿಗಳಿವೆ (ನಿಶಾನಾಡಿಗಳು) ಈ ನಾಡಿಗಳಲ್ಲಿ ದಿವಾನಾಡ್ಯಭಿಮಾನಿದೇವತೆಗಳೂ ಮತ್ತು ನಿಶಾಭಿಮಾನಿದೇವತೆಗಳೂ ವಿದ್ಯಮಾನರಾಗಿದ್ದಾರೆ. ದಿವಾಭಿಮಾನಿ ದೇವತೆಗಳಿಗೆ

ಮುಖ್ಯಪ್ರಾಣದೇವರು ನಿಯಾಮಕರು. ನಿಶಾಭಿಮಾನಿ ದೇವತೆಗಳಿಗೆ ರಯೀ ನಾಮಕರಾದ ಶ್ರೀಭಾರತೀದೇವಿ ನಿಯಾಮಕರು.

ಈ ಸ್ಥೂಲಶರೀರವು ನಮ್ಮ ಮಾತಾಪಿತೃಗಳಿಂದ ಉತ್ಪತ್ತಿಯಾಗಿದೆ. ಈ ಕಾರಣದಿಂದ, ಸ್ಥೂಲಶರೀರಕ್ಕೆ ಕಾರಣರಾದ ಪಿತೃಗಳಿಗೆ ಪೂರ್ವೋಕ್ತ ರೂಪ ತ್ರಯಗಳಿಂದ ಸಂರಕ್ಷಕನಾಗಿದ್ದಾನೆ.

ಭಗವದ್ಭಕ್ತರ ಪಾಪಗಳನ್ನು ಪರಿಹಾರಮಾಡಿ, ಅವರನ್ನು ಪೊರೆಯುವನು. ಹಗಲು ಹೊತ್ತಿನಲ್ಲಿ ಮಾಡಿದ ಪಾಪಗಳನ್ನು ದಿವಾಭಿಮಾನಿ ದೇವತಾಗತ ಮುಖ್ಯ ಪ್ರಾಣರಲ್ಲಿದ್ದು ಕ್ಷಾಳನೆಗೈಸುವನು. ರಾತ್ರಿಯಲ್ಲಿ ನಿಶಾಭಿಮಾನಿ ದೇವತಾಗತ ಭಾರತೀಗತ ಪವನಾಂತರ್ಗತನಾಗಿದ್ದು ಪಾಪಪರಿಹಾರ ಮಾಡುವನು. ನಾವು ನಿತ್ಯ ದಲ್ಲಿ ಮಾಡುವ ಪುಣ್ಯ-ಪಾಪಗಳ ಪಾಲು ಪಿತೃಗಳಿಗೂ ಉಂಟು. ಆದರೆ, ಸಪನ ತ್ರಯಾಂತರ್ಗತನಾದ ಶ್ರೀಹರಿಯು ಭಗವದ್ರೂಪ್ರೋಪಾಸನೆ ಮಾಡುವ ಭಕ್ತರಿಗೆ ಪಾಪಪರಿಹಾರಕನಾಗಿದ್ದು, ತದ್ವಾರಾ ಪಿತೃಗಳನ್ನು ಸಂರಕ್ಷಿಸುತ್ತಿರುವನು ॥೩೭॥

✲ ✲ ✲

## ಪದ್ಯ ೩೮

**ಮೂಲ**

ಬುದ್ಧಿಪೂರ್ವಕ ಉತ್ತಮೋತ್ತಮ ।
ಶುದ್ಧ ಊರ್ಣಾಂಬರವ ಪಂಕದೊ ।
ಳದ್ದಿ ತೆಗೆಯಲು ಲೇಪವಾಗುವದೇ ಪರೀಕ್ಷಿಸಲು ॥
ಪದ್ಮನಾಭನು ಸರ್ವಜೀವರೊ ।
ಳಿದ್ದರೇನು ಗುಣತ್ರಯಗಳಿಂ ।
ಬದ್ಧನಾಗುವನೇನೋ ನಿತ್ಯಸುಖಾತ್ಮ ಚಿನ್ಮಯನು ॥ ೩೮ ॥

**ಅವತರಣಿಕೆ**

ನಿತ್ಯಸುಖಾತ್ಮನಾದ ಶ್ರೀಪರಮಾತ್ಮನು ನಿರ್ಲಿಪ್ತನೂ ತ್ರಿಗುಣಾತೀತನೆಂದೂ ಸುಂದರವಾದ ದೃಷ್ಟಾಂತಪೂರ್ವಕ ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಬುದ್ಧಿಪೂರ್ವಕ** = ಮನಃಪೂರ್ವಕವಾಗಿ (ಉದ್ದೇಶಪೂರ್ವಕದಿಂದ), **ಉತ್ತಮೋತ್ತಮನು** = ಶ್ರೇಷ್ಠವಾದವರಲ್ಲಿ ಉತ್ತಮವಾದ, **ಶುದ್ಧ** = ಪರಿಶುದ್ಧವಾಗಿರುವ, **ಊರ್ಣಾಂಬರವ** = ಕಂಬಳಿಯ ವಸ್ತ್ರವನ್ನು, **ಪಂಕದೊಳು** = ಕೆಸರಿನಲ್ಲಿ **ಅದ್ದಿ ತೆಗೆಯಲು** = ಚೆನ್ನಾಗಿ ತೋಯಿಸಿ ಮೇಲಕ್ಕೆತ್ತಿದಾಗ, **ಪರೀಕ್ಷಿಸಲು** = ಆ ಕಂಬಳಿಯನ್ನು ಪರೀಕ್ಷಿಸಿದಾಗ, **ಲೇಪವಾಗುವುದೇ** = ಕೆಸರು ಆ ಕಂಬಳಿಗೆ ಹತ್ತಿಕೊಳ್ಳುವುದೇ ? **ಪದ್ಮನಾಭನು** = ಅಂತೆಯೇ, ಪದ್ಮನಾಭರೂಪಿಯಾದ ಶ್ರೀಪರಮಾತ್ಮನು, **ಸರ್ವಜೀವರೊಳು** = ತ್ರಿಗುಣಬದ್ಧರಾದ ತ್ರಿವಿಧಜೀವರಲ್ಲಿ, **ಇದ್ದರೇನು** = ಅಂತರ್ಯಾಮಿಯಾಗಿ ಬಿಂಬರೂಪದಿಂದ ಇದ್ದ ಕಾಲಕ್ಕೂ, **ಗುಣತ್ರಯಗಳಿಂ** = ಪಂಕಸದೃಶವಾದ ಪ್ರಾಕೃತ ತ್ರಿಗುಣಗಳಿಂದ, **ಬದ್ಧನಾಗುವನೇನೊ** = ಸಂಪರ್ಕ ಹೊಂದುತ್ತಾನೆಯೇ ? **ನಿತ್ಯ** = ಅನಾದ್ಯಂತಕಾಲದಿಂದಲೂ ಶಾಶ್ವತನಾದ, **ಸುಖಾತ್ಮ** = ಆನಂದಮಯನಾದ, **ಚಿನ್ಮಯನು** = ಜ್ಞಾನಾನಂದಮಯ ಶರೀರವುಳ್ಳ ಶ್ರೀಪರಮಾತ್ಮನು ಯಾವಾಗಲೂ ನಿರ್ಲಿಪ್ತನು. ಲೋಕವಿಲಕ್ಷಣನು. ದೇಶಕಾಲಗುಣಾತೀತನೆಂದು ತಾತ್ಪರ್ಯ ॥ ೩೮ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವಾಂತರ್ಗತನಾಗಿ ಅವಿಯೋಗನಾಗಿ ಇದ್ದರೂ ತ್ರಿಗುಣಬದ್ಧ ಜೀವನೇ ಹೊರತು, ಈಶ್ವರ ತ್ರಿಗುಣದಿಂದ ಬದ್ಧನಲ್ಲ ಎಂತಲೂ, ಪರಮಾತ್ಮ ಎಲ್ಲಿದ್ದರೂ ನಿರ್ಲಿಪ್ತನೆಂದು ಹೇಳತಾರೆ.

ಮನಃಪೂರ್ವಕವಾಗಿ ಪ್ರಯತ್ನದಿಂದ, ಶ್ರೇಷ್ಠವಾದದ್ದರೊಳಗೆ ಅತಿಶ್ರೇಷ್ಠವಾದ ಪರಿಶುದ್ಧವಾದ, ನಿರ್ದೋಷವಾದ ಕಂಬಳಿಯನ್ನು ಕೆಸರಿನಲ್ಲಿ ಚಂದಾಗಿ ತೋಯಿಸಿ ತೆಗೆದರೆ ಆ ಕೆಸರು ಕಂಬಳಿಗೆ ಲೇಪವಾಗೋದೇ ಎಂದರೆ, ಲೇಪವಾಗಲಾರದು ಎಂತ ಅರ್ಥ. ಆ ಕಂಬಳಿಯನ್ನು ತಂದು ಪರೀಕ್ಷಿಮಾಡಲು ಲೇಪವಾಗಿರೋದಿಲ್ಲ. ತದ್ವತ್ ಪದ್ಮನಾಭನಾದ ಶ್ರೀಪರಮಾತ್ಮನು ಶುದ್ಧ ಕಂಬಳಿಗೆ ಸದೃಶನಾದವ, ತ್ರಿಗುಣದಿಂದ ಬದ್ಧರಾದ ಜೀವರಲ್ಲಿ ಇದ್ದ ಕಾಲಕ್ಕೂ, ಪಂಕಸದೃಶವಾದ ಗುಣತ್ರಯಗಳಿಂದ ಜೀವ ಬದ್ಧನಾಗುವೋಪಾದಿಯಲ್ಲಿ ಪರಮಾತ್ಮ ಬದ್ಧನೇ, ಬದ್ಧನಲ್ಲ ಎಂತ ತಾತ್ಮರ್ಯ. ದೃಷ್ಟಾಂತ, ಪಂಕ ಊರ್ಣಾಂಬರವತ್. ಈ ಪ್ರಕಾರ ಜೀವಾಂತರ್ಗತನಾಗಿ, ಅವಿಯೋಗನಾಗಿ ಇದ್ದ ಕಾಲಕ್ಕೂ, ಉಪಾಧಿಯಿಂದಲೂ ವಿಕಾರದಿಂದಲೂ ರಹಿತನಾಗಿ ತನ್ನ ಸಂಪೂರ್ಣವಾದ ಸುಖದಿಂದ ಇರತಕ್ಕವನು. ಶ್ರೀಪರಮಾತ್ಮ ಆನಂದಾದಿ ಜ್ಞಾನಸ್ವರೂಪಿಯಾದವನು. ಸೂರ್ಯನ ಪ್ರಕಾಶಕ್ಕೆ ಅಂಧಕಾರ ಹ್ಯಾಂಗೆ ಲೇಪವಿಲ್ಲವೋ ಹಾಂಗೇನೆ ಪರಮಾತ್ಮ ಸಚ್ಚಿದಾನಂದ ಶರೀರವುಳ್ಳವನು ಎಂತ ತಾತ್ಪರ್ಯ. ॥೩೮॥

## ೨. ಭಾವಪ್ರಕಾಶಿಕೆ

ಪರಮ ಉತ್ತಮವಾದ ಶುದ್ಧ ರೇಷ್ಮೆಯ ವಸ್ತ್ರವನ್ನು ಪರೀಕ್ಷಿಸುವುದಕ್ಕಾಗಿ ಕೆಸರಿನೊಳಗದ್ದಿದರೂ ಆ ವಸ್ತ್ರಕ್ಕೆ ಕೆಸರು ಹೇಗೆ ಹತ್ತದೊ ಹಾಗೆ ಪರಮಾತ್ಮನು ತ್ರಿಗುಣಬದ್ಧರಾದ ಸಕಲ ಪ್ರಾಣಿಗಳಲ್ಲಿದ್ದರೂ ಗುಣಬದ್ಧನಾಗದೆ ನಿರ್ಲಿಪ್ತನಾಗಿ ಇರುವನು. ಚಿದಾನಂದಸ್ವರೂಪನಾದ ಪರಮಾತ್ಮನನ್ನು ಈ ಪ್ರಾಕೃತಗುಣಗಳು ಬಂಧಿಸುವವೇ ? ಎಂದಿಗೂ ಇಲ್ಲವೆಂಬ ತಾತ್ಪರ್ಯ.

## ೩. ಭಾವದರ್ಪಣ

ಎಲ್ಲಿದ್ದಾಗ್ಯೂ ಪರಮಾತ್ಮನು ನಿರ್ಲಿಪ್ತನೆಂದು ದೃಷ್ಟಾಂತದಿಂದ ತಿಳಿಸಿಕೊಡುತ್ತಾರೆ. ॥ ಬುದ್ಧಿಪೂರ್ವಕೇತಿ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಸರ್ವಗತಸ್ಯಾಪಿ ಅಲೇಪಂ ದೃಷ್ಟಾಂತೇನ ಆಹ–ಬುದ್ಧಿಪೂರ್ವಕ ಇತಿ ॥ ಊರ್ಣಾಂಬರ–ಶಹಲು (ಶಾಲು) ॥ ೩೮ ॥

### ಕನ್ನಡಾರ್ಥ

ಪರಮಾತ್ಮನು ಸರ್ವಗತನಾಗಿದ್ದರೂ ಎಲ್ಲಕಡೆಗಳಲ್ಲಿ ಇರುತ್ತಿದ್ದರೂ ಆಯಾ ವಸ್ತುಗಳಲ್ಲಿರುವ ದೋಷಗಳು ಪರಮಾತ್ಮನ ರೂಪಗಳಿಗೆ ಸಂಬಂಧಿಸುವುದಿಲ್ಲ, ದೋಷಲೇಪವಿಲ್ಲ ಎಂಬುದನ್ನು ದೃಷ್ಟಾಂತದಿಂದ ತಿಳಿಯಪಡಿಸುತ್ತಾರೆ– ಬುದ್ಧಿಪೂರ್ವಕ ಎಂಬ ಪದ್ಯದಿಂದ.

ಪರಿಶುದ್ಧವಾದ ಉತ್ತಮ ಜಾತಿಯ ಉಣ್ಣೆಯ ಶಾಲನ್ನು ಕೆಸರಿನಲ್ಲಿ ಅದ್ದಿದರೂ ಸಹ ಆ ಕೊಳೆಯು ಉಣ್ಣೆಗೆ ಹತ್ತುವುದಿಲ್ಲ, ಹೊಲಸಾಗುವುದಿಲ್ಲ. ಅದರಂತೆ ಪರಮಾತ್ಮನು ಸರ್ವಜೀವರಲ್ಲಿ ಉಚ್ಚ ನೀಚ ಜಡಗಳಲ್ಲಿ ಇರುತ್ತಿದ್ದರೂ ಆಯಾ ಸತ್ವಾದಿ ಗುಣದೋಷಗಳು ಅವನಿಗೆ ಅಂಟಿಕೊಳ್ಳುವುದಿಲ್ಲ. ॥ ೩೮ ॥

### ೫. ಶ್ರೀಗುರುಹೃದಯಪ್ರಕಾಶಿಕೆ

ದೇಹಾದಿಗಳಿದ್ದರೂ ದೇವರ ರೂಪ ನಿರ್ದೋಷವೆ ಸರಿ ಎಂದು ತಿಳಿಸುತ್ತಾರೆ, ಬುದ್ಧಿ ಎಂದು. ಮೊದಲು ನಾಲ್ಕು ಪದ್ಯದಲ್ಲಿ ಪೂರ್ಣಾಂಬರವೆಂಬ ಶುದ್ಧಸಕಲಾತಿಯನ್ನು (ಕಂಬಳಿಯನ್ನು) ಪಂಕವೆಂಬ ಕೆಸರಿನಲ್ಲಿ ಅದ್ದಿ ತೆಗೆದರೂ ಅಂಟದಂತೆ ಇರುವ ಹಾಗೆ, ಪದ್ಮನಾಭದೇವರು ಸರ್ವಜೀವರು ಮೊದಲಾದ ಪ್ರಪಂಚದಲ್ಲಿದ್ದರೂ ಸತ್ವಾದಿ ಗುಣತ್ರಯಗಳಿಂದ ಬದ್ಧನಾಗುವುದಿಲ್ಲ. ಆದ್ದರಿಂದ ನಿತ್ಯ ಸ್ವರೂಪಸುಖಜ್ಞಾನೈಕರೂಪನು. ॥ ೩೮ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅತ್ಯಂತ ಶ್ರೇಷ್ಠಗುಣವುಳ್ಳದ ಕಂಬಳಿಯನ್ನು (ಉಣ್ಣೆಯ ವಸ್ತ್ರ) ಕೆಸರಿನಲ್ಲಿ ಚೆನ್ನಾಗಿ ಅದ್ದಿ ಹೊರಗೆ ತೆಗೆದಾಗ, ಕಂಬಳಿಯ ನೂಲುಗಳು ಅತ್ಯಂತ

ನಯವಾಗಿ, ನುಣುಪಾಗಿರುವ ಕಾರಣದಿಂದ ಕಂಬಳಿಯು ಕೆಸರಿನಿಂದ ಲಿಪ್ತವಾಗುವುದಿಲ್ಲ.

ಜೀವಾಂತರ್ಯಾಮಿಯಾದ ಶ್ರೀಶನು ಅನಾದಿಕರ್ಮದಲ್ಲಿ ಅಂತರ್ಗತನಾಗಿದ್ದು, ಸಕಲಕರ್ಮಗಳನ್ನೂ ಜೀವರ ಪರವಾಗಿ ತಾನೇ ಮಾಡಿ, ತತ್ತ್ವೇಶರ ದ್ವಾರಾ ಮಾಡಿಸಿ, ಜೀವರಿಗೆ ಕರ್ಮಫಲರೂಪವಾದ ಅನುಭವವನ್ನು ತಂದು ಕೊಡುವನು. ಸತ್ತ್ವಗುಣ ಪ್ರವರ್ತಕನಾಗಿ, ಪುಣ್ಯಕರ್ಮಗಳನ್ನು ಮಾಡಿಸುವನು. ರಜೋಗುಣ ಪ್ರವರ್ತಕನಾಗಿ, ಮಿಶ್ರ ಕರ್ಮಗಳನ್ನು ಮಾಡಿ ಮಾಡಿಸುವನು. ತಮೋಗುಣ ಪ್ರವರ್ತಕನಾಗಿ, ಪಾಪ ಕಾರ್ಯಗಳನ್ನು ಮಾಡಿ, ತತ್ತ್ವದೈತ್ಯರದ್ವಾರಾ ಮಾಡಿಸುವನು. ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾಭಿವ್ಯಕ್ತಿ ಪ್ರಾಕೃತಗುಣಗಳಲ್ಲಿ ಅಂತರ್ಗತನಾಗಿದ್ದರೂ, ಆ ಗುಣಗಳ ಸಂಬಂಧ ಪರಮಾತ್ಮನಿಗಿಲ್ಲ. ಜೀವನು ತ್ರಿಗುಣ ಬದ್ಧನು. ಊರ್ಣಾಂಬರದಂತೆ ಶ್ರೀಶನು ನಿರ್ಲಿಪ್ತನು. ॥ ೩೮ ॥

## ಪದ್ಯ ೩೯

**ಮೂಲ**

ಸಕಲ ದೋಷವಿದೂರ ಶಶಿ ಪಾ ।
ವಕ ಸಹಸ್ರಾನಂತಸೂರ್ಯ ।
ಪ್ರಕರಸನ್ನಿಭಗಾತ್ರ ಲಕುಮೀಕಳತ್ರ ಸುರಮಿತ್ರ ॥
ಋಖನಸಾಂಡದೊಳಿಪ್ಪ ಬ್ರಹ್ಮಾ ।
ದ್ಯಖಿಳ ಚೇತನಗಣಕೆ ತಾನೆ ।
ಸಖನೆನಿಸಿಕೊಂಡಕುಟಿಲಾತ್ಮಕನಿಪ್ಪನವರಂತೆ ॥ ೩೯ ॥

**ಅವತರಣಿಕೆ**

ಸರ್ವೋತ್ತಮನಾದ ಶ್ರೀಪರಮಾತ್ಮನು ಬ್ರಹ್ಮಾಂಡದಲ್ಲಿರುವ ಸಕಲ ಜೀವ ರಾಶಿಗಳ ಆಪ್ತಸಖನಾಗಿದ್ದು, ಅವರವರ ಯೋಗ್ಯತಾನುಸಾರ ಸಂರಕ್ಷಿಸುವನೆಂದು ಹೇಳುತ್ತಾರೆ.

**ಪ್ರತಿಪದಾರ್ಥ**

**ಸಕಲ ದೋಷವಿದೂರ**=ಸಮಸ್ತವಾದ ದೋಷಗಳಿಂದ ರಹಿತನಾದ, **ಶಶಿ**=ಚಂದ್ರ. **ಪಾವಕ**=ಅಗ್ನಿ, **ಸೂರ್ಯ**=ಸೂರ್ಯನು, **ಸಹಸ್ರಾನಂತ** =ಅನಂತ ಸಹಸ್ರಸಂಖ್ಯಾಕವಾದ, **ಪ್ರಕರ**=ಅತ್ಯಂತ ಪ್ರಕಾಶಮಾನವಾದ, **ಸನ್ನಿಭ**=ಕಾಂತಿಯಿಂದ ಯುಕ್ತವಾದ, **ಗಾತ್ರ**=ಶರೀರವುಳ್ಳ, **ಲಕುಮಿ ಕಳತ್ರ**=ಲಕ್ಷ್ಮೀಪತಿಯಾದ. **ಸುರಮಿತ್ರ**=ಬ್ರಹ್ಮಾದಿ ಸಕಲ ದೇವತಾವರ್ಗಕ್ಕೆ ಆಪ್ತಸ್ನೇಹಿತನಾದ ಶ್ರೀಪರಮಾತ್ಮನು, **ವಿಖನಸಾಂಡದೊಳು**=ಬ್ರಹ್ಮಾಂಡ ದಲ್ಲಿ, **ಇಪ್ಪ**=ವಿದ್ಯಮಾನರಾಗಿರುವ, **ಅಖಿಳ**=ಸಮಸ್ತ, **ಚೇತನಗಣಕೆ**= ಭಕ್ತಜನಸಂದೋಹಕ್ಕೆ, **ತಾನೆ**=ಸ್ವಯಂ ಬಿಂಬರೂಪಿಯಾಗಿ, **ಸಖನೆನಿಸಿ ಕೊಂಡು**=ಆಪತ್ತಿಗೆ ಒದಗುವ ಸ್ನೇಹಿತನಂತೆ ಅವಿಯೋಗಿಯಾಗಿ, ಜೀವರನ್ನು ಎಡಬಿಡದೆ, **ಅಕುಟಿಲಾತ್ಮಕ**=ಕುಟಿಲರಹಿತನಾಗಿ (ದೋಷವಿದೂರ), **ಇಪ್ಪನು ಅವರಂತೆ**=ಜೀವಾಕಾರನಾಗಿ, ಜೀವಾಂತರ್ಯಾಮಿಯಾಗಿ, ಜೀವರಿಂದ ಅತ್ಯಂತ ವಿಲಕ್ಷಣನಾಗಿ ಇದ್ದಾನೆ. ॥ ೩೯ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಜೀವಾಂತರ್ಗತ ಪರಮಾತ್ಮನ ವಿಚಾರ ಹೇಳತಾರೆ.

ಜೀವನಾದವ ಸಕಲದೋಷಗಳಿಂದ ಯುಕ್ತವಾದ ಲಿಂಗದೇಹದಿಂದ ಬಾಧಿತ ನಾಗಿ ವಿಕಾರ ಐದತಕ್ಕವ. ತದ್ಗತ ಪರಮಾತ್ಮ ಇಂಥಾ ಸಕಲದೋಷರೂಪವಾದ

ಲಿಂಗದೇಹದಿಂದ ವಿಶೇಷಾಕಾರದಿಂದ ದೂರನಾದವ ಮತ್ತು ಜೀವಾಂತರ್ಗತನಾದ ಕಾಲಕ್ಕೂ, ಜೀವಗೆ ಬಂಧಕರೂಪವಾದ ಲಿಂಗದೇಹದಿಂದ ತಾನು ಬಂಧಿತನಲ್ಲದೆ ದೂರನಾದವನು. ಚಂದ್ರನು, ಅಗ್ನಿ, ಸೂರ್ಯನು, ಲೋಕದೊಳಗೆ ಅತಿಶಯವಾದ ಕಾಂತಿಗೆ ದೃಷ್ಟಾಂತ ಇವರು 3 ಮಂದಿಯೆ ಹೊರತು ಮತ್ತೂ ಪ್ರಕಾಶಮಾನವಾದ ವಸ್ತುವು ಇನ್ನು ದಾವುದೂ ಇಲ್ಲ. ಇವರ ಅನುಸರಿಸೇ ಪ್ರಕಾಶವು. ಇವರು ಮೂರು ಮಂದಿ ತಾರತಮ್ಯಾನುಸಾರ ಕಾಂತಿಯಲ್ಲಿ ಶ್ರೇಷ್ಠರು. ಅನಂತವಾದ ಇಂಥಾ ಸೂರ್ಯ–ಚಂದ್ರ–ಅಗ್ನಿಗಳ ಕಾಂತಿ ಏಕಕಾಲವಚ್ಛೇದೇನ ಒಂದೇ ಕಡೆ ಸೇರಿದರೆ ಎಷ್ಟು ಕಾಂತಿ ಇರೋದೋ, ಅತೋಪ್ಯಧಿಕವಾದ ಕಾಂತಿಯುಕ್ತವಾದ ಶರೀರ ಉಳ್ಳವನಾಗಿ, ಪತ್ನಿಯಾದ ಲಕ್ಷ್ಮೀದೇವಿಯರಿಂದ ಸಹಿತನಾಗಿ ಸರ್ವರಿಗೆ ಬಿಂಬನಾಗಿದ್ದಾನೆ. ಸುರಶಬ್ದದಿಂದ ಬ್ರಹ್ಮಾದಿ ತೃಣಾಂತ ಭಗವದ್ಭಕ್ತರಾದ ಮುಕ್ತಿಯೋಗ್ಯರಿಗೆ ಸ್ನೇಹಿತನಾದವ. ವಿಖಸನ ಎಂದರೆ ಬ್ರಹ್ಮದೇವರು. ಇವರ ಅಂಡ ಸಾಂಕೇತವಾದ ಎಂದರೆ, ಬ್ರಹ್ಮಾಂಡ ಎಂತ ಅರ್ಥ. ಈ ಬ್ರಹ್ಮಾಂಡದೊಳಿಪ್ಪ ಬ್ರಹ್ಮದೇವರೇ ಆದಿಯಾಗಿ ಇರತಕ್ಕ ಸಮಸ್ತವಾದ ಭಕ್ತರಾದ ಜೀವಸಮೂಹಗಳಿಗೆ ಪರಮಾತ್ಮನಾದ ತಾನೇನೇ ಸ್ನೇಹಿತ ಎಂತ ಕರೆಸಿಕೊಂಡು ಇರೋವನಾಗಿದ್ದಾನೆ. ಎಂದರೆ, ದಾವ ಪ್ರಾಣಿಗಳು ಸ್ವರೂಪಸ್ವಭಾವದಲ್ಲಿ ಪರಮಾತ್ಮ ತಮಗೆ ಸಖನೆಂದು ತಿಳಿದಿದ್ದಾರೋ ಅವರಿಗೆ, ಸಖನೆನಿಸಿಕೊಂಡು ಇರೋವನಾಗಿದ್ದಾನೆ. ತದನ್ಯಸ್ವಭಾವರಾದ ಮಿಶ್ರಜೀವರು, ತಮೋಯೋಗ್ಯರಿಗೆ ದ್ವೇಷಿ ಎಂತ ಕರೆಸಿಕೊಂಡು ಬಿಂಬನಾಗಿದ್ದಾನೆ. ದ್ವೇಷರೂಪವಾದ ಸ್ವಭಾವದವರಿಗೆ ದೂರನಾದವನು. ತದನ್ಯರಾದ ಮುಕ್ತಿಯೋಗ್ಯರಿಗೆ ಕುಟಿಲರಹಿತನಾಗಿ ಇರುವನು. ಅವರವರ ಅನಾದಿಯೋಗ್ಯತಾ ಅನುಸರಿಸಿ ಇರೋವನೆ ಹೊರತು, ದೇವರಲ್ಲಿ ದ್ವೇಷಾಸೂಯ ಸ್ನೇಹವಿಲ್ಲ. ಈಶ್ವರನಿಂದ ರಚಿತವಲ್ಲದ ಜೀವರ ಅನಾದಿಸ್ವರೂಪಯೋಗ್ಯತಾ ಅನುಸರಿಸಿ, ಅವರಂತೆ ಪರಮಾತ್ಮ ಇದ್ದಾನೆಂತ ತಾತ್ಪರ್ಯ ॥ ೩೯ ॥

## ೨. ಭಾವಪ್ರಕಾಶಿಕೆ

ಶ್ರೀಹರಿಯು, ಜನನ ಮರಣ ಮೊದಲಾದ ಯಾವ ದೋಷವೂ ಇಲ್ಲ

ದವನು. ಅನೇಕ ಸಹಸ್ರ ಚಂದ್ರ, ಅಗ್ನಿ, ಸೂರ್ಯರಂತೆ ಪ್ರಕಾಶಿಸುವ ದೇಹ ಕಾಂತಿಯುಳ್ಳವನು. ಚಂದ್ರ, ಅಗ್ನಿ, ಸೂರ್ಯ ಹೀಗೆ ಮೂರು ಉಪಮಾನ ಕೊಟ್ಟಿರುವರು. ಇದರ ಪ್ರಯೋಜನವೇನೆಂದರೆ, ದೃಷ್ಟಾಂತದಲ್ಲಿ ಸರ್ವಸಾಮ್ಯ ಕೂಡುವುದಿಲ್ಲ. ಒಂದೊಂದು ಭಾಗದಲ್ಲಿ ಒಂದೊಂದು ಉಪದಾನವನ್ನು ತೆಗೆದು ಕೊಳ್ಳಬೇಕು. ಅನಂತ ಚಂದ್ರನಂತೆ ಎಂಬ ಉಪಮಾನವನ್ನು ಆಹ್ಲಾದ ವಿಷಯ ದಲ್ಲಿ ತೆಗೆದುಕೊಳ್ಳಬೇಕು. ಚಂದ್ರನಂತೆ ಆಹ್ಲಾದ ಗುಣವು, ಸೂರ್ಯನಂತೆ ಪ್ರಕಾಶವು. ಪಾಪಗಳನ್ನು ದಹನಮಾಡುವ ವಿಷಯದಲ್ಲಿ ಅಗ್ನಿಯಂತೆಯೂ ಇರುವ ನೆಂದು ಭಾವಿಸಿ ಮೂರು ಉಪಮಾನಗಳನ್ನು ಕೊಟ್ಟಿರುವರು. ಮಿಗಲಾದ ವಿಶೇಷಣಗಳು ವಿಷದವಾಗಿರುವವು. ಇಂತಹ ಸ್ವಾಮಿಯು ಬ್ರಹ್ಮಾಂಡದೊಳಗಿರುವ, ಬ್ರಹ್ಮಾದಿ ಸಕಲ ಚೇತನರಾಶಿಗಳಿಗೂ ಸಖನೆಂದೆನಿಸಿ ಕೃತ್ರಿಮವಿಲ್ಲದೆ ಅವರಂತೆ ಅವರಲ್ಲಿರುವನು. ॥ ೩೯ ॥

**೩. ಭಾವದರ್ಪಣ**

॥ ಸಕಲೇತಿ ॥ ವಿಖನಸಾಂಡ–ಬ್ರಹ್ಮಾಂಡ. ವಿಖನಸಾರ್ಚಿತಮಿತಿ ಭಾಗವತೋಕ್ತೇಃ ॥ ೩೯ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಸಕಲ–ಇತಿ ॥ ಪ್ರಕರ–ಸಮೂಹ । ಕಳತ್ರ–ಭಾರ್ಯಾ । ವಿಖನಸ–ಬ್ರಹ್ಮಾ ॥ ಅಕುಟಿಲ–ಅವಕ್ರ ॥ ೩೯ ॥

**ಕನ್ನಡಾರ್ಥ**

ಸೂರ್ಯಪ್ರಕರಸನ್ನಿಭಗಾತ್ರ–ಇಲ್ಲಿ ಪ್ರಕರ ಶಬ್ದಕ್ಕೆ ಸಮೂಹವೆಂದು ಅರ್ಥ. ಕಳತ್ರ-ಹೆಂಡತಿ-ಭಾರ್ಯಾ. ವಿಖಸನ-ಬ್ರಹ್ಮದೇವನು (ಚತುರ್ಮುಖನು) ಅಕುಟಿಲ-ವಕ್ರನಲ್ಲದವನು, ನಿಷ್ಕಪಟ–ಶುದ್ಧಸ್ವಭಾವದವನು. ॥ ೩೯ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಹೀಗೆ ಸರ್ವದೋಷದೂರನು ಶಶಿ ಎಂಬ ಚಂದ್ರ, ಪಾವಕನೆಂಬ ಅಗ್ನಿ,

ಸೂರ್ಯ ಇವರುಗಳ ಸಹಸ್ರಪ್ರಕರ ಎಂದರೆ, ಅನಂತಸಮೂಹಕ್ಕೆ ಸದೃಶ ಅಪ್ರಾಕೃತ ತೇಜಶ್ಶರೀರನು, ದೇವತೆಗಳಿಗೆ ಮಿತ್ರನು ಆದ ಲಕ್ಷ್ಮೀಪತಿಯು, ವಿಖನಸರೆಂಬ ಪರಸ್ಪರ ತತ್ತ್ವಗಳ ಮೇಳನೇ ಕೂಡಿದ ದೇವತೆಗಳಿಂದ ಹುಟ್ಟಿದ ಬ್ರಹ್ಮಾಂಡದೊಳಗಿರುವ ಬ್ರಹ್ಮಾದಿ ಸಮಸ್ತ ಜೀವಗಣಕ್ಕೂ ತಾನೇ ಸ್ನೇಹಿತನಾಗಿ ನಿಷ್ಕಪಟದಿಂದ ಯೋಗ್ಯತಾನುಸಾರ ಅವರವರಂತೆ ಇರುವನು.

**ತತಸ್ತೇನಾನುವಿದ್ಧೇಭ್ಯೋ ತತ್ತ್ವೇಭ್ಯೋಂಡಮಚೇತನಂ** ಎಂಬ ಭಾಗ **ವತಾರ್ಥ** ವಿವರಿಸಲ್ಪಟ್ಟಿತು. ॥ ೩೯ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನು ಸಮಸ್ತ ವಿಧವಾದ ದೋಷಗಳಿಂದ ರಹಿತನಾಗಿದ್ದಾನೆ. ಜೀವರಿಗೆ ಜನನ ಮರಣಾದಿ ದೋಷಗಳಿವೆ. ಸಕಲತ್ರಿವಿಧಜೀವರು ಗುಣತ್ರಯಗಳಿಂದ ಬದ್ಧರಾಗಿದ್ದಾರೆ. ಆದರೆ ಶ್ರೀಶನು ದೇಶಕಾಲಗುಣಾತೀತನು. ಜೀವಾಂತರ್ಯಾಮಿಯಾಗಿದ್ದರೂ, ಜೀವರ ಅನಾದಿಕರ್ಮದಿಂದಲಾಗಲೀ, ಗುಣತ್ರಯಗಳಿಂದಲಾಗಲೀ ಬದ್ಧನಲ್ಲ. ಇದೇ ಜೀವೇಶರಿಗಿರುವ ಅನಾದಿನಿತ್ಯವಾದ ಭೇದವು.

ಪ್ರಕೃತಿಯಲ್ಲಿ ಪ್ರಕಾಶದ ಮೂಲಗಳು ಮುಖ್ಯವಾಗಿ, ಸೂರ್ಯ, ಚಂದ್ರ ಮತ್ತು ಅಗ್ನಿ. ಅಂತಹ ಅನಂತಕೋಟಿ ಸೂರ್ಯರು, ಚಂದ್ರರು, ಅಗ್ನಿಗಳು ಏಕಕಾಲದಲ್ಲಿ ಏಕದೇಶದಲ್ಲಿದ್ದರೆ, ಅವರ ಸಮೂಹದಿಂದ ಉತ್ಪತ್ತಿಯಾಗುವ ಪ್ರಕಾಶವು ನಿತ್ಯಾನಂದಸ್ವರೂಪನಾದ ಶ್ರೀಪರಮಾತ್ಮನ ದೇಹದ ಪ್ರಕಾಶದ ಮುಂದೆ ಏನೇನೂ ಇಲ್ಲ. ಇಂತಹ ಅಸದೃಶ, ಅಪರಿಮಿತ ದೇಹಕಾಂತಿಯುಳ್ಳವನು ಶ್ರೀಪರಮಾತ್ಮನು. ಸಾಮಾನ್ಯವಾಗಿ ರೂಢಿಯಲ್ಲಿ ಶ್ರೀಶನು ಅನಂತಕೋಟಿ ಸೂರ್ಯ ಪ್ರಕಾಶನೆಂದು ಹೇಳುತ್ತೇವೆ. ಈ ಉಪಮಾನ ಕೇವಲ ಔಪಚಾರಿಕ. ಈ ಉಪಮಾನದಲ್ಲಿ ಸೂರ್ಯನ ಅತಿಪ್ರಕಾಶ, ಚಂದ್ರನ ಕಾಂತಿಯ ಆಹ್ಲಾದತೆ, ಅಗ್ನಿಯಂತೆ ಸಕಲ ಪಾಪಗಳನ್ನು ಸುಡುವ ಕ್ರಿಯೆ ಈ ಗುಣವಿಶೇಷಗಳನ್ನು ತೆಗೆದುಕೊಳ್ಳಬೇಕು.

ಶ್ರೀಪರಮಾತ್ಮನು ಬ್ರಹ್ಮಾದಿ ಸಕಲದೇವತೆಗಳಿಗೆ ಅತ್ಯಂತಪ್ರಿಯನು. ಅವರಿಗೆ ಯಾವಾಗಲೂ ಬೆಂಬಲಿಗನಾಗಿದ್ದು, ಆಪ್ತಮಿತ್ರನಂತೆ ಸಂರಕ್ಷಿಸುತ್ತಿರುವನು.

ಈ ಬ್ರಹ್ಮಾಂಡದಲ್ಲಿರುವ ಸಮಸ್ತ ಜೀವರಾಶಿಗಳಲ್ಲಿ, ಸಾತ್ವಿಕಸ್ವರೂಪವುಳ್ಳ ತನ್ನ ಅಂತರಂಗಭಕ್ತರ ಆಪ್ತಮಿತ್ರನೆನಿಸಿಕೊಂಡು, ಅವರನ್ನು ಸಕಲ ದುರಿತಗಳಿಂದ ಕಾಪಾಡುವನು. ಅವರವರ ಯೋಗ್ಯತಾನುಸಾರ ಸಾಧನಗಳನ್ನು ಮಾಡಿ ಮಾಡಿಸುತ್ತಾ, ಅವರ ಸಹಜವಾದ ಸ್ವರೂಪಾನಂದರೂಪವಾದ ಮುಕ್ತಿಸುಖವನ್ನು ಕರುಣಿಸುವನು. ಕುಟಿಲಸ್ವಭಾವವುಳ್ಳ ಜೀವರಲ್ಲಿ, ಅವರಂತೆ ಅಂತರ್ಯಾಮಿರೂಪದಿಂದ ಬಿಂಬನಾಗಿದ್ದರೂ ಕುಟಿಲರಹಿತನು ಎಂದು ಶ್ರೀಪರಮಾತ್ಮನ ಶುಭಗುಣಗಾನಮಾಡುತ್ತಾರೆ. ॥ ೩೯ ॥

## ಪದ್ಯ ೪೦

**ಮೂಲ**

**ದೇಶಭೇದಗಳಲ್ಲಿ ಇಪ್ಪಾ ।**
**ಕಾಶದೋಪಾದಿಯಲಿ ಚೇತನ ।**
**ರಾಶಿಯೊಳು ನೆಲೆಸಿಪ್ಪನವ್ಯವಧಾನದಲಿ ನಿರುತ ॥**
**ಶ್ರೀಸಹಿತ ಸರ್ವತ್ರ ನಿರವಾ ।**
**ಕಾಶ ಕೊಡುವಂದದಲಿ ಕೊಡುತ ನಿ ।**
**ರಾಶೆಯಲಿ ಸರ್ವಾಂತರಾತ್ಮಕ ಶೋಭಿಸುವ ಸುಖದ ॥ ೪೦ ॥**

**ಅವತರಣಿಕೆ**

ಸರ್ವಾಂತರಾತ್ಮಕನಾದ ಆ ಸರ್ವೇಶನು ಸರ್ವತ್ರ ಶೋಭಿಸುತ್ತಾ, ತನ್ನನ್ನು ಆರಾಧಿಸುವ ಭಕ್ತರಿಗೆ ನಿತ್ಯಾನಂದರೂಪವಾದ ಸದ್ಗತಿಯನ್ನೀಯುವನು ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ :–**

**ದೇಶಭೇದಗಳಲ್ಲಿ** = ಭಿನ್ನಭಿನ್ನವಾದ ಪ್ರದೇಶಗಳಲ್ಲಿ, **ಇಪ್ಪ** = ವ್ಯಾಪಿಸಿ ಕೊಂಡಿರುವ, **ಆಕಾಶದೋಪಾದಿಯಲಿ** = ಆಕಾಶದಂತೆ, **ಚೇತನರಾಶಿಯೊಳು** = ತ್ರಿವಿಧರಾದ ಸಕಲ ಜೀವವರ್ಗದಲ್ಲಿ, **ನಿರುತ** = ಯಾವಾಗಲೂ (ಜೀವರನ್ನು ಎಡಬಿಡದೆ ನಿತ್ಯಾವಿಯೋಗಿಯಾಗಿ) **ಅವ್ಯವಧಾನದಲಿ** = ವಿಯೋಗರಹಿತನಾಗಿ, **ನೆಲೆಸಿಪ್ಪ** = ಬಿಂಬರೂಪಿಯಾಗಿ ಜೀವರಲ್ಲಿ ವಿದ್ಯಮಾನನಾಗಿದ್ದಾನೆ. **ಶ್ರೀಸಹಿತ** ಶ್ರೀರಮಾಸಹಿತನಾಗಿ, **ಸರ್ವತ್ರ** = ಸಕಲಸ್ಥಳಗಳಲ್ಲಿಯೂ, **ನಿರವಾಕಾಶ** = ಅವ ಕಾಶರಹಿತನಾಗಿ, ಅಂದರೆ ಪೂರ್ಣವ್ಯಾಪ್ತನಾಗಿ, **ಕೊಡುವಂದದಲಿ** = ನೀಡು ವಂತೆ, **ಕೊಡುತ** = ಭಕ್ತರ ಸಕಲಾಭೀಷ್ಟಗಳನ್ನು ಸಲ್ಲಿಸುತ್ತಾ, **ನಿರಾಶೆಯಲಿ** = ಸ್ವಪ್ರಯೋಜನ ರಹಿತನಾಗಿ (ಇದರಿಂದ ಶ್ರೀಪರಮಾತ್ಮನಿಗೆ ಪ್ರಯೋಜನವೇನೂ ಇಲ್ಲ), **ಸರ್ವಾಂತರಾತ್ಮಕ** = ಸರ್ವಚೇತನ ಬಿಂಬರೂಪಿಯಾದ ಅಂತರ್ಯಾ ಮಿಯು, **ಶೋಭಿಸುವ** = ಪರಿಶೋಭಿಸುವನು. **ಸುಖದ** = ಲಿಂಗಭಂಗಾನಂತರ ಭಕ್ತರಿಗೆ ಸುಖಗತಿಪ್ರದನು ॥ ೪೦ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂರ್ವೋಕ್ತ ಜೀವಾಂತರ್ಗತ ವಿಚಾರ ಹೇಳುತಾರೆ.

ಲೋಕದಲ್ಲಿ ಭಿನ್ನಭಿನ್ನಗಳಾದ ಪರಸ್ಪರ ಭೇದಯುಕ್ತಗಳಾದ, ಸ್ಥೂಲ ಸೂಕ್ಷ್ಮಗಳಾದ, ಗರ್ಭದಲ್ಲಿ ಅವಕಾಶಯುಕ್ತಗಳಾದ ಘಟಾದಿಗಳು ತಂಬಿಗಿ ಮೊದ ಲಾದ ಅನೇಕಗಳು ಇರೋವಾಗಿ ಅವೆ. ದೇಶಶಬ್ದ ಪ್ರಪಂಚಪರವು. ಇಂಥಾ ಭೇದಯುಕ್ತವಾದ ಘಟಾದಿಗಳಲ್ಲಿ ಅದರದರ ಯೋಗ್ಯತಾನುಸಾರ ತದಾಕಾರ ದಿಂದ ಆಕಾಶ ಪೂರ್ಣವಾಗಿ ಅದೆ. ಘಟಾದಿಗಳಿಗೆ ಭೇದವಿದ್ದಂತೆ ತದ್ಗತ ಆಕಾ ಶಕ್ಕೆ ಭೇದವಿಲ್ಲ. ಈ ಘಟಾದಿಗಳಲ್ಲಿ ಇರತಕ್ಕ ಆಕಾಶದಂತೆ, ಘಟಾದಿಗಳಿಗೆ ಸದೃಶ ವಾದ ಪ್ರಾಣಿಗಳಿಗೆ ಸದೃಶವಾದ ಪ್ರಾಣಿಗಳ ಸಮೂಹಗಳಲ್ಲಿ ಆಕಾಶಸದೃಶನಾದ

ಪರಮಾತ್ಮ ಆವಾಸನಾಗಿ ತದಾಕಾರದಿಂದ ಬಿಂಬನಾಗಿ ಇದ್ದಾನೆ. ಪರಸ್ಪರ ಅಧಿಷ್ಠಾನರಾದ ಜೀವರಿಗೆ ಭೇದವಿದ್ದಂತೆ, ಅಂತರ್ಗತರೂಪಗಳಿಗೆ ಪರಸ್ಪರ ಭೇದವಿಲ್ಲ, ಆಕಾಶವತ್ ಎಂತ ತಾತ್ಪರ್ಯ. ಜೀವಾಂತರ್ಗತಬಿಂಬ ಪ್ರಳಯಕಾಲದಲ್ಲಿ ಬಿಟ್ಟು ಮೂಲದಲ್ಲಿ ಸೇರೋಣ, ಸೃಷ್ಟಿಕಾಲದಲ್ಲಿ ಪ್ರವೇಶಮಾಡೋಣ ಇಂಥಾ ವ್ಯವಧಾನ ಉಂಟೇ ಎಂದರೆ ಇಲ್ಲ. ಸದಾ ಜೀವನ್ನ ಬಿಟ್ಟುಹೋಗದೆ ಅವಿಯೋಗನಾಗಿ, ಅನಾದ್ಯನಂತ ಕಾಲಕ್ಕೂ ತನ್ನ ಪತ್ನಿಯಾದ ಶ್ರೀರಮಾದೇವಿಯರಿಂದ ಸಹಿತ ಮುಕ್ತ ಅಮುಕ್ತ, ಸೃಜ್ಯ ಅಸೃಜ್ಯ ಇತ್ಯಾದಿ ಸರ್ವತ್ರ ವಿದ್ಯಮಾನರಾದ ಪ್ರಾಣಿಗಳಲ್ಲಿ, ಹಾಂಗೆ ತದನ್ಯ ಸರ್ವತ್ರದಲ್ಲಿ ಅವಕಾಶರಹಿತನಾಗಿ, ಆಕಾಶದೋಪಾದಿಯಲ್ಲಿ ಪರಿಪೂರ್ಣ ವ್ಯಾಪ್ತನಾಗಿದ್ದಾನೆ. ಇವನ ವ್ಯಾಪ್ತಿರಹಿತಪ್ರದೇಶವೇ ಇಲ್ಲ ಎಂತ ಅರ್ಥ. ಅಧಿಕಾರಿಗಳು ತಮ್ಮ ತಮ್ಮ ಮನಸ್ಸನ್ನು ಅನಾದಿಸ್ವರೂಪ ಸ್ವಭಾವವನ್ನು ಅನುಸರಿಸಿ ಹ್ಯಾಂಗೆ ಹ್ಯಾಂಗೆ ಕೊಡತಾರೋ, ಅದರೋಪಾದಿಯಲ್ಲಿ, ಜ್ಞಾನ ಭಕ್ತಿ ವೈರಾಗ್ಯ, ಇನ್ನೂ ಐಶ್ವರ್ಯ, ತನ್ನ ಸಂದರ್ಶನ ಇವುಗಳ ಕೊಡತಾ ಎಂದರೆ, ಅಸ್ವತಂತ್ರನಾದ ಜೀವಗೆ ಸ್ವರೂಪಯೋಗ್ಯತಾ ಅನುಸರಿಸಿನ್ನೂ, ಅನಾದಿಕರ್ಮವನ್ನನುಸರಿಸಿನ್ನೂ ಬುದ್ಧಿಗಳ ವ್ಯಕ್ತಮಾಡಿ ಕೊಡುತ್ತಾ ಅದನನುಸರಿಸಿ ತನ್ನ ಸಂದರ್ಶನ ಕೊಡುತ್ತಾ, ತನಗೆ ಸ್ವಪ್ರಯೋಜನರಹಿತನಾಗಿ ಸರ್ವಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿ ಇದ್ದು, ಬಿಂಬರೂಪಿ ಪರಮಾತ್ಮ, ಭಕ್ತರಿಗೆ ಪ್ರತ್ಯಕ್ಷನಾಗಿರುವ, ತದನ್ಯರಿಗೆ ಪ್ರತ್ಯಕ್ಷನಲ್ಲ. ಲಿಂಗಭಂಗಾನಂತರ ತನ್ನ ಭಕ್ತರಿಗೆ ಸುಖಗತಿ ಕೊಡತಕ್ಕವ. ತದನ್ಯರಾದವರಿಗೆ ಲಿಂಗಭಂಗಾನಂತರ ದುಃಖರೂಪವಾದ ಸುಖ ಕೊಡತಕ್ಕವ ॥ ೪೦ ॥

## ೨. ಭಾವಪ್ರಕಾಶಿಕೆ

ತಂಬಿಗೆ, ಗಿಂಡಿ, ತಪ್ಪಲೆ ಮೊದಲಾದುವು ಹೇಗೆ ಒಂದೊಂದೂ ಬೇರೆ ಬೇರೆ ಆಕಾರವಾಗಿರುವವೋ, ಅದೇ ಆಕಾರದಿಂದ ಅದರೊಳಗೆ ನಿರವಕಾಶವಾಗಿ ಆಕಾಶವು ಹೇಗೆ ವ್ಯಾಪಿಸಿಕೊಂಡಿರುವುದೋ, ಹಾಗೆಯೇ ಪರಮಾತ್ಮನು ಜೀವರಾಶಿಗಳ ಸ್ವರೂಪದೇಹಗಳು ಮತ್ತು ಸ್ಥೂಲದೇಹಗಳು ಯಾವ ಯಾವ ಆಕಾರವಾಗಿರುವವೋ ಆಯಾ ಆಕಾರನಾಗಿ ಆಯಾ ದೇಹಗಳಲ್ಲಿ ನಿರವಕಾಶನಾಗಿ ತುಂಬಿ

ರುವನು. ಮತ್ತು ಆಕಾಶವು ಹೇಗೆ ಸಕಲ ಪ್ರಾಣಿಗಳು ವಾಸಮಾಡಲು ಸ್ಥಳಗಳನ್ನು ಕೊಡುವುದೋ, ಅಂದರೆ ತಂಬಿಗೆ ಮೊದಲಾದುವುಗಳಲ್ಲಿ ಆಕಾಶವು ವ್ಯಾಪಿಸಿಕೊಂಡಿದ್ದರೂ ನೀರು ಮೊದಲಾದುವುಗಳಿಗೆ ಸ್ಥಳವನ್ನು ಕೊಡುವುದು. ಅದರಂತೆ ಪರಮಾತ್ಮನು ತಾನು ಲಕ್ಷ್ಮೀಸಮೇತ ಸರ್ವತ್ರ ತುಂಬಿದ್ದರೂ ತನ್ನೊಳಗೆ ಸರ್ವಪ್ರಾಣಿಗಳಿಗೂ ವಾಸಸ್ಥಾನಗಳನ್ನು ಕಲ್ಪಿಸಿಕೊಡುತ್ತಾ ಸರ್ವರಿಗೂ ಸುಖವನ್ನು ಕೊಡುತ್ತಾ, ಸರ್ವಾಂತರಾತ್ಮಕನಾಗಿ ಸರ್ವತ್ರ ವ್ಯಾಪ್ತನಾಗಿ ಶೋಭಿಸುವನು. ॥ ೪೦ ॥

### ೩. ಭಾವದರ್ಪಣ

॥ ದೇಶೇತಿ ॥ ೪೦ ॥

### ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ದೇಶ ಇತಿ ॥ ನೆಲಸಿಪ್ಪ–ಇರುವ ॥ ನಿರವ–ಅವಕಾಶ ॥ ಸುಖದಃ–ಓಂ ॥ ಅದುತ್ತೀರಂ ವರಾಯುಮನ್ಯವೇ ಭುವನ ಇಂದ್ರ ಶಂಹೃದೇ ॥ ಆತ್ವ ಶತ್ರ ವಾಗಹಿನ್ಯಸ್ಥಾನಿ ಚ ಹೂಯುಸೇ ಉಪಮಃ ॥ ಓಂ ॥ ಸುಖವತ್ವಾತ್ ತಥೋಕ್ತಃ॥೪೦॥

### ಕನ್ನಡಾರ್ಥ

ಆಕಾಶದಂತೆ ಸರ್ವಗತನಾದ ವಾಸುದೇವನ ಮಹಿಮೆಯನ್ನು ಬಣ್ಣಿಸುತ್ತಾರೆ–ದೇಶಭೇದ ಎಂಬ ಪದ್ಯದಿಂದ.

ನೆಲಸಿಪ್ಪ–ಇರುವ ॥ ನಿರವ–ಅವಕಾಶ, ಎಡೆ ॥ ಸುಖದ–ಸುಖವನ್ನು ಕೊಡುವವನು ಎಂದು ಬೃಹತೀಮಂತ್ರಾನುಗುಣವಾದ ಅರ್ಥ ॥ ೪೦ ॥

### ೫. ಶ್ರೀಗುರುಹೃದಯಪ್ರಕಾಶಿಕೆ

ದೇಶಭೇದಗಳಲ್ಲಿರುವ ಆಕಾಶ ಪ್ರತ್ಯೇಕ ಇದ್ದಾಗ್ಯೂ, ಅಖಂಡಾಕಾಶಕ್ಕೆ ಒಬ್ಬನೇ ಅಭಿಮಾನಿಯಿರುವಂತೆ, ಬೇರೆ ಬೇರೆ ಇರುವ ಜೀವರಾಶಿಗಳಲ್ಲಿ ಒಬ್ಬನೇ

ಅಂತರ್ಯಾಮಿ ಅವ್ಯವಧಾನವೆಂಬ ಅಖಂಡರೂಪದಿಂದ, ಬಿಡದೆ ಇರುವನು. ಶ್ರೀ ಎಂಬ ಲಕ್ಷ್ಮೀ ಸಮೇತನಾಗಿ ಇತರರಿಗೆ ಅವಕಾಶ ಕೊಡದಹಾಗೆ ಏಕಾಕಾರ ಇದ್ದಾಗ್ಯೂ, ಆಕಾಶ ತಾನೂ ಇದ್ದು, ಇತರ ಪದಾರ್ಥಗಳಿಗೂ ಅವಕಾಶಕೊಡುವಂತೆ, ಇತರರಿಗೂ ಅವಕಾಶ ಕೊಟ್ಟುಕೊಂಡು, ಇತರಾಪೇಕ್ಷೆಯಿಲ್ಲದೆ ಸ್ವಾನಂದ ಪೂರ್ಣ ಸರ್ವಾಂತರ್ಯಾಮಿಯು ಸರ್ವಸುಖಪ್ರದನಾಗಿ ಶೋಭಿಸುವನು.

**ವಸನಾದ್ವಾಸನಾದ್ವಸ್ತು ನಿತ್ಯಾವ್ಯವಹಿತತ್ವತಃ** ಎಂಬ ಭಾಗವತತಾತ್ಪರ್ಯಾರ್ಥ ಸದೃಷ್ಟಾಂತ ವಿವರಿಸಲ್ಪಟ್ಟಿತು ॥ ೪೦ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಆಕಾಶವು ಸರ್ವತ್ರ ವ್ಯಾಪಿಸಿದೆ. ಮನೆಯ ಒಳಗಡೆ ಆಕಾಶವ್ಯಾಪ್ತವಾಗಿದೆ, ಘಟದಲ್ಲಿ ಆಕಾಶವಿದೆ. ಇವುಗಳಿಗೆಲ್ಲಾ ದೇಶಭೇದಗಳೆಂದು ಹೆಸರು.

ಇಂತೆಯೇ, ಸೃಷ್ಟಿಕರ್ತನಾದ ಶ್ರೀಪರಮಾತ್ಮನಿಂದ ಸೃಷ್ಟಿಗೆ ತರಲ್ಪಟ್ಟ ತ್ರಿವಿಧವಾದ ಸಮಸ್ತ ಜೀವರಾಶಿಗಳಲ್ಲಿ ತಾನು ವ್ಯಾಪ್ತನಾಗಿದ್ದಾನೆ. ವ್ಯಾಪ್ತನಾದ ಶ್ರೀಹರಿಯು ಆಕಾಶಸದೃಶ. ಘಟಾದಿ ದೇಶದಲ್ಲಿ ಒಳಗೂ ಹೊರಗೂ ಆಕಾಶ ವ್ಯಾಪಿಸಿರುವಂತೆ, ಸಮಸ್ತ ಜೀವರಲ್ಲಿ ಒಳಗೂ ಹೊರಗೂ ಸರ್ವದೇಶಗಳಲ್ಲಿ ಶ್ರೀಹರಿಯು ವ್ಯಾಪಿಸಿರುವನು.

ಜೀವರಿಗೂ ಮತ್ತು ಅಂತರ್ಯಾಮಿಯಾಗಿರುವ ಪರಮಾತ್ಮನಿಗೂ ಅನಾದ್ಯನಂತಕಾಲದಿಂದಲೂ ಸಂಬಂಧವಿದೆ. ಬಿಂಬರೂಪಿಯಾದ ಈಶನು ಪ್ರತಿಬಿಂಬರಾದ ಜೀವರಲ್ಲಿ ಎಡಬಿಡದೆ ನಿತ್ಯಾವಿಯೋಗಿಯಾಗಿದ್ದಾನೆ. ವ್ಯವಧಾನ ಎಂದರೆ, ಸಂಪರ್ಕವಿಲ್ಲದಿರುವಿಕೆ. ಅವ್ಯವಧಾನವೆಂದರೆ ಅವಿಯೋಗ ಎಂದರ್ಥ.

ಹೀಗೆ ನೆಲೆಸಿಪ್ಪ ಬಿಂಬರೂಪಿಯಾದ ಶ್ರೀಪರಮಾತ್ಮನು ರಮಾದೇವಿಯರ ಸಹಿತನಾಗಿ ಅವಕಾಶವಿಲ್ಲದಂತೆ, ಸರ್ವ ದೇಶ, ಕಾಲಗಳಲ್ಲಿ ವ್ಯಾಪಿಸಿದ್ದಾನೆ.

ಆ ಸ್ವರಮಣನು ಜೀವರ ಉದ್ಧಾರಾರ್ಥವಾಗಿ, ಜೀವರಲ್ಲಿ ನಿಂತು, ಅವರ ಪರವಾಗಿ ಸಮಸ್ತ ಕ್ರಿಯಾವಿಶೇಷಗಳನ್ನು ಮಾಡಿ ಮಾಡಿಸುತ್ತಾ ಜೀವರಿಂದ

ಯಾವ ಪ್ರತಿಫಲವನ್ನೂ ನಿರೀಕ್ಷಿಸದೆ, ಅವರ ಉನ್ನತಿಗೆ ಕಾರಣನಾಗಿದ್ದಾನೆ. ಇದು ಪರಮಾತ್ಮನ ಸ್ವರೂಪಧರ್ಮ.

ಆ ಸರ್ವಾಂತರಾತ್ಮಕನು ಸರ್ವಜೀವರ ದಹರಾಕಾಶದಲ್ಲಿ ಶೋಭಿಸುತ್ತಾ, ಅವರಿಗೆ ಇಹದಲ್ಲಿ ಸುಖವನ್ನೂ, ಲಿಂಗಭಂಗಾನಂತರ ಪರದಲ್ಲಿ ನಿತ್ಯಾನಂದರೂಪವಾದ ಮುಕ್ತಿಯನ್ನು ಕರುಣಿಸುವನು. ॥ ೪೦ ॥

❋❋ ❋❋ ❋❋

## ಪದ್ಯ ೪೧

### ಮೂಲ

ಶ್ರೀವಿರಿಂಚಾದ್ಯಮರಗಣ ಸಂ ।
ಸೇವಿತಾಂಘ್ರಿಸರೋಜ ಈ ಜಡ ।
ಜೀವರಾಶಿಗಳೊಳಹೊರಗೆ ನೆಲೆಸಿದ್ದು ನಿತ್ಯದಲಿ ॥
ಸಾವಕಾಶನು ಎನಿಸಿ ತನ್ನ ಕ ।
ಳೇವರದಲಿಂಬಿಟ್ಟು ಸಲಹುವ ।
ದೇವ ದೇವಕೀರಮಣ ದಾನವಹರಣ ಜಿತರಮಣ ॥ ೪೧ ॥

### ಅವತರಣಿಕೆ

ಸರ್ವೇಶನು ಮಹಾಪ್ರಳಯಕಾಲದಲ್ಲಿ ತನ್ನ ಉದರದಲ್ಲಿ ಆಶ್ರಯದಾತನಾಗಿ ಸಂರಕ್ಷಿಸುವನು ಎಂದು ತಿಳಿಸುತ್ತಾರೆ.

### ಪ್ರತಿಪದಾರ್ಥ

ಶ್ರೀ = ಅಕ್ಷರನಾಮಕಳಾದ ಶ್ರೀಲಕ್ಷ್ಮೀದೇವಿ, ವಿರಿಂಚ್ಯಾದಿ = ಕ್ಷರವರ್ಗಕ್ಕೆ ಸೇರಿ ಬ್ರಹ್ಮದೇವರು ಪ್ರಾರಂಭ ಮಾಡಿಕೊಂಡು, ಅಮರಗಣ = ಸಮಸ್ತ

ದೇವತಾವರ್ಗದಿಂದ, **ಸಂಸೇವಿತ**=ಚೆನ್ನಾಗಿ ಸೇವಿಸಲ್ಪಟ್ಟ, **ಅಂಘ್ರಿಸರೋಜ** ಪಾದಪದ್ಮಗಳುಳ್ಳವನು. **ಈ ಜಡಜೀವರಾಶಿಗಳ**=ಜಗತ್ತಿನ ವಿದ್ಯಮಾನವಾದ ಸಕಲ ಸ್ಥಾವರ ಮತ್ತು ಜಂಗಮಗಳೆಂಬ ಜೀವಗಣಗಳ, **ಒಳಗೆ**=ಅಂತರ್ಯಾಮಿಯಾಗಿ ಸ್ವರೂಪದಲ್ಲಿ, **ಹೊರಗೆ**=ಬಾಹ್ಯೇಂದ್ರಿಯಗಳಲ್ಲಿ, **ನಿತ್ಯದಲಿ**=ಯಾವಾಗಲೂ, **ನೆಲೆಸಿದ್ದು**=ಆವಾಸನಾಗಿದ್ದು, **ಸಾವಕಾಶನು ಎನಿಸಿ**=ಅವಕಾಶ (ಆಶ್ರಯ ಹೊಂದಲಿಕ್ಕೆ ಪ್ರದೇಶ) ಪ್ರದನೆಂದು ಕರೆಯಿಸಿ, **ತನ್ನ ಕಳೇವರದಲಿ**=ಮಹಾಪ್ರಳಯಕಾಲದಲ್ಲಿ ತನ್ನ ಉದರದಲ್ಲಿ, **ಇಂಬಿಟ್ಟು**=ಆಶ್ರಯವನ್ನು ನೀಡಿ, **ಸಲಹುವ**=ಸಮಸ್ತ ಜೀವರಾಶಿಗಳನ್ನೂ ಸಂರಕ್ಷಿಸುವವನು. **ದೇವ** ಕ್ರೀಡಾವಿಶಿಷ್ಟನಾದ ದೇವತಾಶ್ರೇಷ್ಠನು, **ದೇವಕಿರಮಣ**=ದೇವಕಿಪುತ್ರನಾದ ಕೃಷ್ಣನು, **ದಾನವಹರಣ**=ದೈತ್ಯಕುಲಸಂಹಾರಿ, **ಜಿತಮರಣ**=ಜನನಮರಣ ವಿದೂರನಾದ ನಿತ್ಯಶಾಶ್ವತನು. ॥ ೪೧ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಇನ್ನೂ ಪರಮಾತ್ಮ ಎಂಥಾವನೆಂದರೆ ಹೇಳತಾರೆ.

ಸ್ವರೂಪತಃ ವೃಕ್ಷಾದಿ ಜಡಜೀವರು, ಸ್ವರೂಪತಃ ಮಾನುಷಪಶ್ವಾದಿ ಚೇತನಜೀವರು, ಈ ಉಭಯವಿಧರಾದ ಜೀವರ ಸಮೂಹದ ಸ್ವರೂಪಗಳೊಳಗೆ ಎಂದರೆ, ಬ್ರಹ್ಮಾದಿ ತೃಣಾಂತ ತ್ರಿವಿಧಜೀವರ ಸ್ವರೂಪದೊಳಗೂ ಶ್ರೀದೇವಿಯದು, ಬ್ರಹ್ಮಾದಿ ತೃಣಾಂತ ದೇವತಾಗಣ ಹಾಂಗೆ ಉಪಲಕ್ಷಣಯಾ ಅಸುರ, ನಿತ್ಯಸಂಸಾರಿಗಣ ಇವರುಗಳ ಸ್ವರೂಪವಿವಕ್ಷಯಾ ಹೊರಗೆ ಇರತಕ್ಕ ಸ್ಥೂಲ ದೇಹಗಳೊಳಗೂ ಆವಾಸನಾಗಿದ್ದು ಪ್ರತಿನಿತ್ಯದಲ್ಲೂ ಭಕ್ತರಾದ ಅವರವರಿಂದ ಅವರವರ ಶರೀರಗತನಾಗಿ ಚಂದಾಗಿ ಧ್ಯಾನೋಪಾಸನದಿಂದ ಸೇವಿತವಾದ ಪಾದ ಕಮಲಗಳು ಉಳ್ಳವ, ದ್ವೇಷಿಗಳಾದ ಅಸುರರ ವ್ಯಾವರ್ತನವು. ಪ್ರಳಯಕಾಲದಲ್ಲಿ ಸರ್ವಪ್ರಾಣಿಗಳ ವ್ಯಾಪಾರರಹಿತರನ್ನಾಗಿ ಮಾಡಿ, ಶ್ರಮಪರಿಹಾರಾರ್ಥ

ನಿದ್ರಾಯುಕ್ತರನ್ನ ಮಾಡಿ, ಅವಕಾಶದಿಂದ ಸಹಿತರನ್ನಾಗಿ ಮಾಡುತ್ತಾನಾದ್ದರಿಂದ ಸಾವಕಾಶನು ಎಂತ ಕರಿಸೋವನಾದ. ಈ ಪ್ರಕಾರ ಅವಕಾಶಕೊಟ್ಟು ಪ್ರಳಯದಲ್ಲಿ ಸರ್ವಪ್ರಾಣಿಗಳ ನಾರಾಯಣದೇವರು ಆದ ತಾನು ತನ್ನ ದೇಹದಲ್ಲಿ ಆಶ್ರಯಮಾಡಿ ಇಟ್ಟವನಾಗಿ, ಸಂರಕ್ಷಣ ಮಾಡುತಾನೆ. ಕ್ರೀಡಾದಿಗುಣವಿಶಿಷ್ಟನಾದ, ದೇವಕಿದೇವಿಯ ಪುತ್ರನಾದ, ಲೋಕಾರಾಧ್ಯನಾದ ಸರ್ವೋತ್ತಮನಾದ, ದ್ವೇಷಿಗಳಾದ ದೈತ್ಯರ ಸಂಹಾರಕನಾದ, ಕ್ಷರಜೀವರೋಪಾದಿಯಲ್ಲಿ ದೇಹಗಳ ಧರಿಸಿ ಮರಣರೂಪವಾದ ತಥಾ ತ್ಯಾಗರೂಪವಾದ ಮರಣರಹಿತನಾದವ, ಇಂಥಾ ಪರಮಾತ್ಮ ಸೃಷ್ಟಿ, ಸ್ಥಿತಿ ಸಂಹಾರಾದಿಗಳ ಮಾಡುತ್ತಾ, ಭಕ್ತರ ಸಂರಕ್ಷಣೆ ಮಾಡುತಾನೆಂತ ತಾತ್ಪರ್ಯ ॥ ೪೧ ॥

## ೨. ಭಾವಪ್ರಕಾಶಿಕೆ

ಜಡಜೀವರು ಎಂದರೆ ಸ್ಥಾವರಾದಿಗಳು ಎಂದರ್ಥ. ಚೇತನಜೀವರೆಂತಲೂ ಜಡಜೀವರೆಂತಲೂ ಎರಡು ಪ್ರಕಾರ. ಸ್ವರೂಪದೇಹದಲ್ಲಿಯೂ ಸಹ ಇರುವವು. ಮೇಲಿನ ಪದ್ಯದಲ್ಲಿ ಚೇತನಜೀವರಲ್ಲಿ ಪರಮಾತ್ಮನ ಇರುವಿಕೆಯನ್ನು ಹೇಳಿದರು. ಹಾಗೆಯೇ ಲಕ್ಷ್ಮೀದೇವಿಯರು, ಬ್ರಹ್ಮ ಮೊದಲಾದ ದೇವತಾಗಣಗಳು, ಇವರಿಂದ ಚೆನ್ನಾಗಿ ಸೇವಿತವಾದ ಪಾದಕಮಲಗಳುಳ್ಳ ಶ್ರೀಪರಮಾತ್ಮನು, ಜಡಜೀವರಾದ ಅಂದರೆ ವನಸ್ಪತ್ಯೋಷಧಿ ಲತಾತ್ವಕ್‌ಸಾರಾವೀರುಧಾ ದ್ರುಮಾಃ ಎಂಬ ಭಾಗವತ ತೃತೀಯಸ್ಕಂಧ ವಾಕ್ಯದಿಂದ ಜಡಜೀವರಲ್ಲಿ ೬ ಪ್ರಕಾರವೆಂದು ತೆಗೆದುಕೊಂಡಿರುವರು. ಬರೇ ಜಡವೆಂದರೆ ಘಟ, ಪರ್ವತ, ನಮ್ಮ ದೇಹ ಮೊದಲಾದುವುಗಳು. ಜಡಜೀವರೆಂದರೆ ಮೇಲೆ ಹೇಳಿದ ೬ ಪ್ರಕಾರವುಳ್ಳ ಸ್ಥಾವರಗಳು. ವನಸ್ಪತಿ ಅಂದರೆ ಫಲಂತಿ ಯೇ ವಿನಾಪುಷ್ಪೈ ಸ್ತಾನ್ ವದಂತಿ ವನಸ್ಪತೀನ್ ಎಂದು ತೃತೀಯಸ್ಕಂಧ ವಿಜಯಧ್ವಜೀಯದಲ್ಲಿ ಹೇಳಿರುವರು. ಅಂದರೆ ಪುಷ್ಪವಿಲ್ಲದೆ ಫಲವಾಗುವ ಹಲಸಿನ ಮರ ಮೊದಲಾದುವುಗಳಿಗೆ ವನಸ್ಪತಿ ಎಂದು ಹೆಸರು. ಫಲಪಾಕಾಂತಾ ಓಷಧಯಃ ವ್ರೀಹ್ಯಾದಯಃ ಫಲಪಾಕವಾದ ಕೂಡಲೇ ಒಣಗಿಹೋಗುವ, ಭತ್ತ ಮೊದಲಾದವು ಆಗುವ ಸಸ್ಯಗಳಿಗೆ ಓಷಧಿ ಎಂದು ಹೆಸರು. ಲತಾ ಅಂದರೆ ಬಳ್ಳಿಗಳು. ತ್ವಕ್‌ಸಾರ ಅಂದರೆ ಮೇಲೆ ಗಟ್ಟಿಯಾ

ಗಿಯೂ, ಒಳಗೆ ಟೊಳ್ಳಾಗಿರುವ ಬಿದರು ಮೊದಲಾದವು. ವೀರುಧ ಅಂದರೆ ಹೊದರು ಆಗುವ ದರ್ಭೆ ಮೊದಲಾದವು. ತೃಣಜೀವರಾದ ಹುಲ್ಲು ಮೊದಲಾದವು ಇದಕ್ಕೆ ಸೇರಿದುದು. ದ್ರುಮ ಅಂದರೆ ಹಲಸು, ಮಾವು, ಮೊದಲಾದ ವೃಕ್ಷಗಳು. ಹೀಗೆ ೬ ಪ್ರಕಾರವಾದ ಜಡಜೀವರ ಒಳಹೊರಗೂ ಸಹ ಶ್ರೀಪರಮಾತ್ಮನು ವಾಸವಾಗಿರುವನು. ಅಲ್ಲದೆ ತನಗೆ ದೇಹಭೂತವಾದ ಬ್ರಹ್ಮಾಂಡದಲ್ಲಿ ಅವುಗಳಿಗೆ ಸ್ಥಳವನ್ನು ಕೊಟ್ಟು ದಿನೇ ದಿನೇ ವೃದ್ಧಿಯಾಗುವಂತೆ ಮಾಡಿ ಅವುಗಳನ್ನು ರಕ್ಷಿಸುವನು. ಮುಕ್ತಿಯಲ್ಲಿಯೂ ಈ ಜಡಜೀವರಿಗೆ ತನ್ನ ಲೋಕದೊಳಗೂ, ಪ್ರಳಯದಲ್ಲಿ ತನ್ನ ದೇಹದಲ್ಲಿಯೂ ಅವಕಾಶವನ್ನು ಕೊಟ್ಟು ರಕ್ಷಿಸುವನೆಂಬ ತಾತ್ಪರ್ಯ. ದೇವ, ದೇವಕೀರಮಣ ಎಂದು ಪರಮಾತ್ಮನಿಗೆ ವಿಶೇಷಣವನ್ನು ಕೊಟ್ಟಿರುವರು.

ದಿವ್‌ಕ್ರೀಡಾಯಾಂ ಎಂಬ ಧಾತುವಿನಿಂದ ದೇವನೆಂದರೆ ಸೃಷ್ಟಿಕರ್ತನೆಂದು ಅರ್ಥ. ದೇವಕೀರಮಣ ಎಂದು ದಾಸರಾಯರು ಪದಪ್ರಯೋಗ ಮಾಡಿರುವರು. ಇದಕ್ಕೆ ವ್ಯಾಖ್ಯಾನಕರ್ತರೊಬ್ಬರು ದೇವಕೀಪುತ್ರನೆಂದು ಅರ್ಥಮಾಡಿರುವರು. ದಾಸರಾಯರ ಅಭಿಪ್ರಾಯವು ದೇವಕೀಪುತ್ರನೆಂದೇ ಇದ್ದುದಾದರೆ ದೇವಕೀತನಯ ಅನ್ನಬಹುದಾಗಿತ್ತು. ಅದರಿಂದ ಛಂದೋಭಂಗವಾಗಲೀ ಪ್ರಾಸಹಾನಿಯಾಗಲೀ ಯಾವ ದೋಷವೂ ಬರುತ್ತಿರಲಿಲ್ಲ. ಹೀಗಿರಲು ದೇವಕೀರಮಣ ಎಂದು ಪ್ರಯೋಗ ಮಾಡಿದುದು ಒಂದು ವಿಶೇಷವಿಲ್ಲದೆ ಮಾಡಿರಲಿಕ್ಕಿಲ್ಲ. ಲೋಕದಲ್ಲಿ ನಂದನ ಎಂಬ ಪದವನ್ನು ಮಕ್ಕಳಿಗೂ, ರಮಣ ಎಂಬ ಶಬ್ದವು ಪತಿಗಳಿಗೂ ರೂಢಿಯಲ್ಲಿರುವದೇ ಹೊರತು ರಮಣನೆಂದು ಮಕ್ಕಳಿಗೆ ಎಲ್ಲಿಯೂ ಇಲ್ಲ. "ನಂದಯತೀತಿ ನಂದನ" ಆಟಪಾಟಗಳಿಂದಲೂ ತನ್ನ ಗುಣಗಳಿಂದಲೂ ತಾಯಿ ತಂದೆಗಳನ್ನು ಆನಂದಪಡಿಸುವುದರಿಂದ ನಂದನ ಎಂಬ ಹೆಸರು ಮಕ್ಕಳಿಗೆ ಬಂದಿರುವುದು. ರಮಣನೆಂದರೆ ರಮು ಕ್ರೀಡಾಯಾಂ–ಕ್ರೀಡಿಸುವುದರಿಂದ ರಮಣ ಎಂದು ಹೆಸರು. ರಮಯತೀತಿ ರಾಮಃ ಎಂದು ರಾಮಾದಿ ಶಬ್ದಗಳಿಗೆ ಹೇಳಿದಂತೆ ರಮಣ ಶಬ್ದಕ್ಕೆ ಸುಖಪಡಿಸುವವನೆಂದು ಏಕೆ ಅರ್ಥಮಾಡಬಾರದೆಂದರೆ, ರಮಣ ಶಬ್ದಕ್ಕೆ ಹಾಗೆ ಯಾರೂ ಮಾಡಲಿಲ್ಲ. ಲೋಕರಮಣನೆಂದು ಪದಪ್ರಯೋಗ ಮಾಡಿರುವರು, ಅಲ್ಲಿ ಲೋಕಪತಿ ಎಂದರ್ಥ (ಹಸ್ತಿನಾಪುರಕ್ಕೆ ಗಜಪುರವೆಂದು ಹೇಳು

ವಂತೆ) ರಮಣ ಶಬ್ದಕ್ಕೆ ಪತಿ ಪರ್ಯಾಯವಾಗಿ ಅರ್ಥಮಾಡಿ, ಲೋಕಪತಿ ಅನ್ನುವುದಕ್ಕೆ ಬದಲಾಗಿ ಲೋಕರಮಣ ಅಂದಿರುವರು. ಆನಂದಪಡಿಸುವನೆಂದ ಮಾತ್ರದಿಂದಲೇ ರಮಣನೆಂದರೆ ಮಗನೆಂದು ಅರ್ಥಮಾಡಲು ಆಗುವುದಿಲ್ಲ. ಹಾಗಾದರೆ ಪತಿ ಶಬ್ದವು ಮಗನಿಗೆ ಬರುವುದು. ಭರ್ತಾ ಎಂತಲೂ ಮಗನಿಗೆ ಹೇಳಬಹುದು. ಹೇಗೆಂದರೆ 'ಭರಣಾದ್ಭರ್ತಾ, ಪಾಲನಾತ್ಪತಿ' ಇವೆರಡು ಪದ ಗಳು, ಸಂರಕ್ಷಿಸುವವರಿಗೆ ಹೆಸರು. ಮಗನು ದೊಡ್ಡವನಾದಮೇಲೆ ತಾಯಿಯನ್ನು ಸಂರಕ್ಷಿಸುವನು. ಅಂದಮೇಲೆ ಅವನನ್ನು ತಾಯಿಗೆ ಪತಿ, ಭರ್ತಾ ಅನ್ನಬೇಕಾ ಯಿತು. ಅರ್ಥದಲ್ಲಿ ಸರಿಹೋದರೂ ಲೋಕರೂಢಿಯಲ್ಲಿಲ್ಲದ ಪದಪ್ರಯೋಗ ಎಂದಿಗೂ ಸಮಂಜಸವಾಗುವುದಿಲ್ಲ. ಅಭಾಸವಾಗಿ ಕಾಣುವುದು. ಆದ್ದ ರಿಂದ ರಮಣ ಶಬ್ದಕ್ಕೆ ಪತಿ ಎಂದೇ ಅರ್ಥಮಾಡಬೇಕು. ನಂದನ ಶಬ್ದಕ್ಕೆ ಅರ್ಥಾತ್ ಪತಿಪರವಾಗಿ ಮಾಡಬಹುದೇ ಆಗಲಿ ರಮಣ ಶಬ್ದಕ್ಕೆ ಪುತ್ರಪರವಾಗಿ ಅರ್ಥಮಾಡುವುದು ಸರಿಎಂದು ಕಾಣುವುದಿಲ್ಲ. ಆದ್ದರಿಂದ ಇಲ್ಲಿ ದೇವಕೀರಮಣ ನೆಂದರೆ ಲಕ್ಷ್ಮೀಪತಿಯೆಂದೇ ದಾಸರಾಯರ ಅಭಿಪ್ರಾಯವೆಂದು ಊಹಿಸಬೇಕಾ ಗಿದೆ. ದೇವಕೀ ಶಬ್ದಕ್ಕೆ ಲಕ್ಷ್ಮೀ ಎಂಬ ಅರ್ಥವು ಎಲ್ಲಿರುವುದೆಂದರೆ–ಭಾಗವತ ಪ್ರಥಮಸ್ಕಂಧ ೮ನೆಯ ಅಧ್ಯಾಯ ೨೧ನೆಯ ಶ್ಲೋಕ ಕೃಷ್ಣಾಯ ವಾಸು ದೇವಾಯ ದೇವಕೀನಂದನಾಯ ಚ ॥ ನಂದಗೋಪ ಕುಮಾರಾಯ ಗೋವಿಂ ದಾಯ ನಮೋನಮಃ ಎಂಬ ಶ್ಲೋಕದಲ್ಲಿರುವ ದೇವಕೀನಂದನಾಯ ಎಂಬ ಪದಕ್ಕೆ ವಿಜಯಧ್ವಜೀಯ ವ್ಯಾಖ್ಯಾನದಲ್ಲಿ ದೇವಕೀ ಲಕ್ಷ್ಮೀಃ ತಾಂ ನಂದಯಿತುಂ ಶೀಲಮಸ್ಯೇತಿ ದೇವಕೀನಂದನಃ ದೇವಕೀ ಅಂದರೆ ಲಕ್ಷ್ಮೀ. ಆಕೆಗೆ ಆನಂದವನ್ನು ಕೊಡುವ ಯೋಗ್ಯತೆಯು ಇವನಲ್ಲಿದ್ದುದುದರಿಂದ ದೇವಕೀನಂದನನೆಂದು ಲಕ್ಷ್ಮೀ ಪತಿಗೆ ಹೆಸರು ಎಂದು ಹೇಳಿರುವರು. ದೇವಕೀ ಶಬ್ದಕ್ಕೆ ಲಕ್ಷ್ಮೀಪರವಾಗಿ ಅರ್ಥವು ಯಾವ ನಿರ್ವಚನದ ಮೇಲೆ ಆಗುವದೆಂದರೆ, ದೇವಾನಾಂ ಕಂ ಸುಖಂ ದಾತು ಶೀಲಮಸ್ಯಾ ಅಸ್ತೀತಿ ದೇವಕೀ ಲಕ್ಷ್ಮೀಃ ಕಂ ಅಂದರೆ ಸುಖವು. ದೇವತೆ ಗಳಿಗೆ ಸುಖವನ್ನು ಕೊಡುವ ಯೋಗ್ಯತೆಯು ಈಕೆಗೆ ಇರುವುದರಿಂದ ದೇವಕೀ ಎಂದು ಲಕ್ಷ್ಮೀದೇವಿಯರಿಗೆ ಹೆಸರು. ಅಥವಾ ದೇವವತ್ ಕಂ ಯಸ್ಯಾಃ ಸಾ ದೇವಕೀ ಅಂದರೆ ಪರಮಾತ್ಮನಿಗೆ ಅರ್ಧಾಂಗಿಯಾದುದರಿಂದ ಪರಮಾತ್ಮನಂತೆ ಸುಖವನ್ನು ಹೊಂದುವುದರಿಂದಲೂ ಲಕ್ಷ್ಮೀದೇವಿಯರಿಗೆ ದೇವಕೀ ಎಂದು

ಹೆಸರು. ಈ ನಿರ್ವಚನದಿಂದ ದೇವಕೀನಂದನ ಅಂದರೆ ಲಕ್ಷ್ಮೀಪತಿ ಎಂದು ಅರ್ಥ ಮಾಡಿರುವರು. ದಾಸರಾಯರು ಇದೇ ಆಧಾರದ ಮೇಲೆಯೇ ದೇವಕೀರಮಣ ನೆಂದು ಪ್ರಯೋಗಮಾಡಿರುವರೆಂದು ನಿಶ್ಚಯಿಸಬೇಕಾಗುತ್ತದೆ. ॥ ೪೧ ॥

**೩. ಭಾವದರ್ಪಣ**

ಶ್ರೀವಿರಿಂಚೇತಿ. ಜಯಿಸಲ್ಪಟ್ಟ ಮರಣ ಉಳ್ಳವ. ॥ ೪೧ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಶ್ರೀವಿರಂಚಿ ಇತಿ ॥ ಸಾವಕಾಶ–ಅವಕಾಶಯುತಾ ॥ ದೇವಕೀ–ರಮಾ ॥೪೧॥

**ಕನ್ನಡಾರ್ಥ**

ಎಲ್ಲರಿಗೂ ಅವಕಾಶ ಕೊಡುವುದರಿಂದ ಸಾವಕಾಶ–ಅವಕಾಶಯುಕ್ತನು ಎಂದು ಪರಮಾತ್ಮನಿಗೆ ಕರೆಯುತ್ತಾರೆ. ದೇವಕೀರಮಣ ಎಂಬಲ್ಲಿ ದೇವಕೀ ಶಬ್ದಕ್ಕೆ ರಮಾ–ಲಕ್ಷ್ಮೀ ಎಂದು ಅರ್ಥ ಹೇಳಿದರೆ ಸರಿಹೋಗುತ್ತದೆ. ದೇವಾನಾಂ ಕಂ ಸುಖಂ (ಸುಖಯಿತುಂ) ಶೀಲಂ ಅಸ್ಯಾಃ ಇತಿ ದೇವಕೀ–ದೇವತೆಗಳಿಗೆ ಸುಖ ವನ್ನು ಕೊಡುವ ಸ್ವಭಾವದವಳಾದುದರಿಂದ ದೇವಕೀ ಎಂದು ವ್ಯುತ್ಪತ್ತಿ. ದೇವಕ- ದೇವತೆಗಳಿಗೆ ಸುಖವನ್ನೀಯುವ ಸ್ವಭಾವದ ಪರಮಾತ್ಮ-ಆತನ ಪತ್ನೀ (ಸ ಅಸ್ಯಾ ಅಸ್ತಿ ಇತಿ) ದೇವಕೀ–ಲಕ್ಷ್ಮೀ ಎಂದೂ ವ್ಯುತ್ಪತ್ತಿ ಆಗಬಹುದು.

**೫. ಶ್ರೀಗುರುಹೃದಯಪ್ರಕಾಶಿಕೆ**

ಇದೇ ಅರ್ಥ ವಿವರಿಸುತ್ತಾರೆ, ಶ್ರೀವಿರಿಂಚೆಂದು. ಲಕ್ಷ್ಮೀಬ್ರಹ್ಮಾದ್ಯಖಿಳ ದೇವತಾಗಣಪೂಜ್ಯಚರಣಕಮಲನಾದಾಗ್ಯೂ, ಈ ಸಮಸ್ತ ಜೀವರಾಶಿ ಜಡಗಳಲ್ಲಿ ಸಹ, ಒಳಗೆ ಹೊರಗೆ ಕೂಡ ಸ್ಥಿರವಾಗಿದ್ದು, ಸದಾ ಇತರರಿರುವುದಕ್ಕವಕಾಶ ವನ್ನೂ ಕೊಟ್ಟುಕೊಂಡು, ತನ್ನ ಶರೀರದಲ್ಲಿ ಸರ್ವವನ್ನೂ ಇಂಬಿಟ್ಟು ಎಂದರೆ, ವಿಸ್ತಾರವಾಗಿರಿಸಿಕೊಂಡು ದೇವ ದೇವತಿ ಎಂಬ ಲಕ್ಷ್ಮೀದೇವಿಗೆ ಪತಿಯಾದ

ದೇವರು ಮರಣಾದಿ ದೋಷದೂರನೂ, ಅಯೋಗ್ಯಾಂತಕನೂ ಆಗಿ ಸರ್ವವನ್ನೂ ರಕ್ಷಿಸುವನು. ॥ ೪೧ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

ಶ್ರೀಲಕ್ಷ್ಮೀದೇವಿಯು ನಿತ್ಯವೂ ಶ್ರೀಹರಿಯ ಪಾದಪದ್ಮಗಳನ್ನು ಶ್ರದ್ಧಾಭಕ್ತಿಗಳಿಂದ ಸೇವಿಸುತ್ತಿರುವಳು. ಬ್ರಹ್ಮಾದಿ ಸಮಸ್ತ ದೇವತಾವರ್ಗವು ಶ್ರೀಶನ ಚಾರು ಚರಣಕಮಲಗಳನ್ನು ನಿತ್ಯವೂ ಸೇವಿಸುತ್ತಿರುವುದು.

ಜೀವವಿದ್ದು, ಚಲಿಸದಿರುವ ಜೀವರಾಶಿಗಳಿಗೆ ಜಡಜೀವರು ಎಂದು ಹೆಸರು. ಇವುಗಳಿಗೆ ಸ್ಥಾವರ ಎಂದು ಹೆಸರು. ಇದರಲ್ಲಿ ಆರುಪ್ರಕಾರವಾದ ಸ್ಥಾವರಜೀವರಿದ್ದಾರೆ,

ಪುಷ್ಪವಿಲ್ಲದೆ ಫಲವಾಗುವ ಹಲಸಿನ ಮರ ಇತ್ಯಾದಿ ಸ್ಥಾವರವರ್ಗಕ್ಕೆ ವನಸ್ಪತಿ ಎಂದು ಹೆಸರು. ಫಲಪಾಕವಾದ ಕೂಡಲೇ ಒಣಗಿಹೋಗುವ ಭತ್ತ ಇತ್ಯಾದಿ ಧಾನ್ಯಪ್ರದ ಸಸ್ಯವಿಶೇಷಗಳಿಗೆ ಓಷಧಿ ಎನ್ನುತ್ತಾರೆ. ವ್ರೀಹಿ ಎಂದೆನಿಸುವ ಧಾನ್ಯ ವಿಶೇಷಗಳು. ಇತರ ಮರಗಳ ಆಶ್ರಯವನ್ನು ಹೊಂದಿ ಬೆಳೆಯುವ ಲತೆಗಳು, ವಿಳ್ಳೇದೆಲೆ, ಮೆಣಸು, ಜಾಜಿ ಇತ್ಯಾದಿ ಬಳ್ಳಿಗಳು. ಮೇಲೆ ಗಟ್ಟಿಯಾಗಿ, ಒಳಗೆ ಟೊಳ್ಳಾಗಿರುವ ಬಿದರು ಮೊದಲಾದ ಪೊದೆಗಳು. ಇದಕ್ಕೆ ವೀರುಧ ಎನ್ನುವರು. ಪೊದೆಗಳಂತಿರುವ ಗುಲ್ಮಗಳೂ ಈ ವರ್ಗಕ್ಕೆ ಸೇರಿವೆ. ದರ್ಭೆ, ಹುಲ್ಲು ಮುಂತಾದ ತೃಣಜೀವರು. ಹುಣಸೆ, ಮಾವು, ನೇರಳೆ, ತೇಗ, ಗಂಧ ಇತ್ಯಾದಿ ವೃಕ್ಷಗಳು. ಹೀಗೆ ಪೂರ್ವೋಕ್ತ ಸ್ಥಾವರಜೀವರಲ್ಲಿ ಆರು ವರ್ಗಗಳಿವೆ.

ಜೀವವಿದ್ದು, ಒಂದುಕಡೆಯಿಂದ ಮತ್ತೊಂದುಕಡೆಗೆ ಸಂಚರಿಸುವವರು ಜಂಗಮಜೀವರು,

ಈ ಚೇತನಜೀವರಲ್ಲಿ ಮೂರು ಪ್ರಕಾರ :

ಖೇಚರರು : ಆಕಾಶದಲ್ಲಿ ಸಂಚರಿಸತಕ್ಕ ಪಕ್ಷಿ, ದುಂಬಿ, ಚಿಟ್ಟೆ ಇತ್ಯಾದಿ ರೆಕ್ಕೆಯುಳ್ಳ ಪ್ರಾಣಿವರ್ಗ. ದೇವತೆಗಳೂ ಈ ವರ್ಗಕ್ಕೆ ಸೇರಿದ್ದಾರೆ.

ಭೂಚರರು : ಭೂಮಿಯ ಮೇಲೆ ಸಂಚರಿಸುವ ಹುಲಿ, ಸಿಂಹ, ಗೋವು ಇತ್ಯಾದಿ ಪ್ರಾಣಿವರ್ಗ. ಕ್ರಿಮಿಕೀಟಾದಿಗಳು_ಮಾನವರು ಇತ್ಯಾದಿ.

ಜಲಚರರು : ನೀರಿನಲ್ಲಿ ಸಂಚರಿಸುವ ಮೀನು, ಮೊಸಳೆ, ತಿಮಿಂಗಲ ಇತ್ಯಾದಿ ಪ್ರಾಣಿವರ್ಗ,

ಈ ಜೀವರುಗಳಲ್ಲಿ ಸ್ಥೂಲದೇಹಗತ ಬಾಹ್ಯ ಇಂದ್ರಿಯಗಳಲ್ಲಿ ಹಾಗೂ ಸಮಸ್ತ ಅವಯುವಗಳಲ್ಲಿ ಶ್ರೀಪರಮಾತ್ಮನು ವ್ಯಾಪ್ತನಾಗಿದ್ದಾನೆ.

ಇಂತು ಸರ್ವಜೀವರ ಒಳಹೊರಗೆ ನಿತ್ಯದಲ್ಲಿ ನೆಲೆಸಿಪ್ಪ ಆ ಸರ್ವಾಧಾರಕನು ಮಹಾಪ್ರಳಯಕಾಲದಲ್ಲಿ, ತನ್ನಿಂದ ಸೃಷ್ಟಿಗೆ ತರಲ್ಪಟ್ಟ ಸಕಲ ಜಡಚೇತನ ಜೀವರಾಶಿಗಳನ್ನು ತನ್ನ ಉದರದಲ್ಲಿ ಆಶ್ರಯಕೊಟ್ಟು, ಸಂರಕ್ಷಿಸುವನು. ಶ್ರೀಪರಮಾತ್ಮನ ಜ್ಞಾನಾನಂದರೂಪವಾದ ದೇಹವೇ ಆತನ ಕಳೇಬರವು.

ಸರ್ವಶ್ರೇಷ್ಠನಾದವನಿಗೆ ದೇವ ಎಂತ ನಾಮ. ಅಂತಹ ದೇವನಾಮಕನಾದ ಸರ್ವಸ್ವಾಮಿಯು ದೇವಕಿರಮಣನು. ರಮಣ-ಎಂಬ ಶಬ್ದಕ್ಕೆ ಅನೇಕ ಅರ್ಥಗಳಿವೆ. ರಮಿಸುವವನು (ಕ್ರೀಡಾವಿಶಿಷ್ಟ) ರಮಣನು. ಪತಿ ಅಥವಾ ಗಂಡನೆಂದು ಇನ್ನೊಂದು ಅರ್ಥ. ಈ ಶಬ್ದವನ್ನು ಸಂಕರ್ಷಣ ಒಡೆಯರು ದೇವಕೀಪುತ್ರ-ಎಂಬರ್ಥದಲ್ಲಿ ವ್ಯಾಖ್ಯಾನ ಮಾಡಿದ್ದಾರೆ.

ದೇವತೆಗಳಿಗೆ ನಿತ್ಯಾನಂದರೂಪವಾದ ಮೋಕ್ಷಸುಖವನ್ನು ಕೊಡುವ ಅಧಿಕಾರವಿರುವುದರಿಂದ, ಶ್ರೀಲಕ್ಷ್ಮೀದೇವಿಗೆ ದೇವಕೀ ಎಂತ ನಾಮ, ಅದರೆ ಲಕ್ಷ್ಮೀಪತಿ ಎಂದರ್ಥ.

ಅಂತಹ ದೇವಕಿರಮಣನು ದೈತ್ಯಕುಲಸಂಹಾರಿ ಮತ್ತು ಜನನ ಮರಣ ವಿದೂರನಾದ ಶಾಶ್ವತದೇಹಿಯು ॥ ೪೧ ॥

## ಪದ್ಯ ೪೨

**ಮೂಲ**

**ಮಾಸ ಒಂದಕೆ ಪ್ರತಿದಿವಸದಲಿ ।**
**ಶ್ವಾಸಗಳು ಅಹವಷ್ಟಶತ್ವಾ ।**
**ರಿಂಶತಿಸಹಸ್ರಾಧಿಕಾರುಸುಲಕ್ಷ ಸಂಖ್ಯೆಯಲಿ ॥**
**ಹಂಸನಾಮಕ ಹರಿಯ ಷೋಡಶ ।**
**ಈ ಶತಾಬ್ದದಿ ಭಜಿಸೆ ಒಲಿವ ದ ।**
**ಯಾ ಸಮುದ್ರ ಕುಚೇಲಗೊಲಿದಂದದಲಿ ದಿನದಿನದಿ ॥ ೪೨ ॥**

**ಅವತರಣಿಕೆ**

ಶ್ವಾಸೋಪಾಸನೆಯ ಮರ್ಮವನ್ನು ಅರಿತು ಹಂಸನಾಮಕ ಶ್ರೀಹರಿಯನ್ನು ನಿತ್ಯವೂ ಭಜಿಸುತ್ತಿರುವ ಭಕ್ತರಿಗೆ ಪ್ರಸನ್ನನಾಗುವನೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಪ್ರತಿದಿವಸದಲಿ**= ಹಗಲು ರಾತ್ರಿ ಸೇರಿದ ಪ್ರತಿದಿನದಲ್ಲಿ ೨೧,೬೦೦ ಪ್ರಕಾರ, **ಮಾಸ ಒಂದಕೆ**= ಒಂದು ತಿಂಗಳ ಅವಧಿಯಲ್ಲಿ, **ಶ್ವಾಸಗಳು**=

ನಾಸಿಕಾದ್ವಾರಾ ನಡೆಯುವ ಶ್ವಾಸಕ್ರಿಯಾರೂಪವಾದ ಕಾರ್ಯವು, **ಆರುಸುಲಕ್ಷ ಅಧಿಕ**=ಆರು ಲಕ್ಷದ ಮೇಲೆ, **ಚತ್ವಾರಿಂಶತಿ ಅಷ್ಟಸಹಸ್ರ**=ನಾಲ್ವತ್ತು ಸಾವಿರದ ಮೇಲೆ ಎಂಟುಸಾವಿರ ಅಂದರೆ ೪೮,೦೦೦. ಅಲ್ಲಿಗೆ, ಆರುಲಕ್ಷದ ನಾಲ್ವತ್ತೆಂಟುಸಹಸ್ರ ಶ್ವಾಸಜಪಗಳಾಗುವುವು. (೬,೦೦,೦೦೦ + ೪೦,೦೦೦ + ೮೦೦೦ =೬,೪೮,೦೦೦) ದಿನಕ್ಕೆ ೨೧,೬೦೦ರಂತೆ ೩೦ ದಿನಗಳಿಗೆ (ಮಾಸಾವಧಿ), ೨೧,೬೦೦X೩೦=೬,೪೮,೦೦೦. ಈ ಪ್ರಕಾರ ಗಣನೆ, **ಅಹವು**=ಆಗುವುವು. **ಹಂಸನಾಮಕ ಹರಿಯ**=ಸರ್ವದೋಷವಿದೂರನಾದ ಹಂಸ ಎಂಬ ಎರಡು ವರ್ಣ ವಿಶಿಷ್ಟವಾಗಿ ಹೊರಡುವ ಶ್ವಾಸೋಚ್ಛ್ವಾಸಗಳಿಗೆ ಮುಖ್ಯಪ್ರೇರಕನಾದ ಹಂಸನಾಮಕ ಶ್ರೀಹರಿಯನ್ನು ಅರಿತು, **ಷೋಡಶ ಈ ಶತಾಬ್ಧ ದಿ**=ಮಾನವನ ಆಯುರ್ಮಾನವಾದ ೧೧೬ ವರ್ಷಗಳಲ್ಲಿ, **ಭಜಿಸೆ**=ಶ್ವಾಸಕ್ರಿಯೆಯು ಹಂಸ ನಾಮಕ ಶ್ರೀಹರಿಯ ಪೂಜಾಕಾರ್ಯವೆಂದರಿತು, ಕೊಂಡಾಡುತ್ತಿರುವವರಿಗೆ, **ಕುಚೇಲಗೊಲಿದಂದದಲಿ**=ಸುಧಾಮನಿಗೆ ಅನುಗ್ರಹಿಸಿದಂತೆ, **ಒಲಿವ**= ದರ್ಶನಭಾಗ್ಯ ದ್ವಾರಾ ಪ್ರಸನ್ನನಾಗುವನು. ॥ ೪೨ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸ್ಥೂಲದೇಹದಿಂದ ಆಗತಕ್ಕ ಶ್ವಾಸಗಳು ೧೧೬ ವರುಷಕ್ಕೆ ಆಗತಕ್ಕದ್ದರನ್ನ ಹೇಳತಾರೆ.

ಹಗಲು-ರಾತ್ರಿ ಸೇರಿ ಒಂದು ದಿನದಲ್ಲಿ ನಾಸಿಕಾದ್ವಾರದಿಂದ ಬಿಡುವ ಶ್ವಾಸ ಗಳು ೨೧,೬೦೦ ಪ್ರಕಾರ ತಿಂಗಳು ಒಂದಕ್ಕೆ, ೬,೦೦,೦೦೦ದ ಮ್ಯಾಲೆ ಅಧಿಕ, ನಲವತ್ತುಸಾವಿರ ಎಂಟುಸಾವಿರ ಅಂತು ಆರುಲಕ್ಷ ನಲವತ್ತೆಂಟುಸಾವಿರ ಸಂಖ್ಯಾ ದಿಂದ ಆಗೋವಾಗತವೆ.

**ನಿತ್ಯಂ ಹೀನೋಽಖಿಲೈಃ ದೋಷೈಃ ಸಾರರೂಪೋ ಯತೋ ಹರಿಃ ।**
**ಹಂಸ ಇತ್ಯುಚ್ಯತೇ ತಸ್ಮಾದ್ವಾಯುಸ್ಥಃ ಶುಷಿಷನ್ಮತಃ ॥**

ಎಂತ ಕಾಠಕೋಪನಿಷದ್ವ್ಯಾಖ್ಯಾನುಸಾರ ನಿರಂತರದಲ್ಲೂ ಸರ್ವದೋಷದಿಂದ ದೂರನಾದ ಹಂಸನಾಮಕನಾದ **ಹಂಸ** ಎಂತ ಎರಡುವರ್ಣ ವಿಶಿಷ್ಟವಾಗಿ ಹೊರಡತಕ್ಕ ಶ್ವಾಸೋಚ್ಛ್ವಾಸಗಳಿಗೆ ಬಿಂಬನಾದ ಹರಿಯ ತಿಳಿದು. ಈ ಶ್ವಾಸಗಳು ಮನುಷ್ಯನ ಆಯುರ್ಮಾನ ೧೧೬ ವರ್ಷಗಳಲ್ಲಿ ಆಗತಕ್ಕ ಶ್ವಾಸಗಳು ತೊಂಭತ್ತುಕೋಟಿ ಇಪ್ಪತ್ತುಲಕ್ಷ ಹದಿನಾರುಸಾವಿರ ಆಗತವೆ. ಇಷ್ಟು **ಹಂಸ** ರೂಪಗಳು ಭೂತಭವಿಷ್ಯದ್ವರ್ತಮಾನಕಾಲಗತ ಶ್ವಾಸಗಳಲ್ಲಿ ಅನುಸಂಧಾನ ಮಾಡಿ ತಿಳಿದು ಪ್ರತಿದಿನದಲ್ಲೂ ಭಜನ ಮಾಡಿದರೆ, ಮೂಲರೂಪಿಯಾದಹಂಸ ನಾಮಕ ಹರಿಗೆ ಪ್ರತಿದಿನದಲ್ಲಿ ಬಿಡತಕ್ಕ ಶ್ವಾಸಗಳು ಕೆಲವು ಪೂಜಾಸಾಧನಗಳಾಗಿನ್ನು, ಕೆಲವು ಆಭರಣಗಳಾಗಿನ್ನು, ಕೆಲವು ನಿವೇದನ ಪದಾರ್ಥಗಳಾಗಿನ್ನೂ ಈ ಪ್ರಕಾರ ಪರಮಾತ್ಮಗೆ ಪ್ರೀತಿಯಾಗತದೆ. ಈ ರೀತ್ಯಾ ತಿಳಿದು ಉಪಾಸನಾ ಮಾಡತಾ ಬಂದರೆ ಕರುಣಾಸಾಗರನಾದ ಪರಮಾತ್ಮನು, ಸುಧಾಮಗೆ ಪ್ರತ್ಯಕ್ಷನಾದ ರೀತಿಯಿಂದ ತನ್ನ ಸಂದರ್ಶನ ಕೊಡೋವನಾಗತಾನೆ. ॥ ೪೨ ॥

**೨. ಭಾವಪ್ರಕಾಶಿಕೆ**

ಪ್ರತಿ ದಿವಸದಲ್ಲಿಯೂ ನಾವು ಬಿಡುವ ಶ್ವಾಸಗಳು ೨೧,೬೦೦. ಈ ಶ್ವಾಸಗಳೇ ಪ್ರಾಣದೇವರು ನಮ್ಮೊಳಗಿದ್ದು ಮಾಡಿಸುವ ಹಂಸಮಂತ್ರ ಜಪವೆಂದು ಮೊದಲನೆಯ ಮಂಗಳಾಚರಣ ಸಂಧಿಯಲ್ಲಿ ಆರುಮೂರೆರಡೊಂದು ಸಾವಿರ ಎಂಬ ಪದ್ಯದಿಂದ ವಿವರಮಾಡಲ್ಪಟ್ಟಿದೆ. ಹೀಗೆ ದಿನವೊಂದಕ್ಕೆ ೨೧,೬೦೦ ಆದರೆ ಮಾಸ ಒಂದಕ್ಕೆ ೨೧೬೦೦X೩೦ = (೬೪೮೦೦೦) ಆರುಲಕ್ಷದ ನಾಲ್ವತ್ತೆಂಟು ಸಾವಿರ ಶ್ವಾಸಗಳು ಆಗುವುವು. ಈ ಪ್ರಕಾರ ಮೇಲೆ ಹೇಳಿದಂತೆ ೧೧೬ ವರ್ಷಗಳ ವರೆವಿಗೂ ನಿತ್ಯದಲ್ಲೂ ನಾವು ಬಿಡುವ ಶ್ವಾಸಗಳೆಲ್ಲವೂ ಶ್ರೀಹಂಸನಾಮಕ ಪರಮಾತ್ಮನ ಮಂತ್ರೋಪಾಸನೆ ಎಂದು ತಿಳಿದು ಭಜಿಸಿದರೆ ಶ್ರೀಕೃಷ್ಣನು ಕುಚೇಲನೆಂಬ ಬ್ರಾಹ್ಮಣನಿಗೆ ಒಂದು ಹಿಡಿ ಅವಲಕ್ಕಿಗೆ ಒಲಿದು ಇಹಪರವನ್ನು ಕೊಟ್ಟಂತೆ ಇಹಪರದಲ್ಲಿ ಸುಖವನ್ನು ಕೊಡುವನು. ॥ ೪೨ ॥

**೩. ಭಾವದರ್ಪಣ**

ಶ್ವಾಸಪ್ರಕರ್ಣ ಎರಡುಪದ್ಯಾರ್ಥವು ಶ್ವಾಸಸಂಧಿಯಲ್ಲಿ ವಿವರಿಸುತ್ತದೆ. ತಿಳಿಯತಕ್ಕದ್ದು. ಮಾಷವಂಧಕೇತಿ, ॥ ೪೨ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಮಾಸ ಇತಿ ॥ ಹಂಸರೂಪೌ ಇತ್ಯುಕ್ತೇಃ ॥

## ಕನ್ನಡಾರ್ಥ

ಮುಖ್ಯಪ್ರಾಣನು ಹಂಸ–ಶ್ವಾಸಮಂತ್ರವನ್ನು ಜಪಿಸುವ ಮಹಿಮೆಯನ್ನು ಬಣ್ಣಿಸುತ್ತಾರೆ ಮಾಸ ಎಂಬ ಪದ್ಯದಿಂದ. ॥ ೪೨ ॥

## ೫. ಶ್ರೀಗುರುಹೃದಯಪ್ರಕಾಶಿಕೆ

ಪ್ರಾಣದೇವರು ವಸ್ವಾದಿ ಸರ್ವಜೀವದೇಹದಲ್ಲೂ ಇದ್ದಾರೆಂದು ಮೇಲೆ ಹೇಳಿದ್ದು ನ್ಯಾಯವೆಂದು ತಿಳಿಸುವುದಕ್ಕೆ, ಶ್ವಾಸರೂಪ ಹಂಸಮಂತ್ರಜಪ ಮಾಡುವ ಆ ಪ್ರಾಣದೇವರ ಮಹಿಮೆಯನ್ನೇ, ಮಾಸವೆಂದು ಮೊದಲು ಮೂರುಪದ್ಯಗಳಿಂದ ತಿಳಿಸುತ್ತಾರೆ. ಒಂದು ತಿಂಗಳಿಗೆ ನಿತ್ಯ ನಡೆಯುವ ಶ್ವಾಸ ರೂಪ ಹಂಸಮಂತ್ರಜಪವು ಆರುಲಕ್ಷದ ನಲವತ್ತೆಂಟುಸಹಸ್ರವಾಗುವುದು. ಹಂಸ ನಾಮಕ ಶ್ರೀಹರಿಯನ್ನು ಮೇಲೆಹೇಳಿದ ೧೦೭ ವರುಷಗಳಲ್ಲೂ ಪ್ರಾಣದೇವರು ಭಜಿಸುವರೆಂದು ತಿಳಿದು ಜೀವನು ಚಿಂತಿಸಿದರೆ, ಕುಚೇಲಗೆ ದಯದಿಂದ ಕೃಷ್ಣ ಅವಲಕ್ಕಿ ನಿಮಿತ್ತಮಾಡಿ ಇಷ್ಟಾರ್ಥಕೊಟ್ಟು ಒಲಿದಂತೆ, ನಿತ್ಯದಲ್ಲೂ ಶ್ರೀಹರಿ ಆ ಜೀವರಿಗೆ ಒಲಿಯುವನು. ॥ ೪೨ ॥

# ಸರ್ವವ್ಯಾಖ್ಯಾನಸಾರಸಂಗ್ರಹ

ತ್ರಿವಿಧಜೀವರ ಸ್ಥೂಲದೇಹದಲ್ಲಿ ಶ್ರೀಮುಖ್ಯಪ್ರಾಣದೇವರು ಪ್ರತಿದಿನ ದಲ್ಲಿಯೂ ೨೧,೬೦೦ ಸಂಖ್ಯಾಕವಾದ ಶ್ವಾಸಜಪಗಳನ್ನು ಮಾಡುತ್ತಾರೆ.

ಸಕಲದೋಷವಿದೂರನೂ, ಶುದ್ಧಾನಂದಸ್ವರೂಪನೂ ಆದ ಶ್ರೀಪರ ಮಾತ್ಮನಿಗೆ ಹಂಸ ಎಂದು ಹೆಸರು.

ಶ್ರೀವಾಯುದೇವರು ತ್ರಿವಿಧಜೀವರಲ್ಲಿ ಪ್ರತಿದಿನವೂ ತಾವೇ ರಚನಾ

ಮಾಡಿ, ಜೀವರದ್ವಾರಾ ಮಾಡಿಸುವ ಹಂಸಮಂತ್ರವು ಆರು ಅಕ್ಷರಗಳಿಂದ ಯುಕ್ತವಾಗಿದೆ. ಹಂಸಃ–ಸೋऽಹಂ–ಸ್ವಾಹಾ ಎಂಬ ಷಡಾಕ್ಷರಾತ್ಮಕವಾದ ಶ್ವಾಸಜಪವನ್ನು ತ್ರಿವಿಧಜೀವರ ಸ್ವರೂಪಯೋಗ್ಯತಾನುಸಾರ ಶ್ರೀಮುಖ್ಯಪ್ರಾಣದೇವರು ತತ್ತತ್ಕ್ಷಣ ರಚನಾಮಾಡಿ, ಹಂಸನಾಮಕ ಶ್ರೀಪರಮಾತ್ಮನಿಗೆ ಅರ್ಪಿಸುತ್ತಾ, ತ್ರಿವಿಧಜೀವರಿಗೆ ಶ್ರೀಹರಿಯ ಆಜ್ಞಾನುಸಾರ, ಅವರವರ ಗತಿಯನ್ನು ಕೊಡುತ್ತಾರೆ.

ಪೂರ್ವೋಕ್ತ ಪದ್ಯಗಳಲ್ಲಿ ವಿವರಿಸಿರುವಂತೆ, ಮಾನವನ ಆಯುರ್ಮಾನವು ೧೧೬ ವರ್ಷಗಳೆಂದು ಪರಿಗಣಿತವಾಗಿದೆ. ಪ್ರತಿದಿವಸಕ್ಕೆ ೨೧,೬೦೦ರಂತೆ, ಒಂದು ಮಾಸಕ್ಕೆ ೬,೪೮,೦೦೦ ಶ್ವಾಸಮಂತ್ರಗಳನ್ನು ಶ್ರೀಮುಖ್ಯಪ್ರಾಣದೇವರು ನಮ್ಮ ಸ್ಥೂಲದೇಹದಲ್ಲಿದ್ದು, ಮಾಡುತ್ತಾ, ಹಂಸ ಎಂಬ ಎರಡುವರ್ಣ ವಿಶಿಷ್ಟವಾಗಿ ನಾಸಿಕಾದ್ವಾರಾ ಹೊರಡತಕ್ಕ ಶ್ವಾಸೋಚ್ಛ್ವಾಸಗಳಿಗೆ ಬಿಂಬನಾದ ಶ್ರೀಹರಿಯ ಪಾದಪದ್ಮಗಳಿಗೆ ಅರ್ಪಿಸುತ್ತಾ, ತ್ರಿವಿಧಜೀವರ ಆಯುಸ್ಸನ್ನು ಅಳೆಯುತ್ತಿರುವರು. ಒಂದು ಮಾಸಕ್ಕೆ ೬,೪೮,೦೦೦ ಶ್ವಾಸಗಳಂತೆ, ೧೨ ಮಾಸಗಳ ಒಂದು ಸಂವತ್ಸರಕ್ಕೆ ೭೭,೭೬,೦೦೦ ಆಗುವುದು. ಈ ಪ್ರಕಾರ ೧೧೬ ವರ್ಷಗಳಿಗೆ ೯೦ ಕೋಟಿ ೨೦ ಲಕ್ಷ ೧೬ ಸಾವಿರ ಹಂಸಮಂತ್ರಗಳಾಗುವುವು. ಈ ಪ್ರಕಾರ, ಮಾನವರ ಆಯುರ್ಮಾನವಾದ ೧೧೬ ವರ್ಷಗಳಲ್ಲಿ ನಮ್ಮ ಆಯುರ್ಮಾನಕ್ಕೆ ಕಾರಣರಾದ ಶ್ರೀಮುಖ್ಯಪ್ರಾಣದೇವರನ್ನೂ ಅವರಂತರ್ಗತ ಬಿಂಬರೂಪೀ ಹಂಸನಾಮಕ ಶ್ರೀಹರಿಯನ್ನೂ ನಿತ್ಯದಲ್ಲಿ ಕೊಂಡಾಡುತ್ತಿರುವ ಭಕ್ತರಿಗೆ ಕರುಣಾಸಾಗರನಾದ ಕಮಲದಳಾಯತಾಕ್ಷನು ಪ್ರಸನ್ನನಾಗಿ, ಬಡವನಾದ ಕುಚೇಲನು ಅತ್ಯಂತ ಭಕ್ತಿಭಾವದಿಂದ ತನಗಿತ್ತ ಅವಲಕ್ಕಿಯನ್ನು ಸ್ವೀಕರಿಸಿ, ಅವನಿಗೆ ಇಹ ಪರಗಳಲ್ಲಿ ಸುಖವನ್ನು ಕರುಣಿಸಿದಂತೆ, ಒಲಿಯುವನು ಎಂತ ಪದ್ಯಾಭಿಪ್ರಾಯ. ॥ ೪೨ ॥

## ಪದ್ಯ ೪೩

**ಮೂಲ**

ಸ್ಥೂಲದೇಹದೊಳಿದ್ದು ವರುಷಕೆ ।
ಏಳಧಿಕ ಎಪ್ಪತ್ತು ಲಕ್ಷದ ।
ಮೇಲೆ ಎಪ್ಪತ್ತಾರುಸಾವಿರ ಶ್ವಾಸಜಪಗಳನು ॥
ಗಾಳಿದೇವನು ಕರುಣದಲಿ ಈ ।
ರೇಳುಲೋಕದೊಳುಳ್ಳ ಚೇತನ ।
ಜಾಲದೊಳು ಮಾಡುವನು ತ್ರಿಜಗದ್ವ್ಯಾಪ್ತ ಪರಮಾಪ್ತ ॥೪೩॥

**ಅವತರಣಿಕೆ**

ತ್ರಿವಿಧಜೀವರ ಸ್ಥೂಲಶರೀರದಲ್ಲಿದ್ದು, ಒಂದು ವರ್ಷದ ಅವಧಿಯಲ್ಲಿ ೭೭,೭೬,೦೦೦ ಸಂಖ್ಯಾಕವಾದ ಶ್ವಾಸಜಪಗಳನ್ನು ಶ್ರೀಮುಖ್ಯಪ್ರಾಣದೇವರು ಶ್ರೀಶನಿಂದ ಪ್ರೇರಿತರಾಗಿ ಮಾಡುತ್ತಾರೆ ಎಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಗಾಳಿದೇವನು** = ಜೀವೋತ್ತಮರಾದ ಅನಿಲನಾಮಕ ಶ್ರೀವಾಯುದೇವರು, **ಸ್ಥೂಲದೇಹದೊಳಿದ್ದು** = ತ್ರಿವಿಧಜೀವರ ಸ್ಥೂಲಶರೀರದಲ್ಲಿದ್ದವರಾಗಿ, **ವರುಷಕೆ** = ೩೬೦ ದಿವಸಗಳ ಕಾಲಾವಧಿಯಾದ ಒಂದು ಸಂವತ್ಸರದಲ್ಲಿ, **ಏಳಧಿಕ** = ಏಳು ಹೆಚ್ಚಾದ, **ಎಪ್ಪತ್ತುಲಕ್ಷದ** = ಎಪ್ಪತ್ತುಲಕ್ಷದ, ಅಂದರೆ, ಎಪ್ಪತ್ತೇಳು ಲಕ್ಷದ, **ಮೇಲೆ** = ಅದರ ಮೇಲೆ, **ಎಪ್ಪತ್ತಾರುಸಾವಿರ** = ಎಪ್ಪತ್ತಾರು ಸಹಸ್ರ—ಅಂದರೆ, ಎಪ್ಪತ್ತೇಳುಲಕ್ಷದ ಎಪ್ಪತ್ತಾರುಸಾವಿರ ಸಂಖ್ಯಾಕವಾದ **ಶ್ವಾಸಜಪಗಳನು** = ಷಡಕ್ಷರಾತ್ಮಕವಾದ ಹಂಸಮಂತ್ರಾಖ್ಯ ಶ್ವಾಸಜಪಗಳನ್ನು (ದಿನಕ್ಕೆ ೨೧,೬೦೦ ಶ್ವಾಸಜಪಗಳು. ಒಂದು ವರ್ಷಕ್ಕೆ ೨೧೬೦೦X೩೬೦ =

೭೭,೭೬,೦೦೦) **ಈರೇಳುಲೋಕದೊಳುಳ್ಳ** = ಹದಿನಾಲ್ಕು ಲೋಕಗಳಲ್ಲಿ ವಿದ್ಯಮಾನರಾಗಿರುವ (ಈರೇಳು = ೨X೭ = ೧೪), **ಚೇತನಜಾಲದೊಳು** = ತ್ರಿವಿಧರಾದ ಜೀವರ ಸಮೂಹದಲ್ಲಿ, **ಮಾಡುವನು** = ಶ್ವಾಸಕ್ರಿಯಾರೂಪವಾದ ಶ್ವಾಸಜಪಗಳನ್ನು ನಾಸಿಕದ್ವಾರಾ ಆಯಾಯ ಜೀವರ ಯೋಗ್ಯತೆಗನುಸಾರವಾಗಿ ಮಾಡುವನು. **ತ್ರಿಜಗದ್ವ್ಯಾಪ್ತ** = ಅಂತಹ ಮುಖ್ಯಪ್ರಾಣದೇವರು ತ್ರಿಜಗಾತ್ಮಕವಾದ ಈ ಬ್ರಹ್ಮಾಂಡದಲ್ಲಿ ಸರ್ವತ್ರ ವ್ಯಾಪ್ತರು. **ಪರಮಾತ್ಮ** = ಶ್ರೀಪರಮಾತ್ಮನಿಗೆ ಪ್ರೀತಿವಿಷಯರು (ಶ್ರೀಹರಿಯ ಭಕ್ತರಿಗೆ ಪರಮ ಮಿತ್ರರು) ॥೪೩॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಶ್ವಾಸಜಪ ಆಗತಕ್ಕದ್ದು ಸ್ಥೂಲದೇಹದಲ್ಲಿ ಅಂತ ಹೇಳತಾರೆ.

ಜೀವೋತ್ತಮರಾದ ವಾಯುದೇವರು, ಸ್ಥೂಲದೇಹದೊಳಿದ್ದವರಾಗಿ ವರುಷಸಾಂಕೇತ ೩೬೦ ದಿನಕ್ಕೆ, ದಿನ ಒಂದಕ್ಕೆ ೨೧,೬೦೦ ಶ್ವಾಸದ ಮ್ಯಾರಿಗೆ, ಎಪ್ಪತ್ತುಲಕ್ಷ ಅಧಿಕ ಏಳುಲಕ್ಷದ ಮೇಲೆ ಎಪ್ಪತ್ತಾರುಸಾವಿರ ಎಂದರೆ, ೭೭,೭೬,೦೦೦ ಅಂತು ಮೊತ್ತ ಇಷ್ಟು. ಈ ಎಪ್ಪತ್ತೇಳುಲಕ್ಷದ ಎಪ್ಪತ್ತಾರು ಸಾವಿರ ಶ್ವಾಸಜಪಗಳನ್ನು ಪರಮಾತ್ಮನ ಅನುಗ್ರಹದಿಂದ, ಹದಿನಾಲ್ಕು ಲೋಕಗಳಲ್ಲಿ ವಿದ್ಯಮಾನರಾದ ತ್ರಿವಿಧರಾದ ಪ್ರಾಣಿಗಳ ಸ್ಥೂಲಶರೀರಗಳಲ್ಲಿ, ಅವರವರ ಯೋಗ್ಯತಾನುಸಾರ ಶ್ವಾಸಕಾರ್ಯ ನಡಸತಾ ಇದ್ದಾರೆ. ಹಂಸ ಎಂಬ ಎರಡು ವರ್ಣಾತ್ಮಕಮಂತ್ರಮುಕ್ತಿಯೋಗ್ಯರು, ಈ ಶ್ಲೋಕಕ್ಕೆ ಪೂರ್ವಶ್ಲೋಕೋಕ್ತ ಪ್ರಮಾಣಾರ್ಥದಿಂದಲೂ, ಇನ್ನೂ ಸೋಹಂ ಎಂದರೆ, ಸಃ–ತದಂತರ್ಯಾಮಿಯಾದಂಥಾ ಭಗವಂತನೇ, ಅಹಂ–ಮದಂತರ್ಯಾಮಿಯಾಗಿರುವನು ಎಂದು ಅಂತರ್ಯಾಮಿ ಪರತಯಾದಿಂದಲೂ, ಸ್ವಾಹಾ ಎಂದರೆ ಉಪಾಸನ ಮಾಡತೇನು ಎಂತ ಈ ಪ್ರಕಾರ ಉಪಾಸನಾ ಮಾಡತಾರೆ. ನಿತ್ಯಸಂಸಾರಿಗಳು ತಮೋಯೋಗ್ಯರು ಇದಕ್ಕೆ ವ್ಯತ್ಯಾಸವಾಗಿ ಉಪಾಸನಾ ಮಾಡತಾರೆ. ಆದ್ದರಿಂದ ಒಂದು ಮಂತ್ರವೇ ತ್ರಿವಿಧರಿಗೆ ತ್ರಿವಿಧಫಲ ಕೊಡುತ್ತದೆ. ಈ ವಾಯುದೇವರು ತ್ರಿವಿಧಜೀವರ

ಸ್ಥೂಲದೇಹದಲ್ಲಿ ವ್ಯಾಪ್ತರಾಗಿ ಶ್ವಾಸಕಾರ್ಯ ನಡಸತಾ, ಪರಮಾತ್ಮಗೆ ಕೇವಲ ಭಕ್ತರಾದ ಭಗವದ್ಭಕ್ತರಿಗೆ ಪರಮಮಿತ್ರರಾಗಿ ಇದ್ದಾರೆಂದು ತಾತ್ಪರ್ಯ.

ಓಂ ಹಂಸಃ ಸೋऽಹಂ ಸ್ವಾಹಾ ಎಂತ ಮೂಲಮಂತ್ರ. ಈ ಮಂತ್ರವನ್ನ ಪೂರ್ವೇದ್ಯುಃ ಪ್ರಾತರಾರಭ್ಯ ಅದ್ಯ ಸೂರ್ಯೋದಯಪರ್ಯಂತಂ ಮದ್ದೇಹಸ್ಥಿತ ಮುಖ್ಯಪ್ರಾಣೇನ ಮಯಾ ಚ ಕೃತೇನ ಷಟ್‌ಶತಾಧಿಕ ಏಕವಿಂಶತ್ಸಹಸ್ರಾತ್ಮಕ ಶ್ವಾಸರೂಪಹಂಸಮಂತ್ರಜಪೇನ ಭಗವಾನ್ ಹಂಸರೂಪಿ ಶ್ರೀಲಕ್ಷ್ಮೀನಾರಾಯಣಃ ಪ್ರೀಯತಾಂ । ಶ್ರೀಕೃಷ್ಣಾರ್ಪಣಮಸ್ತು ॥ ಎಂತ ಶ್ರೀವಾಯುದೇವರೂನೂ, ಅಧಿಕಾರಿಗಳೂನೂ ಮಾಡಿ, ಶ್ರೀಪರಮಾತ್ಮಗೆ ಸಮರ್ಪಣ ಮಾಡತಾರೆ. ಅಧಿಕಾರಿಗಳಾದ ತ್ರಿವಿಧಜೀವರಿಗೆ ಅವರವರ ಯೋಗ್ಯತಾನುಸಾರ ಫಲವಾಗತದೆ. ಈ ಹಂಸಮಂತ್ರ ಮೂರುಪ್ರಕಾರ, ಹಂಸಃ ಸೋऽಹಂ ಸ್ವಾಹಾ ಎಂತ.

ತಂತ್ರಸಾರದಲ್ಲಿ- ವಿಯತ್ಸ ಇತಿ ಯುಗ್ಮಾರ್ಣೋ ವಿಪರೀತಶ್ಚ ಸಸ್ಮೃತಃ ।
ವಿಸರ್ಗಹೀನೋ ವೇತಶ್ಚ ಬಿಂದುಹೀನೋತ್ತರಸ್ತಥಾ ।
ತ್ರಯ ಏತೇ ಮಹಾಮಂತ್ರಾಃ ಪುರುಷಾರ್ಥ ಚತುಷ್ಟಯೇ ।
ಕಲ್ಪವೃಕ್ಷಾಃ ಪ್ರಿಯಾ ವಿಷ್ಣೋರ್ವಿಶೇಷಜ್ಞಾನದಾಯಕಾಃ ।
ತೈರೇವ ತು ದ್ವಿರಾವೃತ್ತೈರಂಗಮೇಷಾಂ ಪ್ರಕೀರ್ತಿತಂ ।

ವಿಯದಿತಿ ಅತ್ರ ವಿಯತ್ ಆಕಾಶಬೀಜಂ ಹ ಕಾರ ಇತ್ಯರ್ಥಃ । ಸ ಚ ಬಿಂದುಸಹಿತ ಇತಿ ದ್ರಷ್ಟವ್ಯಂ ಬಿಂದುಹೀನ ಇತಿ ವಕ್ಷ್ಯಮಾಣತ್ವಾತ್ . ತತಃ ಸಃ ವಿಸರ್ಗಸಹಿತಃ ಸಕಾರ ಇತ್ಯರ್ಥಃ । ವಿಸರ್ಗಹೀನ ಇತಿ ವಕ್ಷ್ಯಮಾಣತ್ವಾತ್ । ಅನೇನ ಹಂಸಃ ಇತಿ ಯುಗ್ಮವರ್ಣೋ । ದ್ವ್ಯಕ್ಷರಃ ಮಂತ್ರ ಉಕ್ತೋಭವತಿ ॥೧॥

ಸಃ ಹಂಸ ಇತಿ ದ್ವ್ಯಕ್ಷರೋ ಮಂತ್ರಃ ವಿಪರೀತಃ ವ್ಯುತ್ಕ್ರಮೇಣ ಉಚ್ಚಾರಿತಶ್ಚೇತ್ ಸೋಹಮಿತ್ಯಪಿ ದ್ವ್ಯಕ್ಷರಃ ದ್ವಿತೀಯೋ ಮಂತ್ರಃ ಸ್ಮೃತಃ ॥ ೨ ॥

ಹಂಸಃ ಇತಿ ಅಕ್ಷರಯೋಃ ವ್ಯುತ್ಕ್ರಮೇಣ ಉಚ್ಚಾರಣೇ ಸತಿ ಸಃ ಹಂ ಇತಿ ಭವತಿ। ತತ್ರ ಸಕಾರವಿಸರ್ಗಸ್ಯ ಸ್ಥಾನಿವದ್ಭಾವೇನ ಸಕಾರತ್ವಾತ್ ತಸ್ಯ ಸಸಜುಷೋ ರುರಿತಿ ರುತ್ವೇ ತಸ್ಯ (ಚ) ಹಶಿ ಚೇತ್ಯುತ್ವೇ (ಚ) ಸೋಹಮಿತಿ ಭವತೀತಿ ಭಾವಃ।

ಸಃ ಹಂ ಇತ್ಯತ್ರೈವ ಸಃ ಸಕಾರಃ ಸರ್ಗಹೀನಃ ಸರ್ಗೇಣ ವಿಸರ್ಗೇಣ ಹೀನಃ ರಹಿತಃ ಕರ್ತವ್ಯಃ । ಉಪಲಕ್ಷಣಮೇತತ್ ಅಕಾರರಹಿತಶ್ಚ ಕಾರ್ಯಃ । ವೇತಶ್ಚ । ವಾಕಾರೇಣ ಇತಃ ಯುಕ್ತಶ್ಚ ಕಾರ್ಯಃ । ತತಶ್ಚ ಸ್ವಾ ಇತಿ ಭವತಿ । ಅಯಂ ಚ ಬಿಂದುಹೀನೋತ್ತರಃ । ಬಿಂದುನಾ ಅನುಸ್ವಾರೇಣರಹಿತಃ ಉಪಲಕ್ಷಣಮೇತತ್ । ಆಕಾರೇಣ ಸಹಿತಶ್ಚ ಉತ್ತರಃ ಸ್ವಾನಂತರಂ ಸ್ಥಿತಃ ಹಮಿತಿ ವರ್ಣಃ ಯಸ್ಮಿನ್ ಸ ತಥೋಕ್ತಃ । ತಥಾ ಪೂರ್ವವದೇವ ದ್ವ್ಯಕ್ಷರಃ ಸ್ವಾಹಾ ಇತಿ ತೃತೀಯೋ ಮಂತ್ರಸ್ಮೃತಃ ಇತ್ಯರ್ಥಃ ॥ ೩ ॥

ತಥಾ ಚ ಹಂಸಃ ಸೋಽಹಂ ಸ್ವಾಹಾ ಮಂತ್ರತ್ರಯಾತ್ಮಕಃ ಮಾಲಾರೂಪಃ ಷಡಕ್ಷರ ಹಂಸ ಮಂತ್ರಃ ಉದ್ಧೃತೋ ಭವತಿ ॥ ಇದಕ್ಕೆ ಅರ್ಥ–

೧. ಹಕಾರ ಎಂಬುವುದು ಆಕಾಶಬೀಜವಾದದ್ದು. ಅದು ಬಿಂದು ಸಹಿತವಾಗಿಇರುವಕಡಿಯಿಂದ ಹಂ ಎಂತ ಆಗಿ ನಂತರ ವಿಸರ್ಗಸಹಿತ ಸಕಾರ ಎಂದರ್ಥ. ವಿಸರ್ಗಯುಕ್ತವಾದರೆ ಹಂಸ ಎಂಬುವ ಪ್ರಥಮ ಮಂತ್ರವಾಯಿತು.

೨. ಅದೇ ಹಂಸಮಂತ್ರವನ್ನು ವ್ಯುತ್ಕ್ರಮವಾಗಿ ಉಚ್ಚಾರಮಾಡಿದರೆ ಸೋಽಹಂ ಎಂತ ದ್ವಿತೀಯ ಮಂತ್ರವಾಗುತ್ತದೆ. ಹಂಸಃ ಎಂಬುವ ಅಕ್ಷರದಲ್ಲಿ ಸಕಾರದ ವಿಸರ್ಗ ಸ್ಥಾನಿವದ್ಭಾವದಿಂದ ಸಕಾರವಾಗುತ್ತೆ. ಅದಕ್ಕೆ (ಸಸಜುಷೋರುರಿತಿ ರುತ್ವೇ ತಸ್ಯ ಚ ಹಶಿ ಚೇತ್ಯುತ್ವೇ ಚ । ಎಂಬುವ ರೀತಿಯಿಂದ ಸೋಽಹಂ ಎಂಬುವ ದ್ವಿತೀಯ ಮಂತ್ರವಾಯಿತು.)

೩. ಸಃ ಹಂ ಎಂಬುವದರಲ್ಲಿ ಸಃ ಸಕಾರಕ್ಕೆ ಸರ್ಗಹೀನವಾಗಿ, ಸರ್ಗ ವಿಸರ್ಗಹೀನವಾಗಿ 'ವೇ'ಗೆ ವಕಾರ ವಕಾರಯುಕ್ತವಾದರೆ ಸ್ವಾ ಎಂತ ಆಗುತ್ತದೆ. ಇದು ಬಿಂದುಹೀನೋತ್ತರವು. ಬಿಂದುವಿಂದಲೂ, ಅನುಸ್ವಾರರಹಿತವಾಗಿನ್ನೂ ಆಕಾರದಿಂದ ಸಹಿತವಾಗಿ ಅನಂತರದಲ್ಲಿ ಇರುವದರಿಂದ ಹ ಎಂಬ ವರ್ಣವಾಯಿತು. ಪೂರ್ವದಂತೆ ಅಕ್ಷರದ್ವಯವೂ ಸೇರಿ ಸ್ವಾಹಾ ಎಂಬುವ ಮೂರನೇ ಮಂತ್ರವಾಯಿತು.

ಷಡಕ್ಷರಯುಕ್ತವಾದ ಹಂಸಃ ಸೋಽಹಂ ಸ್ವಾಹಾ ಎಂಬುವ ಮಂತ್ರತ್ರಯಾತ್ಮಕವಾಯಿತು. ಇದಕ್ಕೆ ಅರ್ಥವೇನೆಂದರೆ–

ಬೃಹದಾರಣ್ಯಕ ಭಾಷ್ಯೇ– ಶರೀರಾನಭಿಮಾನೀ ಯೋ ಹೃದಿ ಸಂಸ್ಥೋ ಜನಾರ್ದನಃ । ಅಭಿಮಾನವತೋ ದೇಹೇ ಜೀವಸ್ಯ ಸ ನಿಯಾಮಕಃ । ಸ ಏವ ಸೂರ್ಯಸಂಸ್ಥಶ್ಚ ಹಂಸಃ ಸೋಹಮಿತಿ ಶ್ರುತಃ । ಹಂತೃತ್ವಾದ್ಧಂಸನಾಮಾಸೌ ಸೋಹಂ ಚಾಸಾವಹೇ ಯತಃ । ಸ ಏವ ಸೂರ್ಯಸಂಸ್ಥೇನ ರೂಪೇಣೈವಾಕ್ಷಿಣಿ ಸ್ಥಿತಃ । ಅತೋಹಂ ಬ್ರಹ್ಮಾಸ್ಮೀ ತ್ಯಾದಿಷ್ವಹಂಶಬ್ದೋ ಅಹೇಯತ್ವವಾಚೀತಿ ಸಿದ್ಧಂ । ಅಹಮೇಷೋ ಹ್ಯಹೇಯತ್ವಾಜ್ಜೀವೇನ ಸಹಭಾವತಃ । ಅಸಾವಹರಿತಿ ಪ್ರೋಕ್ತಃ ಸರ್ವಲೋಕಪ್ರಕಾಶನಾತ್ । ಪ್ರಾಣೇ ಸ್ಥಿತೋ ಯಃ ಪುರುಷಃ ಸೋಸಾವಹಮಿತಿ ಸ್ಮೃತಃ । ಅಹೇಯತ್ವಾದಸುತ್ವಾಚ್ಚ ಮೇಯತ್ವಾದಸ್ಮಿನಾಮಕಃ । ಜುಹುರಾಣಮಲ್ಪಂ ಕುರ್ವತ್ ನ ಹಿ ಅಹಷಿಏಮಂ ಜಾನಾತೀತಿವತ್ । ಸರ್ವತ್ರಾಪ್ಯಹಂಶಬ್ದೋsಹೇಯತ್ವ ವಾಚ್ಯೇವ ।

—ಇತಿ ಛಾಂದೋಗ್ಯಭಾಷ್ಯೇ ॥

ಅಹಂ ಎಂಬುವ ಶಬ್ದಕ್ಕೆ ಹಂ ನಾಮಾ ಹನ್ಯಮಾನತ್ವಾಜ್ಜೀವಸ್ಯ ಸಮುದಾಹೃತಂ । ಜೀವಾದನ್ಯೋ ಯತೋ ವಿಷ್ಣುಃ ಅಹಂನಾಮಾ ತತಃ ಸ್ಮೃತಃ । ಇತಿ ಐತರೇಯಭಾಷ್ಯೇ ॥

ಅಹೇಯತ್ವಾದಹಂ ವಿಷ್ಣುಃ ಸ ತು ಸರ್ವಾಂತರತ್ವತಃ । ಇತಿ ಐತರೇಯ ಭಾಷ್ಯೇ ॥

ಸ್ವಾಹಾ ಎಂಬುವುದಕ್ಕೆ–ಜ್ಞಾನಂತು ಚೇತನಂ ಸ್ವಾಹಾ ಸ್ವಭಾಗಗತಿಮಾನ್ ಸ್ಮೃತಃ । ಇತಿ ಋಗ್ಭಾಷ್ಯೇ ॥

ಇನ್ನೂ ಸ್ವಾಹಾ ಎಂಬುವುದಕ್ಕೆ ಉಪಾಸನಕ್ಕೂ, ಸಮರ್ಪಣಕ್ಕೂ ಆರ್ಥರು ಅರ್ಥ ಹೇಳುತ್ತಾರೆ. ಹಂಸಃ ಸಃ ಅಹಂ ಸ್ವಾಹಾ ಎಂತ ಪದಮಾಡಿಕೋಬೇಕು.

೧. ಸಃ–ಪ್ರಸಿದ್ಧನಾದ, ಹಂಸಃ–ಹಂಸರೂಪೀ ಪರಮಾತ್ಮ, ಅಹಂ–ನಾನು, ಎರಡೂ ವಸ್ತುಗಳು ಸತ್ಯ. ನಾನು ಆ ಪರಮಾತ್ಮಗೆ ಭೃತ್ಯ. ನಾವಿಬ್ಬರೂ ಅವಿಯೋಗರಾಗಿ ಇದ್ದೇವು ಎಂತ ಶ್ರೀವಾಯುದೇವರು ಉಪಾಸನೆ ಮಾಡುತ್ತಾರೆ ಎಂತಲೂ, ಆ ಪ್ರಕಾರ ಅಧಿಕಾರಿಯಾದವರು ತಿಳಿದು ಉಪಾಸನ ಮಾಡಬೇಕೆಂತಲೂ, ಸೋಹಂ ಎಂದರೆ, ಸಃ–ತದಂತರ್ಯಾಮಿಯಾದ ಶ್ರೀಪರಮಾತ್ಮನೇ, ಅಹಂ–ಮದಂತರ್ಯಾಮಿ ಎಂತಲೂ, ಸ್ವಾಹಾ ಎಂದರೆ, ಈ ಹಂಸರೂಪೀ ಪರಮಾ

ತ್ಮಗೂ, ಸ್ವಕೀಯವಾದ ವ್ಯೂಹರೂಪಗಳಿಗೆ ಅಭೇದ ಎಂತಲೂ, ಈ ಪ್ರಕಾರ ಮುಕ್ತಿಯೋಗ್ಯರ ಉಪಾಸನ.

೨. ನಿತ್ಯಸಂಸಾರಿಗಳು ಶ್ರೀಹಂಸನಾಮಕ ಪರಮಾತ್ಮಗೂ ನನಗೂ ಭೇಧ ಎಂತಲೂ, ಆನಂದದಲ್ಲಿ ತಾರತಮ್ಯವಿಲ್ಲದೆ ಜೀವ–ಪರಮಾತ್ಮರು ಸಮಾನ ಎಂತಲೂ ಅವರ ಉಪಾಸನ.

೩. ತಮೋಯೋಗ್ಯರು, ಶ್ರೀಹಂಸರೂಪಿ ಪರಮಾತ್ಮಗೂ ತನಗೂ ಅಭೇದ ಎಂತಲೂ, ಅವನೇ ನಾನು ಎಂತಲೂ ಅವರ ಉಪಾಸನ.

ಇನ್ನು ಮುಕ್ತಿಯೋಗ್ಯರು ಭೂ, ಶ್ರೀಹಂಸನಾಮಕ ಪರಮಾತ್ಮ ಗುಣಪೂರ್ಣನೆಂತಲೂ, ತಮೋಯೋಗ್ಯರು ಅಭೂ ಅತ್ಯಂತವಾಗಿ ಅಪೂರ್ಣನೆಂತಲೂ, ನಿತ್ಯಸಂಸಾರಿಗಳು ಅಭೂ ಎಂದರೆ ಉಭಯಾತ್ಮಕವಾಗಿ, ಸಂದೇಹಜ್ಞಾನದಿಂದಲೂ, ಶ್ವಾಸ ಬಿಡತಾ ಇರತಾರೆ. ಇದರ ಗುಣ ಆ ಆ ಜೀವರ ನಿದ್ರಾಕಾಲದಲ್ಲಿ ಜ್ಞಾನಿಗಳಿಗೆ ವ್ಯಕ್ತವಾಗಿ ತೋರತದೆ ಎಂತ ತಾತ್ಪರ್ಯ ॥ ೪೩ ॥

## ೨. ಭಾವಪ್ರಕಾಶಿಕೆ

ವಾಯುದೇವರು, ೧೪ ಲೋಕಗಳಲ್ಲಿಯೂ ವ್ಯಾಪ್ತರಾಗಿ, ಎಲ್ಲಾ ಪ್ರಾಣಿಗಳಿಗೂ ಪರಮ ಆಪ್ತರಾಗಿ, ೧೪ ಲೋಕಗಳಲ್ಲಿರುವ ಸರ್ವಪ್ರಾಣಿಗಳ ಸ್ಥೂಲ ದೇಹಗಳಲ್ಲಿದ್ದು, ಆ ಪ್ರಾಣಿಗಳಿಂದ ತಾವು ಯಾವವಿಧವಾದ ಪ್ರತಿಫಲವನ್ನು ಅಪೇಕ್ಷಿಸದೆ, ಭಗವದಾಜ್ಞಾನುಸಾರ, ಭಗವತ್ಪ್ರೀತಿಗೋಸ್ಕರ, ಜೀವರಲ್ಲಿ ಕರುಣದಿಂದಲೇ ತಿಂಗಳು ಒಂದಕ್ಕೆ ೬೪೮೦೦೦ ಶ್ವಾಸಗಳಂತೆ ವರ್ಷ ಒಂದಕ್ಕೆ (೬೪೮೦೦೦X೧೨=೭೭೭೬೦೦೦) ಆರುಲಕ್ಷದ ನಾಲ್ವತ್ತೆಂಟುಸಾವಿರವನ್ನು ೧೨ ರಿಂದ ಗುಣಿಸಿದರೆ, ಆಗುವ, ಎಪ್ಪತ್ತೇಳು ಲಕ್ಷದ ಎಪ್ಪತ್ತಾರುಸಾವಿರ ಶ್ವಾಸಜಪಗಳನ್ನು ಪ್ರತಿವರ್ಷದಲ್ಲಿಯೂ ತಾವುಮಾಡಿ, ಜೀವರಿಂದಲೂ ಮಾಡಿಸುತ್ತಿರುವರು. ಈ ಶ್ವಾಸಜಪ ಮಂತ್ರ ಮೊದಲಾದವು ಮಂಗಳಾಚರಣ ಸಂಧಿಯಲ್ಲಿ ಆರುಮೂರೆರಡೊಂದು ಸಾವಿರ ಎಂಬ ಪದ್ಯಕ್ಕೆ ಮಾಡಿರುವ ವ್ಯಾಖ್ಯಾನದಲ್ಲಿ ವಿಸ್ತಾರವಾಗಿ ಬರಿಯಲ್ಪಟ್ಟಿವೆ. ॥ ೪೩ ॥

**೩. ಭಾವದರ್ಪಣ**

ಸ್ಥೂಲದೇಹೇತಿ ॥ ೪೩ ॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಗಣಯತಿ–ಸ್ಥೂಲ ಇತಿ ॥ ಗಾಳಿ–ವಾಯುಃ ॥ ೪೩ ॥

**ಕನ್ನಡಾರ್ಥ**

ವಾಯುದೇವನು ಸ್ಥೂಲದೇಹದಲ್ಲಿದ್ದು ಮಾಡುವ ಶ್ವಾಸಮಂತ್ರ ಜಪಗಳ ಒಟ್ಟು ಸಂಖ್ಯೆಯನ್ನು ಗಣಿಸಿ ತಿಳಿಸುತ್ತಾರೆ–ಸ್ಥೂಲದೇಹದಿ ಎಂಬ ಪದ್ಯದಿಂದ.

ಗಾಳಿದೇವ–ವಾಯುದೇವನು ॥ ೪೩ ॥

**೫. ಶ್ರೀಗುರುಹೃದಯಪ್ರಕಾಶಿಕೆ**

ಗಾಳಿದೇವರೆಂಬ ಶ್ರೀಪ್ರಾಣದೇವರು ದಯದಿಂದ ಹದಿನಾಲ್ಕುಲೋಕದಲ್ಲಿರುವ ಸರ್ವಜೀವರ ಸ್ಥೂಲದೇಹದಲ್ಲಿದ್ದು, ಒಂದು ವರುಷಕ್ಕೆ ಎಪ್ಪತ್ತೇಳುಲಕ್ಷದ ಎಪ್ಪತ್ತಾರುಸಾವಿರ ಶ್ವಾಸಜಪಗಳನ್ನು ದೇವರ ಆಜ್ಞಾನುಸಾರ ಮಾಡುತ್ತಿರುವರು. ಆದ್ದರಿಂದ ಆ ಪ್ರಾಣದೇವರು, ತ್ರಿಜಗದ್ವ್ಯಾಪ್ತ ಎಂದರೆ ಉಪಲಕ್ಷಣಯಾ ಹದಿನಾಲ್ಕುಲೋಕಗಳಲ್ಲೂ ವ್ಯಾಪ್ತರಾಗಿ, ಸಮಸ್ತ ಜೀವರಿಗೂ ಅತ್ಯಂತ ಆಪ್ತರೆಂಬ ಹಿತೈಷಿಗಳೂ ಆಗಿರುವರೆಂದರ್ಥ ॥ ೪೩ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ತ್ರಿವಿಧರಾದ ಜೀವರ ಸ್ಥೂದದೇಹದಲ್ಲಿ ಶ್ರೀಮುಖ್ಯಪ್ರಾಣದೇವರು ಶ್ವಾಸಪತಿನಾಮಕರಾಗಿ, ಶ್ವಾಸಕ್ರಿಯಾರೂಪವಾದ ವ್ಯಾಪಾರವನ್ನು ನಿರ್ವಹಿಸುತ್ತಾ, ಜೀವರ ಆಯುಸ್ಸನ್ನು ನಿಯಂತ್ರಿಸುತ್ತಿರುವರು.

ಶ್ರೀಮುಖ್ಯಪ್ರಾಣದೇವರು ದಿನಕ್ಕೆ ೨೧,೬೦೦ ಸಂಖ್ಯಾಕವಾದ ಹಂಸಮಂತ್ರಜಾಪಕರಾಗಿದ್ದು, ತ್ರಿವಿಧಜೀವರಿಗೆ ಅವರವರ ಸ್ವರೂಪಯೋಗ್ಯತೆಗನುಗುಣವಾಗಿ, ತ್ರಿವಿಧರೂಪವಾದ ಫಲವನ್ನು ನೀಡುತ್ತಿರುವರು.

ಒಂದು ವರ್ಷದ ಅವಧಿಗೆ ೧೨ ಮಾಸಗಳು. ಒಂದು ಮಾಸಕ್ಕೆ ೩೦ ದಿವಸಗಳ ಪ್ರಕಾರ, ಒಂದು ಮಾಸಾವಧಿಯಲ್ಲಿ ಆರುಲಕ್ಷದ ನಲವತ್ತೆಂಟುಸಾವಿರ ಶ್ವಾಸಜಪಗಳಾಗುವುವು. ಅಲ್ಲಿಗೆ ಒಂದು ವರ್ಷಕ್ಕೆ, ಎಪ್ಪತ್ತೇಳುಲಕ್ಷದ ಎಪ್ಪತ್ತಾರು ಸಾವಿರ ಶ್ವಾಸಜಪಗಳಾಗುವುವು.

| | | | |
|---|---|---|---|
| ಅಲ್ಲಿಗೆ, ಏಳಧಿಕ ಎಪ್ಪತ್ತುಲಕ್ಷದ | = | ೭೭,೦೦,೦೦೦ | |
| ಮೇಲೆ ಎಪ್ಪತ್ತಾರುಸಾವಿರ | = | ೭೬,೦೦೦ | |
| | = | ——— | |
| ಒಟ್ಟು | = | ೭೭,೭೬,೦೦೦ | ಶ್ವಾಸಜಪಗಳು |

ಅನಿಲನಾಮಕರಾದ ಮುಖ್ಯಪ್ರಾಣದೇವರಿಗೆ ಗಾಳಿದೇವ ಎಂತ ನಾಮ. ಅಂತಹ ಗಾಳಿದೇವನು ಶ್ವಾಸಜಪಗಳನ್ನು ಮಾಡುತ್ತಾ, ಸರ್ವದೋಷವಿದೂರನೂ, ಸರ್ವಗುಣಪರಿಪೂರ್ಣನೂ ಆದ ಹಂಸನಾಮಕ ಶ್ರೀಹರಿಯ ಚರಣಕಂಜಗಳಲ್ಲಿ ಅರ್ಪಿಸುವರು. ಇದರಿಂದ ತ್ರಿವಿಧರಿಗೆ ಅಧಿಕಾರಬೇಧದಿಂದ ತ್ರಿವಿಧಗತಿ ಪ್ರಾಪ್ತಿಯಾಗುವುದು.

ಹದಿನಾಲ್ಕುಲೋಕಗಳಲ್ಲಿ ವಿದ್ಯಮಾನರಾಗಿರುವ ಸಕಲ ಜೀವರಾಶಿಗಳ ಸ್ಥೂಲಶರೀರಗತರಾಗಿ, ಶ್ವಾಸಪತಿಗಳಾದ ಶ್ರೀವಾಯುದೇವರು ಶ್ವಾಸಜಪಗಳನ್ನು ಮಾಡುತ್ತಿರುವರು.

ಈ ಜಗತ್ತು ಸ್ವರ್ಗ–ಮರ್ತ್ಯ–ಪಾತಾಳಗಳೆಂಬ ಮೂರುಲೋಕಗಳಿಂದ ವ್ಯಾಪ್ತವಾಗಿದೆ. ಇದರಲ್ಲಿ ವಾಯುದೇವರು ಪೂರ್ಣವ್ಯಾಪ್ತರಾಗಿದ್ದಾರೆ. ಇವರು ಶ್ರೀಹರಿಯ ಮುಖ್ಯಪ್ರತೀಕರು, ಆಪ್ತಮಂತ್ರಿಗಳು. ಜೀವೋತ್ತಮರಾದ ಶ್ರೀಮುಖ್ಯಪ್ರಾಣರು ಪರಮಾತ್ಮನ ಪ್ರಥಮಾಂಗಭೂತರಾಗಿರುವುದರಿಂದ, ಸರ್ವಜೀವರಿಗೂ ಆಪ್ತರು. ತ್ರಿವಿಧಜೀವರ ಸಾಧನರೂಪವಾದ ಸರ್ವಕರ್ಮಗಳೂ ಶ್ರೀವಾಯುದೇವರಿಂದಲೇ (ಶ್ರೀಶನ ಆಜ್ಞಾನುಸಾರ) ಪ್ರವರ್ತಿತವಾಗಿ ನಡೆಯುತ್ತಿರುವುವು. ಶ್ರೀವಾಯುದೇವರಿಗೆ ಈಶನ ಪ್ರೇರಣೆ. ತತ್ತ್ವಾಭಿಮಾನಿದೇವತೆಗಳಿಗೆ ಶ್ರೀವಾಯುದೇವರ ಪ್ರೇರಣೆ. ಸ್ಥೂಲಶರೀರಗತ ಸಕಲ ಇಂದ್ರಿಯಗಳಲ್ಲಿಯೂ ಪ್ರಕಾಶಿತೋವ್ಯಾಪ್ತನಾದ ಜೀವನಿಗೆ ಇಂದ್ರಿಯಾಭಿಮಾನಿದೇವತೆಗಳ ಪ್ರೇರಣೆ. ಇದು ಬಿಂಬ–ಪ್ರತಿಬಿಂಬರೂಪವಾದ ಕ್ರಿಯಾಸರಣಿ, ॥ ೪೩ ॥

## ಪದ್ಯ ೪೪

**ಮೂಲ**

ಈರೆರಡುದೇಹಗಳೊಳಿದ್ದು ಸ ।
ಮೀರದೇವನು ಶ್ವಾಸಜಪ ನಾ ।
ನೂರಧಿಕವಾಗಿಪ್ಪ ಎಂಬತ್ತಾರುಸಾಹಸ್ರ ॥
ತಾ ರಚಿಸುವನು ದಿವಸ ಒಂದಕೆ ।
ಮೂರುವಿಧ ಜೀವರೊಳಗಿದ್ದು ಖ ।
ರಾರಿ ಕರುಣಾಬಲವಿದೆಂತುಟೊ ಪವನರಾಯನೊಳು ॥ ೪೪ ॥

**ಅವತರಣಿಕೆ**

ಹಂಸಮಂತ್ರಜಾಪಕರಾದ ಪವಮಾನರಾಯರಲ್ಲಿ ಶ್ರೀಹರಿಯ ಪರಮಾನುಗ್ರಹ ಎಷ್ಟಿರಬಹುದೆಂದು ತಿಳಿಸುತ್ತಾರೆ.

**ಪ್ರತಿಪದಾರ್ಥ**

**ಸಮೀರದೇವನು** = ಜೀವೋತ್ತಮರಾದ ಶ್ರೀಮುಖ್ಯಪ್ರಾಣದೇವರು, **ಈರೆರಡು** = ನಾಲ್ಕು (೨ + ೨ = ೪), **ದೇಹಗಳೊಳಿದ್ದು** = ಶರೀರದಲ್ಲಿ ವಿದ್ಯಮಾನರಾಗಿದ್ದು, **ದಿವಸ ಒಂದಕೆ** = ಒಂದು ದಿವಸದಲ್ಲಿ ೨೧,೬೦೦ ಜಪಗಳ ಪ್ರಕಾರ, **ನಾನೂರಧಿಕವಾಗಿಪ್ಪ ಎಂಭತ್ತಾರುಸಾಹಸ್ರ** = ೪೦೦ ಹೆಚ್ಚಾದ ಎಂಭತ್ತಾರುಸಾಹಸ್ರ, ಎಂದರೆ ೮೬,೦೦೦ + ೪೦೦ = ೮೬,೪೦೦ ಸಂಖ್ಯಾಕವಾದ, **ಶ್ವಾಸಜಪ** = ಹಂಸಾಖ್ಯ ಶ್ವಾಸಜಪಗಳನ್ನು, **ಮೂರುವಿಧ ಜೀವರೊಳಗಿದ್ದು** = ಸಾತ್ವಿಕ, ರಾಜಸ, ತಾಮಸ ಎಂಬ ಮೂರುಪ್ರಕಾರವಾದ ತ್ರಿವಿಧಜೀವರಲ್ಲಿ ವಿದ್ಯಮಾನರಾಗಿದ್ದು, **ತಾ ರಚಿಸುವನು** = ವಾಯುದೇವರೇ ರಚನಾಮಾಡಿ, ತ್ರಿವಿಧರಲ್ಲಿ ಅವರವರ ಸ್ವರೂಪಯೋಗ್ಯತಾನುಸಾರ ಶ್ವಾಸಜಪಗಳನ್ನು ಮಾಡಿ, ಜೀವರದ್ವಾರಾ ಮಾಡಿಸಿ, ಶ್ವಾಸಕ್ರಿಯಾರೂಪವಾದ ಕಾರ್ಯವನ್ನು ನಡೆಯಿಸು

ತ್ತಿರುವರು. ಪವನರಾಯನೊಳು = ಜೀವೋತ್ತಮರಾದ ಪವಮಾನನಾಮಕ ರಾದ ಶ್ರೀವಾಯುದೇವರಲ್ಲಿ, ಖರಾರಿ = ಖರಾಸುರನನ್ನು ಸಂಹರಿಸಿದ ಶ್ರೀರಾಮ ನಾಮಕ ಪರಮಾತ್ಮನ, ಕರುಣಾಬಲ = ಅಂತಃಕರಣಭರಿತವಾದ ಪರಮಾನು ಗ್ರಹವೆಂಬ ಬಲವು, ಇದೆಂತುಟೋ = ಅದೆಷ್ಟು ವಿಶೇಷವಾಗಿದೆ. ॥ ೪೪ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ವಾಯುದೇವರು ನಾಲ್ಕುದೇಹಗಳಲ್ಲಿ ಹಂಸಮಂತ್ರಜಪ ಮಾಡ್ತಾರೆಂತ ಹೇಳತಾರೆ.

ಜೀವೋತ್ತಮರಾದ ವಾಯುದೇವರು ನಾಲ್ಕು ಸ್ಥೂಲದೇಹಗಳೊಳಗಿದ್ದು, ನಾಲ್ಕು ದೇಹಗಳು ದಾವವೆಂದರೆ ೧. ಅಧಿಕಾರಿಯ ಸ್ಥೂಲದೇಹ ಒಂದು, ೨. ಈ ಸ್ಥೂಲದೇಹದಲ್ಲಿ ಸತ್ತ್ವಕಾರ್ಯಪ್ರವರ್ತಕರಾದ ದೇವತೆಗಳ ಸ್ಥೂಲದೇಹ ಒಂದು, ೩. ರಜೋಗುಣಕಾರ್ಯಪ್ರವರ್ತಕರಾದ ನಿತ್ಯಸಂಸಾರಿಗಳ ಸ್ಥೂಲದೇಹ ಒಂದು, ೪. ತಮೋಗುಣಕಾರ್ಯಪ್ರವರ್ತಕರಾದ ತಮೋಯೋಗ್ಯರ ಸ್ಥೂಲದೇಹ ಒಂದು, ಅಂತು ನಾಲ್ಕು. ನಮ್ಮ ದೇಹ ಸಹ ನಾಲ್ಕು ದೇಹಗಳಲ್ಲಿ ಮಿಳಿತರಾಗಿ ರುವ ನಾಲ್ಕೂಮಂದಿಯ ಸ್ಥೂಲದೇಹಗಳಲ್ಲಿ ಎಂತ ತಾತ್ಪರ್ಯ. ಮ್ಯಾಲಿನ ೪೩ನೇ ಶ್ಲೋಕದಲ್ಲಿ, ಸ್ಥೂಲದೇಹದಲ್ಲಿ ಶ್ವಾಸಜಪ ಮಾಡತಾರೆ ಎಂತ ಹೇಳಿ, ವರ್ತಮಾನ ೪೪ನೇ ಶ್ಲೋಕದಲ್ಲಿ 'ಈರೆರಡು ದೇಹ' ಎಂತ ಹೇಳಿ ಇರೋಣದ ರಿಂದ, ಪೂರ್ವೋಕ್ತ ಸಂಗತಿ ರೀತ್ಯಾ ಸ್ಥೂಲದೇಹಗಳೇ ಗ್ರಾಹ್ಯ, ತದನ್ಯದೇಹ ಗಳು ಗ್ರಾಹ್ಯವಲ್ಲ. ಅಥವಾ ಸ್ವೇದಜ, ಅಂಡಜ, ಉದ್ಭಿಜ, ಜರಾಯುಜ ಈ ನಾಲ್ಕುದೇಹಗಳಲ್ಲಿ ಎಂತಲೂ ಅರ್ಥವೇ. ಈ ವಾಯುದೇವರು ನಾಲ್ಕುರೂಪ ಗಳಿಂದ ಅಧಿಕಾರಿಯ ದೇಹಸ್ಥರಾದ ಒಬ್ಬೊರಲ್ಲಿ ಒಂದು ದಿವಸಕ್ಕೆ ೨೧,೬೦೦ ಜಪಗಳ ಮ್ಯಾರಿಗೆ ನಾಲ್ಕುವಿಧ ಸ್ಥೂಲದೇಹ ದ್ವಾರಾ ಒಂದುದಿವಸಕ್ಕೆ ಹಂಸಾಖ್ಯ ಸ್ವಾಶಜಪಗಳ, ನಾನೂರು ಅಧಿಕವಾದ ಎಂಭತ್ತಾರುಸಾವಿರ, ಅಂತು ಎಂಭತ್ತಾರು ಸಾವಿರದ ನಾನೂರು ಸಂಖ್ಯಾಕವಾದ ಶ್ವಾಸಜಪಗಳ ತಾನು ಒಬ್ಬನೇ ಮಾಡು

ವನು. ತ್ರಿವಿಧಜೀವರ ಸ್ಥೂಲಶರೀರಗಳಲ್ಲಿದ್ದು ಶ್ವಾಸಕಾರ್ಯ ಮಾಡತಾರೆಂತ ತಾತ್ಪರ್ಯ. ಖರಾಸುರಗೆ ಶತ್ರುವಾದ ಶ್ರೀಕೃಷ್ಣನ ಅಂತಃಕರಣವೆಂಬೋ ಬಲ ಜೀವೋತ್ತಮರಾದ ವಾಯುದೇವರಲ್ಲಿ, ಇದೆಂತುಟೋ ಎಂದರೆ ವಿಶೇಷಾಕಾರ ವಾಗಿ ಇರೋದಾಗಿದೆ ಎಂತ ತಾತ್ಪರ್ಯ.

ಈ ಗ್ರಂಥ ಅಂದರೆ, ಶ್ರೀಹರಿಕಥಾಮೃತಸಾರದ ೭ನೇ ಸಂಧಿಯಾದ ಪಂಚ ತನ್ಮಾತ್ರಸಂಧಿಯಲ್ಲಿ, ಮೂರನೇ ಶ್ಲೋಕದಲ್ಲಿ ಜೀವ ಲಿಂಗ ಅನಿರುದ್ಧ ಸ್ಥೂಲ ಎಂತ ನಾಲ್ಕುಶರೀರ ಎಂತ ಹೇಳಿದ್ದಾರೆ. ಐದನೇ ಶ್ಲೋಕದಲ್ಲಿ ಪೂರ್ವೋಕ್ತ ನಾಲ್ಕುಶರೀರಗಳೊಳಗೆ ಸ್ಥೂಲಶರೀರದಲ್ಲಿ ಮಾತ್ರ ಹಂಸಮಂತ್ರ ಆಗತದೆ ಎಂತ ಹೇಳಿದ್ದಾರೆ. ಏಳನೇ ಶ್ಲೋಕದಲ್ಲಿ ನಾಲ್ಕುಶರೀರಗಳು ಸ್ಥೂಲಶರೀರಗಳು ಎಂತ ಹೇಳಿದ್ದಾರೆ. ಒಂಭತ್ತನೇ ಸಂಧಿಯಾದ ಉದಾತ್ತಾನುದಾತ್ತ ಸಂಧಿಯಲ್ಲಿ ವಾಯು ದೇವರಿಗೆ ಲಿಂಗದಲ್ಲಿ, ಸ್ವರೂಪದಲ್ಲಿ ಪ್ರವೇಶ ಇಲ್ಲ ಎಂತ ಹೇಳಿದ್ದಾರೆ. ಆದಕಡಿ ಯಿಂದ ಈರೆರಡುದೇಹಗಳು ಎಂದರೆ ಸ್ಥೂಲದೇಹಗಳೇ ಗ್ರಾಹ್ಯ. ಅಷ್ಟೇ ಹೊರತು ಶ್ವಾಸ (ಅನಿರುದ್ಧ, ಲಿಂಗ, ಸ್ವರೂಪದೇಹಗಳು) ಆಯುಃಕಾಲವನ್ನು ಅನುಸರಿಸಿ ಇಲ್ಲ. ಶ್ವಾಸನಿರೋಧಮಾಡಿ ತಪಸ್ಸು ಮಾಡತಕ್ಕವರು ಬಹುಕಾಲ ಜೀವಿಸಿ ಇದ್ದಾರೆ. ಅದು ಇಲ್ಲದವರು ಅಲ್ಪಕಾಲ ಜೀವಿಸಿ ಇದ್ದಾರೆ. ಆಯು ರ್ಮಾನನೇಮ ಎಂಬೋದು ಸ್ಥೂಲದೇಹಕ್ಕೇವೇ. ಆಯುರ್ವೃದ್ಧಿ ಶ್ವಾಸ ದಿಂದಲೇ ಆದಕಾರಣ ಶ್ವಾಸಕಾರ್ತ ಸ್ಥೂಲದೇಹದಲ್ಲೇವೇ, ಅನ್ಯವಾದ ಶರೀರ ಗಳಲ್ಲಿಲ್ಲ. ಇದರ ವಿಚಾರ ಸ್ವಾಶಸಂಧಿಯಲ್ಲಿ ವಿಸ್ತಾರವಾಗಿ ಹೇಳಿದ್ದಾರೆ. ॥೪೪॥

**೨. ಭಾವಪ್ರಕಾಶಿಕೆ**

ವಾಯುದೇವರು ಪ್ರಾಣಗಳಲ್ಲಿದ್ದು ಶ್ವಾಸಜಪಗಳನ್ನು ಮಾಡಿಸುವುದು ಈ ಸ್ಥೂಲದೇಹದಲ್ಲಿ ಮಾತ್ರವೇ ಅಲ್ಲ, ಸಾತ್ವಿಕಾದಿ ತ್ರಿವಿಧಜೀವರಿಗೂ, ಸ್ವರೂಪ ದೇಹ, ಲಿಂಗದೇಹ, ಅನಿರುದ್ಧದೇಹ, ಸ್ಥೂಲದೇಹವೆಂದು ೪ ಪ್ರಕಾರ ಉಂಟು. ಈ ೪ ದೇಹಗಳಲ್ಲಿಯೂ ಇದ್ದು ಶರೀರ ಒಂದರಲ್ಲಿ ದಿವಸ ಒಂದಕ್ಕೆ ೨೧,೬೦೦ ಶ್ವಾಸಗಳಂತೆ ೪ ದೇಹಗಳಲ್ಲಿ ದಿನ ಒಂದಕ್ಕೆ ೨೧೬೦೦X೪ = ೮೬,೪೦೦. ೮೬ ಸಾವಿರದ ೪ ನೂರು ಆಗುವುವು. ಇಷ್ಟು ಶ್ವಾಸಜಪಗಳನ್ನು ತಾವು ಕಲ್ಪಿಸುವರು,

ಅಂದಮೇಲೆ ಖರದ್ವೇಷಿಯಾದ ಶ್ರೀರಾಮನ ಅಂದರೆ ಯಾವ ಪರಮಾತ್ಮನು ರಾಮಾವತಾರ ಮಾಡಿ ಆಂಜನೇಯನಲ್ಲಿ ಪರಮಾನುಗ್ರಹ ಮಾಡಿದನೋ ಅದೇ ಪರಮಾತ್ಮನೇ ಮೂಲರೂಪದಿಂದ ಮೂಲರೂಪಿಯಾದ ವಾಯುದೇವರಲ್ಲಿ ಸಂಪೂರ್ಣ ಕರುಣಾಕಟಾಕ್ಷವನ್ನು ಇಟ್ಟೇ ಇಡುವನು. ಆ ಕರುಣಾಬಲವು ಎಷ್ಟಿದೆ ಎಂದು ವರ್ಣಿಸಲು ಯಾರಿಗೆ ಸಾಧ್ಯ ? ಅಪಾರವಾದ ಕರುಣಾಬಲದಿಂದ ಕೂಡಿರುವರೆಂಬ ತಾತ್ಪರ್ಯ. ॥ ೪೪ ॥

## ೩ ಭಾವದರ್ಪಣ

ಸ್ವರೂಪಲಿಂಗಾನಿರುದ್ಧ ಈ ಸ್ಥೂಲ ನಾಲ್ಕುದೇಹದಲ್ಲಿದ್ದು ಏಕವಿಂಶತ್ಸಹಸ್ರಾತ್ಮಾ ಷಟ್‌ಶತಾಧಿಮಹರ್ನಿಶಂ । ಶ್ವಾಸರೂಪೋ ಜಪೇನ್ನಿತ್ಯಂ ಏವಂ ತಂತ್ರಸಾರೋಕ್ತ ರೀತ್ಯಾ ೮೬೪೦೦ ಶ್ವಾಸಜಪ ಮಾಡುತ್ತಾನೆಂದು ತೋರಿಸಿಕೊಡುತ್ತಾರೆ. ಈರೆರಡು ॥ ೪೪ ॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಶ್ವಾಸ ಜಪಸ್ತು ದೇಹಚತುಷ್ಟಯೇಽಪಿ ವಾಯುಜಃ ಇತಿ ಭಾವೇನ ಸಂಖ್ಯಾಂ ಆಹ–ಈರೆರಡು ಇತಿ ॥ ಖರಃ–ದೈತ್ಯಃ ॥ ಎಂತುಟೋ–ಎಷ್ಟು ಅದೋ? ॥೪೪॥

### ಕನ್ನಡಾರ್ಥ

ಮುಖ್ಯಪ್ರಾಣರು ನಾಲ್ಕೂದೇಹಗಳಲ್ಲಿ ಶ್ವಾಸಜಪಗಳನ್ನು ಮಾಡುತ್ತಿರುವರು ಎಂಬ ಅಭಿಪ್ರಾಯದಿಂದ ಸಂಖ್ಯೆಯನ್ನು ಹೇಳುತ್ತಾರೆ–ಈರೆರಡು ಎಂಬ ಪದ್ಯದಿಂದ.

ಹೀಗೆ ನಾಲ್ಕುದೇಹಗಳಲ್ಲಿ ಸ್ವರೂಪ, ಲಿಂಗ, ಅನಿರುದ್ಧ, ಸ್ಥೂಲಶರೀರಗಳಲ್ಲಿ ೮೬೪೦೦ ಶ್ವಾಸಜಪವನ್ನು ಒಂದು ದಿವಸಕ್ಕೆ ಮಾಡುವ ಮುಖ್ಯಪ್ರಾಣ

ದೇವರ ಮಹಿಮೆ ಎಷ್ಟು ಎಂಬುದನ್ನು ಹೇಳಲಸಾಧ್ಯ ಎಂಬುದು ಈ ಪದ್ಯದ ಭಾವ ॥ ೪೪ ॥

**ಶ್ರೀ. ಶ್ರೀಗುರುಹೃದಯಪ್ರಕಾಶಿಕೆ**

ಜೀವಸ್ವರೂಪದೇಹ, ಲಿಂಗದೇಹ, ಅನಿರುದ್ಧದೇಹ, ಸ್ಥೂಲದೇಹವೆಂಬ ನಾಲ್ಕರಲ್ಲೂ ಇದ್ದು ಸಮೀರ ಎಂಬ ಪ್ರಾಣದೇವರು, ಎಂಭತ್ತಾರುಸಾವಿರದ ನಾನೂರು ಶ್ವಾಸರೂಪ ಹಂಸಮಂತ್ರಜಪಗಳನ್ನು ಸತ್ತ್ವಾದಿ ತ್ರಿವಿಧಜೀವರಲ್ಲೂ ಇದ್ದು ಒಂದು ದಿವಸದಲ್ಲಿ ಮಾಡುತ್ತಾರೆ. ದೇಹ ಒಂದರಲ್ಲಿ ೨೧,೬೦೦ರ ಪ್ರಕಾರ ನಾಲ್ಕುದೇಹಗಳ ಒಟ್ಟುಸಂಖ್ಯೆ ಮೇಲೆ ಹೇಳಿದೆಯೆಂದು ತಿಳಿಯಬೇಕು. ಆದ್ದರಿಂದ ಖರಾಸುರನಿಗೆ ಶತ್ರುವಾದ ಶ್ರೀರಾಮನ ಕರುಣಾಬಲ ಶ್ರೀಪ್ರಾಣ ದೇವರಲ್ಲಿ ಎಂತುಟೋ ಎಂದರೆ, ಎಷ್ಟಿರುವುದೋ ಹೇಳಲಸಾಧ್ಯವೆಂದರ್ಥ. ಇದರಿಂದ,

**ಕಸ್ಮಿನ್ನ್ವಹಮುತ್ಕ್ರಾಂತೇ ಉತ್ಕ್ರಾಂತೋ ಭವಿಷ್ಯಾಮಿ ।**
**ಕಸ್ಮಿನ್ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ ಸ ಪ್ರಾಣಮಸೃಜತ ॥**
ಎಂಬ ಉಪನಿಷತ್,

**ಘರ್ಮಾ ಸಮಂತಾ ತ್ರಿವೃತಂ ವ್ಯಾಪತುಸ್ತಯೋರ್ಜುಷ್ಟಿಂ ।**
**ಮಾತರಿಶ್ವಾ ಜಗಾಮ** ಎಂಬ ಶ್ರುತ್ಯರ್ಥವೂ,

**ದೇಹೇಪಿ ಯತ್ರ ಪವನೋತ್ರ ಹರಿರ್ಯತೋ ಸೌ ತತ್ರೈವ ವಾಯುರಿತಿ ವೇದವಚಃ ಪ್ರಸಿದ್ಧಂ ॥** ಎಂಬ ತಾತ್ಪರ್ಯನಿರ್ಣಯಾರ್ಥ ಸಹ ವಿವರಿಸಲ್ಪಟ್ಟಿತು ॥ ೪೪ ॥

## ಸರ್ವವ್ಯಾಖ್ಯಾನಸಾರಸಂಗ್ರಹ

ಈರೆರಡು ದೇಹಗಳಲಿ–ಎಂದು ತಿಳಿಸುತ್ತಾರೆ. ಅಂದರೆ, ೨X೨=೪. ನಾಲ್ಕು ಪ್ರಕಾರವಾದ ಶರೀರಗಳು, ತನುಚತುಷ್ಟಯಗಳೆಂದರೆ, ಸಾಮಾನ್ಯವಾಗಿ

ಸ್ವರೂಪದೇಹ, ಲಿಂಗದೇಹ, ಅನಿರುದ್ಧದೇಹ ಮತ್ತು ಸ್ಥೂಲಶರೀರ ಎಂದು ನಾಲ್ಕು ವಿಧವಾದ ಶರೀರಗಳೆಂದು ಅರ್ಥ.

ಶ್ರೀಸಂಕರ್ಷಣಒಡೆಯರವ್ಯಾಖ್ಯಾನದ ಪ್ರಕಾರ,

ಅಧಿಕಾರಿಯ ಸ್ಥೂಲದೇಹ, ಸ್ಥೂಲದೇಹಗತರಾದ ದೇವತೆಗಳ ಸ್ಥೂಲದೇಹ, ರಜೋಗುಣಪ್ರವರ್ತಕರಾದ ನಿತ್ಯಸಂಸಾರಿಗಳ ಸ್ಥೂಲದೇಹ ಮತ್ತು ತಮೋಗುಣ ಕಾರ್ಯಪ್ರವರ್ತಕರಾದ ತಮೋಯೋಗ್ಯರ ಸ್ಥೂಲದೇಹ. ಅಥವಾ ಸ್ವೇದಜ, ಅಂಡಜ, ಉದ್ಭಿಜ ಮತ್ತು ಜರಾಯುಜ-ಎಂಬ ನಾಲ್ಕು ಪ್ರಕಾರವಾದ ದೇಹಗಳೆಂದು ಪರಿಗಣಿಸಬೇಕೆಂದು ಹೇಳಿದ್ದಾರೆ.

ಹಿಂದಿನ ೪೩ನೆಯ ಪದ್ಯದಲ್ಲಿ ಸ್ಥೂಲದೇಹದೊಳಗಿದ್ದು ಎಂಬ ಪದ ಪ್ರಯೋಗವಿರುವ ಪ್ರಯುಕ್ತ ವಾಯುದೇವರು ಸ್ಥೂಲಶರೀರಗತರಾಗಿ ಶ್ವಾಸ ಜಪಗಳನ್ನು ಮಾಡುತ್ತಾರೆಯೇ ಹೊರತು, ತದನ್ಯ ಸ್ವರೂಪ, ಲಿಂಗಾನಿರುದ್ಧ ಶರೀರಗಳಲ್ಲಿ ಅಲ್ಲ ಎಂದು ಶ್ರೀಸಂಕರ್ಷಣ ಒಡೆಯರ ಸ್ವಾಭಿಪ್ರಾಯವು.

ಆದರೆ ಇತರ ಎಲ್ಲಾ ವ್ಯಾಖ್ಯಾನಕಾರರೂ, ಈರೆರಡು ಶರೀರ-ಎಂದರೆ ಸ್ವರೂಪಶರೀರ-ಅದಕ್ಕೆ ಆವರ್ಕವಾಗಿರುವ ಲಿಂಗಶರೀರ-ಜನ್ಮಾಂತರಗಳಿಗೆ ಕಾರಣ ವಾಗುವ ಅನಿರುದ್ಧ ಶರೀರ-ಸಾಧನದೇಹವೆನಿಸಿದ ಈ ಸ್ಥೂಲಶರೀರ ಎಂದೇ ಪರಿಗಣಿಸಬೇಕೆಂದು ಅಭಿಪ್ರಾಯ ತಿಳಿಸಿರುತ್ತಾರೆ.

ವಿವಾದಾಸ್ಪದವಾದ ಈ ವಿಚಾರದ ಪೂರ್ಣಮಾಹಿತಿಯನ್ನು ನಾವು ಹಿಂದೆ ಪ್ರಕಟಿಸಿರುವ ಜೀವಪ್ರಕರಣಸಂಧಿಯಲ್ಲಿ ಕೊಟ್ಟಿದೆ. ಸನ್ಮಾನ್ಯ ವಾಚಕವೃಂದ ಹಾಗೂ ಪಂಡಿತವರ್ಗ ಈ ವಿಷಯವನ್ನು ಪರಿಶೀಲಿಸಿ, ತಿಳಿಸಬೇಕಾಗಿ ವಿನಂತಿ.

ಶ್ರೀಮುಖ್ಯಪ್ರಾಣದೇವರಿಗೆ ಸಮೀರನೆಂದು ಹೆಸರು.

ಶ್ರೀವಾಯುದೇವರು ತ್ರಿವಿಧಜೀವರಲ್ಲಿದ್ದು ಷಡಾಕ್ಷರಾತ್ಮಕವಾದ ಹಂಸಾಖ್ಯ ಶ್ವಾಸಜಪಗಳನ್ನು ಪ್ರತಿದಿವಸದಲ್ಲಿಯೂ ಈರೆರಡು ದೇಹಗಳಲ್ಲಿದ್ದು ತಾವೇ

ರಚಿಸಿ, ಮಾಡಿ, ಜೀವರದ್ವಾರಾ ಮಾಡಿಸುವರು. ಅಧಿಕಾರಿಭೇದದಿಂದ ಉಪಾಸನಾ ಫಲ ಬೇಧವು ಮೂರುಪ್ರಕಾರ :-

೧. ಸಾತ್ತ್ವಿಕಚೇತನರಲ್ಲಿ 'ಹಂಸ' ಎಂಬ ಉಚ್ಚಾರಣಾರೂಪವಾದ ಉಪಾಸನೆ. ಇದರಿಂದ ಅವರಿಗೆ ನಿತ್ಯಾನಂದರೂಪವಾದ ಮೋಕ್ಷಸುಖ ಪ್ರಾಪ್ತಿ.

೨. ರಾಜಸಚೇತನರಲ್ಲಿ 'ಸ್ವಾಹಾ' ಎಂದು ಮಂತ್ರೋಪಾಸನೆ. ಇದರಿಂದ ನಿತ್ಯಸಂಸಾರಿಗಳಿಗೆ ಸುಖದುಃಖಯುಕ್ತವಾದ ಮಿಶ್ರಫಲ ಪ್ರಾಪ್ತಿ (ಸಾಂತಾನಿಕಲೋಕಗಳ ಪ್ರಾಪ್ತಿ)

೩. ತಮೋಯೋಗ್ಯಚೇತನರಲ್ಲಿ 'ಸೋऽಹಂ' ಉಪಾಸನೆಯಿಂದ ನಿತ್ಯದುಃಖ ರೂಪವಾದ ಅಂಧಂತಮಸ್ಸು ಪ್ರಾಪ್ತಿ.

ಖರ, ದೂಷಣ ಎಂಬ ಮಹಾಪರಾಕ್ರಮಶಾಲಿಗಳಾದ ದೈತ್ಯರನ್ನು ಸಂಹರಿಸಿದ ರಾಮಾವತಾರೀ ಶ್ರೀಹರಿಯು ಶ್ರೀ ಹನುಮಂತದೇವರಲ್ಲಿ ಪರಮಾನುಗ್ರಹ ಮಾಡಿ, ತನ್ನ ಸಹಭೋಗರೂಪವಾದ ಆಲಿಂಗನಭಾಗ್ಯವನ್ನು ಕರುಣಿಸಿದ. ಅಂತಹ ಶ್ರೀವಾಯುದೇವರಲ್ಲಿ ಖರಾರಿಯಾದ ಶ್ರೀಹರಿಯ ಕರುಣೆ, ಅನುಗ್ರಹ ಅಪಾರವಾದದ್ದು. ಶ್ರೀಹರಿಯ ಪೂರ್ಣಾನುಗ್ರಹ ಪ್ರಾಪ್ತರಾದ ಚೇತನರಲ್ಲಿ ಶ್ರೀಪ್ರಾಣದೇವರೇ ಮೊದಲಿಗರು. ॥ ೪೪ ॥

❋ ❋ ❋ ❋

## ಪದ್ಯ ೪೫

**ಮೂಲ**

**ಶ್ರೀಧವ ಜಗನ್ನಾಥವಿಠಲನು ।**
**ತಾ ದಯದಿ ವದನದೊಳು ನುಡಿದೋ ।**
**ಪಾದಿಯಲಿ ನಾ ನುಡಿದೆನಲ್ಲದೆ ಕೇಳಿ ಬುಧಜನರು ॥**
**ಸಾಧುಲಿಂಗಪ್ರದರ್ಶಕರು ನಿ ।**
**ಷೇಧಿಸಿದರೇನಹುದು ಎನ್ನಪ ।**
**ರಾಧವೇನಿದರೊಳಗೆ ಪೇಳ್ವುದು ತಿಳಿದ ಕೋವಿದರು ॥ ೪೫ ॥**

**ಅವತರಣಿಕೆ**

ಶ್ರೀಪರಮಾತ್ಮನು ನನ್ನಲ್ಲಿ ನಿಂತು, ಅಂತಃಪ್ರೇರಕನಾಗಿ ಏನನ್ನು ನುಡಿಸಿದನೋ, ಆ ತತ್ತ್ವವಿಷಯಗಳನ್ನು ನುಡಿದಿದ್ದೇನೆಯೇ ಹೊರತು, ಅನ್ಯಥಾ ಇಲ್ಲ. ಜ್ಞಾನಿಗಳಾದ ಭಗವದ್ಭಕ್ತರು ಇದನ್ನು ಕೇಳಬೇಕೆಂದು ಪ್ರಾರ್ಥಿಸಿದ್ದಾರೆ.

**ಪ್ರತಿಪದಾರ್ಥ**

**ಶ್ರೀಧವ** = ಶ್ರೀಲಕ್ಷ್ಮೀಪತಿಯಾದ, **ಜಗನ್ನಾಥವಿಠಲ** = ದಾಸವರ್ಯರ ಅಂಕಿತನಾಮಕನಾದ ಜಗತ್ಸ್ವಾಮಿಯು, **ತಾ ದಯದಿ** = ತಾನೇ ಕರುಣಾವಿಶೇಷದಿಂದ, **ವದನದೊಳು** = ನನ್ನ ಮುಖದಲ್ಲಿ ಆವಿಷ್ಟನಾಗಿ ಜಿಹ್ವಾದಾರ, **ನುಡಿದೋಪಾದಿಯಲಿ** = ನುಡಿಸಿದಂತೆ, **ನಾ ನುಡಿದೆನಲ್ಲದೆ** = ಪ್ರತಿಬಿಂಬನಾದ ನಾನು ಹೇಳಿದ್ದೇನೆಯೇ ಹೊರತು, ಸ್ವತಂತ್ರನಾಗಿ ಮಾಡಿದುದಲ್ಲ. **ಬುಧಜನರು** = ಜ್ಞಾನಿಗಳಾದ ಭಗವದ್ಭಕ್ತರು, **ಕೇಳಿ** = ನನ್ನಿಂದ ನುಡಿಸಲ್ಪಟ್ಟ ಈ ಗ್ರಂಥಸ್ಥ ವಿಷಯಗಳನ್ನು ಕೇಳುವವರಾಗಿ, **ಸಾಧುಲಿಂಗಪ್ರವರ್ತಕರು** = ಸಾಧುಗಳಾದ ಜ್ಞಾನಿಗಳಂತೆ (ಸಾಧು) ಸಾಂಕೇತವಾದ ಬಾಹ್ಯಾಲಂಕಾರಗಳಿಂದ ಯುಕ್ತರಾಗಿ (ಲಿಂಗ) ಲೋಕದ ಜನರಿಗೆ ತೋರಿಸಿಕೊಳ್ಳುವ ಡಾಂಭಿಕರು (ಪ್ರದರ್ಶಕರು) ಸ್ವತಃ ಜ್ಞಾನಿಗಳಲ್ಲ. ಜ್ಞಾನಿಗಳಂತೆ ಸೋಗುಹಾಕಿ, ಜನರನ್ನು ವಂಚಿಸುವವರು- ಸಾಧುಲಿಂಗಪ್ರದರ್ಶಕರು. **ನಿಷೇಧಿಸಿದರೆ** = ನನ್ನ ವಚನಗಳನ್ನು ನಿಷೇಧಮಾಡಿದರೆ, **ಏನಹುದು** = ಅದರಿಂದ ಏನಾಗುವುದು ? ಈ ಗ್ರಂಥಕ್ಕೆ ಸಾಧುಲಿಂಗಪ್ರದರ್ಶಕರ ನಿಷೇಧದಿಂದ ಯಾವ ಬಾಧಕವೂ ಆಗಲಾರದು. **ಇದರೊಳಗೆ** = ಶ್ರೀಹರಿಯಿಂದ ಪ್ರೇರಿತವಾಗಿ ನುಡಿಯಲ್ಪಟ್ಟ ನನ್ನ ವಚನಗಳಲ್ಲಿ, **ಎನ್ನ ಅಪರಾಧವೇನು** = ನನ್ನ ಅಪರಾಧವಾದರೂ ಏನಿದೆ ? ಸತ್ಸಿದ್ಧಾಂತಕ್ಕೆ ವಿರುದ್ಧವಾದ ಅಪರಾಧರೂಪವಾದ ವಾಕ್ಯಗಳೇನಿವೆ ? **ತಿಳಿದ ಕೋವಿದರು** = ಸತ್ಸಿದ್ಧಾಂತವನ್ನು ಅರಿತ ಜ್ಞಾನಿಗಳು, **ಪೇಳ್ವುದು** = ದೋಷವೇನಾದರೂ ಇದ್ದರೆ ಹೇಳಬಹುದು. ॥ ೪೫ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಭಗವದಾಜ್ಞಾದಿಂದಲೂ, ಭಗವಂತ ನನ್ನಲ್ಲಿ ಆವಿಷ್ಟನಾಗಿ ನುಡಿಸಿದ ಗ್ರಂಥವೆಂದು ಹೇಳತಾರೆ.

ಲಕ್ಷ್ಮೀದೇವಿಯರಿಗೆ ಪತಿಯಾದ ಜಗತ್ತಿಗೇ ಸ್ವಾಮಿಯಾದ ಪಾಪಪರಿಹಾರಕನಾದ ಶ್ರೀಪರಮಾತ್ಮನು, ತಾನು ಅಂತಃಕರಣದಿಂದ ಬಾಯಿ ಒಳಗೆ ಆವಿಷ್ಟನಾಗಿ ನುಡಿಸಿಧಾಂಗೆ ನಾನು ಉಚ್ಚಾರ ಮಾಡಿದ್ದೇನೇ ಹೊರತು, ಅನ್ಯಮಾರ್ಗದಿಂದ ನುಡಿದ ಗ್ರಂಥವಿದಲ್ಲ. ಜ್ಞಾನಿಗಳಾದ ಭಗವದ್ಭಕ್ತರು ಕೇಳೋವರಾಗಿರಿ. ಈ ಗ್ರಂಥ ರಚನೆ ಮಾಡಿದ್ದು ಈ ರೀತಿ ಎಂತ ತಾತ್ಪರ್ಯ. ಅಂತಃಶುದ್ಧಿ ಇಲ್ಲದೆ ಬಾಹ್ಯದಲ್ಲಿ ತಾವು ಕೇವಲ ಸಾಧುಗಳೆಂದು ದೇಹವನ್ನು ಪ್ರದರ್ಶನ ಮಾಡತಕ್ಕವರು, ಈ ಕಾರ್ಯವನ್ನು ನಿಷೇಧ ಮಾಡೋಣದರಿಂದ ಈ ಗ್ರಂಥಕ್ಕೆ ಏನಾದರೂ ಲೋಪ ಬರಲಾರದು. ನನ್ನ ಮುಖದಿಂದ ಹೊರಟ ಈ ವಾಕ್ಯಗಳಲ್ಲಿ ಶ್ರೀಮದಾನಂದತೀರ್ಥರ ಸಿದ್ಧಾಂತಕ್ಕೆ ವಿರುದ್ಧವಾದ ಅಪರಾಧವಾಕ್ಯಗಳು ಏನವೆ ? ಇದರೊಳಗೆ ಏನೂ ಇಲ್ಲ. ಹಾಂಗೆ ಇರೋಪಕ್ಷಕ್ಕೆ, ತಿಳಿದ ಜ್ಞಾನಿಗಳು ದೋಷವಿದ್ದರೆ ಹೇಳಬಹುದು ಎಂತ ಅರ್ಥ. ದೋಷವಿಲ್ಲದೇನೇ ದೋಷವಿದ್ದ ಗ್ರಂಥದೋಪಾದಿಯಲ್ಲಿ ನಿರಾಕರಣ ಮಾಡಬಾರದು ಎಂತ ತಾತ್ಪರ್ಯ.

ಸಾಧುಲಿಂಗಪ್ರದರ್ಶಕರು ಅಂದರೆ, ಸಾಧುಗಳಾದ ಜ್ಞಾನಿಗಳೋಪಾದಿಯಲ್ಲಿ ಸ್ಥೂಲದೇಹವನ್ನ. ಅಲಂಕಾರಗಳಿಂದಲೂ, ವಾಕ್‌ಝರಿಯಿಂದಲೂ, ವೇದಾಂತವಾಕ್ಯಗಳ ಉಚ್ಚಾರದಿಂದಲೂ, ಜ್ಞಾನಿಗಳೋಪಾದಿಯಲ್ಲಿ ಪ್ರದರ್ಶನ ಮಾಡಿ, ಜ್ಞಾನಪೂರ್ವಕವಾಗಿ ಅಂತಃಶುದ್ಧಿ ಇಲ್ಲದ ಡಾಂಭಿಕರು ಎಂತ ಅರ್ಥ.

ತಮೋಯೋಗ್ಯರಿಗೆ, ನಿತ್ಯಸಂಸಾರಿಗಳಿಗೆ ಅಪರೋಕ್ಷವಿಲ್ಲದೆ ಅವರ ಕರ್ಮನಾಶ ಎಂಬುದು ಹ್ಯಾಂಗೆ ಎಂದರೆ–ಆಗಾಮಿ, ಸಂಚಿತ, ಪ್ರಾರಬ್ಧ ಎಂತ ತ್ರಿವಿಧ ಕರ್ಮ ತ್ರಿವಿಧರಿಗೆ ಉಂಟು. ತ್ರಿವಿಧಕರ್ಮವು ನಾಶವಾಗಿ ತ್ರಿವಿಧರಿಗೆ ಲಿಂಗಭಂಗವಾಗತದೆ, ತದನಂತರ ಸ್ವರೂಪ ಅಭಿವ್ಯಕ್ತಿಯಾಗಿ ಸ್ವರೂಪಭೋಗಗಳ ಅನುಭವಿಸ

ತಾರೆ. ಸ್ವರೂಪ ಅಭಿವ್ಯಕ್ತಿ ಆಗಬೇಕಾದರೆ ಭಗವದಪರೋಕ್ಷ ಕಾರಣವೆಂತ ಹೇಳೀತೆ, ತಮೋಯೋಗ್ಯರಿಗೆ ಭಗವದಪರೋಕ್ಷವಿಲ್ಲ. ಆದಕಾರಣ ತಮೋಯೋಗ್ಯರಿಗೆ ಸ್ವರೂಪ ಅಭಿವ್ಯಕ್ತಿ ಇಲ್ಲ ಎಂತ ಹೇಳಬೇಕಾಗತದೆ, ಹಾಂಗೆ ಹೇಳಿದರೆ ಪ್ರಮಾಣವಿರುದ್ಧವಾಗೋಣವಲ್ಲದೆ, ಮುಕ್ತಿಯೋಗ್ಯರಿಗೆ ಕೂಡಾ ಭಗವದಪರೋಕ್ಷವಿಲ್ಲದೇನೇ ಸ್ವರೂಪ ಅಭಿವ್ಯಕ್ತಿ ಆಗತದೆ ಎಂತ ಹೇಳಬೇಕಾದೀತು. ಹೀಂಗೆ ಒಡಂಬಡೋಣ ಎಂದರೆ ಭಗವದಪರೋಕ್ಷಾರ್ಥ ಸಾಧನ ಮಾಡಬೇಕೆಂತಲೂ, ಸಾಧನಾನುತರ ಭಗವದ್ದರ್ಶನವಾಗಿ ತದ್ದ್ವಾರಾ ಆಗಾಮಿ–ಸಂಚಿತಗಳು ನಾಶವಾಗಿ, ಪ್ರಾರಬ್ಧ, ಭೋಗದಿಂದ ಕ್ಷಯವಾಗಿ ಲಿಂಗಭಂಗವಾಗಿ ಸ್ವರೂಪ ಅಭಿವ್ಯಕ್ತಿ ಆಗೋಣವೇನೋ ಖರೆ. ಆದ್ದರಿಂದ ಇವರ ಕರ್ಮನಾಶ ಎಂಬುದು ಹ್ಯಾಂಗೆಂದರೆ, ತ್ರಿವಿಧರಿಗೆ ತ್ರಿವಿಧಪ್ರಕಾರ ಅಪರೋಕ್ಷ ಉಂಟು. ತ್ರಿವಿಧರೂ ಭಗವದುಪಾಸನ ಮಾಡಿ, ಅಪರೋಕ್ಷೀಕರಿಸಿಕೊಂಡೇ ಆಗಾಮಿ ಸಂಚಿತಗಳು ನಾಶವಾಗಬೇಕು. ಆ ಅಪರೋಕ್ಷ, ಹ್ಯಾಂಗೆ ಹ್ಯಾಂಗೆ ಆಗತವೆ ಎಂದರೆ, ಅವರವರ ಜ್ಞಾನಾನುಸಾರ ಅಪರೋಕ್ಷವಾಗೋದಾಗತದೆ. ಅವರವರ ಜ್ಞಾನ ಎಂಬುದು ಎಂಥಾದ್ದೆಂದರೆ–

ಮುಕ್ತಿಯೋಗ್ಯರದು ಜ್ಞಾನ, ಜೀವ ಪರಮಾತ್ಮ ಬ್ಯಾರೆ ಎಂತಲೂ, ಆನಂದ ತಾರತಮ್ಯ ಹೇಳತಕ್ಕ ಜ್ಞಾನ ಮತ್ತು ಪರಮಾತ್ಮ ಸಾಕಾರ ಎಂತಲೂ, ಕೋಟಿಸೂರ್ಯಪ್ರಕಾಶ ಎಂತಲೂ, ಪರಮಾತ್ಮಗೂ ಅವನ ಗುಣಾದಿಕ್ರಿಯೆಗಳಿಗೂ ಅಭೇದ ಎಂತಲೂ ಉಪಾಸನ ಮಾಡತಕ್ಕ ಜ್ಞಾನ, ಮುಕ್ತಿಯೋಗ್ಯರದು.

ತಮೋಯೋಗ್ಯರ ಜ್ಞಾನ–ಜೀವ ಬ್ಯಾರೆ ಪರಮಾತ್ಮ ಬ್ಯಾರೆ ಇಲ್ಲ. ಪರಮಾತ್ಮನೇ ಜೀವತ್ವೇನ ಪರಿಣಮಿಸಿ ಅವಿದ್ಯಾ ಅಧಿಷ್ಠಾನ ಮಾಡಿಕೊಂಡು ಜೀವ ಎಂತ ನಟನೆ ಮಾಡತಾ ಇದ್ದಾನೆ ಎಂತಲೂ, ಅವಿದ್ಯಾದಿಂದ ದೂರನಾದ ಜೀವ ಎಂತ ಕರೆಸಿಕೊಂಡ ಪರಮಾತ್ಮ ತನ್ನಲ್ಲೇ ತಾನು ಐಕ್ಯನಾಗುತ್ತಾನೆ. ಅಷ್ಟೇ ಹೊರತು, ಜೀವ ಬ್ಯಾರೆ ಪರಮಾತ್ಮ ಬ್ಯಾರೆ ಇಲ್ಲವಾದ್ದರಿಂದ, ಜೀವ ಎಂತ ವ್ಯವಹರಿಸತಕ್ಕ ನಾನೇ ಬ್ರಹ್ಮನೇ ಹೊರತು, ಬ್ಯಾರೆ ಬ್ರಹ್ಮನೇ ಇಲ್ಲ, ತದನ್ಯ ಜೀವರೂ ಇಲ್ಲ ಎಂತ ಈ ಪ್ರಕಾರ ಭಗವದುಪಾಸನ ಮಾಡತಕ್ಕ ಜ್ಞಾನ ತಮೋಯೋಗ್ಯರದು.

ನಿತ್ಯಸಂಸಾರಿಗಳ ಜ್ಞಾನ ಮಿಶ್ರವಾದದ್ದು. ಜೀವ ಪರಮಾತ್ಮರು ಭೇದ ಎಂಬ ಜ್ಞಾನ ಮಾತ್ರ ಉಂಟು. ತಾರತಮ್ಯಜ್ಞಾನವಾಗಲಿ, ಅಹಂಬ್ರಹ್ಮಜ್ಞಾನ ವಾಗಲೀ ಎರಡರಲ್ಲೂ ದಾರ್ಢ್ಯವಿಲ್ಲದೆ ಭೇದಾಭೇದಗಳಿಂದ ಮಿಶ್ರಜ್ಞಾನ. ಇಂಥಾದ್ದೇ ಭಗವದುಪಾಸನ ಮಾಡತಾರೆ. ಇವರಿವರಿಗೆ ಇವರಿವರ ಜ್ಞಾನದಂ ತೇಲೀ ಭಗವದಪರೋಕ್ಷ, ತ್ರಿವಿಧರಿಗೆ ಉಂಟು.

ತ್ರಿವಿಧರೂನೂ ತಮ್ಮ ತಮ್ಮ ಹೃದಯಾಕಾಶದಲ್ಲಿ ಮಾನಸಪೂಜಾ ಮಾಡ ತಾರೆ. ಶಂಕರರು ಪೂಜಾಮಾಡಿದಂತೆ ಅದ್ವೈತವೇದಾಂತಗ್ರಂಥಗಳಲ್ಲಿ ಉಕ್ತವಾಗಿ ಅದೆ. ಶಂಕರರು ಮಾನಸಪೂಜಾ ಮಾಡಿ, ಆ ಮಾನಸಪೂಜಾಕ್ರಮವನ್ನು ಹೇಳಿ ದ್ದಾರೆ. ಮತ್ತು ಭಜಗೋವಿಂದಂ ಮೂಢಮತೇ ಎಂತ ಭಗವಂತನ ಭಜನಮಾಡ ಬೇಕು ಎಂತ ಹೇಳಿದ್ದಾರೆ. ಆದ್ದರಿಂದ ಮಿಥ್ಯಾವಾದಿಯು ಅಪಕ್ವಕಾಲದಲ್ಲಿ ಭಗವ ದುಪಾಸನೆ ಮಾಡತಾನೆ. ಇವನಕಿಂತಲೂ ಉತ್ತಮ ನಿತ್ಯಸಂಸಾರಿ. ಆದ್ದರಿಂದ ಇವನೂನೂ ಭಗವದುಪಾಸನೆ ಮಾಡತಾನೆ ಎಂಬುದು ಅರ್ಥಾತ್ ಸಿದ್ಧವು. ಆದ್ದ ರಿಂದ ಮುಕ್ತಿಯೋಗ್ಯರು ಭೇದಸಿದ್ಧಿಗೋಸ್ಕರ ಗುರುದ್ವಾರಾ ಶ್ರವಣ–ಮನನಾದಿ ಗಳ ಮಾಡಿ ಭಗವದುಪಾಸನ ಮಾಡಿ, ಮಾನಸಪೂಜಾ ಮಾಡಿ ಭಗವದಪರೋಕ್ಷೀ ಕರಿಸಿಕೊಳ್ಳುತ್ತಾರೆ. ಆ ಭಗವದುಪಾಸನ ಅವರವರ ಯೋಗ್ಯತಾನುಸಾರ ತೇಜಃ ಪುಂಜವಾಗಿ ಸಾಕಾರದಿಂದ ಪ್ರಕಾಶಮಾನವಾಗಿ ಕಾಣಿಸುತ್ತಾ ಕ್ರಮೇಣ ಸ್ಥೂಲ, ಅನಿರುದ್ಧ, ಲಿಂಗ, ಸ್ವರೂಪದೇಹಗತ ಅಪರೋಕ್ಷಗಳಸಾಧನಿ ಪೂರ್ತ ಆಧಾಂ ಗಲ್ಲಾ ಆಯಾದೇಹಗಳಲ್ಲಿ ಭಗವದಪರೋಕ್ಷವಾಗುತ್ತಾ, ಸ್ಪಷ್ಟವಾದ ತೇಜಸ್ಸು ಅಭಿವೃದ್ಧಿಯಾಗುತ್ತಾ, ಸಾಕಾರರೂಪ ದರ್ಶನಮಾಡುತ್ತಾ, ಜೀವಾಂತರ್ಗತ ಅಪ ರೋಕ್ಷ ಎಂಬುದು, ಯೋಗ್ಯತಾಕ್ಕೆ ಪೂರ್ಣವಾದ ಭಗವಂತನ ಸಂದರ್ಶನವೂ, ಯೋಗ್ಯತಾಕ್ಕೆ ಪೂರ್ಣವಾದ ಭಗವಂತನ ದೇಹಪ್ರಕಾಶವೂ ಸ್ಪಷ್ಟವಾಗಿ ಕಾಣೋ ವಾಗತವೆ. ಜೀವಾಂತರ್ಗತನ ಅಪರೋಕ್ಷಾತ್ಪೂರ್ವದಲ್ಲಿ ಆಗತಕ್ಕ ಅಪರೋಕ್ಷ ಗಳಿಂದ ಆಗಾಮಿ–ಸಂಚಿತಗಳು, ಪ್ರಾರಬ್ಧ ಭೋಗದಿಂವ ನಾಶವಾದಮ್ಯಾಲೆ ಜೀವಾಂತರ್ಗತನ ಅಪರೋಕ್ಷವಾಯಿತೆಂದರೆ, ಆಗ್ಗೆ ಸ್ವರೂಪಯೋಗ್ಯತಾನುಸಾರ ಸಂಪೂರ್ಣ ಭೇದಜ್ಞಾನ ಸಿದ್ಧಿಯು. ತತ್ಪೂರ್ವದಲ್ಲಿ ಪ್ರಾಕೃತಕರ್ಮವಿಶೇಷ ಇರೋ ಣದರಿಂದ ಭೇದಜ್ಞಾನ ಎಂಬುದು ಪ್ರಾಚುರ್ಯವಿಶೇಷದಿಂದ ಇರುತ್ತದೆ ಹೊರತು, ಸಂಪೂರ್ಣ ಪ್ರಾಚುರ್ಯ ಇರೋದಿಲ್ಲ.

ತದ್ವತ್, ಆದಿಯಲ್ಲಿ ಎಂದರೆ ಅಪಕ್ವಕಾಲದಲ್ಲಿ, ದ್ವೈತ್ಯನು ಅಭೇದಜ್ಞಾನ ಸಿದ್ಧಿ ಇಲ್ಲದೇ ಅಭೇದ ಎಂತ ಬಾಯಿಂದ ಉಚ್ಚಾರಣೆಮಾಡತಾ, ಭೇಧಾನುಷ್ಠಾನ ಮಾಡುತ್ತಾ ಇರುತ್ತಾನೆ. ಭೇದಜ್ಞಾನಿಗಳೋಪಾದಿಯಲ್ಲಿ ದೇವತಾರಾಧನೆಗಳ ಮಾಡತಾ, ಸುಖದುಃಖಗಳ ಭೋಗಮಾಡತಾ, ತತ್ಪರಿಹಾರಾರ್ಥ ಭಗವಂತನ ಆರಾಧನೆ ಮಾಡತಾನೆ. ಇದು ಪ್ರತ್ಯಕ್ಷ ಸಿದ್ಧ. ಆದ್ದರಿಂದ ಅದ್ವೈತನಿಗೆ ಐಕ್ಯ ಸಿದ್ಧಿಸಬೇಕಾದರೆ ಶಂಕರರು ಹೇಳಿದ ಪ್ರಕಾರ ಮಾನಸದಲ್ಲಿ ಭಗವದುಪಾಸನ ಮಾಡತಾನೆ. ಏನಂತ ಅಂದರೆ, ಅವಿದ್ಯಾಧಿಷ್ಠಿತನಾಗದೇ ಇರತಕ್ಕ ಬ್ರಹ್ಮನ ಉಪಾಸನೆ ಮಾಡಿ, ಅವನ್ನ ಪ್ರತ್ಯಕ್ಷೀಕರಿಸಿಕೊಂಡು ಅವನಲ್ಲಿ ಐಕ್ಯಹೊಂದೋ ನಿಮಿತ್ತವನ್ನ ಮನಸಾ ಇಟ್ಟುಕೊಂಡು ಮಾನಸಪೂಜಾ ಮಾಡತಾನೆ. ಭೇದಜ್ಞಾನ ಪರಿಹಾರವಾಗಿ ಐಕ್ಯ ಸಿದ್ಧಿಸೋನಿಮಿತ್ತ ಶಂಕರೋಕ್ತ ಮಾನಸಪೂಜಾ ಮಾಡತಾನಾದ್ದರಿಂದ ಭಗವದ್ದರ್ಶನವಾಗತದೆ. ದರುಶನ ಎಂಬುದು ಎಂಥಾದ್ದೆಂದರೆ, ಮಹಾ ಅಂಧಕಾರದಲ್ಲಿ, ಅಂಧಕಾರಕ್ಕೆ ಸದೃಶವಾದ ವರ್ಣೋಪೇತವಾದ, ಪುರುಷನೇತ್ರಕ್ಕೆ ಗೋಚರವಾದಂತೆ ವಾಸನಾರೂಪದ ದರುಶನವಾಗತದೆ. ಅದರಂತೆ ಉಪಾಸನಾ ಮಾಡತಾ ಬರತಾನೆ. ತದನಂತರ ಸಾಕ್ಷಾತ್ ಭಗವದಪರೋಕ್ಷವಾಗತದೆ. ಆ ಅಪರೋಕ್ಷ ಎಂಥಾದ್ದೆಂದರೆ, ಸಾಕ್ಷಾತ್ ಪರಮಾತ್ಮನೇ ಪೂರ್ವದಲ್ಲಿ ಕತ್ತಲಲ್ಲಿ ಮನುಷ್ಯ ಇದ್ದವ ನೋಡಿದಂತೆ ಅಪರೋಕ್ಷವಾದ ವಾಸನಾಪರೋಕ್ಷ ಮರೆಮಾಡಿ, ಬರೀ ಕತ್ತಲುರೂಪದಿಂದಲೂ, ಅದರಲ್ಲಿ ನಾನಾ ವಿಕಾರದಿಂದಲೂ ಕಾಣತಾನೆ. ಕತ್ತಲು ವಿನಃ ಇನ್ನೇನೂ ಕಾಣೋದಿಲ್ಲ. ಬಯಲು, ಬಯಲೊಳಗೆ ಕತ್ತಲು, ಅದರಲ್ಲಿ ನಾನಾ ವಿಕಾರಗಳು ಇವು ಮಾತ್ರ ಕಾಣತವೆ. ಯಾಕೆ ಹೀಂಗೆ ಆಗಬೇಕೆಂದರೆ, ಇವನ ಜ್ಞಾನವೂ ಕತ್ತಲೆ, ಇವನ ಬಿಂಬವೂ ಕಪ್ಪು. ಆದ್ದರಿಂದ ಈ ರೀತ್ಯಾ ಕಾಣತಾನೆ. ಇಂಥಾ ಅಪರೋಕ್ಷವಾಗೋಣವೇ, ಅದ್ವೈತಜ್ಞಾನ ಪಕ್ವವಾಗಿ ಆಗ್ಗೆ ಮಿಥ್ಯಾನುಷ್ಠಾನ ಮಾಡತಾನೆ. ಈ ಅಪರೋಕ್ಷದಿಂದ ತಮೋಯೋಗ್ಯನ ಆಗಾಮಿ ಸಂಚಿತಗಳು ನಾಶವಾಗಿ, ಪ್ರಾರಬ್ಧ ಅನುಭೋಗಿಸೋದಕ್ಕೆ ಆರಂಭ ಮಾಡತಾನೆ. ಈ ಪ್ರಾರಬ್ಧ ಭೋಗಕಾಲಕ್ಕೆ ಸಂಪೂರ್ಣ ಅಭೇದಸಿದ್ಧಿ ಇಲ್ಲದೆ ಕಿಂಚಿತ್ ಕೊರತೆಯಾಗಿ ಇರತದೆ. ಲಿಂಗದೇಹ ಭಂಗ ಆಗೋವರಿಗೂ ತ್ರಿಗುಣಜನ್ಯ ಕರ್ಮ ಇದ್ದೇ ಇರತದೆ. ಎಷ್ಟುಮಾತ್ರಾ ಕರ್ಮ ಅವಶಿಷ್ಟ ಇರತದೋ ತದನುಗುಣವಾಗಿ ಅಭೇದಸಿದ್ಧಿ ಸಂಪೂರ್ಣವಾಗದೆ ಕೊಂಚ ಕೊರತೆಯಾಗಿ ಇರುತ್ತದೆ. ಅಷ್ಟುಪರಿ

ಯಂತವೂ ಅಭೇದಸಿದ್ಧಿ ಎಷ್ಟುಮಾತ್ರ ಕೊರತೆಯಾಗಿರುತ್ತದೋ ತಾವ ನ್ಮಾತ್ರ ಭಗವದುಪಾಸನಾ ಇರತದೆ. ಎಂದರೆ, ಅಂಧಕಾರ ನೋಡಿದರೆ ಮನುಷ್ಯ ಇದ್ಧಾಂಗೂನೂ, ಇನ್ನೂ ಅನೇಕವಿಧವಾಗಿನ್ನೂ ಮನುಷ್ಯರ ಕಣ್ಣಿಗೆ ಕಾಣಿ ಸುತ್ತಾ, ಅಂಧಕಾರದಲ್ಲಿ ಪ್ರವೇಶಮಾಡಿ ನೋಡಿದರೆ ಏನೂ ಇರೋದಿಲ್ಲ. ತದ ನಂತರ ಏನೋ ಇದ್ಧಾಂಗೆ ತೋರತದೇ ಹೊರತು ಕಾಣಿಸೋದಿಲ್ಲ. ಅಪದ್ಧ ಎಂತ ಹ್ಯಾಂಗೆ ತಿಳಿಯತಾನೋ ತದ್ವತ್, ಲಿಂಗಭಂಗವಾಗೋವರಿಗೂ ಪೂರ್ವೋಕ್ತ ಪ್ರಕಾರ ಭಗವಂತನ ಸಾಕ್ಷಾತ್ ಅಪರೋಕ್ಷವಾಗತದೆ. ತತ್ ಜ್ಞಾನ ದೈತ್ಯರಿಗೆ ಇರೋದಿಲ್ಲ. ಇಂಥಾ ಅಪರೋಕ್ಷವಾಗತದೆ. ಅದರಲ್ಲಿ ತಾರತಮ್ಯ ಉಂಟು. ಮೊದಲು ಅಪರೋಕ್ಷದಕಿಂತಲೂ ಎರಡನೇ ಸಾರಿ ಆಗತಕ್ಕ ಅಪರೋಕ್ಷ ಕಡಿಮೆ. ಈ ಪ್ರಕಾರ ಲಿಂಗಾಪರೋಕ್ಷಕಾಲಕ್ಕೆ ಕತ್ತಲಲ್ಲಿ ವಿಕಾರ ವಿಕಾರವಾಗಿ ತೋರತದೆ. ಅಪರೋಕ್ಷವಾಗಿ ವಿವರಿಸೋ ಕಾಲಕ್ಕೆ ಏನೂ ಇಲ್ಲದಂತಾಗುತ್ತದೆ. ತದನಂತರ ಲಿಂಗಭಂಗವಾಗಿ ತನ್ನೊಳು ತಾ ನೋಡತಾನೆ. ಆ ಕಾಲಕ್ಕೆ ಒಂದೆ ಕಂಡ ಅಂಧ ಕಾರಸದೃಶ ಪರಮಾತ್ಮನ ರೂಪ ತನ್ನೊಳಗೆ ತಾನು ಪ್ರವೇಶ ಮಾಡತದೆ. ತನ್ನೊ ಳಗೆ ತಾನು ನೋಡಿಕೊಂಡಕಾಲದಲ್ಲಿ ಅನ್ಯವಸ್ತು ಕಾಣದೆ, ತಾನೊಬ್ಬನೇ ತನ್ನ ಕಣ್ಣಿಗೆ ಕಾಣತಾನೆ. ತಾನು ಕತ್ತಲೆ, ತನ್ನ ಬಿಂಬನೂ ಕತ್ತಲುರೂಪದಿಂದ ಇದ್ದು, ಪ್ರತ್ಯೇಕವಾಗಿ ಕಾಣೋದಿಲ್ಲ. ಆಗ್ಗೆ ಸಂಪೂರ್ಣವಾದ ಐಕ್ಯಜ್ಞಾನ ಸಿದ್ಧಿ, ಅಹಂ ಬ್ರಹ್ಮ ಎಂಬುದೂ ಸಿದ್ಧಿ, ಸ್ವರೂಪಯೋಗ್ಯತಾನುಸಾರ ಆಗತದೆ. ಇಂಥಾ ಅಪ ರೋಕ್ಷದಿಂದ ಆಗಾಮಿ–ಸಂಚಿತಗಳು ನಾಶ ಆಗತವೆ. ಆದ್ದರಿಂದ ಅಪರೋಕ್ಷ ಜ್ಞಾನದಿಂದಲೇ ಸಂಚಿತಾಗಾಮಿಗಳ ನಾಶ, ತದನ್ಯವಿಧದಿಂದ ಆಗೋದಿಲ್ಲ. ಅಪ ರೋಕ್ಷ ಎಂಬುದು ದೈತ್ಯರಿಗೆ ಇಂಥಾದ್ದು ಎಂತ ತಿಳಿಯಬೇಕು.

ಇದರಲ್ಲಿ ಇನ್ನೂ ಬಹಳ ವಿವರ ಉಂಟು. ಮುಕ್ತಿಯೋಗ್ಯರಿಗೆ ಅಪಕ್ವ ಕಾಲದಲ್ಲಿ ದುಃಖಬಾಹುಳ್ಯ, ತಮೋಯೋಗ್ಯರಿಗೆ ಪಕ್ವಕಾಲಕ್ಕೆ ದುಃಖಬಾಹುಳ್ಯ ಎಂತ ತಿಳಿಯಬೇಕು. ನಿತ್ಯಸಂಸಾರಿಗಳಿಗೆ ಯಾವತ್ತೂ ಉಪಾಸನ ಪೂರ್ವೋಕ್ತ ಪ್ರಕಾರವೇ ಮಾಡಿ ಅಪರೋಕ್ಷವಾಗತದೆ. ಅವರ ಅಪರೋಕ್ಷ ಎಂಥಾದ್ದೆಂದರೆ, ರಸವಿಲ್ಲದ ದರ್ಪಣಗಳಲ್ಲಿ ಮುಖ ಪ್ರತಿಫಲಿಸಿದಂತೆ ತಿರೋಧಾನವಿಲ್ಲದೆ ಅವಯವ ಸಹಿತವಾದ ಭಗವದ್ದರ್ಶನ ಉಂಟು. ಈ ನಿತ್ಯಸಂಸಾರಿಗಳಿಗೆ ಲಿಂಗಭಂಗ ಉಂಟು

ಎಂತ ಕೆಲವರು ಹೇಳತಾರೆ, ಇಲ್ಲ ಎಂತ ಕೆಲವರು ಹೇಳತಾರೆ. ಪ್ರಕಾಶಸಂಹಿತಾದಿ ಗ್ರಂಥಗಳಲ್ಲಿ ಲಿಂಗಭಂಗ ಉಂಟು ಎಂತ ಯುಕ್ತವಾಗಿದೆ. ವಾಯುಸ್ತುತಿಯಲ್ಲಿ **ತ್ರಿದಿವನಿರಯು ಭೂಗೋಚರಾನ್‌ನ್ನಿತ್ಯಬದ್ಧಾನ್** ಎಂತ ಉಕ್ತವಾಗಿದೆ. ಇನ್ನೂ ಕೆಲವು ಭಾಗಗಳಲ್ಲಿ **ಭೂಸ್ವರ್ಗನಿರಯಾದಿಷು ಭ್ರಮಂತಿ** ಎಂತ ಉಕ್ತ ವಾಗಿದೆ. ಇನ್ನೂ ಕೆಲವು ಭಾಗಗಳಲ್ಲಿ ನಿತ್ಯಸಂಸಾರಿಗಳಿಗೆ ಆವರ್ತನ ಉಂಟು ಎಂತ ಹೇಳತದೆ. ಈ ಪ್ರಮಾಣಬಲಗಳಿಂದ ನಿತ್ಯಸಂಸಾರಿಗಳಿಗೆ ಲಿಂಗಭಂಗವಿಲ್ಲ ಎಂತಲೂ, ಪ್ರತಿ ಪ್ರತೀ ಬ್ರಹ್ಮಕಲ್ಪಕ್ಕೂ ಸ್ಥೂಲದೇಹದಿಂದ ಆವರ್ತನರಾಗಿ ಸೃಷ್ಟರಾಗಿ, ಸ್ವರ್ಗ ನರಕ ಭೂಮಿಗಳಲ್ಲಿ ಸಂಚಾರಮಾಡತಾ ಇರತಾರೆ ಎಂತಲೂ ಹೇಳತಾರೆ. ಪ್ರತ್ಯಕ್ಷ ಲಿಂಗಭಂಗ ಉಂಟು ಎಂತ ಹೇಳತಕ್ಕ ಪ್ರಮಾಣದಿಂದ, ಪುನಶ್ಚ ನಿತ್ಯಸಂಸಾರಿಗಳು ಸ್ಥೂಲದೇಹಗಳ ಧರಿಸೋದಿಲ್ಲ ಎಂಬುದು ಅರ್ಥಾತ್ ಸಿದ್ಧ ಆಗುತ್ತದೆ. ಲಿಂಗಭಂಗ ಉಂಟು ಎಂತ ಹೇಳತಕ್ಕ ಪ್ರಮಾಣ ನಿರವಕಾಶ ವಾಗಿ ಇದೆ. ಲಿಂಗಭಂಗ ಇಲ್ಲ ಎಂತ ಅರ್ಥಮಾಡತಕ್ಕ ವಚನಗಳಲ್ಲಿ ಲಿಂಗಭಂಗ ಇಲ್ಲ. ಪ್ರತಿಪ್ರತೀ ಬ್ರಹ್ಮಕಲ್ಪಕ್ಕೂ ಸ್ಥೂಲದೇಹಗಳ ಧರಿಸಿ ಆವರ್ತನರಾಗಿ ಸ್ವರ್ಗ ನರಕ ಭೂಮಿಗಳಲ್ಲಿ ಆವರ್ತನ ಆಗತಾ ಇರತಾರೆ ಎಂತ ಕಂಠೋಕ್ತಿಯಾಗಿ ಹೇಳ ಲಿಲ್ಲ. ಹೇಳದಿದ್ದ ಕಾಲಕ್ಕೂ ಅರ್ಥವೇನೋ ಪೂರ್ವೋಕ್ತ ಪ್ರಕಾರ ಅಧ್ಯಾಹಾರ ಮಾಡಿಕೊಂಡು ಅರ್ಥ ಮಾಡತಾರೆ. ಆದ್ದರಿಂದ ಲಿಂಗಭಂಗ ಉಂಟು ಎಂತ ಹೇಳ ತಕ್ಕ ಪ್ರಮಾಣಗಳಿಗೆ ಮಾಡತಕ್ಕ ಅರ್ಥ ಸಾವಕಾಶವಾಗದೆ ನಿರವಕಾಶವಾಯಿತು. ತದನ್ಯಪ್ರಮಾಣಗಳಿಗೆ ಮಾಡತಕ್ಕ ಅರ್ಥ ಸಾವಕಾಶವಾಯಿತು. ಆದ್ದರಿಂದ ನಿರವ ಕಾಶಪ್ರಮಾಣ, ಅದರರ್ಥದಿಂದ ಸಾವಕಾಶಪ್ರಮಾಣ ಅರ್ಥಬಾಧಿತವಾಗಿ, ನಿರವ ಕಾಶವೇ ಶ್ರೇಷ್ಠವಾಗೋದಾಯಿತು. ಅರ್ಥಮಾಡಿದ್ದು ಸಾವಕಾಶಾರ್ಥ ಎಂತ ತಾತ್ಪರ್ಯ. ಆದ್ದರಿಂದ ಲಿಂಗಭಂಗ ಉಂಟು ಎಂಬುದೇ ಅಂಗೀಕರಿಸಬೇಕಾಗಿದೆ.

ಇನ್ನು ಆವರ್ತನಶಬ್ದಕ್ಕೆ ಅರ್ಥವೇನು ಎಂತ ಕೇಳಬೇಕು. ಸಮಾಧಾನ-ಆವರ್ತನ ಎಂದರೆ ಬರುತ್ತಾ ಇರೋಣ, ಹೋಗತಾ ಇರೋಣ ಇದೆಂಬುದೇ ಆವರ್ತನ ಅಂತ ಕರೆಸತದೆ. ಇಂಥಾ ಆವರ್ತನ ಎಂಬುದು ನಿತ್ಯಸಂಸಾರಿಗಳಿಗೆ ಉಂಟೇ ಹೊರತು, ತಮೋಯೋಗ್ಯ ಮುಕ್ತಿಯೋಗ್ಯ ಇವರಿಗೆ ಇಲ್ಲ. ಅದು ಹ್ಯಾಂಗೆಂದರೆ, ಸ್ಥಿತಿಕಾಲದಲ್ಲಿ ತ್ರಿವಿಧರಾದ ಜೀವರಿಗೆ ಸ್ವರ್ಗ ಭೂ ನರಕಗಳಲ್ಲಿ

ಸಂಚಾರ ಉಂಟು. ಮುಕ್ತಿಯೋಗ್ಯರು ಪಕ್ವಾಧಿಕಾರಿಗಳಾದರೆ ಮಹರಾದಿ ಲೋಕಗಳಲ್ಲಿ ಇರತಾರೆ. ಆವರ್ತನ ಲೋಕಗಳಿಗೆ ಬರೋದಿಲ್ಲ. ತಮೋಯೋಗ್ಯರು ಪಕ್ವಾಧಿಕಾರಿಗಳಾದರೂ ತಮ್ಮ ದ್ವಾರದಲ್ಲಿ ಪಾತಾಳಲೋಕದಲ್ಲಿ ಇರತಾರೆ. ಇವರೂ ಪುನಃ ಆವರ್ತನಲೋಕಗಳಿಗೆ ಬರೋದಿಲ್ಲ. ನಿತ್ಯಸಂಸಾರಿಗಳಿಗೆ ಪಕ್ವಕಾಲ ಪ್ರಾಪ್ತವಾಯಿತೆಂದರೆ, ಸ್ವರ್ಗಪ್ರಚುರರು ಸ್ವರ್ಗದಲ್ಲೇನು, ಭೂಪ್ರಚುರರು ಭೂಲೋಕದಲ್ಲೇನು, ನಿರಯಪ್ರಚುರರು ನಿರಯಲೋಕದಲ್ಲೇನು ಇರುತ್ತಾರೆ. ಇವರಿಗೆ ಸ್ಥಿತಿಕಾಲದಲ್ಲೇನು, ಜೀವನ್ಮುಕ್ತದಶಾದಲ್ಲೇನು, ಉಭಯದಶಾದಲ್ಲೇನು ಆವರ್ತನಲೋಕಗಳಾದ ಭೂ, ಸ್ವರ್ಗ, ನರಕಾದಿ ಲೋಕಗಳಲ್ಲಿಯೇ ಇರುತ್ತಾರೆ. ಇಂಥಾದ್ದು ಕಡಿಮೆ, ಉಭಯರಿಗಿಲ್ಲವಾದಕಡಿಯಿಂದ, ಆವರ್ತನ ಏವ ಎಂದರೆ, ಆವರ್ತನಲೋಕ ಏವ ಅವಸ್ಥಾನಮ್ ಎಂತ ತಾತ್ಪರ್ಯವೇ ಹೊರತು, ಆವರ್ತನ ಶಬ್ದದಿಂದ ಲಿಂಗಭಂಗವಿಲ್ಲದೆ ಸ್ಥೂಲದೇಹಗಳ ಹೊಂದತಾ ಇರತಾರೆ ಎಂತ ತಾತ್ಪರ್ಯವಲ್ಲ. ಮತ್ತು ಆವರ್ತನ ಎಂದರೆ ತ್ರಿವಿಧಜೀವರು ಸ್ಥಿತಿಕಾಲದಲ್ಲಿ, ಸುಖದುಃಖಾದಿಗಳಲ್ಲಿ ಆವರ್ತಿತರಾಗುತ್ತಾ ಇರುತ್ತಾರೆ. ಲಿಂಗಭಂಗವಾಯಿತೆಂದರೆ, ಉಭಯಜೀವರಿಗೆ ಸ್ಥಿತಿಕಾಲದಲ್ಲಿಪ್ಪಂತೆ ಸುಖ ದುಃಖ ಆವರ್ತನವಾಗದೆ ಮುಕ್ತಿಯೋಗ್ಯರು ಸುಖದಿಂದಲೂ, ತಮೋಯೋಗ್ಯರು ದುಃಖದಿಂದಲೂ ಇರುತ್ತಾರೇ ಹೊರತು, ಎರಡೂ ಆವರ್ತನವಾಗೋದಿಲ್ಲ. ನಿತ್ಯಸಂಸಾರಿಗಳಿಗೆ ಲಿಂಗಭಂಗಾನಂತರ ಸುಖದುಃಖಾದಿಗಳು ಉಭಯಜೀವರೋಪಾದಿಯಲ್ಲಿ ಆವರ್ತನ ಇಲ್ಲಧಾಂಗೆ ಸುಖವೋ ದುಃಖವೋ ದಾವುದೋ ಒಂದರಿಂದ ವಿಶಿಷ್ಟರಾಗಿರುತ್ತಾರೋ ಎಂದರೆ, ಇಲ್ಲ. ಉಭಯರೂ ಮಿಶ್ರರಾಗಿರುತ್ತಾರ ಎಂಬ ಶಂಕಾ ಬಂದರೆ, ಲಿಂಗಭಂಗಾತ್ಪೂರ್ವದಲ್ಲೇನು, ನಂತರದಲ್ಲೇನು ಉಭಯಕಾಲದಲ್ಲಿ ಎರಡೂ ಯುಕ್ತವಾಗೇ ಇದ್ದು, ಪರಮಾತ್ಮನ ಉದರಪ್ರವೇಶ ಮಾಡೋಣ, ಪುನಃ ಹೊರಕ್ಕೆ ಬರೋಣ ಈ ಕಾಲಗಳಲ್ಲಿ ಸುಖ-ದುಃಖಗಳಲ್ಲಿ ಆವರ್ತಿತರಾಗೇ ಇರುತ್ತಾರೆ. ಇಂಥಾದ್ದು ಅನ್ಯ ಉಭಯರಿಗೆ ಇಲ್ಲವಾದ್ದರಿಂದ ಆವರ್ತನಶಬ್ದ ಪ್ರಯೋಗವು ಮತ್ತು ಲಿಂಗಭಂಗಾನಂತರದಲ್ಲಿ, ಸ್ಥಿತಿಕಾಲದಲ್ಲಿ ದಾವ ಆವರ್ತನ ಲೋಕಗಳಲ್ಲಿ ಆವರ್ತಿರ್ತಿತರಾಗುತ್ತಾ ಇದ್ದಾರೋ, ನಂತರದಲ್ಲಿ ಅದೇ ಲೋಕದಲ್ಲಿ ಆವರ್ತಿತರಾಗುತ್ತಾ ಇರ್ತಾರೆ. ಆದ್ದರಿಂದ ಆವರ್ತನ

ಶಬ್ದವು 'ತ್ರಿದಿವನಿರುಯಭೂ' ಎಂಬ ಉಕ್ತಿಯು. ಈ ಕಾರಣದಿಂದ ನಿತ್ಯಸಂಸಾರಿಗಳಲ್ಲಿ ಮಾತ್ರ ಪ್ರಯೋಗ ಮಾಡೋದಕ್ಕೆ ಕಾರಣವೆಂದು ತಿಳಿಯಬೇಕೇ ಹೊರತು, ಲಿಂಗಭಂಗ ಇಲ್ಲ ಎಂತ ತಿಳಿಯಬಾರದು. ಹೀಂಗೆ ಅರ್ಥಮಾಡೋಣದರಿಂದ ಉಭಯಪ್ರಮಾಣಕ್ಕೂ ಬಾಧಕ ಬರಲಿಲ್ಲ. ಇವರ ಅಪರೋಕ್ಷಬಿಂಬ ಹಸ್ತಗತವಾಗತದಾ ಎಂದರೆ, ಆ ಭಗವದ್ರೂಪ ಹಸ್ತಗತವಾಗೋದಿಲ್ಲ. ಕಾಣತಾ ಇರತದೆ. ಅಬದ್ಧ ಎಂತ ಹೇಳಲೂಲಾರ. ಪ್ರಕಾಶ ಎಂಬುದು ಎಂಥಾದ್ದೆಂದರೆ ರಸರಹಿತ ದರ್ಪಣಗತ ತೇಜಸ್ಸು ಎಷ್ಟುಮಾತ್ರ ಪ್ರಕಾಶದಿಂದ ಯುಕ್ತವೋ, ಅಷ್ಟು ಮಾತ್ರ ಪ್ರಕಾಶದಲ್ಲಿ ಅಷ್ಟೇ ಪ್ರಕಾಶ ಉಳ್ಳ ಪರಮಾತ್ಮನ ಸಂದರ್ಶನ. ಜೀವಾಂತರ್ಗತನಾದ ಬಿಂಬದರುಶನ ನಿತ್ಯಸಂಸಾರಿಗೆ ಆಗತದೆ. ಇದರಲ್ಲಿ ತಾರತಮ್ಯಾನುಸಾರ ಪುರಂಜನ ಆರಂಭ ಮಾಡಿ ತೃಣಾಂತದವರಿಗೂ ನಿತ್ಯಸಂಸಾರಿ ಎಂತ ತಿಳಿಯಬೇಕು. ಕಲಿ ಆರಂಭಮಾಡಿ ತೃಣಾಂತದವರಿಗೂ ತಮೋಯೋಗ್ಯರು ಎಂತ ತಿಳಿಯಬೇಕು. ಮುಕ್ತಿಯೋಗ್ಯರ ಅಪರೋಕ್ಷ ಶಾಸ್ತ್ರತಃ ಪ್ರಸಿದ್ಧವೇ ಸರಿ. ಅದರನ್ನ ವಿವರ ಮಾಡಬೇಕಾದುದೇ ಅವಶ್ಯಕವಿಲ್ಲ. ದಿಕ್ಪ್ರದರ್ಶನದಿಂದ ಲೋಪಾಲೋಪಗಳು ಸವರಿಸಿಕೋಬೇಕು. ವಿಸ್ತಾರ ಮಾಡಬೇಕಾದರೆ ಗ್ರಂಥಬಾಹುಳ್ಯ ಭೀತಿಯಿಂದ ಸಂಕೋಚ ಮಾಡಲ್ಪಟ್ಟಿದೆ. ನಿತ್ಯಸಂಸಾರಿಗೂ ಪೂರ್ವೋಕ್ತಪ್ರಕಾರ ಅಪರೋಕ್ಷವಾಗೇ ಸಂಚಿತಾಗಾಮಿಗಳು ನಾಶ ಎಂತ ತಿಳಿಯಬೇಕು. ॥ ೪೫ ॥

## ೨. ಭಾವಪ್ರಕಾಶಿಕೆ

ಜಗನ್ನಾಥವಿಠಲಾಂಕಿತ ಶ್ರೀಧರನು ನನ್ನ ಬಾಯಿಯೊಳಗೆ ಇದ್ದು ನುಡಿಸಿದಂತೆ ನಾನು ಹೇಳಿರುವೆನೇ ಹೊರತು ನನ್ನ ಸ್ವತಂತ್ರ ಬುದ್ಧಿಯಿಂದ ಈ ಗ್ರಂಥದಲ್ಲಿ ನಾನು ಯಾವುದೂ ಹೇಳಲಿಲ್ಲ. ಇದನ್ನು ಜ್ಞಾನಿಗಳು ತಿಳಿದಿರಲಿ. ಸಜ್ಜನರಂತೆಯೂ ತಪಸ್ವಿಗಳಂತೆಯೂ ವೇಷಧಾರಿಗಳಾದ ಕೆಲವರು ಅಂದರೆ ಅಂತಃಶುದ್ಧಿ ಇಲ್ಲದವರು ಈ ಗ್ರಂಥವನ್ನು ದೂಷಿಸುವರು. ಅದರಿಂದ ಕುಂದಾದದೇನು? ಇದರಲ್ಲಿ ನನ್ನಪರಾಧವೇನು ? ಜ್ಞಾನಿಗಳು ಇದನ್ನು ಯೋಚಿಸತಕ್ಕದ್ದು ಎಂದು ದಾಸರಾಯರು ಈ ಗ್ರಂಥಕರ್ತೃತ್ವಶಕ್ತಿಯು ತಮ್ಮ ಅಂತರ್ಯಾಮಿ ಭಗವಂತನದೇ ಹೊರತು, ತಮ್ಮಧಿಕಾರವು ಇದರಲ್ಲಿ ಲೇಶಮಾತ್ರವೂ ಇರುವುದಿಲ್ಲವೆಂದು ಪರ

ಮಾತ್ಮನಿಗೆ ಸಮರ್ಪಿಸಿರುವರು.

ಎಂಬಲ್ಲಿಗೆ ಹರಿಕಥಾಮೃತಸಾರದ ಭಾವಪ್ರಕಾಶಿಕೆಯಲ್ಲಿ ೧೨ನೆಯ ನಾಡೀ ಪ್ರಕರಣ ಸಂಧಿಯು ಸಮಾಪ್ತವಾದುದು. ॥ ೪೫ ॥

**೩. ಭಾವದರ್ಪಣ**

ಶ್ರೀಜಗನ್ನಾಥ ವಿಠಲನು ಹೃದಯದಲ್ಲಿ ನಿಂತು ನುಡಿಸಿದಂತೆ ನುಡಿದಿದ್ದೇನೇ ಹೊರ್ತು ನಾನು ಸ್ವಾತಂತ್ರ್ಯದಿಂದ ನುಡಿದವನಲ್ಲ. ಸಾಧುಲಿಂಗ ಪ್ರದರ್ಶಕರು ಎಂದರೆ ತಮ್ಮ ಮನಸ್ಸು ನಾನಾವಿಧ ವಿಷಯಗಳಲ್ಲಿ ಮುಣಗಿದ್ದರೂನೂ ಹೊರಗೆ ಕೇವಲ ಸದಾಚಾರ ಉಳ್ಳವರೆಂದು ಚಿನ್ಹ ತೋರಿಸತಕ್ಕವರು ಎಂಬ ತಾತ್ಪರ್ಯ. ಇಂಥಾ ಕಪಟಿಗಳು ನನ್ನ ನಿಂದಾ ಮಾಡಿದರೇನಾಗುವದೆಂದು ಹೇಳುತ್ತಾರೆ. । ಶ್ರೀಧರೇತಿ । ಕರ್ತುಂ ಚೇಷ್ಟಯಿತುಂ ವಾಪಿ ಕಥಂ ವಾಪಿ ಮಯಾ ಕೃತಂ : ಜಾನಾತಿ ನೈವ ಮೂಢೋಯಂ ವೃಥಾಪಂಡಿತಮಾನವಾನಿ೩ ವಿಷ್ಣುರಹಸ್ಯೇ॥೪೫॥

ಇತಿ ಶ್ರೀಮತ್ಕವಿಕುಲ ತಿಲಕ ಶ್ರೀಮಜ್ಜಗನ್ನಾಥದಾಸರಾಜ ವಿರಚಿತ ಶ್ರೀಮದ್ಧರಿಕಥಾಮೃತಸಾರಸ್ಯ ಭಾವದರ್ಪಣಟೀಕಾಯಾಂ ಕಮಲಾಪತಿದಾಸ ಹೃದ್ಗತೇನ ಶ್ರೀಹರಿಣಾಕೃತಾಯಾಂ ನಾಡೀಪ್ರಕರಣಸಂಧಿಃ ಪರ್ಯವಸಿತಃ ॥೧೨॥

**೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ**

ಉಪಸಂಹರತಿ–ಶ್ರೀಧವ ಇತಿ ॥ ಸಾಧು ಇತಿ ದಾಂಭಿಕಾಃ ॥ ಅಹುದು–ಆಗುವದು. ಪೇಳ್ವದು–ಹೇಳ್ವದು ॥ ೪೫ ॥

ಇತಿ ಶ್ರೀಮದ್ ಹರಿಕಥಾಮೃತಸಾರ ಟೀಕಾಯಾಂ ವ್ಯಾಸದಾಸ ಸಿದ್ಧಾಂತ ಕೌಮುದ್ಯಾಂ ನಾಡೀಪ್ರಕ್ರಿಯಾ ಸಂಧಿಃ ಸಂಪೂರ್ಣಃ ॥ ೧೨ ॥

**ಕನ್ನಡಾರ್ಥ**

ಸಂಧಿಯನ್ನು ಮುಗಿಸುತ್ತಾರೆ–ಶ್ರೀಧವ ಎಂಬ ಪದ್ಯದಿಂದ. ಸಾಧು ಲಿಂಗ ಪ್ರದರ್ಶಕರು ಎಂದರೆ ಸಾಧುಗಳ ಚಿಹ್ನೆಗಳನ್ನು ಮಾತ್ರ ತೋರಿಸುವವರು,

ತೋರಿಕೆಯಲ್ಲಿ ಸಾಧುಗಳಂತೆ ಇರುವವರು ಅಂದರೆ ಸಾಧುಗಳ ವೇಷದಲ್ಲಿರುವವರು, ದಾಂಭಿಕರು ಎಂದು ಅರ್ಥ. ಅಹುದು–ಆಗುವದು. ಪೇಳ್ವದು–ಹೇಳುವದು ॥ ೪೫ ॥

ಶ್ರೀವ್ಯಾಸದಾಸ ಸಿದ್ಧಾಂತ ಕೌಮುದಿಯ
ನಾಡೀಪ್ರಕ್ರಿಯಾಸಂಧಿಯ ಕನ್ನಡ ಅನುವಾದವು ಮುಗಿದುದು.

**೫. ಶ್ರೀಗುರುಹೃದಯಪ್ರಕಾಶಿಕೆ**

ಶ್ರೀಹರಿಪ್ರೇರಣಾನುಸಾರ ಮಧ್ವಶಾಸ್ತ್ರವನ್ನನುಸರಿಸಿ ಹೇಳಿದ ನಾನು ನಿರಪರಾಧಿ ಎಂದು ಜ್ಞಾನಿಗಳಿಗೆ ವಿಜ್ಞಾಪಿಸಿ ಈ ಸಂಧಿಯನ್ನು ಮುಗಿಸುತ್ತಾರೆ, ಶ್ರೀಧವ ಎಂದು. ಶ್ರೀಪತಿಯಾದ ಜಗನ್ನಾಥವಿಠಲನೆಂಬ ದೇವರು ತಾನೇ ದಯದಿಂದ ನನ್ನ ವದನವೆಂಬ ಬಾಯಲ್ಲಿದ್ದು, ನುಡಿದು ನುಡಿಸಿದೋಪಾದಿಯಲ್ಲಿ ಹೇಳಿದ್ದೇನಲ್ಲದೆ, ನಾನು ಸ್ವತಂತ್ರನಲ್ಲ. ಜ್ಞಾನಿಗಳು ಕೇಳಬೇಕು. ಮೇಲೆ ಸಾಧುಲಿಂಗವೆಂಬ ಗುರುತನ್ನು, ವೇಷವನ್ನು ಧರಿಸಿದವರು ಈ ಗ್ರಂಥವನ್ನು ನಿಷೇಧಿಸಿದರೆ ಎಂದರೆ, ಶಾಸ್ತ್ರಸಮ್ಮತವಲ್ಲವೆಂದು ದೂಷಿಸಿದರೆ ಏನಹುದು ಎಂದರೆ, ಹಾನಿ ಏನೂ ಇಲ್ಲವೆಂದರ್ಥ. ಶಾಸ್ತ್ರಾನುಸಾರ ಇರುವ ಈ ಗ್ರಂಥ ಚೆನ್ನಾಗಿ ತಿಳಿದು, ಶಾಸ್ತ್ರಜ್ಞರೆಂಬ ಕೋವಿದರು ಅಪರಾಧವಿದ್ದರೆ ಹೇಳಬಹುದು ಎಂದರ್ಥ. ಇದರಿಂದ,

**ಯೋಂತ ಪ್ರವಿಶ್ಯ ಮಮ ವಾಚಮಿ ಮಾಂ ಪ್ರಸುಪ್ತಾಂ** ಎಂಬ ಭಾಗವತಾರ್ಥ ವಿವರಿಸಲ್ಪಟ್ಟಿತು. ॥ ೪೫ ॥

**ಹನ್ನೆರಡನೇ ಸಂಧಿಯಲ್ಲಿ ಪ್ರತಿಪಾದಿಸಲ್ಪಟ್ಟಿರುವ ಪ್ರಮೇಯಗಳ ಸಾರ.**

ಎಪ್ಪತ್ತೆರಡುಸಾವಿರ ನಾಡಿಗಳು ಶರೀರದಲ್ಲಿ ವ್ಯಾಪಿಸಿರುವ ಕ್ರಮ ಮತ್ತು ಅವುಗಳಲ್ಲಿ ಸಮಸ್ತ ತತ್ತ್ವೇಶರೂ ಪರಮಾತ್ಮನ ಆಜ್ಞೆಯಪ್ರಕಾರ ಈ ನಾಡಿಗಳಲ್ಲಿದ್ದು ಸಮಸ್ತ ಕರ್ಮಗಳನ್ನೂ ಮಾಡಿಸುವ ಕ್ರಮವನ್ನು, ಈ ನಾಡೀಗತ ದೇವರ ಸ್ತ್ರೀ–ಪುರುಷರೂಪ ಸ್ಮರಣೆಯುಳ್ಳ ಜ್ಞಾನಿಯೊಬ್ಬನಿಗೆ ವರ್ಷದಲ್ಲಿ ಒಂದು ದಿವಸ ಮಾತ್ರ ಭೋಜನಾದಿಗಳಿಂದ ಆರಾಧಿಸಿದ ಸಜ್ಜನರು ಒಂದುನೂರು ವರುಷ

ದಲ್ಲೂ, ಪ್ರತ್ಯಹದಲ್ಲೂ ದಂಪತಿಭೋಜನ ಮಾಡಿಸಿದ ಮಹಾಪುಣ್ಯವನ್ನು ಸಂಪಾದಿಸುತ್ತಾರೆಂಬ ಮಹಾಪ್ರಮೇಯವೂ (೪), ಈ ಎಪ್ಪತ್ತೆರಡುಸಾವಿರ ನಾಡಿಗಳಲ್ಲಿಯೂ ಭಾಗೀರಥಿ ಮೊದಲಾದ ನದಿಗಳು ಪ್ರವಹಿಸುತ್ತಿರುವವೆಂದೂ, ಈ ನಾಡೀ ನದಿಗಳಲ್ಲಿ ಧೀರರೆಂಬ ಧ್ಯಾನಶೀಲರು ಸ್ನಾನಮಾಡಿ ಸುಖಿಸುತ್ತಿರುವರೆಂಬ ಪ್ರಮೇಯವೂ ಹೇಳಲ್ಪಟ್ಟಿರುತ್ತೆ (೯).

ಶ್ರೀಪರಮಾತ್ಮನು ಶರೀರದಲ್ಲಿ ನಡೆಸುತ್ತಿರುವ ಅನಂತಮಹಿಮೆಗಳನ್ನು ನಿತ್ಯೋಪಾಸನೆಗೆ ಅನುಕೂಲವಾಗುವ ಪ್ರಮೇಯಗಳನ್ನು ವರ್ಣಿಸಿರುತ್ತಾರೆ. ಜೀವನ ನೂರಹದಿನಾರುವರುಷ ಪುರುಷಾಯುಷ್ಯನಲ್ಲಿ ಪ್ರಾತಃಸವನ, ಮಾಧ್ಯಂದಿನ ಸವನ, ಸಾಯಂಸವನಗಳೆಂಬ ಪೂರ್ವವಯಸ್ಸು ೨೪ ವರುಷ, ಮಧ್ಯಮವಯಸ್ಸು ೪೪ ವರುಷ, ವಾರ್ಧಿಕ್ಯವಯಸ್ಸು ೪೮ ವರುಷವೆಂತ ಹೇಳುವ ಕಾಲವಿಶೇಷಗಳಲ್ಲಿ ಅಭಿಮಾನಿಗಳಾದ ವಸು, ರುದ್ರ, ಆದಿತ್ಯರೆಂಬ ದೇವತೆಗಳಲ್ಲಿದ್ದು ಅಂತರ್ಯಾಮಿಯಾಗಿ ಪ್ರಾಣಾಂತರ್ಗತ ಕೃತಿಪತಿ ಪ್ರದ್ಯುಮ್ನ, ಜಯಾಪತಿ ಸಂಕರುಷಣ ಮತ್ತು ಮಾಯಾಪತಿ ಶ್ರೀವಾಸುದೇವ ಈ ಮೂರ್ತಿಗಳನ್ನು ಚಿಂತಿಸಿ ಆಯಾದಿವಸಗಳನ್ನು ಅವರಿಗೆ ಆಹುತಿಯಾಗಿ ಎಣಿಸಿ ಸಮರ್ಪಿಸಿ ಸಂತೋಷಪಡುತ್ತಿರಬೇಕಂತ, ಧ್ಯಾನಸಾಧನಕ್ರಮಚಿಂತನೆಯನ್ನು ಮಾಡಬೇಕಂತ, ಛಾಂದೋಗ್ಯೋಪನಿಷದ್ಗತ ಮಹಾಪ್ರಮೇಯಗಳನ್ನು ವರ್ಣಿಸುತ್ತಾರೆ (೩೪–೩೭).

ಈ ಸಂಧಿಯ ಕೊನೇ ಭಾಗದಲ್ಲಿ, ಶ್ರೀವಾಯುದೇವರು ಸರ್ವಜೀವರಲ್ಲಿಯೂ ಇದ್ದು, ನಿತ್ಯವೂ ೨೧,೬೦೦ ಹಂಸಮಂತ್ರಜಪಗಳನ್ನು ಮಾಡುತ್ತಿರುತ್ತಾರೆಂತಲೂ, ತಂತ್ರಸಾರದಲ್ಲಿ ಪ್ರಾತರ್ಯೋಗವೆಂತ ಹೇಳಿರುವ ಮೇರೆ ಒಂದೊಂದು ಪುಷ್ಪಗಳನ್ನಾಗಿ ಸಮರ್ಪಿಸುವ ಹಾಗೆ ಶ್ರೀಪ್ರಾಣದೇವರು ಶ್ರೀಹರಿ ಚರಣದಲ್ಲಿ ಒಂದೊಂದು ಶ್ವಾಸಜಪವನ್ನು **ಹಂಸಃ ಸೋಹಂ ಸ್ವಾಹ** ಎಂಬುದಾಗಿ ವೀಣಾಧ್ವನಿಯೊಳಗೆ ಅಕ್ಷರಗಳು ಹ್ಯಾಗೆ ಹೊರಡುತ್ತವೋ ಹಾಗೆ ಹೊರಡಿಸಿ, ಅಹೋರಾತ್ರಿಯೂ ಜಪಿಸಿ, ಆಯಾಯ ಜೀವನಿಂದಲೂ ತಾವೇ ಅನುಗ್ರಹ ಮಾಡಿ ಜಪ ಮಾಡಿಸಿ, ಜೀವನಿಂದ ನಡೆಸಲ್ಪಡುವ ನಿಷ್ಕಾಮಾರಾಧನೆಗೆ ಪ್ರತಿಬಂಧಕ ಮಾಡದೆ, ಸಹಾಯಭೂತರಾಗಿ ಇರಬೇಕಂತ ತತ್ತ್ವಾಭಿಮಾನಿಗಳಿಗೆ

ಆಜ್ಞಾಪಿಸುತ್ತಾರೆ. ಇಂಥಾ ಪ್ರಾತರ್ಯೋಗವೆಂಬ ಹಂಸಮಂತ್ರವನ್ನು ಪ್ರತಿದಿವಸ ಸೂರ್ಯೋದಯಕಾಲದಲ್ಲಿ ಶ್ರೀಹರಿಗೆ ಸಮರ್ಪಣೆ ಮಾಡಬೇಕೆಂಬ ಮಹಾಪ್ರಮೇಯಗಳನ್ನು ಸೂಕ್ಷ್ಮವಾಗಿ ವರ್ಣಿಸಿರುತ್ತಾರೆ.

**ಅರ್ಪಣೀಯೋ ಹರೌ ನಿತ್ಯಂ ಪ್ರಾತರ್ಯೋಗೋ ಮಹಾ ನಯಮ್ !**
**ಕಲ್ಪವೃಕ್ಷ ಸಮೋ ವಿಷ್ಣೋರ್ವಿಶೇಷಜ್ಞಾನದಾಯಕಃ॥ ಎಂಬ ಪ್ರಮಾಣ**
**ನಾಡೀಪ್ರಕರಣವ ತಿಳಿದು ಕೊಂಡಾಡಲು**
**ಗೂಡಿನೊಳಗಿದ್ದಂತೆ ವಿಜಯವಿಠಲ ನಿಲುವವ್ರೊಲಿವ ॥**

ಎಂತ ವಿಜಯರಾಯರ ನಾಡೀಪ್ರಕರಣಸುಳಾದಿ ಜತೆ.

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಲಕ್ಷ್ಮೀದೇವಿ ಈಶಕೋಟಿಪ್ರವಿಷ್ಟರು. ಶ್ರೀಹರಿಗೆ ನಿತ್ಯಾವಿಯೋಗಿನಿಯು, ಅಂತಹ ಲಕ್ಷ್ಮೀದೇವಿಗೆ ಪತಿಯು ಶ್ರೀಮನ್ನಾರಾಯಣನು.

ದಾಸವರ್ಯರ ಇಷ್ಟದೈವನೂ ಅಂಕಿತನಾಮಕನೂ ಆದ ಶ್ರೀಹರಿಯು ಜಗನ್ನಾಥವಿಠಲನು. ತಮ್ಮ ಬಿಂಬರೂಪೀ ಶ್ರೀಪರಮಾತ್ಮನು ದಾಸವರ್ಯರ ಮುಖದಲ್ಲಿ ನೆಲೆಸಿ ಪರಮಾನುಗ್ರಹದಿಂದ ಪ್ರಸಕ್ತ ಗ್ರಂಥವನ್ನು ನುಡಿದು ನುಡಿಸಿದ್ದಾನೆ. ಅಂತಃಪ್ರೇರಕನಾದ ಬಿಂಬರೂಪೀ ಶ್ರೀಜಗನ್ನಾಥವಿಠಲಾಂಕಿತ ಶ್ರೀಹರಿಯು ನನ್ನ ಅಧಿಷ್ಠಾನಾಂತರ್ಗತನಾಗಿ ಏನನ್ನು ನುಡಿದು ನುಡಿಸಿರುವನೋ, ಆ ವಚನಗಳನ್ನು ಮಾತ್ರ ನುಡಿದಿರುತ್ತೇನೆ. ನಾನು ಅಸ್ವತಂತ್ರನು. ನನ್ನಿಂದ ಈ ಗ್ರಂಥ ರಚನೆಯಾಗಿಲ್ಲ. ಗ್ರಂಥಸ್ಥ ವಿಷಯಗಳ ಕರ್ತೃವೂ ಮತ್ತು ಪ್ರೇರಕನೂ ಶ್ರೀಹರಿಯೇ. ನನ್ನದ್ವಾರಾ ಶ್ರೀಹರಿಯು ನುಡಿದು ನುಡಿಸಿರುವ ನನ್ನೀ ವಚನಗಳನ್ನು ಜ್ಞಾನಿಗಳಾದ ಭಗವದ್ಭಕ್ತರು ಆದರದಿಂದ ಕೇಳುವವರಾಗಬೇಕು ಎಂದು ಪ್ರಾರ್ಥಿಸಿದ್ದಾರೆ.

ಅಂತಃಕರಣಶುದ್ಧಿ ಇಲ್ಲದೇ, ತಮ್ಮ ಹೃದಯದಲ್ಲಿ ಶುದ್ಧವಾದ ಭಕ್ತಿಭಾವ ಲವಲೇಶವೂ ಇಲ್ಲದೇ, ಹೊರಗೆ ಮಾತ್ರ ತಾವು ದೊಡ್ಡ ಜ್ಞಾನಿಗಳೆಂತಲೂ,

ಸಚ್ಛಾಸ್ತ್ರಸಂಪನ್ನರೆಂತಲೂ ಸೋಗನ್ನು ಹಾಕಿಕೊಂಡು ತಿರುಗುವ ಕಪಟಿಗಳಿಗೆ ಸಾಧುಲಿಂಗಪ್ರದರ್ಶಕರು ಎಂದು ಹೆಸರು. ಇವರೇ ಡಾಂಭಿಗರು. ಈ ಗ್ರಂಥಸ್ಥ ವಿಷಯಗಳನ್ನು ಕೇಳಕೂಡದು—ಪ್ರವಚನ ಮಾಡಬಾರದು. ಅಧ್ಯಯನ ಮಾಡ ಕೂಡದೆಂದು ಡಾಂಭಿಕರು ನಿಷೇಧಿಸಿದರೆ ಅದರಿಂದ ಏನಾಗುವುದು ? ಅವರ ನಿಷೇಧ ಕೇವಲ ವ್ಯರ್ಥವೆಂದರ್ಥ.

ನಾನು ಅಸ್ವತಂತ್ರನಾಗಿರುವುದರಿಂದ, ಇದರಲ್ಲಿ ನನ್ನದೇನೂ ಅಪರಾಧವಿಲ್ಲ. ತತ್ತ್ವಾರ್ಥಗಳನ್ನು ತಿಳಿದ ಬ್ರಹ್ಮಜ್ಞಾನಿಗಳು ಇದನ್ನು ನನಗೆ ಅರುಹಲಿ ಎಂದು ಕೋರಿದ್ದಾರೆ.

॥ ಇಂತು ೧೨ನೆಯ ಸಂಧಿಗತ ೪೫ನೇ ಪದ್ಯದ
ಸರ್ವವ್ಯಾಖ್ಯಾನಸಾರಸಂಗ್ರಹವು ಮುಕ್ತಾಯವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

# ಶುದ್ಧಿಪತ್ರ

| ಕ್ರಮ ಸಂಖ್ಯೆ | ಪುಟ ಸಂಖ್ಯೆ | ಸಾಲು | ತಪ್ಪು | ಸರಿ |
|---|---|---|---|---|
| 1 | 2 | 3 | 4 | 5 |
| 1 | 3 | 4 | ಮ್ಯಾನರಿಗೆ | ಮ್ಯಾರಿಗೆ |
| 2 | 3 | 10 | ಭಾವಪ್ರಕಾಶಕೆ | ಭಾವಪ್ರಕಾಶಿಕೆ |
| 3 | 5 | 18 | ವ್ಯಾಪ್ತನಾಗಿದ್ದೇನೆ | ವ್ಯಾಪ್ತನಾಗಿದ್ದಾನೆ |
| 4 | 8 | 17 | ಭಿಮಾನಿ | ಅಭಿಮಾನಿ |
| 5 | 8 | 17 | ದೇದತಾ | ದೇವತಾ |
| 6 | 12 | 22 | ನಾಡಿವ್ಯೂಗಳ | ನಾಡಿವ್ಯೂಹಗಳ |
| 7 | 16 | 20 | ಶ್ರೀಚತುದುರ್ಮುಖ | ಶ್ರೀಚತುರ್ಮುಖ |
| 8 | 17 | 1 | ದೇವರಂ | ದೇವರು |
| 9 | 26 | 11 | ಸರ್ವವ್ಯಾಖ್ಯಾನುಸಾರ | ಸರ್ವವ್ಯಾಖ್ಯಾನಸಾರ |
| 10 | 27 | 1 | ಶರೀರವಿಲ್ಲಿ | ಶರೀರದಲ್ಲಿ |
| 11 | 27 | 8 | ಶ್ರೀಪರಮ್ಯಾನ | ಶ್ರೀಪರಮಾತ್ಮನ |
| 12 | 28 | 14 | ಪ್ರತಿತಿ | ಪ್ರತತಿ |
| 13 | 33 | 16 | ನಿರ್ಮಾಪನಾದ | ನಿರ್ಮಾಪಕನಾದ |
| 14 | 33 | 18 | ತ್ವಗಳ | ತತ್ತ್ವಗಳ |
| 15 | 37 | 8 | ಸರ್ವವ್ಯಾಖ್ಯಾನುಸಾರ | ಸರ್ವವ್ಯಾಖ್ಯಾನಸಾರ |
| 16 | 39 | 1 | ಏಕಾಂ ಭಕ್ತರಲ್ಲಿ | ಏಕಾಂತ ಭಕ್ತರಲ್ಲಿ |
| 17 | 39 | 17 | ಅಂತ | ಅತ್ಯಂತ |
| 18 | 41 | 1 | ಚಿಂ ಸದು | ಚಿಂತಿಸಿದು |
| 19 | 43 | 7 | ಪ್ರಣ ಕಾಮದನಾದ | ಪ್ರಣತಕಾಮದನಾದ |

| 1 | 2 | 3 | 4 | 5 |
|---|---|---|---|---|
| 20 | 47 | 8 | ಪ್ರಕಾಶಿನೀ—೫ | ಪ್ರಕಾಶಿನೀ—೨೫ |
| 21 | 49 | 16 | ಓರ | ಓರಂತೆ |
| 22 | 50 | 22 | ಪಿಂಗಳು | ಪಿಂಗಳಾ |
| 23 | 66 | 4 | ವಜ್ರಲೇಪೋವಿಷ್ಯಭತಿ | ವಜ್ರಲೇಪೋ ಭವಿಷ್ಯತಿ |
| 24 | 85 | 9 | ಅಶ್ವಿನೀ ದೇವತೆಗಳು | ಅಶ್ವಿನೀದೇವತೆಗಳು (ನಾಸತ್ಯ–ದಸ್ರ) |
| 25 | 85 | 10 | ದಕ್ಷ (ಖಾಸತ್ಯ–ದಸ್ರ) | ದಕ್ಷ |
| 26 | 85 | 16 | ಕುಹನಾಡೀ | ಕುಹುನಾಡೀ |
| 27 | 86 | 15 | ಮತ್ತು | ಮತ್ತು |
| 28 | 94 | 25 | ವನಜ | ವನನಜ |
| 29 | 113 | 2 | ಜಲರಹೇಕ್ಷಣ | ಜಲರುಹೇಕ್ಷಣ |
| 30 | 117 | 10 | ಸವರ್ಕ | ಸರ್ವಕರ್ತ |
| 31 | 120 | 2 | ನಿದ್ಯಾಂತಸಹನೇ | ನಿಂದ್ಯಾಂತಸಹನೇ |
| 32 | 142 | 19 | ಕೊಡೇವನಾಗತಾನೆ | ಕೊಡೋವನಾಗತಾನೆ |
| 33 | 149 | 14 | ಪ್ರಕಾಶಾಂತರ | ಪ್ರಕಾರಾಂತರ |
| 34 | 158 | 23 | ಪ್ರಚುರಾನ್ನರ | ಪ್ರಚುರಾನ್ನರಸ |
| 35 | 163 | 21 | ನಿತ್ಯಸಂಸಾರಿಗು | ನಿತ್ಯಸಂಸಾರಿಗಳು |
| 36 | 163 | 27 | ತಮೋಯೋಗ್ಯರು | ತಮೋಯೋಗ್ಯರದು |
| 37 | 164 | 5 | ಆರ್ಜುನ | ಆರ್ಚನ |
| 38 | 172 | 7 | ಶ್ವವಶ | ಸ್ವವಶ |
| 39 | 175 | 10 | ಉಷ್ಣಿನ | ಉಪ್ಪಿನ |
| 40 | 191 | 14 | ಸತ್ವಗುಣಾಭಿಯಾದ | ಸತ್ವಗುಣಾಭಿಮಾನಿಯಾದ |
| 41 | 204 | 8 | ಷಾಪ | ಪಾಪ |
| 42 | 208 | 21 | ಷದ್ಮಾಪ್ತಃ | ಪದ್ಮಾಪ್ತಃ |

| 1 | 2 | 3 | 4 | 5 |
| --- | --- | --- | --- | --- |
| 43 | 215 | | | ಪುಟದ ಮೇಲ್ಭಾಗದಲ್ಲಿ ಶ್ರೀಗುರುಹೃದಯ ಪ್ರಕಾಶಿಕೆ ಎಂದು ಸೇರಿಸಿಕೊಳ್ಳಬೇಕು |
| 44 | 216 | 1 | ಶ್ರೀಗುರುಹೃದಯ ಪ್ರಕಾಶಿಕೆ | ಇದನ್ನು ಬಿಟ್ಟು ಬಿಡಬೇಕು |
| 45 | 224 | 18 | (೬೪-೭೮) | (೩೪-೬೮) |
| 46 | 270 | 18 | ಹೃತವಹಾಕ್ಷನೊಳು | ಹುತವಹಾಕ್ಷನೊಳು |
| 57 | 270 | 21 | ದೇವತಿ | ದೇವಕಿ |

## ಶ್ರೀ ಹರಿದಾಸಸಾಹಿತ್ಯ ಪ್ರಚಾರ ಗ್ರಂಥಮಾಲೆ

## ಸದ್ಯದಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| ೧. | ಮಂಗಳಾಚರಣಸಂಧಿ (ತೃತೀಯ ಮುದ್ರಣ) | ರೂ. ೧೫–೦೦ |
| ೨. | ಕರುಣಾಸಂಧಿ (ದ್ವಿತೀಯ ಮುದ್ರಣ) | ರೂ. ೨೫–೦೦ |
| ೩. | ಪಂಚಮಹಾಯಜ್ಞಸಂಧಿ | ರೂ. ೨೦–೦೦ |
| ೪. | ಪಂಚತನ್ಮಾತ್ರಾಸಂಧಿ | ರೂ. ೨೦–೦೦ |
| ೫. | ಮಾತೃಕಾಸಂಧಿ | ರೂ. ೨೦–೦೦ |
| ೬. | ವರ್ಣಪ್ರಕ್ರಿಯಾಸಂಧಿ | ರೂ. ೨೦–೦೦ |
| ೭. | ಸರ್ವಪ್ರತೀಕಸಂಧಿ | ರೂ. ೨೦–೦೦ |
| ೮. | ಸ್ಥಾವರ–ಜಂಗಮಸಂಧಿ | ರೂ. ೩೦–೦೦ |
| ೯. | ನಾಡೀಪ್ರಕರಣಸಂಧಿ | ರೂ. ೩೦–೦೦ |

**ಸೂಚನೆ :—**

ವ್ಯಾಪ್ತಿಸಂಧಿ (ಸಂಪುಟ ೩), ಭೋಜನರಸವಿಭಾಗಸಂಧಿ (ಸಂಪುಟ ೪) ಮತ್ತು ವಿಭೂತಿಸಂಧಿ (ಸಂಪುಟ ೫) ಇವುಗಳ ಪುನರ್ಮುದ್ರಣವಾಗಬೇಕಾಗಿದೆ. ಸಕಾಲದಲ್ಲಿ ಹರಿದಾಸಬಂಧುಗಳಿಂದ ನೆರವು ದೊರೆತರೆ ಪುನರ್ಮುದ್ರಿಸಲಾಗುವುದು.

### ಮುಂದಿನ ಪ್ರಕಟಣೆ

ನಾಮಸ್ಮರಣಸಂಧಿ– ೧೩ನೆಯ ಸಂಪುಟದ ರೂಪದಲ್ಲಿ ಶೀಘ್ರದಲ್ಲಿಯೇ ಪ್ರಕಟವಾಗಲಿದೆ.